ಸ್ವಾಮಿಗಳು, ಗೋಪಾಲಕೃಷ್ಣಸೇವೆ, ಬ್ರಾಹ್ಮಣ ಸಂತರ್ಪಣೆಗಳನ್ನು ನಡೆಸುವುದಕ್ಕೋಸ್ಕರ ತಿಂಗಳು ೧ಕ್ಕೆ ೧೫೦ ವರಹಗಳ ಮೊಬಲಗಿಗೆ ಸರ್ವಮಾನ್ಯ ಶಾಸನವನ್ನು ಮಾಡಿ, ಗ್ರಾಮಗಳನ್ನು ಕೊಟ್ಟು, ದೇವರಿಗೆ ಮಕರ ಕಂಠಿಯನ್ನೂ, ನಿತ್ಯಕಟ್ಟಳೆ ದೀಪಾರಾಧನೆಗೆ ಬೆಳ್ಳಿಯ ದೀಪಗಳಿಂದ ಕೂಡಿರುವ [illegible] ಪ್ರಜ್ವಲಿಸುತ್ತಿದ್ದ ದೀಪಮಾಲಿಕಾಸ್ತಂಭವನ್ನೂ ಒಪ್ಪಿಸಿದರು.

ಉತ್ತರಾದಿ ಮಠ.—ಶ್ರವಣಬೆಳಗೊಳದಲ್ಲಿದ್ದ ಈ ಮಠದ ಸತ್ಯಧರ್ಮಸ್ವಾಮಿಗಳನ್ನು ಶ್ರೀಕೃಷ್ಣರಾಜ ಒಡೆಯರವರು ಕರೆಸಿ, ತಮ್ಮ ಸಂಸ್ಥಾನದ ದೇವತಾಪತಿ ಸನ್ನಿಧಿಯಲ್ಲಿರುವ ನರಸಿಂಹಪುರದಲ್ಲಿ ಮಠವನ್ನು ಕಟ್ಟಿಸಿ ಕೊಟ್ಟು ರಾಮದೇವರಿಗೆ ಚಿನ್ನದ ಮಂಟಪ, ಸುವರ್ಣದಿಂದ ಕೂಡಿದ ಚಿನ್ನದ ತೊಟ್ಟಿಲು, ಚಿನ್ನ ಬೆಳ್ಳಿಯ ತಟ್ಟೆ ಬಟ್ಟಲುಗಳು, ಧೂಪಾರ್ತಿ ಮೊದಲಾದ ಬಗೆಬಗೆಯ ಆರತಿಗಳು, ನವರತ್ನದ ಪದಕಗಳಿಂದ ಕೂಡಿದ ಅನೇಕ ಮುಕ್ತಾಹಾರ ವಸ್ತ್ರಾಭರಣ ಮುಂತಾದ ಪೂಜೋಪಕರಣ ಸೌವರ್ಣೋಪಕರಣಗಳನ್ನು ಒಪ್ಪಿಸಿ ರಾಮದೇವರ ಸಮಾರಾಧನೆ ನಡೆಯಲು ತಿಂಗಳು ೧ಕ್ಕೆ ೫೨-೮೬ ಕಂಠೀ ರೂಪಾಯಿ ಮೊತ್ತಗೆ ನರಸಿಂಹಪುರದ ತಾಲ್ಲೂಕಿನಿಂದ ಸಂದಾಯವಾಗುವಂತೆ ಕಟ್ಟಳೆ ಮಾಡಿಸಿ, ಅನೇಕ ಗ್ರಾಮ ಭೂಮಿಗಳನ್ನು ಕೊಟ್ಟರು. ಮತ್ತು ಸ್ವಾಮಿಗಳಿಗೆ ಪೀತಾಂಬರಾದ್ಯನೇಕ ವಸ್ತ್ರಾಭರಣಗಳನ್ನೂ ದ್ರವ್ಯವನ್ನೂ ಕೊಟ್ಟು, ಭಿಕ್ಷೆ ಮಾಡಿಸಿ, ಅನೇಕವಾಗಿ ಮರ್ಯಾದೆ ಮಾಡಿದರು.

ಇತರ ಮಠಗಳು.—ಶ್ರೀಕೃಷ್ಣರಾಜ ಒಡೆಯರವರು ರಾಘವೇಂದ್ರಸ್ವಾಮಿಗಳ ಪರಂಪರೆಯಲ್ಲಿದ್ದ ಸುಜನೀಂದ್ರ ಸ್ವಾಮಿಗಳನ್ನು ಮಂತ್ರಾಲಯದಿಂದ ಕರೆಸಿ ನಂಜನಗೂಡಿನಲ್ಲಿ ಮಠವನ್ನು ಕಟ್ಟಿಸಿಕೊಟ್ಟು, ಹಗಲು ದೀವಟಿಗೆ ಬಿರುದನ್ನು ನೂತನವಾಗಿ ಕೊಟ್ಟು, ಅನೇಕ ಗ್ರಾಮ ಭೂಮಿಗಳನ್ನೂ ಚಿನ್ನ ಬೆಳ್ಳಿಯ ಪಾತ್ರೆಗಳನ್ನೂ ವಸ್ತ್ರಾಭರಣ ಮುಂತಾದ ಪೂಜೋಪಕರಣಗಳನ್ನೂ ಒಪ್ಪಿಸಿದರು. ಮತ್ತು ಈ ಸ್ವಾಮಿಗಳ ನಾಮಾಂಕಿತವಾಗಿ ಬೆಳ್ಳಿಯ ಬೃಂದಾವನವನ್ನು ಮಾಡಿಸಿ, ಅದರ ತೊಟ್ಟಿಯಲ್ಲಿ ದಿನಗಟ್ಟಳೆ ಪೂಜೆ ನಡೆಸುವುದಕ್ಕೂ, ಹಗಲು ರಾತ್ರಿಗಳಲ್ಲಿ ಅನ್ನಸಂತರ್ಪಣೆ ನಡೆಯುತ್ತಿರುವ ಕಟ್ಟಳೆ ಮಾಡಿಸಿದರು.

ಕೂಡ್ಲಿ, ಪುಷ್ಪಗಿರಿ, ಶಿವಗಂಗೆ, ಅವನಿ ಮುಂತಾದ ಸ್ಥಳಗಳಲ್ಲಿರುವ ಮಠಗಳಿಗೂ ಉಡುಪಿಯ ಎಂಟು ಮಠಗಳಿಗೂ ಅನೇಕವಾಗಿ ವಸ್ತ್ರಾಭರಣಗಳನ್ನೂ ಚಿನ್ನಬೆಳ್ಳಿಗಳ ಪಾತ್ರೆಗಳನ್ನೂ ಕೊಟ್ಟು ಗ್ರಾಮಭೂಮಿ ಸಮಾರಾಧನೆಗಳನ್ನು ಮಾಡಿಕೊಟ್ಟರು.

ಮಲೆಯಾಳ, ಅನಂತಶಯನ, ಕೊಚ್ಚಿ ಮುಂತಾದ ಪಾಶ್ಚಾತ್ಯಪಟ್ಟಣದಲ್ಲಿರುವ ಜನರ ಆಚಾರ ವಿಚಾರವನ್ನು ಮಾಡಿಕೊಂಡಿದ್ದ ಶೃಂಗೇರೀ ಮಠಕ್ಕೆ ಸೇರಿತವಾದ ಸುರೇಶ್ವರಾಚಾರ್ಯರ ಸಂಪ್ರದಾಯದ ಕೃಷ್ಣಭಾರತೀ ಸ್ವಾಮಿಗಳು ಮೈಸೂರಿಗೆ ದಯಮಾಡಿದ್ದ ಶೃಂಗೇರೀ ಶ್ರೀ ನೃಸಿಂಹ ಭಾರತೀ ಸ್ವಾಮಿಗಳ ದರ್ಶನಕ್ಕಾಗಿ ಶಾ|| ೧೭೭೮ನೇ ರಾಕ್ಷಸ ಸಂವತ್ಸರದ ಫಾಲ್ಗುನ ಮಾಸದಲ್ಲಿ ಬಂದಿದ್ದರು. ಆಗ ಮಹಾಸ್ವಾಮಿಯವರು ಈ ಸ್ವಾಮಿಗಳವರ ಪಾದ ಪೂಜೆಯನ್ನು ಮಾಡಿಸಿ, ನವರತ್ನದ ಆಭರಣಗಳನ್ನೂ ವಸ್ತ್ರಗಳನ್ನು ಕೊಟ್ಟು ಛತ್ರ, ಚಾಮರ, ಆನೆ ಮುಂತಾದ ಮರ್ಯಾದೆಗಳನ್ನು ಮಾಡಿ ಅವರ ಸ್ಥಳಕ್ಕೆ ಕಳುಹಿಸಿಕೊಟ್ಟರು.

ಶ್ರವಣಬೆಳಗೊಳದ ಜಿನದೇವರಿಗೆ ಮಸ್ತಕಾಭಿಷೇಕ.— ಮೂಡಬಿದರೆ, ಧರ್ಮಸ್ಥಳ ಮುಂತಾದ ಮುಖ್ಯಸ್ಥಳಗಳಲ್ಲಿರುವ ಜಿನ ದೇವರಿಗೆ ಅನೇಕ ವಸ್ತ್ರಾಭರಣಗಳನ್ನು ಕೊಟ್ಟದ್ದಲ್ಲದೆ, ಶ್ರವಣಬೆಳಗೊಳದಲ್ಲಿರುವ ಜಿನದೇವರಿಗೆ ಅನೇಕಾವೃತ್ತಿ ಮಸ್ತಕಾಭಿಷೇಕವನ್ನು ಮಾಡಿಸಿ, ಪೂಜೆಗಳನ್ನು ನಡೆಸುವುದಕ್ಕೋಸ್ಕರ ಇಲ್ಲಿರುವ ಜೈನ ಸನ್ಯಾಸಿಗಳಿಗೆ ಗ್ರಾಮ ಭೂಮಿಗಳನ್ನು ಕೊಟ್ಟು, ಮೈಸೂರು ಮುಂತಾದ ೧೦೪ ಗಡಿಗಳಲ್ಲಿರುವ ಜಿನ ದೇವರಿಗೆ ವಿಧವರಿತು ತಸ್ತೀಕನ್ನುಂಟು ಮಾಡಿ, ಅನೇಕ ಜೈನ ಪಂಡಿತರಿಗೆ ಸಂಬಳ ಗ್ರಾಮ ಭೂಮಿಗಳನ್ನು ಕೊಟ್ಟರು.

ಇದೇ ರೀತಿಯಾಗಿ ಗಚ್ಚಿ ಮಠ, ಜಪದ ಕಟ್ಟೆಯಮಠ ಮೊದಲಾದ ಲಿಂಗಾಯ್ತರ ಮಠಗಳಿಗೂ ಗ್ರಾಮಭೂಮಿಗಳನ್ನು ಕೊಟ್ಟು ಸಂರಕ್ಷಿಸುತ್ತ ಬಂದರು.

19. ದಾನಗಳು, ವ್ರತೋದ್ಯಾಪನೆ, ಶಾಂತಿಗಳು.—ದೊರೆಗಳವರು ತುಲಾ ಪುರುಷದಾನಗಳನ್ನು ಮಾಡಿದರು : ಶಾ|| ೧೭೪೫ನೇ ಸುಭಾನು

ಸಂವತ್ಸರದ ವೈಶಾಖ ಶುದ್ಧ ೫ಯಲ್ಲಿ ೧೮,೫೦೦ ಕುಂಪಣಿ ರೂಪಾಯಿಗಳು. ಶಾ॥ ೧೭೬೦ನೇ ಹೇವಿಳಂಬಿ ಸಂವತ್ಸರದ ಪುಷ್ಯ ಬಹುಳ ೩ ಸೋಮವಾರದಲ್ಲಿ ೩,೦೪೩ ರಾಜಾ ರೂಪಾಯಿಗಳು. ಶಾ॥ ೧೭೭೫ನೇ ಪರಿಧಾವಿ ಸಂವತ್ಸರದ ಚೈತ್ರ ಶುದ್ಧ ೧೫ ಭಾನುವಾರದಲ್ಲಿ ೩,೫೦೦ ಕುಂಪಣಿ ರೂಪಾಯಿ. ಶಾ॥ ೧೭೭೯ನೇ ನಳ ಸಂವತ್ಸರದ ಅಶ್ವಯುಜದಲ್ಲಿ ೬,೦೦೦ ರೂಪಾಯಿ, ಪುಷ್ಯಮಾಸದಲ್ಲಿ ೬,೫೦೦ ರೂಪಾಯಿ ಹಿರಣ್ಯಗರ್ಭ ದಾನಮಾಡಿದ್ದು :— ಶಾ॥೧೭೬೧ನೇ ವಿಲಂಬಿ ಸಂವತ್ಸರದ ವೈಶಾಖ ಶುದ್ಧ ೩ ಶುಕ್ರವಾರ ದಿವಿ ೧೩॥ ಗಳಿಗೆಗೆ ಕರ್ಕಾಟಕ ಲಗ್ನದಲ್ಲಿ ಚಿನ್ನ ೪೧ ಸೇರೂ ೫೩ ತೊಲವೂ ೩ ಹಣದ ತೂಕ, ದಕ್ಷಿಣೆ ೪೦೦ ರೂಪಾಯಿ, ಮುತ್ತು ೩೦೪. ಶಾ॥ ೧೭೬೯ನೇ ಅಕ್ಷಯ ಸಂವತ್ಸರದ ವೈಶಾಖ ಶುದ್ಧ ೧೫ ಭಾನುವಾರದಲ್ಲಿ ಚಿನ್ನ ೪೧ ಸೇರೂ ೧೩ ತೊಲವೂ ೩ ಹಣದ ತೂಕ, ದಕ್ಷಿಣೆ ೪೦೦ ರೂಪಾಯಿಗಳು, ಮುತ್ತು ೩೦೪ ಮೂರುಸಾರಿ ತಿಲಗರ್ಭದಾನ ಮಾಡಿದ್ದು ೩,೭೦೦ ರೂಪಾಯಿ. ಇವುಗಳಲ್ಲದೆ ತಿಲಪರ್ವತ, ತಿಲರಾಶಿ, ಸಾಲಂಕಾರ ತ್ರಿಮೂರ್ತಿದಾನ, ಗುಪ್ತ ಕೂಷ್ಮಾಂಡದಾನ, ದ್ವಾದಶಸಹಸ್ರ ಗೋದಾನ, ಗಜಾಶ್ವರಥದಾನ ಮೊದಲಾದ ಅನೇಕ ದಾನಗಳನ್ನು ಮಾಡಿ ಯಥಾ ವಿಧಿಯಾಗಿ ಕೋಟಿ ಪಂಚಾಕ್ಷರ ಜಪಸಂರಕ್ಷಣೆ ಮಾಡಿಸಿದರು. ಮತ್ತು ಇದೇ ರೀತಿಯಿಂದ ತಮ್ಮ ಪಟ್ಟ ಸ್ತ್ರೀಯರುಗಳಿಂದಲೂ, ಧರ್ಮಪತ್ನಿಯರುಗಳಿಂದಲೂ ಅನೇಕ ದಾನಗಳನ್ನು ಮಾಡಿಸಿದರು.

ಗುರುಗಳವರು ಸೋಮವಾರ, ಪ್ರದೋಷ, ಶಿವರಾತ್ರಿ, ಶ್ರೀಕೃಷ್ಣಜಯಂತಿ, ಶ್ರೀರಾಮನವಮಿ, ಗಣಪತಿ, ಅನಂತಪದ್ಮನಾಭ, ಸುಬ್ರಹ್ಮಣ್ಯಸ್ವಾಮಿ, ಕೇದಾರೇಶ್ವರ, ಈ ವ್ರತೋದ್ಯಾಪನೆಗಳನ್ನು ದೇವತಾಪ್ರೀತ್ಯರ್ಥವಾಗಿ ಶಾಸ್ತ್ರೋಕ್ತಪ್ರಕಾರ ಮಾಡುವಲ್ಲದೆ ತಮ್ಮ ಮಾತೃಶ್ರೀಯವರು ಮೊದಲಾದ ಅಂತಃಪುರಸ್ತ್ರೀಯರುಗಳಿಂದಲೂ ಶಿವರಾತ್ರಿ, ಮಂಗಳಗೌರಿ, ಗಜಗೌರಿ ಮುಂತಾದ ಅನೇಕ ವ್ರತಗಳನ್ನು ಮಾಡಿಸಿ ಶಿವ, ವಿಷ್ಣು, ಚಾಮುಂಡೇಶ್ವರಿ ಈ ದೇವತೆಗಳ ಪ್ರೀತ್ಯರ್ಥವಾಗಿ ವಿಧ್ಯುಕ್ತವಾದ ಕೋಟಿ ಬಿಲ್ವಾರ್ಚನಾದ್ಯರ್ಚನೆಗಳನ್ನು ಮಾಡಿಸಿದರು.

ಆಳಿದ ಮಹಾಸ್ವಾಮಿಯವರಿಗೆ ಶಾಲೀವಾಹನ ಶಕ ೧೭೭೨ ನೇ ಪ್ರಮೋದಿ ಸಂವತ್ಸರದ ಮಾಘ ಬಹುಳ ೩ ಗುರುವಾರದಲ್ಲಿ ಉಗ್ರರಥ ಶಾಂತಿಯೂ, ಶ॥ ೧೭೮೬ನೇ ರಕ್ತಾಕ್ಷಿ ಸಂವತ್ಸರದ ಆಷಾಢ ಶುದ್ಧ ೮ ಮಂಗಳವಾರದಲ್ಲಿ ಭೀಮರಥಶಾಂತಿಯೂ, ವಿಧ್ಯುಕ್ತವಾಗಿ ಸಕಲ ವೈಭವಗಳಿಂದಲೂ ಜರಗಿದವು. ಇದೇ ರಕ್ತಾಕ್ಷಿ ಸಂವತ್ಸರದ ಫಾಲ್ಗುನ ಬಹುಳ ೩ ಭಾನುವಾರದಲ್ಲಿ ರಮಾವಿಲಾಸದವರಿಗೂ, ಕಾರ್ತಿಕ ಬಹುಳ ೩ ಬುಧವಾರದಲ್ಲಿ ಸೀತಾವಿಲಾಸದವರಿಗೂ ಉಗ್ರರಥ ಶಾಂತಿಯು ಜರಗಿತು.

20. ಕ್ರತುಗಳನ್ನು ಮಾಡಿಸಿದ್ದು.—ಶ್ರೀ ಕೃಷ್ಣರಾಜ ಒಡೆಯರವರು ಮೈಸೂರು, ನಂಜನಗೂಡು, ಚಾಮರಾಜನಗರ, ಶ್ರೀರಂಗಪಟ್ಟಣ, ಎಡತೊರೆ, ರಾಮನಾಥಪುರ, ಮೇಲುಕೋಟೆ, ಮಹಾದೇವಪುರ, ಬೆಂಗಳೂರು, ಶಿವಗಂಗೆ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಶ್ರೀಮತಸ್ಥ ಬ್ರಾಹ್ಮಣರಿಂದಲೂ ಅವರವರು ಮಾಡಬೇಕೆಂದು ಕೇಳಿಕೊಂಡಂತೆ ಅಗ್ನಿಷ್ಟೋಮ, ಅತಿರಾತ್ರ, ಉಕ್ಥ್ಯ, ವಾಜಪೇಯ, ಗರುಡಚಯನ, ಸರ್ವತೋಮುಖ, ಬೃಹಸ್ಪತಿ ಸವನ ಮುಂತಾದ ಅನೇಕ ಕ್ರತುಗಳನ್ನು ಮಾಡಿಸಿದರು.

21. ಇತರ ಲೋಕೋಪಕಾರಗಳು.—ದೊರೆಗಳು ಲೋಕೋಪಕಾರಾರ್ಥವಾಗಿ ಲೋಕರಂಜನ ಮಹಲಿಗೆ ಉತ್ತರದಲ್ಲಿ ವೈದ್ಯಶಾಲೆಯನ್ನು ನಿರ್ಮಿಸಿ, ಅಲ್ಲಿ ಸಕಲರಿಗೂ ಧರ್ಮಾರ್ಥವಾಗಿ ಔಷಧಗಳನ್ನು ಕೊಡುವಂತೆ ಕಟ್ಟಳೆಮಾಡಿ, ಔಷಧವನ್ನು ಕೊಡುವುದಕ್ಕೆ ಸಮರ್ಥರಾದ ಇಂಗ್ಲಿಷ್ ವೈದ್ಯರನ್ನು ಕರೆಸಿ, ಭಾರೀ ಸಂಬಳಕೊಟ್ಟು ನೇಮಿಸಿದರು.

ಆಳಿದ ಮಹಾಸ್ವಾಮಿಯವರು ಆಗಾಗ್ಗೆ ಬೇಟೆಗೆ ಚಿತ್ತೈಸಿ, ರಾಷ್ಟ್ರದ ಅಗಮ್ಯವಾದ ಅಡವಿಗಳಲ್ಲಿ ಸೇರಿಕೊಂಡು ಜನಗಳಿಗೆ ಬಾಧೆಯನ್ನುಂಟುಮಾಡುತ್ತಲಿದ್ದ ಹುಲಿ, ಕರಡಿ, ಕಾಡಾನೆ, ಕೋರೆಹಂದಿ ಮುಂತಾದ ದುಷ್ಟಮೃಗಗಳನ್ನು ಬೇಟೆಮಾಡಿ ಸಂಹರಿಸಿ, ಜನಗಳಿಗೆ ಕ್ಷೇಮವನ್ನುಂಟುಮಾಡಿದ್ದಲ್ಲದೆ, ವಿನೋದಾರ್ಥವಾಗಿ ಕೆಲವನ್ನು ಹಿಡಿಸಿ ತಂದು ಸಾಕುತ್ತಲಿದ್ದರು.

ಶ್ರೀರಂಗಪಟ್ಟಣ ಮತ್ತು ಶಿವನಸಮುದ್ರದ ಬಳಿ ಕಾವೇರೀನದಿ, ಲೋಕಪಾವನಿ, ರಾಮಗಿರಿಯ ಬಳಿ ಅರ್ಕಾವತಿ ಮುಂತಾದ ಅನೇಕ ನದಿಗಳಿಗೆ ಸೇತುವೆಗಳನ್ನು ಕಟ್ಟಿಸಿದ್ದಲ್ಲದೆ, ಕೃಷ್ಣರಾಜಕಟ್ಟೆ, ಲಕ್ಷ್ಮಣತೀರ್ಥಕಟ್ಟೆ, ಕಪಿಲಾನದಿ ಮೊದಲಾದವುಗಳಿಗೆ ಕಟ್ಟೆಗಳನ್ನು, ಪಶ್ಚಿಮವಾಹಿನೀ ಕಾವೇರಿಯ ದಡದಲ್ಲಿ ಕಾಶಿಯ ಕೆಲಸದಿಂದ ಅತಿವಿಸ್ತಾರವಾಗಿಯೂ ಮನೋಹರವಾಗಿಯೂ ಇರುವ ಸೋಪಾನ ಸಂಧ್ಯಾಮಂಟಪ ಧರ್ಮಶಾಲೆಗಳನ್ನು, ಚಂದ್ರವನದಲ್ಲಿ ಸೋಪಾನ ಘಟ್ಟವನ್ನು, ತೋಟದಲ್ಲಿ ಶ್ರೀರಂಗಪಟ್ಟಣದ ಶಾಸ್ತ್ರಿಮಹಲೆಂಬ ಬಂಗಲೆಯನ್ನೂ ಕಟ್ಟಿಸಿದರು. ಕಾವೇರೀನದಿಗೆ ರಮಣೀಯವಾಗಿ ಕಾಶಿಯ ಕೆಲಸದ ಸೋಪಾನ ಮಂಟಪಗಳನ್ನೂ, ನದೀತೀರದಲ್ಲಿ ಗುಡಿಯನ್ನು ಕಟ್ಟಿಸಿ, ಈ ಗುಡಿಯಲ್ಲಿ ಅಮೃತಶಿಲೆಯಿಂದ ರಾಮದೇವರನ್ನೂ ಸಾಧಾರಣವಾದ ಶಿಲೆಯಿಂದ ಆಂಜನೇಯನನ್ನೂ ಗಣಪತಿಯನ್ನೂ ನಿರ್ಮಿಸಿ ಪ್ರತಿಷ್ಠೆ ಮಾಡಿಸಿ, ಪೂಜೆ ನಡವಂತೆ ನೇಮಿಸಿದರು. ನಂಜನಗೂಡು ಕಪಿಲಾನದಿಯಲ್ಲಿ ಸಂಧ್ಯಾಮಂಟಪಗಳನ್ನೂ ಸೋಪಾನಗಳನ್ನೂ ಕಟ್ಟಿಸಿದರು. ಮೈಸೂರಲ್ಲಿ ಕಾರಂಜಿಕೆರೆಯನ್ನೂ ಬೆಂಗಳೂರಲ್ಲಿ ದೊಡ್ಡ ಕೆರೆಯನ್ನೂ ಚಿಕ್ಕಬಳ್ಳಾಪುರದ ಸಮೀಪದಲ್ಲಿ ಗುಪ್ತವಾಗಿ ಪ್ರವಹಿಸುತ್ತಿರುವ ಕ್ಷೀರನದಿಯಲ್ಲಿ ಪನಸಭಾವಿ ಎಂಬ ಸರೋವರವನ್ನೂ ಕಟ್ಟಿಸಿ, ತಮ್ಮ ಸಂಸ್ಥಾನಕ್ಕೆ ಸೇರಿತವಾದ ಅನೇಕ ತಟಾಕ ಸೋಪಾನ ಮಂಟಪ ಮುಂತಾದವುಗಳನ್ನು ಜೀರ್ಣೋದ್ಧಾರ ಮಾಡಿಸಿದ್ದಲ್ಲದೆ ನೂತನವಾಗಿಯೂ ನಿರ್ಮಿಸಿದರು.

ಗ್ರಂಥಗಳನ್ನು ನಿರ್ಮಿಸಿದುದು.—ಶ್ರೀತತ್ವನಿಧಿ, ಗಣಿತಸಂಗ್ರಹ, ಸ್ವರಚೂಡಾಮಣಿ, ಸೌಗಂಧಿಕಾಪರಿಣಯ, ಸಂಖ್ಯಾರತ್ನಕೋಶ, ಇವಕ್ಕೆ ವ್ಯಾಖ್ಯಾನ ಪ್ರಭಾವಳಿ, ಶ್ರೀಕೃಷ್ಣಕಥಾಸಾರ ಸಂಗ್ರಹ, ನವಗ್ರಹ ಪೂಜಾಮಂಜರಿ, ಆರ್ಯಾರಾಮಾಯಣ, ಶ್ರೀಚಕ್ರಸಂಗ್ರಹಮಂಜರಿ, ಸೂರ್ಯಚಂದ್ರವಂಶಾವಳಿ, ಶ್ರೀಚಾಮುಂಡಿಕಾ ಲಘು ನಿಘಂಟು, ಮಹಾಕೋಶಸುಧಾಕರ, ಚತುರಂಗಸಾರಸರ್ವಸ್ವ, ಕೆಲವು ಪುರಾತನ ನಾಟಕಗಳಿಗೂ, ಶ್ರೀಮದ್ಭಾಗವತ, ಭಾರತ, ರಾಮಾಯಣಗಳಿಗೂ

ಕರ್ಣಾಟಕ ಭಾಷಾನುವಾದ, ಗ್ರಹೋದರ್ಪಣ, ಅನೇಕ ಗದ್ಯಪದ್ಯಗಳು, ಸುಧಾಸಂಕಲ್ಪ, ದಶಾವಿಭಾಗವದಕ್, ಅನೇಕಾರ್ಥಗಳನ್ನು ಸೂಚಿಸುವ ವಿಷ್ಣುನಾಮ ಪಂಚಶತಿ, ಶ್ರೀಚಾಮುಂಡೇಶ್ವರೀ ಶ್ರೀಕಂಠೇಶ್ವರ ಶ್ರೀಮಹಾವಿಷ್ಣು ಗಣಪತಿ ತ್ರಿಶತಿಗಳು, ಅಷ್ಟೋತ್ತರಗಳು, ಶ್ರೀಚಾಮುಂಡೇಶ್ವರಿ ಮೊದಲುಗೊಂಡು ಅಷ್ಟೋತ್ತರ ಶತಸಂಖ್ಯಾಕ ದೇವತೆಗಳ ಅಷ್ಟೋತ್ತರ ಶತನಾಮಗಳನ್ನು ತಿಳಿಸುವ ದೇವತಾನಾಮ ಕುಸುಮ ಮಂಜರಿ, ಸಂಖ್ಯಾಮಾಲಿ ಇವು ಮೊದಲಾದ ಗ್ರಂಥಗಳನ್ನು ನಿರ್ಮಿಸಿ, ಶ್ರೀಕೃಷ್ಣರಾಜ ಒಡೆಯರವರು ಮೇಲೆ ಬರೆದಿರುವ ಗ್ರಂಥಗಳನ್ನೂ, ಭಗವದ್ಗೀತೆ ಮೊದಲಾದ ಅನೇಕ ಪ್ರಾಚೀನಗ್ರಂಥಗಳನ್ನೂ ಆಯಾ ದೇವತಾಚಿತ್ರಗಳಿಂದ ಒಡಗೂಡಿರುವಂತೆ ಅಂಬಾವಿಲಾಸದ ಮುದ್ರಾಕ್ಷರ ಶಾಲಾ ಶಿಲಾಯಂತ್ರದಲ್ಲಿ ಅಚ್ಚು ಹಾಕಿಸಿ, ಸಮುಖದ ವಿದ್ವಾಂಸರು ದೇಶಾಂತರಗಳಲ್ಲಿರುವ ವಿದ್ವಾಂಸರು, ಅಧಿಕಾರಸ್ಥರು ಮುಂತಾದ ಅನೇಕರಿಗೆ ಉಚಿತವಾಗಿ ಕೊಟ್ಟು ಸಂತೋಷ ಪಡಿಸಿದರು. ಮಹಾಸ್ವಾಮಿಯವರು ನಿರ್ಮಿಸಿರುವ ಅಪೂರ್ವವಾದ ಅನೇಕ ಯಂತ್ರಗಳು ಇವರ ಶಾಸ್ತ್ರತತ್ವಜ್ಞಾನವನ್ನು ನಾನಾಮುಖವಾಗಿ ಪ್ರದರ್ಶಿಸುವುವು.

ದೊರೆಗಳವರು ಕೆಲವು ಕಾಲದವರೆಗೆ ರಾಜ್ಯಭಾರವನ್ನು ಇಂಗ್ಲಿಷ್ ಸರ್ಕಾರದವರ ವಶಮಾಡಿದ ಮೇಲೂ ಪ್ರಭುಗಳವರ ಆಸ್ಥಾನವು ಪಂಡಿತ ಮಂಡಲಿಯಿಂದ ವಿರಾಜಮಾನವಾಗಿತ್ತು. ಆಗಿನ ವಿದ್ವಾಂಸರಲ್ಲಿ ಕುಣಿಗಲ್ ರಾಮಶಾಸ್ತ್ರಿಗಳು, ಕೆಂಪುನಾರಾಯಣ ಕವಿ, ವ್ಯಾಕರಣ ನರಸಿಂಹ ಶಾಸ್ತ್ರಿಗಳು, ಕವಿ ವರದಾಚಾರ್ಯರು, ಅನಂತಾಳ್ವಾರವರು, ಕುಂಭಕೋಣದ ಶೇಷಾಚಾರ್ಯರು, ವಿಷ್ಣು ಪಾದಾಚಾರ್ಯರು, ಸಜ್ಜಯಾಚಾರ್ಯರು ಮೊದಲಾದವರನೇಕರು ಸುಪ್ರಸಿದ್ಧರು. ಇವರಶಿಷ್ಯ ಪ್ರಶಿಷ್ಯರುಗಳ ಮೂಲಕ ವಿದ್ಯಾಂಕುರಗಳು ಸ್ಥಳಾಂತರಗಳನ್ನೂ ಪ್ರವೇಶಿಸಿ ಅಲ್ಲಲ್ಲಿ ಬೇರೂರಿದುವು.

22. ಲೋಕರಂಜಕವಾದ ಇತರ ವಿಷಯಗಳು.—ಶ್ರೀ ಕೃಷ್ಣರಾಜ ಒಡೆಯರವರು ಕೋಟೆಯ ಹೊರಗೆ ಪೂರ್ವಪಾರ್ಶ್ವದಲ್ಲಿ ಕಾರಂಜಿ ಕೆರೆಯ ಸಮೀಪದಲ್ಲಿ ಅತ್ಯಾಶ್ಚರ್ಯಕರವಾದ ಲೋಕರಂಜನಮಹಲೆಂಬ

ಬಂಗಲೆಯನ್ನು ಕಟ್ಟಿಸಿ, ಈ ಬಂಗಲೆಯು ಕಾರಂಜಿ ಕೊಳದ ತೊಟ್ಟಿಯ ಶ್ರೀ ಹರಿಹರೇಶ್ವರ, ಅರ್ಧನಾರೀಶ್ವರ, ಗಣಪತಿ, ಕೃಷ್ಣ, ಅಶ್ವತ್ಥಲಾ ವೃಕ್ಷ ಸಹಿತವಾದ ಕಾಶ್ಯಪ, ಈ ದೇವರುಗಳ ಪ್ರತಿಮೆ ಮಾಡಿಸಿ ಪೂಜೆನಡೆಯುಂತೆ ಕಟ್ಟಳೆ ಮಾಡಿಸಿದರು. ಅರಮನೆಗೆ ಪಶ್ಚಿಮ ಪಾರ್ಶ್ವದಲ್ಲಿ ಬೃಹತ್ತಾದ ಒಳಗೂ ಹೊರಗೆ ಅನೇಕ ವಿಧವಾದ ಕನ್ನಡಿ, ಕಂದೀಲು, ಗಡಿಯಾರ, ರಾಗಮಾಲೆ, ಕುರ್ಚಿ, ಕೌಚು, ಮೇಜು, ಛಾಯಾಚಿತ್ರ ದೇವತಾ ಪಟಗಳು ಇವುಗಳಿಂದಲೂ ಸಮಸ್ತ ಜನಗಳು ಅತ್ಯಾಶ್ಚರ್ಯ ಪಡುವಂಥ ಕೆಂಪುಮಣಿ, ನೀಲ, ಪಚ್ಚೆ ಮುಂತಾದ ಜವಾಹಿರಾತುಗಳಿಂದಲೂ ದ್ವೀಪಾಂತರಗಳಿಂದ ತರಿಸಿದ ನಾನಾ ಪುಷ್ಪಲತೆಗಳಿಂದ ಅಲಂಕೃತವಾಗಿರುವ ಉದ್ಯಾನಗಳಿಂದಲೂ ಪ್ರಕಾಶಮಾನವಾಗಿ ಅಂತಸ್ತುಗಳಿಂದ ಅತ್ಯುನ್ನತವಾದ ಜಗನ್ಮೋಹನ ಮಹಲೆಂಬ ಬಂಗಲೆಯನ್ನು ಕಟ್ಟಿಸಿ, ಶಾ॥ ೧೭೬೪ನೇ ದುರ್ಮತಿ ಸಂವತ್ಸರದ ಜ್ಯೇಷ್ಠ ಬಹುಳ ೬ ಸೋಮವಾರದಲ್ಲಿ ನೂತನ ಪ್ರವೇಶವನ್ನು ಮಾಡಿಸಿದರು. ಇದಲ್ಲದೆ ಇಲ್ವಾಲ, ಚಾಮುಂಡಿಬೆಟ್ಟ, ನಂಜನಗೂಡು ಮುಂತಾದ ಸ್ಥಳಗಳಲ್ಲಿಯೂ ಅನೇಕವಾದ ಬಂಗಲೆಗಳನ್ನು ಕಟ್ಟಿಸಿದರು.

ದೊರೆಗಳು ಅತ್ಯುನ್ನತವಾಗಿಯೂ ಚಿತ್ರ ವಿಚಿತ್ರವಾಗಿಯೂ, ಅನೇಕ ಕಂಬಗಳಿಂದಲೂ ಕನ್ನಡಿಯಿಂದಲೂ ಬಗೆಬಗೆಯಾದ ಕುಚ್ಚುಗಳಿಂದಲೂ ಚಿನ್ನದ ಕಳಶಗಳಿಂದಲೂ ಅಲಂಕೃತವಾಗಿರುವ ಒಂದು ಆನೆ ಹೂಡಲಾಗಿ ೮ ಆನೆಗಳನ್ನು ಕಟ್ಟತಕ್ಕ ಗಜರಥ, ಸುವರ್ಣದ ಪಂಚಕಳಶಗಳಿಂದ ಅಲಂಕೃತವಾಗಿ ಒಂದು ಕುದುರೆಯಿಂದ ೮ ಕುದುರೆಯವರೆಗೂ ಕಟ್ಟತಕ್ಕ ನಾನಾವಿಧವಾದ ಅಶ್ವರಥಗಳು, ಪುಷ್ಪರಥ ಮುಂತಾದ ಅನೇಕ ರಥಗಳನ್ನು ಮಾಡಿಸಿದರು.

23. ಇಂಗ್ಲಿಷ್ ವಿದ್ಯೆಗೆ ಉತ್ತೇಜನ.—ಪ್ರಭುಗಳವರು ಜನಗಳ ಇಂಗ್ಲಿಷ್ ವಿದ್ಯಾಭ್ಯಾಸಕ್ಕೋಸ್ಕರ ರಾಜಧಾನಿಯಲ್ಲಿ ಒಂದು ಸ್ಕೂಲನ್ನು ಸ್ಥಾಪಿಸಬೇಕೆಂದು ಆಗಲೇ ತಿಳಿಸಿದೆ. ಈ ಸ್ಕೂಲಿಗೆ ಪ್ರಥಮತಃ ಮಿ॥ ಸಾತ್ರ ಎಂಬುವರು ಅಧ್ಯಕ್ಷರಾಗಿ ನೇಮಕವಾದರು. ಅವರನ್ನು 1835 ರಲ್ಲಿ ಮಿ॥ ಮಿಲ್ಲರವರು ಹಿಂಬಾಲಿಸಿದರು. ಬಳಿಕ ಮಿ॥



ದಲ್ಲಿ ಮೈಸೂರು ದೊರೆಗಳ ಸೀಮೆಯ ರಾಜ್ಯಭಾರದ ಕಮಿಷನರವರು ಮಿ॥ ಬೌರಿಂಗ್ ಸಾಹೇಬರೂ, ಜುಡಿಷಿಯಲ್ ಕಮಿಷನರ್ ಮಿ॥ ಸಾಂಡರ್ಸ್ ಸಾಹೇಬರೂ, ಮಿಲಿಟರಿ ಅಸಿಸ್ಟೆಂಟ್ ಮೇಜರ್ ರಾಮ್ಸೇಯವರೂ, ಅಷ್ಟಗ್ರಾಮದ ಡಿವಿಜನ್ ಸೂಪರಿಂಟೆಂಡೆಂಟ್ ಮೇಜರ್ ಎಲಿಯಟ್ ರವರೂ, ಡಾಕ್ಟರ್ ರೇಟನ್ ಮೊದಲಾದ ಅನೇಕ ಇಂಗ್ಲಿಷ್ ಸರದಾರರೂ, ಕೆಲವರು ಇಂಗ್ಲಿಷ್ ಸ್ತ್ರೀಯರೂ, ಪ್ರಮುಖರಾದ ಬಹುಮಂದಿ ಪ್ರಜೆಗಳೂ ಅಲ್ಲಿ ನೆರೆದಿದ್ದರು. ಸಭಾಸದರೆಲ್ಲರೂ ಕುಳಿತುಕೊಂಡ ಬಳಿಕ ಮೇಜರ್ ಎಲಿಯಟ್ ರವರು ಅರಮನೆಗೆ ಬಂದು ಅರಿಕೆಮಾಡಿಕೊಂಡ ಮೇಲೆ ದೊರೆಗಳವರು ನಾಲ್ಕು ಕುದುರೆಗಳ ಖಾಸ ರಥದಲ್ಲಿ ಬಾಡೀಗಾರ್ಡ (Body Guards) ಮತ್ತು ಸಿಲೇದಾರ್ (Silledar) ಪಟಾಲಂ ಸಮೇತರಾಗಿ ಆ ಸರದಾರರೊಡನೆ ಸವಾರಿ ಬೆಳಸಿ ಆ ಸ್ಕೂಲಿನ ಬಳಿಗೆ ತಲಪುವ ಸಮಯಕ್ಕೆ ಸರಿಯಾಗಿ ಕಮಿಷನರ್ ಮಿ॥ ಬೌರಿಂಗ್ ಸಾಹೇಬರು ಮುಂದೆ ಬಂದು ಮಹಾಸ್ವಾಮಿಯವರನ್ನು ಬರಮಾಡಿಕೊಂಡು ಒಳಕ್ಕೆ ಬಿಜಯ ಮಾಡಿಸಿದರು. ಸಭಾಧ್ಯಕ್ಷರಾಗಿರಲು ಪ್ರಭುಗಳಿಗೋಸ್ಕರ ಅಲ್ಲಿ ಸಿದ್ಧಪಡಿಸಿದ್ದ ಒಂದು ಉತ್ಕೃಷ್ಟವಾದ ಆಸನವನ್ನು ನೋಡಿ ಖಾವಂದರವರು ಅದನ್ನು ತೆಗೆಯಿಸಿ ಅದಕ್ಕೆ ಬದಲಾಗಿ ಅತಿಥಿಶ್ರೇಷ್ಠರುಗಳು ಕುಳಿತಿದ್ದಂತಿರುವ ಒಂದು ಆಸನದ ಮೇಲೆ ಮುಹೂರ್ತಮಾಡಿದರು. ಇದು ಆ ಪಾರ್ಥಿವ ಶಿರೋಮಣಿಗಳ ಪರಮ ಸೌಹಾರ್ದಭಾವವನ್ನು ಚೆನ್ನಾಗಿ ವ್ಯಕ್ತಪಡಿಸಿತು. ಆಗ ಕೆಲವು ಮಂದಿ ಪ್ರೌಢ ವಿದ್ಯಾರ್ಥಿಗಳು ಪರೀಕ್ಷಿತರಾದ ಮೇಲೆ ಖಾವಂದರವರ ಅಪ್ಪಣೆಯಂತೆ ಕಮಿಷನರ್ ಮಿ॥ ಬೌರಿಂಗ್ ಸಾಹೇಬರು ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳಿಗೆ ಪಾರಿತೋಷಿಕವಾಗಿ ಪುಸ್ತಕಗಳನ್ನು ಕೊಟ್ಟು ಸ್ಕೂಲಿನ ಅಭಿವೃದ್ಧಿಯನ್ನು ಕುರಿತು ಉಪನ್ಯಾಸಮಾಡಿ ಪ್ರಭುಗಳವರ ಔದಾರ್ಯವನ್ನು ಬಹಳವಾಗಿ ಶ್ಲಾಘಿಸಿದರು. ಅನಂತರ ಶ್ರೀಮನ್ಮಹಾರಾಜರವರು ಸ್ಕೂಲಿನ ಅಧ್ಯಕ್ಷರಾದ ಮಿ॥ ಡನ್ನಿಂಗ್ ರವರಿಗೆ ಗಣ್ಯವಾದ ಒಂದು ಕಲಾಪತ್ತಿನ ಶಾಲ್ ಜೋಡಿ ಮರ್ಯಾದೆಯನ್ನು ಅಪ್ಪಣೆಕೊಡಿಸಿ, ಈ ಸ್ಕೂಲಿನಲ್ಲಿ ದೇಶಭಾಷೆಯ ಅಭ್ಯಾಸಕ್ಕೆ ಸಾಧ್ಯವಾದ ಮಟ್ಟಿಗೆ ಹೆಚ್ಚಾಗಿ ಗಮನಕೊಡುವುದು ಉತ್ತಮವೆಂದು ಅಪ್ಪಣೆ ದಯಪಾಲಿಸಿದರು.

24. ದೊರೆಗಳವರ ವಿಶ್ರಾಂತಿ.—ದೊರೆಗಳವರು ತಮ್ಮ ಸ್ವೀಕೃತ ಪುತ್ರರಾದ ಶ್ರೀ ಚಾಮರಾಜ ಒಡೆಯರವರು ಪ್ರಾಪ್ತವಯಸ್ಕರಾಗುತಲೆ ರಾಜ್ಯಭಾರವನ್ನು ವಹಿಸಲು ಅರ್ಹರಾಗುವಂತೆ ವಿದ್ಯಾಭ್ಯಾಸ ಮಾಡಿಸಬೇಕೆಂದು ಪರ್ಯಾಲೋಚಿಸಿ ತಮಗೆ ಪೂರ್ವಪರಿಚಿತರಾಗಿದ್ದ ಲೆಫ್ಟಿನೆಂಟ್ ಕರ್ನಲ್ ಹೇನ್ಸ್ ಸಾಹೇಬರ ಸಹಾಯವನ್ನು ಅಪೇಕ್ಷಿಸಿ ಅಪ್ಪಣೆ ಕೊಡಿಸಿದರು. ಇದನ್ನು ಅನುಮೋದಿಸಿ ಇಂಡಿಯಾ ರಾಷ್ಟ್ರದ ಗವರ್ನರ್ ಜನರಲ್ ಸಾಹೇಬರು ಮೇಲ್ಪಟ್ಟ ಅಧಿಕಾರಿಗಳಿಗೆ 1867ನೆ ಇಸವಿ ಆಗಸ್ಟ್ ಮಾಹೆಯಲ್ಲಿ ಶಿಫಾರಸುಮಾಡಲು ಅದು 1868ನೆ ಇಸವಿ ಅಕ್ಟೋಬರ್ ತಿಂಗಳಲ್ಲಿ ವಿಲಾಯತಿ ಸ್ಟೇಟ್ ಸೆಕ್ರೆಟರಿಯವರಿಂದ ಮಂಜೂರಾಯಿತು. ಈ ಮಧ್ಯಕಾಲದಲ್ಲಿ ಅಂದರೆ 1868ನೆ ಇಸವಿ ಮಾರ್ಚಿ 28ನೆಯ ತಾರೀಖಿಗೆ ಸರಿಯಾದ ವಿಭವ ಸಂವತ್ಸರ ಚೈತ್ರ ಶುದ್ಧ ೪ಯಲ್ಲಿ ಶ್ರೀಮನ್ಮಹಾರಾಜರು ಮುಮ್ಮಡಿ ಕೃಷ್ಣರಾಜ ಒಡೆಯರವರು ಇಹಲೋಕ ವ್ಯಾಪಾರವನ್ನು ಬಿಟ್ಟು ಪರಮೇಶ್ವರನಲ್ಲಿ ಐಕ್ಯ ಹೊಂದಿದರು. ಅವರಿಗೆ ಆಗ ಬಾಲ್ಯದಶೆಯಲ್ಲಿದ್ದ ಶ್ರೀ ಚಾಮರಾಜೇಂದ್ರ ಒಡೆಯರವರ ಕರ್ತವ್ಯದಮೇಲೆ ಅರಮನೆಯ ಪದ್ಧತಿಗನುಸಾರ ಶಾಸ್ತ್ರಸಮ್ಮತವಾಗಿ ಸಂಸ್ಕಾರಗಳು ನಡೆದುವು. ಪ್ರಜೆಗಳು ದುಃಖ ಮಹಾರ್ಣವದಲ್ಲಿ ಮಗ್ನರಾದರು. ಈ ಸಂದರ್ಭದಲ್ಲಿ ಚೀಫ್ ಕಮಿಷನರ್ ಬೌರಿಂಗ್ ಸಾಹೇಬರು ಬಂದು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಉಂಟಾದ ವ್ಯಸನವನ್ನು ಸೂಚಿಸಿ ಶ್ರೀ ಚಾಮರಾಜೇಂದ್ರ ಒಡೆಯರವರು ಮೈಸೂರು ಸೀಮೆಗೆ ಪ್ರಭುಗಳೆಂದೂ, ಇವರ ಬಾಲ್ಯದಲ್ಲಿ ಇವರಿಗೋಸ್ಕರ ಬ್ರಿಟಿಷ್ ಗವರ್ನಮೆಂಟಿನವರ ಮೂಲಕ ಈ ದೇಶದ ರಾಜ್ಯಭಾರವು ನಡೆಯುವುದೆಂದೂ, ಈ ದೊರೆಗಳು 18 ವರ್ಷ ತುಂಬಿ ಪ್ರಬುದ್ಧರಾಗುತಲೆ ರಾಷ್ಟ್ರಾಧಿಪತ್ಯವನ್ನು ಇವರಿಗೆ ಒಪ್ಪಿಸಲಾಗುವುದೆಂದೂ, ಇಸ್ತಿಹಾರ್ನಾಮೆಯ ಮೂಲಕ ಸರ್ವರಿಗೂ ತಿಳಿಯಪಡಿಸಿ ಅರಮನೆಯ ಇಲಾಖೆಗಳಲ್ಲಿ ಕಾಲೋಚಿತವಾಗಿ ಬದಲಾವಣೆಗಳನ್ನು ನಡೆಸಲು ಅಷ್ಟಗ್ರಾಮದ ಡಿವಿಜನ್ ಸೂಪರಿಂಟೆಂಡೆಂಟರಾಗಿದ್ದ ಕರ್ನಲ್ ಎಲಿಯಟ್ರವರನ್ನು ನೇಮಿಸಿದರು.

25. ಅರಮನೆಯಲ್ಲಿ ನಡೆದ ಆ ಕಾಲದ ಹೊಸ ಏರ್ಪಾಡು.—ಮೇಲೆ ಹೇಳಿದಂತೆ ಅರಮನೆಯ ಕೆಲಸಗಳನ್ನು ತಮಬಂದಿಗೆ ತರುವುದಕ್ಕೆ ತಾವು ನೇಮಿಸಿದ ಅಷ್ಟಗ್ರಾಮ ಡಿವಿಜನ್ ಸೂಪರಿಂಟೆಂಡೆಂಟರಾಗಿ ಕಮಿಷನರು ಮದ್ರಾಸ್ ಸೀಮೆಯಲ್ಲಿ ಡೆಪ್ಯುಟಿ ಕಲೆಕ್ಟರಾಗಿದ್ದ ಮ॥ ಸಿ. ರಂಗಾಚಾರ್ಯರನ್ನು ಕರೆಸಿ ಕುಮ್ಮಕ್ಕು ಕೊಟ್ಟರು. ಈ ಸೂಪರಿಂಟೆಂಡೆಂಟರು ಹಿಂದಕ್ಕೆ 1864ನೆ ಯಿಸವಿಯವರೆಗೆ ವ್ಯವಸ್ಥಿತವಾಗಿದ್ದ ದೇಣಿ ಹೋಗಲಾಗಿ ಈಚೆಗೆ ದೊರೆಗಳವರು ತಮ್ಮ ಅವಶ್ಯಕವಾದ ಖರ್ಚಿಗೆ ವರಮಾನವು ಸಾಲದಿದ್ದ ಕಾರಣ ಮಾಡಿದ್ದ ಸಾಲಗಳನ್ನೆಲ್ಲಾ ವಿಚಾರಿಸಿ ಆಯಾ ದೇಣಿದಾರರಿಗೆ ಸಲ್ಲತಕ್ಕದ್ದೆಂದು ನಿಷ್ಕರ್ಷೆ ಮಾಡಿದ ಬಟ್ಟು ಮೊಬಲಗು 12,25,821 ರೂಪಾಯಿ ಗವರ್ನ್ಮೆಂಟಿನಿಂದ ಪಾವತಿಯಾಯಿತು.

ಅರಮನೆಯ ಅಮೃತಮಹಲ್ ಬಾಬಿನಲ್ಲಿ 927 ದನಗಳನ್ನು ಚುನಾಯಿಸಿ ಇವುಗಳಿಗೋಸ್ಕರ ಅವಶ್ಯಕವಾದ 42 ಕಾವಲುಗಳನ್ನು ಮಾತ್ರ ಉಳಿಸಿಕೊಂಡರು. ಖಾಸ್ ಜವಾಹಿರು ನಗ, ನಾಣ್ಯ, ಪಾಚಿ, ಪಾತ್ರೆ ಮುಂತಾದ ಸಾಮಾನುಗಳನ್ನೆಲ್ಲಾ ಕ್ರಮವಾಗಿ ಜಪ್ತಿ ಮಾಡಿಸಿ ಇವನ್ನೆಲ್ಲಾ ಬಂದೋಬಸ್ತು ಮಾಡಿಸಿದರು. ಸಿಂಹಾಸನ ಮತ್ತು ಕೆಲವು ಖಾಸ್ ಚಿಲ್ಲರೆ ನಗಗಳು ಹೊರತು ಉಳಿದುವಕ್ಕೆಲ್ಲಾ ಬಟ್ಟು 33,79,691½ ರೂಪಾಯಿ ಅಂದಾಜು ತಯಾರಾಯಿತು.

ಖಾವಂದರವರ ಪೋಷ್ಯವರ್ಗಕ್ಕೂ ಬಂಧುವರ್ಗಕ್ಕೂ ಸೇರಿದ ಜನರು ಹೊರತು ಉಳಿದ ಇಲಾಖೆಗಳ ನೌಕರರು 9687 ಮಂದಿ ಇದ್ದರು. ಇವರಿಗೆ ತಲಬು ಮಾಹೇಯಾನ 57,452 ರೂಪಾಯಿ ಸಲ್ಲುತ್ತಿತ್ತು. ಇದನ್ನೆಲ್ಲಾ ತನಿಖೆಮಾಡಿ ಇಲ್ಲಿ ಮುಂದೆ ಕಾಣಿಸಿರುವಂತೆ ಹನ್ನೆರಡು ಇಲಾಖೆಗಳಿಗೆ ಖುಲ್ಲು 3196 ಮಂದಿಯನ್ನು ಬಹಲಿಟ್ಟುಕೊಂಡು ಇವರಿಗೆಲ್ಲಾ ಬಟ್ಟು ಖರ್ಚು ತಿಂಗಳೊಂದಕ್ಕೆ 19,268 ರೂಪಾಯಿ ನೌಕರರ್ಮಾತ್ರ ಉಳಿದವರ ಹಕ್ಕುದಾರಿಗಳನ್ನೆಲ್ಲಾ ಮುನಾಸಬು ಪೆನ್ಷನ್ ಅಥವಾ ಗ್ರಾಟ್ಯುಯಿಟಿ ಮೂಲಕ ವ್ಯವಸ್ಥೆಮಾಡಿದರು.

ನಂಬ್ರ	ಇಲಾಖೆ	[illegible]	ವರಸವಾರು ಖರ್ಚು		
			ರೂ.	ಆ.	ಪೈ.
1	ದಫ್ತರ್ ಇಲಾಖೆ.	16	263	0	0
2	ಕಿಲ್ಲೇಕಛೇರಿ.	586	4,335	0	0
3	ಜಿಲ್ಲೇಕಛೇರಿ.	424	2,326	0	0
4	ಚಾಮುಂಡಿತೊಟ್ಟಿ	251	2,268	0	0
5	ಜವಳಂಗ ಹೊಲಿಬಳಿ,	404	2,244	0	0
6	ರಾಣಿವಾಸ ಮುಖದ ಊಳಿಗ.	306	1,620	0	0
7	ಸಾಸಾಹೇಬರು ಮುಖದ ಊಳಿಗ.	426	1,475	8	0
8	ಅಶ್ವಶಾಲೆ, ಗಜಶಾಲೆ.	132	799	8	0
9	ಕರಿವಸ್ತ್ರ.	152	501	0	0
10	ಸಾರಮೃತ್ಯ.	206	1,280	8	0
11	ಜವರ್ ಇಲಾಖೆ.	213	1,025	0	0
12	ಆಫೀಸು, (ಅಧಿಕಾರಸ್ಥಾನ.)	80	1,130	8	0
	ಒಟ್ಟು.	3196	19,268	0	0

ಮೈಸೂರಲ್ಲಿ ದೊರೆಗಳವರು ಸ್ಥಾಪಿಸಿ ನಡೆಸಿಕೊಂಡು ಬರುತ್ತಿದ್ದ ಇಂಗ್ಲಿಷ್‌ಸ್ಕೂಲು ಮತ್ತು ಆಸ್ಪತ್ರೆ ಇವುಗಳು ಸರ್ಕಾರಕ್ಕೆ ಸೇರಿದುವು. ಅರಮನೆಯಲ್ಲಿ ಉಳಿದ ಎಲ್ಲಾ ಬಾಬುಗಳ ಖರ್ಚಿಗೂ 1869-70ನೆ ಯಿಸವಿಗೆ 8,12,887 ರೂಪಾಯಿ ಬಡ್ಜೆಟ್ ಅಂದಾಜು ದಾಖಲಾಯಿತು.

26. ಮುಮ್ಮಡಿ ಶ್ರೀ ಕೃಷ್ಣರಾಜ ಮಹಾಪ್ರಭು ಗುಣಕಥನ ಸಂಗ್ರಹ.— ಶ್ರೀ ಮನ್ಮಹಾರಾಜರು ಮುಮ್ಮಡಿ ಕೃಷ್ಣರಾಜ ಒಡೆಯರವರ ಜೀವಿತ ಚರಿತ್ರೆಯು ಅಸಾಧಾರಣ ವೃತ್ತಾಂತ ಗರ್ಭಿತವಾಗಿರುವುದು. ಇದನ್ನು ತಕ್ಕಹಾಗೆ ವಿಸ್ತರಿಸುವುದಕ್ಕೆ ಬೇಕಾದ ಸಾಮಗ್ರಿಗಳು ಇನ್ನೂ ವಿಶದವಾಗಿ ತಿಳಿದು ಬಂದಿರುವುದಿಲ್ಲ. ಆದರೂ ಇದುವರೆಗೆ ದೊರೆತಿರುವ ದಾಖಲೆಗಳ ಆಧಾರದಿಂದ ಈ ಸಂಪುಟದಲ್ಲಿ ವಿವರಿಸಿರುವ ಅಂಶಗಳು ಈ

ಭೂಪಾಲವರ್ಯರ ವಿಚಕ್ಷಣ ರಾಜ್ಯಭಾರ ಕ್ರಮವನ್ನೂ, ನೈಜಗುಣ
ಸ್ವಭಾವಾದಿಗಳನ್ನೂ ಸ್ವಲ್ಪಮಟ್ಟಿಗೆ ವ್ಯಕ್ತಪಡಿಸುವುವು. ದೈವಾನು
ಗ್ರಹದಿಂದ ದೀರ್ಘಾಯುಷ್ಮಂತರೆನಿಸಿ, ಪ್ರಜಾಕ್ಷೇಮ ಚಿಂತಕರಾಗಿ,
ಆಂಗ್ಲೇಯ ಚಕ್ರವರ್ತಿಗಳ ವಿಷಯದಲ್ಲಿ ಉಪಕಾರ ಸ್ಮರಣಪೂರ್ವಕ
ನಿಶ್ಚಲ ಸ್ನೇಹ ಭಾವದಿಂದಲೂ ನಿಷ್ಕಪಟ ಮನೋವೃತ್ತಿಯಿಂದಲೂ
ಪ್ರವರ್ತಿಸಿ, ಕಾಲವೈಷಮ್ಯದಿಂದ ಬಂದೊದಗಿದ ತಾಪತ್ರಯಗಳನ್ನು
ಪರಿಹರಿಸಿಕೊಂಡು, ಪರಂಪರೆಯಾಗಿ ನಡೆದು ಬಂದ ತಮ್ಮ ರಾಜವಂಶ
ವನ್ನು ಈ ದೇಶದಲ್ಲಿ ಸ್ಥಿರಪಡಿಸಿದ ಈ ಮಹಾಪ್ರಭುಗಳವರ ವೃತ್ತಾಂತವು
ಚಿರಸ್ಮರಣೀಯವಾಗಿರುವುದು. ಈ ನೃಪಾಲರು ಮೇಲೆ ವಿವರಿಸಿರುವಂತೆ
ನಾನಾಮುಖವಾಗಿ ತಾವು ಧರ್ಮಗಳನ್ನು ಮಾಡಿದುದಲ್ಲದೆ ತಮ್ಮ ಮಾತಾ
ಪಿತೃಗಳು, ಇತರ ದೇಹಾನುಬಂಧಿಗಳು ಮೊದಲಾದ ಅನೇಕರ ಉದ್ದೇಶ
ದಿಂದಲೂ ಧರ್ಮಗಳನ್ನು ಮಾಡಿದರು. ಮತ್ತು ಪ್ರಜೆಗಳು, ಆಶ್ರಿತರು,
ಮುಂತಾದವರುಗಳಲ್ಲಿ ಯಾರು ಯಾರು ಧರ್ಮಕಾರ್ಯಗಳನ್ನು ಮಾಡ
ಬೇಕೆಂದು ಸಂಕಲ್ಪಿಸಿ ತಮಗೆ ಶಕ್ತಿಯಿಲ್ಲದೆ ಖಾವಂದರವರ ಸನ್ನಿಧಾನದಲ್ಲಿ
ಪ್ರಾರ್ಥಿಸಿಕೊಂಡರೋ ಅಂತಹ ಜನರಿಗೆಲ್ಲಾ ಇಷ್ಟಾರ್ಥಗಳನ್ನಿತ್ತು
ಪ್ರಖ್ಯಾತರಾದರು. ಖಾವಂದರವರು ಸಂಸ್ಕೃತಭಾಷಾಭಿಜ್ಞರು. ಮತ್ತು
ಕರ್ಣಾಟಕ ಭಾಷೆಯಂತೆಯೇ ಪಾರ್ಸಿ (Persian), ಮಹಾರಾಷ್ಟ್ರ
ಭಾಷೆಗಳನ್ನೂ ಬಲ್ಲವರಾಗಿದ್ದರು. ಇವರ ಆಸ್ಥಾನಕವಿ ಕೋಲಾರದ
ಡಿಸ್ಟ್ರಿಕ್ಟ್ ಕುಂವಲಗುರ್ಕಿ ನಿವಾಸಿ ಚಂದ್ರಕವಿ ಎಂಬಾತನಿಂದ ವಿರಚಿತ
ವಾದ ಕೃಷ್ಣಭೂಪಾಲೀಯವೆಂಬ ಆಂಧ್ರಭಾಷಾಲಕ್ಷಣ ಗ್ರಂಥವು ಈ
ಮಹಾರಾಜರಿಗೆ ಅಂಕಿತವಾಗಿರುವುದನ್ನು ನೋಡಿದರೆ ಆಂಧ್ರಭಾಷಾ ಪರಿ
ಚಯವೂ ಈ ದೊರೆಗಳವರಿಗೆ ಇದ್ದಂತೆ ತೋರುವುದು. ದೇಶಭಾಷೆಗಳಿ
ಗೆಲ್ಲಾ ಆಶ್ರಯ ಭಾಷೆಯೆನಿಸಿರುವ ಗೀರ್ವಾಣವಾಣಿಯ ನಾಟ್ಯವೈಭವಕ್ಕೆ
ಈ ರಾಜಶೇಖರರ ಆಸ್ಥಾನವು ಮನೋಹರವಾದ ರಂಗವೆನಿಸಿತ್ತು. ಅನೇಕ
ಗ್ರಂಥಪ್ರಣೇತೃಗಳಾದ ಈ ಪಾರ್ಥಿವ ಶಿರೋಮಣಿಗಳ ಪ್ರೋತ್ಸಾಹ ಬಲ
ದಿಂದ ಬಹುಮಂದಿ ಪ್ರಖ್ಯಾತ ಪಂಡಿತರು ಮೈಸೂರಲ್ಲಿ ನೆಲೆಗೊಳ್ಳಲಾಗಿ
ಇಲ್ಲಿ ಸಂಸ್ಕೃತ ವಿದ್ಯಾಪ್ರಚಾರಕ್ಕೆ ತುಂಬಾ ಸೌಲಭ್ಯವುಂಟಾಯಿತು.

ಮಹಾರಾಜರವರು ಮಂತ್ರಶಾಸ್ತ್ರಾಭ್ಯಾಸವನ್ನೂ ಚನ್ನಾಗಿ ಮಾಡಿದ್ದರು. ಜ್ಯೋತಿಶ್ಶಾಸ್ತ್ರದಲ್ಲಿ ಅವರಿಗಿದ್ದ ಪರಿಚಯವು ಅಸಾಧಾರಣವೆಂದು ಕಾಣುತ್ತೆ. ಆಸ್ಥಾನದಲ್ಲಿ ತರ್ಕಶಾಸ್ತ್ರ ಪಾರಂಗತರಾಗಿದ್ದ ಬ್ರಂ॥ ಶ್ರೀ॥ ಕುಣಿಗಲ್ ರಾಮಶಾಸ್ತ್ರಿಗಳು ತಮಗೆ ಮೂರನೆಯ ಪುತ್ರರು ಜನಿಸಿದಾಗ ಆ ಶಿಶುವಿನ ಜನ್ಮಪತ್ರಿಕೆಯನ್ನು ತಂದೊಪ್ಪಿಸಲು, ಅದನ್ನು ಪರಾಮರ್ಶಿಸುತಲೇ ಖಾವಂದರವರು ಮಗುವಿಗೆ ನಾಮಧೇಯವೇನೆಂದು ಅಪ್ಪಣೆ ಕೊಟ್ಟರು. ಅದಕ್ಕೆ ಶಿವಸ್ವಾಮಿಯೆಂದು ಹೆಸರಿಟ್ಟಿರುವುದಾಗಿ ಶಾಸ್ತ್ರಿಗಳು ಶೃತಪಡಿಸಿಕೊಂಡರು. ಪ್ರಭುಗಳವರು ಆ ಶಿಶುವಿನ ಜನನಕಾಲ ಗ್ರಹಯೋಗವನ್ನು ನೋಡಿ, ಆ ದಿವ್ಯಚೇತನದ ಪ್ರಭಾವವನ್ನು ತತ್ಕ್ಷಣವೇ ತಿಳಿದುಕೊಂಡವರಾಗಿ, ಇವರು ನಿಮಗಲ್ಲದೆ ನಮಗೂ ಸ್ವಾಮಿಗಳೆಂದು ಅಪ್ಪಣೆ ಕೊಟ್ಟು, ಆ ಜನ್ಮಪತ್ರಿಕೆಯನ್ನು ಸನ್ಮಾನಿಸಿದರು. ತರುವಾಯ ಶೃಂಗೇರೀ ಗುರುಪದವಿಯಲ್ಲಿ ಪಟ್ಟಾಭಿಷಿಕ್ತರಾಗಿದ್ದ ಶ್ರೀ ನೃಸಿಂಹ ಭಾರತೀಸ್ವಾಮಿಗಳವರು 1866-67 ನೆ ಯಿಸವಿ ಅಕ್ಷಯ ಸಂವತ್ಸರದ ನಿಜಜ್ಯೇಷ್ಠದಲ್ಲಿ ಮೈಸೂರಿಗೆ ಸವಾರಿ ಚಿತ್ತೈಸಿ ಖಾವಂದರವರ ಇಷ್ಟಾನುಸಾರ ಕರಿಕಲ್ಲು ತೊಟ್ಟಿಯಲ್ಲಿ ದಯಮಾಡಿಸಿದ್ದಾಗ ಸ್ವಾಮಿಗಳವರ ಅಭಿಪ್ರಾಯಕ್ಕನುಗುಣವಾಗಿ ದೊರೆಗಳವರು ಬ್ರಂ॥ ಶ್ರೀ॥ ಕುಣಿಗಲ್ ರಾಮಶಾಸ್ತ್ರಿಗಳ ತೃತೀಯ ಪುತ್ರರು ಒಂಭತ್ತು ವರ್ಷದ ವಯಸ್ಸಿನ ಶಿವಸ್ವಾಮಿಗಳನ್ನು ಅರಮನೆಗೆ ಕರೆಸಿ ಆಗ ಅವರಲ್ಲಿ ದೃಶ್ಯವಾದ ಯತ್ಯಾಶ್ರಮಯೋಗ ಚಿಹ್ನೆಗಳನ್ನು ಕಂಡು ಸಂತೋಷಪಟ್ಟು, ಸನ್ಮಾನಿಸಿ, ಅವರು ಶೃಂಗೇರಿ ಶ್ರೀ ಸ್ವಾಮಿಗಳವರ ಶಿಷ್ಯಪಟ್ಟಕ್ಕೆ ದಯಮಾಡಿಸುವಂತೆ ಏರ್ಪಾಡು ಮಾಡಿಸಿದರು. ಅದರಂತೆ ಅಕ್ಷಯ ಸಂವತ್ಸರದ ಆಷಾಢಬಹುಳ ಷಷ್ಠೀ ಗುರುವಾರದಲ್ಲಿ ಯಥಾಶಾಸ್ತ್ರವಾಗಿ ಶಿವಸ್ವಾಮಿಗಳಿಗೆ ಆಶ್ರಮಸ್ವೀಕಾರ ಮಹೋತ್ಸವವು ಜೆಳಯಿತು. ಪ್ರಭುಗಳವರ ಅಮೃತವಾಕ್ಯ ಫಲಿಸಿತು.

ಈ ಮಹಾ ಪ್ರಭುಗಳ ದೈವಭಕ್ತಿ ಪರತೆಯೂ ಅಪಾರವೆನಿಸಿತ್ತು. ಇವರ ಉಪಾಸನಾ ಶಕ್ತಿಯಿಂದ ಇವರ ಉದ್ದಿಷ್ಟ ಕಾರ್ಯಗಳೆಲ್ಲವೂ ವಿಘ್ನಶತಗಳು ಸಂಭವಿಸಿದರೂ ಹದಗೆಡದೆ ಕೈಗೂಡಿದುವಲ್ಲದೆ ಇವರ

ಮನಸ್ಸನ್ನು ನೋಯಿಸಿದವರಿಗೆ ಹಾನಿಯೂ, ಇವರ ಸೇವೆಯನ್ನು ನಿರ್ವಂಚನೆಯಿಂದ ನಡೆಸಿದವರಿಗೆ ಪುರೋವೃದ್ಧಿಯೂ ಸಂಭವಿಸಿರುವುದು ಅನೇಕ ಸಂದರ್ಭಗಳಲ್ಲಿ ಅನುಭವಸಿದ್ಧವಾಗಿದೆ.

ಶ್ಲೋ॥ ಶ್ರೋತ್ರಂ ಶ್ರುತೇನೈವ ನ ಕುಂಡಲೇನ
ದಾನೇನ ಪಾಣಿರ್ನ ತು ಕಂಕಣೇನ ।
ವಿಭಾತಿ ಕಾಯಃ ಕರುಣಾಕುಲಾನಾಂ
ಪರೋಪಕಾರೇಣ ನ ಚಂದನೇನ ॥

ಕರ್ಣವು ಕುಂಡಲಾಭರಣಗಳಿಂದಲ್ಲ; ಶಾಸ್ತ್ರದಿಂದಲೇ; ಕೈಯು ಕಂಕಣದಿಂದಲ್ಲ, ದಾನದಿಂದಲೇ; ಕರುಣಾಳುಗಳ ದೇಹವು ಚಂದನಲೇಪನದಿಂದಲ್ಲ, ಪರೋಪಕಾರದಿಂದಲೇ ಪ್ರಕಾಶಿಸುವುದು — ಎಂಬ ಭರ್ತೃಹರಿ ಮಹಾಕವಿಯ ವಾಕ್ಯಕ್ಕೆ ಪುರಾಣೇತಿಹಾಸಗಳಲ್ಲದೆ ಸಕಲಶಾಸ್ತ್ರಗಳನ್ನೂ ಬಹು ಮುಖದಿಂದ ಕೇಳಿ ಆನಂದಿಸಿ ತಮ್ಮ ದಾನಧಾರೆಯಿಂದ ಅನೇಕರಿಗೆ ಜೀವಿಕೆಗಳನ್ನು ಕಲ್ಪಿಸಿ, ನಾನಾ ಮುಖವಾಗಿ ಜನೋಪಕಾರವನ್ನು ಮಾಡಿದ ಶ್ರೀಮನ್ಮಹಾರಾಜರು ಮುಮ್ಮಡಿ ಕೃಷ್ಣರಾಜ ಒಡೆಯರವರು ಉದಾಹರಣವಾಗಿರುವರೆನಲು ಇದು ಅತಿಶಯೋಕ್ತಿಯಲ್ಲ. ಮೈಸೂರು ಸೀಮೆಯ ಪ್ರಜೆಗಳೂ ಸ್ತ್ರೀಪುರುಷರೂ, ಆಬಾಲವೃದ್ಧರೂ, ನಾನಾ ಜಾತಿಯವರೂ, ಮುಮ್ಮಡಿ ಶ್ರೀಕೃಷ್ಣ ಭೂಪತಿಯವರನ್ನು ರಾಜಧಾನಿಯಲ್ಲಿಯೇ ಅಲ್ಲದೆ ಆಯಾ ನಗರಗಳಲ್ಲಿಯೂ ಗ್ರಾಮಗಳಲ್ಲಿಯೂ ಭಕ್ತಿಪೂರ್ವಕವಾಗಿ ಈಗಲೂ ಕೊಂಡಾಡುತ್ತಿರುವುದು ಲೋಕವಿದಿತವಾಗಿದೆ. ಪ್ರಜ್ಞಾಸ್ಫೂರ್ತಿ, ಪ್ರಜಾನುರಾಗ, ಕಾರುಣ್ಯ, ದಾತೃತ್ವ, ಕ್ಷಮೆ, ಅಸದೃಶ ದೈವಭಕ್ತಿ, ಶಾಸ್ತ್ರತತ್ವವಿಚಾರಪರತೆ, ಇವು ಮುಖ್ಯವಾಗಿ ಶ್ರೀ ನಂಜರಾಜಾಭಿಧ ಮುಮ್ಮಡಿ ಕೃಷ್ಣಭೂಪಾಲರ ಪುಣ್ಯಕೋಶವಿವರ್ಧಕವಾಗಿರಲು, ಈ ಪಾರ್ಥಿವ ಶಿರೋಮಣಿಗಳವರು ಸರ್ವದಾ ಯಶಃಕಾಯದಿಂದ ವಿರಾಜಮಾನರಾಗಿರುವರು.

27. ಶ್ರೀಚಾಮರಾಜ ಒಡೆಯರವರ ಪಟ್ಟಾಭಿಷೇಕ.—ಶ್ರೀ ಚಾಮರಾಜ ಒಡೆಯರವರಿಗೆ ರಾಜ್ಯಪಟ್ಟಾಭಿಷೇಕವು ನಡೆವಂತೆ ಇಂಡಿಯಾ ಗವರ್ನ್ಮೆಂಟಿನಿಂದ ಮಂಜೂರಾಗುತಲೇ ವಿಭವ ಸಂವತ್ಸರದ ಆಶ್ವ

ಯುಂಜ ಶುದ್ಧ ೩ ಸ್ಥಿರವಾರ 1868ನೆ ಯಿಸವಿ ಸೆಪಟೆಂಬರು 19ರಲ್ಲಿ ದಿವಿ 11 ಘಂಟೆಗೆ ಕರ್ನಲ್ ಎಲಿಯಟ್ ಸಾಹೇಬರು ಅರಮನೆಗೆ ಬಂದು ಆಳಿದಮಹಾಸ್ವಾಮಿಯವರಾದ ಮುಮ್ಮಡಿ ಕೃಷ್ಣರಾಜಒಡೆಯರವರ ಧರ್ಮಪತ್ನಿಯರುಗಳು ರಮಾವಿಲಾಸ ಸನ್ನಿಧಾನದ ಚೆಲುವಾಜಮ್ಮಣ್ಣಿಯವರಿಗೂ, ಸೀತಾವಿಲಾಸ ಸನ್ನಿಧಾನದ ದೇವಾಜಮ್ಮಣ್ಣಿಯವರಿಗೂ, ಅವರುಗಳ ಸ್ವೀಕೃತಪುತ್ರರಾದ ಶ್ರೀಚಾಮರಾಜ ಒಡೆಯರವರಿಗೆ ರಾಜ್ಯಪಟ್ಟಾಭಿಷೇಕ ಮಹೋತ್ಸವವನ್ನು ಬೆಳಸುವಂತೆ ಇಂಡಿಯಾ ದೇಶದ ವೈಸ್‌ರಾಯ್ ಮತ್ತು ಗವರ್ನರ್ ಜನರಲ್ ಸಾಹೇಬರವರ ಅಪ್ಪಣೆಯು ಟೆಲಿಗ್ರಾಮು ಮೂಲಕ ಬಂದಿರುವುದಾಗಿಯೂ, ಈ ಮಹೋತ್ಸವವನ್ನು ಬೆಳಸಲು ಪ್ರಶಸ್ತವಾದ ದಿವಸವನ್ನು ನೋಡಿಸಿ ಗೊತ್ತು ಮಾಡಬೇಕೆಂಬುದಾಗಿಯೂ ಶ್ರುತಪಡಿಸಿ ಪದ್ಧತಿಯ ಮೇರೆಗೆ ಹೂವಿನ ಹಾರ ಪಾನ್‌ಪಟ್ಟಿಗಳನ್ನು ತೆಗೆದುಕೊಂಡು ತಮ್ಮ ಬಂಗಲೆಗೆ ಹೊರಟು ಹೋದರು. ಈ ಸಂತೋಷ ಸಮಾಚಾರಕ್ಕೋಸ್ಕರ 21 ತೋಪುಗಳು ಆಗಿ, ಕೋಟೆಪೇಟೆಗಳಲ್ಲಿ ಸರ್ವರಿಗೂ ಸಕ್ಕರೆಯನ್ನು ಹಂಚಿಸಿದರು. ಈ ದಿವಸ ಹಗಲು 12 ಘಂಟೆಯಲ್ಲಿ ಚಾಮರಾಜ ಒಡೆಯರವರು ಕುದುರೆ ಸವಾರಿತೊಟ್ಟಿಯ ಮೇಲಿನ ದಿವಾನ್‌ಖಾನೆಯ ನೂಕಿನಲ್ಲಿ ಕುರ್ಚಿಯ ಮೇಲೆ ಮುಹೂರ್ತಮಾಡಿದ ಬಳಿಕ ಅರಸುಗಳು, ಅಮಲ್‌ದಾರರು ಮೊದಲಾದವರ ಮುಜರೆ ಆಗಿ ಎಲ್ಲರಿಗೂ ಹೂವಿನಹಾರ ವೀಳೆಯಗಳು ಕೊಡಲ್ಪಟ್ಟವು. ಈ ದಿವಸ 3 ಘಂಟೆಯಲ್ಲಿ ರಾಜಧಾನಿಯಲ್ಲಿರುವ ಸಮಸ್ತ ವರ್ತಕರೂ ಹಣ್ಣುಗಳನ್ನು ತಟ್ಟೆಗಳಿಗೆ ತುಂಬಿಸಿಕೊಂಡು ಓಲಗಮೇಳ ಸಮೇತ ವಿಜೃಂಭಣೆಯಿಂದ ಅರಮನೆಗೆ ತೆಗೆದುಕೊಂಡುಬಂದು ಹಜೂರು ಮಹಾಸನ್ನಿಧಾನಕ್ಕೆ ಒಪ್ಪಿಸಿದರು. ಆಗ ಎಲ್ಲರಿಗೂ ಹೂವಿನಹಾರ ವೀಳೆಯಗಳು ಕೊಡಲ್ಪಟ್ಟವು. ಬಳಿಕ 4 ಘಂಟೆಯಲ್ಲಿ ಬಕ್ಷಿನರಸಪ್ಪನವರು ಮುಂತಾಗಿ ಮೊಟ್ಟರಾದ ಬಕ್ಷಿಗಳೂ, ಮುಸಾಹೇಬರೂ ಅರಮನೆಯಿಂದ ಹಣ್ಣುಗಳ ತಟ್ಟೆಗಳನ್ನು ಪಾಲ್ದಾನ್ ಸಹಿತ ತೆಗೆಸಿಕೊಂಡು ಮಿ॥ ಎಲಿಯಟ್ ಸಾಹೇಬರ ಬಂಗಲೆಗೆ ಹೋಗಿ ಅವರಿಗೆ ಕೊಟ್ಟರು. ಅರಮನೆಯಲ್ಲಿ ಈ ದಿನದಿಂದ ಚೌಪಹರಿ ನೌಪತ್ತು ನಡೆಯುತ ಬಂದಿತು. ಮಾರನೆಯದಿನ

ಶ್ರೀಮನ್ಮಹಾರಾಜಾಧಿರಾಜ

ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ.

ಒಂದನೆಯ ಅಧ್ಯಾಯ.

ಪೂರ್ವಚರಿತ್ರಸಂಗ್ರಹ.

ಮೈಸೂರು ಸಂಸ್ಥಾನವು ಪುರಾಣಪ್ರಸಿದ್ಧವಾದ ಜಂಬೂದ್ವೀಪಕ್ಕೆ ಸೇರಿದ ಭರತವರ್ಷದ ದಕ್ಷಿಣಭಾಗದಲ್ಲಿ ಪೂರ್ವಪಶ್ಚಿಮ ಘಟ್ಟಗಳ ನಡುವೆ ಸ್ವಲ್ಪ ಹೆಚ್ಚು ಕಡಿಮೆ ತ್ರಿಕೋಣಾಕೃತಿಯಿಂದ ಕಂಗೊಳಿಸುತ್ತ, ದಕ್ಷಿಣೋತ್ತರ ೨೩೦ ಮೈಲು, ಪೂರ್ವಪಶ್ಚಿಮ ೨೯೦ ಮೈಲು, ಒಟ್ಟು ೨೯,೩೦೫ ಚದರ ಮೈಲುಗಳುಳ್ಳುದಾಗಿ ಇರುವುದು. ಈ ಸಂಸ್ಥಾನದ ಉತ್ತರದಲ್ಲಿ ಬಳ್ಳಾರಿ ಅನಂತಪುರ ಧಾರವಾಡ ಜಿಲ್ಲೆಗಳೂ, ಪೂರ್ವದಲ್ಲಿ ಕಡಪ ಉತ್ತರ ಅರ್ಕಾಟ್ ಸೇಲಂ ಜಿಲ್ಲೆಗಳೂ, ದಕ್ಷಿಣದಲ್ಲಿ ಕೋಯಮುತ್ತೂರು ನೀಲಗಿರಿ ಮಲೆಬಾರ್ ಜಿಲ್ಲೆಗಳೂ, ಪಶ್ಚಿಮದಲ್ಲಿ ದಕ್ಷಿಣ ಕನ್ನಡ ಉತ್ತರ ಕನ್ನಡ ಜಿಲ್ಲೆಗಳೂ ಇರುವುವು. ಈ ಜನಪದದಲ್ಲಿ ಈಗ ಸುಮಾರು ಅರವತ್ತು ಲಕ್ಷ ಪ್ರಜೆಗಳು ವಾಸಿಸುವರು. ಇಲ್ಲಿಯ ವಾಯುಗುಣವು ಸರ್ವೋತ್ಕೃಷ್ಟವಾದುದು. ಇಲ್ಲಿ ಕಪಿಲಾ, ಕಾವೇರಿ, ವೇದಾವತಿ, ಹೇಮಾವತಿ, ತುಂಗಭದ್ರೆ ಮೊದಲಾದ ಅನೇಕ ರಮಣೀಯವಾದ ನದಿಗಳೂ, ಎತ್ತರವಾದ ಗಿರಿದುರ್ಗಗಳೂ, ವಿವಿಧೌಷಧಿ ವನಸ್ಪತಿ ಸಸ್ಯಾದಿಗಳೂ, ಸ್ವರ್ಣಖನಿ ರತ್ನಖನಿಗಳೂ, ಪ್ರಜಾವೃದ್ಧಿ ಪಶುವೃದ್ಧಿ ಸಂಪತ್ಸಮೃದ್ಧಿ ಮೊದಲಾದುವುಗಳೆಲ್ಲ ಹರ್ಷೋತ್ಕರ್ಷವನ್ನುಂಟುಮಾಡುವುವು. ಇದೇ ಈಗ ಸುಖಸಂಪತ್ತಿಗೆ ಜನ್ಮಭೂಮಿಯೆನಿಸಿರುವುದು. ಇದನ್ನು ಧರ್ಮಪರಾಯಣರೂ ನೀತಿಧುರಂಧರರೂ ಆದ ಅನೇಕ ರಾಜರು ಆಳಿದರು. ಅವರ ಪವಿತ್ರಚರಿತ್ರೆಯು ಇಲ್ಲಿ ಸಂಕ್ಷೇಪವಾಗಿ ತಿಳಿಸಲ್ಪಡುವುದು.

ಈ ಮೈಸೂರು ದೇಶವು ಬಹುಕಾಲದಿಂದ ಅನೇಕ ಮಹರ್ಷಿಗಳೂ ಮಹಾತ್ಮರೂ ವಾಸಮಾಡಿದ ಅಗಣ್ಯಪುಣ್ಯಕ್ಷೇತ್ರಗಳಿಂದ ಭರಿತವಾಗಿರುವುದೆಂದು ಪ್ರಸಿದ್ಧವಾಗಿರುವುದು. ಆರ್ಯರ ಪ್ರವೇಶಕ್ಕಿಂತ ಮುಂಚೆ ದಕ್ಷಿಣದೇಶವೆಲ್ಲ ಅರಣ್ಯಮಯವಾಗಿದ್ದಿತು. ಆಗ ಇದಕ್ಕೆ ದಂಡಕಾರಣ್ಯವೆಂದು ಹೆಸರು. ಆರ್ಯಮಹರ್ಷಿಗಳು ತಪೋನಿಯಮಾ

ಚರಣೆಗೋಸ್ಕರ ದಕ್ಷಿಣಕ್ಕೆ ಹೊರಟು, ಅಲ್ಲಲ್ಲಿ ಆಶ್ರಮಗಳನ್ನು ಕಲ್ಪಿಸಿಕೊಂಡ ಬಳಿಕ, ಅವರ ಸಂರಕ್ಷಣಾರ್ಥವಾಗಿ ಆರ್ಯಕ್ಷತ್ರಿಯರು ಪ್ರವರ್ತಿಸಿದರು. ಆದಿಯಲ್ಲಿ ಅಗಸ್ತ್ಯ ಮಹರ್ಷಿಗಳು ವಿಂಧ್ಯಪರ್ವತವನ್ನು ದಾಟಿಬಂದು, ಮೈಸೂರು ದೇಶಕ್ಕೆ ಸೇರಿದ ನೆಲಮಂಗಲದ ಬಳಿ ಅರ್ಕಾವತೀ ನದೀತೀರದಲ್ಲಿ ಈಗ ಕಮ್ಮಸಂದ್ರವೆಂದು ಕರೆಯಲ್ಪಡುವ ಸ್ತಂಭೋದಧಿಯ ಬಳಿಯಲ್ಲಿ ಆಶ್ರಮವನ್ನು ಮಾಡಿಕೊಂಡಿದ್ದು, ಇಲ್ವಲ ವಾತಾಪಿಗಳೆಂಬ ಅಸುರರನ್ನು ನಿರ್ಮೂಲಮಾಡಿ ಲೋಕೋದ್ಧಾರ ಮಾಡಿದರು. ಗೌತಮ ಮುನಿಗಳು ಶ್ರೀರಂಗಪಟ್ಟಣದ ಕಾವೇರೀ ತೀರದಲ್ಲಿ ನೆಲಸಿ ತಪಸ್ಸನ್ನು ಆಚರಿಸಿದರು. ಕಣ್ವಋಷಿಗಳು ಚನ್ನಪಟ್ಟಣದ ಬಳಿ ಇರುವ ಮಳೂರಿನಲ್ಲಿ ಮಹಾ ತಪಸ್ಸಿನಲ್ಲಿ ನಿಂತರು. ಋಷ್ಯಶೃಂಗಋಷಿಯ ತಂದೆಯಾದ ವಿಭಾಂಡಕ ಮಹರ್ಷಿಗಳು ಶೃಂಗೇರಿಯಲ್ಲಿ ತುಂಗಾತೀರದಲ್ಲಿ ವಾಸವಾಗಿದ್ದರೆಂಬ ವಿಷಯವು ವಿಖ್ಯಾತವಾಗಿರುವುದು. ಮಾರ್ಕಂಡೇಯ ಋಷಿಗಳು ಬಾಂಡ್ಯದ ಬಳಿ ಭದ್ರಾತೀರದಲ್ಲಿ ತಪಸ್ಸನ್ನು ಆಚರಿಸಿದರು. ಕಾರ್ತವೀರ್ಯನಿಗೆ ವರಗಳನ್ನಿತ್ತ ದತ್ತಾತ್ರೇಯ ಮುನಿಗಳು ಬಾಬಾಬುಡನ್ ಗಿರಿಯಲ್ಲಿ ತಪಸ್ಸನ್ನಾಚರಿಸಿ ತಮ್ಮ ಪೀಠವನ್ನು ಸ್ಥಾಪಿಸಿದರು. ಇದೇ ರೀತಿಯಲ್ಲಿ ಇನ್ನೂ ಅನೇಕ ಮಹರ್ಷಿಗಳು ಈ ಸಂಸ್ಥಾನದ ನಾನಾ ಪ್ರದೇಶಗಳಲ್ಲಿ ವಾಸಮಾಡಿ, ಅವುಗಳನ್ನು ತಮ್ಮ ಮಹಿಮೆಗಳಿಂದ ಪವಿತ್ರಮಾಡಿದರು.

ಇದಲ್ಲದೆ, ಹರಿಹರದಲ್ಲಿ ತುಂಗಾತೀರದಲ್ಲಿ ಗುಹಾಸುರನೂ, ಚಿತ್ರದುರ್ಗದಲ್ಲಿ ಹಿಡಿಂಬಾಸುರನೂ, ರಹಿಮಾನ್‌ಘರ್ ಬಳಿಯಲ್ಲಿ ಬಕಾಸುರನೂ, ಚಾಮುಂಡಿ ಬೆಟ್ಟದಲ್ಲಿ ಮಹಿಷಾಸುರನೂ ವಾಸಮಾಡಿಕೊಂಡಿದ್ದರೆಂದು ಆಯಾ ಸ್ಥಲಪುರಾಣಗಳಿಂದ ತಿಳಿಯಬರುವುದು. ಪೂರ್ವದಲ್ಲಿ ಸುರಭೀಪುರವೆಂದು ಕರೆಯಲ್ಪಡುತ್ತಿದ್ದ ಸೊರಬದಲ್ಲಿರುವ ರೇಣುಕಾಲಯವೂ, ಹಿಂದೆ ಭಾರ್ಗವಪುರಿಯೆಂದು ಕರೆಯಲ್ಪಡುತ್ತಿದ್ದ ಹಿರೇಮಗಳೂರೆಂಬ ಗ್ರಾಮವೂ ಪರಶುರಾಮದೇವನ ಮಹಾಮಹಿಮೆಗೆ ಸ್ಮಾರಕಚಿಹ್ನೆಗಳಾಗಿರುವುವು. ಶಿವಮೊಗ್ಗಾ ಡಿಸ್ಟ್ರಿಕ್ಟ್ ಕವಲೆದುರ್ಗದ ಸುತ್ತಲಿರುವ ಕಾಡನ್ನೇ ಪಾಂಡವರು ವಾಸಮಾಡಿದ ಕಾಮ್ಯಕವನವೆಂದು ಹೇಳುವರು. ಆ ಅಭೇದ್ಯವಾದ ದುರ್ಗವನ್ನೂ ತೀರ್ಥಹಳ್ಳಿಯ ಮೇಲ್ಗಡೆ ತುಂಗಾನದಿಗೆ ಕಟ್ಟಿರುವ ಅದ್ಭುತವಾದ ಭೀಮನ ಕಟ್ಟೆಯನ್ನೂ ಪಾಂಡವರೇ ಕಟ್ಟಿದರೆಂಬ ಪ್ರತೀತಿ ಈಗಲೂ ಉಂಟು. ಇದಲ್ಲದೆ, ಪಾಂಡವರು ಅಶ್ವಮೇಧಯಾಗ ಮಾಡಿದ ಕಾಲದಲ್ಲಿ, ಬಭ್ರುವಾಹನ ಚಂದ್ರಹಾಸಾದಿ ವೀರರು ಈ ಸಂಸ್ಥಾನದ ಆಯಾ ಪ್ರಾಂತಗಳಲ್ಲಿ ಆಳುತ್ತಿದ್ದರೆಂದು ತಿಳಿಯಬರುವುದು. ಪಾಂಡವರ ಅನಂತರದಲ್ಲಿ ಅವರ ವಂಶೀಯನಾದ ಜನಮೇಜಯರಾಯನು, ಕಡೂರು ಡಿಸ್ಟ್ರಿಕ್ಟಿಗೆ ಸೇರಿದ ಹಿರೇಮಗಳೂರಲ್ಲಿ ಸರ್ಪಯಾಗವನ್ನು ಮಾಡಿದನೆಂಬ ವಿಷಯವೂ, ಆ ಯಾಗಕಾಲದಲ್ಲಿ ಹರಿಹರೇಶ್ವರ ಸನ್ನಿಧಿಯಲ್ಲಿ ಬ್ರಾಹ್ಮಣರಿಗೆ ಅಗ್ರಹಾರಗಳನ್ನು ಧಾರಾಪೂರ್ವಕವಾಗಿ ದಾನಮಾಡಿದುದನ್ನು ತಿಳಿಯಪಡಿಸುವ ತಾಮ್ರ ಶಾಸನಗಳಿಂದ ವ್ಯಕ್ತವಾಗುತ್ತದೆ.

ಇವಲ್ಲದೆ, ಉಜ್ಜಯಿನಿಯಲ್ಲಿ ಶ್ರುತಕೇವಲಿಯಾದ ಭದ್ರಬಾಹುವು ದ್ವಾದಶವರ್ಷ
ಕ್ಷಾಮ ಬರುವುದೆಂದು ದಿವ್ಯದೃಷ್ಟಿಯಿಂದ ತಿಳಿದು, ಅದನ್ನು ಸಕಲರಿಗೂ ತಿಳಿಯಪಡಿಸಿ,
ಕ್ಷದಿಂದ ತನ್ನ ಶಿಷ್ಯರೊಡನೆ ದಕ್ಷಿಣಕ್ಕೆ ಗಮಿಸಿ ಶ್ರವಣಬೆಳುಗೊಳದ ಬಳಿಗೆ ಬರುವಷ್ಟ
ರೊಳಗೆ ತನಗೆ ಅವಸಾನಕಾಲ ಒದಗಲು, ಅನೇಕ ಶಿಷ್ಯರನ್ನು ಪಾಂಡ್ಯ ಚೋಳ ರಾಜ್ಯ
ಗಳಿಗೆ ಕಳುಹಿಸಿ, ತಾನು ಶ್ರವಣಬೆಳುಗೊಳದ ಚಂದ್ರಗಿರಿಯಲ್ಲಿ ನಿಂತು ಅಲ್ಲಿಯ ಗುಹೆ
ಯಲ್ಲಿಯೇ ಪರಮಪದವನ್ನೈದಿದನೆಂತಲೂ, ಹಾಗೆಯೇ ಜಿನದತ್ತರಾಯನೆಂಬಾತನು
ಉತ್ತರದೇಶದಿಂದ ದಕ್ಷಿಣಕ್ಕೆ ಬಂದು, ಹೊಂಬುಜವೆಂಬಲ್ಲಿ ಬಂದು ಜಿನರಾಜ್ಯವನ್ನು
ಸ್ಥಾಪಿಸಿದನೆಂತಲೂ ಜಿನಶಾಸನಗಳಿಂದಲೂ ಜಿನಪುರಾಣಗಳಿಂದಲೂ ತಿಳಿದುಬರುವುದು
ಷ್ಟು ಮಾತ್ರವಲ್ಲದೆ, ಈಚೆಗೆ ಸಿಕ್ಕಿದ ಅಶೋಕನ ಒಂದೆರಡು ಶಾಸನಗಳಿಂದ ಕೆಲವು
ಲ ಬೌದ್ಧರಾಜರೂ ಇಲ್ಲಿ ಆಳುತ್ತಿದ್ದರೆಂದು ತಿಳಿಯಬರುವುದು.

ಈ ವಿವಾದದ ಪುರಾಣೇತಿಹಾಸಗಳು ಹಾಗಿರಲಿ. ಈಚೆಗೆ ಕ್ರಿಸ್ತಶಕ ಒಂದ
ಯ ಶತಮಾನದಲ್ಲಿ ಈ ಸೀಮೆಯು ಪಶ್ಚಿಮ ಭಾಗದಲ್ಲಿ ಕದಂಬರೆಂಬ ದೊರೆಗಳೂ,
ಕ್ಷಿಣದಲ್ಲಿ ಗಂಗರಾಜರೂ, ಪೂರ್ವದಲ್ಲಿ ಪಲ್ಲವ ಅರಸರೂ ಆಳುತ್ತಿದ್ದರೆಂದು ಶಿಲಾ
ಸನಗಳಿಂದ ಗೊತ್ತಾಗುವುದು. ಇವರ ಇವರಲ್ಲಿ ಕದಂಬರೇ ಮೊದಲನೆಯವರು.
ರ ಮೂಲಪುರುಷನ ಹೆಸರು ತ್ರಿಣೇತ್ರಕದಂಬ. ಇವರ ರಾಜಧಾನಿ ವೈಜಯಂ
ನವಾಸಿ) ಪಟ್ಟಣವು. ಇವರ ರಾಜ್ಯಕ್ಕೆ ಈಗಿನ ಶಿವಮೊಗ್ಗ, ಕಡೂರು ಡಿಸ್ಟ್ರಿಕ್ಟು
ು ಸೇರಿದ್ದುವು. ಈ ಕುಲದ ಅರಸರಲ್ಲಿ ಮಯೂರವರ್ಮನೆಂಬವನು ಮಹಾ
ರಾಕ್ರಮಶಾಲಿಯೂ ಧಾರ್ಮಿಕನೂ ಎಂದು ಪ್ರಸಿದ್ಧಿಯನ್ನು ಪಡೆದನು. ಇವರು
ನಮತವನ್ನಾಶ್ರಯಿಸಿದ್ದರು. ಇವರಲ್ಲಿ ಅನೇಕ ರಾಜರು ಸುಮಾರು ೨೫೦ ವರುಷ
ು ಪ್ರಜಾಪಾಲನೆ ಮಾಡಿದರು. ಆರನೆಯ ಶತಮಾನದಲ್ಲಿ ಚಾಲುಕ್ಯ ಅರಸರು
ಬರನ್ನು ಗೆಲ್ಲಲು, ಇವರೆಲ್ಲರೂ ಮಹಾಮಂಡಲಿಕರೆಂಬ ಉಪನಾಮಧೇಯವನ್ನು
ಮು ಚಾಲುಕ್ಯರ ಆಶ್ರಿತವರ್ಗದಲ್ಲಿ ಸೇರಿಕೊಂಡರು.

ಬಳಿಕ ಪಲ್ಲವವಂಶೋದ್ಭವರಾದ ಪ್ರಭುಗಳು ಕೆಲವು ಕಾಲ ರಾಜ್ಯಭಾರ ಮಾಡಿ
ಇವರ ರಾಜಧಾನಿ ಕಾಂಚೀಪುರ. ಇವರ ಸೀಮೆಗೆ ನೊಳಂಬವಾಡಿಯೆಂ
ಯೆಂದು ಹೆಸರು. ಈಗಿನ ಚಿತ್ರದುರ್ಗ, ಕೋಲಾರ, ತುಮಕೂರು, ಬೆಂಗಳೂರು
ಕ್ಟುಗಳು ಇವರ ಮಂಡಲಾಧಿಪತ್ಯಕ್ಕೆ ಸೇರಿದ್ದುವು. ಕ್ರಿ. ಶ. ಹತ್ತನೆಯ ಶತ
ದ ಉತ್ತರಾರ್ಧದಲ್ಲಿ ಆಳುತ್ತಿದ್ದ ನಾರಸಿಂಹನೆಂಬ ಗಂಗರಾಜನು, ಈ ನೊಳಂಬ
ನ್ನು ಜಯಿಸಿ "ನೊಳಂಬ ಕುಲಾಂತಕ" ಎಂಬ ಬಿರುದನ್ನು ಪಡೆದನು. ಇ
ದೀಚೆಗೆ ನೊಳಂಬರ ಪ್ರಾಬಲ್ಯವು ತಗ್ಗುತ್ತ ಬಂದು ಕಡೆಗೆ ಇವರ ರಾಜ್ಯವು
ಚಾಲುಕ್ಯರಾಜ್ಯದಲ್ಲಿ ಸೇರಿಹೋಯಿತು.

. ಶ. ಎರಡನೆಯ ಶತಮಾನದಲ್ಲಿ ಕೊಂಗಣಿವರ್ಮಧರ್ಮನೆಂಬ ಬಿರುದನ್ನು
ಮಾಧವನೆಂಬವನು ಗಂಗರಾಜ್ಯವನ್ನು ಸ್ಥಾಪನ ಮಾಡಿದನು. ಗಂಗರು

ಮಹಾಪರಾಕ್ರಮಿಗಳೂ, ಅಸಹಾಯಶೂರರೂ, ವಿದ್ವತ್ಪಕ್ಷಪಾತಿಗಳೂ, ರಾಜತಂ… ನಿಪುಣರೂ ಆದರೂ ಇವರು ಒಂದೆಡೆಯಲ್ಲಿ ನೆಲೆಯಾಗಿ ನಿಂತು ರಾಜ್ಯಭಾರ ಮಾಡಿ… ದಂತೆ ತೋರುವುದಿಲ್ಲ ಇವರಿಗೆ ಸ್ಕಾಂದಪುರವೂ ತಲಕಾಡೂ ಮಡಕೇರಿಯ ಕ… ಮುಂತಾದವು ರಾಜಧಾನಿಯಾಗಿದ್ದುವು ಆಗ ತಲಕಾಡನ್ನು ತಾಲವನಪುರವೆಂಬ… ದಾಗಿ ಕರೆಯುತ್ತಿದ್ದರು ಹಾಸನ ಮತ್ತು ಮೈಸೂರು ಡಿಸ್ಟ್ರಿಕ್ಟುಗಳು ಗಂ… ರಾಜ್ಯಕ್ಕೆ ಸೇರಿದ್ದುವು ಅವಿನೀತನೆಂಬುವನು ಗಂಗರಲ್ಲಿ ಪ್ರಸಿದ್ಧಪುರುಷನು ಇವ… ಕಿರಾತಾರ್ಜುನೀಯವೆಂಬ ಸಂಸ್ಕೃತ ಗ್ರಂಥಕ್ಕೆ ಟೀಕೆಯನ್ನು ರಚಿಸಿದನು … ಗಂಗರಾಜರು ವಿದ್ವಾಂಸರ ಆಲಯವೆಂದು ಹೆಸರಾಗಿದ್ದಿತು ಅವಿನೀತನು ಕವಿಗ… ಆಶ್ರಯಸ್ಥಾನನೂ ಕೀರ್ತಿಕಾಮಿಯೂ ಮಹಾಶೂರನೂ ನ್ಯಾಯಪ್ರಿಯನೂ ಆ… ನನು ಆಗಿದ್ದನೆಂದು ಕೆಲವು ಶಿಲಾಶಾಸನಗಳಿಂದ ತಿಳಿಯಬರುವುದು ಇ… … ಬರಿಂದ ೫೦೦ನೆಯ ಸಂವತ್ಸರದವರೆಗೂ ರಾಜ್ಯಪರಿಪಾಲನ … ವಂಶದಲ್ಲಿ ವತರಿಸಿದ ಅರಸುಗಳು ಕ್ರಮವಾಗಿ ಪಾಂಡ್ಯ ಚೋಳ ಕೇರ… ಮುಂತಾದ ರಾಜ್ಯಗಳನ್ನು ಜಯಿಸಿ, ಆ ರಾಜರಿಂದೆಲ್ಲ ಕಪ್ಪವನ್ನು ತೆಗೆದುಕೊ… …ದ್ದರು ಇವರ ಸ್ಮಾರಕಚಿಹ್ನಗಳು ಈಗಲೂ ದಕ್ಷಿಣದೇಶದಲ್ಲಿ ಪ್ರಕಾಶಿಸ… …ವು … ಕಾಲದಲ್ಲಿ ಆಳುತ್ತಿದ್ದ ರಾಯಮಲ್ಲನ ಮಂತ್ರಿಯಾದ … ರಾಯನು ಪ್ರತಿಷ್ಠಿಸಿದ ಗೋಮಟೇಶ್ವರ ವಿಗ್ರಹವು ಶ್ರವಣಬೆಳುಗೊಳದಲ್ಲಿ … ವರ್ತಮಾನವಾಗಿದೆ ಅನಂತರ ೧೦೦೪ನೆಯ ಇಸವಿಯಲ್ಲಿ ಚೋಳದೇಶಾಧಿಪ… …ರಾಜೇಂದ್ರಚೋಳನು ಆಗ ಆಳುತ್ತಿದ್ದ ಗಂಗರಾಜನನ್ನು ಜಯಿಸಿ, ತಲಕಾ… ಸ್ವಾಧೀನಮಾಡಿಕೊಂಡನು ಬಳಿಕ ಗಂಗರಾಜರಲ್ಲಿ ಕೆಲವರು ಶಿವಸಮು… …ತ್ತಿದ್ದರು ಕೊನೆಯವನಾದ ನಂದರಾಜನು ತನ್ನ ಪತ್ನಿಯಲ್ಲಿ ಹೋ… ಸಂಪರ್ಕ ಉಂಟಾದುದಾಗಿ ಗಗನಚುಕ್ಕಿ ಮಡುವಿನಲ್ಲಿ ಬಿದ್ದು ಮ… ಅಲ್ಲಿಂದೀಚೆಗೆ ಗಂಗರಸರ ಸಂತತಿಯು ಕ್ಷೀಣವಾಯಿತು ಇವರ ರಾಜ್ಯವು …ನ ಜಗದೇವರಾಯನಿಗೂ ಶ್ರೀರಂಗಪಟ್ಟಣದ ಶ್ರೀರಂಗರಾಯನಿಗೂ ಸೇರಿತು

ಚಾಲುಕ್ಯರು ರಾಜಪುತ್ರಕುಲಕ್ಕೆ ಸೇರಿದವರು ಕ್ರಿ ಶ ಐದನೆಯ ಶ… …ಲ್ಲಿ ಜಯಸಿಂಹನೆಂಬ ವೀರನೊಬ್ಬನು ಮಹಾರಾಷ್ಟ್ರವನ್ನು ಗೆದ್ದು ಚಾಲ… ವನ್ನು ಸ್ಥಾಪನ ಮಾಡಿದನು ಇವನ ರಾಜಧಾನಿ ಬಾದಾಮಿ ಪಟ್ಟಣ … …ರಗಳ ತರುವಾಯ ಚಾಲುಕ್ಯವಂಶವು ಒಡೆದು ಎರಡು ಶಾಖೆ… …ಯುವವರು ವಂಗಿಯಲ್ಲಿಯೂ ಮತ್ತೊಂದು ಶಾಖೆಯವರು … ಆಳುತ್ತಿದ್ದರು … ನೆಯ ಶತಮಾನದಲ್ಲಿ ಆಳುತ್ತಿದ್ದ ಎರಡನೆಯ … …ವನೇ ಮಹಾಪ್ರಸಿದ್ಧನಾದವನು ಇವನಿಗೆ ಸತ್ಯಾಶ್ರಯನೆಂ… …ದೇಶದ ಸಾರ್ವಭೌಮರೆಲ್ಲರೂ ಇವನ ಪಾದಾಕ್ರಾ… …ವನು … ಮಹಾ ಯಾಗವನ್ನು ಮಾಡಿ ಪರಮೇಶ್ವರ … …ನೆ ಪಡೆದಿದ್ದನು ಇವನ ಕಾಲದಲ್ಲೇ ಚೀನಾದೇಶದ ಹ್ಯೂವನ್‌ತ್ಸಾಂಗನೆಂಬ … ಯಾತ್ರಾಪರನು ಭರತಖಂಡದ ಯಾತ್ರೆಗಾಗಿ ಬಂದಿದ್ದನು ಪುಲಿಕೇಶಿಯ ತರುವಾಯ …ಚಾಲುಕ್ಯರಾಜ್ಯದ ಸಂಪತ್ತು ತಗ್ಗಿ, ಆ ರಾಜರೆಲ್ಲರೂ ರಾಷ್ಟ್ರಕೂಟರ ಸಾಮಂತ ರಾಗಿರಬೇಕಾಯಿತು ಆದರೆ ೯೭೩ನೆಯ ಇಸವಿಯಲ್ಲಿ ಚಾಲುಕ್ಯರಾಜನಾದ … ನೆಯ ತೈಲಪನು ತನ್ನ ಪರಾಕ್ರಮಾತಿಶಯದಿಂದ ಪುನಃ ರಾಜ್ಯವನ್ನು … ಸಂಪಾದಿಸಿದನು ಆದರೆ ಚಾಲುಕ್ಯರಾಜ್ಯದ ಉತ್ಕೃಷ್ಟ ಸ್ಥಿತಿಯು ಬಹಳಕಾಲ ನಿಲ್ಲ… …ಲಿಲ್ಲ ಮೂರನೆಯ ತೈಲಪ ತ್ರೈಲೋಕ್ಯಮಲ್ಲನ ಕಾಲದಲ್ಲಿ ಮಂತ್ರಿಯಾಗಿದ್ದ ಕಾಲ ಚೂರ್ಯವಂಶಸ್ಥನಾದ ಬಿಜ್ಜಳನು ರಾಜ್ಯಾಪಹಾರವನ್ನು ಮಾಡಿ ತಾನೇ ದೊರೆಯಾದನು ಅನಂತರ ಚಾಲುಕ್ಯರ … ರಾಜ್ಯ … ಎರಡು … ಉತ್ತರಭಾಗವನ್ನು ದೇವಗಿರಿಯ ಯಾದವರೂ ದಕ್ಷಿಣಭಾಗವನ್ನು ದ್ವಾರಸಮುದ್ರದ … …ರೂ ಸ್ವಾಧೀನಮಾಡಿಕೊಂಡರು ಬಳಿಕ ಪ್ರಖ್ಯಾತಿಗೊಂಡಿದ್ದ ಚಾಲುಕ್ಯ …ವು ಇಲ್ಲಿಗೆ ಕೊನೆಗಾಣಿತು ಈ … ಕಾಲದಲ್ಲಿ ಕಾಲಚೂರ್ಯರು …ರ ಕೈಕೆಳಗೆ ಮಾಂಡಲಿಕರಾಗಿದ್ದರು



ಸೋಮನಾಥಪುರದ ದೇವಾಲಯ

ಹೊಯಿಸಳ ಬಲ್ಲಾಳರು ರಾಜಪುತ್ರಕುಲಕ್ಕೆ ಸೇರಿದವರು ಇವರು ಪೂರ್ವದಲ್ಲಿ ಚಾಲುಕ್ಯರ ಕೈಕೆಳಗೆ ಮಾಂಡಲಿಕರಾಗಿದ್ದರೆಂದು ಶಿಲಾಶಾಸನಗಳು ಸೂಚಿಸುತ್ತವೆ ಇವರ ಮೂಲಪುರುಷನಿಗೆ ಸಳನೆಂಬ ನಾಮವು …ದ್ದಿತು ಇವರ ರಾಜಧಾನಿ ದ್ವಾರಸಮುದ್ರ ಈಗ ಇದನ್ನು ಹಳೇಬೀಡೆಂದು ಕರೆಯುತ್ತಾರೆ … ಕಾಲದಲ್ಲಿ ಕಟ್ಟಿದ ಮನೋಹರವಾದ ದೇವಸ್ಥಾನಗಳು ಕವಿಗಳು ರಚಿಸಿದ …ಗಳು ಈಗಲೂ ಸಾಕ್ಷಿಭೂತಗಳಾಗಿವೆ ಇವರಿಗೂ ದೇವಗಿರಿಯ ಯಾದವ ರನ್ನವರ ಬಾಂಧವ್ಯವಿದ್ದಂತೆ ತೋರಿಬರುತ್ತದೆ ಹನ್ನೆರಡನೆಯ ಶತಮಾನದಲ್ಲಿ

ಆಳುತ್ತಿದ್ದ ವಿಖ್ಯಾತನಾದ ಬಿಟ್ಟಿದೇವನು ರಾಮಾನುಜಾಚಾರ್ಯರ ಉಪದೇಶದಿಂದ ಜೈನಮತವನ್ನು ತ್ಯಜಿಸಿ, ವಿಶಿಷ್ಟಾದ್ವೈತಮತವನ್ನು ಕೈಕೊಂಡು ವಿಷ್ಣುವರ್ಧನನೆಂಬ ಹೆಸರಿಟ್ಟುಕೊಂಡನು. ಆದರೂ ಇವನ ಹೆಂಡತಿಯಾದ ಶಾಂತಲದೇವಿಯು ಜೈನಮತವನ್ನೇ ಆಶ್ರಯಿಸಿದ್ದಳು. ೧೧೪೧ರಲ್ಲಿ ಪಟ್ಟಕ್ಕೆ ಬಂದ ವಿಷ್ಣುವರ್ಧನನ ಮಗನು ವಿಶೇಷ ಯಶಸ್ವಿಯಾಗಲಿಲ್ಲ, ಆದರೆ ಇವನ ಮೊಮ್ಮಗನಾದ ವೀರಬಲ್ಲಾಳನು ತನ್ನ ಪಿತಾಮಹನಂತೆ ಅತಿಪರಾಕ್ರಮಿಯಾಗಿ ಚಾಲುಕ್ಯರಾಜ್ಯವನ್ನು ತನ್ನ ಸೀಮೆಗೆ ಸೇರಿಸಿಕೊಂಡನು. ದೆಹಲಿಯ ದೊರೆಯಾದ ಅಲ್ಲಾವುದ್ದೀನನ ಸೇನಾಪತಿ ಮಾಲ್ಲಿಕ್‌ಕಾಫರನೆಂಬವನು ೧೩೧೦ ರಲ್ಲಿ ದಂಡೆತ್ತಿ ಬಂದು ದ್ವಾರಸಮುದ್ರಕ್ಕೆ ಮುತ್ತಿಗೆ ಹಾಕಿದನು. ಮುಸಲ್ಮಾನರ " ದೀನ್ ದೀನ್ " ಎಂಬ ರಣಧ್ವನಿಗೆ ದಕ್ಷಿಣದಲ್ಲಿ ಇದೇ ಮೊದಲು. ಮಾಲ್ಲಿಕ್‌ಕಾಫರನು ಹೊರಟುಹೋದ ಬಳಿಕ, ಬಲ್ಲಾಳ ದೊರೆಯು ದ್ವಾರಸಮುದ್ರವನ್ನು ಬಿಟ್ಟು ಬೇಲೂರನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ೧೩೨೭ನೆಯ ಇಸವಿಯಲ್ಲಿ ದೆಹಲಿಯ ದೊರೆಯಾದ ಮೂರನೆಯ ಮಹಮೂದನ ಮತ್ತೊಂದು ಸೈನ್ಯವು ದ್ವಾರಸಮುದ್ರವನ್ನು ಸಂಪೂರ್ಣವಾಗಿ ಹಾಳುಮಾಡಿತು. ಬಳಿಕ ಬಲ್ಲಾಳದೊರೆಯು ಬೇಲೂರನ್ನು ಬಿಟ್ಟು ತೊಣ್ಣೂರನ್ನು ಸೇರಿಕೊಂಡನು. ಇಲ್ಲಿಂದೀಚೆಗೆ ಬಲ್ಲಾಳರಾಜರ ರಾಜ್ಯವೈಭವವು ಜನರ ದೃಷ್ಟಿಗೆ ಅಗೋಚರವಾಯಿತು.

ಇದೇ ಸಮಯದಲ್ಲಿ ವಿದ್ಯಾರಣ್ಯನೆಂಬ ಬ್ರಾಹ್ಮಣವರೇಣ್ಯನು ವಿಶೇಷ ಸಾಹಸವನ್ನು ಮಾಡಿ ತುಂಗಭದ್ರಾ ತೀರದಲ್ಲಿರುವ ಪಂಪಾಸರೋವರದ ಸಮೀಪದಲ್ಲಿ ಚಂದ್ರವಂಶಜನಾದ ಬುಕ್ಕರಾಯನಿಗೋಸ್ಕರ ವಿದ್ಯಾನಗರವೆಂಬ ಪಟ್ಟಣವನ್ನು ನಿರ್ಮಿಸಿ, ಅಲ್ಲಿ ಆತನಿಗೆ ರಾಜ್ಯಪದವಿಯನ್ನುಂಟುಮಾಡಿದುದಲ್ಲದೆ, ಮಹಾಲಕ್ಷ್ಮಿಯ ಉಪಾಸನಾಶಕ್ತಿಯಿಂದ ದೇಶವನ್ನೆಲ್ಲ ಧನಕನಕಮಯವನ್ನಾಗಿ ಮಾಡಿ, ಹೊನ್ನಿನ ಮಳೆಯನ್ನು ಸುರಿಸಿದನೆಂಬ ಸಂಗತಿಯು ಜಗದ್ವಿಖ್ಯಾತವಾಗಿರುವುದು. ಈ ವಿದ್ಯಾನಗರಕ್ಕೆ ವಿಜಯನಗರವೆಂತಲೂ ಹೆಸರು. ಇದು ಸಂಸ್ಥಾಪನೆಯಾದ ಸ್ವಲ್ಪಕಾಲದಲ್ಲಿಯೇ ಈಗಿನ ಹೈದರಾಬಾದಿಗೆ ಸೇರಿದ ಕಲ್ಬುರ್ಗಿಯಲ್ಲಿ ಬಹಮನಿಯೆಂಬ ಮುಸಲ್ಮಾನರ ವಂಶವೊಂದು ನೆಲೆಗೊಂಡಿತು. ಇಷ್ಟು ಸಮೀಪವರ್ತಿಗಳಾಗಿ ನಿಂತ ಬಹಮನಿ ಮುಸಲ್ಮಾನ ವಂಶೀಯರಿಗೂ ವಿದ್ಯಾನಗರದಲ್ಲಿ ನೆಲೆಗೊಂಡ ಹಿಂದೂ ವಂಶಸ್ಥರಿಗೂ ಕಲಹಕಾರಣಗಳು ಅಡಿಗಡಿಗೂ ಉಂಟಾಗುತ್ತಲೇ ಬಂದುವು. ಹಲವು ಕಾಲ ಜಯಾಪಜಯಗಳು ಇರ್ವರಿಗೂ ಸಮಾನವಾಗಿಯೇ ಇದ್ದುವು. ಆದರೂ ದಿನೇದಿನೇ ವಿಜಯನಗರದವರ ಪ್ರಾಬಲ್ಯವು ವೃದ್ಧಿಯನ್ನೈದಿತು. ಸುಮಾರು ನೂರೈವತ್ತು ವರುಷಗಳ ಮೇಲೆ ಕಲ್ಬುರ್ಗಿ ಸಂಸ್ಥಾನವು ಒಡೆದುಹೋಯಿತು. ಆಗ ಬಿಜಾಪುರದಲ್ಲಿ ಆದಿಲ್‌ಷಾಹಿ, ಅಹಮದ್‌ನಗರದಲ್ಲಿ ನಿಜಾಂಷಾಹಿ, ಗೋಲಕೊಂಡೆಯಲ್ಲಿ ಕುತುಬ್‌ಷಾಹಿ ಮೊದಲಾದ ಮನೆತನದವರು ಸ್ವತಂತ್ರರಾದರು. ವಿಜಯನಗರ ಸಂಸ್ಥಾನದ ರಾಜರಲ್ಲಿ ಶೂದ್ರರಾದ ತುಳವರ ವಂಶವು ವಿಖ್ಯಾತಿಗೆ ಬಂದಿತು. ಕ್ರಮಕ್ರಮವಾಗಿ ಈ ಸಂಸ್ಥಾನಾ

ಯದುರಾಯ ಕೃಷ್ಣರಾಯರ ಪ್ರವೇಶ

ಪತ್ಯಕ್ಕೆ ಪಾಂಡ್ಯ ಚೋಳ ಕೇರಳ ಮೊದಲಾದ ದಕ್ಷಿಣದೇಶಗಳೇ ಅಲ್ಲದೆ, ಪೂರ್ವದಿಕ್ಕಿನಲ್ಲಿ ಕೊಂಡವೀಡು, ಗಜಪತಿ ಮೊದಲಾದ ಅರಸರ ಸೀಮೆಗಳು ಒಳಗಾದುವು. ಇದರ ಅರಸುಗಳೊಳಗೆ ವಿಶೇಷ ಪ್ರಸಿದ್ಧನಾದ ಕೃಷ್ಣದೇವರಾಯನು ಕ್ಷಾತ್ರವೀರ್ಯಧುರ್ಯನಾಗಿ ಅನೇಕ ರಾಜರನ್ನು ಜಯಿಸಿ ತನ್ನ ಆಧಿಪತ್ಯವನ್ನು ನಾನಾಮುಖವಾಗಿ ವಿಸ್ತರಿಸಿದನು. ಹೀಗೆ ಸುಮಾರು ಎರಡೂವರೆ ಶತಮಾನಗಳವರೆಗೂ ಅವಿಚ್ಛಿನ್ನವಾಗಿ ನಾನಾ ಭೋಗಪರಂಪರೆಯನ್ನನುಭವಿಸಿದ ವಿದ್ಯಾನಗರಕ್ಕೆ ಕಡೆಗೆ ಮತವೈಷಮ್ಯದಿಂದುಂಟಾದ ಕಲಹಗಳ ದೆಸೆಯಿಂದ ಮುಸಲ್ಮಾನರ ಬಾಧೆಯು ಸಂಪ್ರಾಪ್ತವಾಯಿತು. ಬಿಜಾಪುರವೇ ಮೊದಲಾದ ದಖನ್ ದೇಶದ ಮುಸಲ್ಮಾನ್ ರಾಜರುಗಳೆಲ್ಲರೂ ಒಕ್ಕಟ್ಟಾಗಿ ಬಂದು, ಕ್ರಿ. ಶ. ೧೫೬೫ರಲ್ಲಿ ವಿಜಯನಗರದ ರಾಜರನ್ನು ತಾಳೀಕೋಟೆಯ ಯುದ್ಧದಲ್ಲಿ ಸೋಲಿಸಿ ಆ ಪಟ್ಟಣವನ್ನು ಸೂರೆಗೊಂಡರು. ಅಂದಿನಿಂದ ವಿಜಯನಗರ ಸಂಸ್ಥಾನವು ಕ್ಷೀಣಸ್ಥಿತಿಗೆ ಬಂದಿತು. ಆಗ ಅನೇಕ ಸಾಮಂತರಾಜರು ಪಾಳೆಯಗಾರರೆಂಬ ಹೆಸರಿನಿಂದ ಸ್ವತಂತ್ರರಾದರು. ಇಷ್ಟರಲ್ಲಿ ಹಿಂದೂ ರಾಜವರೇಣ್ಯರ ಪ್ರಶಂಸೆಯು ಹೋಗದಂತೆ ದಕ್ಷಿಣದಲ್ಲಿ ಧರ್ಮನೀತಿ ಪ್ರಜಾಸಂರಕ್ಷಣಾರ್ಥವಾಗಿ ಶ್ರೀಮತ್ಪರಾತ್ಪರಶಕ್ತಿ ವರಪ್ರಸಾದ ಭಾಜನರೂ ಪುರಾತನ ಯದುವಂಶಜರೂ ಆದ ಯದುರಾಯ ಕೃಷ್ಣರಾಯರೆಂಬ ಅಣ್ಣತಮ್ಮಂದಿರು ದ್ವಾರಕಾನಗರ ಪ್ರಾಂತದಿಂದ ಬಂದು ಹದಿನಾಡೆಂಬ ಗ್ರಾಮದಲ್ಲಿ ನೆಲಸಿದರು. ಇವರೇ ಮೈಸೂರಿನ ರಾಜವಂಶಕ್ಕೆ ಮೂಲಪುರುಷರಾದರು.

ಈಗಿನ ಮೈಸೂರು ಪಟ್ಟಣಕ್ಕೆ ಆಗ್ನೇಯದಿಕ್ಕಿನಲ್ಲಿ ನಂಜನಗೂಡಿನ ಬಳಿಯಲ್ಲಿ ಹದಿನಾರು ಎಂಬ ಸಣ್ಣ ಗ್ರಾಮವೊಂದುಂಟು. ಇದಕ್ಕೆ ಪೂರ್ವದಲ್ಲಿ ಹದಿನಾಡೆಂಬ ನಾಮಧೇಯವು ರೂಢವಾಗಿದ್ದಿತು. ಈ ಗ್ರಾಮವನ್ನು ಹದಿನಾಲ್ಕನೆಯ ಶತಮಾನದ ಅಂತ್ಯಭಾಗದಲ್ಲಿ ಚಾಮರಾಜರೆಂಬ ಅರಸರು ಆಳುತ್ತಿದ್ದರು. ಇವರು ಮನೋವಿಕಲತೆಯಿಂದ ಕ್ರಿ. ಶ. ೧೩೯೯ರಲ್ಲಿ ದೇಶತ್ಯಾಗಮಾಡಿದ ಕಾರಣ ರಾಜಕುಟುಂಬವು ಅನಾಥವಾಗಿರಲು, ಆ ರಾಜ್ಯವನ್ನು ಅಪಹರಿಸಬೇಕೆಂದು ಕಾದಿದ್ದ ಕಾರುಗಳ್ಳಿಯ ಪಾಳೆಯಗಾರನಾದ ಮಾರನಾಯಕನೆಂಬವನು ಹದಿನಾರನ್ನು ಸ್ವಾಧೀನಮಾಡಿಕೊಂಡು, ಆ ಚಾಮರಾಜರ ಮಗಳಾದ ದೇವಾಜಮ್ಮಣ್ಣಿಯನ್ನು ತನಗೆ ಮದುವೆ ಮಾಡಿಕೊಡಬೇಕೆಂದು ರಾಜಪತ್ನಿಯನ್ನು ಬಲಾತ್ಕಾರ ಮಾಡಿದನು. ಮಾರನಾಯಕನು ಜಾತಿಯಲ್ಲಿ ತೊರೆಯನು. ಇಂತಹವನಿಗೆ ಮಗಳನ್ನು ಕೊಡುವುದಕ್ಕೆ ರಾಜಪತ್ನಿಗೆ ಮನಸ್ಸಿರಲಿಲ್ಲ. ಆದರೂ ಆತನ ಭಯಕ್ಕಾಗಿ ಮದುವೆ ಮಾಡಿಕೊಡುವೆನೆಂದು ಒಪ್ಪಿಕೊಂಡಿದ್ದರು. ಈ ವೇಳೆಗೆ ಸರಿಯಾಗಿ ಮೇಲೆ ಹೇಳಿದ ಯದುರಾಯ ಕೃಷ್ಣರಾಯರು ದೈವೇಚ್ಛೆಯಿಂದ ಪ್ರೇರಿತರಾಗಿ ದಕ್ಷಿಣಕ್ಕೆ ಬಂದು, ಹದಿನಾರನ್ನು ಸೇರಿ ಅಲ್ಲಿಯ ವೃತ್ತಾಂತವನ್ನೆಲ್ಲ ರಹಸ್ಯವಾಗಿ ತಿಳಿದು, ಚಾಮರಾಜರ ಪತ್ನಿಯನ್ನು ಕಂಡು, ಅವರಿಗೆ ತಮ್ಮ ಪೂರ್ವೋತ್ತರಗಳನ್ನೆಲ್ಲ ವಿಜ್ಞಾಪಿಸಿಕೊಂಡರು. ಆಗ ಅವರು ತಮ್ಮ

ಭಾಗ್ಯೋದಯವೇ ಅವರನ್ನಿಲ್ಲಿಗೆ ಕರೆತಂದುಬಿಟ್ಟಿತೆಂದು ತಿಳಿದು, ತಮಗೆ ಒದಗಿರು ವಿಪತ್ತನ್ನು ತಪ್ಪಿಸಿದರೆ, ತಮ್ಮ ಮಗಳನ್ನು ವಿವಾಹಮಾಡಿಕೊಡುವೆನೆಂದು ವಾಗ್ದಾ ಮಾಡಿದರು.

ಇತ್ತಲಾಗಿ ದುರಾತ್ಮನಾದ ಮಾರನಾಯಕನು ರಾಜಪುತ್ರಿಯನ್ನು ಮದು ಮಾಡಿಕೊಳ್ಳುವೆನೆಂಬ ಸಡಗರದಲ್ಲಿದ್ದನು. ಸಂಶಯಕ್ಕಾಸ್ಪದವಾಗದಂತೆ ವಿವಾ ಸನ್ನಾಹಗಳೆಲ್ಲವೂ ಮೊದಲಿನಂತೆಯೇ ನಡೆಯುತ್ತಿದ್ದುವು. ಆಗ ರಾಜಪುತ್ರ ಸಮಯನಿರೀಕ್ಷಣೆ ಮಾಡಿಕೊಂಡಿದ್ದು, ಮಾರನಾಯಕನನ್ನೂ ಅವನ ಪರಿವಾರವನು ನಿಗ್ರಹಿಸಿ ನಿರ್ಮೂಲಮಾಡಿದರು. ಬಳಿಕ ರಾಜಪುತ್ರಿಯು ಯದುರಾಯರನ್ನು ವರಿ ವಿವಾಹ ಮಾಡಿಕೊಂಡಳು. ಈ ಕಾರಣದಿಂದಲೇ ಮೈಸೂರು ರಾಜಸಂತಾನಕೆ ಯದುವಂಶವೆಂಬ ಹೆಸರು ವಿಖ್ಯಾತವಾಯಿತು. ಮಾರನಾಯಕನ ನಿಗ್ರಹಕಾ ದಲ್ಲಿಯೂ ದೇವಾಜಮ್ಮಣ್ಣಿಯವರ ಪಾಣಿಗ್ರಹಣಕಾಲದಲ್ಲಿಯೂ ಒಬ್ಬ ಜಂಗವ ಒಡೆಯರು ಮಾಡಿದ ಸಹಾಯಕ್ಕಾಗಿ ಈ ವಂಶದ ಪ್ರಭುಗಳು ಒಡೆಯರೆಂಬ ನಾಮಾ ಕಿತವನ್ನು ಅದ್ಯಾಪಿ ಧರಿಸಿರುತ್ತಾರೆ.

ಯದುರಾಯರು ಅನೇಕ ಪಾಳೆಯಗಾರರನ್ನು ಗೆದ್ದು, ತಮ್ಮ ರಾಜ್ಯವನು ವೃದ್ಧಿಪಡಿಸಿ ಬಹುಕಾಲ ಸಾಮ್ರಾಜ್ಯಸುಖವನ್ನನುಭವಿಸಿ, ೧೪೨೩ನೆಯ ಸಂವತ್ಸರದ ಕಾಲವಾದರು ಬಳಿಕ ಹಿರಿಯ ಬೆಟ್ಟದ ಚಾಮರಾಜ ಒಡೆಯರು, ಮೊದಲನೆಯ ತಿಮ್ಮರಾಜ ಒಡೆಯರು, ಹಿರಿಯ ಚಾಮರಸ ಒಡೆಯರು, ಬೆಟ್ಟದ ಚಾಮರಾಜ ಒ ಯರು ಎಂಬ ನಾಲ್ವರು ದೊರೆಗಳು ಕ್ರಮವಾಗಿ ಪ್ರಜಾಪರಿಪಾಲನೆಯಂ ಗೆಯ್ದರ ಬೆಟ್ಟದ ಚಾಮರಾಜ ಒಡೆಯರು ಅವಸಾನಕಾಲದಲ್ಲಿ ತಮಗಿದ್ದ ರಾಜ್ಯವನ್ನು ತಮ್ಮ ಮೂರುಮಂದಿ ಮಕ್ಕಳಿಗೆ ಹಂಚಿಕೊಟ್ಟರು. ಮೊದಲನೆಯ ಪುತ್ರರಾದ ತಿಮ್ಮರಾ ಒಡೆಯರಿಗೆ ಹೆಮ್ಮನಹಳ್ಳಿಯೂ, ಎರಡನೆಯ ಪುತ್ರರಾದ ಕೃಷ್ಣರಾಜ ಒಡೆಯರಿ ಕೆಂಬಲ್ಲೂ, ಮೂರನೆಯ ಪುತ್ರರಾದ ಬೋಳಚಾಮರಾಜ ಒಡೆಯರಿಗೆ ಮಹಿಶೂರ ಬಂದುವು. ಈ ಚಾಮರಾಜ ಒಡೆಯರವರು ಕೆಲವುಕಾಲ ಸಾಮ್ರಾಜ್ಯಸುಖವನ್ನನ ಭವಿಸಿ ಕಾಲವಾದರು.

ಕ್ರಿ. ಶ. ೧೫೭೮ನೆಯ ಸಂವತ್ಸರದಲ್ಲಿ ಬೋಳಚಾಮರಾಜ ಒಡೆಯರವರ ಹಿರಿಯ ಮಕ್ಕಳಾದ ರಾಜಒಡೆಯರಿಗೆ ಪಟ್ಟಾಭಿಷೇಕವಾಯಿತು. ಈ ಕ್ಷತ್ರಿಯ ವೀರರ ಸಾಹಸದಲ್ಲೂ ಪರಾಕ್ರಮದಲ್ಲೂ ರಾಜ್ಯರಕ್ಷಣದಕ್ಷತೆಯಲ್ಲೂ ಮೈಸೂರು ಚರಿತ್ರರತ್ನಾಕ ದಲ್ಲಿ ಸುಪ್ರಸಿದ್ಧರು. ಇವರು ತಮ್ಮ ಅಪ್ರತಿಮ ತೇಜೋವಿಶೇಷದಿಂದ ಕಾರಗಳ್ಳ ವೀ ರಾಜಯ್ಯ ಮುಂತಾದ ಅನೇಕ ಪಾಳೆಯಗಾರರನ್ನು ಜಯಿಸಿ ರಾಜ್ಯವನು ನಾನಾಮುಖವಾಗಿ ವಿಸ್ತರಿಸಿದರು. ಈ ರಾಜವರೇಣ್ಯರ ಬಾಹುಬಲದಿಂದ ಸಂಸ್ಥಾನಾಧಿಪತ್ಯಕ್ಕೆ ಹೆಬ್ಬಾರು, ರಂಗಸಮುದ್ರ, ರಾಮಸಮುದ್ರ ಮೊದಲಾ ಅನೇಕ ಪಾಳೆಯಗಾರರ ಸೀಮೆಗಳು ಒಳಗಾದುವು. ರಾಜಒಡೆಯರು ದೇಶವನು

ಗೆದ್ದುದು ಮಾತ್ರವೇ ಅಲ್ಲ; ಅವುಗಳನ್ನೆಲ್ಲ ವಿಚಕ್ಷಣತೆಯಿಂದ ಪರಿಪಾಲಿಸಿದರು. ಪರಾಜಿತನಾದ ಶತ್ರುವಿನ ಮೇಲೆ ಕ್ರೌರ್ಯವನ್ನು ತೋರಿಸುತ್ತಿರಲಿಲ್ಲ. ಸೋತು ಶರಣಾಗತನಾದ ಶತ್ರುವನ್ನು ಮನ್ನಿಸಿ ಮಾನದಿಂದ ಆದರಿಸಿ ಧನಕನಕವಸ್ತ್ರಾದಿಗಳನ್ನು ಕೊಟ್ಟು ಕಳುಹಿಸುತ್ತಿದ್ದರು.

೧೬೧೦ನೆಯ ಇಸವಿಗೆ ಹಿಂದಿದ್ದ ಶ್ರೀರಂಗಪಟ್ಟಣ.

ರಾಜಒಡೆಯರು ಆಳುತ್ತಿರುವಾಗ ಕ್ಷೀಣಸ್ಥಿತಿಗೆ ಬಂದಿದ್ದ ವಿಜಯನಗರ ಸಂಸ್ಥಾನದ ರಾಯಭಾರಿಯಾಗಿದ್ದ ಶ್ರೀರಂಗರಾಜನು, ಈ ವೀರರ ಶೌರ್ಯಸಾಹಸಾದಿಗಳನ್ನು ತಿಳಿಯದೆ ಅವರಲ್ಲಿ ಕಪಟವನ್ನು ಆಚರಿಸುತ್ತಿದ್ದನು. ರಾಜಒಡೆಯರು ವಿಜಯನಗರಕ್ಕೆ ಕಳುಹಿಸುತ್ತಿದ್ದ ಕಪ್ಪವನ್ನು ನಿಲ್ಲಿಸಿಬಿಟ್ಟರು. ಅವರನ್ನು ಹಿಡಿದು ಬಿಡಬೇಕೆಂದು ಯತ್ನಿಸಲು, ಅವರು ಶ್ರೀರಂಗಪಟ್ಟಣವನ್ನು ೧೬೧೦ರಲ್ಲಿ ಸ್ವಾಧೀನಪಡಿಸಿಕೊಂಡರು. ಅಂದಿನಿಂದ ಮೈಸೂರು ರಾಜವಂಶೀಯರಿಗೆ ಶ್ರೀರಂಗಪಟ್ಟಣವೇ ಬಹುಕಾಲಪರ್ಯಂತ ರಾಜಧಾನಿಯಾಗಿದ್ದಿತು. ಪ್ರಜಾವತ್ಸಲರಾದ ರಾಜಒಡೆಯರು ಮೂವತ್ತೊಂಬತ್ತು ವರುಷಕಾಲ ರಾಜ್ಯಭಾರವನ್ನು ಮಾಡಿ, ನವರಾತ್ರ್ಯುತ್ಸವ ಕ್ರಮವನ್ನು ಏರ್ಪಡಿಸಿ, ತಟಾಕಾರಾಮಾದಿಗಳನ್ನು ನಿರ್ಮಿಸಿ, ಅನೇಕ ಸತ್ಕಾರ್ಯಗಳನ್ನು ಮಾಡಿ ಕೀರ್ತಿಗೊಂಡರು. ಆದರೆ ಅವರು ದೀರ್ಘಕಾಲ ಶಾಂತಿಸುಖವನ್ನನುಭವಿಸುವುದಕ್ಕೆ ಅವಕಾಶವಿಲ್ಲದೆ ಹೋಯಿತು. ಮೇಲೆಮೇಲೆ ಸಂಭವಿಸಿದ ಪುತ್ರವಿಯೋಗಜನಿತ ದುಃಖಾತಿಶಯದಿಂದ ಕೊರಗಿ ಅವರು ಜಾಗ್ರತೆಯಾಗಿ ಲೋಕಾಂತರವನ್ನೈದಿದರು.

ಸುವಿಖ್ಯಾತರಾದ ಈ ರಾಜಒಡೆಯರ ಅನಂತರ ಇವರ ಮೊಮ್ಮಕ್ಕಳಾದ ಚಾಮರಾಜ ಒಡೆಯರು ಸಿಂಹಾಸನಾರೋಹಣ ಮಾಡಿದರು. ಆಗ ಅವರಿಗೆ ಹನ್ನೊಂದು

ವರುಷ ವಯಸ್ಸು. ಅವರು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದುದರಿಂದ, ರಾಜ್ಯದ ಆಡಳಿತವನ್ನು ದಳವಾಯಿ ಬೆಟ್ಟದ ಅರಸು ನೋಡಿಕೊಳ್ಳುತ್ತಿದ್ದನು. ಕೆಲವು ದಿವಸದ ಮೇಲೆ ಈ ದ್ರೋಹಿಯು ರಾಜ್ಯವನ್ನಪಹರಿಸಬೇಕೆಂದು ದುರಾಲೋಚನೆ ಮಾಡಿದನು. ಇದನ್ನು ತಿಳಿದು ಶಕ್ತರಾದ ಚಾಮರಾಜರು ಇವನ ಕಣ್ಣು ಕೀಳಿಸಿ ಇವನನ್ನು ಕಾರಾಗೃಹದಲ್ಲಿಡಿಸಿದರು. ಈ ಮಹಾರಾಜರೂ ತಮ್ಮ ಪಿತಾಮಹರಂತೆ ವಿಜಯಲಕ್ಷ್ಮಿಯ ಪ್ರಸಾದವನ್ನು ಪಡೆಯಬೇಕೆಂಬಾಶೆಯಿಂದ ಪರಾಕ್ರಮದಿಂದ ಜೈತ್ರಯಾತ್ರೆಯನ್ನು ಮಾಡಿ, ಹಗ್ಗದ ದೇವನಕೋಟೆ, ಚನ್ನಪಟ್ಟಣ, ನಾಗಮಂಗಲ, ಕಾನಕಾನಹಳ್ಳಿ, ಚನ್ನರಾಯಪಟ್ಟಣ ಮುಂತಾದ ಸ್ಥಳಗಳ ಪಾಳೆಯಗಾರರನ್ನು ಜಯಿಸಿದರು. ಇವರ ಶೌರ್ಯಸಾಹಸಾದಿಗಳಿಂದ ಮೈಸೂರು ವಿಜಯಲಕ್ಷ್ಮಿಯು ಎಲ್ಲೆಲ್ಲಿಯೂ ತಾಂಡವವಾಡುವಂತಾದಳು. ಇವರು ಶೂರರಾಗಿದ್ದುದಲ್ಲದೆ ಸ್ವಯಂ ಪಂಡಿತರಾಗಿಯೂ ಇದ್ದುಕೊಂಡು, ವಿದ್ವನ್ನಿವಹ ಪರಿಪೋಷಕರಾಗಿ ಗೀರ್ವಾಣ ಕರ್ಣಾಟಕ ಭಾಷಾಭಿವೃದ್ಧಿಗೆ ಬಹಳವಾಗಿ ಪ್ರೋತ್ಸಾಹವನ್ನಿತ್ತರು. ಶ್ರೀಮದ್ರಾಮಾಯಣದ ಸಪ್ತಕಾಂಡಗಳನ್ನು ಕನ್ನಡಿಸಿದ ಮಹಾನುಭಾವರು ಇವರೇ. ೧೬೩೭ನೆಯ ಇಸವಿಯಲ್ಲಿ ಇವರು ತಮ್ಮ ಚಿಕ್ಕಪ್ಪಂದಿರಾದ ಇಮ್ಮಡಿ ರಾಜಒಡೆಯರಿಗೆ ರಾಜ್ಯವನ್ನು ಬಿಟ್ಟುಕೊಟ್ಟು ಭಗವದ್ವಿಚಾರದಲ್ಲಿ ಉಳಿದ ಕಾಲವನ್ನು ಕಳೆದರು. ಆದರೆ ಇಮ್ಮಡಿ ರಾಜಒಡೆಯರು ಬಹಳಕಾಲ ರಾಜ್ಯವಾಳಲಿಲ್ಲ. ಇವರಿಗೂ ದಳವಾಯಿ ವಿಕ್ರಮರಾಯನಿಗೂ ಮನಸ್ತಾಪ ಹುಟ್ಟಿದುದರಿಂದ, ವಿಕ್ರಮರಾಯನು ಇವರಿಗೆ ವಿಷವನ್ನು ಕೊಡಿಸಿ ಕೊಲ್ಲಿಸಿದನು.

ಈ ಇಮ್ಮಡಿ ರಾಜಒಡೆಯರಿಗೆ ಸಂತಾನವಿಲ್ಲದುದರಿಂದ, ಬೆಟ್ಟದ ಚಾಮರಾಜ ಒಡೆಯರ ಎರಡನೆಯ ಕುಮಾರರಾದ ಕಂಠೀರವ ನರಸರಾಜ ಒಡೆಯರು ೧೬೩೮ರಲ್ಲಿ ಸಿಂಹಾಸನವನ್ನು ಹತ್ತಿದರು. ಇವರ ಪ್ರತಾಪವನ್ನೂ ಸಾಹಸಗಳನ್ನೂ ಮೈಸೂರು ದೇಶೀಯರಲ್ಲಿ ಯಾರೂ ಮರೆಯುವಂತಿಲ್ಲ. ಮೈಸೂರಿನ ಇತಿಹಾಸದಲ್ಲಿ ಈ ವೀರಾಗ್ರಣಿಯ ಹೆಸರು ಈಗಲೂ ಪ್ರಜ್ವಲಿಸುತ್ತಿದೆ. ದಳವಾಯಿ ವಿಕ್ರಮರಾಯನು ನೆಪಮಾತ್ರಕ್ಕೆ ನರಸರಾಜ ಒಡೆಯರಿಗೆ ಪಟ್ಟವನ್ನು ಕಟ್ಟಿ ತಾನೇ ಆಳಬೇಕೆಂದು ಆಲೋಚಿಸಿದನು. ಆದರೆ ಪೂರ್ವದಲ್ಲಿ ಅವನು ಇಮ್ಮಡಿ ರಾಜಒಡೆಯರಿಗೆ ಮಾಡಿದ ದ್ರೋಹವನ್ನು ತಿಳಿದು, ಬಲಾಢ್ಯರಾದ ನರಸರಾಜ ಒಡೆಯರವರು ಅವನನ್ನು ಕೊಲ್ಲಿಸಿದರು. ನರಸರಾಜ ಒಡೆಯರಿಗೆ ರಾಜ್ಯಲಾಭವಾದ ಕೆಲವು ದಿವಸಗಳಮೇಲೆ, ಬಿಜಾಪುರದ ಸೇನಾಪತಿ ರಣದುಲ್ಲಾಖಾನನ ಸೈನ್ಯವೊಂದು ಬಂದು ಮಿಡತೆಗಳ ಹಿಂಡಿನಂತೆ ಶ್ರೀರಂಗಪಟ್ಟಣವನ್ನು ಮುತ್ತಿಗೆ ಹಾಕಿತು ಪರಾಕ್ರಮಶಾಲಿಗಳಾದ ನರಸರಾಜ ಒಡೆಯರವರು ಶತ್ರುಗಳಮೇಲೆ ಬಿದ್ದು ಯುದ್ಧಮಾಡಿದರು. ಜಯಶ್ರೀಯು ಅವರಿಗೊಲಿದಳು. ರಣದುಲ್ಲಾಖಾನನ ಸೈನ್ಯವೆಲ್ಲ ದಿಕ್ಕುದಿಕ್ಕಿಗೆ ಚೆದರಿಹೋಯಿತು. ಆಗ ಅವನು ಸಂಧಿಮಾಡಿಕೊಂಡು ಹಿಂದಕ್ಕೆ ಹೋದನು. ಇವರ ಕಾಲದಲ್ಲಿ ಕಾವೇರಿಯ ಉತ್ತರ ದಕ್ಷಿಣ ಭಾಗಗಳ ರಾಜ್ಯವೆಲ್ಲ ಮೈಸೂರು ಸೀಮೆಗೆ ಸೇರಿಕೊಂಡಿತು.

ಮಹಾರಾಜರ ಪ್ರಶಂಸೆಯು ಎಲ್ಲ ಕಡೆಗಳಲ್ಲಿಯೂ ಹರಡಿಕೊಂಡಿತು. ಅವರ ಕೋಶಕೋಶಗಳು ವೃದ್ಧಿಯನ್ನೈದಿದುವು.

ಹೀಗೆ ರಾಜ್ಯವು ಅನ್ಯಾಯತ್ತವಾಗದಂತೆ ಕಾಪಾಡಿದ ಆ ಮಹಾರಾಜರು ರಣಧೀರಕಂಠೀರವನೆಂಬ ಬಿರುದಿನಿಂದ ಜಗದ್ವಿಖ್ಯಾತರಾದರು. ಇವರು ತಮ್ಮ ಬಂಗಾರದವಳಾದ ದೊಡ್ಡಮ್ಮಣ್ಣಿ ಎಂಬವಳ ಜ್ಞಾಪಕಾರ್ಥವಾಗಿ ಕಟ್ಟಿಸಿದ ಬಂಗಾರದೊಡ್ಡಿ ಕಾಲುವೆಯು ಶ್ರೀರಂಗಪಟ್ಟಣದ ಬಳಿಯಲ್ಲಿ ಈಗಲೂ ದರ್ಶನೀಯವಾಗಿದೆ. ಈ ನೃಪಾಲಶ್ರೇಷ್ಠರು ಅನೇಕಜನ ವಿದ್ವಾಂಸರಿಗೆ ಆಶ್ರಯಭೂತರಾಗಿದ್ದಂತೆ ತಿಳಿಯಬರುತ್ತದೆ. ಇವರು ಟಂಕಸಾಲೆಯನ್ನಿಟ್ಟು ನಾಣ್ಯಗಳನ್ನು ಸಹ ಹಾಕಿಸುತ್ತಿದ್ದರು. ಇವರ ಚಿನ್ನದ ನಾಣ್ಯಕ್ಕೆ ಕಂಠೀರಾಯಿವರಹ, ಕಂಠೀರಾಯಿ ಹಣ ಎಂದು ಹೆಸರು. ಕಡೆಗೆ ಇವರು ತಮಗೆ ಮಕ್ಕಳಿಲ್ಲದುದರಿಂದ, ಮುಪ್ಪಿನ ದೇವರಾಜ ಒಡೆಯರ ಮೂರನೆಯ ಪುತ್ರರನ್ನು ಸ್ವೀಕಾರ ಮಾಡಿಕೊಂಡರು. ಇವರು ದೊಡ್ಡ ದೇವರಾಜ ಒಡೆಯರೆಂಬ ಹೆಸರಿನಿಂದ ರಾಜ್ಯಭಾರ ಮಾಡಿದರು.

ದೊಡ್ಡದೇವರಾಜ ಒಡೆಯರಿಗೆ ದೊರೆತನವಾದ ಕೆಲವು ದಿನಗಳಲ್ಲಿ ಕೆಳದೀ ಸಂಸ್ಥಾನಾಧಿಪತಿಯಾದ ಶಿವಪ್ಪನಾಯಕನು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಆದರೆ ಮತ್ತಗಜವು ಮೃಗೇಂದ್ರನಿಗೆ ಹೆದರುವಂತೆ, ಈ ವೀರಕೇಸರಿಯ ಧೈರ್ಯಸ್ಥೈರ್ಯಾದಿಗಳಿಗೆ ಹೆದರಿ ಓಡಿಹೋದನು. ಇವರ ಆಳಿಕೆಯಲ್ಲಿ ಈರೋಡು, ಧಾರಾಪುರ, ಚಿಕ್ಕನಾಯಕನಹಳ್ಳಿ, ಹಾಸನ ಮುಂತಾದ ಸ್ಥಳಗಳು ಮೈಸೂರಿಗೆ ಸೇರಿದುವು. ಇವರೂ ತಮ್ಮ ಹಿರಿಯರ ಮಾರ್ಗವನ್ನೇ ಹಿಡಿದು, ಅವರು ಮಾಡಿದ್ದ ಧರ್ಮದ ಕೆಲಸಗಳನ್ನೆಲ್ಲ ಜೀರ್ಣೋದ್ಧಾರಮಾಡಿ, ಚಾಮುಂಡೀ ಬೆಟ್ಟಕ್ಕೆ ಸೋಪಾನಗಳನ್ನು



ಮೈಸೂರಿನಲ್ಲಿರುವ ಚಾಮುಂಡಿ ಬೆಟ್ಟ ಮತ್ತು ದೇವರಾಜ ಸಾಗರ.

ಕಟ್ಟಿಸಿ ಬೆಟ್ಟದ ಮಧ್ಯದಲ್ಲಿ ಒಂದು ದೊಡ್ಡ ಬಸವನನ್ನು ಪ್ರತಿಷ್ಠೆ ಮಾಡಿಸಿದರು. ಇವರು ಕಟ್ಟಿಸಿದ ದೇವರಾಜಸಾಗರವೆಂಬ ನಾಮಧೇಯವುಳ್ಳ ದೊಡ್ಡಕೆರೆಯು ಮೈಸೂರಿನಲ್ಲಿ ಈಗಲೂ ಇದೆ.

ದೊಡ್ಡದೇವರಾಜ ಒಡೆಯರು ಸ್ವರ್ಗಸ್ಥರಾದಮೇಲೆ ಚಿಕ್ಕದೇವರಾಜ ಒಡೆಯರಿಗೆ ಪಟ್ಟವಾಯಿತು (೧೬೭೨). ಇವರು ಗುಂಡ್ಲುಪೇಟೆಯ ಬಳಿಯಲ್ಲಿರುವ ಸಂಗಳವೆಂಬ ಗ್ರಾಮದಲ್ಲಿ ಬಾಲ್ಯವನ್ನು ಕಳೆದಂತೆ ತಿಳಿಯಬರುತ್ತದೆ. ಇವರು ಸಿಂಹಾಸನಾರೋಹಣ ಮಾಡಿದ ಕಾಲದಲ್ಲಿ ಎಲ್ಲಿ ನೋಡಿದರೂ ಶತ್ರುಗಳ ಪ್ರಾಬಲ್ಯವು ಕಾಣಬರುತ್ತಿದ್ದಿತು. ಪ್ರಸಿದ್ಧವಾದ ವಿಜಯನಗರ ಸಂಸ್ಥಾನವು ೧೫೬೫ರಲ್ಲಿ ನಡೆದ ತಾಳೀಕೋಟೆಯ ಯುದ್ಧದನಂತರದಲ್ಲಿ ಕ್ಷೀಣತೆಗಿಳಿಯಿತು. ಅದು ಕ್ಷೀಣಸ್ಥಿತಿಯನ್ನು ಹೊಂದಿದವಾಗೆಲ್ಲ ಚಿತ್ರದುರ್ಗ, ರಾಯದುರ್ಗ, ಹರಪನಹಳ್ಳಿ, ಹರಿಕೆರೆ ಮೊದಲಾದ ಸ್ಥಳಗಳ ಪಾಳೆಯಗಾರರು ಪ್ರಬಲವಾಗುತ್ತ ಬಂದರು. ಒಂದು ಕಡೆ ಬಹಮನೀ ಮುಸಲ್ಮಾನರು ತಮ್ಮ ಸೀಮೆಯನ್ನು ವೃದ್ಧಿಪಡಿಸುತ್ತಿದ್ದರು; ಮತ್ತೊಂದು ಕಡೆ ಷಾಹಜಿಯ ಮಗನಾದ ಶಿವಾಜಿಯು ತನ್ನ ಪರಾಕ್ರಮದಿಂದ ಕೆಲವು ರಾಜ್ಯಗಳನ್ನು ಸಾಧಿಸಿ ಪ್ರಸಿದ್ಧಿಯನ್ನು ಪಡೆಯುತ್ತಿದ್ದನು. ಇವನ ಹಾವಳಿಯಿಂದ ಬಿಜಾಪುರಕ್ಕೆ ಅನಿಷ್ಟ ಪ್ರಾಪ್ತಿಯಾಯಿತು. ಈ ಸಮಯದಲ್ಲಿ ದಿಳ್ಳಿಯ ಚಕ್ರವರ್ತಿಯಾಗಿದ್ದ ಔರಂಗಜೇಬನು ದಕ್ಷಿಣಕ್ಕೆ ದಂಡೆತ್ತಿಬಂದನು. ಅವನ ಶೂರಸೈನ್ಯವು ಬಿಜಾಪುರ ಗೋಲಕೊಂಡಗಳ ಅರಸರನ್ನು ಗದ್ದಿತು. ಶೀಘ್ರದಲ್ಲಿ ಬೇರೊಂದು ಮುಸಲ್ಮಾನರ ಹೊಸರಾಜ್ಯವು ಅಂಕುರಿಸಿತು. ಆಗ ಮರಾಟೆಯವರಿಗೂ ಮೊಗಲಾಯರಿಗೂ ರಾಜ್ಯಸಂಪಾದನೆಗಾಗಿ ಪರಸ್ಪರ ಕಲಹವು ಹುಟ್ಟಿತು. ಉಭಯಪಕ್ಷದವರೂ ಪರಸ್ಪರ ನಿಗ್ರಹಕ್ಕೆ ಬೇಕಾದ ಉಪಾಯಗಳನ್ನು ಚಿಂತಿಸುತ್ತಿದ್ದರು. ಈ ಸಮಯದ ಚಿಕ್ಕದೇವರಾಜ ಒಡೆಯರೆಂಬ ಅಖಂಡ ರಾಜ ತೇಜೋವಿರಾಜಿತ ಮಾರ್ತಾಂಡ ಮಂಡಲವು ಉದಯಿಸಿ, ತನ್ನ ಶೌರ್ಯ ಸಾಹಸ ಪ್ರತಾಪ ಕಿರಣ ವಿಕೀರ್ಣದಿಂದ ದಕ್ಷಿಣಾಪಥದಲ್ಲಿ ಮೆಲ್ಲಮೆಲ್ಲಗೆ ಸಂಚರಿಸಲಾರಂಭಿಸಿತು. ಇವರ ಪ್ರಭಾವದಿಂದ ಈ ಪ್ರಾಂತದ ಸಕಲ ಭೂಪತಿಗಳ ರಾಜ್ಯಗಳೂ, ನದಿಗಳು ಸಮುದ್ರಕ್ಕೆ ಸೇರುವಹಾಗೆ ಮೈಸೂರು ದೇಶಕ್ಕೆ ಸೇರತೊಡಗಿದುವು. ಇದರಿಂದ ಇವರ ಕೀರ್ತಿಲತೆಯು ನಾಲ್ಕು ದಿಕ್ಕುಗಳಿಗೂ ಹಬ್ಬಿತು. ಇವರ ಕಾಲದಲ್ಲಿ ಮೈಸೂರು ರಾಜ್ಯಕ್ಕೆ ಮಧುಗಿರಿ, ತುಮಕೂರು, ಬೆಂಗಳೂರು, ಬಾಣಾವಾರ, ಚಿಕ್ಕಮಗಳೂರು, ವಸ್ತಾರೆ, ಐಗೂರು ಮುಂತಾದ ಪ್ರದೇಶಗಳು ಸೇರಿದುವು.

ಚಿಕ್ಕದೇವರಾಜ ಒಡೆಯರು ಆಳುವ ಕಾಲದಲ್ಲಿ ೧೬೮೨ರಲ್ಲಿ ಜಯಾಜಿಘಾಟ್, ನಿಂಬಾಜಿಘಾಟ್ ಎಂಬ ಮರಾಟೆ ಸರದಾರರಿಬ್ಬರು ಮೈಸೂರಿನಮೇಲೆ ದಂಡೆತ್ತಿ ಬಂದರು. ಆಗ ದಳವಾಯಿ ದೊಡ್ಡಯ್ಯನು ಪರಾಕ್ರಮದಿಂದ ಯುದ್ಧಮಾಡಿದನು. ಆ ಕಾಳಗದಲ್ಲಿ ಅವರಿಬ್ಬರೂ ಸಂಹೃತರಾದರು. ಈ ಮಧ್ಯದಲ್ಲಿ ಮಹಾರಾಜರಿಗೆ ಇಷ್ಟನಾಗಿದ್ದ ಮೊಗಲ್ ಸೇನಾಪತಿ ಕಾಸಿಂಖಾನನು ತೀರಿಹೋದನು. ಸಾಮಂತ

ರಾಜರೆಲ್ಲರೂ ಸ್ವಾಮಿದ್ರೋಹಾಚರಣೆಯನ್ನು ಮಾಡಲಾರಂಭಿಸಿದರು. ಇನ್ನು ಶತ್ರು ನಿಗ್ರಹಕ್ಕೆ ಮೊಗಲ್ ಚಕ್ರವರ್ತಿಯ ಸ್ನೇಹವು ಹೊರತು ಉಪಾಯಾಂತರವೇನೂ ಮೈಸೂರು ಮಹಾರಾಜರಿಗೆ ತೋರಲಿಲ್ಲ. ಆಗ ಚಿಕ್ಕದೇವರಾಜ ಒಡೆಯರವರು ಕರಣಿಕ ಲಿಂಗಣ್ಣಯ್ಯನ ಮೂಲಕವಾಗಿ ನವರತ್ನಾಭರಣಗಳನ್ನೂ, ಕುಶಲಪತ್ರಿಕೆಯನ್ನೂ ಔರಂಗಜೇಬನಿಗೆ ಕಳುಹಿಸಿದರು. ಸುಪ್ರೀತನಾದ ಮೊಗಲೇಶ್ವರನು ಚಿಕ್ಕದೇವರಾಜ ಒಡೆಯರ ಸ್ನೇಹವನ್ನು ಬಯಸಿ, ಅವರಿಗೆ ಜಗದೇವರಾಯನೆಂಬ ಬಿರುದನ್ನು ಕಳುಹಿಸಿಕೊಟ್ಟುದಲ್ಲದೆ, ಸ್ನೇಹಪತ್ರಿಕೆಯನ್ನು ಬರೆದು, ನಿಮಗೆ ಯಾವ ಕಷ್ಟಬಂದರೂ ಸಹಾಯಮಾಡಲು ಸಿದ್ಧನಾಗಿರುವೆನೆಂದು ತಿಳಿಸಿದನು.

ರಾಜ್ಯದಲ್ಲಿ ಸಮಾಧಾನವು ನೆಲೆಗೊಂಡನಂತರದಲ್ಲಿ ಚಿಕ್ಕದೇವರಾಜ ಒಡೆಯರವರು ಭಗವದ್ವಿಚಾರಪರರಾಗಿ ಕೆಲವು ಕಾಲವನ್ನು ಕಳೆದಬಳಿಕ, ವೈಷ್ಣವ ದೀಕ್ಷೆಯನ್ನು ಅಂಗೀಕರಿಸಿದರು. ಅಂದಿನಿಂದ ಮೈಸೂರು ದೊರೆಗಳಿಗೆ ವೈಷ್ಣವಾಚಾರ್ಯರು ಗುರುಗಳಾದರು. ಇವರು ಬಹು ಸಮರ್ಥರಾಗಿಯೂ ರಾಜತಂತ್ರ ನಿಪುಣರಾಗಿಯೂ ಇಂಗಿತಜ್ಞರಾಗಿಯೂ ಇದ್ದರು. ಇವರ ಕಾಲದಲ್ಲಿ ಮೈಸೂರು ದೇಶವು ಪೂರ್ವಕ್ಕಿಂತಲೂ ಪ್ರಬಲಸ್ಥಿತಿಗೆ ಬಂದು ಸಂಸ್ಥಾನವೆನ್ನಿಸಿಕೊಂಡಿತು. ಇವರು ತಮ್ಮ ರಾಜ್ಯದ ಆಡಳಿತದಲ್ಲಿ ಅನೇಕ ಏರ್ಪಾಡುಗಳನ್ನು ಮಾಡಿದರು. ಶ್ರೀರಂಗಪಟ್ಟಣದ ಪಶ್ಚಿಮಭಾಗದ ಕಾವೇರೀ ನದಿಗೆ ಅಣೆಯನ್ನು ಕಟ್ಟಿಸಿದರು. ಅಂಚೆಯೂ ಕಂದಾಚಾರವೆಂಬ ಪೋಲೀಸೂ ಇವರ ದಿವಸದಲ್ಲೇ ಏರ್ಪಾಡಾಯಿತು. ಇವರ ಭಂಡಾರವು ಅಪರಿಮಿತೈಶ್ವರ್ಯದಿಂದ ತುಂಬಿದ್ದಿತು. ಇವರು ಉತ್ಸವಕಾಲದಲ್ಲಿ ನವಕೋಟಿನಾರಾಯಣನೆಂಬುದಾಗಿ ಹೊಗಳಿಸಿಕೊಳ್ಳುತ್ತಿದ್ದರು. ಇವರ ಸಭೆಯನ್ನು ಪ್ರಖ್ಯಾತರಾದ ಚಿಕ್ಕುಪಾಧ್ಯಾಯ, ತಿರುಮಲಯ್ಯಂಗಾರ್ಯ, ಸಿಂಗರಾರ್ಯ ಮುಂತಾದ ಕರ್ಣಾಟ ಕವಿಗಳು ಅಲಂಕರಿಸಿದ್ದರು. ಆ ಕಾಲದಲ್ಲಿ ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ಮಾಡಿದ ಅನೇಕ ಉತ್ತಮ ಗ್ರಂಥಗಳು ಈ ಭೂಪಾಲಮೌಳೀಮಣಿಯ ಅಂಕಿತವುಳ್ಳವುಗಳಾಗಿರುವುವು. ಈ ನೃಪತಿಯ ರಾಜ್ಯದಲ್ಲಿ ಜನರು ಈತಿಬಾಧಾರಹಿತರಾಗಿದ್ದರು. ಪ್ರಜಾಕ್ಷೇಮೈಕತತ್ಪರರಾಗಿ ರಾಜ್ಯವಾಳಿದ ಈ ರಾಜವರೇಣ್ಯರಿಗೆ ವಿಶಾಲಾಕ್ಷ ಪಂಡಿತನೆಂಬ ಸಮರ್ಥನಾದ ಜೈನಮಂತ್ರಿ ಇದ್ದನು. ಇಷ್ಟು ಪರಾಕ್ರಮದಿಂದ ರಾಜ್ಯವಾಳಿದ ಈ ರಾಜವರೇಣ್ಯರ ಜೀವನಲೀಲೆಯು ೧೭೦೪ನೆಯ ವರುಷದಲ್ಲಿ ಮುಗಿದುಹೋಯಿತು.

ಪ್ರಖ್ಯಾತವಾಗಿದ್ದ ಧಾರಾನಗರದ ಐಶ್ವರ್ಯವು ಭೋಜರಾಜನೊಡನೆಯೂ, ಹೆಸರುಗೊಂಡಿದ್ದ ಉಜ್ಜಯಿನೀ ನಗರದ ಸಿರಿಯು ವಿಕ್ರಮಾದಿತ್ಯಮಹೀಪಾಲನೊಡನೆಯೂ, ಮಹೋನ್ನತ ಪದವಿಯನ್ನು ಪಡೆದಿದ್ದ ಅಯೋಧ್ಯೆಯ ಪ್ರಭಾವವು ಲೀಲಾಮಾನುಷ ಮೂರ್ತಿಯಾದ ಶ್ರೀರಾಮಚಂದ್ರನೊಡನೆಯೂ ಅಂತರ್ಧಾನವಾದಂತೆ ಚಿಕ್ಕದೇವರಾಜ ಒಡೆಯರ ಆಳಿಕೆಯಲ್ಲಿ ಅತ್ಯುಚ್ಛ್ರಾಯಸ್ಥಿತಿಯನ್ನೈದಿದ್ದ ಮೈಸೂರು ದೇಶದ ವೈಭವವು ಆ ನೃಪಾಲಶಿಖಾಮಣಿಯೊಡನೆಯೇ ಅದೃಶ್ಯವಾ

ಯಿತು. ಯದುರಾಯರಾದಿಯಾಗಿ ಯಶೋವಂತರಾಗಿಯೂ ಪ್ರತಾಪಶಾಲಿಗಳಾಗಿಯೂ ಸ್ವತಂತ್ರರಾಗಿಯೂ ರಾಜ್ಯಭಾರ ಮಾಡಿದವರಲ್ಲಿ ಚಿಕ್ಕದೇವರಾಜ ಒಡೆಯರೇ ಕೊನೆಯವರಾದರು. ಇಲ್ಲಿಂದ ಮುಂದೆ ಬಹುಕಾಲದವರೆಗೂ ಸಿಂಹಾಸನಕ್ಕೆ ಬಂದ ಅರಸುಗಳು ಶತ್ರುನಿಗ್ರಹದಲ್ಲಾಗಲಿ ದರ್ಪದಲ್ಲಾಗಲಿ ತಮ್ಮ ಹಿರಿಯರಷ್ಟು ಪ್ರಸಿದ್ಧರಾಗಲಿಲ್ಲ.

ಚಿಕ್ಕದೇವರಾಜ ಒಡೆಯರವರ ಅನಂತರದಲ್ಲಿ ಅವರ ಮಕ್ಕಳಾದ ಕಂಠೀರವ ಒಡೆಯರಿಗೆ ಪಟ್ಟಾಭಿಷೇಕವಾಯಿತು. ಈ ದೊರೆಗಳು ಮೂಕರು. ಇವರು ಇನ್ನೂ ಶೈಶವಾವಸ್ಥೆಯಲ್ಲಿದ್ದುದರಿಂದ, ಪ್ರಧಾನ ತಿರುಮಲಯ್ಯಂಗಾರ್ಯನೂ ದಳವಾಯಿ ಕಾಂತರಾಜಯ್ಯನೂ ರಾಜ್ಯದಾಡಳಿತವನ್ನು ನೋಡಿಕೊಳ್ಳುತ್ತಿದ್ದರು. ಕಾಂತರಾಜಯ್ಯನು ಚಿಕ್ಕಬಳ್ಳಾಪುರದ ಮುತ್ತಿಗೆಯಲ್ಲಿ ತೀರಿಹೋಗಲು, ಮಹಾರಾಜರು ಅವನ ಮೊಮ್ಮಗನಾದ ಬಸವರಾಜಯ್ಯನನ್ನು ಕರೆಯಿಸಿ, ಅವನಿಗೆ ದಳವಾಯಿ ಕೆಲಸವನ್ನು ಕೊಟ್ಟರು. ಅವನು ತನ್ನ ಅಜ್ಜನ ಸ್ಥಾನಕ್ಕೆ ಬಂದಬಳಿಕ, ತಿರುಗಿ ಚಿಕ್ಕಬಳ್ಳಾಪುರಕ್ಕೆ ಮುತ್ತಿಗೆ ಹಾಕಿದನು. ಅನೇಕ ದಿವಸಗಳವರೆಗೂ ಪ್ರಯಾಸಪಟ್ಟು ಕೊನೆಗೆ ವಿಕೃತಿನಾಮಸಂವತ್ಸರದ ಪುಷ್ಯ ಶುದ್ಧ ದ್ವಾದಶಿಯಲ್ಲಿ ಚಿಕ್ಕಬಳ್ಳಾಪುರದ ಕೋಟೆಯನ್ನು ಜಯಿಸಿದನು. ಆಗ ಅಲ್ಲಿಯ ಪಾಳೆಯಗಾರನಾಗಿದ್ದ ಬೈಚೇಗೌಡನು ಪೊಗದಿಯನ್ನು ಕೊಡುವಂತೆ ಒಪ್ಪಿಕೊಂಡನು.

ಈ ಮಧ್ಯೇ ದಕ್ಷಿಣದೇಶದಲ್ಲಿ ಮೊಗಲರಾಯರ ಅಧಿಕಾರಿಯಾಗಿದ್ದ ಸಾದುತ್ತುಲ್ಲಾಖಾನನು ಮೈಸೂರುದೇಶದ ಐಶ್ವರ್ಯಸಮೃದ್ಧಿಯನ್ನು ಕೇಳಿ, ದುರಾಶೆಯಿಂದ ಪ್ರೇರಿತನಾಗಿ ದಂಡೆತ್ತಿ ಬಂದನು. ಆಗ ಬಸವರಾಜಯ್ಯನು ಒಂದು ದೊಡ್ಡ ಸೇನೆಯನ್ನು ಕಟ್ಟಿಕೊಂಡು, ಬೆಂಗಳೂರಿಗೂ ಸೀರ್ಯಕ್ಕೂ ನಡುವೆ ಇದ್ದ ಬಯಲುಪ್ರದೇಶದಲ್ಲಿ ಅವನನ್ನು ತಡೆದನು. ಅಲ್ಲಿ ಕಠಿನವಾದ ಒಂದು ಕದನವು ನಡೆಯಿತು. ಯುದ್ಧದಲ್ಲಿ ಉಭಯ ಸೇನೆಗಳಲ್ಲಿಯೂ ಅನೇಕರು ಹತರಾದರು. ಈ ರೀತಿಯಾದ ಯುದ್ಧವು ನಡೆಯುತ್ತಿರಲು, ದಳವಾಯಿ ಬಸವರಾಜಯ್ಯನು ರಣಮತ್ತರಾದ ಕೆಲವರು ವೀರರನ್ನು ಕರೆದುಕೊಂಡು, ಜೀವದಾಸೆಯನ್ನು ತೊರೆದು ಶತ್ರುಗಳಮೇಲೆ ನುಗ್ಗಿದನು. ಒಡನೆಯೇ ಮೊಗಲರಾಯರ ವ್ಯೂಹವು ಚೆದರಿಹೋಯಿತು. ಅಸಂಖ್ಯಾತರಾದ ಶತ್ರುಭಟರು ಕೊಲ್ಲಲ್ಪಟ್ಟರು. ಆದರೆ ವಿಜಯಲಕ್ಷ್ಮಿಯು ಮೈಸೂರಿನವರಿಗೆ ಒಲಿದಳೆಂದು ಹೇಳುವಷ್ಟರೊಳಗೆ ಒಬ್ಬ ಮೊಗಲಾಯಿ ಸವಾರನು, ತಾನು ಹಿಡಿದಿದ್ದ ಬಲ್ಲೆಯದಿಂದ ಬಸವರಾಜಯ್ಯನ ಎದೆಯನ್ನು ಬಲವಾಗಿ ತಿವಿಯಲು, ಆ ರಭಸಕ್ಕೆ ಅವನು ಕುದುರೆಯಿಂದ ಕೆಳಗೆ ಬಿದ್ದನು. ಆಗ ಚಂಚಲೆಯಾದ ಜಯಶ್ರೀಯು ಮಹಾರಾಜರ ಪಕ್ಷವನ್ನು ಬಿಟ್ಟು ಸಾದುತ್ತುಲ್ಲಾಖಾನನ ಬೆನ್ನಹತ್ತಿದಳು. ಆಗ ಮೈಸೂರು ಸೈನಿಕರೆಲ್ಲರೂ ಮೊಗಲಾಯಿ ಸರದಾರನ ಅಧೀನರಾಗಬೇಕಾಗಿ ಬಂದಿತು. ಈ ಸಂದರ್ಭವನ್ನು ಕಂಡು ವಿವೇಕಿಗಳಾದ ಮಹಾರಾಜರು ಸಾದುತ್ತುಲ್ಲಾಖಾನನನ್ನು ಕರೆಯಿಸಿ ಸಂಧಿ ಮಾಡಿಕೊಂಡರು.

ಕಂಠೀರವ ಮಹಾರಾಜರು ೧೭೦೪ರಲ್ಲಿ ಕಾಲವಾಗಲು, ದೊಡ್ಡಕೃಷ್ಣರಾಜ ಒಡೆಯರು ಪಟ್ಟಕ್ಕೆ ಬಂದರು. ಇವರು ಸ್ವಸುಖದಲ್ಲಿಯೇ ಮಗ್ನರಾಗಿದ್ದ ಕಾರಣ, ರಾಜ್ಯದ ಆಡಳಿತವು ದಳವಾಯಿ ದೇವರಾಜಯ್ಯನ ಕೈಸೇರಿತು. ಈ ವಿಷಮಕಾಲದಲ್ಲಿ ಅರ್ಕಾಟಿನ ನವಾಬನೂ ಸೀರ್ಯದ ನವಾಬನೂ ಒಂದಾಗಿ ಬಂದು ಶ್ರೀರಂಗಪಟ್ಟಣವನ್ನು ಮುತ್ತಿದರು. ಆಗ ಮಹಾರಾಜರು ಒಂದು ಕೋಟಿ ರೂಪಾಯಿ ಕೊಟ್ಟು ಕಾಲು ಮಾಡಿಕೊಂಡರು. ಈ ಸಮಾಚಾರವು ಗತಾನುಗತಿಕವಾಗಿ ಮರಾಠೆಯವರಿಗೆ ತಿಳಿಯಲು, ಪೇಷ್ವೆ ಬಾಜೀರಾಯನೂ ಧನಾಕಾಂಕ್ಷೆಯಿಂದ ಪೀಡಿತನಾಗಿ ಒಂದು ದೊಡ್ಡ ಸೈನ್ಯದೊಡನೆ ಬಂದನು. ಆಗಲೂ ಬಹಳವಾಗಿ ಹಣಕೊಟ್ಟು ಸಂಧಿಮಾಡಿಕೊಳ್ಳಬೇಕಾಯಿತು. ಆದರೆ ಇಷ್ಟು ಹಣ ಕೈಬಿಟ್ಟು ಹೋದುದರಿಂದ, ದಳವಾಯಿ ದೇವರಾಜಯ್ಯನಿಗೆ ಅಪರಿಮಿತವಾದ ಮನೋವ್ಯಥೆಯು ಸಂಭವಿಸಿತು. ಬಳಿಕ ಅವನು ಮಾಗಡಿ ರಾಜ್ಯಕ್ಕೆ ಮುತ್ತಿಗೆಹಾಕಿ, ಅಲ್ಲಿಯ ಪಾಳೆಯಗಾರನಾದ ಕೆಂಪೇಗೌಡನನ್ನು ಕೈಸೆರೆ ಹಿಡಿದನು. ಆಗ ಅಲ್ಲಿ ಸಿಕ್ಕಿದ ಅಪರಿಮಿತೈಶ್ವರ್ಯದಿಂದ ಮೈಸೂರು ಭಂಡಾರವು ಪುನಃ ಪೂರಿತವಾಯಿತು.

ಹೀಗೆ ಮಾತ್ಸ್ಯನ್ಯಾಯದಂತೆ ಪ್ರಬಲರು ದುರ್ಬಲರನ್ನು ಹಿಂಸಿಸುತ್ತಿರುವಾಗ, ದೊಡ್ಡಕೃಷ್ಣರಾಜ ಒಡೆಯರು ಕಾಲವಾದರು. ಬಳಿಕ ರಾಜ್ಯಕ್ಕೆ ಅರ್ಹರು ಯಾರೂ ಇಲ್ಲದಂತಾಯಿತು. ಆಗ ದಳವಾಯಿ ದೇವರಾಜಯ್ಯನೂ ಸರ್ವಾಧಿಕಾರಿ ನಂಜರಾಜಯ್ಯನೂ ಆಲೋಚಿಸಿ, ಅಂಕನಹಳ್ಳಿ ಚಾಮೇಅರಸಿನವರಿಗೆ ಪಟ್ಟಗಟ್ಟಿದರು. ಇವರು ಚಾಮರಾಜ ಒಡೆಯರೆಂಬ ಹೆಸರಿನಿಂದ ಸಿಂಹಾಸನಕ್ಕೆ ಬಂದು ಹದಿನೆಂಟು ತಿಂಗಳು ರಾಜ್ಯಭಾರವನ್ನು ಮಾಡಿದರು. ದಳವಾಯಿ ದೇವರಾಜಯ್ಯನು ಮಹಾರಾಜರನ್ನು ಉತ್ಸವವಿಗ್ರಹವಾಗಿ ಕುಳ್ಳಿರಿಸಿ, ಸಕಲ ಸೌಭಾಗ್ಯಗಳನ್ನೂ ತಾನೇ ಅನುಭವಿಸ ತಾರಂಭಿಸಿದನು. ಇದು ಮಹಾರಾಜರ ಮನಸ್ಸಿಗೆ ರುಚಿಸಲಿಲ್ಲ. ಈ ಕಾರಣದಿಂದ ದಳವಾಯಿ ದೇವರಾಜಯ್ಯನಿಗೂ ಮಹಾರಾಜರಿಗೂ ಮನಸ್ತಾಪ ಹುಟ್ಟಿತು. ಆಗ ಇವನು ಚಾಮರಾಜರನ್ನೂ ಅವರ ಪತ್ನಿಯರನ್ನೂ ಕೈಸೆರೆ ಹಿಡಿದು ಕಬ್ಬಾಳ ದುರ್ಗಕ್ಕೆ ಕಳುಹಿಸಿ ಕಾರಾಗೃಹದಲ್ಲಿಡಿಸಿದನು. ಅವರ ಜೀವನ ಲೀಲೆಯು ಅಲ್ಲೇ ಮುಗಿದುಹೋಯಿತು. ಚಾಮರಾಜ ಒಡೆಯರವರು ಮೃತಿಯನ್ನು ಹೊಂದಿದ ಬಳಿಕ, ಚಿಕ್ಕನಹಳ್ಳಿ ಚಾಮೇಅರಸಿನವರ ಮಕ್ಕಳಿಗೆ ಪಟ್ಟವನ್ನು ಕಟ್ಟಿದರು. ಆಗ ಅವರಿಗೆ ಆರು ವರುಷ ವಯಸ್ಸು. ಅವರೇ ಇಮ್ಮಡಿ ಕೃಷ್ಣರಾಜ ಒಡೆಯರು. ಈ ಸಂದರ್ಭದಲ್ಲಿ ದಳವಾಯಿ ದೇವರಾಜಯ್ಯ, ಸರ್ವಾಧಿಕಾರಿ ನಂಜರಾಜಯ್ಯ—ಇವರ ದುಷ್ಕೃತಿಯನ್ನು ಕೇಳುವವರೇ ಇಲ್ಲದಂತಾಯಿತು.

ಮೈಸೂರಿನ ಅಪರಿಮಿತವಾದ ಐಶ್ವರ್ಯವು ಕೈಸೇರಿದರೂ, ಅರ್ಕಾಟ್ ನವಾಬನ ದುರಾಶೆಯು ಅಡಗಲಿಲ್ಲ. ತಿರುಗಿ ಅವನ ಕಣ್ಣು ಮೈಸೂರಿನ ಮೇಲೆ ಬಿದ್ದಿತು. ೧೭೩೭ನೆಯ ಇಸವಿಯಲ್ಲಿ ಅವನು ಒಂದು ದೊಡ್ಡ ಪಡೆಯನ್ನು ಕಳುಹಿ

ಸಿದನು. ಈ ಹೌಜಿಗೂ ಮೈಸೂರು ಸೈನ್ಯಕ್ಕೂ ಚೆನ್ನಪಟ್ಟಣದ ಬಳಿ ಘೋರವಾ ಯುದ್ಧವು ನಡೆಯಿತು. ಪ್ರಥಮ ಯುದ್ಧದಲ್ಲಿ ತನಗೆ ಜಯವಾದಂತೆ ಈಗಲೂ ಆಗು ವೆಂದು ನವಾಬನು ನಂಬಿದ್ದನು. ಆದರೆ ಹಾಗಾಗದೆ ವಿಜಯಲಕ್ಷ್ಮಿಯು ಮೈಸೂರ ರಾಜರನ್ನು ಸೇರಿದಳು. ಈ ಯುದ್ಧವಾದ ಕೆಲವು ದಿವಸಗಳಮೇಲೆ ಸರ್ವಾಧಿಕಾ ನಂಜರಾಜಯ್ಯನು ಕಾಲವಾದನು. ಅವನು ಅವಸಾನಕಾಲದಲ್ಲಿ ತನ್ನ ಆಸ್ತಿಯನ್ನೇ ಲೆಕ್ಕಾಚಾರಮಾಡಿಸಲು, ಎಂಟು ಲಕ್ಷ ರೂಪಾಯಿ ಅನ್ಯಾಯಾರ್ಜಿತವೆಂದು ಗೊತ್ತಾಯಿತು. ಅದನ್ನೆಲ್ಲ ಆತನು ಅರಮನೆಗೆ ಸೇರಿಸಿ ಮರಣವನ್ನೈದಲು, ಅವ ಕೆಲಸವು ದೇವರಾಜಯ್ಯನ ತಮ್ಮನಾದ ಕರಾಚೂರಿ ನಂಜರಾಜಯ್ಯನಿಗೆ ಆಯಿತು.

ಇಷ್ಟರಲ್ಲಿ ಹೈದರಾಬಾದ್ ರಾಜ್ಯದ ನಿಜಾಮುಲ್‌ಮುಲ್ಕನು ಮೈಸೂರು ಸಂಸ್ಥಾನದಿಂದ ಕಪ್ಪವನ್ನು ವಸೂಲ್ಮಾಡಿಕೊಂಡು ಬರುವಂತೆ ತನ್ನ ಮಗನಾದ ನಾಜರ್ ಜಂಗನನ್ನು ಕಳುಹಿಸಿದನು. ನಾಜರನ ಸೈನ್ಯವು ಶ್ರೀರಂಗಪಟ್ಟಣದ ಸಮೀಪಕ್ಕೆ ಬರುತ್ತಲೇ, ದೇವರಾಜಯ್ಯನು ಸಂಧಿಮಾಡಿಕೊಳ್ಳುವುದೇ ಯುಕ್ತವೆಂದೆಣಿಸಿ ಕೊಡಬೇಕಾದ ಕಪ್ಪವನ್ನು ಕೊಟ್ಟು ಕಳುಹಿಸಿದನು. ಹೀಗಿರಲು, ೧೭೪೯ರಲ್ಲಿ ಕರಾಚೂರಿ ನಂಜರಾಜಯ್ಯನು ದೇವನಹಳ್ಳಿಗೆ ಮುತ್ತಿಗೆ ಹಾಕಿದನು. ಈ ಮುತ್ತಿಗೆಯಲ್ಲಿ ಪ್ರಸಿದ್ಧನಾದ ಹೈದರನು ಉಮೇದುವಾರನಾಗಿ ಸೇರಿ, ಸಾಹಸದಿಂದಲೂ ಧೈರ್ಯದಿಂದಲೂ ಯುದ್ಧಮಾಡಿ, ತನ್ನ ಶಕ್ತಿಸಾಹಸಗಳನ್ನು ಪ್ರದರ್ಶನಪಡಿಸಿದನು. ಈ ಸಂದರ್ಭದಲ್ಲಿ ಈ ಶೂರನ ಜೀವನ ಚರಿತ್ರೆಯನ್ನು ಸಂಕ್ಷೇಪವಾಗಿ ತಿಳಿಸುವುದು ಆವಶ್ಯಕವೆಂದು ತೋರುವುದು.

ಹೈದರನ ಹಿರಿಯರು ಪೂರ್ವದಲ್ಲಿ ಅರಬ್ಬಿಸ್ಥಾನದಿಂದ ಈ ದೇಶಕ್ಕೆ ಬಂದಂತೆ ತೋರುತ್ತದೆ. ಕ್ರಿ. ಶ. ೧೬೩೦ನೆಯ ವರುಷದಲ್ಲಿ ಮಹಮದ್ ಬಿಲೋಲೆ ಎಂಬವನು ಮಹಮ್ಮದಲ್ಲಿ ಮತ್ತು ಮಹಮ್ಮದ್‌ವಾಲಿ ಎಂಬ ತನ್ನ ಇಬ್ಬರು ಮಕ್ಕಳನ್ನು ಕರೆದುಕೊಂಡು ಪಂಜಾಬ್‌ದೇಶದಿಂದ ಹೊರಟುಬಂದು, ಕಲ್ಬುರ್ಗಿಯ ಬಳಿಯಲ್ಲಿದ್ದ ಆಲಂದ್ ಎಂಬ ಸ್ಥಳದಲ್ಲಿ ಒಂದು ಮಕಾನ್ ಮಾಡಿಕೊಂಡು ಫಕೀರನಾಗಿದ್ದನು. ಹೀಗಿರುವಲ್ಲಿ, ಅವನ ಮಕ್ಕಳಿಬ್ಬರಿಗೂ ಮದುವೆಯಾಗಿ ಸಂಸಾರವು ದೊಡ್ಡದಾದಕಾರಣ, ಎಷ್ಟು ಕಷ್ಟಪಟ್ಟರೂ ಕುಟುಂಬ ಭರಣವೇ ದುಸ್ತರವಾದುದರಿಂದ, ಜೀವನಾರ್ಥಿಗಳಾಗಿ ಸ್ವದೇಶವನ್ನು ಬಿಟ್ಟು, ಬೇರೆಬೇರೆ ದೇಶಗಳಲ್ಲಿ ತಮಗನುಕೂಲವಾದ ಕೆಲಸಗಳನ್ನು ಹುಡುಕುತ್ತಾ, ಸೀರ್ಯಕ್ಕೆ ಬಂದು ಅವರು ತೆರಿಗೆಯ ವಸೂಲೀ ಕೆಲಸದಲ್ಲಿ ಸೇರಿಕೊಂಡರು. ಕೆಲವು ದಿವಸಗಳಾದ ಬಳಿಕ, ಸರ್ಕಾರದ ಕೆಲಸದಮೇಲೆ ಸಹೋದರರಿಬ್ಬರೂ ಕೋಲಾರಕ್ಕೆ ಬಂದರು. ಕೋಲಾರದಲ್ಲಿ ಹಿರಿಯವನಾದ ಮಹಮ್ಮದಲ್ಲಿಯು ತೀರಿಹೋಗಲು, ಕಿರಿಯವನಾದ ಮಹಮ್ಮದ್‌ವಾಲಿಯು ಅಣ್ಣನ ಆಸ್ತಿಯನ್ನೆಲ್ಲ ತಾನೇ ಆಕ್ರಮಿಸಿಕೊಂಡು, ಅವನ ಹೆಂಡತಿಯನ್ನೂ ಮಗನಾದ ಫತ್ತೇಮಹಮ್ಮದನನ್ನೂ ಹೊರಗೆ ಹೊರಡಿಸಿದನು. ಇವರ ದುರವಸ್ಥೆಯನ್ನು ನೋಡಿ ಕನಿಕರಗೊಂಡ ಒಬ್ಬ ಸೇನಾ

ನಾಯಕನು, ಇವರನ್ನು ತನ್ನ ಪೋಷಣೆಯಲ್ಲಿಟ್ಟುಕೊಂಡು ಸಲಹಿ, ಫತ್ತೇಮಹಮ್ಮದನಿಗೆ ಸಂಯಾದ ವಯಸ್ಸು ಬಂದೊಡನೆಯೇ ತನ್ನ ಫೌಜಿನಲ್ಲಿ ಒಂದು ಸಿಪಾಯಿ ಕೆಲಸವನ್ನು ಕೊಟ್ಟನು. ೧೭೨೦ನೆಯ ಇಸವಿಯಲ್ಲಿ ಸೀರ್ಯದ ಸುಬೇದಾರನಾಗಿದ್ದ ದುರ್ಗಾಕೂಲಿಖಾನನು, ಶಂಜಿಕೋಟೆಯ ಪಾಳೆಯಗಾರನಮೇಲೆ ದಂಡೆತ್ತಿ ಹೊರಟನು. ಆಗ ಫತ್ತೇಮಹಮ್ಮದನು ಆ ಯುದ್ಧದಲ್ಲಿ ಬಹಳ ಸಾಹಸವನ್ನು ತೋರಿಸಿದುದರಿಂದ, ಅವನಿಗೆ ಸೈನ್ಯದಲ್ಲಿ ನಾಯಕ ಕೆಲಸವಾಯಿತು. ಹೀಗೆಯೇ ಕೆಲವು ದಿವಸಗಳಲ್ಲಿ ಫತ್ತೇಮಹಮ್ಮದನಿಗೆ ಅದೃಷ್ಟಲಕ್ಷ್ಮಿಯು ಒಲಿದು, ಬೂದಿಕೋಟೆಯು ಜಹಗೀರಿಯಾಗಿ ಬಂದಿತು. ಅವನ ಹೆಂಡತಿಯು ಮೂರು ಮಂದಿ ಗಂಡು ಮಕ್ಕಳನ್ನು ಹೆತ್ತಳು. ಕಡೆಗೆ ಅವನಿಗೆ ಕೋಲಾರದ ಫೌಜುದಾರಿ ಕೆಲಸವೂ ಆಯಿತು. ಫತ್ತೇಮಹಮ್ಮದನಿಗೆ ಪತ್ನೀವಿಯೋಗವುಂಟಾಗಲು, ಅವನು ನವಾಯತ್ ಮುಸಲ್ಮಾನರ ಒಬ್ಬ ಹೆಂಗಸನ್ನು ವಿವಾಹ ಮಾಡಿಕೊಂಡನು. ಇವಳಿಗೆ ಇಬ್ಬರು ಗಂಡುಮಕ್ಕಳು ಹುಟ್ಟಿದರು. ಇವರಲ್ಲಿ ಎರಡನೆಯವನೇ ಪ್ರಖ್ಯಾತನಾದ ಹೈದರನು. ಇವನು ೧೭೨೨ನೆಯ ಇಸವಿಯಲ್ಲಿ ಹುಟ್ಟಿದನು. ಇವನಿಗೆ ಏಳು ವರುಷ ತುಂಬುವುದರೊಳಗೆ ಇವನ ತಂದೆಯಾದ ಫತ್ತೇಮಹಮ್ಮದನು ಯುದ್ಧರಂಗದಲ್ಲಿ ಹತನಾದನು. ಬಾಲ್ಯದಲ್ಲಿಯೇ ತಂದೆಯು ಕಾಲವಾದಕಾರಣ, ಹೈದರನಿಗೆ ವಿದ್ಯಾಭ್ಯಾಸ ಮಾಡಲವಕಾಶವಿಲ್ಲವಾಯಿತು. ಸುಪ್ರಸಿದ್ಧನಾದ ಶಿವಾಜಿಯಂತೆಯೇ ಇವನಿಗೂ ಓದುಬರೆಹಗಳು ಬರುತ್ತಿರಲಿಲ್ಲ. ಆದರೂ ಶಿವಾಜಿಯಂತೆಯೇ ಇವನ ಗ್ರಹಣಶಕ್ತಿಯೂ ವಿಚಾರಬುದ್ಧಿಯೂ ಗುಣದೋಷ ಶೋಧಕ ಬುದ್ಧಿಯೂ ಊಹಾಪೋಹ ಶಕ್ತಿಯೂ ಎಂತಹ ವಿದ್ವಾಂಸರನ್ನೂ ಅಚ್ಚರಿಗೊಳಿಸುತ್ತಿದ್ದುವು. ಹೀಗಿರುವಲ್ಲಿ, ಆಗ ದೊಡ್ಡಬಳ್ಳಾಪುರದ ಜಹಗೀರ್‌ದಾರನಾಗಿದ್ದ ಅಬ್ಬಾಸ್‌ಕೂಲಿಖಾನನು ಫತ್ತೇಮಹಮ್ಮದನು ತನ್ನಲ್ಲಿ ಮಾಡಿದ್ದ ಸಾಲವನ್ನು ತೀರಿಸಬೇಕೆಂದು ಅವನ ಸಂತತಿಯನ್ನು ತಗಾದೆ ಮಾಡಲಾರಂಭಿಸಿ, ಅವಳ ಇಬ್ಬರು ಮಕ್ಕಳನ್ನೂ ಹಿಡಿದು ಬಗೆಬಗೆಯಾಗಿ ಹಿಂಸೆಮಾಡುತ್ತಿದ್ದನು. ಕಡೆಗೆ ಫತ್ತೇಮಹಮ್ಮದನ ಹೆಂಡತಿಯು ಈ ಹಿಂಸೆಯನ್ನು ನೋಡಿ ಸಹಿಸಲಾರದೆ, ಬೆಂಗಳೂರಿನಲ್ಲಿದ್ದ ತನ್ನ ತಮ್ಮ ಇಬ್ರಾಹಿಂಖಾನನ ಮರೆಹೊಕ್ಕು, ಮೈಸೂರು ಸಂಸ್ಥಾನದಿಂದ ಹಣವನ್ನು ಸಾಲವಾಗಿ ತೆಗೆದುಕೊಂಡುಬಂದು, ಅಬ್ಬಾಸ್‌ಕೂಲಿಖಾನನ ಸಾಲವನ್ನು ತೀರಿಸಿದ ಬಳಿಕ, ಆ ತಮ್ಮನ ಪೋಷಣೆಯಲ್ಲಿಯೇ ನಿಂತುಕೊಂಡಳು. ಮಕ್ಕಳು ದೊಡ್ಡವರಾಗಲು, ಹಿರಿಯವನಿಗೆ ಮೈಸೂರು ಸಂಸ್ಥಾನದಲ್ಲಿ ಒಂದು ಕೆಲಸವು ಸಿಕ್ಕಿತು. ಹೈದರನಿಗೆ ಯಾವ ಕೆಲಸವೂ ದೊರೆಯಲಿಲ್ಲವಾದುದರಿಂದ, ಅವನು ದೇವನಹಳ್ಳಿಯ ಮುತ್ತಿಗೆಯಲ್ಲಿ ಉಮೇದುವಾರನಾಗಿ ಸೇರಿಕೊಂಡನು.

ಈ ರೀತಿಯಲ್ಲಿ ಹೈದರನು ಮೈಸೂರು ಪ್ರಭುಗಳ ಕೈಕೆಳಗೆ ಅಲ್ಪವೇತನಕ್ಕೆ ಸೇರಿಕೊಂಡು, ಆ ಪ್ರಭುಗಳ ಆಶ್ರಯಬಲದಿಂದಲೂ ತನ್ನ ಶಕ್ತಿಸಾಹಸಗಳಿಂದಲೂ ವೃದ್ಧಿಯನ್ನೈದುತ್ತಿದ್ದನು. ಇಷ್ಟರಲ್ಲಿ, ಹೈದರಾಬಾದ್ ರಾಜ್ಯದ ನಿಜಾಮನಾದ

ನೈಜಾಮುಲ್‌ಮುಲ್ಕನು ಸಾಯಲು, ಅವನ ಕಿರಿಯ ಮಗನಾದ ನಾಜರ್‌ಜಂಗನಿಗೂ ಮೊಮ್ಮಗನಾದ ಮುಜಫರ್‌ಜಂಗನಿಗೂ ಸಿಂಹಾಸನಕ್ಕಾಗಿ ಜಗಳ ಹುಟ್ಟಿತು. ನಾಜರನು ತನ್ನ ಸಹಾಯಕ್ಕೆ ಹೈದರನನ್ನು ಕರೆದನು. ಹೈದರನು ಅವನ ಕಾರ್ಯವನ್ನು ಸಾಧಿಸಿಕೊಟ್ಟು ಅವನಿಂದ ಬಹಳ ಪ್ರಯೋಜನವನ್ನು ಹೊಂದಿದನು. ಸಮರ್ಥನಾದ ಹೈದರನು ಯಾವ ಯುದ್ಧಕ್ಕೆ ಹೋದರೂ ವಿಜಯಲಕ್ಷ್ಮಿಯು ಅವನಿಗೆ ಒಲಿಯುತ್ತಿದ್ದಳು. ಆ ಕಾಲದಲ್ಲಿ ರಾಜ್ಯಸಂಪಾದನೋತ್ಸುಕರಾಗಿ ಹೊರಟ ಇಂಗ್ಲಿಷ್ ಮತ್ತು ಮರಾಟೆ ಸರದಾರರಿಗೆ ಹೈದರನು ವಿನಾ ಮತ್ತಾರೂ ಪ್ರತಿಘಟಿಸತಕ್ಕವರಿಲ್ಲದೆ ಹೋದರು. ಪ್ರಖ್ಯಾತವಾದ ಮೊಗಲಾಯಿ ಚಕ್ರಾಧಿಪತ್ಯವೂ ಕೂಡ ಆಗ ಕ್ಷೀಣಾವಸ್ಥೆಯಲ್ಲಿದ್ದಿತು. ಆದರೆ ಗಿಡದಿಂದ ಕಡಿದು ತಂದು ನೆಟ್ಟ ಆಲದ ಕೊಂಬೆಯು ಬಿಗುರಿ ಸ್ವೇಚ್ಛೆಯಾಗಿ ಬೆಳೆಯುವಂತೆ, ಹೈದರನ ಪ್ರಾಬಲ್ಯವು ಎಲ್ಲೆಲ್ಲಿಯೂ ಹೆಚ್ಚಿತು. ಅವನು ದಂಡಯಾತ್ರೆಗಳಲ್ಲಿ ನಿಪುಣನೆಂದು ಜಗದ್ವಿಖ್ಯಾತನಾದನು. ಇವನನ್ನು ಎದುರಿಸಿದ ಅರಸರು ಗರುಡನನ್ನು ಪ್ರತಿಭಟಿಸಿದ ಕ್ಷುದ್ರ ಸರ್ಪಗಳಂತಾಗುತ್ತಿದ್ದರು. ಇವನ ಹೆಸರನ್ನು ಹೇಳಿದರೆ, ಶತ್ರುಗಳಿಗೆ ಹೃದಯಕಂಪನವುಂಟಾಗುತ್ತಿದ್ದಿತು. ಹೀಗೆ ಹೈದರನು ವೃದ್ಧಿಯನ್ನೈದುತ್ತ, ಕಡೆಗೆ ಸ್ವಸ್ವಾಮಿಪದವನ್ನೇ ಆಕ್ರಮಿಸುತ್ತ ಬಂದನು. ಇವನ ಕಾಲಕ್ಕೆ ಮೈಸೂರು ರಾಜ್ಯವು ಕೃಷ್ಣಾನದಿಯವರೆಗೂ ವಿಸ್ತರಿಸಿತು. ಅಂತೂ ಇಂತು ಬಹುಕಾಲದವರೆಗೆ ಪೂರ್ವಪಶ್ಚಿಮ ಸಮುದ್ರಗಳ ಮಧ್ಯದ ಭೂಭಾಗದಲ್ಲಿ ಹೈದರನಿಗೆ ಯಾರೂ ಪ್ರತಿಘಟಿಸುವವರಿಲ್ಲದೆ ಹೋದರು.

ಯಾವ ಯದುವಂಶವೆಂಬ ಮುಕ್ತಾಹಾರದಲ್ಲಿ ವಿಖ್ಯಾತರಾದ ರಾಜಒಡೆಯರೂ ರಣಧೀರಕಂಠೀರವನೆಂದು ಖ್ಯಾತಿಗೊಂಡ ನರಸರಾಜ ಒಡೆಯರೂ, ಜಗದೇವರಾಯನೆಂಬ ಬಿರುದನ್ನು ಪಡೆದ ಚಿಕ್ಕದೇವರಾಜ ಒಡೆಯರೂ, ನಾಯಕರತ್ನಗಳಂತೆ ಮೆರೆದಿರುವರೋ, ಅಂತಹ ಪರಂಪರೆಯಲ್ಲಿ ಪ್ರಾದುರ್ಭವಿಸಿದ ಇಮ್ಮಡಿ ಕೃಷ್ಣರಾಜ ಒಡೆಯರವರು, ತಮ್ಮ ಹಿರಿಯರ ದಿಗಂತವಿಶ್ರಾಂತವಾದ ಕೀರ್ತಿಪ್ರತಾಪ ಗೌರವಗಳಿಗೆ ಕಿಲುಬು ಹತ್ತಿಕೊಳ್ಳಲವಕಾಶವಾಗುವಂತೆ, ತಮ್ಮಾಶ್ರಯಬಲದಿಂದ ತಲೆಯೆತ್ತಿದ ತುರುಕರಿಗೆ ಅಧೀನರಾಗಿ, ಹಿಮಸಂಕುಚಿತ ಕಮಲದಂತೆ ಶ್ರೀರಂಗಪಟ್ಟಣದ ಕಾರಾಗಾರದಲ್ಲಿ ಕಠಿನ ದುರವಸ್ಥೆಯನ್ನನುಭವಿಸುತ್ತ ಕಾಲವನ್ನು ಕಳೆದು ಕಾಲವಶರಾದರು. ಇಮ್ಮಡಿ ಕೃಷ್ಣರಾಜ ಒಡೆಯರು ಕಾಲವಾದಮೇಲೆ, ಹೈದರನು ಅವರ ಮಕ್ಕಳಾದ ನಂಜರಾಜ ಒಡೆಯರಿಗೆ ನಾಮಮಾತ್ರಕ್ಕೆ ಪಟ್ಟವನ್ನು ಕಟ್ಟಿ, ಅರಮನೆಯಲ್ಲಿದ್ದ ಅವರ ಐಶ್ವರ್ಯವನ್ನೆಲ್ಲ ದೋಚಿಕೊಂಡನು. ಇಲ್ಲಿಂದ ಮುಂದೆ ರಾಜ್ಯವೆಲ್ಲ ಮುಸಲ್ಮಾನರ ವಶವಾಯಿತು. ಸುಮಾರು ಮುನ್ನೂರ ಅರುವತ್ತು ವರುಷಗಳವರೆಗೆ ಸ್ವಾತಂತ್ರ್ಯಕ್ಕೂ ಗೌರವಕ್ಕೂ ಚಿಹ್ನವಾಗಿದ್ದ ಮೈಸೂರು ರಾಜವಂಶದ ವಿಜಯಪತಾಕೆಯು ಮುರಿದು, ರಾಜ್ಯವು ಮುಸಲ್ಮಾನರ ಹಾವಳಿಗೊಳಗಾಯಿತು.

ಈ ರೀತಿಯಾಗಿ ಕೆಲವು ದಿವಸಗಳು ಕಳೆದುವು. ನಾಮಮಾತ್ರಕ್ಕೆ ಮಹಾರಾಜರಾಗಿದ್ದ ನಂಜರಾಜ ಒಡೆಯರ ಸಹಾಯಸಂಪತ್ತಿಗಳೆಲ್ಲವೂ ಕಣ್ಮರೆಯಾದುವು

ಅವರ ಕಷ್ಟಗಳು ದಿನೇದಿನೇ ಹೆಚ್ಚಿದುವು. ಮಹಾರಾಜರು ಮಾತಾಡುವುದೇ ತಪ್ಪಾಗುತ್ತ ಬಂದಿತು. ಅವರು ಮರಾಟೆ ಸರದಾರನಾದ ತ್ರಿಯಂಬಕಮಾಮನೊಡನೆ ಮಾತನಾಡಿ ತಂತ್ರಮಾಡಿದರೆಂದು ತಪ್ಪುಹೊರಿಸಿ, ಹೈದರನು ಅವರನ್ನು ಕೊಲ್ಲಿಸಿ ಅವರ ತಮ್ಮಂದಿರಾದ ಬೆಟ್ಟದ ಚಾಮರಾಜ ಒಡೆಯರನ್ನು ಪಟ್ಟಕ್ಕೆ ತಂದನು. ಇವರು ಸಿಂಹಾಸನಕ್ಕೆ ಬಂದ ಕೆಲವುಕಾಲ ಮಾತ್ರ ಸುಖವಾಗಿದ್ದರು. ಕಡೆಗೆ ಇವರಿಗೂ ಇವರಣ್ಣಂದಿರ ಗತಿಯೇ ಪ್ರಾಪ್ತವಾಯಿತು.

ನಂಜರಾಜ ಒಡೆಯರೂ ಬೆಟ್ಟದ ಚಾಮರಾಜ ಒಡೆಯರೂ ಬ್ರಹ್ಮಚರ್ಯದಲ್ಲಿಯೇ ತೀರಿಹೋದರು. ಬಳಿಕ ಇಮ್ಮಡಿ ಕೃಷ್ಣರಾಜ ಒಡೆಯರ ಪತ್ನಿಯವರಾದ ಲಕ್ಷ್ಮಮ್ಮಣ್ಣಿಯವರು ತಮ್ಮ ದೌಹಿತ್ರನಿಗೆ ರಾಜ್ಯಾಭಿಷೇಕವನ್ನು ಮಾಡಬೇಕೆಂದು ಹೇಳಿದರು. ಆದರೆ ಹೈದರನು ಅದಕ್ಕೆ ಒಪ್ಪದೆ ಬಲಾತ್ಕಾರವಾಗಿ ತನ್ನ ಮನಸ್ಸಿನಂತೆಯೇ ಪುತ್ರಸ್ವೀಕಾರ ಮಾಡಿಸಿದನು. ಅವನು ಮಹಾರಾಣಿಯವರಿಗೆ ಸ್ವೀಕಾರಮಾಡಿಸಿದ ಕಥೆಯು ಅತಿ ವಿಚಿತ್ರವಾಗಿರುವುದು. ಒಂದು ದಿನ ಹೈದರನು ಗ್ರಾಮಾಂತರಗಳಲ್ಲಿದ್ದ ಅರಸುಮಕ್ಕಳನ್ನೆಲ್ಲ ಕರೆಯಿಸಿ, ತನ್ನರಮನೆಯಲ್ಲಿ ಒಂದು ಕಡೆಯಲ್ಲಿ ಹುಡುಗರಿಗೆ ಇಷ್ಟವಾದ ತಿಂಡಿಯ ಪದಾರ್ಥಗಳನ್ನೂ, ಇನ್ನೊಂದು ಕಡೆಯಲ್ಲಿ ಆಟದ ಸಾಮಾನುಗಳನ್ನೂ, ಮತ್ತೊಂದು ಕಡೆಯಲ್ಲಿ ಒಂದು ಕಠಾರಿಯನ್ನೂ, ನಿಂಬೆಯ ಹಣ್ಣನ್ನೂ ಇಡಿಸಿ ಹುಡುಗರನ್ನೆಲ್ಲ ಕರೆದು, ಈ ಕೊಠಡಿಯಲ್ಲಿರುವ ಪದಾರ್ಥಗಳಲ್ಲಿ ಬೇಕಾದುದನ್ನು ನಿರ್ಭಯವಾಗಿ ತೆಗೆದುಕೊಳ್ಳಬಹುದೆಂದು ಹೇಳಿದನು. ಆಗ ಆ ಹುಡುಗರಲ್ಲಿ ಕೆಲವರು ಫಲಗಳನ್ನೂ ಕೆಲವರು ಆಟದ ಸಾಮಾನುಗಳನ್ನೂ ತೆಗೆದುಕೊಂಡು ಆನಂದಿಸಿದರು. ಈ ಅದೃಷ್ಟಪರೀಕ್ಷೆಯಲ್ಲಿ ಅರಿಕುಠಾರದ ದೇವರಾಜ ಅರಸಿನವರ ಮಕ್ಕಳು ಅಲ್ಲಿರಿಸಿದ್ದ ಕಠಾರಿಯನ್ನೂ ಒಂದು ನಿಂಬೆಯ ಹಣ್ಣನ್ನೂ ತೆಗೆದುಕೊಂಡರು. ಒಡನೆಯೇ ಹೈದರನು ಆ ಬಾಲಕನನ್ನೇ ಮಹಾರಾಜ್ಞಿ ಲಕ್ಷ್ಮಮ್ಮಣ್ಣಿಯವರಿಗೆ ಸ್ವೀಕಾರಮಾಡಿಸತಕ್ಕದೆಂದು ನಿಶ್ಚಯಿಸಿ, ಅಲ್ಲಿದ್ದವರಿಗೆ ತಾನು ಮಾಡಿದ ಅದೃಷ್ಟಪರೀಕ್ಷೆಯ ಉದ್ದೇಶವನ್ನೂ ಅರ್ಥವನ್ನೂ ತಿಳಿಯಪಡಿಸಿ, ಆ ಬಾಲಕನಕಡೆ ತಿರುಗಿ, "ಶಹಬಾಸ್! ಇವರೇ ರಾಜರು. ಇವರು ಮೊದಲು ಕಠಾರಿಯನ್ನು ತೆಗೆದುಕೊಂಡುದರಿಂದ, ತಾವು ರಾಜಪ್ರತಾಪಶಾಲಿಯೆನ್ನಿಸಿಕೊಂಡು ಪ್ರಜಾಪಾಲನವನ್ನು ಮಾಡುವುದಕ್ಕೆ ಸಮರ್ಥರೆಂಬ ಅಭಿಪ್ರಾಯವನ್ನೂ, ಬಳಿಕ ನಿಂಬೆಯಹಣ್ಣನ್ನು ಪರಿಗ್ರಹಿಸಿದುದರಿಂದ, ಈ ದೇಶದ ಭೂಮ್ಯುತ್ಪತ್ತಿಯನ್ನು ಅಭಿವೃದ್ಧಿಮಾಡುವುದೇ ತಮ್ಮ ದ್ವಿತೀಯ ಕರ್ತವ್ಯವೆಂಬ ಉದ್ದೇಶವನ್ನೂ ಈಗ ಸೂಚಿಸಿದಂತಾಯಿತು. ನಿಜವಾಗಿ ರಾಜಪದವಿಗೆ ಯೋಗ್ಯರಾದವರು ಇವರೇ ಸರಿ" ಎಂದು ನುಡಿದು, ಆ ಬಾಲಕನನ್ನು ಆಲಿಂಗನೆ ಮಾಡಿಕೊಂಡನು. ಬಳಿಕ ಹಿಂದೂ ಶಾಸ್ತ್ರವಿಧಿಗನುಸಾರವಾಗಿ ಆ ಮಗುವನ್ನೇ ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರಿಗೆ ಸ್ವೀಕಾರಮಾಡಿಸಿ ಪಟ್ಟವನ್ನು ಕಟ್ಟಿದನು. ಈ ಮಗುವೇ ಖಾಸಾ ಚಾಮರಾಜ ಒಡೆಯರವರು.

ಚಾಮರಾಜರ ಪಟ್ಟಾಭಿಷೇಕವಾಗಿ ಕೆಲವು ವರುಷಗಳು ಕಳೆದಬಳಿಕ, ರಾಜ್ಯ ಸಂಪಾದನೆಯನ್ನು ಮಾಡಿ ವಿಖ್ಯಾತಿಗೊಂಡ ಹೈದರನು, ಆರ್ಕಾಟಿಗೆ ಮುತ್ತಿಗೆ ಹಾಕಿದ್ದಾಗ ಬೆನ್ನುಫಣಿಯೆದ್ದು ಮೃತನಾದನು. ಇವನು ವಿದ್ಯಾವಿಹೀನನು, ಸ್ವೇಚ್ಛಾಚಾರಿ; ಆದರೆ ಅನುಸರಣೆ, ಆಪತ್ಕಾಲದಲ್ಲಿ ಧೈರ್ಯ, ರಾಜಕಾರ್ಯಗಳಲ್ಲಿ ಒಳ್ಳೆಯ ಆಲೋಚನೆ- ಇವುಗಳು ಈತನ ಮುಖ್ಯ ಗುಣಗಳು. ಹೈದರನ ಮರಣಾನಂತರದಲ್ಲಿ ಅವನ ಪುತ್ರನಾದ ಟೀಪೂಸುಲ್ತಾನನು ಸ್ವಯಂ ರಾಜನಾಗಿ ಶ್ರೀರಂಗಪಟ್ಟಣದಲ್ಲಿ ಕಾಲೂರಿ ನಿಂತನು. ಇವನಲ್ಲಿ ಹಿಂದೂಮತ ದ್ವೇಷವೂ ಸ್ವಮತ ಪಕ್ಷಪಾತವೂ ತುಂಬಿದ್ದುವು. ಇವನೂ ತನ್ನ ತಂದೆಯ ಹಜ್ಜೆಯನ್ನೇ ಹಿಡಿದು, ಇಂಗ್ಲಿಷರೊಡನೆಯೂ ಮರಾಟೆಯವರೊಡನೆಯೂ ಅನೇಕ ಯುದ್ಧಗಳನ್ನು ಮಾಡಿದನು. ಆದರೆ ಇವನ ಪ್ರಭುತ್ವದಲ್ಲಿ ಅನೇಕ ದೇಶಗಳು ಕೈಬಿಟ್ಟು ಹೋದುವು. ಎಲ್ಲೆಲ್ಲೂ ಅನ್ಯಾಯವು ಹೆಚ್ಚಿತು; ಸುಲಿಗೆಯು ಬಲವಾಯಿತು; ಜನರು ಸುಲ್ತಾನನಲ್ಲಿ ನಂಬುಗೆಯನ್ನು ಬಿಟ್ಟರು. ಹೀಗಾದ ಬಳಿಕ, ಟೀಪೂವು ಬಹಳ ದಿವಸ ಶ್ರೇಯೋವಂತನಾಗಿರಲಿಲ್ಲ. ಹೈದರನನ್ನು ಕಾಣುತ್ತಿದ್ದ ಗೌರವದಿಂದ ಜನಗಳು ಇವನನ್ನು ಕಾಣಲಾರದೆ ಹೋದರು.

ಇಷ್ಟರಲ್ಲೇ ಖಾಸಾ ಚಾಮರಾಜ ಒಡೆಯರೂ ತಮ್ಮ ಚರಮಕಾಲವನ್ನು ಸೆರೆಮನೆಯಲ್ಲಿಯೇ ಕಳೆದರು. ಆಗ ಇವರ ಮಕ್ಕಳಾದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಒಂದು ವರುಷ ವಯಸ್ಸಾಗಿದ್ದಿತು. ಟೀಪೂವು ಈ ಸಣ್ಣ ಮಗುವಿನ ಕೈಯಲ್ಲಿದ್ದ ಸುವರ್ಣದ ಬಳೆಗಳನ್ನೂ ಕೂಡ ಬಿಡದೆ ಸುಲಿಗೆಮಾಡಿಕೊಂಡನು. ಅರಮನೆಯಲ್ಲಿದ್ದ ಸರ್ವಸ್ವವನ್ನೂ ತನ್ನ ಭಂಡಾರಕ್ಕೆ ಸಾಗಿಸಿದನು. ಸರಸ್ವತೀ ಭಂಡಾರದಲ್ಲಿ ಬಹುಕಾಲದಿಂದ ಸಂಚಿತಮಾಡಿಟ್ಟಿದ್ದ ಪುಸ್ತಕರಾಶಿಯೆಲ್ಲವೂ ಅವನ ಕುದುರೆಗಳಿಗೆ ಹುರುಳಿ ಬೇಯಿಸಲು ಉರಿಯ ಪಾಲಾದುವು. ಹೀಗೆ ದೇಶವೆಲ್ಲವೂ ಮ್ಲೇಚ್ಛಾಕ್ರಾಂತವಾಗಿ ಮೈಸೂರು ಮಹಾರಾಜ ವಂಶೀಯರು ಬಾಳುವುದೇ ಕಷ್ಟವಾಯಿತು. ಪ್ರಜಾಸಾಮಾನ್ಯಕ್ಕೆ ಹಿಂಸೆಯು ಬಲವಾಯಿತು. ರಾಜ್ಯವೆಲ್ಲವೂ ದೌರ್ಭಾಗ್ಯವಶಗತವಾಯಿತು. ಪ್ರಜಾಕ್ಷೋಭೆಯು ಎಲ್ಲೆಲ್ಲಿಯೂ ಪ್ರಬಲವಾಯಿತು. ಇಂತಹ ಘೋರಪರಿವರ್ತನದ ಸಮಯದಲ್ಲಿ ಮಾತೃಶ್ರೀ ಲಕ್ಷ್ಮಮ್ಮಣ್ಣಿಯವರು ತಮ್ಮ ದೇಶದ ಸ್ವಾಧೀನತೆಯನ್ನೂ ತಮ್ಮ ವಂಶದ ಗೌರವವನ್ನೂ ಉಳಿಸಲು ದೃಢಪ್ರತಿಜ್ಞೆಯನ್ನು ಮಾಡಿಕೊಂಡು ತಿರುಮಲರಾಯ ನಾರಾಯಣರಾಯರೆಂಬ ತಮ್ಮ ಆಪ್ತಮಂತ್ರಿವರ್ಗದವರ ಮೂಲಕವಾಗಿ ಇಂಗ್ಲಿಷರೊಡನೆ ಸಖ್ಯವನ್ನು ಬೆಳೆಯಿಸಿದರು. ಇಂತಹ ದಾರುಣವಾದ ಕಷ್ಟಕಾಲದಲ್ಲಿ ಸಹಾಯಮಾಡುವುದಾಗಿ ಸಮರ್ಥರಾದ ಕಂಪೆನಿಯವರು ಒಪ್ಪಿಕೊಂಡರು. ಈ ಒಪ್ಪಂದದ ಮೇರೆಗೆ ಇಂಗ್ಲೀಷಿನವರು ಮಹಾರಾಷ್ಟ್ರರೊಡನೆಯೂ ಹೈದರಾಬಾದ್ ನಿಜಾಮರೊಡನೆಯೂ ಆಲೋಚನೆಮಾಡಿ, ನಿಜಾಮನ ಸೈನ್ಯದೊಡನೆ ೧೭೯೯ನೆಯ ಇಸವಿಯಲ್ಲಿ ಟೀಪೂಸುಲ್ತಾನನಮೇಲೆ ದಂಡೆತ್ತಿ ಬಂದು ಶ್ರೀರಂಗಪಟ್ಟಣವನ್ನು ಹಿಡಿದರು. ಟೀಪೂವು ಕಾದಿ ಮಡಿದನು. ಯುದ್ಧವಾದ

ಧ್ಯಕ್ಷ ಇಂಗ್ಲಿಷ್ ಸೈನ್ಯದ ಸರ್ವಾಧಿಕಾರಿಯಾಗಿದ್ದ ಜಾರ್ಜ್ ಹ್ಯಾರಿಸ್ ಸರದಾನು ಆಗಿನ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಮಾರ್ನಿಂಗ್ಟನ್ ಸಾಹೇಬರಿಗೆ ಈ ರೀತಿಯಾಗಿ ಬರೆದಿರುವನು :—

ಶ್ರೀರಂಗಪಟ್ಟಣ.
ತಾ॥ ೪ನೇಯ ಮೇ ೧೭೯೯.

ಮಹಾಸ್ವಾಮಿ,

ಈ ದಿನ ಒಂದು ಗಂಟೆಯ ಸಮಯದಲ್ಲಿ ನಮ್ಮ ಸೈನ್ಯದ ಒಂದು ತುಕಡಿಯವರು ಶ್ರೀರಂಗಪಟ್ಟಣವನ್ನು ಮುತ್ತಿದರೆಂದೂ, ಎರಡೂವರೆ ಗಂಟೆಯ ಹೊತ್ತಿಗೆ ಆ ಸ್ಥಳವು ಸಂಪೂರ್ಣವಾಗಿ ನಮ್ಮ ವಶವಾಯಿತೆಂದೂ ತಮಗೆ ತಿಳಿಸಲು ಸಂತೋಷವಾಗಿದೆ. ಯುದ್ಧದಲ್ಲಿ ಟೀಪೂಸುಲ್ತಾನನು ಬಿದ್ದನು. ಅವನ ಮಕ್ಕಳಿಬ್ಬರು, ಸುಲ್ತಾನ್ ಪಾದಷಾ, ಮೈನುದ್ದೀನ್ ಎಂಬುವರು ಅನೇಕ ಜನ ಮುಖ್ಯ ಸರದಾರರುಗಳೊಡನೆ ಕೈಸೆರೆ ಸಿಕ್ಕಿದರು. ನಮ್ಮ ನಷ್ಟವಾದರೋ ಅತ್ಯಲ್ಪ ; ನಮಗೆ ಪೂರ್ತಿಯಾಗಿ ಜಯವಾಯಿತು. ಮುಂದಿನ ಸಂಗತಿಯನ್ನು ವಿಶದವಾಗಿ ವಿಜ್ಞಾಪಿಸುವೆನು.

ಜಾರ್ಜ್ ಹ್ಯಾರಿಸ್.

ಇತ್ತ, ಎಲ್ಲೆಲ್ಲಿ ಹುಡುಕಿದಾಗ್ಯೂ ಸುಲ್ತಾನನು ಸಿಕ್ಕದೆ ಇದ್ದುದರಿಂದ, ಜನರಲ್ ಬೇರ್ಡ್ ಸಾಹೇಬನು ಶ್ರೀರಂಗಪಟ್ಟಣದ ಖಿಲ್ಲೇದಾರನನ್ನು ಹಿಡಿತರಿಸಿ ಸಮುಧಯಗಳಿಂದ ಕೇಳುವಲ್ಲಿ, ಸುಲ್ತಾನನು ಉತ್ತರದಿಕ್ಕಿನ ದಿಡ್ಡಿಬಾಗಿಲಕಡೆ ಯುದ್ಧಮಾಡು



ಟೀಪೂಸುಲ್ತಾನನು ಯುದ್ಧರಂಗದಲ್ಲಿ ಸತ್ತು ಬಿದ್ದಿರುವುದು.

ತ್ತಿದ್ದನೆಂದು ಹೇಳಿದನು. ಅಷ್ಟರಲ್ಲಿ ಸಾಯಂಕಾಲವಾಗುತ್ತ ಬಂದಿತ್ತು. ಆ ದಿನ ಸಿದ್ಧಾರ್ಥಿ ಸಂವತ್ಸರದ ಚೈತ್ರ ಬಹುಳ ಅಮಾವಾಸ್ಯೆಯಾದುದರಿಂದ ಬೇಗನೆ ಕತ್ತಲು ಕವಿದುಕೊಂಡಿತು. ಆಗ ಬೇರ್ಡ್ ಸಾಹೇಬನು ಖಿಲ್ಲೇದಾರನನ್ನು ಸಂಗಡ ಕರೆದು ಕೊಂಡು ಮಷಾಲುಗಳನ್ನು ಹಚ್ಚಿಸಿ ಉತ್ತರದಿಕ್ಕಿನ ಡಿಡ್ಡಿಬಾಗಿಲಿಗೆ ಹೋಗಿ ನೋಡು ವಲ್ಲಿ, ಆ ಕಿಷ್ಕಿಂಧದ್ವಾರದಲ್ಲಿ ಶತ್ರುಗಳ ಗುಂಡಿನೇಟಿನಿಂದ ನೊಂದು, ತನಗಾಗಿ ಪ್ರಾಣ ವನ್ನು ಬಿಟ್ಟ ತನ್ನ ವೀರರೊಡನೆ ರಣಭೂಮಿಯಲ್ಲಿ ಮಲಗಿದ್ದ ಟೀಪೂಸುಲ್ತಾನನ ಪಾರ್ಥಿವ ಶರೀರವು ಸಿಕ್ಕಿತು. ಆಗ ಬೇರ್ಡ್ ಸಾಹೇಬನು ಹೆಣವನ್ನು ತೆಗೆಸಿ ಪಾಲಕಿ ಯಲ್ಲಿಡಿಸಿ ಮಹಲಿಗೆ ಕಳುಹಿಸಿದನು. ಅದನ್ನು ರಾಣಿವಾಸದವರೇ ಮೊದಲಾದವರು ನೋಡಿ ಗೋಳಾಡಿದರು. "ಮೈಸೂರು ಹುಲಿ" ಎಂಬುದಾಗಿ ಖ್ಯಾತಿಯನ್ನು ಹೊಂದಿದ್ದ ಟೀಪೂಸುಲ್ತಾನನ ಬಾಳಶ್ತು ಈ ರೀತಿಯಾಗಿ ಕೊನೆಗಂಡಿತು.

ಬಳಿಕ, ಮುಂದಿನ ಚರಿತ್ರೆಯನ್ನು ಪ್ರಾರಂಭಿಸುವುದಕ್ಕೆ ಮೊದಲು ಮೈಸೂರಿನ ಉದ್ಧಾರಕರೂ ಸಾಧ್ವೀಶಿರೋಮಣಿಯೂ ಆದ ರಾಣಿ ಲಕ್ಷ್ಮಮ್ಮಣ್ಣಿಯವರ ಸಂಕ್ಷಿಪ್ತ ವೃತ್ತಾಂತವನ್ನು ತಿಳಿಸುವುದು ಅತ್ಯಾವಶ್ಯಕವಾಗಿದೆ. ಲಕ್ಷ್ಮಮ್ಮಣ್ಣಿಯವರು ಪಟ್ಟದ ಕೋಟೆ ಮನೆತನದ ಕತ್ತಿ ಗೋಪಾಲರಾಜೇ ಅರಸಿನವರ ಮಕ್ಕಳು; ಇವರು ೧೭೪೨ನೆಯ ಇಸವಿಯಲ್ಲಿ ಜನಿಸಿದರು. ಇವರು ನಮ್ಮ ಗ್ರಂಥನಾಯಕರಾದ ಶ್ರೀ ಚಾಮರಾಜೇಂದ್ರ ಒಡೆಯರಿಗೆ ಪಿತಾಮಹನ ತಾಯಿಯಾಗಬೇಕು. ಇವರ ತಂದೆಯವ ರಾದ ಕತ್ತಿ ಗೋಪಾಲರಾಜೆ ಅರಸಿನವರು ತಿರುಚನಾಪಳ್ಳಿಯಮೇಲೆ ಮಹಮ್ಮದಲ್ಲಿ ಯೊಡನೆ ದಂಡೆತ್ತಿ ಹೋಗಿದ್ದ ವೀರನು. ಲಕ್ಷ್ಮಮ್ಮಣ್ಣಿಯವರನ್ನು ಮೈಸೂರು ದೊರೆ ಗಳಾಗಿದ್ದ ಇಮ್ಮಡಿ ಕೃಷ್ಣರಾಜ ಒಡೆಯರಿಗೆ ಕೊಟ್ಟು ವಿವಾಹಮಹೋತ್ಸವವು ಜೆಳ ದಿದ್ದಿತು; ಆದರೆ ಲಕ್ಷ್ಮಮ್ಮಣ್ಣಿಯವರಿಗೆ ಪುತ್ರಸಂತಾನವಾಗಲಿಲ್ಲ. ಇವರ ಸಪತ್ನಿಯವ ರಿಗೆ ಮಾತ್ರ ನಂಜರಾಜ ಒಡೆಯರು ಚಾಮರಾಜ ಒಡೆಯರು ಎಂಬ ಇಬ್ಬರು ಮಕ್ಕ ಳಿದ್ದರು. ಲಕ್ಷ್ಮಮ್ಮಣ್ಣಿಯವರ ಪತಿಯು ಕಾಲಾನಂತರ ನಂಜರಾಜ ಒಡೆಯರು ನಾಲ್ಕು ವರುಷವೂ ಅವರ ಸಹೋದರರು ಆರು ವರುಷವೂ ರಾಜ್ಯವಾಳಿದರು. ಆ ಕಾಲದಲ್ಲಿ ಪ್ರಬಲನಾಗಿದ್ದ ಹೈದರನು ಅವರಿಬ್ಬರನ್ನೂ ವ್ಯಾಜಾಂತರದಿಂದ ಕೊಲ್ಲಿಸಿ ದನು. ಹೀಗೆ ಪ್ರಿಯತಮನಾದ ಪತಿಯೂ ಪ್ರಾಣಾಧಿಕರಾದ ಪುತ್ರರೂ ಹೈದರನ ಬಾಧೆಯಿಂದ ಮೃತರಾದ ಬಳಿಕ, ರಾಣಿ ಲಕ್ಷ್ಮಮ್ಮಣ್ಣಿಯವರು ವಿಪತ್ಸಾಗರದಲ್ಲಿ ಮುಳುಗಿ ವ್ಯಸನದಿಂದ ಕೃಶರಾಗುತ್ತಿದ್ದರು. ಆಗ ಹೈದರನು ಇವರಿಗೆ ಸಹಾಯಕ ರಾಗಿದ್ದ ಖಂಡೇರಾಯ, ಶಾಮಯ್ಯ ಮುಂತಾದವರನ್ನೆಲ್ಲ ಕೊಲ್ಲಿಸಿ ರಾಣಿಯವರನ್ನು ಬಂದಿಯಾಗಿಟ್ಟನು. ಹೀಗೆ ಕಾಲವೈಷಮ್ಯದಿಂದ ರಾಜಕುಟುಂಬಕ್ಕೆ ಕಿರುಕುಳವು ಹೆಚ್ಚಿ, ಆಹಾರಾದಿಗಳಿಗೆ ಅನುಕೂಲ ಕಡಮೆಯಾಗಿ ವಂಶಪರಂಪರೆಯಿಂದ ಬಂದ ರಾಜ ಮಂದಿರದ ನೆಲೆಯು ತಪ್ಪಿದ ಬಳಿಕ, ರಾಣಿ ಲಕ್ಷ್ಮಮ್ಮಣ್ಣಿಯವರ ಮನಸ್ಸು ದುಃಖಾಗ್ನಿ ಯಿಂದ ದಗ್ಧವಾಯಿತು. ಈ ಕಾಲದಲ್ಲಿ ತಾವು ಸುಮ್ಮನಿದ್ದರೆ ಪ್ರಾಚೀನ ಹಿಂದೂ

ಸಿಂಹಾಸನವು ನಷ್ಟವಾಗಿ, ಯವನ ಸಿಂಹಾಸನಾಧಿಪತ್ಯವು ಸ್ಥಾಪಿತವಾಗುವುದೆಂಬ ವಿಷಯವು ಅವರ ಮನಸ್ಸಿಗೆ ತೋರಿತು. ಕೂಡಲೆ ಅವರಲ್ಲಿ ಅದುವರೆಗೂ ಅಡಗಿದ್ದ ಸ್ವದೇಶಾಭಿಮಾನದ ತೇಜಸ್ಸು ಪ್ರಕಾಶಗೊಂಡಿತು. ಆಗ ಅವರ ಸ್ವೀಕೃತಪುತ್ರರಾದ ಖಾಸಾ ಚಾಮರಾಜ ಒಡೆಯರಿಗೆ ಮೂರು ವರುಷ ವಯಸ್ಸು. ಮಹಾರಾಣಿ ಯವರು ತಮ್ಮ ದುಃಖವನ್ನೆಲ್ಲ ಧೈರ್ಯದಿಂದ ತಡೆದುಕೊಂಡು, ಹಿಂದೂರಾಜ್ಯ ರಕ್ಷಣೋ ಪಾಯವನ್ನು ಹುಡುಕಲಾರಂಭಿಸಿದರು. ಸಂಕಟವು ಪ್ರಾಪ್ತವಾದೊಡನೆಯೇ ಧೀರರ ಮನಸ್ಸು ಹೇಗೆ ಪ್ರಜ್ವಲಿಸುವುದು ಎಂಬುದನ್ನು ಇವರ ಚರಿತ್ರೆಯಿಂದ ತಿಳಿಯಬಹುದು. ಹೀಗೆ ನಾನಾ ಮುಖವಾಗಿ ಕಷ್ಟನಿಷ್ಠುರಗಳಿಗೆ ಗುರಿಯಾದರೂ ಲಕ್ಷ್ಮಮ್ಮಣ್ಣಿಯವರು ಎದೆಗೆಡದೆ ಧೈರ್ಯವನ್ನವಲಂಬಿಸಿ, ತಮ್ಮ ಆಪ್ತ ಮಂತ್ರಿಗಳ ಮೂಲಕ ಮದರಾಸ್ ಗವರ್ನರ್ ಲಾರ್ಡ್ ಪಿಗಟ್ ಮುಂತಾದ ಇಂಗ್ಲಿಷ್ ಸರದಾರರೊಂದಿಗೆ ಸಂಧಿಮಾಡಿ ಕೊಂಡು ಸ್ವಕೀಯ ರಾಜ್ಯವನ್ನು ಪುನಃ ಸಂಪಾದಿಸಿ, ತಮ್ಮ ಮೊಮ್ಮಕ್ಕಳಾದ ಐದು ವರುಷ ವಯಸ್ಸಿನ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಪಟ್ಟಾಭಿಷೇಕವನ್ನು ಮಾಡಿಸಿ ದರು. ಸುಪ್ರಸಿದ್ಧವಾದ ರಾಜಸಂತತಿಯಲ್ಲಿ ಜನಿಸಿದ ಇವರು ಇಮ್ಮಡಿ ಕೃಷ್ಣರಾಜ ಒಡೆಯರಿಗೆ ಪರಿಣಯವಾದಬಳಿಕ, ಐವತ್ತೊಂದು ವರುಷಕಾಲ ಇಹಲೋಕ ವ್ಯಾಪಾರ ನಿರತರಾಗಿದ್ದರು. ಈ ಮಹಾರಾಣಿಯವರು ಕ್ರಿ. ಶ. ಹದಿನೆಂಟನೆಯ ಶತಾಬ್ದದಲ್ಲಿ ಮೈಸೂರು ರಾಜವಂಶಕ್ಕೆ ಸಂಭವಿಸಿದ್ದ ವಿಷಮಕಾಲದಲ್ಲಿ ಭಾಗ್ಯದೇವತೆಯೆನಿಸಿದರು. ಇವರು ಮಾಡಿದ ಸಾಹಸದಿಂದ ಮೈಸೂರು ರಾಜ್ಯಕ್ಕೆ ಸಂಭವಿಸಿದ್ದ ಆಪತ್ತಿನ ಅಂಧ ಕಾರವು ತೊಲಗಿ ಸುಖಸೂರ್ಯೋದಯವು ದೃಶ್ಯವಾಯಿತು.

ಇಂಗ್ಲಿಷಿನವರು ಮೈಸೂರು ರಾಜ್ಯವನ್ನು ತಮ್ಮ ವಶಪಡಿಸಿಕೊಂಡಬಳಿಕ, ರಾಜ್ಯವಿನಿಯೋಗಕ್ಕಾಗಿ ಒಂದು ಕಮಿಷನನ್ನು ಏರ್ಪಾಡು ಮಾಡಿದರು. ಆ ಕಮಿ ಷನ್ನಿಗೆ ಜನರಲ್ ಹ್ಯಾರಿಸ್, ಕರ್ನಲ್ ಆರ್ಥರ್ ವೆಲ್ಲೆಸ್ಲಿ, ಕರ್ನಲ್ ವಿಲಿಯಂ ಕರ್ಕ್ ಪ್ಯಾಟ್ರಿಕ್, ಕರ್ನಲ್ ಬ್ಯಾರಿ ಕ್ಲೋಸ್ ಮುಂತಾದ ಸರದಾರರುಗಳು ಗವರ್ನರ್ ಜನರಲ್ ಲಾರ್ಡ್ ಮಾರ್ನಿಂಗ್‌ಟನ್ ಸಾಹೇಬರವರಿಗೆ ಪ್ರತಿನಿಧಿಗಳಾಗಿಯೂ, ಮೀರ್ ಆಲಂ ಬಹದ್ದೂರವರು ನಿಜಾಮರವರಿಗೆ ಪ್ರತಿನಿಧಿಗಳಾಗಿಯೂ ಇದ್ದರು. ಇವರುಗಳಲ್ಲಿ ಕೆಲವರು ಟೀಪೂವಿನ ರಾಜ್ಯವನ್ನು ನಾಲ್ಕುಪಾಲು ಮಾಡಿ, ಒಂದು ಭಾಗವನ್ನು ಇಂಗ್ಲಿ ಷಿನವರೂ ಇನ್ನೊಂದು ಭಾಗವನ್ನು ನಿಜಾಮರೂ ಮತ್ತೊಂದು ಭಾಗವನ್ನು ಮರಾಟೆ ಯವರೂ ತೆಗೆದುಕೊಳ್ಳುವಂತೆಯೂ, ಉಳಿದ ಒಂದು ಭಾಗದಲ್ಲಿ ಮೈಸೂರು ಸಂಸ್ಥಾ ನಾಧಿಪತ್ಯವನ್ನು ಮರಳಿ ಸ್ಥಾಪಿಸಿ, ಅದನ್ನು ಟೀಪೂಸುಲ್ತಾನನ ಮಗನಾದ ಫತ್ತೇ ಹೈದರನಿಗೆ ಕೊಡಬೇಕೆಂಬುದಾಗಿಯೂ ಅಭಿಪ್ರಾಯಪಟ್ಟರು. ಆದರೆ ಆಗ ಗವರ್ನರ್ ಜನರಲ್‌ಅವರಾಗಿದ್ದ ಲಾರ್ಡ್ ಮಾರ್ನಿಂಗ್‌ಟನ್ ಸಾಹೇಬರು ಈ ತೀರ್ಮಾನಕ್ಕೆ ಸಮ್ಮತಿಸದೆ, ಟೀಪೂವಿನ ವಂಶೀಯರಿಗೆ ರಾಜ್ಯವನ್ನು ಪುನಃ ಕೊಟ್ಟರೆ ಮುಂದೆ ಯಾವ ರೀತಿಯಲ್ಲಾದರೂ ಇಂಗ್ಲಿಷ್ ರಾಜ್ಯಕ್ಕೆ ತೊಂದರೆಯುಂಟಾಗಬಹುದೆಂದು ಯೋಚಿಸಿ,

ಮೈಸೂರಿನ ಆರ್ಷೇಯ ರಾಜವಂಶಜರಾದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ರಾಜ್ಯವನ್ನು ಕೊಡಬೇಕೆಂದು ನಿರ್ಣಯಿಸಿದರು. ಅದರಂತೆಯೇ ೧೭೯೯ನೆಯ ಇಸವಿ ಜೂನ್ ೩೦ನೆಯ ದಿವಸ ಮೈಸೂರು ನಜರ್‌ಬಾದ್ ಅರಮನೆಯಲ್ಲಿ ಪಟ್ಟಾಭಿಷೇಕ ಮಹೋತ್ಸವವು ನೆರೆಯಿತು. ಜನರಲ್ ಹ್ಯಾರಿಸ್‌ಸಾಹೇಬರು ಇಂಗ್ಲಿಷ್ ಸರಕಾರದ ಪ್ರತಿನಿಧಿಯಾಗಿಯೂ ಮೀರ್ ಆಲಂ ಎಂಬ ಸರದಾರನು ನಿಜಾಮರ ಪ್ರತಿನಿಧಿಯಾಗಿಯೂ ನಿಂತು ಮಹಾರಾಜರವರಿಗೆ ಮೊಹರಿನ ಉಂಗುರವನ್ನು ಒಪ್ಪಿಸಿದರು.

ಈ ರೀತಿಯಾಗಿ ದುರ್ವಾರ ಕಲ್ಲೋಲ ಕೋಲಾಹಲಿತ ಪಾರಾವಾರದಲ್ಲಿ ಬಿದ್ದ ತರುಣಿಯಂತಿದ್ದ ಮೈಸೂರು ರಾಜ್ಯಲಕ್ಷ್ಮಿಯು ಪುನಃ ಪ್ರತಿಷ್ಠಿತಳಾದಳು. ಆದರೆ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಪಟ್ಟಾಭಿಷೇಕವಾದಾಗ, ಅರಮನೆಯ ಭಂಡಾರವು ಬರಿದಾಗಿತ್ತೆಂದು ಹೇಳಬೇಕಾದುದಿಲ್ಲ. ಏಕೆಂದರೆ: ರಾಜ್ಯವು ೧೭೬೧ರಿಂದ ೧೭೯೯ರ ವರೆಗೆ—ಎಂದರೆ, ಸುಮಾರು ಮೂವತ್ತೆಂಟು ವರುಷಗಳವರೆಗೆ ಮ್ಲೇಚ್ಛಾಕ್ರಾಂತವಾಗಿ ಕೊಳೆಹೋಗಿದ್ದಿತು. ರಾಜ್ಯದ ಸುವರ್ಣಾದಾಯವೂ ಅಷ್ಟು ಉತ್ತಮಸ್ಥಿತಿಯಲ್ಲಿರಲಿಲ್ಲ. ಯುದ್ಧದ ಸಮಯವಾದುದರಿಂದ ಶತ್ರುಗಳಿಗೆ ಆಶ್ರಯ ಸಿಕ್ಕೀತೆಂಬ ಶಂಕೆಯಿಂದ ಮೊದಲೇ ಸುಲ್ತಾನನು ಪೈರುಪಚ್ಚೆಗಳಿಗೆಲ್ಲ ಬೆಂಕಿಹಾಕಿಸಿ ನಾಶಮಾಡಿಬಿಟ್ಟಿದ್ದನು. ಇದರಮೇಲೆ ಯುದ್ಧದ ವೆಚ್ಚಕ್ಕಾಗಿ ಹಣವಿಲ್ಲದಿದ್ದರೆ ಪ್ರಜೆಗಳ ಸರ್ವಸ್ವವನ್ನೂ ಸುಲಿಗೆ ಮಾಡುತ್ತಿದ್ದನು. ಜನಗಳು ತಿನ್ನುವುದಕ್ಕೆ ಮಾರ್ಗವಿಲ್ಲದೆ, ಯಾವಾಗ ಏನು ಬರುವುದೋ ಎಂಬ ಭೀತಿಯಿಂದ ಸರ್ವಕಾಲದಲ್ಲೂ ಕಳವಳಪಡುತ್ತಿದ್ದರು. ಯಾವ ಕೆಲಸ ಮಾಡುವುದಕ್ಕೂ ಉತ್ಸಾಹವಿಲ್ಲದೆ. ಪ್ರಾಣಭೀತಿಯಿಂದ ನಡುಗುತ್ತಿದ್ದರು. ವ್ಯವಸಾಯ. ವ್ಯಾಪಾರ, ವಿದ್ಯಾಭ್ಯಾಸ, ಕೈಗಾರಿಕೆ ಮೊದಲಾದುವೆಲ್ಲ ಮೂಲೆ ಬಿದ್ದಿದ್ದುವು. ಹೊರಗಿನಿಂದ ಬರುತ್ತಿದ್ದ ದವಸಧಾನ್ಯಗಳೆಲ್ಲ ನಿಂತುಹೋದುವು. ಆಸ್ತಿಪಾಸ್ತಿಗಳೆಲ್ಲ ಸೂರೆಹೋದುದರಿಂದಲೂ, ಆ ಪಾಡುವ ನಾಡರು ಕಾಳಗದಲ್ಲಿ ಮಡಿದುದರಿಂದಲೂ, ಅನೇಕ ಕುಟುಂಬಗಳಿಗೆ ಪ್ರಾಣತ್ಯಾಗವೇ ಮೇಲೆಂಬ ಭಾವನೆಯುಂಟಾಯಿತು. ಹೀಗೆ ದೇಶವೆಲ್ಲವೂ ಅರಾಜಕವಾಗಿ ಕೇಳುವವರಿಲ್ಲದೆ ಹೋದುದರಿಂದ ಶಾಂತಿಸುಖಗಳಿಗೆ ತವರುಮನೆಯಾಗಿದ್ದ ಮೈಸೂರು ಸಂಸ್ಥಾನವು ಆಗ ಶೋಕ ದುಃಖ ದಾರಿದ್ರ್ಯಗಳಿಗೆ ನೆಲೆಮನೆಯಾಯಿತು. ರಾಜ್ಯವೆಲ್ಲ ಹೊಸದಾಗಿ ಜಯ[illegible]ತ್ತಾದುದರಿಂದ, ಕ್ಷೋಭಿತವಾದ ಪ್ರಜಾಸ್ಥಿತಿಯು ಇನ್ನೂ ಶಾಂತತೆಯನ್ನೈದಿರಲಿಲ್ಲ. ಇಂತಹ ಕಷ್ಟಕಾಲದಲ್ಲಿ ನಡೆದ ಮುಮ್ಮಡಿ ಕೃಷ್ಣರಾಜ ಒಡೆಯರವರ ಪಟ್ಟಾಭಿಷೇಕ ಮಹೋತ್ಸವವು ವಿಶೇಷ ವೈಭವಕ್ಕೆಡೆಯಿಲ್ಲದೆ ನಡೆಯಿತೆಂದು ನುಡಿಯಬೇಕೆ? ಆದರೂ ಅನ್ಯಾಕ್ರಾಂತವಾಗಿ ಮುಸಲ್ಮಾನರ ಬಾಹುಮೂಲದಲ್ಲಿ ಸಿಲುಕಿ ಪರಿತಾಪಗೊಳ್ಳುತ್ತಿದ್ದ ಮೈಸೂರು ರಾಜ್ಯರಮಣಿಯು ಸ್ವರಾಜವಂಶಕ್ಕೆ ಪುನಃ ಪ್ರಾಪ್ತವಾದುದರಿಂದ, ದೇಶವೆಲ್ಲವೂ ಆನಂದಾಂಬುಧಿಯಲ್ಲಿ ಮಗ್ನವಾಯಿತು.

ಎರಡನೆಯ ಅಧ್ಯಾಯ.

ಶ್ರೀಚಾಮರಾಜೇಂದ್ರ ಒಡೆಯರವರ ಜನನ.

ಮುಮ್ಮಡಿ ಕೃಷ್ಣರಾಜ ಒಡೆಯರವರು ಕೈಬಿಟ್ಟುಹೋಗಿದ್ದ ಪಿತ್ರಾರ್ಜಿತವಾದ ರಾಜ್ಯವನ್ನು ಪರಮದಯಾಳುಗಳೂ ಧರ್ಮ್ಮೈಕ ಪಕ್ಷಪಾತಿಗಳೂ ನ್ಯಾಯಾನುವರ್ತಿಗಳೂ ಪೂರ್ವಾಪರ ವಿಚಾರಜ್ಞರೂ ಆದ ಇಂಗ್ಲಿಷ್ ಪ್ರಭುಗಳ ಸಹಾಯದಿಂದ ಮತ್ತೆ ಪಡೆದು, ಅವರ ಛತ್ರಛಾಯೆಯಲ್ಲಿ ಸ್ವರಾಜ ಧರ್ಮಪರಿಪಾಲನವನ್ನು ಮಾಡಲುಪಕ್ರಮಿಸಿದರು. ಒಡನೆಯೇ ಶ್ರೀಕೃಷ್ಣರಾಜೋದಯದಿಂದ ಮಹೀಶೂರ ಸಂಸ್ಥಾನದ ಪ್ರಜೆಗಳ ಆನಂದಾತಿಶಯವೆಂಬ ಸಮುದ್ರವು ಉಕ್ಕಿ, ಸತ್ಕೀರ್ತಿ ಚಂದ್ರಿಕೆಯು ಸಮಸ್ತ ದಿಗ್ದೇಶಗಳಿಗೂ ಪ್ರಸರಿಸತೊಡಗಿತು. ಅವರ ರಾಜ್ಯಪ್ರಾಪ್ತಿಯಾದ ಕಾಲದಲ್ಲಿ ಮಹಾರಾಜರಿಗೆ ಆರನೆಯ ವರುಷವು ನಡೆಯುತಲಿತ್ತು. ಅವರಿಗೆ ಇನ್ನೂ ಪ್ರಪಂಚವ್ಯವಹಾರ ಜ್ಞಾನವಿರಲಿಲ್ಲ

ಬಾಲ್ಯವಯಸ್ಸಿನ ಮುಮ್ಮಡಿ ಕೃಷ್ಣರಾಜ ಒಡೆಯರವರು.

ವಾದುದರಿಂದ ರಾಣಿ ಲಕ್ಷ್ಮಮ್ಮಣ್ಣಿಯವರೇ ರಾಜಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ರಾಜತಂತ್ರಧುರಂಧರರಾದ ಪೂರ್ಣಯ್ಯನವರು ದಿವಾನರಾಗಿಯೂ ರೀಜಂಟರಾಗಿಯೂ ಇದ್ದರು. ಆ ಕಾಲದಲ್ಲಿ ಕರ್ನಲ್ ಬ್ಯಾರಿ ಕ್ಲೋಸ್‌ಅವರು ರೆಸಿಡೆಂಟ್ ಪದವಿಯನ್ನೂ, ಕರ್ನಲ್ ಆರ್ಥರ್ ವೆಲೆಸ್ಲಿ ಅವರು ಸೈನ್ಯಾಧಿಕಾರವನ್ನೂ ವಹಿಸಿದ್ದರು. ಈ ಪುರುಷಸಿಂಹತ್ರಯವೂ ಒಂದುಗೂಡಿದ ಬಳಿಕ, ದುಷ್ಟರ ಹಾವಳಿಗೆ ಅವಕಾಶವಿರಲಿಲ್ಲ. ಮುಸಲ್ಮಾನರ ಆಳಿಕೆಯಲ್ಲಿ ಬಹಳವಾಗಿ ಕೆಟ್ಟುಹೋಗಿದ್ದ ರಾಜ್ಯದಾಡಳಿತವನ್ನು ಪೂರ್ಣಯ್ಯನವರು ಸ್ವಸಾಮರ್ಥ್ಯದಿಂದ ಉತ್ತಮ ಸ್ಥಿತಿಗೆ ತಂದು, ಚೋರಾದ್ಯುಪದ್ರವಗಳನ್ನಡಗಿಸಿ ರಾಜ್ಯವನ್ನು ಅಭಿವೃದ್ಧಿಪಡಿಸಿದರು. ರಾಜ್ಯದಲ್ಲಿ ಕ್ಷೋಭೆ ತಪ್ಪಿ ಜನರು ನೆಮ್ಮದಿಯನ್ನು ಪಡೆಯಲಾರಂಭಿಸಿದರು. ಬೊಕ್ಕಸದಲ್ಲಿ ಧನವು ದಿನೇದಿನೇ ವೃದ್ಧಿಯಾಯಿತು. ಇವರು ಅಸಾಧಾರಣವಾದ ಜನಾನುರಾಗಕ್ಕೆ ಪಾತ್ರರಾಗಿ ವಿಶೇಷ ಧನವನ್ನು ಕೂಡಿಸಿದುದರಿಂದಲೇ ಇವರ ಮಂತ್ರಿತ್ವದ ಪ್ರಭಾವವು ವ್ಯಕ್ತವಾಗುವುದು. ಇವರು ಈ ದೇಶಕ್ಕೆ ಮಾಡಿದ ಉಪಕಾರದಿಂದ, ಇವರಿಗೆ ೧೮೦೭ರಲ್ಲಿ ಯಳಂದೂರು ತಾಲ್ಲೂಕು ಜಹಗೀರಾಗಿ ದೊರೆಯಿತು.

ಇಷ್ಟರಲ್ಲಿ ಮಹಾರಾಜರಿಗೆ ಹದಿನಾರನೆಯ ವಯಸ್ಸು ಪ್ರಾಪ್ತವಾಗಲು, ತಾವೇ ರಾಜ್ಯಭಾರಮಾಡಬೇಕೆಂಬ ಅಭಿಲಾಷೆಯುಂಟಾಯಿತು. ಈ ಸಮಯದಲ್ಲೇ ಯಾವುದೋ ಒಂದು ನಿಮಿತ್ತದಿಂದ ಪೂರ್ಣಯ್ಯನವರಿಗೂ ಮಹಾರಾಜರಿಗೂ ಮನಃಕಷಾಯವುಂಟಾಯಿತು. ಆದುದರಿಂದ ೧೮೧೧ರಲ್ಲಿ ಪೂರ್ಣಯ್ಯನವರು ತಮ್ಮ ಕೆಲಸದಿಂದ ವಿಶ್ರಾಂತಿಯನ್ನು ಹೊಂದಿದರು. ಇಂತಹ ವಿಷಮ ಕಾಲದಲ್ಲಿ ಬ್ರಿಟಿಷ್ ರೆಸಿಡೆಂಟರು ಪೂರ್ಣಯ್ಯನವರ ದಿವಸದಲ್ಲಿ ಒಳದೇಶದ ಆಡಳಿತಗಳಲ್ಲಿ ಪ್ರವೇಶಮಾಡಿ ಸಹಾಯ ಮಾಡುತ್ತಿದ್ದಂತೆ ಈಗಲೂ ಮಾಡುವುದಕ್ಕೆ ಮದರಾಸು ಗವರ‍್ನಮೆಂಟಿನವರು ಮಾರ್ಗ ಕೊಡದೆ ಹೋದರು. ಎಲ್ಲ ಜವಾಬ್ದಾರಿಯೂ ಮಹಾರಾಜರವರನ್ನೇ ಸೇರಿತು. ಪೂರ್ಣಯ್ಯನವರು ಕೆಲಸವನ್ನು ಬಿಟ್ಟನಂತರದಲ್ಲಿ ಮಹಾರಾಜರು ನಗರದ ಫೌಜುದಾರಿಯಲ್ಲಿದ್ದ ರಾಮರಾಯರನ್ನು ಕರೆಯಿಸಿ ಅವರಿಗೆ ಮಂತ್ರಿತ್ವವನ್ನು ಕೊಟ್ಟು ರಾಜ್ಯಭಾರವನ್ನು ತಾವೇ ನೋಡಿಕೊಳ್ಳುವುದಕ್ಕೆ ಆರಂಭಿಸಿದರು. ಕೆಲವು ದಿವಸ ರಾಜ್ಯಭಾರವು ಪೂರ್ಣಯ್ಯನವರ ದಿವಸಕ್ಕಿಂತಲೂ ಚೆನ್ನಾಗಿ ನಡೆಯಿತು. ರಾಮರಾಯರಲ್ಲಿ ಮಹಾರಾಜರಿಗೆ ವಿಶೇಷ ನಂಬುಗೆಯುಂಟಾಗಿ, ಸರ್ವಾಧಿಕಾರವನ್ನೂ ಅವರಿಗೆ ವಹಿಸಿಬಿಟ್ಟು ತಾವು ಸ್ವಸುಖಮಗ್ನರಾದರು.

ಹೀಗಿರುವಲ್ಲಿ, ರಾಮರಾಯರು ಹೆಚ್ಚಿದ ಅಹಂಕಾರದಿಂದ ತಮ್ಮ ದರ್ಪವನ್ನು ಎಲ್ಲರಲ್ಲಿಯೂ ತೋರಿಸುವುದಕ್ಕೆ ಆರಂಭಮಾಡಿದರು. ಅದಕ್ಕನುಕೂಲವಾಗಿ, ಅರಸುಗಳಲ್ಲಿ ಮುಖ್ಯರಾಗಿದ್ದ ದಿವಾನ್ ವೆಂಕಟೇ ಅರಸಿನವರೂ ಅವರಿಗೆ ಸಹಾಯಕರಾದರು. ಅಗ್ನಿಯೂ ವಾಯುವೂ ಒಂದುಗೂಡಿದಂತೆ, ಇಬ್ಬರೂ ಸೇರಿ ಜನಗಳನ್ನು ಸುಲಿಗೆ ಮಾಡುವುದಕ್ಕೆ ಆರಂಭಮಾಡಿದರು. ವೆಂಕಟೇ ಅರಸಿನವರಿಗೆ ತಿಮ್ಮಪ್ಪರಾಜೆ ಅರಸು,

ವಾಸಪ್ಪರಾಜೆ ಅರಸು ನಾರಾಯಣರಾಜೆ ಅರಸು ಎಂಬುದಾಗಿ ಮೂರುಜನ ತಮ್ಮಂದಿರಿದ್ದರು. ಇವರುಗಳು ಲೌಕಿಕ ಸಂಧಾನದಲ್ಲಿ ಬಹು ಶಕ್ತರೆಂಬ ಖ್ಯಾತಿ ಗೊಂಡಿದ್ದರು. ಇವರು ದಿವಾನಗಿರಿ, ಫೌಜುದಾರಿ, ಸರ್ವಾಧಿಕಾರ ಮೊದಲಾದ ಅಪ್ರತಿಹತವಾದ ಅಧಿಕಾರಗಳನ್ನು ಪಡೆದು, ಒಳಗೂ ಹೊರಗೂ ಮಹಾರಾಜರವರಿಗೆ ಅತಿತತ್ತ್ವಗಳಾಗಿದ್ದರೆಂದು ಹೇಳುತ್ತಾರೆ. ಈ ದುಷ್ಟ ಚತುಷ್ಟಯದ ಜೊತೆಗೆ ಈ ದೇಶದಲ್ಲಿ ದೊಡ್ಡ ಅಧಿಕಾರಗಳನ್ನು ಮಾಡಿ ಸಂಪಾದನೆ ಮಾಡಿಕೊಂಡು ಹೋಗಲು ಮರಾಟೆ ದೇಶದಿಂದ ಬಂದಿದ್ದ ಪರಸ್ಥಳದ ಆಶಾ ಪಿಶಾಚಿಗಳೂ ಸೇರಿಕೊಂಡರು. ಇವರೆಲ್ಲರೂ ದೌಲತ್ತನ್ನು ಮಹಾರಾಜರ ಕೈತಪ್ಪಿಸುವುದಕ್ಕೆ ಇಲ್ಲದ ಧರ್ಮಗಳನ್ನು ನಡೆಸುತ್ತಾ ಬಂದರು. ಆದುದರಿಂದ ರಾಜ್ಯದ ಆಡಳಿತವು ಕೆಟ್ಟುಹೋಗಿ, ಪ್ರಜೆಗಳ ಹಾಹಾ ಕಾರವು ಬಲವಾಯಿತು. ಯಾರಿಗೂ ರಾಜರಲ್ಲಿ ದೂರುಹೇಳಿಕೊಳ್ಳುವುದಕ್ಕೆ ಅವಕಾಶ ದೊರೆಯದ ಹಾಗಾಯಿತು. ಪ್ರಜೆಗಳ ದೂರನ್ನೂ ದೂರದೃಷ್ಟಿಯುಳ್ಳವರ ಬುದ್ಧಿವಾದ ವನ್ನೂ ಕೇಳುವ ವಿಷಯದಲ್ಲಿ ದೊರೆಗಳಿಗೆ ಬಧಿರತ್ವವು ಬಂದಿತು. ದುಷ್ಟಾಧಿಕಾರಿಗಳು ಏನುಮಾಡಿದರೂ ಅದಕ್ಕೆ ಪ್ರತಿಕಾರವೇ ಇಲ್ಲದಂತಾಯಿತು. ಯಾವನಾದರೂ ಹಣವಂತ ನೆಂದು ಕಂಡುಬಂದರೆ, ಅವನ ಮನೆಗೆ ಮುಟ್ಟುಗೋಲು ಹಾಕಿ ಧನವನ್ನೆಲ್ಲ ಸೂರೆ ಗೊಳ್ಳುತ್ತಿದ್ದರು. ತೆರಿಗೆಯನ್ನು ಹೆಚ್ಚಿಸಿದರು. ತಮ್ಮ ಅಧಿಕಾರಕ್ಕೆ ವಿರುದ್ಧವಾಗಿ ನಡೆದವರನ್ನು ವಿಚಾರಣೆಯಿಲ್ಲದೆ ಚಾವಟಿಗಳಿಂದ ಹೊಡೆಯಿಸುತ್ತಿದ್ದರು. ಒಂದೆರಡು ಬಲ ಜನಗಳನ್ನು ಸಾಲುಗಲ್ಲಿಗೂ ಹಾಕಿಸಿದರು. ಇರಸಾಲಿನ ಹಣವನ್ನು ತಮ್ಮ ಮನೆಗೆ ಸೇರಿಸಿಕೊಂಡು, ತಮ್ಮ ಸುಖಸಂತೋಷಗಳಿಗೆ ಮನಸ್ಸುಬಂದಂತೆ ಖರ್ಚುಮಾಡು ತ್ತಿದ್ದರು. ಈ ಕಾಲದಲ್ಲಿರುವಂತೆ ರಾಜ್ಯದ ಆಯವ್ಯಯಕ್ಕೆ ಸರಿಯಾದ ಲೆಕ್ಕವನ್ನೇ ಇಡುತ್ತಿರಲಿಲ್ಲ. ಅರಮನೆಯ ಖರ್ಚಿಗೆ ಮಾತ್ರ ಮಹಾರಾಜರು ಕೇಳಿದಷ್ಟು ಹಣವನ್ನು ಕಳುಹಿಸುತ್ತಿದ್ದರು. ಖರ್ಚಿಗೆ ಹಣಸಾಲದಿದ್ದರೆ ಪುನಃ ಸುಲಿಗೆ ಪ್ರಾರಂಭವಾಗುತ್ತಿದ್ದಿತು. ಹೀಗಾಗುತ್ತಬರಲು “ ಯಥಾರಾಜಾ ತಥಾಪ್ರಜಾಃ ” ಎಂಬಂತೆ ಮುಖ್ಯಾಧಿಕಾರಿಗಳ ರೀತಿಯನ್ನೇ ಇತರಾಧಿಕಾರಿಗಳೂ ಅನುಸರಿಸಿ ತಮ್ಮ ತಮ್ಮ ಕೈಲಾದಮಟ್ಟಿಗೂ ಅಧಿಕಾರ ನಡೆಯಿಸುತ್ತಿದ್ದರು. ಈ ರೀತಿಯಲ್ಲಿ ಮಂತ್ರಿ ಮೊದಲುಗೊಂಡು ತಳವಾರನ ವರೆಗಿನ ನೌಕರರುಗಳಲ್ಲಿ ಅನ್ಯಾಯವೂ ಅಕ್ರಮವೂ ರಾಜದ್ರೋಹವೂ ಹಿಂಸೆಯೂ ನೆಲಗೊಂಡುವು. ಬಳಿಕ ಪ್ರಜೆಗಳೆಲ್ಲರೂ ರಾಜರನ್ನು ನಿಂದಿಸಲಾರಂಭಿಸಿದರು ; ತುರುಕರ ಆಳಿಕೆಯು ಇದಕ್ಕಿಂತಲೂ ಉತ್ತಮವಾಗಿದ್ದಿತೆಂದು ಹೇಳತೊಡಗಿದರು. ಜನಗಳ ಕಷ್ಟವು ಮಿತಿಮೀರಿತು. ಕಡೆಗೆ, ಭಾರತೀಯರಿಗಿದ್ದ ಸಹಜವಾದ ರಾಜ ಭಕ್ತಿಯೂ ಮರೆತುಹೋಯಿತು. “ ದುರ್ಮಂತ್ರೀ ರಾಜ್ಯನಾಶಾಯ ” ಎಂಬ ಮಾತು ಮೈಸೂರು ಸಂಸ್ಥಾನದಲ್ಲಿ ಚೆನ್ನಾಗಿ ಅನುಭವಕ್ಕೆ ಬಂದಿತು.

ಈ ರೀತಿಯಾಗಿ ಸರಕಾರದವರಿಗೂ ಪ್ರಜೆಗಳಿಗೂ ಇದ್ದ ಪರಸ್ಪರಾನುರಾಗವು ತಪ್ಪಿ ದೇಶದಲ್ಲಿ ಗಲಭೆಗೆ ಕಾರಣವಾಯಿತು. ಜನಗಳು ಸರಕಾರದ ಉದ್ಯೋಗಸ್ಥರ

೧೮೪೪ರಲ್ಲಿ ಮಹಾರಾಜರವರು ಪಿತ್ರಾರ್ಜಿತವಾದ ತಮ್ಮ ರಾಜ್ಯವನ್ನು ಮತ್ತೆ ತಮ್ಮ ಸ್ವಾಧೀನಕ್ಕೆ ಕೊಡಿಸಿಕೊಡಬೇಕೆಂದು ಲಾರ್ಡ್ ಹಾರ್ಡಿಂಜ್‌ರವರ ಮೂಲಕ ಕೋರ್ಟ್ ಆಫ್ ಡೈರೆಕ್ಟರುಗಳಿಗೆ ಪ್ರಾರ್ಥನಾಪತ್ರಿಕೆಯನ್ನು ಬರೆದು ಕೊಂಡರು. ಪುನಃ ರಾಜ್ಯಕ್ಷೋಭೆಯುಂಟಾದೀತೆಂಬ ಶಂಕೆಯಿಂದ, ಡೈರೆಕ್ಟರುಗಳು ಮಹಾರಾಜರವರ ಇಷ್ಟವನ್ನು ಪೂರಯಿಸಿಕೊಡಲಾಗುವುದಿಲ್ಲವೆಂಬುದಾಗಿ ಉತ್ತರವನ್ನಿತ್ತರು. ಬಳಿಕ ೧೮೪೭ರಲ್ಲಿ, ಲಾರ್ಡ್ ಡಲ್‌ಹೌಸಿಯವರು ಗವರ್ನರ್ ಜನರಲ್ ಪದವಿಗೆ ಬಂದರು. ಇವರು ಹಿಂದೂ ಸಮ್ರಾಜರಲ್ಲಿ ಅನುರಾಗವನ್ನು ಬಿಟ್ಟು, ಪೂರ್ವದಲ್ಲಿ ಬ್ರಿಟಿಷ್ ಸರಕಾರದವರು ದೇಶೀಯ ಸಂಸ್ಥಾನಗಳನ್ನು ಕಾಪಾಡುವುದಕ್ಕಾಗಿ ಮಾಡಿದ್ದ ಕಟ್ಟು ಕರಾರುಗಳನ್ನು ಮೂಲೆಗೆ ಹಾಕಿ, ಯಾವ ಸಂಸ್ಥಾನದಲ್ಲಿ ಔರಸ ಸಂತಾನವಾಗಲಿ ಇನ್ನಾವ ವಿಧವಾದ ಹಕ್ಕುದಾರರಾಗಲಿ ಇಲ್ಲದೆಹೋಗಿ, ಹಿಂದೂ ಶಾಸ್ತ್ರಪ್ರಕಾರ ದತ್ತು ತೆಗೆದುಕೊಳ್ಳುವುದಕ್ಕೆ ಬ್ರಿಟಿಷರ ಅನುಮತಿಯನ್ನು ಪಡೆಯಬೇಕಾಗುವುದೋ, ಅಂತಹ ಸಂಸ್ಥಾನಕ್ಕೆ ವಾರಸುದಾರರಿಲ್ಲವೆಂದೇ ನಿಶ್ಚಯಿಸಿ, ಅದನ್ನು ಬ್ರಿಟಿಷ್ ಸರಕಾರಕ್ಕೆ ಸೇರಿಸಿಕೊಳ್ಳಬೇಕೆಂಬ ನವೀನವಾದ ರಾಜ್ಯಲಾಭೋಪಾಯವನ್ನು ಏರ್ಪಡಿಸಿದರು. ಕೂಡಲೆ ದುರದೃಷ್ಟವಶದಿಂದ ಸತಾರ, ನಾಗಪುರ, ಝಾನ್ಸಿ, ತಂಜಾವೂರು ಮುಂತಾದ ದೇಶಾಧಿಪತಿಗಳು ಕಾಲವಾಗಲು, ಅವರುಗಳಿಗೆ ಔರಸ ಪುತ್ರರು ಇಲ್ಲದಿದ್ದುದರಿಂದ, ಅವರ ಸಂಸ್ಥಾನಗಳನ್ನು ಒಂದೊಂದಾಗಿ ಬ್ರಿಟಿಷ್ ಸರಕಾರಕ್ಕೆ ಸೇರಿಸಿಕೊಳ್ಳಲಾರಂಭವಾಯಿತು.

೧೮೫೭ನೆಯ ಇಸವಿಯಲ್ಲಿ ಲಾರ್ಡ್ ಡಲ್‌ಹೌಸಿಯವರು ಮೈಸೂರಿಗೆ ಬಂದು ಚಾಮುಂಡೀ ಬೆಟ್ಟದಲ್ಲಿ ಇಳಿದುಕೊಂಡರು. ಮಹಾರಾಜರು ಅವರನ್ನು ವಿಶೇಷ ಗೌರವದಿಂದ ಆದರಿಸಿ ಸತ್ಕರಿಸಿದರು. ಮಹಾರಾಜರವರಿಗೂ ವೈಸ್ರಾಯರಿಗೂ ಪಾರ್ಸೀ ಭಾಷೆಯಲ್ಲಿ ಅನೇಕ ಪ್ರಸ್ತಾಪಗಳು ನಡೆದುವು. ಈ ಪ್ರಸ್ತಾಪ ಕಾಲದಲ್ಲಿ ಡಲ್‌ಹೌಸಿಯವರು ಮಹಾರಾಜರವರನ್ನು ಕುರಿತು "ಜಿಸ್‌ಮುಲ್ಕ್ ಡಲ್‌ಹೌಸಿ ಆಂಕಿ ಕೋಲ್ಕರ ದೇಖಾ, ಓ ಸಬ್ ಜಲ್ಗಯಾ, ಮೈಸೂರ್‍ಕ್ ಮೈಸ ನೈಹಿ ದೇಖಾ" ಎಂದು ಹೇಳಿದರು. ಅದಕ್ಕೆ ಮಹಾರಾಜರು "ಓ ಸಚ್; ಅಪನೆ ಗರ್ ಅಪೆ ನೈಜಲಾತೇತೆ. ದುನರೇಜ ಗರ್ ಜಲಾಯಿಂಗೆ. ಮುಂಜೆ ಪಾಂಚ್‌ಬರ್‌ಸ್ಕ ಬಚ್ಚೇಮೆ ತಃಖ್ತ್‌ಪರ್ ಬಿಠಾಯೇ ಮೈ ಕುಂಪ್ನೀಕೆ ಬಚ್ಚಾಹೂಂ" ಎಂದು ಅಪ್ಪಣೆ ಕೊಟ್ಟರು. ಹೀಗೆ ಡಲ್‌ಹೌಸಿಯವರಿಗೂ ಮಹಾರಾಜರವರಿಗೂ ಇಷ್ಟು ಸಖ್ಯವಿದ್ದರೂ, ಅವರು ತಾವು ಹೋಗುವ ಕಾಲದಲ್ಲಿ—ಟೀಪು ಸತ್ತಾಗ ಮೈಸೂರು ಸಂಸ್ಥಾನವನ್ನು ಮುಮ್ಮಡಿ ಕೃಷ್ಣರಾಜ ಒಡೆಯರವರಿಗೆ ಭಾಗಮಾಡಿಕೊಟ್ಟುದೇ ತಪ್ಪೆಂತಲೂ, ಅವರು ಗತಿಸಿದನಂತರ ರಾಜ್ಯವನ್ನು ಇಂಗ್ಲಿಷಿನವರೇ ಸೇರಿಸಿಕೊಳ್ಳಬೇಕೆಂತಲೂ ತಮ್ಮ ಅಭಿಪ್ರಾಯವನ್ನು ಬರೆದಿಟ್ಟರು. ಇವರ ಅನಂತರದಲ್ಲಿ ಬಂದ ಲಾರ್ಡ್ ಕ್ಯಾನಿಂಗ್ ಸಾಹೇಬರಿಗೆ ಸಹ ತಮ್ಮ ರಾಜ್ಯವನ್ನು ತಮಗೆ ಕೊಡಿಸಬೇಕೆಂದು ಮಹಾರಾಜರವರು ಮತ್ತೆ ಬರೆದುಕೊಂಡರು. ಅದಕ್ಕೂ ಮೊದಲಿನ ಉತ್ತರವೇ ದೊರೆಯಿತು.

ಭಗವದಾಜ್ಞಾ ಪ್ರೇರಿತವಾದ ಕಾಲಚಕ್ರವು ಕುಲಾಲಚಕ್ರದಂತೆ ಭ್ರಮಿಸುತ್ತಿರುವುದು ! ಲೋಕದಲ್ಲಿ ಇದರಿಂದ ಅಪರಿಚಿಂತ್ಯಗಳೂ ಅಮಾನುಷೇಯಗಳೂ ಆದ ವ್ಯತ್ಯಾಸಗಳು ನಡೆಯುತ್ತಿರುವುವು. “ನೀಚೈರ್ಗಚ್ಛತ್ಯುಪರಿಚ ದಶಾಚಕ್ರನೇಮಿಕ್ರಮೇಣ” ಎಂಬಂತೆ ಕಾಲಪುರುಷನ ಮಹಿಮೆಯಿಂದ ಉನ್ನತಾವಸ್ಥೆಯಲ್ಲಿದ್ದುದು ನೀಚಾವಸ್ಥೆಯನ್ನೂ ನೀಚಾವಸ್ಥೆಯಲ್ಲಿದ್ದುದು ಉಚ್ಚಾವಸ್ಥೆಯನ್ನೂ ಪಡೆಯುತ್ತಿರುವುದು. ಇದರಂತೆ ಇಂಡಿಯಾದೇಶದ ನಾನಾಭಾಗಗಳಲ್ಲಿ ಪ್ರಜಾಕ್ಷೇಮಕ್ಕೆ ಪ್ರತಿಕೂಲಗಳಾದ ವಿದ್ಯಮಾನಗಳು ಕಾಣಿಸಿಕೊಳ್ಳಲಾರಂಭವಾದುವು. ದೈವಪ್ರಸಾದಲಬ್ಧವಾದ ಪೌರುಷಶಕ್ತಿಯನ್ನಳಿದು ದಾಸ್ಯವೃತ್ತಿಯನ್ನನುಭವಿಸುತ್ತ ಸ್ವಾತಂತ್ರ್ಯಹೀನರಾಗಿದ್ದ ಅನೇಕ ಮುಸಲ್ಮಾನರೂ ಹಿಂದೂಗಳೂ, ತಮಗೆ ಪ್ರತಿಕೂಲವಾಗೇರ್ಪಟ್ಟಿದ್ದ ಆಂಗ್ಲೇಯರ ರಾಜಶಾಸನಗಳ ಕಟ್ಟಿನೊಳಗೆ ಸಿಕ್ಕಿರುವುದಕ್ಕೆ ಮನಸ್ಸಿಲ್ಲದೆ, ೧೮೫೭ನೆಯ ಇಸವಿಯಲ್ಲಿ ಇಂಗ್ಲಿಷರಮೇಲೆ ತಿರುಗಿಬಿದ್ದರು. ಹಿಂದೂಸ್ಥಾನದಲ್ಲೆಲ್ಲ ಅನೇಕ ಯುದ್ಧಗಳೂ ದಂಗೆಗಳೂ ನಡೆದುವು. ಅನೇಕ ಲಕ್ಷ ಪ್ರಾಣನಾಶವುಂಟಾಯಿತು. ಆಗ ಇಂಗ್ಲಿಷರಿಗೆ ಭರತಖಂಡವನ್ನುಳಿಸಿಕೊಳ್ಳುವುದೇ ಕಷ್ಟವಾಗಿ ಕಂಡುಬಂದಿತು. ಆದರೆ ದೈವಸಹಾಯ ಸಂಪದ್ಯುಕ್ತರಾದ ಇಂಗ್ಲಿಷರು ದಂಗೆಗಳನ್ನೆಲ್ಲ ಅಡಗಿಸಿ, ಕಡೆಗೆ ರಾಜ್ಯವನ್ನು ಸಮಾಧಾನಸ್ಥಿತಿಗೆ ತಂದರು. ಇಲ್ಲಿಂದ ಮುಂದಕ್ಕೆ ಹಿಂದೂಸ್ಥಾನದಲ್ಲಿ ಬ್ರಿಟಿಷ್ ರಾಜ್ಯಭಾರಕ್ಕೆ ಅವಸ್ಥಾಂತರವು ಸಂಭವಿಸಿ, ಅದುವರೆಗೆ ಈ ದೇಶದಲ್ಲಿದ್ದ ಕಂಪೆನಿಯ ರಾಜ್ಯಭಾರವು ಕೊನೆಗಂಡಿತು. ಅಂದಿನಿಂದ ಇಂಗ್ಲೆಂಡ್ ದೇಶದ ಪ್ರಭುಗಳೇ ಈ ದೇಶಕ್ಕೂ ಪ್ರಭುಗಳಾದರು. ಆ ಕಾಲದಲ್ಲಿ ಪ್ರಭುತ್ವ ಮಾಡುತ್ತಿದ್ದ ಶ್ರೀಮದ್ವಿಕ್ಟೋರಿಯಾ ಮಹಾರಾಜ್ಞಿಯವರು ಇಂಡಿಯಾದೇಶದ ದಂಗೆಗಳೆಲ್ಲವೂ ಅಡಗಿದ ಬಳಿಕ, ಈ ದೇಶೀಯರಾದ ಸಂಸ್ಥಾನಾಧಿಪತಿಗಳಿಗೆ ದತ್ತು ತೆಗೆದುಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು, ಅವರವರ ಸಂಸ್ಥಾನಗಳನ್ನು ಆಯಾ ವಂಶೀಯರಿಗೇ ನಡೆಯಿಸಿಕೊಡುವುದು ಸಾರ್ವಭೌಮ ಪದವಿಗೆ ಭೂಷಣವೆಂದರಿತವರಾಗಿ, ೧೮೫೮ನೆಯ ಇಸವಿಯಲ್ಲಿ ತಮ್ಮ ರಾಜ್ಯವನ್ನು ಇನ್ನು ಹೆಚ್ಚಿಸಬೇಕೆಂಬ ಆಶೆಯು ತಮಗಿಲ್ಲವೆಂತಲೂ, ಪ್ರಜೆಗಳ ಮತದ ಗೋಜಿಗೆ ತಾವು ಬರುವುದಿಲ್ಲವೆಂತಲೂ, ಅದುವರೆಗೆ ಜನರಿಗಿದ್ದ ಹಕ್ಕಿಗೆ ಕುಂದಕಬಾರದಂತೆ ಆಳುವೆವೆಂತಲೂ, ಇಲ್ಲಿನ ರಾಜರುಗಳು ತೆಗೆದುಕೊಂಡ ದತ್ತನ್ನು ತಾವು ಅಂಗೀಕರಿಸುವೆವೆಂತಲೂ ಸೂಚಿಸುವ ಒಂದು ಪ್ರಸಿದ್ಧಿಪತ್ರಿಕೆಯನ್ನು ಪ್ರಕಟಿಸಿದರು. ಆ ಸಮಯದಲ್ಲಿ ಪ್ರಜೆಗಳಿಗೆ ಎಷ್ಟು ಆನಂದವಾಯಿತೆಂಬುದನ್ನು ಲಿಖಿತಮೂಲಕವಾಗಿ ತೋರಿಸುವುದು ಅಸಾಧ್ಯ. ಯಾವ ದಿವಸ ಹಿಂದೂಸ್ಥಾನದ ಪ್ರಜೆಗಳಿಗೆ ಆ ಪತ್ರಿಕೆಯು ಪ್ರಾಪ್ತವಾಯಿತೋ ಆ ದಿವಸ, ಅಸ್ತಮಿಸಿದ್ದ ಅವರ ಭಾಗ್ಯವು ಪುನಃ ಉದಯಿಸಿದಂತಾಯಿತು.

ಹೀಗೆ ದತ್ತು ತೆಗೆದುಕೊಳ್ಳುವುದಕ್ಕೆ ಹಿಂದೂಸ್ಥಾನದ ಮಹಾರಾಜರುಗಳಿಗ ಇಂಗ್ಲಿಷ್ ಸರಕಾರವು ಅವಕಾಶವನ್ನು ಕೊಟ್ಟಿದ್ದರೂ, ಐದುನೂರು ಸಂಸ್ಥಾನದ

ವಿಷಯದಲ್ಲಿ ವಿಪರ್ಯಯವನ್ನು ಹೊಂದುವಂತೆ ತೋರಿತು. ಮಹಾರಾಜರು ದತ್ತು ತೆಗೆದುಕೊಳ್ಳುವುದು ಇಂಗ್ಲಿಷ್ ಸರಕಾರದವರಿಗೆ ಇಷ್ಟವಾದರೂ ಲಾರ್ಡ್ ಕ್ಯಾನಿಂಗ್ ಸಾಹೇಬರು ಬೇರೊಂದು ಪರ್ಯಾಲೋಚನೆಯನ್ನು ಮಾಡಿ, ಮೈಸೂರು ಸೀಮೆಯು ಮದರಾಸು ಕೋರಿನ ಮಧ್ಯದಲ್ಲಿರುವುದರಿಂದ, ರಾಜ್ಯಭಾರವನ್ನು ಕಳೆದುಕೊಂಡಿರುವ ಮುಮ್ಮಡಿ ಕೃಷ್ಣರಾಜ ಒಡೆಯರವರ ಸಮ್ಮತಿಯನ್ನು ಪಡೆದು, ಅದನ್ನು ಬ್ರಿಟಿಷ್ ಸರಕಾರಕ್ಕೆ ಸೇರಿಸಿಕೊಳ್ಳುವುದು ಅತ್ಯಾವಶ್ಯಕವೆಂದು, ವಿಕ್ಟೋರಿಯಾ ಸರಕಾರಕ್ಕೆ ಸೂಚನೆಯನ್ನು ಕೊಟ್ಟು ಕೆಲಸದಿಂದ ನಿವೃತ್ತರಾದರು.

ಈ ಸಮಯದಲ್ಲಿ, ಮಹಾರಾಜರಿಗೆ ಆಪ್ತರಾಗಿದ್ದ ಸರ್ ಮಾರ್ಕ್ *ಕಬ್ಬನ್ ಸಾಹೇಬರು ವಿಲಾಯಿತಿಗೆ ಹೋದರು. ಇವರು ಇರುವವರೆಗೂ ರಾಜ್ಯಭಾರವು ಇಂಗ್ಲಿಷ್ ಜನಗಳದಾಗಿದ್ದರೂ, ರಾಜ್ಯಭಾರದ ವೆಚ್ಚಗಳು ಕಡಿಮೆಯಾಗಿ, ರಾಜ್ಯದ ಖಜಾನೆಯು ತುಂಬಿದ್ದಿತು. ಇವರನಂತರ ಬಂದ ಬೌರಿಂಗ್ ಸಾಹೇಬರು ಅನೇಕ ಹೊಸ ಏರ್ಪಾಡುಗಳನ್ನು ಮಾಡಿ, ಅನೇಕ ಇಲಾಖೆಗಳನ್ನು ಕಲ್ಪಿಸಿ, ದೊಡ್ಡ ಅಧಿಕಾರಗಳಿಗೆಲ್ಲ ಯೂರೋಪಿಯನರನ್ನು ತಂದಿಟ್ಟು, ಖಜಾನೆಯನ್ನು ಬರಿದುಮಾಡಿದರು. ಈ ಅಧಿಕಾರಿಗಳೆಲ್ಲರೂ ರಾಜ್ಯವನ್ನು ದೊರೆಗಳಿಗೆ ಕೊಟ್ಟರೆ ತಮ್ಮ ಅಧಿಕಾರಗಳು ಎಲ್ಲಿ ನಷ್ಟವಾಗುತ್ತವೋ ಎಂಬ ಭೀತಿಯಿಂದ, ಮುಮ್ಮಡಿ ಕೃಷ್ಣರಾಜ ಒಡೆಯರವರಿಗೆ ಮಕ್ಕಳಿಲ್ಲವಾದುದರಿಂದ, ಅವರು ತಮ್ಮ ಅನಂತರದಲ್ಲಿ ರಾಜ್ಯವನ್ನು ಇಂಗ್ಲಿಷರಿಗೆ ಸರ್ವಮಾನ್ಯವಾಗಿ ಕೊಡಬೇಕೆಂದಿದ್ದಾರೆಂಬ ಸುಳ್ಳು ಸುದ್ದಿಯನ್ನು ಹುಟ್ಟಿಸಿದರು. ಇದಲ್ಲದೆ ದೊರೆಗಳು ಯಾವಾಗ ತೀರಿಹೋದಾರು, ಯಾವಾಗ ಈ ದೇಶವು ನಿರುಪಾಧಿಕವಾಗಿ ತಮಗೆ ಸಿಕ್ಕೀತು ಎಂದು ಅನೇಕರು ಇದಿರುನೋಡುತ್ತಿದ್ದರು.

ಮೇಲೆ ಹೇಳಿದ ಗವರ್ನರ್ ಜನರಲ್‌ಗಳು ಬರೆದಿಟ್ಟಿದ್ದ ಈ ಅಭಿಪ್ರಾಯಗಳು ಮಹಾರಾಜರಿಗೆ ತಿಳಿಯಬಂದಿರಲಿಲ್ಲವೆಂದು ತೋರುತ್ತದೆ. ಏಕೆಂದರೆ, ಹಾಗೆ ತಿಳಿದಿದ್ದ ಪಕ್ಷದಲ್ಲಿ ಮಹಾರಾಜರು ತಮ್ಮ ಆಶೆ ನಿರಾಶೆಯಾಯಿತೆಂದು ತಿಳಿದುಕೊಳ್ಳದೆಯೂ ಇರುತ್ತಿರಲಿಲ್ಲ; ರಾಜಕೀಯವಾದ ಅನೇಕ ಕಾರಣಗಳಿಂದ ಹಿಂದೂಸ್ಥಾನದಲ್ಲಿ ಹುಟ್ಟಿದ್ದ ನಾನಾರಾಯನ ದಂಗೆಯೆಂಬ ಭಯಂಕರವಾದ ವಾತಾಹತಿಯ ಕಾಲದಲ್ಲಿ ಇಂಗ್ಲಿಷರಿಗೆ ಸಹಾಯವಾಗಿ ನಿಲ್ಲಲೂ ಆಗುತ್ತಿರಲಿಲ್ಲ; ತಮ್ಮ ರಾಜ್ಯವನ್ನು ತಮಗೆ ಪುನಃ ಕೊಡುವ ಹಾಗೆಯೂ ತಮ್ಮ ಅನಂತರ ರಾಜ್ಯಕ್ಕೆ ಒಬ್ಬ ಪುತ್ರನನ್ನು ದತ್ತು ತೆಗೆದುಕೊಳ್ಳುವುದಕ್ಕೆ ಸಮ್ಮತಿ ಕೊಡುವ ಹಾಗೆಯೂ ಅಡಿಗಡಿಗೆ ಪ್ರಾರ್ಥನಾ ಪತ್ರಿಕೆಗಳನ್ನು ಕಳುಹಿಸುತ್ತಲೂ ಇರಲಿಲ್ಲ

ಹೀಗೆ ಕೆಲವು ಕಾಲ ಕಳೆಯಿತು. ಮಹಾರಾಜರವರಿಗೆ ಪುತ್ರಸಂತಾನವಾಗಲಿಲ್ಲವೆಂಬ ಮನೋವ್ಯಥೆಯು ಹೆಚ್ಚುತ್ತಬಂದಿತು. ವಂಶಾಂಕುರವನ್ನು ಬಯಸಿ, ತಮ್ಮ ರಮಣಿಯರಿಂದ ಶಾಸ್ತ್ರೋಕ್ತಗಳಾಗಿಯೂ ಹಿರಿಯರ ವಚನಾನುಸಾರವಾಗಿ

* ಇವರು ಮಾಡಿದ ಒಳ್ಳೆಯ ಕೆಲಸಗಳ ಜ್ಞಾಪನಾರ್ಥವಾಗಿ ಅಶ್ವಾರೂಢರಾದ ಇವರ ಲೋಹ ಪ್ರತಿಮೆಯು ಬೆಂಗಳೂರು ಅಠಾರಾ ಕಚೇರಿಯ ಮುಂದುಗಡೆಯಲ್ಲಿ ನಿಲ್ಲಿಸಲ್ಪಟ್ಟಿದೆ.

ವಿಷಯದಲ್ಲಿ ವಿಪರ್ಯಯವನ್ನು ಹೊಂದುವಂತೆ ತೋರಿತು. ಮಹಾರಾಜರು ದತ್ತು ತೆಗೆದುಕೊಳ್ಳುವುದು ಇಂಗ್ಲಿಷ್ ಸರಕಾರದವರಿಗೆ ಇಷ್ಟವಾದರೂ ಲಾರ್ಡ್ ಕ್ಯಾನಿಂಗ್ ಸಾಹೇಬರು ಬೇರೊಂದು ಪರ್ಯಾಲೋಚನೆಯನ್ನು ಮಾಡಿ, ಮೈಸೂರು ಸೀಮೆಯು ಮದರಾಸು ಕೋರಿನ ಮಧ್ಯದಲ್ಲಿರುವುದರಿಂದ, ರಾಜ್ಯಭಾರವನ್ನು ಕಳೆದುಕೊಂಡಿರುವ ಮುಮ್ಮಡಿ ಕೃಷ್ಣರಾಜ ಒಡೆಯರವರ ಸಮ್ಮತಿಯನ್ನು ಪಡೆದು, ಅದನ್ನು ಬ್ರಿಟಿಷ್ ಸರಕಾರಕ್ಕೆ ಸೇರಿಸಿಕೊಳ್ಳುವುದು ಅತ್ಯಾವಶ್ಯಕವೆಂದು. ವಿಕ್ಟೋರಿಯಾ ಸರಕಾರಕ್ಕೆ ಸೂಚನೆಯನ್ನು ಕೊಟ್ಟು ಕೆಲಸದಿಂದ ನಿವೃತ್ತರಾದರು.

ಈ ಸಮಯದಲ್ಲಿ, ಮಹಾರಾಜರಿಗೆ ಆಪ್ತರಾಗಿದ್ದ ಸರ್ ಮಾರ್ಕ್[1] ಕಬ್ಬನ್ ಸಾಹೇಬರು ವಿಲಾಯಿತಿಗೆ ಹೋದರು. ಇವರು ಇರುವವರೆಗೂ ರಾಜ್ಯಭಾರವು ಇಂಗ್ಲಿಷ್ ಜನಗಳದಾಗಿದ್ದರೂ, ರಾಜ್ಯಭಾರದ ವೆಚ್ಚಗಳು ಕಡಿಮೆಯಾಗಿ, ರಾಜ್ಯದ ಖಜಾನೆಯು ತುಂಬಿದ್ದಿತು. ಇವರನಂತರ ಬಂದ ಬೌರಿಂಗ್ ಸಾಹೇಬರು ಅನೇಕ ಹೊಸ ಏರ್ಪಾಡುಗಳನ್ನು ಮಾಡಿ, ಅನೇಕ ಇಲಾಖೆಗಳನ್ನು ಕಲ್ಪಿಸಿ, ದೊಡ್ಡ ಅಧಿಕಾರಗಳಿಗೆಲ್ಲ ಯೂರೋಪಿಯನರನ್ನು ತಂದಿಟ್ಟು, ಖಜಾನೆಯನ್ನು ಬರಿದುಮಾಡಿದರು. ಈ ಅಧಿಕಾರಿಗಳೆಲ್ಲರೂ ರಾಜ್ಯವನ್ನು ದೊರೆಗಳಿಗೆ ಕೊಟ್ಟರೆ ತಮ್ಮ ಅಧಿಕಾರಗಳು ಎಲ್ಲಿ ನಷ್ಟವಾಗುತ್ತವೋ ಎಂಬ ಭೀತಿಯಿಂದ, ಮುಮ್ಮಡಿ ಕೃಷ್ಣರಾಜ ಒಡೆಯರವರಿಗೆ ಮಕ್ಕಳಿಲ್ಲವಾದುದರಿಂದ, ಅವರು ತಮ್ಮ ಅನಂತರದಲ್ಲಿ ರಾಜ್ಯವನ್ನು ಇಂಗ್ಲಿಷರಿಗೆ ಸರ್ವಮಾನ್ಯವಾಗಿ ಕೊಡಬೇಕೆಂದಿದ್ದಾರೆಂಬ ಸುಳ್ಳು ಸುದ್ದಿಯನ್ನು ಹುಟ್ಟಿಸಿದರು. ಇದಲ್ಲದೆ ದೊರೆಗಳು ಯಾವಾಗ ತೀರಿಹೋದಾರು, ಯಾವಾಗ ಈ ದೇಶವು ನಿರುಪಾಧಿಕವಾಗಿ ತಮಗೆ ಸಿಕ್ಕೀತು ಎಂದು ಅನೇಕರು ಇದಿರುನೋಡುತ್ತಿದ್ದರು.

ಮೇಲೆ ಹೇಳಿದ ಗವರ್ನರ್ ಜನರಲ್‌ಗಳು ಬರೆದಿಟ್ಟಿದ್ದ ಈ ಅಭಿಪ್ರಾಯಗಳು ಮಹಾರಾಜರಿಗೆ ತಿಳಿಯಬಂದಿರಲಿಲ್ಲವೆಂದು ತೋರುತ್ತದೆ. ಏಕೆಂದರೆ, ಹಾಗೆ ತಿಳಿದಿದ್ದ ಪಕ್ಷದಲ್ಲಿ ಮಹಾರಾಜರು ತಮ್ಮ ಆಶೆ ನಿರಾಶೆಯಾಯಿತೆಂದು ತಿಳಿದುಕೊಳ್ಳದೆಯೂ ಇರುತ್ತಿರಲಿಲ್ಲ; ರಾಜಕೀಯವಾದ ಅನೇಕ ಕಾರಣಗಳಿಂದ ಹಿಂದೂಸ್ಥಾನದಲ್ಲಿ ಹುಟ್ಟಿದ್ದ ನಾನಾರಾಯನ ದಂಗೆಯೆಂಬ ಭಯಂಕರವಾದ ವಾತಾಹತಿಯ ಕಾಲದಲ್ಲಿ ಇಂಗ್ಲಿಷರಿಗೆ ಸಹಾಯವಾಗಿ ನಿಲ್ಲಲೂ ಆಗುತ್ತಿರಲಿಲ್ಲ; ತಮ್ಮ ರಾಜ್ಯವನ್ನು ತಮಗೆ ಪುನಃ ಕೊಡುವ ಹಾಗೆಯೂ ತಮ್ಮ ಅನಂತರ ರಾಜ್ಯಕ್ಕೆ ಒಬ್ಬ ಪುತ್ರನನ್ನು ದತ್ತು ತೆಗೆದುಕೊಳ್ಳುವುದಕ್ಕೆ ಸಮ್ಮತಿ ಕೊಡುವ ಹಾಗೆಯೂ ಅಡಿಗಡಿಗೆ ಪ್ರಾರ್ಥನಾ ಪತ್ರಿಕೆಗಳನ್ನು ಕಳುಹಿಸುತ್ತಲೂ ಇರಲಿಲ್ಲ.

ಹೀಗೆ ಕೆಲವು ಕಾಲ ಕಳೆಯಿತು. ಮಹಾರಾಜರವರಿಗೆ ಪುತ್ರಸಂತಾನವಾಗಲಿಲ್ಲವೆಂಬ ಮನೋವ್ಯಥೆಯು ಹೆಚ್ಚುತ್ತಬಂದಿತು. ವಂಶಾಂಕುರವನ್ನು ಬಯಸಿ, ತಮ್ಮ ರಮಣಿಯರಿಂದ ಶಾಸ್ತ್ರೋಕ್ತಗಳಾಗಿಯೂ ಹಿರಿಯರ ವಚನಾನುಸಾರವಾಗಿ

[1] ಇವರು ಮಾಡಿದ ಒಳ್ಳೆಯ ಕೆಲಸಗಳ ಜ್ಞಾಪಕಾರ್ಥವಾಗಿ ಅಶ್ವಾರೂಢವಾದ ಇವರ ದೇಹ ಪ್ರತಿಮೆಯು ಬೆಂಗಳೂರು ಅಠಾರಾ ಕಚೇರಿಯ ಮುಂದುಗಡೆಯಲ್ಲಿ ನಿಲ್ಲಿಸಲ್ಪಟ್ಟಿದೆ.

ಯೂ ಇರುವ ಅನೇಕ ವ್ರತೋಪವಾಸಾದಿಗಳನ್ನು ಮಾಡಿಸಿದರು. ದೇವಬ್ರಾಹ್ಮಣರ ಪೂಜೆಗಳು ಸರ್ವದಾ ನಡೆಯುತ್ತಿದ್ದುವು. ದೇವಿಯರೆಲ್ಲರೂ ಮಹಿಷ ಮರ್ದನಿಯಾದ ಚಾಮುಂಡೇಶ್ವರಿಗೆ ಹಗಲೂ ಇರುಳೂ ಕರಕಮಲಗಳನ್ನು ಮುಗಿದು ಪ್ರಾರ್ಥನೆಗೆಯ್ಯುತ್ತಿದ್ದರು. ಆದರೂ ಯಾವ ಪಟ್ಟಮಹಿಷಿಯರಲ್ಲಿಯೂ ವಂಶಾಂಕುರವು ಉದಯಿಸದೆ ಹೋಯಿತು. ಈ ಕಾಲಕ್ಕೆ ಮಹಾರಾಜರವರಿಗೆ ೭೭, ೭೮ ವರುಷ ವಯಸ್ಸಾಗಿದ್ದಿತು. ಪುತ್ರಸಂತಾನವಾಗಲಿಲ್ಲವಲ್ಲಾ! ರಾಜ್ಯವು ತಪ್ಪಿ ಹೋಯಿತಲ್ಲಾ! ಎಂಬ ಚಿಂತೆ ಸರ್ವದಾ ಅವರನ್ನು ಪೀಡಿಸುತ್ತಿದ್ದಿತು. "ನಮ್ಮ ಅನಂತರದಲ್ಲಿ ಈ ಮೊರ್ಘರವಾದ ರಾಜ್ಯಕ್ಕಾರು ದಿಕ್ಕು? ಪಿತೃಗಳ ಋಣದಿಂದ ಮುಕ್ತನೆಂದೆನ್ನಿಸಿಕೊಳ್ಳದೆ ಹೋದೆನಲ್ಲಾ! ಯದುರಾಯರ ಕಾಲದಿಂದಲೂ ಅಖಂಡವಾಗಿ ಪ್ರಜ್ವಲಿಸುತ್ತಿದ್ದ ಮೈಸೂರು ರಾಜ್ಯದ ದೀಪವು ನನ್ನ ಕಾಲದಲ್ಲೇ ನಂದಿಹೋಗಬೇಕೆ? ನನ್ನ ವಂಶದ ವೃದ್ಧ್ಯರ್ಥವಾಗಿ ದೇವರು ಒಂದು ಪುತ್ರಸಂತಾನವನ್ನಾದರೂ ಕರುಣಿಸದೆ ಹೋದನಲ್ಲಾ!" ಎಂದು ಅಹರ್ನಿಶವೂ ದುಃಖಪಡುತ್ತಿದ್ದರು.

ಹೀಗಿರುವಲ್ಲಿ, ಜ್ಯೋತಿಷಾದ್ಯನೇಕ ಶಾಸ್ತ್ರಗಳನ್ನೂ ಧರ್ಮಶಾಸ್ತ್ರ ರಹಸ್ಯಗಳನ್ನೂ ಶ್ರವಣಪಠನಾದಿ ಸಾಧನಗಳಿಂದ ಕೂಲಂಕಷವಾಗಿ ವಿಚಾರಮಾಡಿ ಜ್ಞಾನಶಾಲಿಗಳೆನ್ನಿಸಿಕೊಂಡಿದ್ದ ಶ್ರೀಕೃಷ್ಣಭೂಪತಿಗಳು, ದಶವಿಧ ಪುತ್ರರಲ್ಲಿ ಔರಸನಿಲ್ಲದ ವೇಳೆಯಲ್ಲಿ ತತ್ಸಮಾನನು ದತ್ತನೇ ಸರಿಯೆಂಬ ಶಾಸ್ತ್ರಸಮ್ಮತವಾದ ವಾಕ್ಯವನ್ನು ಮನಸ್ಸಿಗೆ ತಂದುಕೊಂಡು, ಒಂದು ಶುಭದಿನ ಶುಭ ಮುಹೂರ್ತದಲ್ಲಿ ಎದ್ದು ಸ್ನಾನಾಹ್ನಿಕಗಳನ್ನು ನೆರವೇರಿಸಿಕೊಂಡು, * ನಾಮತೀರ್ಥತೊಟ್ಟಿಯಲ್ಲಿ ಸ್ಥಾಪಿತೆಯಾಗಿರುವ ದಿವ್ಯತೇಜೋರೂಪಿಣಿಯಾದ ಚಾಮುಂಡಾಂಬೆಗೆ ವಿಶೇಷವಾಗಿ ಆರಾಧನೆಗಳನ್ನು ಮಾಡಿಸಿ, ಮಂಗಳಾರತಿಯಾದನಂತರದಲ್ಲಿ ನಿಯಮದಿಂದ ಪ್ರಸಾದವನ್ನು ಸ್ವೀಕರಿಸಿ, ರಮಾವಿಲಾಸ ಸನ್ನಿಧಾನವನ್ನು ಸೇರಿ, ಅವರೊಡನೆ ಆಲೋಚಿಸಿ, ತಮ್ಮ ಅಳಿಯಂದಿರಾದ ಚಿಕ್ಕ ಕೃಷ್ಣೇಅರಸಿನವರನ್ನೂ ಗರ್ಭಿಣಿಯರಾಗಿದ್ದ ಅವರ ಪತ್ನಿ ದೇವಾಜಮ್ಮಣ್ಣಿಯವರನ್ನೂ ಕರೆದುಕೊಂಡು ಬರುವಂತೆ ದಂಡಿಗೆಯನ್ನು ಕೊಟ್ಟು ಕಳುಹಿಸಿದರು. ಆ ದಂಪತಿಗಳು ಅಂದು ಯಾವ ಶುಭದಿವಸವೂ ವಿಶೇಷ ದಿವಸವೂ ಅಲ್ಲವಾದರೂ

* ಇಲ್ಲಿ ನಿತ್ಯವೂ ಮಹಾರಾಜರು ಸ್ನಾನಾಹ್ನಿಕಗಳನ್ನು ತೀರಿಸಿಕೊಂಡು ಹಣೆಗೆ ನಾಮವನ್ನಿಟ್ಟುಕೊಂಡು ದೇವರ ಪೂಜೆಗೆ ಹೋಗುತ್ತಿದ್ದುದರಿಂದ, ಇದನ್ನು ನಾಮತೀರ್ಥತೊಟ್ಟಿಯೆಂದು ಕರೆಯುತ್ತಿದ್ದರು. ಇದಲ್ಲದೆ, ಅರಮನೆಯಲ್ಲಿ ಕನ್ನಡಿತೊಟ್ಟಿ, ವಂತದತೊಟ್ಟಿ, ಸವಾರಿತೊಟ್ಟಿ, ಚಂದ್ರಶಾಲೆತೊಟ್ಟಿ, ಮದನವಿಲಾಸತೊಟ್ಟಿ, ಸಮುಖದತೊಟ್ಟಿ, ಕರ್ಪೂರತೊಟ್ಟಿ ಮುಂತಾದ ತೊಟ್ಟಿಗಳೂ; ಅಂಬಾವಿಲಾಸ, ಆತ್ಮವಿಲಾಸ, ಕೃಷ್ಣವಿಲಾಸ, ಚಂದ್ರವಿಲಾಸ, ರಮಾವಿಲಾಸ, ರಾಜೇಂದ್ರವಿಲಾಸ, ಲಕ್ಷ್ಮೀವಿಲಾಸ, ಸೀತಾವಿಲಾಸ ಮುಂತಾದ ಭವನಗಳೂ ಇದ್ದುವು. ಅಂಬಾವಿಲಾಸ ಹೊರತು ಉಳಿದ ಭವನಗಳ ರಾಣಿಯರನ್ನು ಆಯಾ ಹೆಸರಿನಿಂದಲೇ ಕರೆಯುತ್ತಿದ್ದರು. ಈಚೆಗೆ ೧೮೯೭ರಲ್ಲಿ ಅರಮನೆಗೆ ಅಗ್ನಿಪ್ರವೇಶವಾದಾಗ, ಈ ದಿವ್ಯಭವನಗಳೆಲ್ಲವೂ ಯಜ್ಞೇಶ್ವರನ ಬಾಯಿಗೆ ತುತ್ತಾದುವು.

ಅರಮನೆಯಿಂದ ಆಹ್ವಾನ ಬರುವುದಕ್ಕೆ ಕಾರಣವೇನಿದ್ದೀತೆಂದು ವಿಸ್ಮಿತರಾಗಿ, ರಾಜಾಜ್ಞೆಯನ್ನು ಶಿರಸಾವಹಿಸಿ ಅರಮನೆಗೆ ಬಂದರು. ಮಹಾರಾಜರು ಆ ದಂಪತಿಗಳನ್ನು ಗೋಪ್ಯಸ್ಥಾನದಲ್ಲಿ ಕುಳ್ಳಿರಿಸಿಕೊಂಡು, ಯೋಗಕ್ಷೇಮಗಳನ್ನು ವಿಚಾರಮಾಡಿದ ಬಳಿಕ, "ನಾನು ನನ್ನ ಆಯುರ್ದಾಯವನ್ನೂ, ನಿಮ್ಮ ದಂಪತಿಗಳ ದಶಾಫಲಗಳನ್ನೂ, ಸಂತಾನ ಪ್ರಾಪ್ತಿಯನ್ನೂ ಜ್ಯೋತಿಶ್ಶಾಸ್ತ್ರಬಲದಿಂದ ವಿಚಾರಮಾಡಿರುವೆನು. ಇನ್ನು ಕೆಲವು ದಿವಸಗಳಲ್ಲಿಯೇ ನಿಮ್ಮ ಗರ್ಭದಲ್ಲಿ ಪುತ್ರಸಂತಾನವಾಗುವುದು. ಆ ಪುತ್ರನನ್ನು ನಾನು ಸ್ವೀಕಾರಮಾಡಿಕೊಳ್ಳಬೇಕೆಂದಿರುವೆನು. ನೀವು ಇದಕ್ಕೆ ಸಮ್ಮತಿಸಬೇಕು" ಎಂದು ಅಪ್ಪಣೆಯಿತ್ತರು. ಅದನ್ನು ಕೇಳಿ, ಆ ದಂಪತಿಗಳು ವಿಸ್ಮಯವನ್ನು ಹೊಂದಿ, ಮುಂದೆ ತಮ್ಮ ಮಗನು ಮೈಸೂರು ರಾಜ್ಯದ ರಾಜನಾಗುವನೆಂಬ ಅತಿ ಸಂತೋಷದಿಂದ ಮೈಯುಬ್ಬಿದವರಾಗಿ, "ಮಹಾಸ್ವಾಮಿ! ನಮ್ಮನ್ನು ಕೇಳತಕ್ಕುದೇನು? ತಾವು ಮಹಾಪ್ರಭುಗಳು. ಚಿತ್ತಕ್ಕೆ ಹೇಗೆ ಸೂಕ್ತವೋ ಹಾಗೆಯೇ ನಡೆಯಿಸಿಕೊಳ್ಳಬಹುದು" ಎಂದು ಬಿನ್ನವಿಸಿದರು. ಅಂದಿನಿಂದ ಆ ದಂಪತಿಗಳಲ್ಲಿ ಮಹಾಸ್ವಾಮಿಯವರ ಪ್ರೀತಿಯು ಹೆಚ್ಚಾಯಿತು. ಆದರೆ ಚಿಕ್ಕ ಕೃಷ್ಣೇಅರಸಿನವರು ತಾವೇ ಪ್ರತ್ಯಕ್ಷವಾಗಿ ತಮ್ಮ ಪುತ್ರರನ್ನು ಕೃಷ್ಣರಾಜ ಒಡೆಯರವರಿಗೆ ಸ್ವೀಕೃತಪುತ್ರರನ್ನಾಗಿ ಮಾಡಿ, ಸಂತೋಷವನ್ನನುಭವಿಸುವ ಪುಣ್ಯವನ್ನು ಪಡೆದಿರಲಿಲ್ಲವಾದುದರಿಂದ, ಮುಂಚೆಯೇ— ಎಂದರೆ ೧೮೬೩ನೆಯ ಇಸವಿ ಫೆಬ್ರುವರಿ ೧೩ರಲ್ಲಿ— ಕಾಲವಾದರು. ದೇವಾಜಮ್ಮಣ್ಣಿಯವರು ಪತಿವಿಯೋಗವೆಂಬ ದುಃಖಾರ್ಣವದಲ್ಲಿ ಮುಳುಗಿ ಸಂಕಟಪಡುತ್ತಿದ್ದರು. ಆ ಆಶೌಚವು ನಿವೃತ್ತಿಯಾಗುವುದಕ್ಕೆ ಮೊದಲೇ, ಮಹಾಪ್ರಭುಗಳು ಅಪ್ಪಣೆ ಕೊಡಿಸಿದ್ದಂತೆ, ಅದೃಷ್ಟವಿಶೇಷದಿಂದ ದೇವಾಜಮ್ಮಣ್ಣಿಯವರ ಗರ್ಭಸಾಗರದಲ್ಲಿ ಒಂದು ಪುತ್ರರತ್ನವು ಜನನವಾಯಿತು. ಪತಿವಿಯೋಗಜನ್ಯವಾದ ದುಃಖಾಗ್ನಿಯಲ್ಲಿ ಬೇಯುತ್ತಿದ್ದ ದೇವಾಜಮ್ಮಣ್ಣಿಯವರಿಗೆ ಈ ಪುತ್ರಸಂದರ್ಶನದಿಂದ ಸ್ವಲ್ಪಮಟ್ಟಿಗೆ ವಿಶ್ರಾಂತಿ ದೊರೆಯಿತು. ಬಳಿಕ ಆ ಮನೆಯ ಕುಲಪುರೋಹಿತನು, ಈ ಶಿಶುವಿನ ಜನನಕಾಲ ಗ್ರಹಸ್ಥಿತಿಯನ್ನು ಪರಿಗಣಿಸಿ ನೋಡಿ, ಮಹಾರಾಜಯೋಗ ಜಾತಕವೆಂದು ನಿರ್ಣಯಿಸಿದನು. ಗ್ರೀಷ್ಮಾತಪ ಸಂತಪ್ತ ಕುಮುದಗಳಂತೆ ಬಾಡಿದ್ದ ಕೃಷ್ಣೇಅರಸಿನವರ ಬಂಧುಬಾಂಧವರ ಮುಖಗಳೆಲ್ಲವೂ ಈ ಪುತ್ರೋತ್ಸವ ಜನ್ಯವಾದ ಆನಂದವೆಂಬ ಚಂದ್ರೋದಯದಿಂದ ವಿಕಸಿತವಾದುವು. ಅನೇಕ ಶುಭಸೂಚನೆಗಳು ಕಂಡುಬಂದುವು.

ವೃತ್ತ || ಜನಿಯಿಸೆ ರಾಜಲಕ್ಷಣಸಮೇತ ಲಸನ್ಮಹನೀಯರೂಪಮಾ |
ಘನಶಿಶು ರಂಜಿಸಿತ್ತು ರವಿಮಂಡಲಮುಷ್ಣದೆ ಪಳಚ್ಚನಾಗಸಂ ||
ಮನಕಿನಿದಾಗಿ ಕಾಣಿಸಿತು ನಿರ್ಮಲವಾಯ್ತು ಜಲಂ ದಿವಾಕರರ್ |
ಸನಕೊನೆವೋದರೆಲ್ಲಜನಕುತ್ಸವಮಾದುದಪೂರ್ವಮಾರ್ಗ್ಗಳಂ ||

ಕಂದ || ಕೊರಗಿದುವು ಖಲರ ಮೊಗದಾ | ವರೆಗಳ್ ನಲಿವಳಿದು ಮಹಿತಕೋಕಂಗಳ್ ಮೇಣ್ ||
ಪರಿದೊಲವಾಂತುದು ವಿಬುಧೋ | ತ್ಕರಮೆಂಬ ಚಕೋರಪಕ್ಷಿಸಮುದಯಮಾಗಳ್ ||

ಈ ರೀತಿಯಲ್ಲಿ ಜನಿಸಿದ ಪುತ್ರರತ್ನವೇ ನಮ್ಮ ಚರಿತ್ರನಾಯಕರಾದ ಶ್ರೀಚಾಮರಾಜೇಂದ್ರ ಒಡೆಯರವರು. ಇವರಿಗೆ ಮೊದಲೇ ಜನಿಸಿ ಪ್ರವರ್ಧಮಾನರಾಗಿದ್ದ ಇಬ್ಬರು ಅಣ್ಣಂದಿರೂ ಒಬ್ಬ ಸಹೋದರಿಯೂ ಇದ್ದರು. ಆ ಮೂವರಲ್ಲಿ ಮೊದಲನೆಯವರೇ ಗೋಪಾಲರಾಜ ಅರಸಿನವರು. ಎರಡನೆಯವರೇ ಸುಬ್ರಹ್ಮಣ್ಯರಾಜ ಅರಸಿನವರು; ಮೂರನೆಯವರೇ ಪುಟ್ಟಲಕ್ಷ್ಮಮ್ಮಣ್ಣಿಯವರು. ಚಿಕ್ಕ ಕೃಷ್ಣೇಅರಸಿನವರ ನಾಲ್ಕನೆಯ ತನುಜರಾದ ಚಾಮರಾಜೇಂದ್ರ ಒಡೆಯರವರ ಜನನೋತ್ಸವವು ಕ್ರಿ.ಶ. ೧೮೬೩ನೆಯ ಇಸವಿ ಫೆಬ್ರುವರಿ ೨೨ಕ್ಕೆ ಸರಿಯಾದ ದುಂದುಭಿನಾಮ ಸಂವತ್ಸರದ ಫಾಲ್ಗುಣ ಶುದ್ಧ ಪಂಚಮೀ ಭಾನುವಾರದ ದಿನ ನಡೆಯಿತು. ಯಾವ ವಂಶದಲ್ಲಿ ಕತ್ತೀ ಗೋಪಾಲರಾಜ ಅರಸಿನವರು ಜನ್ಮಿಸಿ, ೧೮ನೆಯ ಶತಮಾನದಲ್ಲಿ ಸೇನಾಸಮೇತರಾಗಿ ತಿರುಚನಾಪಲ್ಲಿಗೆ ಗಮಿಸಿ, ಆರ್ಕಾಟ್ ನವಾಬನಾದ ಮಹಮ್ಮದಲ್ಲಿಗೆ ಸಹಾಯಮಾಡಿ ಶೂರರೆನಿಸಿಕೊಂಡು, ಆ ನವಾಬರಿಗೂ ಇಂಗ್ಲಿಷಿನವರಿಗೂ ಆಪ್ತಸಖರೆನಿಸಿಕೊಂಡರೋ, ಯಾವ ವಂಶದಲ್ಲಿ ಲೋಕೋತ್ತರವಾದ ಖ್ಯಾತಿಯನ್ನು ಪಡೆದು ಸುಶೀಲಸ್ತ್ರೀರತ್ನವೆನಿಸಿಕೊಂಡ ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ಜನಿಸಿ, ಮ್ಲೇಚ್ಛಾಕ್ರಾಂತೆಯಾಗಿದ್ದ ಮೈಸೂರು ರಾಜ್ಯಲಕ್ಷ್ಮಿಯನ್ನು ಬಂಧನದಿಂದ ಬಿಡಿಸಿದರೋ, ಅಂತಹ ಹದಿಮೂರು ಮನೆತನದ ರಾಜವಂಶಶಾಖೆಯಾದ ಬೆಟ್ಟದಕೋಟೆಯ ನತ್ಕುಲದಲ್ಲಿ ಶ್ರೀಚಾಮರಾಜೇಂದ್ರ ಒಡೆಯರವರು ಜನ್ಮಗ್ರಹಣವನ್ನು ಮಾಡಿದುದು ಆಶ್ಚರ್ಯವಲ್ಲ. ಈ ರೀತಿಯಲ್ಲಿ ಜನ್ಮಿಸಿದ ಶಿಶುವು, ಮುಂದೆ ಮಹಾರಾಜಪದವಿಗೆ ಬರುವುದೆಂದು ಲೋಕಕ್ಕೆಲ್ಲ ಆ ಕಾಲದಲ್ಲಿ ತಿಳಿಯದುದರಿಂದ, ಆ ಜನನೋತ್ಸವದಿಂದ ಹೊರಗಣವರಿಗೆ ಯಾರಿಗೂ ತತ್ಕಾಲದಲ್ಲಿ ಆನಂದವುಂಟಾಗದಿದ್ದರೂ, ಮೊದಲೇ ಜ್ಞಾನಾನುಭವದಿಂದ ತಿಳಿದಿದ್ದು, ಆಗ ಪ್ರತ್ಯಕ್ಷಪ್ರಮಾಣದಿಂದ ವೀಕ್ಷಿಸುತ್ತಿದ್ದ ಶ್ರೀಮನ್ಮಹಾರಾಜರವರಿಗೂ, ರಮಾವಿಲಾಸ ಸನ್ನಿಧಾನದ ಮಹಾರಾಜ್ಞಿಯವರಿಗೂ, ಮುಖ್ಯವಾಗಿ ಹೆತ್ತತಾಯಿಗೂ, ಅಪಾರವಾದ ಆನಂದಾತಿಶಯ ಉಂಟಾಯಿತೆಂದು ಹೇಳುವುದಕ್ಕೆ ಏನೇನೂ ಸಂಶಯ ಪಡಬೇಕಾದುದಿಲ್ಲ. ಕೃಷ್ಣೇಅರಸಿನವರ ಮನೆಯಲ್ಲಿ ಪುತ್ರೋತ್ಸವವಾದ ಶುಭಸಮಾಚಾರವು ಮುಮ್ಮಡಿ ಕೃಷ್ಣರಾಜ ಒಡೆಯರವರಿಗೆ ತಿಳಿಯುತ್ತಲೇ, ಪ್ರತ್ಯಕ್ಷವಾಗಿ ತಮಗೇ ಪುತ್ರೋತ್ಸವವಾದಷ್ಟು ಅತ್ಯಾನಂದವನ್ನು ಹೊಂದಿ, ತಾವೇ ಅಲ್ಲಿಗೆ ಬಿಜಯಂಗೈದು, ಸುಲಕ್ಷಣಾವಯವಗಳಿಂದ ಕೂಡಿದ ಶಿಶುವನ್ನು ನೋಡಿ ಆನಂದಪಾರವಶ್ಯವನ್ನನುಭವಿಸಿ, ಮನೋರಥ ಪೂರ್ತಿಯಾಗುವಂತೆ ಅನುಗ್ರಹಮಾಡಿದ ಇಷ್ಟದೇವತೆಯಾದ ಚಾಮುಂಡೇಶ್ವರಿಯನ್ನು ಮನಸ್ಸಿನಲ್ಲೇ ವಂದಿಸಿ, ತಮ್ಮ ಅಂತರ್ಗತವಾದ ಆಲೋಚನೆಯನ್ನು ಒಬ್ಬರಿಗೂ ತಿಳಿಯಪಡಿಸದೆ, ತಂದೆಯಿಲ್ಲದ ಮಗುವಾದುದರಿಂದ ಮಹಾರಾಜರೇ ಪರಾಮರ್ಶಿಸುವರೆಂದು ಇತರರು ಭಾವಿಸುವಂತೆ, ಅಲ್ಲಿ ನೆರೆದಿದ್ದ ವಿಪ್ರೋತ್ತಮರಿಗೆಲ್ಲ ತಾವೇ ದಕ್ಷಿಣೆಯನ್ನು ಕೊಟ್ಟು, ಜಾತಕರ್ಮಾದಿ ಶುಭಕಾರ್ಯಗಳನ್ನು ಮಾಡಿರೆಂದು ಆಜ್ಞೆಯಿತ್ತು ಅರಮನೆಗೆ ದಯಮಾಡಿಸಿದರು.

ನಮ್ಮ ಗ್ರಂಥನಾಯಕರಾದ ಚಾಮರಾಜೇಂದ್ರ ಒಡೆಯರವರು ಸಾಮಾನ್ಯವಾದ ಒಂದು ಮನೆಯಲ್ಲಿ ಸಾಮಾನ್ಯರಾದ ಒಬ್ಬ ಅರಸಿನವರ ಪುತ್ರರಾಗಿ ಜನಿಸಿದಾಗ, ಇವರು ಲೋಕೋಪಕಾರಗಳನ್ನು ಮಾಡಿ ಹಿಂದೂದೇಶದಲ್ಲಿ ಮಾತ್ರವಲ್ಲದೆ, ಇಂಗ್ಲೆಂಡ್ ಮುಂತಾದ ಅನ್ಯದೇಶಗಳಲ್ಲಿಯೂ ತಮ್ಮ ಯಶೋವೃಕ್ಷವನ್ನು ನಡುವರೆಂದು ಯಾರೂ ತಿಳಿದಿರಲಿಲ್ಲ. ಇವರು ಶಿಶುವಾಗಿದ್ದಾಗ ನೋಡಿದ ಲಕ್ಷಣಜ್ಞರು ಮಾತ್ರ, ಇವರಲ್ಲಿದ್ದ ತೇಜಸ್ಸನ್ನೂ ರಾಜಚಿಹ್ನೆಗಳನ್ನೂ ಕಂಡು, ಈತನು ಮಹಾರಾಜನಾಗುವನೆಂದು ಇವರ ತಾಯಿಗೆ ತಿಳಿಸುತ್ತಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರವರು ಇವರನ್ನು ದತ್ತು ತೆಗೆದುಕೊಳ್ಳುವುದಕ್ಕೆ ಮೊದಲು, ಇವರು ರಾಜರಾಗುವರೆಂಬ ಅಂಶವು ಯಾರಿಗೂ ಗೊತ್ತಿಲ್ಲದಿದ್ದರೂ, ಬೈತಿಟ್ಟಿದ್ದ ಕಸ್ತೂರಿಯ ವಾಸನೆಯು ತಾನೇತಾನಾಗಿ ಹೊರಗೆ ತೋರಿಸಿಕೊಳ್ಳುವಂತೆ, ಇವರು ಯಾರೋ ಒಬ್ಬ ಮಹಾತ್ಮನಾಗಿರಬಹುದೆಂಬ ಭಾವವು ನೋಡಿದವರೆಲ್ಲರ ಮನಸ್ಸಿನಲ್ಲಿಯೂ ಹೊಳೆಯುತ್ತಿದ್ದಿತು. ಹೀಗಿರಲು, ಅರಸುಗಳೂ ಇತರ ಜನಗಳೂ ಈ ಮಗುವನ್ನು ತಾವಾಗಿಯೇ ಬಂದು ನೋಡಿ, ತಮ್ಮ ತಮ್ಮ ಮಿತ್ರಮಂಡಲಿಯಲ್ಲಿಯೂ ಬಂಧುವರ್ಗದಲ್ಲಿಯೂ ಇವರ ರಾಜತೇಜಸ್ಸನ್ನೂ ಸೌಂದರ್ಯವನ್ನೂ ವರ್ಣಿಸುತ್ತಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರವರು ಈ ಮಗುವಿನ ಸೌಂದರ್ಯವನ್ನು ಇತರರಿಂದ ಕೇಳಿ ಅಂತರಂಗದಲ್ಲಿ ಸಂತೋಷಪಡುತ್ತಿದ್ದರೂ, ಹೊರಗೆ ತಾವು ದತ್ತು ತೆಗೆದುಕೊಳ್ಳುವ ಭಾವವನ್ನು ಯಾರಿಗೂ ತಿಳಿಯಪಡಿಸುತ್ತಿರಲಿಲ್ಲ. ಇತರರಂತೆ ತಾವೂ ಆಗಾಗ ಹೋಗಿ ಮಗುವನ್ನು ನೋಡಿಕೊಂಡು ಬರುತ್ತಿದ್ದರು. ಚಾಮರಾಜೇಂದ್ರ ಒಡೆಯರವರು ತಮ್ಮ ಸಹೋದರ ಸಹೋದರಿಯರೊಡನೆ ತಮ್ಮ ತಾಯಿಯವರಾದ ದೇವಾಜಮ್ಮಣ್ಣಿಯವರಿಗೆ ಬಾಲಲೀಲಾವಿನೋದಗಳನ್ನು ತೋರಿಸುತ್ತ ಕೃಷ್ಣೇಅರಸಿನವರ ಮನೆಯಲ್ಲಿಯೇ ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತಿದ್ದರು.

ಮೂರನೆಯ ಅಧ್ಯಾಯ.

ಶ್ರೀಚಾಮರಾಜೇಂದ್ರ ಒಡೆಯರವರ ಸ್ವೀಕಾರ.

ಹೀಗಿರುವಲ್ಲಿ, ಶ್ರೀಚಾಮರಾಜೇಂದ್ರ ಒಡೆಯರವರು ಎರಡೂವರೆ ವರುಷಗಳವರೆಗೆ ಮಾತ್ರ ಗೃಹದಲ್ಲಿಯೇ ಬೆಳೆದರು. ಒಂದುದಿನ—ಎಂದರೆ, ೧೮೬೫ನೆಯ ಇಸವಿ ಜೂನ್ ೧೭ರಲ್ಲಿ. ಶ್ರೀಕೃಷ್ಣಭೂಪತಿಗಳು ತಮ್ಮ ಇಷ್ಟಮಂತ್ರಿಗಳಾದ ಬಕ್ಷಿ ನರಸಪ್ಪನವರು, ಕೋಲಾರದ ಕೃಷ್ಣಯ್ಯಂಗಾರ್ಯರು, ಪುರೋಹಿತರು—ಇವರುಗಳನ್ನು

ಗೋಪ್ಯವಾಗಿ ಕರೆಯಿಸಿಕೊಂಡು ಹೇಳಿದುದೇನೆಂದರೆ:—" ಮಂತ್ರಿಗಳಿರಾ, ನನಗಂತೂ ಪುತ್ರನಂತಾನವಿಲ್ಲ. ಶ್ರುತಿಸ್ಮೃತಿಗಳು ಪುತ್ರರಿಲ್ಲದವರಿಗೆ ಪರಲೋಕವಿಲ್ಲವೆಂದು ಮೊರೆಯಿಡುತ್ತಿರುವುವು. ಔರಸಪುತ್ರನಿಲ್ಲದ ಪಕ್ಷದಲ್ಲಿ ಸ್ವೀಕೃತಪುತ್ರನನ್ನಾದರೂ ಶಾಸ್ತ್ರಸಮ್ಮತವಾಗಿ ಮಾಡಿಕೊಳ್ಳಬೇಕು. ಈಗ ಸ್ವೀಕಾರವನ್ನು ಮಾಡಿಕೊಳ್ಳತಕ್ಕದು ಸಾಮಾನ್ಯಕೆಲಸವಲ್ಲ. ಲಾರ್ಡ್ ಡಲ್‌ಹೌಸಿಯು ಏರ್ಪಡಿಸಿರುವ ರಾಜತಂತ್ರವು ಹಿಂದೂದೇಶದ ಕ್ಷತ್ರಿಯಕುಲಚ್ಛೇದಕವಾಗಿರುವುದು. ಬೌರಿಂಗ್ ಸಾಹೇಬರನ್ನು ಕೇಳೋಣವೆಂದರೆ, ಅವರು ಯಾವಾಗಲೂ ನಮ್ಮ ಮೇಲೆ * ಅಸ್ತ್ರಧಾರಣೆಯನ್ನು ಮಾಡಿರುವರು. ನಮ್ಮಲ್ಲಿ ಅವರಿಗಿರುವ ಪ್ರೀತಿಯು ತಿಳಿದೇ ಇದೆ. ಅವರು ಬೇರೆ ನಮ್ಮ ಕೆಲಸಕ್ಕೆ ಸ್ವಲ್ಪವೂ ಸಹಾಯಮಾಡುವಂತೆ ತೋರುವುದಿಲ್ಲ. ಅವರನ್ನು ಕೇಳಿ ಏತಕ್ಕೆ ವೃಥಾಶ್ರಮಪಡಬೇಕು? ಲೋಕದಲ್ಲಿ ಒಬ್ಬರ ಅಭಿಪ್ರಾಯದಂತೆ ಇನ್ನೊಬ್ಬರ ಅಭಿಪ್ರಾಯವಿರುವುದಿಲ್ಲ. ಇಷ್ಟಕ್ಕೂ ಅವರು ಹೊರಗಿನವರು; ನಮ್ಮ ದೇಶದ ಸುಖದುಃಖಗಳನ್ನು ಕಟ್ಟಿಕೊಂಡು ಅವರಿಗೇನು? ಇಂಗ್ಲಿಷರು ಒಪ್ಪುವವರೆಗೂ ಸ್ವೀಕಾರವನ್ನು ಮಾಡಿಕೊಳ್ಳದೆ ಕಾದಿರಬೇಕಾದರೆ ಬ್ರಹ್ಮನಲ್ಲಿ ಆಯುಸ್ಸನ್ನು ಚೆನ್ನಾಗಿ ಪಡೆದುಕೊಂಡಿರಬೇಕು. ಹಿಂದೆ ಅಧಿಕಾರಿಗಳ ದುರಾಗತದಿಂದ ಕಳೆದುಕೊಂಡ ರಾಜ್ಯವನ್ನು ಮರಳಿ ಕೊಡಿಸಬೇಕೆಂದು ಎಷ್ಟುಬಾರಿ ಪ್ರಾರ್ಥಿಸಿದರೂ ಇನ್ನೂ ಕೊಡುವುದರಲ್ಲಿದ್ದಾರೆ. ಇದುವರೆಗೆ ಮೂವತ್ತು ವರುಷಗಳ ಕಾಲವಾಯಿತು; ನನಗಾಗಲೆ ಎಪ್ಪತ್ತೆರಡನೆಯ ವಯಸ್ಸೂ ಕಳೆಯಿತು. ಎಲಿಯಟ್ ಸಾಹೇಬರು ನಮಗೆ ಅನುಕೂಲರಾಗಿದ್ದರೆ ಸಾಕು. ಇವರ ಸಹಾಯದಿಂದಲೇ ಬೇಕಾದ ಕೆಲಸವನ್ನು ಮಾಡಬಲ್ಲೆನು. ವಿಧಿಯನ್ನು ಮೀರುವುದಕ್ಕೆ ಯಾರಿಗೆತಾನೆ ಸಾಧ್ಯ? ಇಷ್ಟರಮೇಲೆ ಆದುದಾಗಲಿ, ಸ್ವೀಕಾರವನ್ನೇ ಮಾಡಿಕೊಳ್ಳಬೇಕು. ಈಗ ನಾನು ಸ್ವೀಕಾರವನ್ನು ಮಾಡಿಕೊಳ್ಳದಿದ್ದರೆ, ಮುಂದೆ ರಾಜ್ಯವು ಅನ್ಯಾಕ್ರಾಂತವಾಗುವುದರಲ್ಲಿ ಸಂದೇಹವಿಲ್ಲ. ನಮ್ಮ ಹಿರಿಯರಿಗೆ ತಿಲತರ್ಪಣಾದಿಗಳನ್ನು ಕೊಡುವುದಕ್ಕೆ ಸಹ ಒಬ್ಬರೂ ಇಲ್ಲದಂತಾಗುವುದು. ಮುಂದೇನು ಮಾಡಬೇಕು? ಇದು ಸಾಮಾನ್ಯರೊಡನೆ ಆಲೋಚಿಸತಕ್ಕ

---

* ಮಹಾರಾಜರಿಗೂ ಬೌರಿಂಗ್ ಸಾಹೇಬರಿಗೂ ಉಂಟಾದ ಮನಸ್ತಾಪಕ್ಕೆ ಕಾರಣವೇನೆಂದರೆ:—ಒಂದು ದಿನ ಹಿನಕಲ್ಲಿನ ಜೂಜಿನ ಬೋನಿಯಲ್ಲಿ, ಕುದುರೆಯ ಜೂಜು ನಡೆಯುತ್ತಿರುವ ಸಂದರ್ಭದಲ್ಲಿ, ಬೌರಿಂಗ್‌ಸಾಹೇಬರು ತಮ್ಮ ಮಿತ್ರನಾದ ಯಾರೋ ಒಬ್ಬ ಪಾಳೆಯಗಾರನನ್ನು ಸಂಗಡ ಕರೆದುಕೊಂಡು ಬಂದಿದ್ದರೆಂತಲೂ, ಅವನು ತಾನು ಹತ್ತಿದ್ದ ಕುದುರೆಗೆ ನಾನಾ ವಿಧವಾದ ಆಭರಣಗಳನ್ನು ಹಾಕಿಕೊಂಡು, ಅಟ್ಟಹಾಸದಿಂದ ಬಂದು ಮಹಾರಾಜರನ್ನೂ ಕೂಡ ಗಣನೆ ಮಾಡದೆ ಮರ್ಯಾದೆಗೆ ವಿರೋಧವಾಗಿ ನಡದುಕೊಂಡನೆಂತಲೂ, ಮಹಾರಾಜರು ಕೋಪಗೊಂಡು ಅವನನ್ನು ಕುದುರೆಯ ಮೇಲಿನಿಂದ ಇಳಿಸಿಬಿಟ್ಟರೆಂತಲೂ, ತದಾರಭ್ಯ ಬೌರಿಂಗ್ ಸಾಹೇಬರಿಗೂ ಮಹಾರಾಜರಿಗೂ ಮನಸ್ತಾಪವುಂಟಾಯಿತೆಂತಲೂ ಪ್ರವಾದವುಂಟು.

ಬಿಡಯುವಲ್ಲ. ಒಂದುವೇಳೆ ಆಲೋಚಿಸಿದರೂ ಕೆಲವರು ಭೀತಿಯಿಂದ ದೋಷವನ್ನು ಮರೆಯಿಸಿ ಗುಣವನ್ನೇ ತೋರಿಸುವರು ; ಮತ್ತೆ ಕೆಲವರು ಸ್ವಾರ್ಥಪರತೆಯಿಂದ ನನ್ನ ಇಷ್ಟವನ್ನೇ ಅನುಮೋದಿಸುವರು ; ಇನ್ನು ಕೆಲವರು ಗುಣದೋಷಗಳಲ್ಲಿ ಒಂದನ್ನೂ ಹೇಳದೆ ತಮ್ಮಿಚ್ಛೆ ಬಂದಂತೆ ಹೇಳುವರು. ಆದುದರಿಂದ ನೀವುಗಳು ನಮ್ಮ ಹಿತಚಿಂತಕರು, ಸ್ವಾಮಿಕಾರ್ಯಧುರಂಧರರು, ಸನ್ಮಿತ್ರರು ನಿಮ್ಮೊಡನೆ ನನ್ನ ಇಷ್ಟವನ್ನು ತಿಳಿಸಿರುವೆನು. ಆಲೋಚಿಸಿ ಇದರ ಸಾಧಕಬಾಧಕಾಂಶಗಳನ್ನು ನಿರ್ಭೀತಿಯಿಂದ ನನಗೆ ತಿಳಿಸಿರಿ" ಎಂದು ಅಪ್ಪಣೆಯನ್ನಿತ್ತರು. ಅದಕ್ಕೆ ಅವರೆಲ್ಲರೂ ಸ್ವಲ್ಪಹೊತ್ತು ಆಲೋಚಿಸಿ, "ಮಹಾಪ್ರಭೂ ! ಸದ್ಯದಲ್ಲಿ ಪುತ್ರಸ್ವೀಕಾರವನ್ನು ಮಾಡಿಕೊಳ್ಳುವುದೇ ಉತ್ತಮವಾದ ಕಾರ್ಯವು. ಸ್ವೀಕಾರಾನಂತರದಲ್ಲಿ ದತ್ತನ್ನು ಮಂಜೂರ್ಮಾಡುವಂತೆಯೂ ನಮ್ಮ ರಾಜ್ಯವನ್ನು ನಮಗೆ ಕೊಡುವಂತೆಯೂ ಬೇಕಾದರೆ ಹೋರಾಡಬಹುದು. ಸದ್ಯದಲ್ಲಿ ಸ್ವೀಕಾರ ಮಾಡಿಕೊಳ್ಳತಕ್ಕುದೇ ಯುಕ್ತವಾಗಿದೆ" ಎಂದು ಬಿನ್ನವಿಸಿದರು.

ಬಳಿಕ ಮಹಾರಾಜರವರು ಪುನಃ ಅವರನ್ನು ಕುರಿತು, "ಸನ್ಮಿತ್ರರೇ ! ಹಾಗೆ, ಸ್ವೀಕಾರಮಾಡಲು ಯೋಗ್ಯವಾದ ಮಗುವು ಎಲ್ಲಿದೆ ಹೇಳಿರಿ" ಎಂದು ಅಪ್ಪಣೆಕೊಡಲು, ಅವರು "ದಶರಾತ್ರಿ ಜ್ಞಾತಿಗಳಲ್ಲಿ ಅಂತಹ ಮಕ್ಕಳು ಯಾರೂ ಇಲ್ಲ ; ಸಗೋತ್ರದಲ್ಲಿಯೂ ಇಲ್ಲ ; ಅಸಗೋತ್ರದಲ್ಲಿ ಬಾಳೇಅರಸಿನವರ ಮಗುವಿದೆ, ಕೃಷ್ಣೇಅರಸಿನವರ ಮನೆಯಲ್ಲೊಂದು ಮಗುವಿದೆ. ಈ ಎರಡು ಮಕ್ಕಳು ಹೊರತು ಬೇರೆ ಸರಿಯಾದ ಮಗು ಕಾಣಲಿಲ್ಲ. ಈ ಎರಡರಲ್ಲಿ ಮಹಾಸನ್ನಿಧಾನಕ್ಕೆ ಇಷ್ಟವಾದುದನ್ನು ಸ್ವೀಕರಿಸಬಹುದು" ಎಂದು ಹೇಳಿದರು. ಅದಕ್ಕೆ ಮಹಾರಾಜರು ಸ್ವಲ್ಪ ಹೊತ್ತು ಆಲೋಚಿಸಿ, "ಒಳ್ಳೆಯದು ಇರಲಿ" ಎಂದು ಹೇಳಿ, ಪುರೋಹಿತರ ಕಡೆಗೆ ತಿರುಗಿ "ಪುರೋಹಿತರೇ, ನಾಳೆಯೇ ಸ್ವೀಕಾರಮಾಡಿಕೊಳ್ಳುವುದಕ್ಕೆ ಪ್ರಶಸ್ತಕಾಲವಾಗಿದೆಯಲ್ಲವೆ ? ಹೋಮಾದಿಗಳು ನಡೆಯಬೇಕಾಗಿರುವುವು. ಅವಕ್ಕೆ ಬೇಕಾದ ಸಾಮಗ್ರಿಯನ್ನೆಲ್ಲ ಯಾರಿಗೂ ತಿಳಿಯದಂತೆ ಸಿದ್ಧಮಾಡಿಕೊಳ್ಳಿರಿ. ಅಯ್ಯಾ ನರಸಪ್ಪ, ಅರಮನೆಯಲ್ಲಿ ಆಯುಹೋಮವು ನಡೆಯುವುದರಿಂದ, ಸಕಲರೂ ಬರಬೇಕೆಂಬುದಾಗಿ ಅರಸುಗಳಿಗೂ ಅಧಿಕಾರಿಗಳಿಗೂ ವಿದ್ವಾಂಸರಿಗೂ ಪುರಜನರಲ್ಲಿ ಮುಖ್ಯಮುಖ್ಯರಾದವರಿಗೂ ಮುಸಾಹೇಬರುಗಳಿಗೂ ತಾಕೀತಿಯನ್ನು ಕಳುಹಿಸಿಕೊಡು. ಬಾರ್ ಕಚೇರಿ, ಜಿಲ್ಲೋಕಚೇರಿ, ಸವಾರ್ ಕಚೇರಿ ಬಕ್ಷಿಯರುಗಳಿಗೆ ಸೈನ್ಯಸಹಿತ ಬರುವಂತೆ ಆಜ್ಞಾಪತ್ರಿಕೆಯನ್ನು ಬರೆ. ಎಲಿಯಟ್ ಸಾಹೇಬರ ಇಸ್ತಕವಾಲಿಗೆ ತಕ್ಕ ಏರ್ಪಾಡನ್ನು ಮಾಡು. ಆದರೆ ಸ್ವೀಕಾರದ ಸಮಾಚಾರವು ಮಾತ್ರ ಸದ್ಯದಲ್ಲಿ ಯಾರಿಗೂ ತಿಳಿಯಕೂಡದು ; ಕಾಲಸ್ಥಿತಿಯು ಬಹುಸೂಕ್ಷ್ಮವಾಗಿದೆ" ಎಂದು ಅಪ್ಪಣೆಯನ್ನಿತ್ತು ಅವರುಗಳನ್ನು ಕಳುಹಿಸಿಕೊಟ್ಟು, ಇದೇ ಅಭಿಪ್ರಾಯವುಳ್ಳ ಒಂದು ಕಾಗದವನ್ನು ಬರೆಯಿಸಿ, ತಮ್ಮ ಅಂತರಂಗಮಿತ್ರರಾದ ಅಷ್ಟಗ್ರಾಮ ಡಿವಿಜನ್ ಸೂಪರಿಂಟೆಂಡೆಂಟ್ ಮೇಜರ್ ಚಾರಲ್ಸ್ ಎಲಿಯಟ್ ಸಾಹೇಬರಿಗೆ ಕಳುಹಿಸಿಕೊಟ್ಟರು.

ಇಷ್ಟರಲ್ಲಿ, ಆ ದಿನ ಸಾಯಂಕಾಲದ ಹೊತ್ತಿಗೆ, ಮುಮ್ಮಡಿ ಕೃಷ್ಣರಾಜ ಒಡೆಯರವರ ಆಯುರ್ಹೋಮ ಮಹೋತ್ಸವವು ಮರುದಿನ ನಡೆಯುವುದೆಂಬ ವಾರ್ತೆಯು ನಗರದಲ್ಲೆಲ್ಲ ಹರಡಿಕೊಂಡಿತು. ಅದನ್ನು ಕೇಳಿದ ಪುರಜನರೆಲ್ಲರೂ—

ವೃತ್ತ॥ ಆಯುರ್ಹೋಮಂ ಗಡಾ ಎಮ್ಮವನಿಪತಿಗೆ ಮಹೋದ್ಯಮಂ ಮಾಡದಂ ನಿ ।
ರ್ಮಾಯಂ ಶ್ರೀಶಂಕರಂ ತಾಂ ಕೃಪೆಯನಿರದೆ ದೀರ್ಘಾಯುವಂ ಕೊಟ್ಟುನಿಚ್ಚಂ ॥
ಕಾಯಾರೋಗ್ಯಾತಿಭಾಗ್ಯಾದಿಗಳನಿರದೆ ಸಂವೃದ್ಧಿಗೆಯ್ಯುತ್ತೆ ವಾಂಛಾ ।
ಶ್ರೀಯಂ ಕಾರುಣ್ಯದಿಂ ಪಾಲಿಸುಗೆ ಬಿಡದೆ ಸತ್ಯಾಬ್ಧಿಚಂದ್ರಂಗೆ ನಿಚ್ಚಂ ॥

P. R. K.

ಎಂದು ಭಗವಂತನನ್ನು ಪ್ರಾರ್ಥಿಸುತ್ತಿದ್ದರು. ಹೀಗೆ ರಾಜಧಾನಿಯ ಸಕಲ ನಿವಾಸಿಗಳೂ ಉತ್ಸವಾಸಕ್ತರಾಗಿ ರಾತ್ರಿಯನ್ನು ಕಳೆದು, ಮರುದಿನ ಪ್ರಾತಃಕಾಲದಲ್ಲಿ ರಾಜಾಜ್ಞೆಯಂತೆ ಬಂದು ಅರಮನೆಯ ಅಂಬಾವಿಲಾಸದಲ್ಲಿ ನೆರೆದರು. ಅಂಬಾವಿಲಾಸವೆನ್ನುವುದು ಅರಮನೆಯಲ್ಲಿ ಒಂದು ಪ್ರಶಸ್ತವಾದ ಸೌಧವು. ಇಲ್ಲಿಯೇ ಮುಮ್ಮಡಿ ಕೃಷ್ಣರಾಜ ಒಡೆಯರವರು ತಮ್ಮ ದರ್ಶನಾರ್ಥವಾಗಿ ಬಂದವರನ್ನು ಆದರಿಸುತ್ತ, ಕವಿಗಳಿಂದಲೂ ಪಂಡಿತೋತ್ತಮರಿಂದಲೂ ಪರಿವೃತರಾಗಿ, ಗ್ರಂಥಾವಲೋಕನವನ್ನು ಮಾಡುತ್ತಲೂ, ತಮ್ಮ ದೇಶದ ಆಡಳಿತ ವಿಚಾರಗಳನ್ನು ನಡಿಸುತ್ತಲೂ ಇದ್ದರು. ಆ ಸೌಧದಲ್ಲಿಯೇ ಹೋಮಾದಿಗಳಿಗೆ ಪ್ರಾರಂಭವಾಯಿತು. ಸಾಮಾಜಿಕರೆಲ್ಲರೂ ಆಯುರ್ಹೋಮವೆಂಬುದಾಗಿಯೇ ತಿಳಿದಿದ್ದರು. ಸಭೆಯೆಲ್ಲ ಸೇರಿದ ನಂತರ, ಶ್ರೀಮನ್ಮಹಾರಾಜರವರು ಅಲ್ಲಿಗೆ ಬಿಜಯಂಗೈದು, ಕೈಜೋಡಿಸಿ ಸಭೆಗೆ ವಂದನೆಗೈದು ಕಣ್ಣೀರನ್ನು ತುಂಬಿಕೊಂಡು, "ಎಲೈ ಸಭಾಸದರಾದ ಮಿತ್ರರಿರಾ, ಬಂಧುಗಳಿರಾ, ಮಂತ್ರಿಗಳಿರಾ, ಅಧಿಕಾರಿಗಳಿರಾ, ದೇಶೀಯರಾದ ನಾನಾ ಪ್ರಜೆಗಳಿರಾ, ನಾನು ಹೇಳುವ ಮಾತುಗಳನ್ನು ಸಾವಧಾನದಿಂದ ಲಾಲಿಸಬೇಕು. ನಿಮ್ಮುಗಳನ್ನೆಲ್ಲ ಇಲ್ಲಿಗೆ ಬರಮಾಡಿಕೊಳ್ಳುವುದಕ್ಕೆ ಮುಂಚಿತವಾಗಿ ನಾನು ದೀರ್ಘಾಲೋಚನೆಯಿಂದ ಮಾಡಿಕೊಂಡಿರುವ ಮನೋನಿಶ್ಚಯವನ್ನು ನಿಮಗೆ ವಿಶದವಾಗಿಯೂ ಪ್ರತ್ಯಕ್ಷವಾಗಿಯೂ ತಿಳಿಸಬೇಕೆಂಬುವುದೇ ನನ್ನ ಉದ್ದೇಶವಾಗಿರುವುದು. ಅನಾದಿಯಾದ ಈ ಸಂಸ್ಥಾನವು ಆದಿ ಯದುರಾಯರು ಮೊದಲಾದವರಿಂದ ಆಳಲ್ಪಟ್ಟಿತು. ರಾಜಒಡೆಯರೇ ಮುಂತಾದ ಶೂರಾಗ್ರಣಿಗಳು, ತಮ್ಮ ಬಾಹುಬಲದಿಂದ ದೇಶಕೋಶಗಳನ್ನು ಗೆದ್ದು, ಧನಕನಕ ವಸ್ತ್ರವಾಹನಾದಿಗಳಿಂದ ಬಂಡಾರವನ್ನು ತುಂಬಿ ಯಶಶ್ಶ್ರೇಷ್ಠರಾದರು. ಅಂತಹ ಮಹಾನುಭಾವರಿಂದ ಆಳಲ್ಪಟ್ಟ ಈ ರತ್ನಸಿಂಹಾಸನವು, ನನಗೆ ಪುತ್ರಸಂತಾನವಿಲ್ಲದುದರಿಂದ ನನ್ನ ಅನಂತರದಲ್ಲಿ ಅನ್ಯಾಕ್ರಾಂತವಾಗುವುದರಲ್ಲಿ ಸಂದೇಹವಿಲ್ಲ. ನನಗಾಗಲೇ ಎಪ್ಪತ್ತೆರಡನೆಯ ವರುಷವೂ ಕಳೆಯಿತು. ಇನ್ನು ಪುತ್ರಸಂತಾನವಾಗುವುದೆಂಬ ಭರವಸೆಯೂ ತಪ್ಪಿತು. ಈಗ ನಾನು ಸ್ವೀಕೃತ ಪುತ್ರನನ್ನಾದರೂ ಮಾಡಿಕೊಳ್ಳದೆ ಹೋದರೆ, ಮುಂದೆ ನನ್ನನ್ನು ಸ್ವಜನರು

ಪ್ರಜೆಗಳೂ ರಾಜ್ಯವನ್ನು ಅನ್ಯಾಕ್ರಾಂತ ಮಾಡಿದನೆಂಬ ಅಪನಿಂದೆಗೆ ಗುರಿಮಾಡುವರು. ಇದೂ ಅಲ್ಲದೆ ಮಕ್ಕಳಿಲ್ಲದವರಿಗೆ ಇಹಪರಗಳೆರಡರಲ್ಲೂ ಗತಿಯಿಲ್ಲವೆಂದು ವೇದಶಾಸ್ತ್ರ ಪುರಾಣಾದಿಗಳು ಉದ್ಘೋಷಿಸುತ್ತಿರುವುವು. ಆದುದರಿಂದ ನನ್ನ ಸಂತತಿಯು ಊರ್ಜಿತವಾಗುವುದಕ್ಕೋಸ್ಕರವೂ, ರಾಜ್ಯವು ಅನ್ಯಾಕ್ರಾಂತವಾಗದಿರುವುದಕ್ಕೋಸ್ಕರವೂ ಈಗ ಪುತ್ರಸ್ವೀಕಾರವನ್ನು ಮಾಡಿಕೊಳ್ಳಬೇಕೆಂದಿರುವೆನು. ಈಗ ನೀವು

ಶ್ರೀಚಾಮರಾಜೇಂದ್ರ ಒಡೆಯರವರ ಸ್ವೀಕಾರ ಮಹೋತ್ಸವ.

ೆಲ್ಲರೂ ಈ ವಿಷಯದಲ್ಲಿ ನಿಮನಿಮಗೆ ತೋರುವ ಅಭಿಪ್ರಾಯಗಳನ್ನು ನಿರ್ಭೀತರಾಗಿ ನಗೆ ತಿಳಿಯಿಸುವುದಲ್ಲದೆ, ನನ್ನ ಮನೋನಿಶ್ಚಯವನ್ನು ನೀವು ಅನುಮೋದಿಸುವವ ಾಗಿದ್ದರೆ, ನಾನು ಸ್ವೀಕಾರ ಮಾಡಿಕೊಳ್ಳಬೇಕಾದದ್ದು ಯಾವ ಕುಟುಂಬದಿಂದ ಂಬುವುದನ್ನೂ ಸಹ ತಿಳಿಯಪಡಿಸಬೇಕು'' ಎಂದು ಅಪ್ಪಣೆಯನ್ನಿತ್ತರು. ಒಡನೆಯೇ

ಅಲ್ಲಿ ನೆರೆದಿದ್ದವರೆಲ್ಲರೂ ಏಕಕಂಠ್ಯದಿಂದ, ಶ್ರೀಮನ್ಮಹಾರಾಜರವರೇ ತಮ್ಮ ಇಷ್ಟಬಂದ ವಂಶದಲ್ಲಿ ಸ್ವೀಕಾರ ಮಾಡಿಕೊಳ್ಳಬಹುದೆಂದು ಗಂಭೀರನಾದದಿಂದ ತಮ್ಮ ಸಮ್ಮತಿಯನ್ನು ವ್ಯಕ್ತಗೊಳಿಸಿ, ತಾವುಗಳೆಲ್ಲರೂ ಅಲ್ಲಿಯೇ ಇದ್ದು ನಡೆಯಬೇಕಾದ ಕರ್ಮಕ್ಕೆ ಸಹಾಯರಾಗಿರುವೆವು ಎಂದು ತಿಳಿಯಪಡಿಸಿದರು.

ಬಳಿಕ ಶ್ರೀಕೃಷ್ಣರಾಜ ಒಡೆಯರವರು ತೆರೆಯೊಳಕ್ಕೆ ಹೋಗಿ, ದೇವಾಜಮ್ಮಣ್ಣಿಯವರ ಮಡಿಲಲ್ಲಿದ್ದ ಮಗುವನ್ನು ಎತ್ತಿಕೊಂಡುಬಂದರು. ಅದನ್ನು ನೋಡಿ ಎಲ್ಲರೂ ಅಚ್ಚರಿಗೊಂಡರು. ಬಳಿಕ ಮಹಾರಾಜರವರು ಪುನಃ ಸಭಿಕರ ಕಡೆಗೆ ತಿರುಗಿ ಮಗುವನ್ನು ತೋರಿಸುತ್ತ “ ಎಲೈ ಸಭಾಸದರೇ, ಈ ಮಗುವು ಯಾವ ಮನೆತನಕ್ಕೆ ಸೇರಿರುವುದೋ ಅದಕ್ಕೂ ನಮ್ಮ ಮನೆತನಕ್ಕೂ ಅನಾದಿಯಾಗಿ ಪರಸ್ಪರ ಕೇವಲ ಸಮೀಪ ರಕ್ತಸಂಬಂಧವಿರುವುದರಿಂದಲೂ, ಈ ಮಗುವಿನ ವಂಶೀಯರ ಸತ್ಯಶೀಲಾದಿ ಗುಣಗಳು ನನಗೂ ನಿಮಗೂ ಚೆನ್ನಾಗಿ ತಿಳಿದಿರುವುದರಿಂದಲೂ, ಈ ಮಗುವಿನ ತಾಯಿಯ ಸಮ್ಮತಿಯನ್ನೂ ನಿಮ್ಮಗಳ ಸಮ್ಮತಿಯನ್ನೂ ಪಡೆದು, ಇದನ್ನು ಸ್ವೀಕಾರ ಮಾಡಿಕೊಳ್ಳಬೇಕೆಂದಿರುವೆನು. ಅನುಜ್ಞೆಯೇ ? ” ಎಂದು ಕೇಳಿದರು. ಆಗ ಅಲ್ಲಿದ್ದ ಮಹಾಜನರೆಲ್ಲರೂ “ ತಥಾಸ್ತು ” ಎಂದರು. ಹೀಗೆ ಮಹಾಜನರೆಲ್ಲರೂ ಒಪ್ಪಿ ಏಕವಾಕ್ಯದಿಂದ ನುಡಿದ ಪ್ರತ್ಯುತ್ತರವೇ ದೇವವಾಕ್ಯವೆಂದು ಪರಿಭಾವಿಸಿ, ಶ್ರೀಕೃಷ್ಣಭೂಪತಿಗಳು ಹೋಮಾದಿ ಕರ್ಮಗಳಿಗೆ ಉಪಕ್ರಮಿಸಿದರು. ಕೂಡಲೇ ಆ ಉತ್ಸವದ ಗೌರವಾರ್ಥವಾಗಿ ಇಪ್ಪತ್ತೊಂದು ತೋಪುಗಳಾದುವು. ಇಷ್ಟರಲ್ಲಿ ಕುಲಗುರುಗಳಾದ ಪರಕಾಲಸ್ವಾಮಿಗಳು ದಯೆಮಾಡಲು, ಅವರಿಗೆ ಪಾದಪೂಜಾದಿಗಳನ್ನು ಮಾಡಿ ಸತ್ಕರಿಸಿ, ಅವರಿಂದಲೂ ಪುತ್ರಸ್ವೀಕಾರಕ್ಕೆ ಅನುಜ್ಞೆಯನ್ನು ಪಡೆದರು. ಅದೇಕಾಲದಲ್ಲಿ ಅಷ್ಟಗ್ರಾಮ ಡಿವಿಜನ್ ಸೂಪರಿಂಟೆಂಡೆಂಟರಾಗಿ ಅರಮನೆಯ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದ ಮೇಜರ್ ಎಲಿಯೆಟ್ ಸಾಹೇಬರು, ಮಹಾರಾಜರವರಿಂದ ಕರೆಯಲ್ಪಟ್ಟವರಾಗಿ ಅರಮನೆಗೆ ದಯೆಮಾಡಿದರು. ಆಗ ಹೋಮಾದಿ ಕರ್ಮಗಳು ನಡೆಯುತ್ತಿರಲು, ಆ ಬಳಿಯಲ್ಲಿಯೇ ಅವರಿಗೆ ಪೀಠವನ್ನು ಹಾಕಿಸಿ ಉಪಚರಿಸಿದರು. ಹೋಮವು ಪೂರಯಿಸಿದೊಡನೆ ಮಹಾರಾಜರವರು ಎಲಿಯೆಟ್ ಸಾಹೇಬರ ಬಳಿಗೆ ಬಂದು ಉಪಚಾರೋಕ್ತಿಗಳನ್ನು ನುಡಿದು, ಅವರನ್ನು ಕುರಿತು “ ನಾನು ವೃದ್ಧಾಪ್ಯದಿಂದ ಬಾಧಿತನಾಗಿರುವುದು ಎಲ್ಲರಿಗೂ ತಿಳಿದೇ ಇದೆ. ನನ್ನ ಶರೀರವು ದಿನೇ ದಿನೇ ಕುಗ್ಗಿಹೋಗುತ್ತಿದೆ. ನನ್ನನಂತರದಲ್ಲಿ ರಾಜ್ಯವನ್ನಾಳುವ ಔರಸಪುತ್ರಸಂತಾನವನ್ನು ನಾನು ಇದುವರೆಗೆ ಭಗವಂತನಲ್ಲಿ ಪಡೆದುಬಂದಿಲ್ಲವಾದುದರಿಂದಲೂ, ಇನ್ನು ಮುಂದೆ ಪಡೆಯುವ ಸಂಭವವೂ ನನಗೆ ತೋರುವುದಿಲ್ಲವಾದುದರಿಂದಲೂ, ಈಗ ನಾನು ಒಬ್ಬ ಪುತ್ರನನ್ನು ಸ್ವೀಕಾರಮಾಡಿಕೊಳ್ಳದೆ ಹೋದರೆ, ಬಹುಕಾಲದಿಂದಲೂ ಅವಿಚ್ಛಿನ್ನವಾಗಿ—ಎಂದರೆ, ಇಪ್ಪತ್ತಮೂರು ತಲೆಯವರೆಗೂ ನಡೆದುಬಂದಿರುವ ಈ ಪುರಾತನ ರಾಜಸಂತತಿಯು ನನ್ನಿಂದ ಉತ್ಸನ್ನವಾಗುವುದು.

ನನ್ನ ಪ್ರಜೆಗಳಿಗೆ ಈ ರಾಜವಂಶೀಯರಿಂದ ಅನಾದಿಯಾಗಿ ನಡೆದುಬಂದಿರುವ ರಕ್ಷಣೆಯೂ ತಪ್ಪಿಹೋಗುವುದು. ಈ ಕಾರಣದಿಂದ ಈಗ ನನಗೆ ಪುತ್ರನೂ ನನ್ನನಂತರದಲ್ಲಿ ರಾಜನೂ ಆಗತಕ್ಕ ಬಾಲಕನೊಬ್ಬನನ್ನು ಸ್ವೀಕಾರಮಾಡಿಕೊಳ್ಳುವುದು ನನ್ನ ಮುಖ್ಯ ಕರ್ತವ್ಯವಾಗಿದೆ. ಆದುದರಿಂದ ಈಗ ನಾನು ಯಥಾಶಾಸ್ತ್ರೀಯವಾಗಿ ಈ ಶಿಶುವಿನ ಜನನಿಯ ಸಮ್ಮತಿಯನ್ನೂ ಸಭಾಮಂಡಲಿಯ ಸಮ್ಮತಿಯನ್ನೂ ಪಡೆದು, ಇಲ್ಲಿರತಕ್ಕವರೆಲ್ಲರಿದಿರಿಗೆ ಈ ಮಗುವನ್ನು ಸ್ವೀಕಾರ ಮಾಡಿಕೊಂಡಿರುವೆನು. ಈ ಮಗುವಿಗೆ ಎರಡೂವರೆ ವರುಷ. ಈ ಮಗುವು ೧೭೯೯ನೆಯ ಇಸವಿಯ ಕರಾರುಗಳಿಗೆ ಕೈಬರಹ ಮಾಡಿದ ರಾಣಿ ಲಕ್ಷ್ಮಮ್ಮಣ್ಣಿಯವರ ಸೋದರರಾದ ಗೋಪಾಲರಾಜ ಅರಸಿನವರ ಮೊಮ್ಮಕ್ಕಳೂ ದೊಡ್ಡ ಕೃಷ್ಣೇಅರಸಿನವರ ಮಕ್ಕಳೂ ಆದ ಚಿಕ್ಕ ಕೃಷ್ಣೇಅರಸಿನವರ ಹೊಟ್ಟೆಯಲ್ಲಿ ಹುಟ್ಟಿದ ಮೂರನೆಯ ಗಂಡುಮಗುವಾಗಿರುವುದು. ಸ್ವೀಕಾರಶಾಸ್ತ್ರ ನ್ಯಾಯಾನುಸಾರವಾಗಿ ನಾನು ಈ ಮಗುವಿಗೆ ನನ್ನನಂತರದಲ್ಲಿ, ಶಾಸ್ತ್ರ ಸಮ್ಮತವಾದ ಹಕ್ಕುದಾರನಾಗಿರುವಂತಹ ಅಧಿಕಾರವನ್ನಿತ್ತಿರುವೆನು. ಇತಃಪರ ನನ್ನ ವಂಶೀಯರಿಗೆ ಸಲ್ಲತಕ್ಕ ರಾಜಮರ್ಯಾದೆಗಳೂ ರಾಜಚಿಹ್ನೆಗಳೂ ಈ ಮಗುವಿಗೆ ಸಲ್ಲತಕ್ಕದು. ಈ ಸ್ವೀಕಾರ ಮಾಡಿಕೊಳ್ಳುವುದರಲ್ಲಿ ನನ್ನ ಉದ್ದೇಶವೇನೆಂದರೆ: ಮುಂದೆ ನನ್ನ ವಂಶವು ನಡೆದುಬರಬೇಕೆಂಬುದು ಮಾತ್ರವೇ ಅಲ್ಲ; ನನ್ನ ಪ್ರಜೆಗಳನ್ನು ಕಾಪಾಡುವುದಕ್ಕೂ, ಈ ನನ್ನ ಸಿಂಹಾಸನಾಧಿಪತ್ಯಕ್ಕೆ ಸೇರಿದ ಎಲ್ಲ ಅಧಿಕಾರಗಳನ್ನೂ, ೧೭೯೯ನೆಯ ಇಸವಿಯ ತಹನಾಮೆಗಳನ್ನು ಮಾಡಿಕೊಂಡ ಉಭಯತ್ತರೂ ಚಂದ್ರಸೂರ್ಯರಿರುವ ಪರ್ಯಂತವೂ ಅತಿಕ್ರಮಿಸಕೂಡದೆಂದು ನಿರ್ಣಯಿಸಲ್ಪಟ್ಟು ನನಗೆ ಲಭಿಸಿದ ಹಕ್ಕುಗಳನ್ನು ಅನುಭವಿಸುವುದಕ್ಕೂ ಈ ಮಗುವನ್ನು ಸ್ವೀಕಾರ ಮಾಡಿಕೊಂಡಿರುವೆನು. ಈ ಸ್ವೀಕಾರವನ್ನು ನಾನು ಶಾಸ್ತ್ರವಿಧಿಗೆ ಈಷತ್ತಾದರೂ ನ್ಯೂನತೆ ಬಾರದಂತೆ ಮಾಡಿಕೊಂಡಿರುವೆನಾದುದರಿಂದ, ನನ್ನ ಪೌರ್ವಿಕ ರಾಜರು ಬಹುಕಾಲದಿಂದ ಆಚರಿಸಿ ನೆಲೆಗೊಳಿಸಿರುವ ಪದ್ಧತಿಗೂ; ನಮ್ಮ ದೇಶೀಯ ಧರ್ಮಶಾಸ್ತ್ರಕ್ಕೂ ಮತಕ್ಕೂ ಇಂಗ್ಲೆಂಡ್ ಮತ್ತು ಇಂಡಿಯಾದೇಶಗಳಿಗೆ ಮಹಾರಾಜ್ಞಿಯವರಾದ ವಿಕ್ಟೋರಿಯಾಯವರ ೧೮೫೮ನೆ ಇಸವಿಯ ಪವಿತ್ರವಾದ ಪ್ರಕಟನೆಗೂ ಅನುಸಾರವಾಗಿ ಸ್ವೀಕಾರಕರ್ಮವನ್ನು ನೆರವೇರಿಸಿರುವೆನೆಂದು ಖಚಿತವಾಗಿ ಹೇಳುತ್ತೇನೆ.. ಈ ಸ್ವೀಕಾರವು ಈಗ ಸಕಲ ವಿಧಗಳಲ್ಲೂ ಅನ್ಯೂನವಾಗಿಯೂ ನಿರಾಕ್ಷೇಪಕವಾಗಿಯೂ ಇರುವುದು. ಹಿಂದೆ ನನಗೆ ಆರು ವರುಷ ವಯಸ್ಸು ತುಂಬುವುದರೊಳಗೆಯೇ ನಮ್ಮ ಆರ್ಷೇಯವಾದ ಸಿಂಹಾಸನಾರೋಹಣವನ್ನು ಮಾಡಿಸಿದ ಬ್ರಿಟಿಷ್ ಸರಕಾರದವರನ್ನು ಈಗ ಪ್ರಾರ್ಥಿಸಿಕೊಳ್ಳುವುದೇನೆಂದರೆ: ನನಗೆ ನಡೆದುಬಂದಿರುವ ಮರ್ಯಾದೆಗಳನ್ನೂ ಗೌರವವನ್ನೂ ಚಾಮರಾಜೇಂದ್ರ ಒಡೆಯರೆಂಬ ನಾಮಾಂಕಿತದಿಂದ ನಾನು ಪರಿಗ್ರಹಿಸಿರುವ ಈ ನನ್ನ ಸ್ವೀಕೃತಪುತ್ರರಿಗೂ ತೋರಿಸಬೇಕು; ಬ್ರಿಟಿಷ್ ಪತಾಕೆಯು ಇರುವವರೆಗೂ ನನ್ನ ವಂಶವನ್ನು ಕಾಪಾಡಿಕೊಂಡು ಬರಬೇಕು. ನನ್ನ ಸ್ವೀಕೃತಪುತ್ರರು ನನ್ನ

ಅನಂತರದಲ್ಲಿ ನನ್ನ ಆಸ್ತಿಗಳಲ್ಲೆಲ್ಲ ಸರ್ವೋತ್ತಮವಾದುದೆಂದರೆ, ಪ್ರಜಾಪಾಲನವೆಂಬ ಆಸ್ತಿಗೆ ಅರ್ಹರಾಗಿರಬೇಕು. ಪ್ರಜೆಗಳೇ ನಮ್ಮ ಐಶ್ವರ್ಯವು, ಅವರೇ ನಮ್ಮ ಸೌಖ್ಯವು, ಅವರೇ ನಮ್ಮ ಬಲವು, ಅವರೇ ನಮ್ಮ ಸರ್ವಸ್ವವು. ನಮ್ಮ ಗೌರವವೂ ಸೌಖ್ಯವೂ ವಂಶವೂ ನಿಲ್ಲುವುದು ಅಂತಹ ಪ್ರಜೆಗಳ ರಕ್ಷಣೆಯಿಂದಲೇ. ಅಯ್ಯಾ, ಎಲಿಯಟ್ ಮಹಾಶಯರೇ, ನನ್ನ ರಾಜ್ಯದ ರೆಸಿಡೆಂಟ್ ಮತ್ತು ಕಮಿಷನರವರಿಗೆ ನೀವೇ ಪ್ರತಿನಿಧಿಗಳಾಗಿರುವಿರಾದುದರಿಂದ, ಈಗ ನೀವು ಕಿವಿಯಾರೆ ಕೇಳಿದುದನ್ನೂ ಕಣ್ಣಾರೆ ಕಂಡುದುದನ್ನೂ, ಎಲ್ಲವನ್ನೂ ಮೇಲಣ ಅಧಿಕಾರಿಗಳಿಗೆ ತಿಳಿಯಪಡಿಸಬೇಕೆಂದು ಕೋರುತ್ತೇನೆ" ಎಂದು ಅಪ್ಪಣೆಯನ್ನಿತ್ತರು.

ಬಳಿಕ ಶ್ರೀಮನ್ಮಹಾರಾಜರವರು ಅಲ್ಲಿಂದ ಕರ್ಮವೇದಿಕೆಗೆ ದಯೆಮಾಡಿ ಉಳಿದಿದ್ದ ಕರ್ಮಾಂಗವಾದ ಶಾಸ್ತ್ರವಿಧಿಯನ್ನು ಪೂರಯಿಸಿದರು. ಆಗ ವೈದಿಕರೆಲ್ಲರೂ ಸಂತೋಷಭರಿತರಾಗಿ ಜಯಘೋಷವನ್ನು ಮಾಡಿದರು. ಸಕಲರೂ ಆನಂದಾಂಬುಧಿಯಲ್ಲಿ ಮಗ್ನರಾದರು. ಎಲಿಯಟ್ ಸಾಹೇಬರು ಉತ್ಸವ ವೈಚಿತ್ರ್ಯವನ್ನು ನೋಡಿ ವಿಸ್ಮಿತರಾಗಿ ಕುಳಿತರು. ಸಕಲರಿಗೂ ಆಶ್ಚರ್ಯವುಂಟಾಯಿತು. ಒಡನೆಯೇ ಮಹಾರಾಜರವರು ಎಲಿಯಟ್ ಸಾಹೇಬರ ಬಳಿಗೆ ದಯೆಮಾಡಿ, ಅವರ ಗೌರವಕ್ಕೂ ಅಧಿಕಾರಕ್ಕೂ ಉಚಿತವಾದ ಮರ್ಯಾದೆಗಳನ್ನು ನಡೆಯಿಸಿ ಅವರನ್ನು ಕಳುಹಿಸಿಕೊಟ್ಟರು. ಬಳಿಕ ಸಕಲಾಧಿಕಾರಿಗಳಿಂದಲೂ ಚಾಮರಾಜೇಂದ್ರ ಒಡೆಯರವರಿಗೆ ನಜರು ಮುಜರೆಗಳನ್ನು ಮಾಡಿಸಿ, ಸಕಲರಿಗೂ ಗಂಧಮಾಲ್ಯತಾಂಬೂಲಗಳನ್ನು ಕೊಟ್ಟು ಮರ್ಯಾದೆ ಮಾಡಿಸಿದರು. ಬ್ರಾಹ್ಮಣಾಧಿಕಾರಿಗಳಿಗೂ ಪಂಡಿತರಿಗೂ ಭೂರಿದಕ್ಷಿಣೆಯಿತ್ತರು. ಬಳಿಕ ಚಿಕ್ಕ ಮಹಾರಾಜರನ್ನು ಚಿನ್ನದ ಪಾಲಕಿಯಲ್ಲಿ ಕುಳ್ಳಿರಿಸಿ, ಸಕಲ ಪರಿವಾರದೊಡನೆ ಕೋಟೆಯಲ್ಲಿರುವ ರಾಜವೀಧಿಗಳಲ್ಲೆಲ್ಲ ಮೆರೆವಣಿಗೆಯನ್ನು ಮಾಡಿಸಿದರು. ಗಾಡಿಗಳ ಮೇಲೆ ಸಕ್ಕರೆಯನ್ನು ತುಂಬಿ ಊರಲ್ಲೆಲ್ಲ ಹಂಚಿಸಿದರು. ಮೂರು ದಿನಗಳವರೆಗೂ ಬ್ರಾಹ್ಮಣಾದಿ ಸರ್ವವರ್ಣದವರಿಗೂ ಸಂತರ್ಪಣೆಯು ನಡೆಯಿತು. ಪುತ್ರಸ್ವೀಕಾರೋತ್ಸವವು ನಡೆದ ಮಧ್ಯಾಹ್ನದಲ್ಲಿ ಶ್ರೀಕೃಷ್ಣಭೂಪತಿಗಳು ಮೈಸೂರು ಛೀಫ್ ಕಮಿಷನರ್ ಬೌರಿಂಗ್ ಸಾಹೇಬರಿಗೂ, ವೈಸ್ರಾಯಿ ಸರ್ ಜಾನ್ ಲಾರೆನ್ಸ್ ಸಾಹೇಬರಿಗೂ, ಇಂಡಿಯಾ ಸ್ಟೇಟ್ ಸೆಕ್ರಿಟೆರಿಯವರಾದ ಸರ್ ಚಾರಲ್ಸ್ ಉಡ್ ಸಾಹೇಬರಿಗೂ ಪುತ್ರಸ್ವೀಕಾರದ ವಿಷಯದಲ್ಲಿ ತಂತೀಸಮಾಚಾರಗಳನ್ನು ಕಳುಹಿಸಿಕೊಟ್ಟುದಲ್ಲದೆ, ವೈಸ್ರಾಯಿಯವರಿಗೆ ತಮ್ಮ ಕೋರಿಕೆಯನ್ನು ವಿಸ್ತಾರವಾಗಿ ತಿಳಿಸತಕ್ಕ ಒಂದು ಪ್ರಾರ್ಥನಾ ಪತ್ರಿಕೆಯನ್ನು ಬರೆಯಿಸಿ ರವಾನಿಸಿದರು. ಅದರ ಒಕ್ಕಣೆಯೇನೆಂದರೆ :—

ಇಂಡಿಯಾ ದೇಶದ ವೈಸ್ರಾಯಿ ಮತ್ತು ಗವರ್ನರ್ ಜನರಲ್ ಅವರಾದ ಸರ್ ಜಾನ್ ಲಾರೆನ್ಸ್, ಜಿ.ಸಿ.ಬಿ. ಮತ್ತು ಕೆ.ಎಸ್.ಐ. ಅವರ ಸನ್ನಿಧಾನಕ್ಕೆ.

ಕೃಷ್ಣರಾಜ ಒಡೆಯರವರ ಬಿನ್ನಹ. ನಾವು ಒಬ್ಬ ಔರಸಪುತ್ರನಿಂದ ದೇವರ ಅನುಗ್ರಹವನ್ನು ಪಡೆಯುವಷ್ಟು ಭಾಗ್ಯವಂತರಲ್ಲದೆ ಇರುವುದಕ್ಕಾಗಿ, ನಮ್ಮ ಅವಶ್ಯಕಾರ್ಯದಲ್ಲಿ

ನಾವು ಅನಾದಿಪ್ರಸಿದ್ಧವಾದ ಮತ್ತು ಶ್ರೇಷ್ಠವಾದ ನಮ್ಮ ವಂಶದ ಅಭಿವೃದ್ಧಿಗೋಸ್ಕರವಾಗಿಯೂ, ನಮ್ಮ ಪ್ರಜಾ ಸಂರಕ್ಷಣಾರ್ಥವಾಗಿಯೂ, ನಮ್ಮ ಸೀಮೆಯ ಆಳಿಕೆಯ ಹಕ್ಕಿಗೂ, ಮತ್ತು ನಮ್ಮ ಸ್ಥಾನಕ್ಕೂ ಸಹ ಬಾಧ್ಯತೆ ವಹಿಸುವುದಕ್ಕಾಗಿ ನಮ್ಮ ವಂಶೀಯರಲ್ಲಿ ಒಬ್ಬ ಬಾಲಕನನ್ನು ದತ್ತು ಸ್ವೀಕಾರ ಮಾಡಿಕೊಳ್ಳಬೇಕಾದ ಸಂದರ್ಭವುಂಟಾಗಿರುವುದರಿಂದ, ಈ ದಿನಕ್ಕೆ ಸಂದ ವರ್ತಮಾನ ಶಾಲೀವಾಹನಶಕ ವರ್ಷಂಗಳು ೧೭೮೮ನೆಯ ಕ್ರೋಧನನಾಮ ಸಂವತ್ಸರದ ಜ್ಯೇಷ್ಠ ಬಹುಳ ೧೦ ಭಾನುವಾರ (೧೮೬೫ನೆಯ ಇಸವಿ ಜೂನ್ ತಾರೀಖು ೧೮ನೆಯ ದಿವ ೧೦ ಗಂಟೆ) ಸುಮುಹೂರ್ತದಲ್ಲಿ ನಮಗೆ ಕೇವಲ ಶರೀರಸಂಬಂಧಿಗಳಾದ ಹದಿಮೂರು ಮನೆತನದವರ ಪೈಕಿ ಒಬ್ಬರಾದ ಬೆಟ್ಟದಕೋಟೆ ಕತ್ತೀ ಗೋಪಾಲರಾಜ ಅರಸಿನವರ ವಂಶದಲ್ಲಿ ಜನಿಸಿ, ೧೭೯೯ನೆಯ ಇಸವಿಯಲ್ಲಿ ನಮಗೂ ಈಸ್ಟ್ ಇಂಡಿಯಾ ಕಂಪೆನಿಯ ಬಹದ್ದೂರರವರಿಗೂ ಹುಟ್ಟಿರುವ ತಹನಾಮೆಗೆ ದಸ್ಕತ್ತು ಮಾಡಿರುವ ರಾಣೀ ಲಕ್ಷ್ಮಮ್ಮಣ್ಣಿಯವರ ತಮ್ಮಂದಿರಾದ ಗೋಪಾಲರಾಜ ಅರಸಿನವರಿಗೆ ಮಕ್ಕಳಾದ ನಮ್ಮ ಮೂರನೆಯ ರಾಣಿ ರಮಾವಿಲಾಸದವರ ತಮ್ಮಂದಿರಾದ ದೊಡ್ಡ ಕೃಷ್ಣೇಅರಸಿನವರ ಮಕ್ಕಳಾದ ಚಿಕ್ಕ ಕೃಷ್ಣೇಅರಸಿನವರ ಮೂರನೆಯ ಮಗನನ್ನು ನಾವು ನಮ್ಮ ಹಿರಿಯರ ಪದ್ಧತಿಪ್ರಕಾರವಾಗಿಯೂ, ನಮ್ಮ ಒಳ್ಳೇ ಅದೃಷ್ಟದಿಂದಲೇ ನೂತನವಾಗಿ ಸಂಭವಿಸಿದ ಅತ್ಯಂತ ಕೃಪಾಪೂರ್ಣವಾದ ಷಾಯಿನ್‌ಷಾ ವಿಕ್ಟೋರಿಯಾ ಮಹಾರಾಜ್ಞಿಯವರ ಇಸ್ತಿಹಾರ್‌ನಾಮೆಯ ಸತ್ಯವಾಕ್ಯ ಪ್ರಕಾರವಾಗಿಯೂ ನಮ್ಮ ಆಸ್ಥಾನಮಂಟಪದಲ್ಲಿ, ಪಂಡಿತಸಮಾಜಮಧ್ಯೆ, ಅಶೇಷ ಸಭಾಮಂಡಲಿಯ ಮಧ್ಯೆ, ಸರ್ವಜನ ಸಮ್ಮತವಾಗಿ ವಿಧ್ಯುಕ್ತಪ್ರಕಾರವಾಗಿ ದತ್ತು ಸ್ವೀಕಾರವನ್ನು ಮಾಡಿಕೊಂಡಿರುತ್ತೇವೆ.

ದತ್ತು ಸ್ವೀಕಾರವು ಈ ಮೇರೆ ನಮ್ಮಿಂದ ಸ್ವೀಕೃತರಾದ ಪುತ್ರರ ಜನಕ ಮಾತೆಯಾದ, ಗತಿಸಿದ ಚಿಕ್ಕ ಕೃಷ್ಣೇಅರಸಿನವರ ಕುಟುಂಬ ದೇವಾಜಮ್ಮಣ್ಣಿಯವರ ಅರ್ಜಿಯ ಅಭಿಪ್ರಾಯದ ಮೇರೆಗೆ ಮಾಡಲ್ಪಟ್ಟಿರುತ್ತದೆ. ಈ ಸ್ವೀಕಾರಕ್ಕೆ ಪೂರ್ವಭಾವಿಯಾಗಿ ಜರುಗಿರುವ ಸಂಗತಿಯನ್ನು ಸಂಕ್ಷೇಪಮಾಡಿ ತಿಳಿಸುವುದು ಆವಶ್ಯಕವೆಂದು ಎಣಿಸುತ್ತೇವೆ. ಈಚೆಗೆ ಗತಿಸಿರುವ ಸದರಿ ಕೃಷ್ಣೇಅರಸಿನವರು, ಜೀವಿಸುತ್ತ ದೃಢಾಂಗರಾಗಿದ್ದ ಕಾಲದಲ್ಲಿ—ಎಂದರೆ, ಸುಮಾರು ಮೂರು ವರುಷಗಳ ಕೆಳಗೆ, ನಾವೇ ಖುದ್ದು ಅವರ ಮನೆಗೆ ದಯಮಾಡಿಸಿ, ಸದರಿಯವರನ್ನೂ ಅವರ ಕುಟುಂಬ ದೇವಾಜಮ್ಮಣ್ಣಿಯವರನ್ನೂ ಕುಳ್ಳಿರಿಸಿಕೊಂಡು ಪೂರ್ವದಿಂದಲೂ ಈಚೆಗೂ ಕೂಡ ನಮಗೂ ನಿಮಗೂ ಬಲವತ್ತರವಾದ ಸಮೀಪಬಂಧುತ್ವವು ಉಂಟಾಗಿರುವುದರಿಂದ, ನಮ್ಮ ವಂಶಾಭಿವೃದ್ಧ್ಯರ್ಥವಾಗಿ ನಿಮ್ಮ ಮಕ್ಕಳ ಪೈಕಿ ಒಬ್ಬ ಮಗನನ್ನು ನಮ್ಮ ಚಿತ್ತಕ್ಕೆ ತೋರುವ ಕಾಲದಲ್ಲಿ ದತ್ತು ಸ್ವೀಕಾರ ಮಾಡಿಕೊಳ್ಳಬೇಕೆಂದು ಅಭಿಪ್ರಾಯ ಪಡುತ್ತೇವೆಂದು ಉಭಯರಿಗೂ ತಿಳಿಯಪಡಿಸಿದೆವು. ಅದಕ್ಕವರು ಉತ್ತರಕ್ಷಣದಲ್ಲೇ ಮನಃಪೂರ್ವಕವಾಗಿ ಒಪ್ಪಿಕೊಂಡು, ತಮಗಿರುವ ಎರಡು ಮಕ್ಕಳೊಳಗೆ ಒಬ್ಬರನ್ನಾಗಲಿ, ಅಥವಾ ತಮ್ಮ ಈಗಿನ ಗರ್ಭದಲ್ಲಿ ದೈವಾನುಗ್ರಹವಶಾತ್ ಒಂದು ವೇಳೆ ಗಂಡುಮಗುವು ಜನಿಸುವುದಾದರೆ ಆ ಮಗುವನ್ನೇ ಆಗಲಿ, ನಾವು ಇಚ್ಛೈಸುವ ಕಾಲದಲ್ಲಿ ಒಪ್ಪಿಸುವುದಾಗಿ ಅರಿಕೆ ಮಾಡಿಕೊಂಡಿದ್ದರು. ತಮ್ಮ ಪತಿಯು ಮೃತರಾಗುವುದಕ್ಕೆ ಮುಂಚಿತವಾಗಿಯೂ ಅವಸಾನಕಾಲದಲ್ಲಿಯೂ ತಮ್ಮ ಮಕ್ಕಳಪೈಕಿ ಯಾರನ್ನು ಮಹಾರಾಜರು ಯಾವ ಕಾಲದಲ್ಲಿ ಅಪೇಕ್ಷಿಸುತ್ತಾರೋ, ಆ ನಿಮಿಷದಲ್ಲೇ ಆ ಮಗುವನ್ನು ತಪ್ಪದೆ ಅವರ ಸ್ವೀಕಾರಕ್ಕೆ ಒಪ್ಪಿಸಬೇಕೆಂದು ಬಾರಿಬಾರಿಗೂ ಖಂಡಿತವಾಗಿ ಆಜ್ಞಾಪಿಸಿರುವುದಾಗಿಯೂ, ಅಂತಹ ಅವರ ಅನುಲ್ಲಂಘನೀಯವಾದ ಆಜ್ಞಾಪ್ರಕಾರ ತಮಗೆ ಸತ್ಯವಾಗಿ ಉಂಟಾಗಿರುವ ಆತ್ಮಸಂತೋಷದಿಂದ ನಾವು ಅಪೇಕ್ಷಿಸಿದ ಮೇರೆಗೆ ತಮ್ಮ

ಮೂರನೆಯ ಮಗನನ್ನು ನಮ್ಮ ಸ್ವೀಕಾರಕ್ಕೆ ಒಪ್ಪಿಸಿರುವುದಾಗಿಯೂ ದೇವರಾಜಮ್ಮಣ್ಣಿಯವರು ಅರ್ಜಿ ಬರೆದುಕೊಂಡಿದಾರೆ.

ಇಂಡಿಯಾದೇಶದ ರಾಜರುಗಳಲ್ಲೆಲ್ಲ ನಾವು ಹಿಂದೂ ಶಾಸ್ತ್ರವನ್ನು ವಿಧ್ಯುಕ್ತವಾಗಿ ಆಚರಿಸುವ ವಿಷಯದಲ್ಲಿ ಪ್ರಸಿದ್ಧರಾದುದರಿಂದ, ನಾವು ಈ ದಿನ ಬೆಳೆಯಿಸಿರುವ ದತ್ತು ಸ್ವೀಕಾರ ಕರ್ಮವು ಯಾವ ಅಂಶದಲ್ಲಿಯೂ ನ್ಯೂನತೆಯನ್ನು ಹೊಂದಿಲ್ಲ. ೧೭೯೯ನೆಯ ಇಸವಿಯಲ್ಲಿ ನಮಗೂ ಈಸ್ಟ್ ಇಂಡಿಯಾ ಕಂಪೆನಿಯವರಿಗೂ ಹುಟ್ಟಿರುವ ತಹನಾಮೆಯಿಂದಲೂ, ಅದೇ ವರುಷದಲ್ಲಿ ನಿಜಾಮರಿಗೂ ಈಸ್ಟ್ ಇಂಡಿಯಾ ಕಂಪೆನಿಯವರಿಗೂ ಹುಟ್ಟಿರುವ ತಹನಾಮೆಯಿಂದಲೂ, ಯಾವ ಸಂಪೂರ್ಣವಾದ ಹಕ್ಕುಗಳೂ ಬಾಧ್ಯತೆಗಳೂ ನಮಗೆ ಉಂಟಾಗಿವೆಯೋ, ಅಂತಹ ನಮ್ಮ ಸಮಸ್ತ ಹಕ್ಕುಗಳಿಗೂ ಬಾಧ್ಯತೆಗಳಿಗೂ, ಹಿಂದೂ ಧರ್ಮಶಾಸ್ತ್ರಗಳಲ್ಲಿ ಒಬ್ಬ ಔರಸಪುತ್ರನು ತಂದೆಯ ಸಮಸ್ತ ಹಕ್ಕುಗಳಿಗೂ ಬಾಧ್ಯತೆಪಡುವ ರೀತಿಯಲ್ಲಿ ಒಬ್ಬ ದತ್ತು ಪುತ್ರನೂ ಸ್ವೀಕಾರ ತಂದೆಯ ಸಮಸ್ತ ಹಕ್ಕಿಗೂ ಬಾಧ್ಯತೆ ಪಡುವನೆಂದು ಕಂಠೋಕ್ತವಾಗಿ ಹೇಳಿರುವ ಮೇರೆಗೆ ಈಗ ನಮ್ಮಿಂದ ಸ್ವೀಕೃತವಾದ ಕುಮಾರನು, ಅರ್ಹತೆಯನ್ನು ಪಡೆದವನಾಗಿದ್ದಾನೆ. ೧೭೯೯ನೆಯ ಇಸವಿಯಲ್ಲಿ ಬ್ರಿಟಿಷ್ಷಿನವರು ಟಿಪ್ಪೂಸುಲ್ತಾನನನ್ನು ಜಯಿಸಿ, ನಮ್ಮ ಪುರಾತನವಾದ ಹಕ್ಕನ್ನು ವಿಚಾರಿಸಿ, ಯಾವ ಹಸ್ತಗಳಿಂದ ನಮ್ಮನ್ನು ಪುನಃ ಸ್ಥಾಪನೆ ಮಾಡಿ ಸಕಲ ಸನ್ಮಾನಗಳನ್ನೂ ಕೊಟ್ಟು ಕಾಪಾಡಿಕೊಂಡು ಬರುತ್ತಲಿರುವರೋ, ಅದೇ ಹಸ್ತಗಳಿಂದ ನಮ್ಮಿಂದ ಸ್ವೀಕೃತನಾದ ಕುಮಾರನನ್ನೂ ಸಮಸ್ತ ಬಹುಮಾನದಿಂದಲೂ ಘನತೆಯಿಂದಲೂ ಕಾಪಾಡಿಕೊಂಡು ಬರಬೇಕು. ಮತ್ತು ೧೭೯೯ನೆಯ ಇಸವಿಯಲ್ಲಿ ನಮಗೂ ಈಸ್ಟ್ ಇಂಡಿಯಾ ಕಂಪೆನಿಯವರಿಗೂ ಹುಟ್ಟಿರುವ ತಹನಾಮೆಯಲ್ಲಿ ಕಂಡ ಕರಾರುಗಳೂ ಸಂಬಂಧವೂ ಉಭಯ ಪಕ್ಷದಲ್ಲೂ ಆಚಂದ್ರಾರ್ಕಸ್ಥಾಯಿಯಾಗಿರಬೇಕೆಂದು ಮೊರೆಯಿಡುತ್ತದೆಯಾಗಿ, ಸೂರ್ಯಚಂದ್ರ ಗತಿಯುಳ್ಳವರೆಗೂ ಮತ್ತು ಬ್ರಿಟಿಷ್ಷಿನವರ ಧ್ವಜವಿರುವವರೆಗೂ ನಮ್ಮನ್ನೂ ನಮ್ಮ ವಂಶಸ್ಥರನ್ನೂ ಚ್ಯುತಿಯಿಲ್ಲದೆ ಸತ್ಯದಿಂದಲೂ ಘನತೆಯಿಂದಲೂ ಸಂರಕ್ಷಿಸಿಕೊಂಡು ಬರತಕ್ಕದು ಬ್ರಿಟಿಷ್ಷಿನವರ ನ್ಯಾಯಕ್ಕೆ ಉಚಿತವಾಗಿಯೂ ಧರ್ಮಕ್ಕೆ ಹಿತವಾಗಿಯೂ ಇರುತ್ತೆ. ಆದುದರಿಂದ ನಮ್ಮ ಅನಂತರದಲ್ಲಿ ಇಂಡಿಯಾ ವೈಸ್ರಾಯಿ ಮತ್ತು ಗವರ್ನರ್ ಜನರಲ್ ಸಾಹೇಬರವರು ನಮ್ಮ ಅಪೇಕ್ಷೆಯ ಮೇರೆಗೆ ನಮ್ಮ ಸಂತತಿಯವರನ್ನು ಕಾಪಾಡಿಕೊಂಡು ಬರಬೇಕೆಂದು ಬೇಡಿಕೊಳ್ಳುತ್ತೇವೆ.

ಶ್ರೀಕೃಷ್ಣ.

ಈ ಸ್ವೀಕಾರ ಸಮಾಚಾರವು ಗವರ್ನರ್ ಜನರಲ್ ಅವರಿಗೆ ತಿಳಿದಕೂಡಲೇ, ಅವರು ಮಹಾರಾಜರು ಮಾಡಿಕೊಂಡಿರುವ ಸ್ವೀಕೃತ ಪುತ್ರರು ಮಹಾರಾಜರ ಸ್ವಂತ ಆಸ್ತಿಗೆ ಬಾಧ್ಯರೇ ಹೊರತು ರಾಜ್ಯಪ್ರಾಪ್ತಿಗೆ ಅರ್ಹರಲ್ಲವೆಂಬುದಾಗಿ ಉತ್ತರಕೊಟ್ಟರು. ಬಳಿಕ ಮೈಸೂರು ನಗರದ ನಿವಾಸಿಗಳಾದ ಅನೇಕ ಜನ ಮಹನೀಯರು, "ಕೆಲವು ವರುಷಗಳ ಕೆಳಗೆ-ಎಂದರೆ. ನಾವುಗಳೆಲ್ಲರೂ ಇನ್ನೂ ಹುಡುಗರಾಗಿದ್ದಾಗ, ದುಷ್ಟಾಧಿಕಾರಿಗಳು ಮಾಡಿದ ಅಕೃತ್ಯಗಳಿಂದ ರಾಜ್ಯಕ್ಕೆ ಅನಿಷ್ಟವು ಪ್ರಾಪ್ತವಾಗಿ, ರಾಜ್ಯವು ಹಾಳಾಗುವ ಸಂಭವವೊದಗಿದುದರಿಂದ, ಬ್ರಿಟಿಷ್ ಸರಕಾರದವರು ಮೈಸೂರು ರಾಜ್ಯದ ಆಡಳಿತವನ್ನು ಮಹಾರಾಜರವರ ಕೈತಪ್ಪಿಸಿ ತಮ್ಮ ವಶಮಾಡಿಕೊಂಡರೆಂತಲೂ, ರಾಜ್ಯದಲ್ಲಿ ಕ್ಷೇಮಸೌಭಾಗ್ಯಗಳು ನೆಲೆಗೊಂಡ ಬಳಿಕ, ರಾಜ್ಯವನ್ನು ಪುನಃ

ಮಹಾರಾಜರವರಿಗೆ ಒಪ್ಪಿಸುವರೆಂತಲೂ ಕೇಳಿದ್ದೆವು. ಅಲ್ಲದೆ, ರಾಜ್ಯಬಾರದಲ್ಲಿ ಅವರು ಮಾಡಿರುವ ಪ್ರಜಾರಂಜಕವಾದ ಹೊಸಹೊಸ ಕಾನೂನುಗಳನ್ನೂ ತಿದ್ದುಪಾಟುಗಳನ್ನೂ ನ್ಯಾಯವಿಮರ್ಶೆಗಳನ್ನೂ ನೋಡಿ, ಇನ್ನು ರಾಜ್ಯದ ಅಪಾಯಗಳೆಲ್ಲವೂ ನಾಶವಾದುವು; ಧರ್ಮಾತ್ಮರಾದ ಇಂಗ್ಲಿಷಿನವರು ನಮ್ಮ ಮಹಾರಾಜರವರ ರಾಜ್ಯವನ್ನು ಮತ್ತೆ ಅವರಿಗೆ ಕೊಟ್ಟು, ಪಾರಂಪರ್ಯವಾಗಿ ಬಂದ ಮೈಸೂರು ರಾಜವಂಶವನ್ನು ಉದ್ಧಾರಮಾಡುವರು ಎಂದು ತಿಳಿದು, ಆ ಶುಭದಿವಸವನ್ನು ಇದಿರುನೋಡುತ್ತಿದ್ದೆವು. ಈಚೆಗೆ ನಮ್ಮ ಮಹಾರಾಜರವರು ಕೂಡ, ತಮ್ಮ ರಾಜ್ಯಭಾರದ ಹಕ್ಕನ್ನು ತಮಗೆ ಕೊಡಬೇಕೆಂತಲೂ ತಮ್ಮನಂತರ ರಾಜ್ಯವಾಳಲು ಒಬ್ಬ ಪುತ್ರನನ್ನು ಸ್ವೀಕರಿಸುವುದಕ್ಕೆ ಅಪ್ಪಣೆ ಕೊಡಬೇಕೆಂತಲೂ ಬ್ರಿಟಿಷ್ ಸರಕಾರದವರನ್ನು ಕೇಳಿದ್ದಾರೆಂಬ ಸಂಗತಿಯನ್ನು ತಿಳಿದು, ನಮ್ಮ ಮಹಾರಾಜರವರ ದೀರ್ಘಾಲೋಚನೆಯನ್ನೂ ಉದಾರಬುದ್ಧಿಯನ್ನೂ ಶ್ಲಾಘಿಸಿ, ಅವರು ಮಾಡಿಕೊಂಡಿರುವ ಸ್ವೀಕಾರೋತ್ಸವವನ್ನು ಕಣ್ಣಾರೆ ನೋಡಿ ಆನಂದತುಂದಿಲರಾಗಿದ್ದೆವು. ಆದರೆ ಮಹಾರಾಜರವರು ಮಾಡಿಕೊಂಡಿರುವ ಸ್ವೀಕೃತ ಪುತ್ರರು ಮಹಾರಾಜರವರ ಸ್ವಂತ ಆಸ್ತಿಗೆ ಬಾಧ್ಯರೇಹೊರತು ರಾಜ್ಯಪ್ರಾಪ್ತಿಗೆ ಅರ್ಹರಲ್ಲವೆಂಬುದಾಗಿಯೂ, ಮಹಾರಾಜರವರ ಕೋರಿಕೆಗಳನ್ನು ನಡೆಯಿಸಿಕೊಡಲಾಗುವುದಿಲ್ಲವೆಂಬುದಾಗಿಯೂ ವರ್ತಮಾನ ಬಂದಿರುವಂತೆ ತಿಳಿಯಬರುವುದು. ಮಹಾರಾಜರವರು ದತ್ತು ತೆಗೆದುಕೊಳ್ಳುವ ವಿಷಯದಲ್ಲಿ, ಸ್ವಂತಕ್ಕೆ ತೆಗೆದುಕೊಳ್ಳಬಹುದೆಂಬುದಕ್ಕೂ, ಆ ದತ್ತು ರಾಜ್ಯಕ್ಕೆ ಸಲ್ಲಲಾರದೆಂಬುದಕ್ಕೂ ಯಾವ ನ್ಯಾಯಭೇದವಿರುವುದೋ ನಾವು ಕಾಣೆವು. ಆಹಾ! ಈ ವರ್ತಮಾನಕ್ಕಿಂತಲೂ ಶೂಲಪ್ರಾಯವಾದುದು ನಮಗೆ ಯಾವುದಿರುವುದು? ನಮಗೆ ದುಃಖವನ್ನೂ ಬ್ರಿಟಿಷ್ ಸರಕಾರದವರ ಔದಾರ್ಯಾದಿ ಗುಣಗಳಿಗೆ ಕುಂದಕವನ್ನೂ ಉಂಟುಮಾಡುವಂತಹ ಈ ಕಠೋರ ವರ್ತಮಾನವು ನಿಜವಾಗಿರಬಹುದೆ? ಹಾಗೆ ಇದು ನಿಜವಾಗಿದ್ದ ಪಕ್ಷದಲ್ಲಿ, ೧೭೯೯ನೆಯ ಇಸವಿಯಲ್ಲಿ ಹುಟ್ಟಿದ ಕೌಲುಗಳೂ, ೧೮೫೮ನೆಯ ಸಂವತ್ಸರದಲ್ಲಿ ಕೊಟ್ಟ ವಿಕ್ಟೋರಿಯಾ ಮಹಾರಾಜ್ಞಿಯವರ ಅಭಯಪ್ರದವಾದ ಪ್ರಸಿದ್ಧಪತ್ರಿಕೆಯೂ ಏನಾದುವು? ಪ್ರಬಲವಾದ ಈ ಹಿಂದೂಸ್ಥಾನವನ್ನು ಈ ರೀತಿ ನಿರ್ಮೂಲಮಾಡುವುದಕ್ಕಿಂತಲೂ ಮತ್ತೇನು ವಿಪರ್ಯಾಸವಿದೆ? ಈಗಾಗಲೇ ದಕ್ಷಿಣದಲ್ಲಿ ಅನೇಕ ದೇಶೀಯ ರಾಜ್ಯಗಳು ನಿರ್ನಾಮವಾದುವು. ನಾಗಪುರವು ನಾಶವಾಯಿತು. ತಂಜಾವೂರು ರಾಜ್ಯವು ದೇಶೀಯರಿಗೆ ತಪ್ಪಿಹೋಯಿತು. ಕರ್ಣಾಟಕ ರಾಜ್ಯವು ಕಾಳಾಯಿತು. ಈಗ ಮೈಸೂರು ರಾಜ್ಯಕ್ಕೂ ಮೃತ್ಯು ಬಂದಿರುವಂತಿದೆಯಲ್ಲಾ! ಈಗ ಇರುವುದರೊಳಗೆಲ್ಲ ಈ ಮೈಸೂರು ರಾಜ್ಯವೊಂದೇ ಮುಖ್ಯವಾದ ಹಿಂದೂ ರಾಜ್ಯವಾಗಿ ಉಳಿದಿದೆ. ನೂರಾರು ವರುಷಗಳಿಂದ ಈ ರಾಜ್ಯವು ಮಹೋನ್ನತದಶೆಯಲ್ಲಿ ಇದ್ದಿತು. ಇದರಲ್ಲಿ ನಾವುಗಳು ಬಹುಕಾಲ ನೆಲೆಗೊಂಡು ಈ ರಾಜ್ಯದ ವಿಷಯದಲ್ಲಿ ಬಹಳ ಪ್ರೀತಿಯುಳ್ಳವರಾಗಿದ್ದೆವು. ಇದರ ದೆಸೆಯಿಂದಲೇ ನಮ್ಮ ಪ್ರತಿಷ್ಠೆಯೂ ಘನತೆಯೂ ಉಂಟಾಗುತ್ತಿದ್ದಿತು. ಇಂತಹ ರಾಜ್ಯವೂ

ಮೇಲೆ ಹೇಳಿದ ಸಂಸ್ಥಾನಗಳ ಸ್ಥಿತಿಯನ್ನು ನಡೆದ ಬಳಿಕ ಇನ್ನೇನು ಇದೆ! ಬ್ರಿಟಿಷ್ ಗವರ್ನಮೆಂಟಿನವರ ವಿವೇಕವನ್ನೂ, ಉಪಕಾರವನ್ನೂ, ಅವರುಗಳ ಸಂಬಂಧವು ಈ ದೇಶಕ್ಕೆ ಉಂಟಾದುದರಿಂದ ನಮಗೆ ಲಭಿಸಿದ ಪ್ರಯೋಜನಗಳನ್ನೂ ನಾವು ಅರಿಯದವರಲ್ಲ. ಈ ಸಂದರ್ಭದಲ್ಲಿ, ದೇಶೀಯರಾದ ನಾವುಗಳೆಲ್ಲರೂ ತಟಸ್ಥರಾಗಿದ್ದರೆ, ನಮ್ಮ ಮೈಸೂರು ರಾಜ್ಯವು ನಾಮಮಾತ್ರವಾಗುವುದರಲ್ಲಿ ಸಂದೇಹವಿಲ್ಲ" ಎಂದು ಹಂಬಲಿಸುತ್ತ ಸಭೆ ಸೇರಿ, ನಾನಾಭಾಯಿ ನಸರ್‌ವಾಂಜಿ ಎಂಬ ಒಬ್ಬ ಪಾರ್ಸಿ ದೊಡ್ಡ ಮನುಷ್ಯರನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡು, ಈ ಸ್ವೀಕಾರವನ್ನು ಸ್ಥಿರಪಡಿಸಿಕೊಟ್ಟು ಸ್ವೀಕೃತ ಪುತ್ರರೇ ರಾಜ್ಯಕ್ಕೂ ಅರ್ಹರಾಗುವಂತೆ ಮಂಜೂರು ಮಾಡಿಸಿಕೊಡಬೇಕೆಂದು ಗವರ್ನರ್ ಜನರಲ್ ಅವರಿಗೆ ರಾಜಭಕ್ತಿ ಸೂಚಕವಾದ ಒಂದು ಪ್ರಾರ್ಥನಾಪತ್ರಿಕೆಯನ್ನು ಬರೆದು, ಅದಕ್ಕೆ ದೀನನಾಥಲಾಲ, ಹಿರಣ್ಯಪ್ಪ ಮುಂತಾದ ೭,೩೪೫ ಜನ ಪ್ರಜೆಗಳಿಂದ ಕೈಬರೆಹ ಹಾಕಿಸಿ, ಅದನ್ನು ಛೀಫ್ ಕಮಿಷನರವರ ಮೂಲಕ ಕಳುಹಿಸಿ ಕೊಟ್ಟರು. ಅನಂತರದಲ್ಲಿ ಅದೇ ವಿಧವಾಗಿ ಮತ್ತೊಂದು ಪ್ರಾರ್ಥನಾ ಪತ್ರಿಕೆಯನ್ನು ಬರೆದು, ಮೈಸೂರು, ಹಾಸನ, ಶಿವಮೊಗ್ಗ, ಕಡೂರು, ತುಮಕೂರು ಡಿಸ್ಟ್ರಿಕ್ಟುಗಳ ಪ್ರಜೆಗಳಿಂದಲೂ ಕೈಬರೆಹ ಮಾಡಿಸಿ, ಅದನ್ನೂ ಮೇಲಕ್ಕೆ ಕಳುಹಿಸಿಕೊಟ್ಟರು. ಯಾವುದಕ್ಕೂ ಅನುಕೂಲವಾದ ಉತ್ತರವು ದೊರೆಯದೆ, ಪುತ್ರಸ್ವೀಕಾರವು ಬ್ರಿಟಿಷ್ ಸರಕಾರದಿಂದ ಸ್ಥಾಪಿತವಾಗುವುದೋ ಇಲ್ಲವೋ ಎಂಬ ಶಂಕೆಯು ಸಕಲರನ್ನೂ ಬಾಧಿಸತೊಡಗಿತು. ಹೌಸ್ ಆವ್ ಕಾಮನ್ಸ್ ಸಭೆಯಲ್ಲಿ ಈ ವಿಷಯವನ್ನು ವಿಮರ್ಶೆಗೆ ತರುವುದಕ್ಕೆ ಬೇಕಾದ ಪ್ರಯತ್ನಗಳನ್ನೆಲ್ಲ ಮಾಡಿದರೂ, ಯಾವ ಪ್ರಶ್ನೆಗೂ ಉಚಿತವಾದ ಉತ್ತರವು ದೊರೆಯದೆ ಹೋಯಿತು.

ಕಡೆಗೆ, ಶ್ರೀಕೃಷ್ಣರಾಜ ಒಡೆಯರವರು ೧೮೬೪ರಲ್ಲಿ ಮದರಾಸಿನಲ್ಲಿ ಬ್ಯಾರಿಸ್ಟರಾಗಿದ್ದ ಜಾನ್ ಡಾಸನ್ ಮೇನ್ ಸಾಹೇಬರನ್ನು ಕರೆಯಿಸಿ, ಅವರಿಂದ ಮೈಸೂರು ರಾಜವಂಶೀಯರಿಗೆ ಈ ಸಂಸ್ಥಾನದ ಮೇಲಿರುವ ಅನಾದಿಯಾದ ಹಕ್ಕುದಾರಿಯನ್ನೂ, ಬ್ರಿಟಿಷ್ ಸರಕಾರದ ವಿಷಯದಲ್ಲಿರುವ ರಾಜಭಕ್ತಿಯನ್ನೂ, ಮುಂದೆ ಈ ರಾಜವಂಶವನ್ನು ಹೇಗೆ ಕಾಪಾಡಿಕೊಂಡು ಬರಬೇಕೆಂಬ ಅಂಶವನ್ನೂ ಸ್ಪಷ್ಟವಾಗಿ ವಿವರಿಸಿ ತಿಳಿಸುವಂತೆ ಪಾರ್ಲಿಮೆಂಟ್‌ಸಭೆಗೆ ಪ್ರಾರ್ಥನಾ ರೂಪವಾದ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆಯಿಸಿ, ಅದನ್ನು ತಮ್ಮ ಮಿತ್ರರಾದ ಡಾಕ್ಟರ್ ಕ್ಯಾಂಬಲ್ ಅವರೊಡನೆ ಇಂಗ್ಲೆಂಡಿಗೆ ಕಳುಹಿಸಿಕೊಟ್ಟರು. ಜೆ. ಡಿ. ಮೇನ್ ಅವರು ಮೇಲ್ಕಂಡ ಪತ್ರಿಕೆಯನ್ನು ಬರೆದುಕೊಟ್ಟುದಲ್ಲದೆ, ಆ ವಾರದಲ್ಲಿ ಅವರು ಇಂಗ್ಲೆಂಡ್ ದೇಶಕ್ಕೆ ಹೊರಟಾಗ, ದೈವೇಚ್ಛೆಯಿಂದ ಅವರೂ ಮತ್ತು ಆ ಕಾಲದಲ್ಲಿ ಇಂಡಿಯಾ ಲೆಜಿಸ್ಲೇಟಿವ್ ಸಭೆಯಲ್ಲಿ ಲೀಗಲ್ ಮೆಂಬರಾಗಿದ್ದ ಆನರೆಬಲ್ ಹೆನ್ರಿ ಸಮ್ನರ್ ಮೇನ್ ಸಾಹೇಬರೂ ಒಂದೇ ಹಡಗಿನಲ್ಲಿ ಪ್ರಯಾಣಿಕರಾಗಿ ಮಿಳಿತರಾದುದರಿಂದ, ಅವರೊಡನೆ ಮೈಸೂರು ರಾಜಕೀಯಾಂಶಗಳನ್ನು ಸವಿಸ್ತಾರವಾಗಿ ಚರ್ಚಿಸಿ, ಈ ಸಂಸ್ಥಾನ

ರಾಜವಂಶವನ್ನು ಪುನರುದ್ಧರಣಮಾಡಬೇಕೆಂಬ ಅಭಿಮಾನವು ಅವರಲ್ಲಿ ನಾಟುವಂತೆ ಮಾಡಿದರು.*

ಬಳಿಕ ೧೮೬೬ರಲ್ಲಿ ಶ್ರೀಕೃಷ್ಣರಾಜ ಒಡೆಯರವರ ಪಕ್ಷವಾಗಿ ಸರ್ ಹೆನ್ರಿ ರಾಲಿನ್ ಸನ್ ಸಾಹೇಬರವರು, ಆಗ ಇಂಡಿಯಾ ಸ್ಟೇಟ್ ಸೆಕ್ರಿಟೆರಿಯವರಾಗಿದ್ದು ಬಳಿಕ ಮಾರ್ಕ್ವಿಸ್ ಆಫ್ ಸ್ಯಾಲಿಸ್‌ಬರಿ ಎಂಬುವಾಗಿ ಖ್ಯಾತಿಗೊಂಡ ಲಾರ್ಡ್ ಕ್ರ್ಯಾಣ್ ಬೋರಣ್ ಅವರ ಬಳಿಗೆ ಹೋಗಿ, ಸ್ವೀಕಾರಾನಂತರದಲ್ಲಿ ಮೈಸೂರು ರಾಜ್ಯಭಾರಸ್ಥಿತಿಗೆ ಪರಿಣಾಮಾಂತರ ಉಂಟಾಗಿರುವುದರಿಂದ, ಈ ಸಂಸ್ಥಾನದ ವಿಷಯವನ್ನು ಮತ್ತೆ ವಿಚಾರಮಾಡಿ ಅನುಕೂಲವಾದ ಏರ್ಪಾಡನ್ನು ಮಾಡಿಕೊಡಬೇಕೆಂದು ತಿಳಿಸಿದರು.

ಆ ಬಳಿಕ ಜಾನ್ ಸ್ಟೂವರ್ಟ್ ಮಿಲ್ ಸಾಹೇಬರು ನಯವಿನಯಸೂಚಕ ವಾಕ್ಯಜಾಲ ಗರ್ಭಿತವಾಗಿರುವಂತೆ ಒಂದು ಅರ್ಜಿಯನ್ನು ಬರೆದು, ಅದಕ್ಕೆ ಇಂಡಿಯಾ ದೇಶದಲ್ಲಿ ದೊಡ್ಡದೊಡ್ಡ ಅಧಿಕಾರಗಳನ್ನು ಮಾಡಿ ಸ್ವದೇಶಕ್ಕೆ ಹೋಗಿದ್ದ ಅನೇಕ ಯೂರೋಪ್ಯ ವೃದ್ಧಮಹಾಶಯರ ಕೈಬರೆಹಗಳನ್ನು ಮಾಡಿಸಿ, ಶ್ರೀಕೃಷ್ಣರಾಜ ಒಡೆಯರವರ ಪಕ್ಷವಾಗಿ ಅದನ್ನು ಹೌಸ್ ಆಫ್ ಕಾಮನ್ಸ್ ಸಭೆಗೆ ಒಪ್ಪಿಸಿದರು. ಅದರ ಕಡೆಯಲ್ಲಿದ್ದ ಪ್ರಾರ್ಥನೆಯೇನೆಂದರೆ: "ಬ್ರಿಟಿಷ್ ಅಧಿಕಾರಾನುಕೂಲ್ಯಗಳಿಗೂ ಈ ದೇಶದ ಸುಭಿಕ್ಷಕ್ಕೂ ಸೌಖ್ಯಕ್ಕೂ ಬೇಕಾದ ಸಕಲವಾದ ಏರ್ಪಾಡುಗಳಿಗೂ ಸ್ವಲ್ಪವೂ ನ್ಯೂನತೆ ಬಾರದಂತೆ, ಆಶ್ರಿತ ಸಂಸ್ಥಾನವಾದ ಈ ಮೈಸೂರಿನ ನೇಟಿವ್ ರಾಜ್ಯಭಾರವು ಪುನಃ ಸ್ಥಾಪಿತವಾಗುವಂತೆ ಮಾಡುವುದಕ್ಕೆ ಈ ಮಹಾಸಭೆಯ ಉದಾರಚಿತ್ತಕ್ಕೆ ಸರ್ವೋತ್ತಮವಾದವುಗಳೆಂದು ತೋರುವ ಏರ್ಪಾಡುಗಳನ್ನು ಸ್ವಲ್ಪವೂ ವಿಲಂಬ ಮಾಡದೆ ನಡೆಯಿಸಿಕೊಡುವಂತೆ ಮಾಡಿಸಬೇಕು."

ಈ ದೇಶದಲ್ಲಿ ಬ್ರಿಟಿಷ್ ಆಳಿಕೆಯು ಚಿರಸ್ಥಾಯಿಯಾಗಿರುವುದಕ್ಕೆ ಸುರಕ್ಷಿತವಾದ ದೇಶೀಯ ರಾಜ್ಯಗಳಿರುವುದೇ ಕಾರಣಭೂತವಾದುದೆಂಬ ಉದಾರಭಾವದಿಂದ

---

* ಈ ವಿಷಯವು ಮೈಸೂರಿನ ಅಫಿಷಿಯೇಟಿಂಗ್ ದಿವಾನರಾಗಿದ್ದ ಮ॥ ತಂಬೂಚೆಟ್ಟಿರವರಿಗೆ ಜೆ. ಡಿ. ಮೇನ್ ಸಾಹೇಬರವರು ಬರೆದ ಲೇಖನದಿಂದ ವ್ಯಕ್ತವಾಗುವುದು.

GOODREST, READING, BERKSHIRE,
May 1st, 1893.

"My Dear Thumboo Chetty. . . . . . I don't know whether you are aware that the laststatement of the case for the Restitution of Mysore State which was very shortly afterwards followed by the order for its restitution was written by me about the middle of 1864, I think. I was asked to go down to Mysore to prepare a statement, which took the form of a Memorial from the then Raja and spent about a week at Dr. Campbell's house drawing it up. In March 1865 I went Home, in the same ship with the Honorable Henry Sumner Main who was the Legal Member in the Legislative Council of India, and was much amused at his discussing the Memorial with me in complete ignorance, of course, that I knew anything about it. . . . . . ."

ಪ್ರೇರಿತರಾಗಿ, ಇಂಗ್ಲಿಷ್ ಸರಕಾರದವರು ಮಾಡಿದ ನಿರ್ಣಯವನ್ನು ವೈಕೌಂಟ್ ಕ್ರ್ಯಾಕ್‌ಬೋರ್ನ್ ಅವರು ೧೮೬೭ನೆಯ ಇಸವಿ ಏಪ್ರಿಲ್ ತಿಂಗಳಲ್ಲಿ ಹೌಸ್ ಆಫ್ ಕಾಮನ್ಸ್ ಸಭೆಗೆ ತಿಳಿಯಪಡಿಸಿದರು. ಬಳಿಕ ಆ ತಿಂಗಳ ೧೬ನೆಯ ತಾರೀಖಿನಲ್ಲಿ ಆಗ ಸ್ಟೇಟ್ ಸೆಕ್ರಿಟರಿಗಳಾಗಿದ್ದ ಸರ್ ಸ್ಟ್ಯಾಫರ್ಡ್ ನಾರ್ತ್‌ಕೋಟ್ ಅವರು ಮುಂದೆ ಶ್ರೀಕೃಷ್ಣರಾಜ ಒಡೆಯರವರಿಗೆ ಪುನಃ ರಾಜ್ಯವನ್ನು ಸ್ವಾಧೀನಪಡಿಸತಕ್ಕ ವಿಷಯದಲ್ಲಿ ಪೂರ್ವದಲ್ಲಿಯೇ ಮಾಡಿರುವ ತೀರ್ಮಾನವನ್ನು ಸ್ವಲ್ಪವೂ ವ್ಯತ್ಯಾಸ ಮಾಡುವುದಕ್ಕಾಗುವುದಿಲ್ಲವೆಂತಲೂ, ಆದರೆ ಅವರ ಸ್ವೀಕೃತ ಪುತ್ರರನ್ನು ಸಿಂಹಾಸನಾಸೀನರನ್ನಾಗಿ ಮಾಡುವುದರ ಮೂಲಕ ಮೈಸೂರು ರಾಜವಂಶವನ್ನು ಕಾಪಾಡಿಕೊಂಡು ಬರಲಾಗುವುದೆಂತಲೂ ನಿರವಿಸಿ, ಇಂಡಿಯಾ ವೈಸ್ರಾಯಿಯವರಿಗೆ ಒಂದು ಲೇಖನವನ್ನು ಬರೆದರು. ಅದರ ಒಕ್ಕಣೆ ಏನೆಂದರೆ :—

"೧೭೯೯ನೆಯ ಇಸವಿಯಲ್ಲಿ ಮಾಡಿದ ಕರಾರಿನ ಒಡಂಬಡಿಕೆಗಳ ಅತಿಸೂಕ್ಷ್ಮವಾದ ವಿಚಾರಕ್ಕೆ ಶ್ರೀಮನ್ಮಹಾರಾಜ್ಞೀ ಸರಕಾರದವರು ಪ್ರವೇಶಮಾಡದೆ, ತಾವು ಪೂರ್ವದಲ್ಲಿ ಮಾಡಿದ ವ್ಯವಸ್ಥೆಗನುಗುಣವಾಗಿ, ಮೈಸೂರು ಸಂಸ್ಥಾನದ ಪ್ರಜೆಗಳ ಸತ್ಪರಿಪಾಲನೆಗೂ ಬ್ರಿಟಿಷ್ ರಾಜ್ಯಾಧಿಕಾರಾನುಕೂಲ್ಯಗಳಿಗೂ ಸ್ವಲ್ಪವೂ ಅಪೋಹ ಬಾರದಂತೆ ನಿಜವಾದ ಭರವಸವನ್ನುಂಟುಮಾಡಬಲ್ಲ ಕೌಲುಗಳ ಪ್ರಕಾರ ಮೈಸೂರು ಸಂಸ್ಥಾನದ ಸಿಂಹಾಸನಾಧಿಪತ್ಯವನ್ನು ಹಿಂದೂ ವಂಶೀಯರಿಗೇ ಕೊಟ್ಟು ಕಾಪಾಡಿಕೊಂಡು ಬರಬೇಕೆಂದು ಇಚ್ಛಯಿಸುತ್ತಾರೆ. ಶ್ರೀಮನ್ಮಹಾರಾಜ್ಞಿಯವರು ಸಹ ಈ ಅಭಿಪ್ರಾಯವನ್ನೇ ಅನುಮೋದಿಸುತ್ತಾರೆ. ಆದರೆ ಮಹಾರಾಜ್ಞಿಯವರ ವಾಸ್ತವೇಚ್ಛೆಯೇನೆಂದರೆ : ಪ್ರಕೃತದಲ್ಲಿ ತಮ್ಮ ಸ್ವಂತ ರಕ್ಷಣೆಯಲ್ಲಿಲ್ಲದಿರುವ ಇಂಡಿಯಾ ದೇಶೀಯ ಭಾಗಗಳು ತಮ್ಮ ಪ್ರತಿನಿಧಿಗಳಾದ ಇಂಗ್ಲಿಷ್ ಅಧಿಕಾರಿಗಳ ಜೊತೆಯಲ್ಲಿ ಸೇರಿಕೊಂಡು, ಸ್ವದೇಶೀಯರ ಅಭ್ಯುದಯವನ್ನು ಹೆಚ್ಚಿಸುತ್ತ ನಡೆದುಕೊಳ್ಳುವ ಇಂಡಿಯಾ ದೇಶೀಯ ರಾಜರ ಪರಿಪಾಲನೆಯಲ್ಲಿಯೇ ಪ್ರವರ್ಧಮಾನವಾಗುತ್ತ ಬರಬೇಕು ; ಇದಲ್ಲದೆ, ಮುಖ್ಯವಾಗಿ ಪ್ರಕೃತಸಂದರ್ಭದಲ್ಲಿ, ಮೈಸೂರು ರಾಜವಂಶವು ಅನಾದಿಯಾಗಿ ನಡೆದುಬಂದಿರುವುದನ್ನೂ ಈ ರಾಜವಂಶಕ್ಕೂ ಮೈಸೂರು ಸಂಸ್ಥಾನಕ್ಕೂ ಬಹುಕಾಲದಿಂದಿರುವ ಸಂಬಂಧವನ್ನೂ ಶ್ರೀಕೃಷ್ಣರಾಜ ಒಡೆಯರವರು ಬ್ರಿಟಿಷ್ ಸರಕಾರದ ವಿಷಯದಲ್ಲಿ ಪ್ರಕಾಶಪಡಿಸಿಕೊಂಡಿರುವ ರಾಜಭಕ್ತಿಯನ್ನೂ ಸ್ನೇಹಾತಿಶಯವನ್ನೂ ಕಂಡು, ವಿಕ್ಟೋರಿಯಾ ಮಹಾರಾಜ್ಞಿಯವರು ಈಚೆಗೆ ನಡೆದಿರುವ ವಿದ್ಯಮಾನಗಳಿಗನುಗುಣವಾಗಿಯೂ, ೧೭೯೯ರಲ್ಲಿ ಮಾಡಿದ ಒಡಂಬಡಿಕೆಗಳಿಗನುಸಾರವಾಗಿಯೂ ಇರುವ ಕೌಲುಗಳ ಪ್ರಕಾರವಾಗಿ ಮಹಾರಾಜರವರ ಸ್ವೀಕೃತ ಪುತ್ರರನ್ನು ಸಿಂಹಾಸನಾಸೀನರನ್ನಾಗಿ ಮಾಡುವುದರ ಮೂಲಕ ಮೈಸೂರು ರಾಜವಂಶವನ್ನು ಕಾಪಾಡಿಕೊಂಡು ಬರಬೇಕೆಂಬ ಉದಾರವಾದ ಇಚ್ಛೆಯುಳ್ಳವರಾಗಿರುತ್ತಾರೆ.

“ಈ ಏರ್ಪಾಡನ್ನು ಆಚರಣೆಗೆ ತರುವುದಕ್ಕೆ ಆವಶ್ಯಕಗಳಾದ ಒಡಂಬಡಿಕೆಗಳನ್ನು ವಿಚಾರಮಾಡತಕ್ಕ ವಿಷಯದಲ್ಲಿ ಮೊದಲೇ ನಾನು ತಿಳಿಸಬೇಕಾಗಿರುವುದೇನೆಂದರೆ: ಮಹಾರಾಜ್ಞೀ ಸರಕಾರದವರು ಇಷ್ಟು ದೀರ್ಘಕಾಲದಿಂದ ತಮ್ಮ ಪ್ರತ್ಯಕ್ಷ ಪಾಲನೆಯಲ್ಲಿರುವ ಪ್ರಜೆಗಳ ಕ್ಷೇಮಚಿಂತನೆಯಲ್ಲಿ ಕೇವಲ ಬದ್ಧಾದರರಾಗಿಯೇ ಇರುವುದಲ್ಲದೆ, ಅವರು ಅಂತಹ ಪ್ರಜೆಗಳನ್ನು ಪುನಃ ದೇಶೀಯ ರಾಜರ ಅಧಿಕಾರಕ್ಕೊಳಗುಮಾಡುವುದಕ್ಕೆ ಮೊದಲೇ, ಆ ರಾಜರ ವಿದ್ಯಾಭ್ಯಾಸ ವಿಷಯದಲ್ಲಿ ತಮ್ಮ ಕೈಯಲ್ಲಾದ ಸಾಹಸವನ್ನೆಲ್ಲ ಮಾಡಿ, ಆ ರಾಜರು ಸ್ವದೇಶವನ್ನಾಳುವುದಕ್ಕೆ ಯೋಗ್ಯವಾದ ರಾಜಮಾರ್ಗಗಳಿಗನುಸಾರವಾಗಿ ಅವರೊಡನೆ ಖಂಡಿತವಾದ ಒಂದು ನಿಬಂಧನೆಯನ್ನು ಮಾಡಿಕೊಂಡು, ಅದಕ್ಕೆ ವಿರುದ್ಧವಾಗಿ ನಡೆಯದಿರುವಂತೆ ಬೇಕಾದಷ್ಟು ಭರವಸವನ್ನು ಆ ರಾಜರಿಂದ ತೆಗೆದುಕೊಳ್ಳತಕ್ಕುದು ತಮ್ಮ ಕರ್ತವ್ಯವೆಂದು ಭಾವಿಸುತ್ತಾರೆ.

“ಈ ಕಾರಣದಿಂದ, ಬಾಲಕರಾದ ಮೈಸೂರು ಮಹಾರಾಜಪುತ್ರರು ತಮ್ಮ ಪದವಿಗೆ ಮತ್ತು ಗೌರವಕ್ಕೆ ಉಚಿತವಾಗಿಯೂ ರಾಜ್ಯಭಾರ ಕರ್ತವ್ಯಗಳನ್ನು ನೆರವೇರಿಸುವುದಕ್ಕೆ ಬೇಕಾದ ಸಾಮರ್ಥ್ಯವನ್ನುಂಟುಮಾಡಬಹುದೆಂದು ಪರಿಗಣಿಸಲ್ಪಡುವುದಾಗಿಯೂ ಇರುವ ವಿದ್ಯಾಭ್ಯಾಸದ ಪ್ರಯೋಜನವನ್ನು ಪಡೆಯಬೇಕೆಂಬುವುದೇ ವಿಕ್ಟೋರಿಯಾ ಮಹಾರಾಜ್ಞಿಯವರ ಇಷ್ಟವಾಗಿರುವುದು. ಆದುದರಿಂದ ಆ ರಾಜಪುತ್ರರು ನಿಮ್ಮ ಸರಕಾರದ (ಇಂಡಿಯಾ ವೈಸ್ರಾಯಿಯವರ) ವಿಚಾರಣೆಯಲ್ಲಿಯೇ ವಿದ್ಯಾಭ್ಯಾಸವನ್ನು ಹೊಂದಬೇಕೆಂದು ನೀವು ಮಹಾರಾಜರಿಗೆ ತಿಳಿಸಬೇಕೆಂಬುವುದು ನನ್ನ ಇಚ್ಛೆಯಾಗಿದೆ. ಇನ್ನು ಮುಂದೆ ಯಾವ ಪ್ರಜೆಗಳನ್ನು ಪಾಲನೆಮಾಡಬೇಕಾಗಿರುವುದೋ, ಅವರಿಗೂ ಆ ರಾಜರಿಗೂ ಅನಾವಶ್ಯಕವಾದಷ್ಟು ಅಗಲಿಕೆಯನ್ನುಂಟು ಮಾಡದೆ, ಮೇಲ್ಕಂಡ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕೆ ಸರ್ವೋತ್ತಮವಾದ ಮಾರ್ಗವು ಯಾವುದೆಂಬುದನ್ನು ನೀವು ನನಗೆ ಬರೆದು ತಿಳಿಸಬೇಕೆಂದು ಕೋರುತ್ತೇನೆ.”

ವೈಸ್ರಾಯಿಯವರಿಗೆ ಬಂದ ಮೇಲ್ಕಂಡ ನಿರೂಪದಲ್ಲಿದ್ದ ಮತ್ತೆರಡು ವಿಶೇಷಗಳೇನೆಂದರೆ: (೧) ವೃದ್ಧ ಮಹಾರಾಜರವರ ಅವಸಾನ ಕಾಲದಲ್ಲಿ ಬಾಲಕ ಮಹಾರಾಜರು ಇನ್ನೂ ನಿಯಮಿತ ವಯಶ್ಶಾಲಿಗಳಾಗದಿದ್ದರೆ, ಆಗ ರಾಜ್ಯವು ಅವರ ಹೆಸರಿನಲ್ಲಿ ಈಗಿನ ಪದ್ಧತಿಯನ್ನೇ ಅನುಸರಿಸಿ, ಈಗಿನ ಏರ್ಪಾಡುಗಳಿಗೆ ಅನುಸಾರವಾಗಿಯೇ ಆಳಲ್ಪಡಬೇಕು. (೨) ಎಲ್ಲ ರಾಜ್ಯವನ್ನಾಗಲಿ ಅಥವಾ ಒಂದು ಭಾಗವನ್ನಾಗಲಿ ಅವರ ವಶಪಡಿಸುವುದಕ್ಕೆ ಮೊದಲು, ಮೈಸೂರು ಪ್ರಜೆಗಳಿಗೆ ಯಾವದೊಂದು ಕೊರತೆ ಬಾರದಂತೆಯೂ, ಬ್ರಿಟಿಷ್ ರಾಜ್ಯಾಧಿಕಾರಕ್ಕೆ ಹಿತವಾಗಿರುವಂತೆಯೂ, ಪ್ರೋಗದಿಯನ್ನು ಸ್ವಲ್ಪ ಹೆಚ್ಚಿಸುವಂತೆಯೂ ರಾಜ್ಯಭಾರ ಕ್ರಮವನ್ನು ನೆಲೆಗೊಳಿಸುವುದಕ್ಕೆ ಸರಿಯಾದ ಏರ್ಪಾಡುಗಳು ಮಾಡಲ್ಪಡುವುವು.

ಮೇಲಣ ನಿರೂಪದಿಂದ ಶ್ರೀಕೃಷ್ಣಭೂಪತಿಗಳು ಪುನಃ ತಮಗೇ ರಾಜ್ಯ ಪ್ರಾಪ್ತಿಯಾಗಲಿಲ್ಲವೆಂಬ ಕೊರತೆಯುಳ್ಳವರಾದರೂ, ಮಿಕ್ಕ ಅಂಶಗಳಲ್ಲೆಲ್ಲ ತಮ್ಮ ಮನೋ

ರಥವು ಸಫಲವಾದುದಕ್ಕೂ, ಆ ನಿರೂಪದಲ್ಲಿ ಸೂಚಿತವಾದ ಸ್ನೇಹಭಾವಕ್ಕೂ ಸಂತೋಷಗೊಂಡವರಾಗಿ, ತಪ್ಪಿಹೋಗಿದ್ದ ಸಿಂಹಾಸನಾಧಿಪತ್ಯವು ತಮ್ಮ ಮಕ್ಕಳಿಗಾದರೂ ದೊರೆತು, ತಮ್ಮ ವಂಶೀಯರಿಗೇ ಅದು ಚಿರಂತನವಾಗಿ ನಡೆದುಕೊಂಡು ಬರುವದೆಂಬ ಎಣಿಕೆಯಿಂದ ತೃಪ್ತರಾಗಿ, ಚಿಕ್ಕ ಮಹಾರಾಜರವರ ಬಾಲಲೀಲಾ ವಿನೋದಗಳನ್ನು ನೋಡಿ ಆನಂದಿಸುತ್ತಿದ್ದರು.

ಚಿಕ್ಕ ಮಹಾರಾಜರನ್ನು ಪ್ರತಿದಿನವೂ ಒಂದೆರಡು ಸಲಕ್ಕೆ ಕಡಿಮೆಯಿಲ್ಲದೆ ಅರಮನೆಗೆ ಕರೆದುಕೊಂಡು ಹೋಗುತ್ತಿದ್ದರು. ಮಹಾರಾಜರವರು ಮಗುವು ಬಂದೊಡನೆಯೇ ಎತ್ತಿಕೊಂಡು ಮುದ್ದಾಡಿ ಹರಸಿ, ತಮ್ಮ ಜೊತೆಯಲ್ಲಿದ್ದವರಿಗೆಲ್ಲ ತೋರಿಸುತ್ತ ಸ್ವಲ್ಪ ವಿನೋದವಮಾಡಿ, ಬಳಿಕ ಚಿಕ್ಕ ಅರಮನೆಗೆ ಕಳುಹಿಸಿಕೊಡುತ್ತಿದ್ದರು. ಆ ಕಾಲದಲ್ಲಿ ಬಾಲಕರಾಗಿದ್ದ ಶ್ರೀಚಾಮರಾಜೇಂದ್ರ ಒಡೆಯರನ್ನು ನೋಡಿದ್ದ ವೆಸ್ಲಿಯನ್ ಮಿಷನ್ ಪಾದರಿ ಹಚ್ಚಿನ್ಸಾಹೇಬರ ಪತ್ನಿಯವರು ತಮ್ಮ "ಗ್ಲಿಂಪಸ ಆಫ್ ಇಂಡಿಯಾ" ಎಂಬ ಪುಸ್ತಕದಲ್ಲಿ ಈ ರೀತಿ ಬರೆದಿರುತ್ತಾರೆ.

"ನಾವು ಅರಮನೆಗೆ ಪ್ರವೇಶಮಾಡಿ ಮಹಾರಾಜರವರ ಸಮ್ಮುಖಕ್ಕೆ ಹೋದೆವು. ರೆಸಿಡೆಂಟರು ನಮ್ಮಲ್ಲಿ ಪ್ರತಿಯೊಬ್ಬರ ಹೆಸರನ್ನೂ ಹೇಳಿ ಮಹಾರಾಜರವ ಸಂದರ್ಶನವನ್ನು ಮಾಡಿಸಿದರು. ಅನಂತರ ನಾವೆಲ್ಲರೂ ಸುಖಾಸನಗಳಲ್ಲಿ ಕುಳಿತುಕೊಂಡೆವು. ಆಗ ಒಬ್ಬ ಊಳಿಗದವನು ಮಹಾರಾಜರ ಸ್ವೀಕೃತ ಪುತ್ರರೂ ಮುಂದೆ ಮಹಾರಾಜರ ಪದವಿಗೆ ಅರ್ಹರೂ ಆದ ಮಗುವನ್ನು ಎತ್ತಿಕೊಂಡು ಬಂದು ನಮ ತೋರಿಸಿದನು. ಆ ಮಗುವಿಗೆ ಸೈನಿಕರ ಅಲಂಕಾರವನ್ನು ಮಾಡಿ ತಲೆಗೆ ಒಂದು ಚಿಕ್ಕ ರುಮಾಲನ್ನು ಸುತ್ತಿ ನಡುವಿಗೆ ಒಂದು ಪುಟ್ಟ ಖಡ್ಗವನ್ನು ತಗಲುಹಾಕಿದ್ದರು. ಮೂರು ವರುಷದ ಮಗುವಿಗೆ ನಮ್ಮೆಲ್ಲರ ಬಿಳಿಮುಖಗಳೂ, ಥಳಥಳಿಸುತ್ತಿರು ಪೂರ್ಣ ಕೆಲಸದ ಉಡುಪುಗಳೂ ಹೆದರಿಕೆಯನ್ನುಂಟುಮಾಡಿದುವು. ಒಡನೆಯೇ ಮಗುವನ್ನು ಪರಿಚಿತರಾದ ಜನಗಳ ಬಳಿಗೆ ಕರೆದುಕೊಂಡು ಹೋಗಬೇಕಾಗಿಬಂದಿತು. ಆದರೆ ಅದೇ ಮಗುವು ಕೆಲವು ವರುಷಗಳಾದಮೇಲೆ, ಅಪರಿಚಿತರಾದ ನಮ್ಮಂತಹ ಮಧ್ಯದಲ್ಲಿ ಮಹಾರಾಜರಿಗೆ ಸಹಜವಾದ ರಾಜಠೀವಿಯನ್ನು ತೋರಿಸಿಕೊಂಡಿತು."

ಮುಮ್ಮಡಿ ಕೃಷ್ಣರಾಜ ಒಡೆಯರವರು ತಮ್ಮ ಸ್ವೀಕೃತ ಪುತ್ರರು ಮುಂದೆ ರಾ ಪದವಿಗೆ ಬಂದು ರಾಜ್ಯಭಾರವನ್ನು ವಹಿಸಿ, ದುಷ್ಟಶಿಕ್ಷಣ ಶಿಷ್ಟರಕ್ಷಣಾದಿ ರಾಜಕಾ ಗಳನ್ನೆಲ್ಲ ನೆರವೇರಿಸುವುದಕ್ಕೆ ತಕ್ಕ ಸಾಮರ್ಥ್ಯವನ್ನು ಪಡೆಯಬೇಕಾದರೆ ಅದಕ್ಕೆ ತ ರಾಜವಿದ್ಯಾಭ್ಯಾಸವನ್ನು ಮಾಡಿಸಬೇಕೆಂದು ಬಯಸಿ, ಸಕಾಲದಲ್ಲಿ ಅಕ್ಷರಾಭ್ಯಾ ವನ್ನು ಶಾಸ್ತ್ರೀಯವಾಗಿ ಮಾಡಿಸಿ, ರಾಜಕೀಯ ವಿದ್ಯಾಭ್ಯಾಸಕ್ಕೆ ತಕ್ಕ ಏರ್ಪಾ ಗಳನ್ನು ಕಲ್ಪಿಸಿ, ರಾಜಕುಮಾರರನ್ನು ಪೋಷಿಸುತ್ತ ಬಂದರು.

ಹೀಗಿರುವಲ್ಲಿ, ಆ ಮಾರನೆಯ ವರುಷವೇ ವೃದ್ಧಮಹಾರಾಜರಿಗೆ ದೇಹಾಲ ವುಂಟಾಗಿ, ಬದುಕುವುದು ಅಸಾಧ್ಯವೆಂದು ತಿಳಿಯಿತು. ಆಗ ಗುರಿಕಾರ ಮುರಿಮಲ್ಲದ

ನವರನ್ನು ಚಿಕ್ಕ ಅರಮನೆಗೆ ಕಳುಹಿಸಿ, ಚಿಕ್ಕ ಮಹಾರಾಜರನ್ನು ಕರೆಯಿಸಿ ಸಮೀಪ ದಲ್ಲಿ ಕುಳ್ಳಿರಿಸಿಕೊಂಡು, ಪಟ್ಟದ ಕತ್ತಿಯನ್ನೂ ರಾಜಮುದ್ರಿಕೆಯನ್ನೂ ಹರಸಿ ಕೊಟ್ಟು, ತೆಬ್ಬಿ ಮುಖ್ಖಾಡಿ ಪ್ಯೈದಡವಿ, ಅಶ್ರುಪೂರ್ಣಲೋಚನರಾಗಿ, ತಮ್ಮ ಶಯನದ ಪಾರ್ಶ್ವ ದಲ್ಲಿ ನಾರಾಗಿ ನಿಂತಿದ್ದ ಬಕ್ಷಿ ಹಾಮಪ್ಪಾಜಿ ಅರಸಿನವರು, ಬಕ್ಷಿ ನರಸಪ್ಪ ಮುಂತಾದ ಅಧಿಕಾರಿಗಳನ್ನು ಕುರಿತು, ''ಅಯ್ಯಾ ಅಧಿಕಾರಿಗಳಿರಾ, ನನ್ನ ಕಾಲವು ಮುಗಿದು ಹೋದಂತಿದೆ. ನನಗೆ ಪುನಃ ರಾಜ್ಯಭಾರಮಾಡುವ ಅದೃಷ್ಟವಿಲ್ಲದೆ ಹೋಯಿತು. ಮುಂದೆ ಈ ಮಗುವಿಗೆ ವಿದ್ಯಾಬುದ್ಧಿಗಳನ್ನು ಕಲಿಸಿ ರಾಜ್ಯಾಧಿಕಾರವನ್ನು ಕೊಡಿಸಿ ಕಾಪಾಡಿಕೊಂಡು ಬರುವ ಭಾರವು ನಿಮ್ಮದಾಗಿದೆ'' ಎಂದು ಹೇಳಿ ಅವರೊಡನೆಯೇ ಚಿಕ್ಕ ಮಹಾರಾಜರನ್ನು ಕಳುಹಿಸಿಕೊಟ್ಟು (ಮರುದಿವಸ ರಾತ್ರಿ—ಎಂದರೆ. ಕ್ರಿ. ಶ. ೧೮೬೮ನೆಯ ಇಸವಿ ಮಾರ್ಚ ೨೭ಕ್ಕೆ ಸರಿಯಾದ ವಿಭವನಾಮ ಸಂವತ್ಸರದ ಚೈತ್ರ ಶುದ್ಧ ತದಿಗೆಯ ದಿನ ಸ್ವರ್ಗಸೋಪಾನವನ್ನೇರಿದರು. ಅವಸಾನ ಕಾಲದಲ್ಲಿ ಅವರಿಗೆ ಎಪ್ಪತ್ತ ನಾಲ್ಕನೆಯ ವರುಷ ವಯಸ್ಸು ನಡೆಯುತ್ತಿದ್ದಿತು.)

ಮುಮ್ಮಡಿ ಕೃಷ್ಣರಾಜ ಒಡೆಯರವರು ಬಹು ಸೂಕ್ಷ್ಮಬುದ್ಧಿಯುಳ್ಳವರಾಗಿಯೂ ಇಂಗಿತಜ್ಞರಾಗಿಯೂ ಇದ್ದರು. ಈ ಸಂಸ್ಥಾನಾಧಿಕಾರವನ್ನು ಇಂಗ್ಲಿಷರು ವಹಿಸಿ ಕೊಂಡಿದ್ದ ಕಾಲದಲ್ಲಿ, ಅವರೊಡನೆ ದ್ವೇಷವನ್ನು ಕಟ್ಟಿಕೊಳ್ಳದೆ ಸ್ನೇಹಾನುಬಂಧವನ್ನು ಬೆಳೆಯಿಸಿ, ರಾಜ್ಯವು ಪುನರುಜ್ಜೀವಿಸುವಂತೆ ಮಾಡಿ ಬಹಳ ಪ್ರಸಿದ್ಧಿಯನ್ನು ಹೊಂದಿ ದರು. ಇವರು ಬಹಳ ವಿದ್ಯಾವಂತರು, ವಿದ್ವತ್ಪಕ್ಷಪಾತಿಗಳು, ತಮಗೆ ಸಿಕ್ಕಿದ ವಿರಾಮ ಕಾಲದಲ್ಲಿ ಸಕಲ ಶಾಸ್ತ್ರಗಳನ್ನೂ ಅಭ್ಯಾಸಮಾಡಿ. ಜ್ಯೋತಿಶ್ಶಾಸ್ತ್ರದಲ್ಲಿ ಪಾರ ದರ್ಶಿಗಳೆನ್ನಿಸಿಕೊಂಡರು. ಭಾರತಾದ್ಯನೇಕ ಸಂಸ್ಕೃತ ಗ್ರಂಥಗಳನ್ನು ಕನ್ನಡಿಸಿ ದರು. ಇವರು ಬರೆದಿರತಕ್ಕ ಗ್ರಂಥಗಳು ಪಂಡಿತ ಪಾಮರ ರಂಜಕವಾಗಿಯೂ, ನೀತಿ ಬೋಧಕವಾಗಿಯೂ, ಭಕ್ತಿಭಾವ ಜನಕವಾಗಿಯೂ, ಲಲಿತವಾಗಿಯೂ ಇರುವುವು. ಈ ಪಾರ್ಥಿವ ಶಿರೋಮಣಿಗಳ ಪ್ರೋತ್ಸಾಹಬಲದಿಂದ ಬಹುಮಂದಿ ಪಂಡಿತರು ಪ್ರಖ್ಯಾತಿಗೆ ಬಂದರು. ಮಹಾರಾಜರು ತಮ್ಮ ಪ್ರಜೆಗಳಲ್ಲಿ ಇವರು ಹಿಂದೂಗಳು, ಇವರು ಮುಸಲ್ಮಾನರು, ಇವರು ಬ್ರಾಹ್ಮಣರು ಇವರು ಇತರ ವರ್ಣಾಶ್ರಮದವರು ಎಂಬ ಭೇದವನ್ನಿಡದೆ, ಸರ್ವರನ್ನೂ ಸಮಭಾವದಿಂದ ಕಾಣುತ್ತಿದ್ದರು. ತಾವು ಮಾಡಿದ ಅಸಂಖ್ಯಾತ ಗೋದಾನ ಭೂದಾನಾದಿಗಳಿಂದಲೂ ದೇವಾದಾಯ ಬ್ರಹ್ಮಾ ದಾಯ ವೃತ್ತಿಗಳಿಂದಲೂ ಔದಾರ್ಯದಲ್ಲಿ ಪುರಾಣಪುರುಷರನ್ನೂ ಕೂಡ ಮೀರಿಸಿದರು. ಅರಮನೆಗೆ ಸೇರಿದವರಿಗೆ ಮಾತ್ರವಲ್ಲದೆ, ದೇಶಾಂತರಗಳಿಂದ ಬಂದ ವಿದ್ವಾಂಸರಿಗೂ, ಸಂಗೀತಗಾರರಿಗೂ, ಶಿಲ್ಪಿಗಳಿಗೂ, ಚಿತ್ರಕಾರರಿಗೂ, ಚಿತ್ರವಿಚಿತ್ರವಾದ ಕೆಲಸಗಳಲ್ಲಿ ಕುಶಲರಾದ ಜನಗಳಿಗೂ ಉದಾರ ಹಸ್ತದಿಂದ ಪ್ರೋತ್ಸಾಹವನ್ನು ಕೊಡುತ್ತಿದ್ದರು. ಇಂತಹ ದಾನಶೌಂಡರಾದ ಮಹಾರಾಜರಿಂದ ಉಪಕೃತರಾದವರೆಲ್ಲರೂ ಅವರನ್ನು ತ್ಯಾಗವೇ ಮೂರ್ತಿಗೊಂಡ ಅವತಾರಪುರುಷರನ್ನಾಗಿ ಭಾವಿಸಿರುವುದೂ, ಇಂತಹ

ವರ ಮರಣವಾರ್ತೆಯನ್ನು ಕೇಳಿ ಸಕಲ ಪ್ರಜೆಗಳೂ ಅತ್ಯಂತ ದುಃಖಪಟ್ಟದ್ದರಲ್ಲಿ ಆಶ್ಚರ್ಯವಿಲ್ಲ.

ಮುಮ್ಮಡಿ ಕೃಷ್ಣರಾಜ ಒಡೆಯರವರ ಮರಣವಾರ್ತೆಯು ವೈಸ್ರಾಯಿಯವರಿಗೆ ತಿಳಿದಕೂಡಲೇ, ಅವರು ಬಹಳ ವಿಷಾದವನ್ನು ಹೊಂದಿ, ಮಹಾರಾಜರವರ ಸ್ವೀಕೃತ ಪುತ್ರರಾದ ಚಾಮರಾಜೇಂದ್ರ ಒಡೆಯರನ್ನು ಮೈಸೂರು ರಾಜ್ಯದ ರಾಜರೆಂಬುದಾಗಿಯೂ, ಅವರ ಬಾಲ್ಯದಿನಗಳಲ್ಲಿ ಬ್ರಿಟಿಷರೇ ಅದುವರೆಗೂ ಆಚರಣೆಯಲ್ಲಿದ್ದ ನಿಬಂಧನೆಗಳಿಗೂ ಕಟ್ಟಳೆಗಳಿಗೂ ಅನುಸಾರವಾಗಿ ರಾಜ್ಯಭಾರ ಮಾಡುವಂತೆಯೂ, ಅವರು ಪ್ರಾಪ್ತವಯಸ್ಕರಾದಮೇಲೆ ಅವರ ರಾಜ್ಯವನ್ನು ಅವರಿಗೆ ವಹಿಸುವಂತೆಯೂ, ಪ್ರಜೆಗಳಿಗೆ ತಿಳಿಯಪಡಿಸುವ ಒಂದು ರಾಜಶಾಸನವನ್ನು* ಕಳುಹಿಸಿದರು. ಶ್ರೀ. ಕೃಷ್ಣಭೂಪತಿಗಳು ಸ್ವರ್ಗಾರೋಹಣವನ್ನು ಮಾಡಿದ ಒಂಬತ್ತನೆಯ ದಿನ ಬೌರಿಂಗ ಸಾಹೇಬರು ವೈಸ್ರಾಯಿಯವರ ಆಜ್ಞಾನುಸಾರವಾಗಿ ವೃದ್ಧ ಮಹಾರಾಜ್ಞಿಯವರುಗಳಿಗೆ ದುಃಖೋಪಶಮನವನ್ನು ಮಾಡುವುದಕ್ಕೋಸ್ಕರ ಅರಮನೆಗೆ ಬಂದಿದ್ದು, ಮಹಾರಾಜ್ಞಿಯವರುಗಳನ್ನು ಕಂಡು ಯೋಗಕ್ಷೇಮಗಳನ್ನು ವಿಚಾರಿಸಿ, ಚಿಕ್ಕ ಮಹಾರಾಜರವರ ದರ್ಶನ ಮಾಡಿಕೊಂಡು ಹೋದರು.

---

* PROCLAMATION.

His Excellency the Right Honorable the Viceroy and Governor-General in Council, announces to the chiefs and people of Mysore, the death of His Highness the Maharaja Krishnaraja Wadiyar Bahadur, Knight Grand Commander of the Most Exalted Order of the Star of India. The event is regarded with sorrow by the Government of India, with which the late Maharaja had preserved relations of friendship for more than half a century.

His Highness Chamarajendra Wadiyar, at present a minor, the adopted son of the late Maharaja, is acknowledged by the Government of India as his successor and as Maharaja of the Mysore territories.

During the minority of His Highness, the said territories will be administered in His Highness' name by the British Government, and will be governed on th[illegible] me principles and under the same regulations as heretofore.

When His Highness shall attain the period of majority, that is, the age of eighteen years, and if His Highness shall then be found qualified for the discharge of the duties of his exalted position, the Government of the country will be entrusted to him subject to such conditions as may be determined at that time

ನಾಲ್ಕನೆಯ ಅಧ್ಯಾಯ.

ಶ್ರೀಚಾಮರಾಜೇಂದ್ರ ಒಡೆಯರವರ ಪಟ್ಟಾಭಿಷೇಕ ಮಹೋತ್ಸವ.

ಮುಮ್ಮಡಿ ಕೃಷ್ಣರಾಜ ಒಡೆಯರವರು ಗತಿಸಿದ ಕಾಲದಲ್ಲಿ ಚಾಮರಾಜೇಂದ್ರ ಒಡೆಯರವರು ಐದು ವರುಷ ವಯಸ್ಸಿನ ಬಾಲಕರಾಗಿದ್ದರು. ಸ್ವೀಕಾರಾನಂತರ ದಲ್ಲಿ ತಮಗೆ ಮಹಾರಾಜ ಮಹೋನ್ನತ ಪದವಿಯು ದೊರೆಯಿತೆಂದಾಗಲಿ, ಮುಂದೆ ಈ ಅಶೇಷ ಸಂಸ್ಥಾನದ ರಾಜ್ಯಭಾರವನ್ನು ವಹಿಸಬೇಕಾಗುವುದೆಂದಾಗಲಿ ಸ್ವಲ್ಪವೂ ಅವರ ಚಿತ್ತಕ್ಕೆ ತಿಳಿದಿರಲಿಲ್ಲ. ಆಗ ಅವರ ಸಂದರ್ಶನವನ್ನು ತೆಗೆದುಕೊಂಡು ಹೋದ ಬೌರಿಂಗ್ ಸಾಹೇಬರು ಅವರ ವಿಷಯವಾಗಿ ಬರೆದಿರುವುದೇನೆಂದರೆ: "ಮಹಾರಾಣಿಯವರುಗಳು ಅಪೇಕ್ಷಿಸಿದ ಮೇರೆಗೆ, ನಾನು ಚಿಕ್ಕ ಮಹಾರಾಜ ರನ್ನು ನನ್ನ ತೋಳಲ್ಲಿ ಎತ್ತಿಕೊಂಡು ವೀಕ್ಷಿಸಿದೆನು. ಅವರು ರೂಪದಲ್ಲಿ ದಿವ್ಯ ಸುಂದರರಾಗಿಯೂ ಬುದ್ಧಿಯಲ್ಲಿ ಬಹು ಕುಶಲರಾಗಿಯೂ ಇರುವರು. ಆದರೆ ಶರೀರ ದಾರ್ಢ್ಯವನ್ನು ನೋಡಿದರೆ, ವಯಸ್ಸಿಗೆ ತಕ್ಕಷ್ಟು ಕಾಯಪುಷ್ಟಿಯು ಸಾಲದೆಂದು ತೋರುವುದು." ವೃದ್ಧ ಮಹಾರಾಜರವರ ಅನಂತರದಲ್ಲಿಯೂ ಚಿಕ್ಕ ಮಹಾರಾಜರು ಸಕಲ ರಾಜೋಪಚಾರಗಳಿಂದಲೂ, ವೃದ್ಧ ಮಹಾರಾಜ್ಞಿಯವರ ಲಾಲನೆ ಪಾಲನೆ ಗಳಿಂದಲೂ, ಮುಖ್ಯವಾಗಿ ನಿಜಜನನಿಯರ ಪೋಷಣೆಯಿಂದಲೂ, ಶುಕ್ಲಪಕ್ಷದ ಚಂದ್ರ ನಂತೆ ದಿನೇದಿನೇ ಪ್ರವರ್ಧಮಾನರಾಗುತ್ತ ಬಂದರು.

ಶ್ರೀಚಾಮರಾಜೇಂದ್ರ ಒಡೆಯರವರಿಗೆ ಬಾಲ್ಯವು ಕಳೆದು ನಿಯಮಿತವಾದ ವಯಸ್ಸು ಬರುವವರೆಗೂ ರಾಜ್ಯಭಾರ ವಿಚಾರವನ್ನು ಬ್ರಿಟಿಷ್ ಅಧಿಕಾರಿಗಳೇ ನಡೆ ಯಿಸಿದರು. ವೃದ್ಧ ಮಹಾರಾಜರ ಅನಂತರದಲ್ಲಿ ಅರಮನೆಯ ವಿಚಾರಣೆಗೋಸ್ಕರ ಇಂಗ್ಲಿಷ್ ಸರಕಾರದವರು ನೆಟ್ಟಿಪಾಕ್ಕಂ ವೀರವಲ್ಲಿ ರಂಗಾಚಾರ್ಯರನ್ನು ಕಂಟ್ರೋಲ ರನ್ನಾಗಿ ನಿಯಮಿಸಿದರು. ಈ ರಂಗಾಚಾರ್ಯರೂ, ಆಗ ಮೈಸೂರು ಡಿವಿಜನ್ ಸೂಪರಿಂಟೆಂಡೆಂಟರಾಗಿದ್ದ ಎಲಿಯಟ್ ಸಾಹೇಬರೂ ಅರಮನೆಯ ಅಧಿಕಾರವನ್ನು ನೋಡಿಕೊಂಡು, ಅರಮನೆಯಲ್ಲಿದ್ದ ನಗನಾಣ್ಯಗಳನ್ನೆಲ್ಲ ಶೋಧನೆ ಮಾಡಿ, ಅರಮನೆ ಯಲ್ಲಿಯೇ ವಾಸಮಾಡುತ್ತಿದ್ದ ದೇವಪಾರ್ಥವ ಬಹದ್ದೂರ್, ನಂಜರಾಜ ಬಹದ್ದೂರ್ ಎಂಬವರುಗಳಿಗೆ ಬೇರೆ ಸ್ಥಳಗಳನ್ನು ಏರ್ಪಾಡು ಮಾಡಿಕೊಟ್ಟು ಅರಮನೆಯಿಂದ ಅವರನ್ನು ಪ್ರತ್ಯೇಕಿಸಿ, ಅರಮನೆಯ ಸಿಬ್ಬಂದಿಯನ್ನು ಕೂಡ ಬಹಳಮಟ್ಟಿಗೆ ಕಡಿಮೆ ಮಾಡಿದರು. ಈ ವಿಧವಾದ ಏರ್ಪಾಡುಗಳಿಂದ ಜನಗಳಿಗೆ ದಿಗಿಲು ಹೆಚ್ಚಿತು. ಬಹು

ದಿವಸಗಳಿಂದಲೂ ಇಂಗ್ಲಿಷಿನವರೇ ರಾಜ್ಯವನ್ನು ನೋಡಿಕೊಳ್ಳುತ್ತಿದ್ದುದರಿಂದ, ಮೈಸೂರು ಮಹಾರಾಜರ ಆಳಿಕೆಯು ಇಲ್ಲಿಗೆ ತೀರಿತೆಂಬ ಒಂದು ಪ್ರವಾದವು ನಗರ ನಗರದಲ್ಲಿಯೂ ಗ್ರಾಮ ಗ್ರಾಮದಲ್ಲಿಯೂ ಹೇಗೋ ಹಬ್ಬಿಕೊಂಡಿತು. ಆ ಪ್ರವಾದವನ್ನು ಜನರು ನಿಜವೆಂದು ನಂಬುವುದಕ್ಕೆ ಅನೇಕ ಕಾರಣಗಳೂ ಒದಗಿದುವು. ಮುಖ್ಯವಾಗಿ, ಮುಮ್ಮಡಿ ಕೃಷ್ಣರಾಜ ಒಡೆಯರವರು ಕಾಲವಾಗಿ ಆರು ತಿಂಗಳಾದರೂ ಚಾಮರಾಜೇಂದ್ರ ಒಡೆಯರವರಿಗೆ ಪಟ್ಟಾಭಿಷೇಕವಾಗದೆ ಇದ್ದುದೇ ಆ ವಿಧವಾದ ಊಹೆಗೆ ದೊಡ್ಡ ಕಾರಣವಾಯಿತು. ಪ್ರಜೆಗಳು ಮಹಾರಾಜರಿಗೆ ಎಂದಿಗೆ ರಾಜ್ಯವು ಬಂದೀತು ? ಯಾವಾಗ ಪಟ್ಟಾಭಿಷೇಕವಾಯಿತೆಂಬ ಶುಭ ವರ್ತಮಾನವನ್ನು ಕೇಳೇವು ? ಎಂದು ಹಂಬಲಿಸುತ್ತಿದ್ದರು. ಇದೂ ಅಲ್ಲದೆ, ಜಾಗ್ರತೆಯಾಗಿ ಪಟ್ಟಾಭಿಷೇಕಕ್ಕೆ ಅಪ್ಪಣೆ ತರಿಸಿಕೊಡಬೇಕೆಂಬುದಾಗಿ ರಮಾವಿಲಾಸ ಸೀತಾವಿಲಾಸ ಸನ್ನಿಧಾನಗಳ ಮಹಾರಾಣಿಯರುಗಳೂ ಆಗಾಗ ಕಮಿಷನರಿಗೆ ಪ್ರಾರ್ಥಿಸಿ ಬರೆದುಕೊಳ್ಳುತ್ತಿದ್ದರು. ಕಡೆಗೆ, ೧೮೬೮ನೆಯ ಇಸವಿ ಆಗಸ್ಟ್ ತಾರೀಖು ೧೦ರಲ್ಲಿ ಬರೆದುಕೊಂಡ ಪತ್ರಿಕೆಯ ಒಕ್ಕಣೆ ಏನೆಂದರೆ :—

ಮೈಸೂರು ರಾಜ್ಯಭಾರದ ಕಮಿಷನರಾದ ಎಲ್. ಬಿ. ಬೌರಿಂಗ್ ಸಾಹೇಬರವರಿಗೆ.

ಚೆಲುವಾಜಮ್ಮಣ್ಣಿಯವರೂ ದೇವಾಜಮ್ಮಣ್ಣಿಯವರೂ ಸಹ ಮಾಡುವ ವಿನಯಾರ್ಥ. ರಾಜಮನೆತನದ ಸಂಪ್ರದಾಯ ಪ್ರಕಾರ, ಒಬ್ಬ ರಾಜರು ಗತಿಸಿದರೆ, ಅವರ ಉತ್ತರ ಕ್ರಿಯಾದಿಗಳು ಆದಕೂಡಲೆ ಅವರ ವಾರಸುದಾರರಿಗೆ ಪಟ್ಟಾಭಿಷೇಕವನ್ನು ಮಾಡತಕ್ಕ ಸಂಪ್ರದಾಯವು ಶಾಸ್ತ್ರಬದ್ಧವಾಗಿ ಚಿರಕಾಲದಿಂದ ನಡೆದು ಬರುತ್ತ ಇದೆ. ಹೀಗಿರುವಲ್ಲಿ, ಗತಿಸಿದ ನಮ್ಮ ಮಹಾರಾಜರವರ ಕ್ರಿಯಾದಿಗಳು ಜರಗುವಕಾಲದಲ್ಲಿ ಯಾವ ಮೇರೆ ಬ್ರಿಟಿಷ್ ಗವರ್ನಮೆಂಟಿನವರು ಕೃಪೆಮಾಡಿ ನಮ್ಮ ಮಕ್ಕಳಾದ ಚಾಮರಾಜೇಂದ್ರ ಒಡೆಯರವರ ಸ್ವೀಕಾರವನ್ನು ಕ್ರಮಪ್ರಕಾರವಾಗಿ ಅಂಗೀಕರಿಸಿದರೋ, ತದ್ವತ್ ಪಟ್ಟಾಭಿಷೇಕೋತ್ಸವವೂ ಜರಗಬೇಕಾಗಿದ್ದಿತು. ಆಮೇರೆ ನಡೆಯದೆ ಹೋದುದಕ್ಕಾಗಿ ವ್ಯಸನ ಪಡಬೇಕಾಗಿದೆ. ಆದರೂ, ತದಾರಭ್ಯ ತಮ್ಮನ್ನೂ ತಮ್ಮ ಮೂಲಕ ಬ್ರಿಟಿಷ್ ಗವರ್ನಮೆಂಟಿನವರನ್ನೂ, ಕುರಿತು ಇದೇ ಸಂಗತಿಯಲ್ಲಿ ನಮಗೆ ಉಂಟಾಗಿರುವ ಕುತೂಹಲವನ್ನು ಬಾರಿಬಾರಿಗೂ ತಿಳಿಯಪಡಿಸುತ್ತ ಬರುವಲ್ಲಿ, ಸದರಿ ವಿಷಯವನ್ನು ವಿಲಾಯತಿಯ ಅಧಿಕಾರಿಗಳಿಗೆ ಸೂಚಿಸಿರುವುದಾಗಿಯೂ ಅವರುಗಳ ಹುಕುಮನ್ನು ನಿರೀಕ್ಷಿಸುತ್ತಿರುವುದಾಗಿಯೂ ತಾವು ತಿಳಿಸಿದ್ದಿರಿ. ತದಾರಭ್ಯ ಈವರೆಗೂ ಅಲ್ಲಿಂದ ಹುಕುಂ ಬಂದೀತೆಂದು ಎದುರುನೋಡಿಕೊಂಡು ಇದ್ದರೂ, ಅದ್ಯಾಪಿ ಅಲ್ಲಿಂದ ಯಾವುದೊಂದು ಜವಾಬೂ ಬಾರದೇ ಇರೋಣದರಿಂದಲೂ, ದಸರಾ ಹಬ್ಬವು ಕೇವಲ ಸಮೀಪಿಸಿರುವುದರಿಂದಲೂ ಪಟ್ಟಾಭಿಷೇಕೋತ್ಸವವು ಜರಗದೆ ಸದರಿ ದಸರಾ ದಿವಸಗಳು ಒಂದು ವೇಳೆ ಅತಿಕ್ರಮಿಸುವುದಾದರೆ, ನಮ್ಮ ಅನಾದಿ ಸಂಪ್ರದಾಯಕ್ಕೆ ನ್ಯೂನತೆಯೂ, ನಮ್ಮ ಮನೆತನದ ಘನತೆಗೆ ಹಾನಿಯೂ, ನಮ್ಮ ಸಂಸ್ಥಾನದ ಮರ್ಯಾದೆಗೆ ಕೊರತೆಯೂ ಆಗುವುದಾದಕಾರಣ, ಇದೇ ಇಸವಿ ಅಕ್ಟೋಬರ್ ೧೫ರ—ಎಂದರೆ, ದಸರಾ ಒಳಗಾಗಿ ವಿಲಾಯತಿಯಿಂದ ಅನುಕೂಲವಾದ ಹುಕುಮನ್ನು ತರಿಸಿಕೊಟ್ಟು, ನಮ್ಮ ಮಕ್ಕಳಿಗೆ ಸಿಂಹಾಸನಾರೋಹಣವನ್ನು ಮಾಡಿಸಿ, ಸಂಸ್ಥಾನದ ಮರ್ಯಾದೆಗಳನ್ನು ಯಥಾಕ್ರಮವಾಗಿ ಸ್ಥಿರಪಡಿಸ

ಬೇಕಾದ ವಿಷಯಕ್ಕಾಗಿ ತಮ್ಮನ್ನು ಬೇಡಿಕೊಳ್ಳುವುದೇನೆಂದರೆ. ಈ ಮೇಲೆ ವಿವರಿಸಿರುವ ನಮ್ಮ ಯಾವದಭಿಪ್ರಾಯವನ್ನು ಸಂಕ್ಷೇಪವಾಗಿ, ತಂತಿಯ ಮೂಲಕವಾಗಿ ವಿಲಾಯತಿಯ ಸ್ಟೇಟ್ ಸೆಕ್ರಿಟರಿ ಸಾಹೇಬ್ ಬಹದ್ದುರವರಿಗೆ ತಾವು ದಯವಿಟ್ಟು ಶ್ರುತಪಡಿಸಬೇಕೆಂತಲೂ, ನಂತರ ತಮ್ಮ ತಂತಿಯ ವರ್ತಮಾನದ ನಕಲನ್ನು ನಮ್ಮ ಬಳಿಗೆ ಕಳುಹಿಸಿಕೊಡಬೇಕೆಂತಲೂ ಬೇಡಿಕೊಳ್ಳುತ್ತೇವೆ.

ಹೀಗಿರುವಲ್ಲಿ, ನವರಾತ್ರಿ ಕಾಲವೂ ಒದಗಿತು. ಭಾರತೀಯರಲ್ಲಿ ನವರಾತ್ರ್ಯುತ್ಸವವು ಬಹಳ ಪ್ರಸಿದ್ಧವಾದುದು. ಇದನ್ನು ಆಸೇತುಹಿಮಾಚಲಪರ್ಯಂತವೂ ಎಲ್ಲ ದೇಶಗಳಲ್ಲಿಯೂ ಎಲ್ಲ ಜನರೂ ಆಚರಿಸುತ್ತಾರೆ. ಇದು ಅಶ್ವಯುಜ ಮಾಸದಲ್ಲಿ ಪಾಡ್ಯದ ತಿಥಿ ಮೊದಲ್ಗೊಂಡು ಒಂಬತ್ತು ದಿವಸಗಳು ಬಹು ವಿಜೃಂಭಣೆಯಿಂದ ನಡೆಯುತ್ತದೆ. ಈ ಕಾಲದಲ್ಲಿ ಇಂದ್ರಾದಿ ದೇವತೆಗಳು ಭೂಮಿಯ ಮೇಲೆ ವಾಸ ಮಾಡುತ್ತಾರೆಂದೂ, ಆ ದಿವಸಗಳಲ್ಲಿ ಜಪ ತಪ ಹೋಮ ಹವನ ಪಾರಾಯಣಾದಿಗಳನ್ನು ಮಾಡಿದರೆ ಇಷ್ಟಾರ್ಥ ಸಿದ್ಧಿಯಾಗುವುದೆಂದೂ ಜನರೂ ನಂಬಿರುತ್ತಾರೆ. ಆದುದರಿಂದ, ಆಯಾ ಮತದವರು ತಮ್ಮ ತಮ್ಮ ದೇವರಿಗೆ ವಿಶೇಷವಾಗಿ ಪೂಜೆಯನ್ನು ಮಾಡುತ್ತಾರೆ. ದಕ್ಷಿಣದೇಶದ ವೈಷ್ಣವರಲ್ಲಿ ರಾಮಾಯಣ, ಭಾಗವತ, ವೇಂಕಟೇಶ ಮಹಾತ್ಮ್ಯ ಮೊದಲಾದುವುಗಳ ಪಾರಾಯಣವೂ ಶೈವರಲ್ಲಿ, ಲಲಿತಾ ಮಹಾತ್ಮ್ಯ, ದೇವೀ ಪುರಾಣಗಳ ಪಾರಾಯಣವೂ, ಉತ್ತರ ದೇಶದಲ್ಲಿ ದುರ್ಗಾಪೂಜೆಯೂ ದುರ್ಗಾಸ್ತುತಿಯೂ ವಿಶೇಷವಾಗಿ ನಡೆಯುತ್ತವೆ. ಆ ಕಾಲದಲ್ಲಿ ಕ್ಷತ್ರಿಯರು ಸಿಂಹಾಸನದ ಮೇಲೆ ಕುಳಿತು ದರ್ಬಾರ್ ಮಾಡುವರು. ಎಂಟನೆಯ ದಿವಸ ಶಾಕ್ತೇಯರಲ್ಲಿ ಬಹಳ ಪ್ರಬಲವಾದ ದಿವಸ. ಆ ದಿವಸವು ದುರ್ಗೆಯ ಜನ್ಮದಿವಸವೆಂದು ಹೇಳುವರು. ಆ ದಿವಸಕ್ಕೆ ದುರ್ಗಾಷ್ಟಮಿಯೆಂದೂ ಹೆಸರುಂಟು. ಪೂರ್ವದಲ್ಲಿ, ಕಲ್ಕತ್ತೆಯಲ್ಲಿ ನೆಲೆಸಿರುವ ಕಾಳಿಗೆ ಆ ದಿವಸ ನರಬಲಿ ಮುಂತಾದುವನ್ನು ಕೊಡುತ್ತಿದ್ದರು ಈಗ ಇಂಗ್ಲಿಷರ ಪ್ರಭುತ್ವದಿಂದ ಆ ದುರಾಚಾರಗಳೆಲ್ಲ ಅಡಗಿ ಹೋಗಿವೆ. ಒಂಬತ್ತನೆಯ ದಿವಸ ಮಹಾನವಮಿ ಉತ್ಸವ; ಹತ್ತನೆಯ ದಿವಸ ವಿಜಯದಶಮಿಯ ಉತ್ಸವ; ಈ ದಿವಸಕ್ಕೆ ವಿಜಯದಶಮಿಯೆಂದು ಹೆಸರು ಬರುವುದಕ್ಕೆ ಅನೇಕ ಕಾರಣಗಳನ್ನು ಹೇಳುವರು.. ಪಾಂಡವರು ವಿರಾಟನಗರದಲ್ಲಿ ಅಜ್ಞಾತವಾಸ ಮಾಡುತ್ತಿದ್ದ ಕಾಲದಲ್ಲಿ ಕೌರವಾದಿಗಳು ವಿರಾಟನಗರಕ್ಕೆ ಮುತ್ತಿಗೆಯನ್ನು ಹಾಕಿ, ಅವರ ಗೋಧನವನ್ನು ಅಪಹರಿಸಿಕೊಂಡು ಹೋಗಲು, ಅರ್ಜುನನು ಉತ್ತರನೊಡನೆ ಹೊರಟು, ತಾನು ಹಿಂದೆ ಶಮೀವೃಕ್ಷದಲ್ಲಿ ಹೆಣದ ತೊಗಲಿನಲ್ಲಿ ಕಟ್ಟಿ ನೇತುಹಾಕಿದ್ದ ತನ್ನ ಗಾಂಡೀವವನ್ನು ತೆಗೆದುಕೊಂಡು ಹೋಗಿ ಕೌರವರನ್ನು ಜಯಿಸಿದನಂತೆ. ಆ ಜಯಿಸಿದ ದಿವಸವು ಅಶ್ವಯುಜ ಮಾಸದ ದಶಮಿಯಾದುದರಿಂದಲೂ ಆ ದಿವಸ ಅರ್ಜುನನಿಗೆ ವಿಜಯವುಂಟಾದುದರಿಂದಲೂ ಆ ದಿವಸಕ್ಕೆ ವಿಜಯದಶಮಿ ಎಂಬ ಹೆಸರು ಬಂದಿತೆಂದು ಕೆಲವರು ಅಭಿಪ್ರಾಯ ಪಡುವರು. ವರ್ಷಾಕಾಲವು ಕಳೆದುಹೋದಮೇಲೆ, ಶರದೃತುವಿನ ಪ್ರಾರಂಭದಲ್ಲಿ ಈ ವಿಜಯದಶಮಿಯು ಬರು

ವುದು. ಇಲ್ಲಿಂದ ಮುಂದಕ್ಕೆ ವಿಶೇಷವಾದ ಮಳೆ ಸುರಿಯುವ ಹೊಳೆಗಳ ಅಡಚಣೆಯಿಲ್ಲದೆ, ದೇಶ ಸಂಚಾರಕ್ಕೆ ಅನುಕೂಲವಾದ ಕಾಲವಾದುದರಿಂದ, ಪೂರ್ವದಲ್ಲಿದ್ದ ಹಿಂದೂ ರಾಜರುಗಳು ನವರಾತ್ರಿಯ ಮೊದಲು ಒಂಬತ್ತು ದಿವಸಗಳ ವರೆಗೂ ಅಧಿಕಾರಿಗಳನ್ನೆಲ್ಲ ಬರಮಾಡಿಕೊಂಡು, ರಾಜ್ಯದ ಆಯವ್ಯಯಗಳನ್ನು ವಿಚಾರಿಸಿ, ತುಂಟರಾದ ಶತ್ರುರಾಜರಿರುವಂತೆ ತಿಳಿಯಬಂದರೆ, ಹತ್ತನೆಯ ದಿವಸ ಸೇನಾಸಮೇತರಾಗಿ ಆ ಶತ್ರುಗಳ ಮೇಲೆ ಜೈತ್ರಯಾತ್ರೆ ಹೊರಡುತ್ತಿದ್ದರು. ವಿಜಯ

ಶ್ರೀಚಾಮರಾಜೇಂದ್ರ ಒಡೆಯರವರ ಭದ್ರಾಸನಾರೋಹಣ.

ಪ್ರಯಾಣಕ್ಕಾಗಿ ದಶಮಿಯ ದಿವಸ ರಾಜರು ಹೊರಡುತ್ತಿದ್ದುದರಿಂದ, ಈ ದಿವಸಕ್ಕೆ ವಿಜಯದಶಮಿಯೆಂಬ ಹೆಸರು ಬಂದಿತೆಂದು ಮತ್ತೆ ಕೆಲವರು ಅಭಿಪ್ರಾಯಪಡುವರು.

ಈ ನವರಾತ್ರ್ಯುತ್ಸವವನ್ನು ನಡೆಯಿಸುವ ಪದ್ಧತಿಯು ಸಾಮಾನ್ಯವಾಗಿ ಅರಸುಗಳಲ್ಲಿ ಬಹುಕಾಲದಿಂದಲೂ ನಡೆದುಬಂದಿರುವುದು. ಈಗ ಆಚರಣೆಯಲ್ಲಿರುವ ಪದ್ಧತಿಯನ್ನೂ ಕ್ರಮವನ್ನೂ ರಾಜಒಡೆಯರು ಏರ್ಪಾಡು ಮಾಡಿದರು. ಅಂದಿನಿಂದ

ಈ ಕ್ರಮವು ಮೈಸೂರು ಅರಮನೆಯಲ್ಲಿ ತಪ್ಪದೆ ನಡೆಯುತ್ತ ಬರುತ್ತಿರುವುದು. ಇದು ಕ್ಷತ್ರಿಯರು ಅವಶ್ಯಕವಾಗಿ ಆಚರಿಸಬೇಕಾದ ಪದ್ಧತಿಯಾದುದರಿಂದಲೂ, ರಾಜ ಒಡೆಯರ ಕಾಲದಿಂದಲೂ ಅವಿಚ್ಛಿನ್ನವಾಗಿ ನಡೆದುಬಂದಿರುವುದರಿಂದಲೂ, ಮುಮ್ಮಡಿ ಕೃಷ್ಣರಾಜ ಒಡೆಯರವರು, ತಮಗೆ ರಾಜ್ಯಶ್ರೀ ವಿಯೋಗವಾದನಂತರದಲ್ಲಿ, ದುರಂತ ಚಿಂತಾಭಾರಪೂರ್ಣರಾಗಿದ್ದರೂ, ಇದನ್ನು ಬಿಡದೆ ಮಾಡತಕ್ಕದ್ದೇ ಮುಖ್ಯ ಕರ್ತವ್ಯವೆಂದು ಭಾವಿಸಿ, ಉತ್ಸವವನ್ನು ವಿಜೃಂಭಣೆಯಿಲ್ಲದೆ, ಸಾಧಾರಣವಾಗಿ ನಡೆಯಿಸುತ್ತಿದ್ದರು. ಅವರ ಅನಂತರದಲ್ಲಿ ಮಹಾರಾಜ್ಞಿಯವರುಗಳಿಗೆ ಒಂದುಕಡೆ ಪತಿವಿಯೋಗಜನಿತವಾದ ದುಃಖವೂ, ಮತ್ತೊಂದು ಕಡೆ ಚಿಕ್ಕ ಮಹಾರಾಜರಿಗೆ ಪಟ್ಟಾಭಿಷೇಕವಾಗುವುದೋ ಇಲ್ಲವೋ ಎಂಬ ಸಂದೇಹವೂ ಉಂಟಾಗಿ, ಅವರ ಮನಸ್ಸಿಗೆ ಯಾವುದು ಬೇಕಾಗದಿದ್ದರೂ, ಪೂರ್ವ ಪದ್ಧತಿಯನ್ನು ಆಚರಿಸದೆ ಬಿಟ್ಟರೆ ಏನು ಅನಿಷ್ಟ ಬರುವುದೋ ಎಂಬ ಶಂಕೆಯಿಂದ. ಇಷ್ಟವಿಲ್ಲದಿದ್ದರೂ ಉತ್ಸವವನ್ನು ನಿಲ್ಲಿಸದೆ, ಒಳಗೆಯೇ ಚಿಕ್ಕ ಮಹಾರಾಜರನ್ನು ಭದ್ರಾಸನದ ಮೇಲೆ ಕುಳ್ಳಿರಿಸಿ, ಪೂರ್ವ ಪದ್ಧತಿಗನುಸಾರವಾಗಿಯೂ ಶಾಸ್ತ್ರೋಕ್ತವಾಗಿಯೂ ಉತ್ಸವವನ್ನು ಜರುಗಿಸುತ್ತಿದ್ದರು. ಮೊದಲೆರಡು ದಿವಸಗಳು ಉತ್ಸವ ನಡೆದನಂತರ ಮೂರನೆಯ ದಿವಸ— ಎಂದರೆ, ವಿಭವ ಸಂವತ್ಸರದ ಆಶ್ವಯುಜ ಶುದ್ಧ ತದಿಗೆ ಸ್ಥಿರವಾರ, ೧೮೬೮ನೆಯ ಇಸವಿ ಸೆಪ್ಟೆಂಬರ್ ೧೯ರಲ್ಲಿ ಕರ್ನಲ್ ಎಲಿಯಟ್ ಸಾಹೇಬರು ಅರಮನೆಗೆ ಬಂದು ಮಹಾರಾಜ್ಞಿಯವರುಗಳನ್ನು ಕಂಡು, ಅವರುಗಳ ಸ್ವೀಕೃತ ಪುತ್ರರಾದ ಶ್ರೀಚಾಮರಾಜೇಂದ್ರ ಒಡೆಯರವರಿಗೆ ಪಟ್ಟಾಭಿಷೇಕ ಮಹೋತ್ಸವವನ್ನು ಬೆಳಸುವಂತೆ ಇಂಡಿಯಾ ದೇಶದ ವೈಸ್ರಾಯಿ ಮತ್ತು ಗವರ್ನರ್ ಜನರಲ್ ಸಾಹೇಬರವರ ಅಪ್ಪಣೆಯು ಟೆಲಿಗ್ರಾಂ ಮೂಲಕ ಬಂದಿರುವುದಾಗಿಯೂ, ಈ ಮಹೋತ್ಸವವನ್ನು ಬೆಳಸಲು ಪ್ರಶಸ್ತವಾದ ದಿವಸವನ್ನು ನೋಡಿಸಿ ಗೊತ್ತುಮಾಡಬೇಕೆಂಬುದಾಗಿಯೂ ಶ್ರುತಪಡಿಸಿ ಪದ್ಧತಿಯ ಮೇರೆಗೆ ಹೂವಿನ ಹಾರ ಪಾನ್ ಪಟ್ಟಿಗಳನ್ನು ತೆಗೆದುಕೊಂಡು ತಮ್ಮ ಬಂಗಲೆಗೆ ಹೊರಟು ಹೋದರು. ಈ ಸಂತೋಷ ಸಮಾಚಾರಕ್ಕಾಗಿ ೨೧ ತೋಪುಗಳು ಮೊಳಗಿ, ಕೋಟೆ ಪೇಟೆಗಳಲ್ಲಿ ಸರ್ವರಿಗೂ ಸಕ್ಕರೆಯನ್ನು ಹಂಚಿದರು. ಈ ದಿನದಿಂದ ಅರಮನೆಯಲ್ಲಿ ಚೌಪದರೆ ನೌಬತ್ತು ಮುಂತಾದುವೆಲ್ಲ ನಡೆಯುತ್ತ ಬಂದುವು.

ಈ ಅಮೃತವರ್ಷ ಸದೃಶವಾದ ಶುಭ ಸಮಾಚಾರವು ಒಡನೆಯೇ ಗತಾನುಗತಿಕವಾಗಿ ಎಲ್ಲ ಪ್ರದೇಶಗಳಲ್ಲಿಯೂ ಎಲ್ಲ ಜನಗಳಲ್ಲಿಯೂ ಹರಡಿಕೊಂಡಿತು. ಮಹಾರಾಜ್ಞಿಯವರು ಮೊದಲುಗೊಂಡು ಊರ ಜನಗಳವರೆಗೂ, ಎಲ್ಲರಲ್ಲಿಯೂ ಎಲ್ಲೆಲ್ಲಿಯೂ, ಉಂಟಾದ ಸಂತೋಷವನ್ನು ವರ್ಣಿಸಲು ಶಕ್ಯವಲ್ಲ. ಈ ಶುಭೋದಯವು ಚಾತಕಪಕ್ಷಿಯಂತೆ ಬಾಯ್ತೆರೆದುಕೊಂಡಿದ್ದ ಜನಗಳಿಗೆ ವರ್ಷಾಕಾಲದ ಮೇಘದ ಹನಿ ಬಿದ್ದಂತಾಯಿತು. ನಮ್ಮ ಮಹಾರಾಜರಿಗೆ ಪಟ್ಟಾಭಿಷೇಕವಾಗುತ್ತ

ದೆಂಬುದಾಗಿ ಪುರಜನರು ತಮ್ಮ ತಮ್ಮ ಮನೆಗಳನ್ನು ಬಹು ಸಂಭ್ರಮದಿಂದ ಅಲಂಕರಿಸಿದರು. ವರ್ತಕರು ತಂತಮ್ಮ ಅಂಗಡಿ ಮುಂಗಟ್ಟುಗಳನ್ನು ತಳಿರುತೋರಣಾದಿಗಳಿಂದಲೂ ಕದಳೀಸ್ತಂಭಗಳಿಂದಲೂ ಶೋಭಾಯಮಾನವಾಗಿ ಅಲಂಕರಿಸಿ, ಆ ದಿನ ಮಧ್ಯಾಹ್ನ ಫಲ ಪುಷ್ಪಗಳನ್ನು ತಟ್ಟೆಗಳಲ್ಲಿ ತುಂಬಿಕೊಂಡು ಮಂಗಳವಾದ್ಯದೊಡನೆ ಉತ್ಸವ ಪೂರ್ವಕವಾಗಿ ಅರಮನೆಗೆ ಬಂದು ಮಹಾಸ್ವಾಮಿಯವರಿಗೆ ಒಪ್ಪಿಸಿದರು. ಊರಲ್ಲಿ ಎಲ್ಲೆಲ್ಲಿ ನೋಡಿದರೂ ಮದುವೆಯ ಮನೆಯ ಸಂರಂಭದಂತೆ ಕಾಣಬಂದಿತು. ಪಟ್ಟಣವೇ ಹೀಗಿರುವಾಗ ಅರಮನೆಯ ಶೃಂಗಾರವು ಹೇಗಿರಬಹುದು! ಅರಮನೆಯ ಮುಂದೆಯೂ ಚಪ್ಪರಗಳನ್ನು ಹಾಕಿಸಿ ಭುವನೇಶ್ವರಿಗಳನ್ನು ಕಟ್ಟಿಸಿ ನವೀನ ಚೀನಾಂಬರಗಳಿಂದಲೂ ಸಜೀವ ಭಾವವನ್ನು ಪಡೆದಂತಿದ್ದ ಪುತ್ತಳಿಗಳಿಂದಲೂ ಚಿತ್ರಪಟಗಳು ವಿಚಿತ್ರ ದೀಪಗಳು ಮೊದಲಾದುವುಗಳಿಂದಲೂ ಅಲಂಕರಿಸಿ ರಚನೆಗೈದರು. ಎಲ್ಲೆಲ್ಲಿಯೂ ತೋರಣಗಳು ಕಟ್ಟಲ್ಪಟ್ಟುವು; ಧ್ವಜಗಳು ಏರಿಸಲ್ಪಟ್ಟುವು; ಅರಮನೆಯಲ್ಲಿ ಎಲ್ಲಿ ನೋಡಿದರೂ ಜನಗಳ ಓಡಾಟವೇ ಕಂಡುಬಂದಿತು.

ಈ ಮಧ್ಯದಲ್ಲಿ ಮಹಾರಾಜ್ಞಿಯವರು ರಂಗಾಚಾರ್ಯರೇ ಮೊದಲಾದ ಅಧಿಕಾರಿಗಳನ್ನೂ ಜೋಯಿಸರುಗಳನ್ನೂ ರಾಯಸದವರನ್ನೂ ಕರೆಯಿಸಿಕೊಂಡು ಪಟ್ಟಾಭಿಷೇಕ ನಡೆಯಬೇಕಾದ ಕ್ರಮವನ್ನು ತಿಳಿಸಿ, ಅದೇ ಪ್ರಕಾರ ನಡೆಯಿಸುವ ಹಾಗೆ ರಂಗಾಚಾರ್ಯರಿಗೆ ಅಪ್ಪಣೆಯನ್ನು ಕೊಟ್ಟರು. ಬಳಿಕ ಅವರು ಅಪ್ಪಣೆಯಮೇರೆ ಜೋಯಿಸರುಗಳಿಂದ ಪಟ್ಟಾಭಿಷೇಕಕ್ಕೆ ಶುಭ ಲಗ್ನವನ್ನು ನಿಶ್ಚಯಿಸಿ, ಲಗ್ನಪತ್ರಿಕೆಯನ್ನು ಮಹಾರಾಜ್ಞಿಯವರುಗಳ ಹೆಸರಿನಲ್ಲಿ ಬರೆಯಿಸಿ, ಹರಿಕಾರರ ಕೈಯಲ್ಲಿ ಕೊಟ್ಟು ಚಾತುರ್ವರ್ಣ್ಯಕ್ಕೆ ಸೇರಿದ ಮುಖ್ಯ ಮುಖ್ಯರಾದ ಸೆಟ್ಟಿ ವರ್ತಕರಲ್ಲಿಯೂ ಅಧಿಕಾರಿಗಳಲ್ಲಿಯೂ ಅರಸುಗಳಲ್ಲಿಯೂ ನಾಗರಿಕರಲ್ಲಿಯೂ ಪ್ರಚಾರಗೊಳಿಸಿದರು. ಆ ಲಗ್ನಪತ್ರಿಕೆಯ ಒಕ್ಕಣೆ ಏನೆಂದರೆ :—

ಪಟ್ಟಾಭಿಷೇಕ ಲಗ್ನಪತ್ರಿಕಾ.

ರಮಾವಿಲಾಸ, ಸೀತಾವಿಲಾಸ ಸನ್ನಿಧಾನ.

ಮೈಸೂರು ಸಂಸ್ಥಾನದ ರಾಣೀಸಾಹೇಬರುಗಳ ಹುಕುಂ.

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕ ವರ್ಷಂಗಳು ೧೭೯೦ನೆಯ ವಿಭವ ನಾಮ ಸಂವತ್ಸರದ ಆಶ್ವಯುಜ ಶುದ್ಧ ೭ ಬುಧವಾರ ಮೂಲಾನಕ್ಷತ್ರ—ಈ ಶುಭದಿವಸ ಸೂರ್ಯೋದಯಾನಂತರ ೧೫ ಘಳಿಗೆಯ ಮೇಲೆ ೧೬ ಘಳಿಗೆಯೊಳಗೆ ಸಲ್ಲುವ ಧನುರ್ಲಗ್ನದಲ್ಲಿ, ಉಚ್ಚಾಂಶದಲ್ಲಿ ಚಿರಂಜೀವಿ ಸಹಸ್ರಾಯುಷ್ಯರಾದಂಥ ನಮ್ಮ ಕುಮಾರರು ಶ್ರೀಚಾಮ ರಾಜೇಂದ್ರ ಒಡೆಯರ್ ಬಹದ್ದೂರ್ರವರಿಗೆ ಪಟ್ಟಾಭಿಷೇಕ ಮಹೋತ್ಸವವು ಅರಮನೆಯಲ್ಲಿ ಬೆಳೆಯುವುದರಿಂದ ನೀವುಗಳು ಬರತಕ್ಕದ್ದು.

ಮಹಾರಾಜ್ಞಿಯವರು ಪಟ್ಟಾಭಿಷೇಕದ ದಿನ ಬೆಳಗಿನ ಜಾವಕ್ಕೆ ಸರಿಯಾಗಿ ಋತ್ವಿಕ್ಪುರೋಹಿತರುಗಳೂ ಕೆಲವುಜನ ಮುಖ್ಯಾಧಿಕಾರಿಗಳೂ ಬರುವಂತೆ ಅಪ್ಪಣೆ ಕೊಟ್ಟಿದ್ದರು. ಅದೇ ಪ್ರಕಾರ ಅವರೆಲ್ಲರೂ ಬಂದು ಸಿದ್ಧರಾದರು. ಮಹಾರಾಜ್ಞಿ

ಯಿಬಲು ಬಳುತ್ತಿದ್ದ ಮಡಿಯುಟ್ಟುಕೊಂಡು, ಕುಲದೇವರು ಮನೆ ದೇವರುಗಳಿಗೆಲ್ಲ ತೋರಣವನ್ನು ಕಟ್ಟಿಸಿ, ಪಟ್ಟಾಭಿಷೇಕಕ್ಕೆ ಪೂರ್ವಾಂಗವಾಗಿ ಮಹಾರಾಜರಿಗೆ ನಡೆಯಬೇಕಾದ ಎಣ್ಣೆಯ ಶಾಸ್ತ್ರ, ಮಂಗಳಸ್ನಾನ ಮೊದಲಾದುವುಗಳನ್ನು ಮುತ್ತೈದೆಯರಿಂದ ನಡೆಯಿಸಿದರು. ಬಳಿಕ ಚಾಮರಾಜೇಂದ್ರ ಒಡೆಯರವರು ಕುಲಗುರುಗಳಾದ ಪರಕಾಲ ಸ್ವಾಮಿಗಳ ಪಾದಪೂಜೆಯನ್ನು ಮಾಡಿ, ಆಚಾರ್ಯರಿಗೆ ಧನ ಕನಕ ವಸ್ತ್ರಾಭರಣಗಳನ್ನು ಸಮರ್ಪಿಸಿ, ಅವರ ಮಂಗಳಾಶೀರ್ವಾದಗಳನ್ನು ಪಡೆದು, ಹೋಮಶಾಲೆಗೆ ದಯಮಾಡಿಸಿದರು. ಅಲ್ಲಿ ಋತ್ವಿಕ್ಪುರೋಹಿತರುಗಳು ಮಹಾರಾಜರಿಂದ ಹೋಮಾದಿಗಳನ್ನು ಮಾಡಿಸಿ, ಗಂಗೆ, ಗೋದಾವರಿ, ಯಮುನೆ, ಕಾವೇರಿ ಮೊದಲಾದ ಪುಣ್ಯ ನದಿಗಳ ತೀರ್ಥದಿಂದ ಶಾಸ್ತ್ರೋಕ್ತ ಪ್ರಕಾರವಾಗಿ ಅಭಿಷೇಕವನ್ನು ನಡೆಯಿಸಿದರು. ಬಳಿಕ ಮಹಾರಾಜರು ಮಾತೃಶ್ರೀಯವರುಗಳಿಗೆ ಅಭಿವಾದನ ಮಾಡುವುದಕ್ಕೆ ಅಂತಃಪುರಕ್ಕೆ ಬಿಜಯಮಾಡಿಸಿದರು. ಮಹಾರಾಜ್ಞಿಯವರುಗಳು ಮಹಾರಾಜರಿಗೆ ಚಿಕ್ಕ ವಯಸ್ಸಿಗೆ ತಕ್ಕ ಆಭರಣಗಳನ್ನಿಟ್ಟು, ಅಂಗಿಯನ್ನು ಹಾಕಿ, ಇಜಾರವನ್ನು ತೊಡಿಸಿ, ಪಾಗನ್ನು ಸುತ್ತಿ, ಶಿರಪೇಚ್ ತುರಾಯಿಯನ್ನು ಜೋಡಿಸಿ, ಆಪಾದಮಸ್ತಕವೂ ನವರತ್ನಾಭರಣಗಳನ್ನಲಂಕರಿಸಿ, ಮಗುವಿಗೆ ದೃಷ್ಟಿಪಾತವಾದೀತೆಂಬ ಶಂಕೆಯಿಂದ ಕೆನ್ನೆಗೆ ಕಪ್ಪನ್ನು ಹಚ್ಚಿ ತೊಡೆಯಮೇಲೆ ಕುಳ್ಳಿರಿಸಿಕೊಂಡು ಮುದ್ದಾಡಿ ಹರಸಿ ಅಂಬಾವಿಲಾಸಕ್ಕೆ ತಿರುಗಿ ಕಳುಹಿಸಿಕೊಟ್ಟರು. ಅಷ್ಟರೊಳಗೆ ಕೆಲವುಮಂದಿ ಮುಖ್ಯಾಧಿಕಾರಿಗಳು ಛೀಫ್ ಕಮಿಷನರ್ ಸಾಹೇಬರಿಗೆ ಪಟ್ಟಾಭಿಷೇಕ ಸಮಯವನ್ನು ತಿಳಿಸುವುದಕ್ಕೆ ರೆಸಿಡೆನ್ಸಿಗೆ ಹೋದರು.

ಇತ್ತ, ಅಂತಃಪುರದ ಬಾಗಿಲಲ್ಲಿ ಮಹಾರಾಜರ ಆಗಮನವನ್ನು ನಿರೀಕ್ಷಿಸುತ್ತಿದ್ದ ಸರ್ವಾಧಿಕಾರಿ ಬಾಳೆ ಅರಸಿನವರೂ, ಬಕ್ಷಿ ಚಾಮಪ್ಪಾಜಿ ಅರಸಿನವರೂ, ಬಕ್ಷಿ ಬಸಪ್ಪಾಜಿ ಅರಸಿನವರೂ, ಬಕ್ಷಿ ವೀರಪ್ಪಾಜಿ ಅರಸಿನವರೂ—ಇವರೇ ಮೊದಲಾದ ರಾಜನ್ಯರು ಮಹಾರಾಜರಿಗೆ ಹಸ್ತಲಾಘವವನ್ನಿತ್ತು ಮೆಲ್ಲಮೆಲ್ಲನೆ ಕರೆದುಕೊಂಡು ಬಂದು, ಅಂಬಾವಿಲಾಸದಲ್ಲಿ ಸಿದ್ಧವಾಗಿದ್ದ ಉಪ್ಪರಿಗೆಯ ಮೇಲೆ ಕುಳ್ಳಿರಿಸಿದರು. ಆಗ ವಂದಿಗಳು, "ಜಯರಾಜಾಧಿರಾಜ–ಯದುಕುಲಾಬ್ಧಿ ಚಂದ್ರ–ವಿತರಣಸಸ್ಯೇಂದ್ರ–ಸುರುಚಿರ ಕರುಣಾಸಾಂದ್ರ–ಪರಾಕು ಪರಾಕು" ಎಂದು ಹೊಗಳಿದರು. ಅಷ್ಟು ಹೊತ್ತಿಗೆ ಸುಮಾರು ಹತ್ತು ಗಂಟೆಯಾಯಿತು. ಆಗ ಒಬ್ಬ ಕಟ್ಟಿಗೆಯವನು ಬಂದು ಛೀಫ್ ಕಮಿಷನರ ಆಗಮನವನ್ನು ಸೂಚಿಸಿದನು. ರಂಗಾಚಾರ್ಯರೇ ಮುಂತಾದ ಮುಖ್ಯಾಧಿಕಾರಿಗಳು ಕಮಿಷನರನ್ನು ಇದಿರುಗೊಳ್ಳುವುದಕ್ಕೆ ಆನೆ ಬಾಗಿಲಿಗೆ ಹೋದರು. ಕಮಿಷನರ್ ಬೌರಿಂಗ್ ಸಾಹೇಬರು ತಮ್ಮ ಪತ್ನಿಯರೊಡನೆಯೂ ಅನೇಕ ಯೂರೋಪಿಯನ್ ಅಧಿಕಾರಿಗಳೊಡನೆಯೂ ಅರಮನೆಗೆ ಪ್ರವೇಶಿಸುವಷ್ಟರೊಳಗೆ, ಚಿಕ್ಕ ಮಹಾರಾಜರವರು ಝಗಝಗಿಸುವ ದಿವ್ಯ ವಸ್ತ್ರ ರತ್ನಾಭರಣಗಳ ಕಾಂತಿಜಾಲದಿಂದ ಇಂದ್ರ ಧನುಸ್ಸಿನಂತೆ ಚಿತ್ರವರ್ಣವನ್ನುಂಟುಮಾಡುತ್ತ, ಹಿಂದೆ ಮುಮ್ಮಡಿ

ಕೃಷ್ಣರಾಜ ಒಡೆಯರವರು ತಮ್ಮ ರಾಜ್ಯಭಾರ ಕಾಲದಲ್ಲಿ ಭದ್ರಾಸನವನ್ನೇರಿ ಪ್ರತಿ ದಿನವೂ ಮಂತ್ರಿ ಸೇನಾಪತಿಗಳ ಸಮ್ಮೇಳನದಿಂದ ಒಡ್ಡೋಲಗಗೊಳ್ಳುತ್ತಿದ್ದ ಚಾಲ ಖಾನೆಗೆ ಬಸವಪ್ಪಾಜಿ ಅರಸಿನವರ ಹಸ್ತಾಲಾಪವನ್ನು ಸ್ವೀಕರಿಸುತ್ತ ಬಿಜಯಂ ಗೈದರು. ಆಗ ಚೋಪದಾರನು ಕೂಗಿದನು. ಭಟರು ಹೊಗಳಿದರು; ನೆರೆದಿದ್ದ ಸಭಿಕರೆಲ್ಲರೂ ಮಹಾರಾಜರು ಬಂದರೆಂದು ತಿಳಿದು ಎದ್ದು ನಿಂತುಕೊಂಡರು. ಒಡ ನೆಯೇ ಚೀಫ್ ಕಮಿಷನರೇ ಮೊದಲಾದ ಆಂಗ್ಲೇಯಾಧಿಕಾರಿಗಳೂ ಆಸ್ಥಾನದ ಮುಖ್ಯ ಹುದ್ದೇದಾರರೂ ಸಂಗಡ ಬರಲು, ಮಹಾರಾಜರು ಕೇವಲ ಗಾಂಭೀರ್ಯ ದಿಂದ ನಡೆಯುತ್ತ ಸವಾರತೊಟ್ಟಿಯ ಭುವನೇಶ್ವರೀ ಮಂಟಪದಲ್ಲಿ ಜೋಡಿಸಿದ್ದ ಸಿಂಹಾಸನದ ಬಳಿಗೆ ಹೋಗಿ ನಿಂತರು. ಅಲ್ಲಿ ಪುರೋಹಿತರು ಮಹಾರಾಜರವರಿಂದ ಸಿಂಹಾಸನ * ಪೂಜೆಯನ್ನು ಮಾಡಿಸಿದ ಬಳಿಕ, ಬೌರಿಂಗ್ ಸಾಹೇಬರು ಮಹಾರಾಜ ರಿಗೆ ಬಲಹಸ್ತವನ್ನೂ ಎಲಿಯಟ್ ಸಾಹೇಬರು ಎಡಹಸ್ತವನ್ನೂ ಕೊಟ್ಟು, ಕುಲಕ್ರಮಾ ಗತವಾಗಿ ಬಂದ ಸಿಂಹಾಸನವನ್ನು ಹತ್ತಿಸಿದರು. ಆಗ ಮುಖ್ಯಾಧಿಕಾರಿಗಳಲ್ಲಿ ಕೆಲ

---

* ಈ ಸಿಂಹಾಸನವು ದಂತದ ಸಿಂಹಾಸನವೆಂತಲೂ, ಚಿಕ್ಕದೇವರಾಜ ಒಡೆಯರಿಗೆ ಕ್ರಿ. ಶ. ೧೬೭೦ನೆಯ ಸಂವತ್ಸರದಲ್ಲಿ ಔರಂಗಜೇಬನು ಕಳುಹಿಸಿಕೊಟ್ಟನೆಂತಲೂ, ಇದನ್ನು ಈಚೆಗೆ ರತ್ನಖಚಿತವಾಗಿ ಮಾಡಿಸಿದರೆಂತಲೂ ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಅದಕ್ಕೆ ಹಿಂದೆಯೇ ಮೈಸೂರು ಮಹಾರಾಜರುಗಳಿಗೆ ಸಿಂಹಾಸನವಿತ್ತೆಂದು ಕಾಣುತ್ತದೆ. ಈ ವಿಷಯ ವಾಗಿ ಚಿಕ್ಕದೇವರಾಜ ವಂಶಾವಳಿಯೆಂಬ ಗ್ರಂಥದ ಪೀಠಿಕೆಯಲ್ಲಿ ಬರೆದಿರುವುದೇನೆಂದರೆ: ಉತ್ತಮ ಕ್ಷತ್ರಕುಲೋತ್ಪನ್ನರು ಆರ್ಷೇಯವಾಗಿ ಬಂದ ಸಿಂಹಾಸನದ ಮೇಲೆ ಕುಳಿತು ರಾಜ್ಯಭಾರ ಮಾಡುತ್ತಿದ್ದರೇ ಹೊರತು ತಾವಾಗಿ ಒಂದು ಸಿಂಹಾಸನವನ್ನು ಮಾಡಿಸಿಕೊಂಡು ಆರೋಹಣ ಮಾಡಿದಂತೆ ಎಂದಿಗೂ ಕಾಣುವುದಿಲ್ಲ. ಬಲ್ಲಾಳ ಯಾದವರೇ ಮೊದಲಾದ ಕ್ಷತ್ರಿ ಯರು ಎಷ್ಟೋ ಪ್ರಬಲರಾಗಿ ಪೃಥ್ವೀಸಾಮ್ರಾಜ್ಯವಂ ಗೆಯ್ಯುತ್ತಿದ್ದಾಗ್ಯೂ, ಅವರುಗಳ ಕಾಲ ದಲ್ಲಿ ಹುಟ್ಟಿದ ಶಾಸನಗಳಲ್ಲಿ ಅವರು ಸಿಂಹಾಸನಾರೂಢರಾಗಿದ್ದರೆಂದು ಬರೆದು ಇಲ್ಲ. ವಿಜ ಯನಗರ ಮತ್ತು ಪೆನಗೊಂಡೆಯ ಸಂಸ್ಥಾನಾಧಿಪತಿಗಳಿಗೂ, ಮೈಸೂರು ದೊರೆಗಳಿಗೂ ಸಿಂಹಾಸನವಿದ್ದಿತೆಂದು ಶಾಸನಗಳಿಂದ ತಿಳಿಯುತ್ತದೆ. ಪೆನ್ನುಗೊಂಡೆ ಎನ್ನಿದ್ದ ಶ್ರೀರಂಗ ರಾಯನು ಮೈಸೂರು ರಾಜ ಒಡೆಯರಿಗೆ ೧೬೦೯ರಲ್ಲಿ ನಮ್ಮ ಮಹಾರಾಜರು ಆರೋಹಣ ಮಾಡುವ ಸಿಂಹಾಸನವನ್ನು ಕೊಟ್ಟನೆಂದು ವಂಶರತ್ನಾಕರದಲ್ಲಿ ಹೇಳಿದೆ. ತಿರುಮಲರಾಜ ನನ್ನು ಜಯಿಸಿದ ರಾಜಒಡೆಯರು ಸಿಂಹಾಸನಾರೂಢರಾಗಿದ್ದರೆಂದು ತಿರುಮಕೂಡ್ಲು ನರಸೀ ಪುರದ ೭೩ನೇ ಶಾಸನವೇ ಮೊದಲಾದುವುಗಳಿಂದ ತಿಳಿಯುತ್ತದೆ. ಶ್ರೀರಂಗಪಟ್ಟಣದ ೧೦೩ನೇ ಶಾಸನದಿಂದ ೧೬೪೭ರಲ್ಲಿ ಕಂಠೀರವ ನರಸರಾಜ ಒಡೆಯರು ಶ್ರೀರಂಗಪಟ್ಟಣದಲ್ಲಿ ಸಿಂಹಾಸನಾರೂಢರಾಗಿದ್ದರೆಂದು ತಿಳಿಯುತ್ತದೆ. ಶ್ರೀರಂಗಪಟ್ಟಣದ ೯೪ನೇ ಶಾಸನದಿಂದ ೧೬೭೦ರಲ್ಲಿ ಚಿಕ್ಕದೇವರಾಜ ಒಡೆಯರು ಸಿಂಹಾಸನಾರೂಢರಾಗಿದ್ದರೆಂಬು ತಿಳಿಯುತ್ತದೆ ೧೮೦೭ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಆಳಿಕೆಯಲ್ಲಿ ಬರೆಯಲ್ಪಟ್ಟ ಶಿಲಾ ಶಾಸನದಲ್ಲಿ (ಮೈಸೂರು ತಾಲ್ಲೂಕು ೨೦) ಈ ಸಿಂಹಾಸನವನ್ನು ರಾಜಒಡೆಯರೇ ಮೊದಲಾದ ದೊರೆಗಳು ಅನುಭವಿಸಿದರೆಂದು ಬರೆದಿರುತ್ತದೆ. ಈ ಕಾರಣಗಳಿಂದ ಔರಂಗಜೇಬನ ಕಾಲದಲ್ಲಿ—ಎಂದರೆ ೧೬೭೦ ರಲ್ಲಿ ಈ ಸಿಂಹಾಸನವು ಬಂದಿತೆಂದು ಹೇಗೆ ಹೇಳಬಹುದು ?

ವರೂ ರಾಜಬಂಧುಗಳಲ್ಲಿ ಕೆಲವರೂ ಅವರ ಸಂಗಡಲೇ ಹೊರಟು ಭುವನೇಶ್ವರೀ ಮಂಟಪವನ್ನು ಅಲಂಕರಿಸಿದರು.

ಪಟ್ಟಾಭಿಷೇಕಮಹೋತ್ಸವ ಕಾಲದಲ್ಲಿ ಸಿಂಹಾಸನಕ್ಕೆ ಬಲಗಡೆ ಯೂರೋಪಿಯನ್ ಸರದಾರರಿಗೆ ಪೀಠಗಳನ್ನು ಹಾಕಿದ್ದರು. ಎಡಗಡೆಯಲ್ಲಿ ಸಂಸ್ಥಾನದ ಮುಖ್ಯಾಧಿಕಾರಿಗಳಿಗೂ ರಾಜಬಂಧುಗಳಿಗೂ ಸ್ಥಳವನ್ನು ಗೊತ್ತುಮಾಡಿದ್ದರು. ದೊಡ್ಡ ದಿವಾನಖಾನೆಯಲ್ಲಿ ಒಂದು ಕಡೆ ಸಾಮಾನ್ಯರಾದ ಅರಸುಗಳೂ ಪಾಳೆಯಗಾರರೂ ಅಮೂಲ್ಯ ವಸ್ತ್ರಾಭರಣಗಳನ್ನು ಧರಿಸಿ ಬಂದು ನೆರೆದಿದ್ದರು. ಮತ್ತೊಂದು



ಶ್ರೀಚಾಮರಾಜೇಂದ್ರ ಒಡೆಯರವರ ಪಟ್ಟಾಭಿಷೇಕ ಮಹೋತ್ಸವ.

ಕಡೆ ಆಸ್ಥಾನಾಧಿಕಾರಿಗಳೂ ದೇಶಾಧಿಕಾರಿಗಳೂ ನಗರಾಧಿಕಾರಿಗಳೂ ಪಂಡಿತ ಮಹಾಜನಗಳೂ ಬಂದು ಕೂಡಿದ್ದರು. ಮೇಲ್ಗಡೆ ನೂಕಿನ ಚಾಳಂದ್ರದಲ್ಲಿ ರಮಾವಿಲಾಸ, ಸೀತಾವಿಲಾಸ ಸನ್ನಿಧಾನಗಳ ಮಹಾರಾಜ್ಞಿಯವರುಗಳೂ, ಮಹಾರಾಜರ ಜನನಿಯವರಾದ ದೇವಾಜಮ್ಮಣ್ಣಿಯವರೂ, ಅರಸಿಕೆಯರಿಂದಲೂ ಅಧಿಕಾರಿಗಳ ಮನೆಯ ಸ್ತ್ರೀಯರಿಂದಲೂ ಪರಿವೃತರಾಗಿ ತಮ್ಮ ಕುಮಾರರ ಪಟ್ಟಾಭಿಷೇಕಮಹೋತ್ಸವವನ್ನು ಇದಿರುನೋಡುತ್ತಿದ್ದರು. ಅದಕ್ಕೆ ಇದಿರಲ್ಲಿದ್ದ ಉಪ್ಪರಿಗೆಯಲ್ಲಿ ಗಾಡಿಯರು ಸಂಭ್ರಮದಿಂದ ಒಬ್ಬರನ್ನೊಬ್ಬರು ನೂಕಾಡುತ್ತ ದಟ್ಟವಾಗಿ ನಿಂತಿದ್ದರು.

ಇನ್ನೊಂದು ಕಡೆ ಮುಸಾಹೇಬರುಗಳು, ವರ್ತಕ ಮಂಡಲಿಯವರು, ಪಟ್ಟ
ಮಹಾಜನಗಳು ಮೊದಲಾದವರಿಗೆ ಸ್ಥಳವು ನೇಮಕವಾಗಿದ್ದಿತು. ತೊಟ್ಟಿಯ ಒ
ಕಡೆಯಲ್ಲಿ ಪಟ್ಟದಾನೆ, ಪಟ್ಟದ ಕುದುರೆ, ಪಟ್ಟದ ಹಸು—ಇವುಗಳನ್ನು ನಾ
ಲಂಕಾರ ಮಾಡಿ ನಿಲ್ಲಿಸಿದ್ದರು. ಮತ್ತೊಂದು ಕಡೆಯಲ್ಲಿ ಪಟ್ಟದ ಕತ್ತಿಯನ್ನು ಒ
ಸುವರ್ಣಮಯವಾದ ಪಲ್ಲಕ್ಕಿಯಲ್ಲಿಟ್ಟಿದ್ದರು. ಅದರ ಮಗ್ಗುಲಲ್ಲಿ ಪಟ್ಟದ ರಥ
ಒಂದು ನಗಾರಿಯುಳ್ಳ ಆನೆಯೂ ನಿಂತಿದ್ದುವು. ಉಳಿದ ಅಂಗಳದಲ್ಲೆಲ್ಲ ಬಿಚ್ಚುಕ
ಗಳನ್ನು ಹಿಡಿದ ಖಾಸ್ ತುರುಫಿನವರೂ ಅವರ ಪಕ್ಕದಲ್ಲಿ ರೈಫಲ್ ತುರುಫಿನವ
ಶ್ರೇಣಿಶ್ರೇಣಿಗಳಾಗಿ ನಿಂತಿದ್ದರು. ಅವರ ಇದಿರಿನಲ್ಲಿ ಇನ್ನೊಂದು ಕಡೆ ಮ
ರಾಜರ ಶಂಖ ಚಕ್ರಾಂಕುಶ ಕುಠಾರಾದಿ ರಾಜ ಬಿರುದಾವಳಿಗಳನ್ನು ಹಿಡಿ
ಸೇವಕಾಳಿಗಳೂ, ನಾನಾ ವಿಧ ವಾದ್ಯಗಾರರೂ, ವಾರಾಂಗನೆಯರೂ, ವ
ಮಾಗಧರೂ, ಸಾಲುಸಾಲಾಗಿ ನಿಂತಿದ್ದರು. ಇದಲ್ಲದೆ, ಅರಮನೆಯ ಹೊರ
ಬಯಲಿನಲ್ಲಿ ಚಿನ್ನ ಬೆಳ್ಳಿಗಳ ಅಂಬಾರಿಗಳನ್ನು ಹೊತ್ತಿರುವ ಮತ್ತಗಜಗಳೂ, ಅ
ರೋಹಕರೂ, ಬಂದೂಕುಗಳನ್ನು ಹೊತ್ತಿರುವ ಸಿಪಾಯಿಗಳೂ, ಭರ್ಲೆಯಗಳ
ಭರ್ಜಿಗಳನ್ನೂ ಹಿಡಿದಿರುವ ಕಾಲಾಳುಗಳೂ ಸಾಲುಸಾಲಾಗಿ ನಿಂತಿದ್ದರು.
ದಿವ್ಯ ಮಹೋತ್ಸವವನ್ನು ನೋಡಲು ಸಾವಿರಾರು ಜನರು ಬಂದು ಅರಮ
ಮುಂದುಗಡೆ ನೆರೆದಿದ್ದರು.

ಬೌರಿಂಗ್ ಸಾಹೇಬರು ಶ್ರೀಮನ್ಮಹಾರಾಜರವರಿಗೆ ಸಿಂಹಾಸನಾರೋ
ವನ್ನು ಮಾಡಿಸಿದ ಕೂಡಲೆ, ಭೇರ್ಯಾದಿ ಮಂಗಳವಾದ್ಯ ಧ್ವನಿಗಳು ಮೊಳಗಿದ
ನಾಲ್ಕು ಕಡೆಯಿಂದಲೂ ಪುಷ್ಪ ವೃಷ್ಟಿಯಾಯಿತು. ಕೋಟೆಯ ಪ್ರಾಕಾರದ
ಯಲ್ಲಿ ಇಪ್ಪತ್ತೊಂದು ಕುಶಾಲ್ ಫಿರಂಗಿಗಳು ಹಾರಿಸಲ್ಪಟ್ಟುವು. ಕರ್ಣಾಟಕ ದ
ಜಯಧ್ವಜವು ಎತ್ತಲ್ಪಟ್ಟಿತು. ಆಗ ಪಟ್ಟಾಭಿಷೇಕ ಮಂಟಪವು ವೇದಘೋಷದಿಂ
ಬ್ರಾಹ್ಮಣರ ಆಶೀರ್ವಾದ ಧ್ವನಿಗಳಿಂದಲೂ, ಒಬ್ಬರಮಾತು ಒಬ್ಬರಿಗೆ ತಿಳಿಯ
ಶಬ್ದಮಯವಾಯಿತು. ಗುರಿಕಾರ ಮರಿಮಲ್ಲಯ್ಯನವರು ಮಹಾರಾಜರ ವ
ವಳಿಯನ್ನು ಓದಿ ಹೇಳಿದರು. ಬೌರಿಂಗ್ ಸಾಹೇಬರು ವೈಸ್ರಾಯಿಯವರು ಕ
ಸಿದ್ದ ಖಿಲ್ಲತ್ತುಗಳನ್ನು ಒಪ್ಪಿಸಿ, ತಮ್ಮ ಯೂರೋಪಿಯನ್ ಸಮಾಜದೊಡನೆ
ಮಹಾರಾಜರಿಗೆ ಮುಜರೆಯನ್ನು ಮಾಡಿದರು. ಆ ಕಾಲದಲ್ಲಿ ವೈಸ್ರಾಯಿಯವ
ಛೀಫ್ ಕಮಿಷನರವರಿಗೂ ಮರ್ಯಾದಾರ್ಥವಾಗಿ ಖಿಲ್ಲತ್ತುಗಳು ಒಪ್ಪಿಸಲ್ಪ
ಬಳಿಕ, ವೈದಿಕಮಂಡಲಿಯವರು ಪಟ್ಟಾಭಿಷೇಕ ಸಂಬಂಧವಾದ ಇತರ ಶುಭ ಕಾ
ಳನ್ನೆಲ್ಲ ಸಾಂಗವಾಗಿ ನೆರವೇರಿಸಿ ಫಲ ಮಂತ್ರಾಕ್ಷತೆಗಳನ್ನು ಒಪ್ಪಿಸಿದರು. ಎ
ನಜರು ಮುಜರೆಗಳನ್ನು ಮಾಡಿದರು. ಬಳಿಕ, ಅಲ್ಲಿ ನೆರೆದಿದ್ದ ಸಕಲರಿಗೂ
ಪುಷ್ಪ ತಾಂಬೂಲಾದಿಗಳು ಕೊಡಲ್ಪಟ್ಟುವು. ಸರ್ವರೂ ಮಹಾರಾಜರ ಗಾ
ರ್ಯಾದಿ ಗುಣಗಳನ್ನೂ ಸುಲಕ್ಷಣಗಳನ್ನೂ ನೋಡಿ ಸಂತುಷ್ಟರಾಗಿ ತಮ್ಮ
ಮನೆಗಳಿಗೆ ತೆರಳಿದರು.

ಆಗ ಈ ಉತ್ಸವವನ್ನು ಒಬ್ಬಾನೊಬ್ಬ ಕವಿಪುಂಗವನು ಈ ರೀತಿಯಾಗಿ ವರ್ಣಿಸಿರುವನು —

ವೃತ್ತ ॥ ಸಾಮಂತಾವನಿಪರ್ ಸಮರ್ದ ಸಚಿವರ್ ಪ್ರಖ್ಯಾತ ಮಂತ್ರೀಶ್ವರರ್ ।
ಧೀಮಂತರ್ ಕವಿಪುಂಗವರ್ ಮಹಿತ ಸೇನಾನಾಯಕರ್ ಕ್ಷತ್ರಿಯರ್ ।
ಶ್ರೀಮಂತರ್ ಪುರಮಂತಸರ್ ಪರಿಜನರ್ ಸ್ವೀಕಾರಕರ್ ವಂದಿಗಳ್ ।
ಪ್ರೇಮಂಬೆತ್ತು ನಿರೀಕ್ಷಿಸುತ್ತೆ ನೆರೆದಿರ್ದರ್ ರಂಗಸ್ಥಾನದೊಳ್ ೧

ಎಲಿಯಟ್ಟೆಂಗೆಸಿಪ್ಪಿರ್ದರುಮಧಿಪತಿಗಳ್ ಸಾಮದಾನ್ಯಕ ಚಿತ್ತರ್ ।
ನಲವಿಂದಂ ಬಂದು ಕೈಲಾಗವನೆ ಇತ್ತಿರವಿರ್ಪೊಕ್ಕದೊಳ್ ಶ್ರೀಶಸಿಂಹಂ ॥
ಲಲಿತಾಕಾರಂ ಸುಚಾಮರಾಜನೃಪತಿ ಗಿರಿಯಂ ಸಿಂಹವನ್ನಾರೋಹಿಪಂತೆ ।
ಜ್ವಲತ್ತೇಜಂ ಮೆಲ್ಲನಾರೋಹಿಸಿದನಬಲನಸ್ಸಿಂಹಪೀಠಾಗ್ರಮಂ ರಾಂ ೨

ಒಸನೆ ಸದಸ್ಯಹರ್ಷದುಲಿ ಪಾರ್ಷವಿರಂಗಿಗಳೆಬ್ಬರಂ ಸಮಂ ।
ತಡೆವಿಡದಂತೆ ನಿಂದು ಸುತಿಸಗ್ಗದ ವಂದಿಗಳುಗ್ಗಡಣಂ ದ್ವಿಜರ್ಕಳಾ ॥
ಗಡಣದ ವೇದಘೋಷಮುರು ಮಂಗಳವಾದ್ಯ ಸಮೂಹನಾದಮುಂ ।
ಜಡಜಭವಾಂಡಮಂ ಕಿವುಡನಾಗಿಸಿತೊಂದು ಮುಹೂರ್ತಮಾತ್ರದೊಳ್ ೩

P R. h.

ಪಟ್ಟಾಭಿಷೇಕಮಹೋತ್ಸವ ನಡೆದ ದಿನ ಸಂಸ್ಥಾನದ ಸಕಲ ದೇವಾಲಯಗಳಲ್ಲಿಯೂ ವಿಶೇಷವಾದ ಅಭಿಷೇಕ ಪೂಜೋತ್ಸವಾದಿಗಳು ನಡೆದುವು. ಮತ ಸತ್ರ ದೇವಾಲಯಗಳಲ್ಲಿ ತ್ರಿಮತಸ್ಥರಾದ ಸಕಲ ಬ್ರಾಹ್ಮಣರಿಗೂ ಸಂತರ್ಪಣೆಯಾಯಿತು ; ಇತರ ವರ್ಣಾಶ್ರಮದವರಿಗೂ ಸಂಭ್ರಮವಾದ ಔತಣವೂ ಜರುಗಿತು ಆ ದಿನ ಸಾಯಂಕಾಲ ಸಜ್ಜೆಯಮೇಲೆ ಪುನಃ ದರ್ಬಾರ್ ನಡೆಯಿತು. ಆಗಲೂ ಛೀಫ್ ಕಮಿಷನರೇ ಮೊದಲಾದ ಯೂರೋಪಿಯನ್ ಸರದಾರರೂ ದೇಶೀಯ ಅಧಿಕಾರಿಗಳೂ ಬಂದಿದ್ದರು.

ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕ ಮಹೋತ್ಸವಕ್ಕೆ ಏರ್ಪಾಡಿಸಿದ್ದ ಬೌರಿಂಗ್ ಸಾಹೇಬರು ಮಹಾರಾಜರವರ ಪಟ್ಟಾಭಿಷೇಕವನ್ನು ಕುರಿತು ಇಂಡಿಯಾ ಗವರ್ನ್ಮೆಂಟಿಗೆ ಈ ರೀತಿಯಾಗಿ ರಿಪೋರ್ಟ್ ಮಾಡಿರುತ್ತಾರೆ. "ಚಾಮರಾಜರವರ ಪಟ್ಟಾಭಿಷೇಕ ಕಾಲದಲ್ಲಿ ನಡೆಯಬೇಕಾಗಿದ್ದ ಆಯಾಸವನ್ನುಂಟುಮಾಡುವ ವಿಧ್ಯುಕ್ತ ಕರ್ಮಗಳೆಲ್ಲವೂ ಪೂರೈಸುವವರೆಗೂ ಚಿಕ್ಕ ಮಹಾರಾಜರವರು ಅಚಲಿತ ಧೈರ್ಯವನ್ನೂ ಶಾಂತಭಾವವನ್ನೂ ವಿಶೇಷವಾಗಿ ತೋರ್ಪಡಿಸಿದರು. ಅವರಷ್ಟು ಚಿಕ್ಕ ವಯಸ್ಸಿನ ಮಗುವು ಅಷ್ಟು ಗಾಂಭೀರ್ಯವನ್ನು ವಹಿಸಿಕೊಂಡಿದ್ದುದು ನೋಡಿದವರಿಗೆ ಪರಮಾಶ್ಚರ್ಯವನ್ನುಂಟುಮಾಡುತ್ತಿದ್ದಿತು."

ಬೌರಿಂಗ್ ಸಾಹೇಬರು ಮಾತ್ರವಲ್ಲದೆ ಅವರ ಪತ್ನಿಯವರೂ ಆಗ ತಾವು ಕಂಡುದನ್ನು ಈ ರೀತಿಯಾಗಿ ವರ್ಣಿಸಿ ಬರೆದಿರುವರು. "ನನ್ನ ಯಜಮಾನರೂ ಮೇಜರ್ ಎಲಿಯಟ್ ಸಾಹೇಬರೂ ಆ ಚಿಕ್ಕ ಮಗುವಿನ ಕೈಯನ್ನು ಹಿಡಿದುಕೊಂಡು

ಬೌರಿಂಗ್ ಸಾಹೇಬರ ಪತ್ನಿಯವರ ಈ ಲೇಖನದಿಂದ ಇಷ್ಟು ಚಿಕ್ಕ ವಯ:
ನ್ನಲ್ಲಿಯೂ ಕೂಡ ಮಹಾರಾಜರಿಗೆ ಅಪರಿಚಿತರಾದ ಅನ್ಯದೇಶೀಯರನ್ನು ತಪ:
ವಶಮಾಡಿಕೊಂಡು ಅವರೊಡನೆ ಸಲಿಗೆಯನ್ನು ಬೆಳೆಯಿಸುವ ಅನ್ಯಾದೃಶವಾ:
ಸಾಮರ್ಥ್ಯವು ಇದ್ದಿತೆಂತಲೂ, ಅದು ಮುಂದೆ ಮುಂದೆ ಪ್ರಬಲವಾಗಿ 'ಮೈಸೂ:
ಮಹಾರಾಜರು' ಎಂದರೆ ಅವರೊಡನೆ ಸ್ವಲ್ಪ ಹೊತ್ತಾದರೂ ಸಂಭಾಷಿಸಬೇಕೆಂದ
ಆಶೆಪಡುವಂತೆ ಯೂರೋಪಿಯನರಿಗೂ ಕೂಡ ಒಂದು ವಿಧವಾದ ಭ್ರಮೆಯನ್ನುಂಟ
ಮಾಡುತ್ತಿದ್ದಿತೆಂತಲೂ ತಿಳಿಯಬರುತ್ತದೆ.

ಐದನೆಯ ಅಧ್ಯಾಯ.

ಶ್ರೀಚಾಮರಾಜೇಂದ್ರ ಒಡೆಯರವರ ವಿದ್ಯಾಭ್ಯಾಸ.

ಗಿಡವು ಹೇಗಿರುವುದೋ ಫಲವೂ ಹಾಗೆಯೇ ಬಿಡುವುದು. ಮನುಷ್ಯನ ನ:
ನುಡಿ ಅಭಿಪ್ರಾಯ ಮುಂತಾದುವುಗಳೆಲ್ಲವೂ ಪ್ರಾಯಶಃ ಬಾಲ್ಯದಲ್ಲಿ ಹೇಗೆ ಸಂಸ್ಕಾ:
ವನ್ನು ಹೊಂದುತ್ತವೆಯೋ ಹಾಗೆಯೇ ಚಿರಕಾಲ ನಿಲ್ಲುವುವು. ಮನುಷ್ಯನ
ಮುಂದೆ ತಾನು ಬರುವ ಪದವಿಗೆ ಸರಿಯಾಗಿಯೇ ಬಾಲ್ಯದಲ್ಲಿ ವಿದ್ಯಾಭ್ಯಾಸವನ
ಹೊಂದಬೇಕೆಂದು ಎಲ್ಲರೂ ಹೇಳುವರು. ಈ ಸಂಗತಿಯನ್ನು ಪೂರ್ವದ ಮಹ
ರಾಜರುಗಳು ಚೆನ್ನಾಗಿ ತಿಳಿದಿದ್ದರು. ಅವರು ತಮ್ಮ ಮಕ್ಕಳಿಗೆ ಆಟಪಾಟಗಳ
ಸಂಗಾತಿಗಳಾಗಿರುವುದಕ್ಕೆ ಯೋಗ್ಯ ವಂಶದಲ್ಲಿ ಹುಟ್ಟಿದ ಹುಡುಗರನ್ನು ಜೊತೆಗೊಳಿಸ
ತ್ತಿದ್ದರು. ಅಲ್ಲದೆ, ವೃದ್ಧರೂ ಅನುಭವಶಾಲಿಗಳೂ ಆದ ಕಂಚುಕಿಗಳನ್ನೇ ರಾ:
ಪಾಸದಲ್ಲಿ ಇಡುತ್ತಿದ್ದರು. ಕೃಷ್ಣರಾಜ ಒಡೆಯರವರು ಚಿಕ್ಕ ಮಹಾರಾಜರವರನ
ದತ್ತು ತೆಗೆದುಕೊಂಡಮೇಲೆಯೂ ಅರಮನೆಗೆ ಕರೆಯಿಸಿಕೊಳ್ಳದೆ, ಅವರ ತಾಯಿಂ
ಬಳಿಯಲ್ಲಿಯೇ ಚೆನ್ನಾಗಿ ಶಿಕ್ಷಿತರಾಗಬೇಕೆಂದು ಅವರ ಪೋಷಣೆಯಲ್ಲಿಯೇ ಬಿಟ್ಟಿದ್ದರ.
ಇದಕ್ಕೆ ಕಾರಣವೇನೆಂದರೆ: ಪ್ರಸಿದ್ಧ ಪುರುಷರ ಶಮದಮಾದಿ ಸುಗುಣಗಳಿಗೆ
ಅವರವರ ತಾಯಿಯರ ಬುದ್ಧಿಕೌಶಲವೇ ಕಾರಣವೆಂಬುದಾಗಿ ನೆಪೋಲಿಯ:
ಜಾರ್ಜ್ ವಾಷಿಂಗ್‌ಟನ್ ಮೊದಲಾದ ಮಹಾಪುರುಷರ ಚರಿತ್ರೆಗಳಿಂದ ತಿಳಿ:
ಬರುವುದು. ಅದರಂತೆಯೇ, ದೇವಾಜಮ್ಮಣ್ಣಿಯವರು ಸುಶಿಕ್ಷಿತರಾದವರು, ಬಹ
ಓದಿದವರು, ಅವರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ವಿಶೇಷವಾದ ಗೌರ
ವಿದ್ದಿತು. ಅಂತಹ ಗೃಹಿಣೀ ರತ್ನವು ಅಸಾಧಾರಣವಾದುದೆಂಬುದನ್ನು ಅವ:
ಚೆನ್ನಾಗಿ ಅರಿತಿದ್ದರು.

ಶ್ರೀಚಾಮರಾಜೇಂದ್ರ ಒಡೆಯರಿಗೆ ನಾಲ್ಕು ವರುಷ ತುಂಬಿದ ಬಳಿಕ, ವೃದ್ಧ ಮಹಾರಾಜರವರು ತಮ್ಮ ಸಮುಖದಲ್ಲಿದ್ದ ಬಾಸ್ಕರಪಂತರೆಂಬವರಿಂದ ಅವರಿಗೆ ಅಕ್ಷರಾಭ್ಯಾಸವನ್ನು ಮಾಡಿಸಿದರು. ಅವರು ಮಹಾರಾಜರಿಗೆ ಕಾಗುಣಿತವನ್ನು ಕಲಿಸಿ, ಮಗ್ಗಿ ಮುಖ್ಯಾಗೆ ಸಂಯುಕ್ತಾಕ್ಷರಗಳ ಪದಗಳನ್ನೂ, ನೀತಿಬೋಧಕ ಗಳಾದ ಸಣ್ಣಸಣ್ಣ ಶ್ಲೋಕಗಳನ್ನೂ, ದೇವರ ಸ್ತೋತ್ರಗಳನ್ನೂ ಹೇಳಿಕೊಡುತ್ತಿದ್ದರು. ಅಲ್ಲದೆ, ಬಾಲ್ಯದಲ್ಲಿ ಹುಡುಗರ ಬುದ್ಧಿ ವಿಕಾಸಕ್ಕೆ ಅವಶ್ಯಕವಾದ ರಾಮಾಯಣ, ಭಾರತ, ಭಾಗವತ ಮತ್ತು ವಿಕ್ರಮಾರ್ಕನ ಕಥೆ ಮೊದಲಾದುವುಗಳನ್ನು ಹೇಳಿ ಅವರಿಗೆ ಸಂತೋಷವನ್ನುಂಟುಮಾಡುತ್ತಿದ್ದರು. ಇದರಿಂದ ಮಹಾರಾಜರಿಗೆ ಚಿಕ್ಕ ವಯಸ್ಸಿ ನಲ್ಲಿಯೇ ಪುರಾತನ ಪುರುಷರ ಚರಿತ್ರಗಳೆಲ್ಲವೂ ತಿಳಿಯಲವಕಾಶವುಂಟಾಗಿ ತಮ್ಮ ನಡೆನುಡಿಗಳನ್ನು ತಿದ್ದಿಕೊಳ್ಳುವುದಕ್ಕೆ ಸಹಾಯವಾಯಿತು. ಇಂಗ್ಲಿಷ್ ವಿದ್ಯಾ ಭ್ಯಾಸವು ಮಹಾರಾಜರಿಗೆ ಆವಶ್ಯಕವಾದುದರಿಂದ ರಂಗಣ್ಣನವರನ್ನು ಇಂಗ್ಲಿಷ್ ಉಪಾಧ್ಯಾಯರನ್ನಾಗಿ ನೇಮಕಮಾಡಿದ್ದರು. ಅವರು ಮಹಾರಾಜರಿಗೆ ಮೊದಲ ನೆಯ ಪುಸ್ತಕವನ್ನು ಹೇಳಿಕೊಟ್ಟರು. ಮಹಾರಾಜರ ಜೊತೆಯಲ್ಲಿಯೇ ಅವರ ಚಿಕ್ಕಣ್ಣಂದಿರಾದ ಪ್ರಿನ್ಸ್ ಸುಬ್ರಹ್ಮಣ್ಯರಾಜ ಅರಸಿನವರಿಗೂ ವಿದ್ಯಾಭ್ಯಾಸವು ನಡೆಯು ತ್ತಿದ್ದಿತು. ಚಿಕ್ಕ ಮಹಾರಾಜರಿಗೆ ಅಕ್ಷರಾಭ್ಯಾಸವಾದ ಒಂದೂವರೆ ವರುಷದೊಳಗೆ, ಸುಮಾರಾಗಿ ಓದುವುದಕ್ಕೂ, ಕೇಳಿದ ಕಥೆಗಳನ್ನು ಪುಟ್ಟಪುಟ್ಟ ಮಾತುಗಳಿಂದ ವಿನೋದ ವಾಗಿ ಹೇಳುವುದಕ್ಕೂ ಸಾಮರ್ಥ್ಯವುಂಟಾಯಿತು. ಅಷ್ಟು ಚಿಕ್ಕವಯಸ್ಸಿನಲ್ಲಿಯೇ ಮಹಾರಾಜರು ತಮಗೆ ಸಂಗೀತದಲ್ಲಿ ಅಭಿರುಚಿಯಿದೆ ಯೆಂಬುದನ್ನು ಕೂಡ ತೋರಿಸಿ ಕೊಳ್ಳುತ್ತಿದ್ದರು. ಒಳ್ಳೆಯ ಸಂಗೀತಗಾರರು ಹಾಡುತ್ತಿದ್ದರೆ, ಅದನ್ನು ಅತ್ಯಾಸಕ್ತಿ ಯಿಂದ ಕಿವಿಗೊಟ್ಟು ಕೇಳಿ, ಕೇಳಿದ ಹಾಡುಗಳನ್ನು ಒಬ್ಬರೇ ಇದ್ದಾಗ ತಮಗೆತಾವೇ ಹಾಡಿಕೊಳ್ಳುತ್ತಿದ್ದರು. ಚಿಕ್ಕ ಮಹಾರಾಜರಿಗೆ ಕಥೆ ಕೇಳುವುದರಲ್ಲಿಯೂ ವಿಚಿತ್ರ ವಾಗಿ ಕಂಡುಬಂದ ಸಂಗತಿಗಳಿಗೆ ಕಾರಣವನ್ನು ಕೇಳಿ ತಿಳಿದುಕೊಳ್ಳುವುದರಲ್ಲಿಯೂ ಬಹಳ ಆಸಕ್ತಿಯಿದ್ದಿತೆಂದು ಸಂತೋಷಿಸುವರೂ ರಂಗಣ್ಣನವರು ಹೇಳುತ್ತಿದ್ದರು. "ಬೆಳೆಯ ಗುಣವು ಮೊಳೆಯಲ್ಲೇ ತೋರುವುದು" ಎಂಬ ಶಾಸ್ತ್ರಜ್ಞರ ಮಾತು ಸುಳ್ಳಲ್ಲ.

ಮೇಲೆ ಹೇಳಿದಂತೆ, ಮುಮ್ಮಡಿ ಕೃಷ್ಣರಾಜ ಒಡೆಯರವರು ತಾವು ಜೀವಿಸಿದ್ದ ಕಾಲದಲ್ಲಿಯೇ ರಾಜಪುತ್ರರ ವಿದ್ಯಾಭ್ಯಾಸಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿದು ದಲ್ಲದೆ, ೧೮೬೭ನೆಯ ಇಸವಿ ಏಪ್ರಿಲ್ ತಿಂಗಳಲ್ಲಿ ತಮ್ಮ ಕುಮಾರರಿಗೆ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಮಾಡಿಸುವುದರ ವಿಷಯವಾಗಿ ವೈಸ್ರಾಯಿಯವರಿಗೆ ಈ ಕೆಳಗೆ ಹೇಳುವ ಪ್ರಕಾರವಾಗಿ ಬರೆದುಕೊಂಡರು. "ಭಗವತ್ಕಟಾಕ್ಷದಿಂದ ಈಗ ಐದನೆಯ ವರುಷದ ವಯಸ್ಸನ್ನು ಪಡೆದಿರುವ ನಮ್ಮ ಕುಮಾರರಾದ ಚಾಮರಾಜೇಂದ್ರ ಒಡೆಯ ರವರು ನಮ್ಮ ಬಾಲ್ಯದಲ್ಲಿಯೂ ಪಯಸ್ಸಾದಮೇಲೆಯೂ ನಾವು ಪಡೆದ ವಿದ್ಯಾಭ್ಯಾಸ

ಶಿಕ್ಷಣಗಳಿಗಿಂತಲೂ ಉತ್ತಮವಾದ ವಿದ್ಯಾಶಿಕ್ಷಣಗಳನ್ನು ಪಡೆಯಬೇಕೆಂದು ಬಹಳ ಅಪೇಕ್ಷೆಯುಳ್ಳವರಾಗಿರುವೆವು. ಈ ನಮ್ಮ ವಿಶ್ವಾಸಕ್ಕೆ ಪಾತ್ರವಾದ ಮಗುವಿನ ಪದವಿಯ ಮತ್ತು ಅಧಿಕಾರದ ವಿಷಯದಲ್ಲಿ ನಿಮಗೂ ನಮಗೂ ಭಿನ್ನಾಭಿಪ್ರಾಯಗಳಿದ್ದರೂ, ಇಂಡಿಯಾ ದೇಶದ ರಾಜಪುತ್ರರಿಗೂ ಶ್ರೀಮಂತರಿಗೂ ವಿದ್ಯಾಭ್ಯಾಸ ಮಾಡಿಸುವುದು ಪ್ರಯೋಜನಕರವೆಂದು ಹೇಳುವ ವಿಷಯದಲ್ಲಿ ಯಾವ ಭಿನ್ನಾಭಿಪ್ರಾಯವೂ ನಮಗಳಿಗಿರದೆಂದು ಭಾವಿಸಿರುವೆವು. ನಮ್ಮ ಪುತ್ರರ ಪರಿಣಾಮವು ಯಾವರೀತಿಯಾದರೂ, ಅವರು ವಹಿಸಬೇಕಾದ ಕರ್ತವ್ಯಭಾರವು ಏನಾದರೂ, ಮಹಾಪ್ರಭುಗಳಾದ ತಾವೂ ತಮ್ಮ ಉತ್ತರಾಧಿಕಾರಿಗಳೂ ತಮ್ಮಗಳ ಚಿತ್ತದಲ್ಲಿ ಜ್ಞಾಪಕವಿಟ್ಟಿರಬೇಕಾದುದೇನೆಂದರೆ: ಈ ನಮ್ಮ ಪುತ್ರರು ಅನಾದಿಯಾದ ಈ ರಾಜವಂಶಕ್ಕೆ ಸೇರಿದವರು; ಅಲ್ಲದೆ ಗ್ರೇಟ್ ಬ್ರಿಟನ್ ಮತ್ತು ಇಂಡಿಯಾ ದೇಶಗಳ ಮಹಾರಾಜ್ಞಿಯವರ ಮಿತ್ರರಾಜರೊಳಗೆ ಕೇವಲ ದೀನರಾಗಿದ್ದರೂ, ಬಹುಕಾಲದಿಂದ ಬಂದವರಾಗಿಯೂ ಅತ್ಯಂತ ವಿಶ್ವಾಸಾರ್ಹರಾಗಿಯೂ ಇರುವ ಮೈಸೂರು ರಾಜರಿಗೆ ಹಿಂದೂ ಧರ್ಮಶಾಸ್ತ್ರಪ್ರಕಾರವಾಗಿ ಪುತ್ರರಾಗಿರುವರು.''

ಬಳಿಕ ಕೃಷ್ಣರಾಜ ಒಡೆಯರವರ ಮರಣಾನಂತರದಲ್ಲಿ, ಚಾಮರಾಜೇಂದ್ರ ಒಡೆಯರವರ ವಿದ್ಯಾಭ್ಯಾಸವು ಸಂಪೂರ್ಣವಾಗಿ ಇಂಗ್ಲಿಷರಿಗೆ ಸೇರಿತು. ಆದರೆ ಆಗ ಅವರು ಬಾಲಕರಾದ ಮಹಾರಾಜರವರಿಗೆ ರಾಜಯೋಗ್ಯವಾದ ವಿದ್ಯಾಭ್ಯಾಸಮಾಡಿಸುವ ವಿಷಯದಲ್ಲಿ ಏರ್ಪಡಿಸಿದ ಕ್ರಮವನ್ನು ತಿಳಿಸುವುದಕ್ಕೆ ಮೊದಲು ಅವರ ವಿದ್ಯಾಭ್ಯಾಸದ ವಿಚಾರದಲ್ಲಿ ನಡೆದ ಚರ್ಚೆಯನ್ನು ಇಲ್ಲಿ ತಿಳಿಸಬೇಕಾದುದು ಅವಶ್ಯಕ.

ಇಂಗ್ಲಿಷರು ಮೈಸೂರು ಸೀಮೆಯ ರಾಜ್ಯಭಾರವನ್ನು ತಮ್ಮ ವಶದಲ್ಲಿಟ್ಟುಕೊಂಡು ಸುಮಾರು ಮೂವತ್ತೇಳು ವರುಷಗಳಾಗಿದ್ದುವು. ಮೈಸೂರು ಮಹಾರಾಜರ ಆಳಿಕೆಯು ಚಾಮರಾಜೇಂದ್ರ ಒಡೆಯರಲ್ಲೇ ಪುನಃ ಪ್ರಾರಂಭವಾದುದರಿಂದ, ರಾಜ್ಯವನ್ನು ಆಳುವ ಪ್ರಭುವು ಯಾವರೀತಿಯಲ್ಲಿರಬೇಕು? ಎಷ್ಟು ವಿದ್ಯಾವಂತನಾಗಬೇಕು? ಎಷ್ಟು ಧರ್ಮಿಷ್ಠನಾಗಬೇಕು? ಪ್ರಜೆಗಳ ಸುಖದುಃಖಗಳೆಲ್ಲವೂ ಈತನ ಅಧೀನದಲ್ಲಿರುವುದರಿಂದ, ಈತನು ಎಷ್ಟುಮಟ್ಟಿಗೆ ದೀರ್ಘಾಲೋಚನೆಯುಳ್ಳವನಾಗಿರಬೇಕು? ಎಂದು ಇಂಗ್ಲಿಷ್ ಅಧಿಕಾರಿಗಳು ವಿಚಾರಮಾಡತೊಡಗಿದರು. ಈ ವಿಷಯವಾಗಿ ಒಂದು ರಾಜಕೀಯ ಪತ್ರದಲ್ಲಿ ಹೀಗೆಂದು ಬರೆದಿದೆ. ''ಈ ವಿಷಯದಲ್ಲಿ ನಮ್ಮ ಉದ್ದೇಶವು ಏನಾಗಿರಬೇಕೆಂದರೆ: ಮುಂದಿನ ರಾಜರುಗಳು ಹೇಗಿರಬೇಕೆಂಬುದಕ್ಕೆ ಇವರನ್ನೇ ನಿದರ್ಶನವಾಗಿ ತೋರಿಸುವ ರೀತಿಗೆ ತಕ್ಕಂತೆ ಈ ರಾಜಪುತ್ರರು ಶಿಕ್ಷಣವನ್ನು ಪಡೆದು ಉಚಿತವಾದ ಮಾರ್ಗದಲ್ಲಿ ನಡೆಯುವಂತೆ ಮಾಡಬೇಕು. ಈ ರಾಜರು ಪಿತ್ರಾರ್ಜಿತವಾದ ದೊಡ್ಡ ಪದವಿಯನ್ನೂ ವಿಸ್ತಾರವಾದ ರಾಜ್ಯವನ್ನೂ ಮಹತ್ತರವಾದ ಪ್ರಭುಶಕ್ತಿಯನ್ನೂ ಆಗಲೇ ಹೊಂದಿರುವವರಾದರೂ, ಮುಂದೆ ಆಲೋಚನಾಪರರಾಗಿ ತಮ್ಮ ಪ್ರಜೆಗಳ ಶ್ರೇಯೋಭಿವೃದ್ಧಿಗೆ ಅಧಿಕವಾದ ಅವಕಾಶ

ವನ್ನು ಒದಗಿಸುವವರಾಗಿಯೂ ಬ್ರಿಟಿಷ್ ಸರಕಾರದವರ ರಾಜನೀತಿಗೂ ನಿರೀಕ್ಷಣೆಗೂ ಸ್ವಲ್ಪವೂ ವ್ಯತ್ಯಾಸಬಾರದಂತೆ ಆಳತಕ್ಕವರಾಗಿಯೂ ಇರಬೇಕು.''

ಈ ಅಭಿಪ್ರಾಯವನ್ನು ಉತ್ತರೋತ್ತರ ಬಂದ ಪ್ರತಿಯೊಬ್ಬ ಸ್ಟೇಟ್ ಸೆಕ್ರಿಟರಿ ಯವರೂ ಆಗಾಗ ಇಂಡಿಯಾ ಸರಕಾರದ ಜ್ಞಾಪಕಕ್ಕೆ ತರುತ್ತಿದ್ದರು. ಡ್ಯೂಕ್ ಆಫ್



ಚಾಮರಾಜೇಂದ್ರ ಒಡೆಯರವರು ಮತ್ತು ಅವರ ಸಹೋದರಾದಿಗಳು.

ಆರ್ಗೈಲ್ ಅವರು—ಯೂರೋಪ್ ದೇಶದ ಮಂತ್ರಿವರ್ಯರಿಂದ ಸಮ್ಮತಿಗೊಂಡಿರುವ ಸಿದ್ಧಾಂತಗಳ ಪ್ರಕಾರವಾಗಿ, ಒಬ್ಬ ದೇಶೀಯ ರಾಜಪುತ್ರನನ್ನು ಅವನ ಸ್ವದೇಶದಲ್ಲಿ ಮುಂದೆ ರಾಜನಾಗಿರುವುದಕ್ಕೆ ಯೋಗ್ಯನಾಗಿರುವಂತೆ ಮಾಡುವ ಪ್ರಯತ್ನವು ಸರಿಯೊ ಸರಿಯಲ್ಲವೊ ಎಂದು ತಿಳಿಯಬೇಕಾದರೆ, ಅನುಭವದಿಂದ ಪರೀಕ್ಷೆಮಾಡಿಯೇ ತಿಳಿಯ

ಬೇಕೆಂತಲೂ, ಈ ಪರೀಕ್ಷೆಯು ಬಹು ಮುಖ್ಯವಾದುದಾಗಿಯೂ ಬಹು ಫಲಪ್ರದವಾಗ ಬಹುದಾಗಿಯೂ ಇರುವುದೆಂತಲೂ ಅಭಿಪ್ರಾಯಪಟ್ಟರು. ಮಾರ್ಕ್ವಿಸ್ ಆಫ್ ಸ್ಯಾಲಿಸ್‌ಬರಿಯವರೂ ಕೂಡ ಇವರ ಅಭಿಪ್ರಾಯವನ್ನೇ ಅನುಮೋದಿಸಿದುದಲ್ಲದೆ, ಆ ವಿಷಯದಲ್ಲಿ ತಮಗಿದ್ದ ಇನ್ನೂ ಹೆಚ್ಚಾದ ಅಭಿಪ್ರಾಯಗಳನ್ನು ಈ ರೀತಿಯಲ್ಲಿ ಸೂಚಿಸಿ ದರು : "ಚಿಕ್ಕ ಮಹಾರಾಜರ ವಿದ್ಯಾಭ್ಯಾಸವು ಮೈಸೂರು ಸೀಮೆಯ ಪ್ರಜೆಗಳ ಸೌಖ್ಯಮಾತ್ರಕ್ಕಾಗಿಯೇ ಎಂದು ತಿಳಿಯಬೇಡಿರಿ, ಯಾವ ರಾಜನ ವಿದ್ಯಾಭ್ಯಾಸವನ್ನು ಪೂರ್ತಿಗೊಳಿಸುವ ಭಾರವನ್ನು ಇಂಗ್ಲಿಷರು ತಾವು ವಹಿಸುವರೋ, ಅಂತಹ ಮಹಾ ರಾಜನ ನಡತೆಯಿಂದಲೇ ಇಂಡಿಯಾ ದೇಶದಲ್ಲಿ ದೇಶೀಯ ರಾಜರುಗಳ ಆಳಿಕೆಗೆ ಮುಂದುಂಟಾಗುವ ಕ್ರಮವೂ ಸ್ಥೈರ್ಯವೂ ತಿಳಿಯಬೇಕಾಗಿದೆ."

ಪೂರ್ವದ ಹಿಂದೂ ಮತ್ತು ಮಹಮ್ಮದೀಯ ರಾಜರುಗಳು ತಮ್ಮ ಮಕ್ಕಳಿ ವಿದ್ಯಾಭ್ಯಾಸ ಮಾಡಿಸುತ್ತಿದ್ದ ರೀತಿಯು ಈಗ ಉಪಯೋಗಕರವಾಗಿಲ್ಲ. ಇಂಗ್ಲೆ ಡಿಗೂ ಇಂಡಿಯಾ ದೇಶಕ್ಕೂ ಉಂಟಾಗಿರುವ ಸಂಬಂಧದಿಂದ ಈಗಿನ ಕಾಲಸ್ಥಿತಿಯು ಬಹಳ ವ್ಯತ್ಯಸ್ತವಾಗಿ ಹೋಗಿದೆ. ಆದುದರಿಂದ ಪೂರ್ವದಲ್ಲಿದ್ದ ರಾಜರುಗಳಿಗೆ ಎಷ್ಟು ಮಟ್ಟಿಗೆ ತಿಳಿವಳಿಕೆಯಿದ್ದಿತೋ ಈಗ ಅದಕ್ಕಿಂತಲೂ ಹೆಚ್ಚಾದ ತಿಳಿವಳಿಕೆ ಬೇಕಾಗಿದೆ ಪೂರ್ವದ ರಾಜರುಗಳಿಗೆ ಇಷ್ಟುಮಟ್ಟಿಗೆ ತಿಳಿಯಬೇಕಾದ ಆವಶ್ಯಕತೆಯಿರಲಿಲ್ಲ ರಾಜರಾದವರು ವಹಿಸಬೇಕಾದ ಭಾರವು ಇಂತಹುದೆಂದು ಅವರು ತಿಳಿದಿದ್ದರೂ ಈಗಿನಂತೆ ರಾಜರು ಸಾಮಾನ್ಯವಾಗಿ ಜನಗಳೊಡನೆ ಸೇರಬೇಕಾದ ಆವಶ್ಯಕತೆ ಅವ ಗಿರಲಿಲ್ಲ. ಪೂರ್ವದ ವಿದ್ಯಾಭ್ಯಾಸ ಕ್ರಮದಲ್ಲಿ ಅನೇಕ ಗುಣಗಳಿದ್ದರೂ, ಅವುಗಳೇ ಇಂಗ್ಲಿಷರ ಅಧಿಕಾರವು ಇಂಡಿಯಾ ದೇಶದಲ್ಲಿ ಸ್ಥಿರಪಡುವಷ್ಟರೊಳಗೆ ಮಾಲಿನ್ಯವನ ಪಡೆದು, ರಾಜನಾದವನಿಗೆ ವಿದ್ಯಾಭ್ಯಾಸವೇಕೆ ? ಅವನು ಅಜ್ಞನಾಗಿದ್ದರೇನು ಆಯಾ ಉದ್ಯೋಗಗಳಿಗೆ ಬೇರೆಬೇರೆ ಅಧಿಕಾರಿಗಳೂ ಆಳುಗಳೂ ಇಲ್ಲವೆ ? ಎಂ ದುರಭಿಪ್ರಾಯಗಳು ಹುಟ್ಟಿದ್ದುವು. ಇಂತಹ ದುರಭಿಪ್ರಾಯಗಳಿಂದ ನಡೆಯುತ್ತಿದ್ದ ಹಿಂದೂ ರಾಜಪುತ್ರರುಗಳ ವಿದ್ಯಾಭ್ಯಾಸ ಕ್ರಮವು ಇಂಗ್ಲಿಷ್ ಸರಕಾರಕ್ಕೆ ಒಪ್ಪದಿದ್ದು ರಿಂದ, ದೇಶೀಯರಾಜರ ವಿದ್ಯಾಭ್ಯಾಸಕ್ರಮಕ್ಕೆ ಹೊಸಮಾರ್ಗವನ್ನು ಏರ್ಪಡಿ ಬೇಕಾಯಿತು. ಇಂಡಿಯಾ ದೇಶದ ರಾಜರಾಗತಕ್ಕವರ ಬಾಲ್ಯಮನಸ್ಸೆಂಬ ಭೂಮಿ ಯಲ್ಲಿ ಪಾಶ್ಚಾತ್ಯರ ಅಭಿಪ್ರಾಯಗಳೆಂಬ ಬೀಜಗಳನ್ನು ಬಿತ್ತಿ ಅವು ಎಂತಹ ವೃಕ್ಷಗಳಾ ಬೆಳೆಯುವುವೋ ಎಂಬುದನ್ನು ಪರೀಕ್ಷಿಸುವುದಕ್ಕೆ ಶ್ರೀಚಾಮರಾಜೇಂದ್ರ ಒಡೆಯರ ರಲ್ಲಿ ಪ್ರಾರಂಭವಾಯಿತು. ವಿದ್ಯಾಭ್ಯಾಸದಲ್ಲಿ ಯಾವ ವಿಷಯಗಳನ್ನು ಕಲಿಸಬೇಕು ಯಾವ ಕ್ರಮವನ್ನು ಅನುಸರಿಸಬೇಕು ? ಎಂತಹವರು ಉಪಾಧ್ಯಾಯರಾಗಿರಬೇಕು ಉಪಾಧ್ಯಾಯರಾಗತಕ್ಕವರು ದೇಶೀಯರಾಗಿರಬೇಕೆ ? ಅಥವಾ ಯೂರೋಪಿಯ ರಾಗಿರಬೇಕೆ ? ಎಂಬೀ ಅಂಶಗಳನ್ನು ಆಲೋಚಿಸಬೇಕಾಗಿ ಬಂದಿತು. ವಿದ್ಯಾಗುರ ಗಳಾಗತಕ್ಕವರು ಯೂರೋಪಿಯನರಾಗಬೇಕೆ ? ಅಥವಾ ದೇಶೀಯರಾಗಬೇಕೆ

ಎಂಬ ಪ್ರಶ್ನೆಗೆ ಮಾತ್ರ ಉತ್ತರವನ್ನು ಮುಮ್ಮಡಿ ಕೃಷ್ಣರಾಜ ಒಡೆಯರವರೇ ತೀರ್ಮಾನ ಮಾಡಿಕೊಟ್ಟು ತಾವು ಬದುಕಿರುವಾಗಲೇ ತಮ್ಮ ಸ್ವೀಕೃತ ಪುತ್ರರ ವಿದ್ಯಾಭ್ಯಾಸಕ್ಕೆ ಒಬ್ಬ ಯೂರೋಪಿಯನ್ ಉಪಾಧ್ಯಾಯನನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಂಡಿದ್ದುದರಿಂದ, ಯೂರೋಪಿಯನನೇ ವಿದ್ಯಾಗುರುವಾಗಬೇಕೆಂಬುದು ನಿಶ್ಚಿತವಾಯಿತು.

ಈ ವಿಷಯವು ನಿಶ್ಚಿತವಾದ ಬಳಿಕ, ಆ ವಿದ್ಯಾಗುರುವಿಗೆ ಯಾವಯಾವ ಗುಣಗಳಿರಬೇಕು ? ಯಾವಯಾವ ವಿಷಯದಲ್ಲಿ ಪರಿಚಯವಿರಬೇಕು ? ಎಂಬುದನ್ನು ನಿರ್ಧರಿಸುವುದು ಇನ್ನೂ ಹೆಚ್ಚು ಶ್ರಮವಾಯಿತು. ಆಗ ಮೈಸೂರಿನಲ್ಲಿ ಛೀಫ್ ಕಮಿಷನರಾಗಿದ್ದ ಸಾಂಡರ್ಸ್ ಸಾಹೇಬರು "ವಿದ್ಯಾಗುರುವಾಗತಕ್ಕವನು ಇಂಗ್ಲಿಷ್ ಯೂನಿವರ್ಸಿಟಿಯಲ್ಲಿ ತೇರ್ಗಡೆಯಾದ ಪಂಡಿತನಾಗಿರಬೇಕು ; ಧೀರನಾಗಿರಬೇಕು ; ವಯಸ್ಸು ಇಪ್ಪತ್ತೆರಡಕ್ಕೆ ಕಡಿಮೆಯಾಗಿರಕೂಡದು, ಮೂವತ್ತಕ್ಕೆ ಹೆಚ್ಚಾಗಿರಕೂಡದು ; ಆತನು ಗಂಭೀರನಾಗಿಯೂ ಧರ್ಮಪರನಾಗಿಯೂ ಇರಬೇಕು ; ಆಗತಾನೆ ಗುರುಕುಲವಾಸವನ್ನು ಬಿಟ್ಟ ಯುವಕನಾಗಿರಬೇಕು ; ತನ್ನನ್ನು ನೋಡಿ ಮಹಾರಾಜರು ನಡೆನುಡಿಗಳನ್ನೂ ಲೋಕವ್ಯವಹಾರಗಳನ್ನೂ ಕಲಿತುಕೊಳ್ಳುವಂತೆ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು ; ವಿದ್ಯಾಭ್ಯಾಸವು ಪೂರ್ಣವಾಗುವವರೆಗೂ ಪದೇಪದೇ ವಿಲಾಯತಿಗೆ ಹೋಗದೆ ಇಲ್ಲಿಯೇ ಬಹುದಿನ ನಿಲ್ಲತಕ್ಕವನಾಗಿರಬೇಕು" ಎಂಬುದಾಗಿ ಇಂಡಿಯಾ ಸರಕಾರಕ್ಕೆ ಸೂಚಿಸಿದರು. ಆದರೆ ಇಂಗ್ಲಿಷ್ ಸರಕಾರದವರು ಬೇರೆ ಅಭಿಪ್ರಾಯಪಟ್ಟು, "ಮಕ್ಕಳ ಎಳೆಯ ಮನಸ್ಸನ್ನು ತಿದ್ದಿ ಪೋಷಿಸಿ ಸರಿಯಾದ ಮಾರ್ಗದಲ್ಲಿ ಶಿಕ್ಷಣ ಮಾಡುವುದಕ್ಕೆ ಇಂಗ್ಲಿಷ್ ವನಿತೆಯಷ್ಟು ಸಾಮರ್ಥ್ಯವು ಮತ್ತಾರಿಗೂ ಇರುವುದಿಲ್ಲ. ಬಾಲ್ಯ ವಿದ್ಯಾಭ್ಯಾಸವು ಮುಗಿದಮೇಲೆ ಸಾಂಡರ್ಸ್ ಸಾಹೇಬರು ಸೂಚಿಸಿದಂತೆಯೇ ಇಂಗ್ಲಿಷ್ ಯೂನಿವರ್ಸಿಟಿಯ ಪಂಡಿತನ ಕೈಕೆಳಗೆ ವಿದ್ಯಾಭ್ಯಾಸವನ್ನು ಮಾಡಿಸಬಹುದು" ಎಂದು ಅಭಿಪ್ರಾಯಪಟ್ಟರು. ಈ ಎರಡು ಅಭಿಪ್ರಾಯಗಳೂ ನೆರವೇರುವುದಕ್ಕಾಗಿ ಕಡೆಗೆ ಇಂಡಿಯಾ ಸರಕಾರದವರು ಯೋಗ್ಯಳೂ ಸತ್ಕುಲಪ್ರಸೂತೆಯೂ ಆದ ಪತ್ನಿಯನ್ನು ಪಡೆದಿರುವ ಒಬ್ಬ ಸಂಭಾವಿತನನ್ನು ಮಹಾರಾಜರಿಗೆ ವಿದ್ಯಾಗುರುವನ್ನಾಗಿ ನೇಮಿಸಬೇಕೆಂದು ಆಗ ಸ್ಟೇಟ್ ಸೆಕ್ರೆಟರಿಯವರಾಗಿದ್ದ ಸರ್ ಸ್ಟ್ಯಾಫರ್ಡ್ ನಾರ್ತ್‌ಕೋಟ್ ಅವರಿಗೆ ತಿಳಿಸಿದರು. ಅವರು ಕೃಷ್ಣರಾಜ ಒಡೆಯರವರ ಇಷ್ಟಾರ್ಥವನ್ನೇ ಅನುಸರಿಸಿ ಬೆಂಗಳೂರು ಡಿವಿಜನ್ ಸೂಪರಿಂಟೆಂಡೆಂಟರಾಗಿದ್ದ ಕರ್ನಲ್ ಗ್ರೆಗೊರಿ ಹೇನ್ಸ್ ಸಾಹೇಬರನ್ನೇ ಮಹಾರಾಜರ ಮೊದಲನೆಯ ವಿದ್ಯಾಗುರುವನ್ನಾಗಿ ನಿಯಮಿಸಿದರು.

ಇಂಡಿಯಾ ಸರಕಾರದವರು ಗ್ರೆಗೊರಿ ಹೇನ್ಸ್ ಸಾಹೇಬರನ್ನು ಕೆಲಸಕ್ಕೆ ನೇಮಿಸುವಾಗ ಅವರೊಡನೆ ಹೇಳಿದ್ದೇನೆಂದರೆ : "ನೀವು ನಿಮ್ಮ ಕಾಲವನ್ನು ರಾಜತಂತ್ರದಲ್ಲಿ ಸ್ವಲ್ಪವೂ ವಿನಿಯೋಗಿಸದೆ, ಮಹಾರಾಜರ ವಿದ್ಯಾಭ್ಯಾಸದಲ್ಲಿಯೂ ಅವರ ನಡೆನುಡಿ

ಗಳನ್ನು ಸರಿಯಾದ ಕ್ರಮದಲ್ಲಿ ತಿದ್ದಿ ಅಭಿವೃದ್ಧಿ ಪಡಿಸುವುದರಲ್ಲಿಯೂ ವಿನಿಯೋಗಿಸ
ಬೇಕು. ಮಹಾರಾಜರಿಗೆ ಇಂಗ್ಲಿಷ್ ಭಾಷೆಯಲ್ಲಿಯೂ ಮೈಸೂರು ದೇಶಭಾಷೆ
ಯಲ್ಲಿಯೂ ಕೂಲಂಕಷವಾದ ಜ್ಞಾನವನ್ನುಂಟುಮಾಡಬೇಕು. ದೇಹಾನುಗುಣವಾಗಿ
ಅಂಗಸಾಧನೆಯನ್ನು ಮಾಡಿಸಬೇಕು. ನಡತೆ ಮುಂತಾದುವನ್ನು ಚೆನ್ನಾಗಿ ತಿದ್ದ
ಬೇಕು. ಅವರಿಗೆ ಸರಿಯಾದ ವಯಸ್ಸು ಬಂದಾಗ ಈಜುವುದು, ಕುದುರೆಯ ಸವಾರಿ
ಮಾಡುವುದು, ಕ್ರಿಕೆಟ್ ಆಡುವುದು, ತುಪಾಕಿಯನ್ನು ಹಾರಿಸುವುದು—ಇವೇ ಮುಂತಾ
ದುವುಗಳನ್ನು ಅಭ್ಯಾಸ ಮಾಡಿಸಬೇಕು. ಅವರ ದೇಹಕ್ಕೂ ವಯಸ್ಸಿಗೂ ಪದವಿಗೂ
ಅನುಗುಣವಾದ ಮತ್ತು ದೇಹದಾರ್ಢ್ಯವನ್ನು ಹೆಚ್ಚಿಸುವ ಅಂಗಸಾಧನೆಗೆ ತಕ್ಕಷ್ಟು
ಪ್ರೋತ್ಸಾಹವನ್ನು ಕೊಡಬೇಕು. ಪ್ರಾಮಾಣಿಕತೆ, ಧರ್ಮಬುದ್ಧಿ ಮುಂತಾದುವು
ಗಳನ್ನು ಅವರಿಗೆ ಕಲಿಸಬೇಕು. ಆದರೆ ಅವರ ಮತಸಂಬಂಧವಾದ ದೇವತಾಪೂಜೆ
ಮುಂತಾದ ವಿಷಯಗಳಲ್ಲಿ ಸ್ವಲ್ಪವೂ ಅಡ್ಡಿ ಮಾಡಕೂಡದು. ವಿದ್ಯಾಭ್ಯಾಸ ವಿಷಯದಲ್ಲಿ
ಸಾಧಾರಣ ವಿಷಯಗಳನ್ನು ಛೀಫ್ ಕಮಿಷನರೊಡನೆ ಆಲೋಚಿಸಿ ನಡೆಯಿಸಬಹುದು ”
ಎಂದು ಕಟ್ಟಳೆ ಮಾಡಿದ್ದರು. ಪೇನ್ಸ್ ಸಾಹೇಬರು ಅದೇಪ್ರಕಾರ ಒಪ್ಪಿಕೊಂಡು
ಮಹಾರಾಜರ ವಿದ್ಯಾಭ್ಯಾಸವನ್ನು ನಡೆಯಿಸುತ್ತಿದ್ದು, ಒಂದು ವರುಷದೊಳಗೆಯೇ
ತಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ಇಂಗ್ಲೆಂಡಿಗೆ ಹೊರಟುಹೋದರು. ಅವರ
ಸ್ಥಾನಕ್ಕೆ ಅದೇ ವರುಷದ ಜೂಲೈ ತಿಂಗಳಲ್ಲಿ, ಹಿಂದೂಸ್ಥಾನದ ಪ್ರಸಿದ್ಧ ಚರಿತ್ರಕಾರ
ರಲ್ಲೊಬ್ಬರಾದ ಕರ್ನಲ್ ಜಿ. ಬಿ. ಮ್ಯಾಲಿಸನ್ ಸಾಹೇಬರನ್ನು ನೇಮಿಸಿದರು.

ಆಗ ಮಹಾರಾಜರಿಗೆ ಏಳುವರುಷ ವಯಸ್ಸು. ಅವರು ಏಕಾಂಗಿಯಾಗಿ ವಿದ್ಯಾ
ಭ್ಯಾಸವನ್ನು ಮಾಡುವುದಕ್ಕಿಂತ ಅನೇಕ ಮಂದಿ ಸಮವಯಸ್ಕರೊಡನೆ ಸೇರಿ
ವಿದ್ಯೆಯನ್ನು ಕಲಿಯುವುದರಿಂದ ಹೆಚ್ಚು ಪ್ರಯೋಜನವುಂಟೆಂದು ಕರ್ನಲ್ ಮ್ಯಾಲಿಸನ್
ಅವರು ತಿಳಿದು, ರಂಗಾಚಾರ್ಯರೊಡನೆ ಆಲೋಚನೆಮಾಡಿ, ಮೈಸೂರು ಖಾಸ ಬಂಗಲೆ
ಯಲ್ಲಿ 'ರಾಯಲ್ ಸ್ಕೂಲ್' ಎಂಬ ಹೆಸರಿನಿಂದ ಒಂದು ರಾಜಕುಮಾರ ವಿದ್ಯಾ
ಶಾಲೆಯನ್ನು ಏರ್ಪಡಿಸಿದರು. ಅದಕ್ಕೆ ಅನೇಕ ಅರಸುಮಕ್ಕಳನ್ನೂ ದೊಡ್ಡದೊಡ್ಡ
ಮನೆತನಗಳಿಗೆ ಸೇರಿದ ಹಿಂದೂ ಮಹಮ್ಮದೀಯರ ಮಕ್ಕಳನ್ನೂ ಸೇರಿಸಿದರು.
ಇದಲ್ಲದೆ, ಪ್ರಖ್ಯಾತರಾದ ಜಯರಾಮರಾಯರು, ವಿ. ಪಿ. ಮಾಧವರಾಯರು, ಅಂಬಿಲ್
ನರಸಿಂಹಯ್ಯಂಗಾರ್ಯರು ಮುಂತಾದವರನ್ನು ಇಂಗ್ಲಿಷ್ ಸಹಾಯಕೋಪಾಧ್ಯಾಯ
ರನ್ನಾಗಿಯೂ, ಬಸವಪ್ಪಶಾಸ್ತ್ರಿಗಳು, ಗರಳಪುರಿ ಶಾಸ್ತ್ರಿಗಳು, ಮೀರ್ ಅಬ್ಬಾಸ್
ಹುಸೇನ್ ಎಂಬವರುಗಳನ್ನು ಕನ್ನಡ ಸಂಸ್ಕೃತ ಹಿಂದೂಸ್ಥಾನಿ ಭಾಷೆಗಳ ಬೋಧಕ
ರನ್ನಾಗಿಯೂ ನಿಯಮಿಸಿದರು. ಮಹಾರಾಜರು ತಮ್ಮ ವಯಸ್ಕರೊಡನೆ ವಿದ್ಯಾ
ಭ್ಯಾಸವನ್ನು ಮಾಡುತ್ತ, ಕ್ರಿಕೆಟ್, ಅಂಗಸಾಧನೆ, ಕುಸ್ತಿ, ಕುದುರೆಯ ಸವಾರಿ
ಮುಂತಾದುವನ್ನು ಕಲಿಯುತ್ತ ತಾವು ರಾಜರು, ಇತರರು ಸಾಮಾನ್ಯರು ಎಂಬ
ಅಹಂಭಾವವಿಲ್ಲದೆ, ವಿದ್ಯಾಗುರುಗಳೆಲ್ಲರನ್ನೂ ಪರಮ ವಿಶ್ವಾಸದಿಂದಲೂ ಭಯಭಕ್ತಿ

ಗಳಿಂದಲೂ ಪುರಸ್ಕರಿಸುತ್ತ, ಮಿತ್ರಮಂಡಲಿಯೊಡನೆ ಸಮಭಾವದಿಂದ ಸೇರಿ, ವಿರಾಮ ಕಾಲದಲ್ಲಿ ನಾನಾವಿಧವಾದ ಆಟಗಳನ್ನು ಆಡುತ್ತ ಸಾಮಾನ್ಯಜನರ ಮಕ್ಕಳಂತೆಯೇ ಬೆಳೆದು ಅನೇಕ ಸದ್ಗುಣಗಳಿಗೆ ತವರುಮನೆಯಾದರು. ಅವರ ಸಂಗಡ ಓದುತ್ತಿದ್ದವರಲ್ಲನೇಕರು ಈಗಲೂ ಮೈಸೂರು ಸಂಸ್ಥಾನದ ದೊಡ್ಡದೊಡ್ಡ ಅಧಿಕಾರಸ್ಥಾನಗಳನ್ನು ಅಲಂಕರಿಸಿರುತ್ತಾರೆ. ಆಗ ಮಹಾರಾಜರು ವಯಸ್ಸಿನಲ್ಲಿ ತಮಗಿಂತ ಚಿಕ್ಕವರಾಗಿದ್ದರೂ, ಅವರಲ್ಲಿದ್ದ ಉತ್ಸಾಹವನ್ನೂ ಆದರವನ್ನೂ ಸ್ಪರ್ಧೆ ಮೊದಲಾದ ಗುಣಗಳನ್ನೂ ನೆನಸಿಕೊಂಡು ಅವರು ಈಗಲೂ ಆಶ್ಚರ್ಯಪಡುತ್ತಿರುವರು.

ಬಾಲ್ಯದಲ್ಲಿ ಮಕ್ಕಳಿಗೆ ಹೊಸದಾಗಿರುವ ಪದಾರ್ಥಗಳನ್ನು ನೋಡಬೇಕೆಂತಲೂ, ನೋಡಿದ ಪದಾರ್ಥಗಳ ಸಂಗತಿಯನ್ನು ಸ್ಪಷ್ಟವಾಗಿ ತಿಳಿಯಬೇಕೆಂತಲೂ ಕುತೂಹಲ ವಿರುತ್ತದೆ. ಅದನ್ನು ಸರಿಯಾದ ದಾರಿಯಲ್ಲಿ ತಿದ್ದುವುದೂ, ಅಕ್ಕರೆಯೊಡನೆ ಫಲ



(ಖಾಸ್ ಬಂಗಲೆ)—ಶ್ರೀಮನ್ಮಹಾರಾಜರವರ ರಾಯಲ್ ಸ್ಕೂಲ್.

ಸಿದ್ಧಿಪರ್ಯಂತ ಕೆಲಸವನ್ನು ಬಿಡದೆ ಮಾಡಬೇಕೆಂಬ ಸ್ಥಿರಮನಸ್ಸು ಹುಟ್ಟುವ ಹಾಗೆ ಮಾಡುವದೂ ಅವರ ಪುರೋಭಿವೃದ್ಧಿಯನ್ನು ಬಯಸುವ ಪೋಷಕರ ಮುಖ್ಯ ಕರ್ತವ್ಯ ವಾಗಿದೆ. ಈಗ ಚಿಕ್ಕವರಾಗಿರುವವರೇ ಮುಂದೆ ದೊಡ್ಡವರಾಗಿ, ತಮ್ಮ ತಮ್ಮ ಯೋಗ್ಯತಾನುಗುಣವಾದ ಅಧಿಕಾರವನ್ನು ಪಡೆಯುವರು. ಅವರ ವಿದ್ಯಾಭ್ಯಾಸವು ಯಾವರೀತಿಯಲ್ಲಿ ನಡೆದು, ಅವರ ಮನೋಧರ್ಮವು ಯಾವ ಮಾರ್ಗದಲ್ಲಿ ಪ್ರವರ್ತಿಸುವುದೋ, ಆ ಮಾರ್ಗದಲ್ಲಿಯೇ ಅವರ ಅಧಿಕಾರಕ್ಕೊಳಪಟ್ಟ ಜನಗಳ ಮುಂದಿನ ಸ್ಥಿತಿಯೂ ಪರಿಣಮಿಸುವುದು. ಆದುದರಿಂದ, ತತ್ತದ್ದೇಶದ ಹಾನಿ ವೃದ್ಧಿಗಳು ಪ್ರಕೃತದಲ್ಲಿ ಚಿಕ್ಕವರಾಗಿರುವವರನ್ನು ತಿದ್ದುವವರ ಕೈಯಲ್ಲಿದೆಯೆಂದೇ ಹೇಳಬೇಕು.

ವಿದ್ಯೆಯೆಂಬುದು ಬರಿಯ ಛಾಯಾಮಾತ್ರವಲ್ಲ. ಅದು ಕಷ್ಟಪಟ್ಟು ಗಳಿಸಿದವನಿಗೆ ಮಾತ್ರ ಲಭಿಸುವ ಸುವರ್ಣದ ಖನಿಯು. ವಿದ್ಯೆಯು ಪ್ರಜೆಗಳಿಗೆ ಜೀವನಾರ್ಥವಾಗಿಯೂ ಪ್ರಭುಗಳಿಗೆ ರಾಜ್ಯಪರಿಪಾಲನಾರ್ಥವಾಗಿಯೂ ಉಪಯುಕ್ತವಾದುದು. ವಿದ್ಯಾಭ್ಯಾಸವು ಪ್ರಜೆಗಳಿಗೆ ಹೇಗೂ ಪ್ರಭುಗಳಿಗೂ ಹಾಗೆಯೇ ಅವಶ್ಯಕವಾದುದು. ಅದೇಪ್ರಕಾರ ಮಹಾರಾಜರ ವಿದ್ಯಾಭ್ಯಾಸವು ಸಮರ್ಪಕವಾಗಿ ನಡೆಯುತ್ತಿದ್ದರೂ, ಅವರ ಗುಣವನ್ನೂ ನಡತೆಯನ್ನೂ ಸಮರ್ಪಕವಾಗಿರುವಂತೆ ತಿದ್ದಿ, ಅವರಲ್ಲಿ ನೈಜಾನುಭವ, ನ್ಯಾಯಾನ್ಯಾಯ ವಿಚಾರ, ಧೈರ್ಯಸ್ಥೈರ್ಯಗಳು, ಕಷ್ಟಸುಖಗಳ ಸಹನ, ಸಮಾಜಗಳಲ್ಲಿ ನಡೆಯಬೇಕಾದ ರೀತಿನೀತಿಗಳ ಅಭ್ಯಾಸ, ಮುಖ್ಯವಾಗಿ ಜನಗಳ ಶೀಲಸ್ವಭಾವವೇನೆಂದು ತಿಳಿದು ನಡೆದುಕೊಳ್ಳುವ ಪರೇಂಗಿತಜ್ಞಾನ, ಕಾಲದ ಬೆಲೆಯನ್ನು ತಿಳಿದು ಆಯಾ ಕಾಲದಲ್ಲಿ ಆಯಾ ಕೆಲಸವನ್ನು ತಪ್ಪದೆ ಮಾಡುವ ರೂಢಿ—ಇವೇ ಮುಂತಾದ ಸತ್ಪ್ರವರ್ತನಗಳನ್ನು ಕಲಿಸುವುದರಲ್ಲಿ ಕರ್ನಲ್ ಮ್ಯಾಲಿಸನ್ ಅವರು ಎಷ್ಟುಮಟ್ಟಿನ ಪ್ರಯತ್ನಗಳನ್ನು ನಡಿಸಿದರೆಂಬುದು ಈ ಕೆಳಗೆ ಸೂಚಿಸಿರುವ ಕೆಲವು ಅಂಶಗಳಿಂದ ವ್ಯಕ್ತವಾಗುವುದು.—

ಒಂದು ದಿನ ಮಹಾರಾಜರು ಪಾಠಕ್ಕೆ ಬರುವುದು ಸ್ವಲ್ಪ ಸಾವಕಾಶವಾಯಿತು. ಆಗ ಮ್ಯಾಲಿಸನ್ ಅವರು ತಮ್ಮ ಕೊಟ್ಟಡಿಯ ಬಾಗಿಲನ್ನು ಮುಚ್ಚಿ ಕುಳಿತುಕೊಂಡಿದ್ದರು. ಮಹಾರಾಜರು ಬಂದು ಬಾಗಿಲು ಮುಚ್ಚಿರುವುದನ್ನು ನೋಡಿ ಹೊರಗೆಯೇ ನಿಂತರು. ಅಲ್ಲಿ ಆವರಣವಿಲ್ಲದುದರಿಂದ ಅವರು ಬಿಸಿಲಿನಲ್ಲಿಯೇ ನಿಲ್ಲಬೇಕಾಗಿ ಬಂದಿತು. ಇದನ್ನು ಮ್ಯಾಲಿಸನ್ ಅವರು ಕಂಡರೂ ಕಾಣದವರಂತಿದ್ದು ಸ್ವಲ್ಪ ಹೊತ್ತಿನ ಮೇಲೆ ಬಾಗಿಲನ್ನು ತೆರೆದು, "ಯಾವಾಗ ಬಂದಿರಿ? ನಾನು ಕ್ಲುಪ್ತಕಾಲದವರೆಗೂ ನಿಮಗಾಗಿ ಕಾದಿದ್ದೆನು. ನೀವು ಆ ವೇಳೆಗೆ ಸರಿಯಾಗಿ ಬಾರದುದರಿಂದ ಬಾಗಿಲನ್ನು ಮುಚ್ಚಿಕೊಂಡೆನು. ಇನ್ನುಮೇಲೆ ನೀವು ಹಾಗೆ ಮಾಡಬಾರದು" ಎಂದು ಹೇಳಿ ಎಚ್ಚರಿಸಿದರು.

ಮತ್ತೊಂದು ದಿವಸ ಶ್ರೀಮನ್ಮಹಾರಾಜರವರ ದೊಡ್ಡಣ್ಣಂದಿರಾದ ಪ್ರಿನ್ಸ್ ಗೋಪಾಲರಾಜ ಅರಸಿನವರ ಮದುವೆಯು ಅರಮನೆಯಲ್ಲಿ ನಡೆಯುತ್ತಿದ್ದುದರಿಂದ, ಮಹಾರಾಜರು ಕಾಲಕ್ಕೆ ಸರಿಯಾಗಿ ತಮ್ಮ ಪಾಠಕ್ಕೆ ಹೋಗದೆ ಆ ಉತ್ಸವವನ್ನು ನೋಡುವ ಸಂಭ್ರಮದಲ್ಲಿ ಪಾಠಶಾಲೆಯ ಹೊತ್ತನ್ನು ಮರೆತರು. ಕಾಲನಿಯಮಾನುಸಾರವಾಗಿ ಕರ್ತವ್ಯಗಳನ್ನು ಮಾಡಿಯೇ ತೀರಬೇಕೆಂಬ ವಿಷಯವು ಮಹಾರಾಜರ ಎಳೆಯ ಮನಸ್ಸಿನಲ್ಲಿ ಚೆನ್ನಾಗಿ ಊರಬೇಕೆಂಬ ಅಭಿಪ್ರಾಯದಿಂದ, ಹಾಗೆ ಮಾಡುವುದಕ್ಕೆ ಅದೇ ತಕ್ಕಸಮಯವೆಂದು ತಿಳಿದು, ಕರ್ನಲ್ ಮ್ಯಾಲಿಸನ್ ಅವರು ತಾವೇ ಅರಮನೆಗೆ ದಯಮಾಡಿ, ವಿವಾಹಮಂಟಪವನ್ನು ಹೊಕ್ಕು, ಮಹಾರಾಜರನ್ನು ಕೈಹಿಡಿದು ಕರೆತಂದು ಗಾಡಿಯಮೇಲೆ ಕುಳ್ಳಿರಿಸಿಕೊಂಡು ಪಾಠಶಾಲೆಗೆ ಕರೆದುಕೊಂಡು ಹೋದರು. ಇದನ್ನು ಮಹಾರಾಜರು ತಮ್ಮ ಜೀವಾವಧಿಯೂ ಜ್ಞಾಪಕದಲ್ಲಿಟ್ಟುಕೊಂಡಿದ್ದು ತಮಗೆ ಎಲ್ಲಿಯಾದರೂ ಅವಸರದ ಕೆಲಸವಿದ್ದಾಗ, ಮೈಯಲ್ಲಿ ಆಲಸ್ಯವಾಗಿದ್ದರೂ ಅಥವಾ

ಪುತ್ರಾವ ಕಾರಣದಿಂದಲೋ ಅರಮನೆಯಲ್ಲಿ ನಿಲ್ಲಬೇಕಾಗಿ ಬಂದರೂ, ಕರ್ನಲ್ ಮ್ಯಾಲಿಸನ್ ಅವರ ಮಾತನ್ನು ಜ್ಞಾಪಕಕ್ಕೆ ತಂದುಕೊಳ್ಳುತ್ತಿದ್ದರು.

ಸಾಮಾನ್ಯವಾಗಿ ನಮ್ಮ ದೇಶದ ರಾಜರು ತಮ್ಮ ಮಕ್ಕಳನ್ನು ಅಂತಃಪುರದಲ್ಲಿಟ್ಟುಕೊಂಡು ಪೋಷಿಸುತ್ತಾರೆ. ಇದರಿಂದ ಆ ಮಕ್ಕಳು ಪ್ರಪಂಚ ಜ್ಞಾನವಿಲ್ಲದೆ, ನ್ಯಾಯಾನ್ಯಾಯಗಳನ್ನೂ ಕಷ್ಟಸುಖಗಳನ್ನೂ ಧೈರ್ಯಸ್ಥೈರ್ಯಗಳನ್ನೂ ಸಮಾಜಗಳಲ್ಲಿ ನಡೆಯಬೇಕಾದ ರೀತಿ ನೀತಿಗಳನ್ನೂ ತಿಳಿಯದೆ, ಮುಖ್ಯವಾಗಿ ಜನಗಳ ಶೀಲಸ್ವಭಾವವೇನೆಂಬುದನ್ನು ಸ್ವಲ್ಪವೂ ಅರಿಯದೆ, ಅಂತಃಪುರದ ಅರಗಿಣಿಗಳಾಗಿ ಬೆಳೆಯುತ್ತಾರೆ. ಈ ಪದ್ಧತಿಯನ್ನು ತಪ್ಪಿಸಬೇಕಾದುದು ಮ್ಯಾಲಿಸನ್ ಅವರಿಗೆ ಒಂದು ದೊಡ್ಡ ಕೆಲಸವಾಗಿದ್ದಿತು. ನಮ್ಮಲ್ಲಿ ದೇಹಶ್ರಮ ಸಾಧ್ಯವಾದ ಕೆಲಸಗಳನ್ನು ಮಾಡುವುದು ಅಪಮಾನಕರವೆಂದು ತಿಳಿದಿರುವರು. ಹೀಗಿರುವಾಗ ಮಹಾರಾಜರುಗಳು ತಮ್ಮ ಮಕ್ಕಳನ್ನು ಸಾಮಾನ್ಯ ಜನಗಳ ಜೊತೆಯಲ್ಲಿ ಆಟವಾಡುವುದಕ್ಕೆ ಕಳುಹಿಸುವರೆ? ಅಂತಃಪುರದಲ್ಲಿಯೇ ಸಾಧಕಗಳನ್ನು ಕಲಿಸೋಣವೆಂದರೆ, ಆಗಲೂ ಕೂಡ ಸೇವಕ ಜನಗಳ ಸಹವಾಸವು ಬೇಕಾಗುವುದು. ಇದರಿಂದ ದೊರೆಗಳಲ್ಲಿ ಸೇವಕರಿಗೆ ಗೌರವ ತಪ್ಪಿಹೋಗುವುದೆಂದು ಭಾವಿಸುತ್ತಿದ್ದರು. ಈ ಅಭಿಪ್ರಾಯಗಳಿಗೆಲ್ಲ ವಿರೋಧವಾಗಿ ಪ್ರವರ್ತಿಸಿ ಮಹಾರಾಜರನ್ನು ಸಾಮಾನ್ಯರಾದ ಜನಗಳ ಜೊತೆಯಲ್ಲಿ ಸೇರಿಸಿ ಆಟಪಾಟಗಳನ್ನು ಕಲಿಸುವುದು ಕರ್ನಲ್ ಮ್ಯಾಲಿಸನ್ ಅವರಿಗೆ ವಿಶೇಷ ಶ್ರಮವನ್ನು ಕೊಟ್ಟಿತು. ಅದಕ್ಕಾಗಿ ಇಂಡಿಯಾದೇಶದ ಸರ್ವಜನಗಳೂ ಕರ್ನಲ್ ಮ್ಯಾಲಿಸನ್ ಅವರನ್ನು ಬಹಳವಾಗಿ ಕೊಂಡಾಡಬೇಕಾಗಿದೆ. ಏಕೆಂದರೆ: ಚಾಮರಾಜೇಂದ್ರ ಒಡೆಯರವರ ಶಿಕ್ಷಣ ಪದ್ಧತಿಯನ್ನೇ ಅನುಸರಿಸಿ, ಈಗ ಸರ್ವತ್ರ ಇಂಡಿಯಾದೇಶದ ಅರಸುಮಕ್ಕಳುಗಳೆಲ್ಲ ವಿದ್ಯಾಭ್ಯಾಸವನ್ನು ಹೊಂದುತ್ತಿರುವರು.

"ದೇಶಾಟನಂ ಪಂಡಿತಬಾಷಣಂ ಚ" ಎಂಬಂತೆ ದೇಶಸಂಚಾರ ಮಾಡುವುದೂ ಪಂಡಿತರೊಡನೆ ಸಂಭಾಷಿಸುವುದೂ ವಿದ್ಯಾಭ್ಯಾಸವನ್ನು ಮಾಡುತ್ತಿರುವವರಿಗೆ ಅತ್ಯಾವಶ್ಯಕವಾದುವುಗಳೆಂದಾಲೋಚಿಸಿ, ಕರ್ನಲ್ ಮ್ಯಾಲಿಸನ್ ಅವರು ಮಹಾರಾಜರನ್ನು ನೀಲಗಿರಿ ಮುಂತಾದ ಸ್ಥಳಗಳಿಗೆ ಕರೆದುಕೊಂಡು ಹೋಗಬೇಕೆಂದು ನಿಶ್ಚಯಿಸಿದರು. ಆಗ ಮಹಾರಾಜರಿಗೆ ಒಂಬತ್ತನೆಯ ವರುಷವು ನಡೆಯುತ್ತಿದ್ದಿತು. ಅದುವರೆಗೆ ಎಂದೂ ತಾಯನ್ನೂ ಅಣ್ಣ ತಮ್ಮಂದಿರನ್ನೂ ಬಿಟ್ಟಿದ್ದವರಲ್ಲ. ಆದರೂ ಮನಸ್ಸಿಗೆ ಸ್ವಲ್ಪವೂ ಕಳೆಕಳೆಯನ್ನುಂಟುಮಾಡಿಕೊಳ್ಳದೆ, ಊರುಬಿಟ್ಟು ಅನ್ಯದೇಶಕ್ಕೆ ಹೋಗುವುದರಲ್ಲಿ ಬಹಳ ಉತ್ಸಾಹವನ್ನು ತೋರ್ಪಡಿಸಿಕೊಂಡರು. ತಾಯಿಯವರು ಒಪ್ಪಿಕೊಳ್ಳದಿದ್ದರೂ ಅವರನ್ನು ಹೇಗಾದರೂ ಒಪ್ಪಿಸಬೇಕೆಂದು ದೃಢಮನಸ್ಕರಾಗಿ, ಊರು ಬಿಟ್ಟು ಹೊರಡುವುದಕ್ಕೆ ಮುಂಚೆ, ತಾಯಿಯ ಸಂದರ್ಶನ ಮಾಡುವುದಕ್ಕಾಗಿ ಅಂತಃಪುರಕ್ಕೆ ಹೋದರು. ಮೊದಲೇ ಈ ವಿಷಯವನ್ನು ತಿಳಿದ ಮಹಾರಾಜ್ಞಿಯವರುಗಳು ತಮ್ಮ ಪುತ್ರರು ಸಮೀಪದಲ್ಲಿರದೆ ನೀಲಗಿರಿಗೆ ಹೋಗುತ್ತಾರೆಂದು ದುಃಖಿಸುವವರಾಗಿ,

ಏನಾದರೂ ಮಾಡಿ ಪರಸ್ಥಳಕ್ಕೆ ಹೋಗುವುದನ್ನು ತಪ್ಪಿಸಬೇಕೆಂದು ಆಲೋಚಿಸು ತ್ತಿದ್ದರು. ಈ ರೀತಿಯಲ್ಲಿ ಪರಿತಪಿಸುತ್ತಿದ್ದ ಮಹಾರಾಜ್ಞಿಯರುಗಳು ಚಿಕ್ಕ ಮಹಾರಾಜ ರನ್ನು ಕಂಡಕೂಡಲೆ ನಿಧಿಯನ್ನು ಕಂಡ ಬಡವನಂತೆ ಓಡಿಬಂದು ಎತ್ತಿ ತೊಡೆಯಮೇಲೆ ಕುಳ್ಳಿರಿಸಿಕೊಂಡು, "ಅಯ್ಯಾಜೀ! ನೀವು ನೀಲಗಿರಿಗೆ ಒಬ್ಬರೇ ಹೋಗಬೇಡಿರಿ; ಹೋಗುವುದಕ್ಕೆ ಒಪ್ಪಿಕೊಳ್ಳಲೂ ಬೇಡಿರಿ; ಯಾವಾಗಲೂ ನಮ್ಮ ಕಣ್ಣ ಮುಂದಿರಿ. ನಿಮ್ಮನ್ನು ಬಿಟ್ಟು ನಾವು ಕ್ಷಣಕಾಲವೂ ಇರಲಾರೆವು" ಎಂದು ಹೇಳುತ್ತ ಕಣ್ಣಲ್ಲಿ ನೀರು ತುಂಬಿಕೊಂಡರು. ಪ್ರಾಯಶಃ ತಾಯಿಯು ಅತ್ತರೆ ಮಕ್ಕಳು ಅಳುವುದು ಸ್ವಭಾವ. ಆದುದರಿಂದ ಮಹಾರಾಜರು ಎಷ್ಟು ಧೀರರಾದರೂ ಅವರಿಗೆ ಕಣ್ಣಿನಲ್ಲಿ ನೀರು ತುಂಬಿತು. ಆದರೂ ಅದನ್ನು ಅತಿ ಕಷ್ಟದಿಂದ ತಡೆದುಕೊಂಡು, ನಗುನಗುತ್ತ "ಅಮ್ಮಯ್ಯಾ! ಇದೇನು ಹೀಗೆ ಹೇಳುತ್ತೀರಿ? ದೇಶಗಳನ್ನು ನೋಡಬೇಡವೆ? ಆಯಾ ಜನಗಳ ಸ್ಥಿತಿಗಳನ್ನು ತಿಳಿಯಬೇಡವೆ? ನಮ್ಮ ದೇಶದ ಜನಗಳ ಸ್ಥಿತಿಯು ನಮಗೆ ತಿಳಿಯಬೇಕಾದರೆ ಅಲ್ಲೆಲ್ಲ ಹೋಗಿ ನೋಡಿದರೆತಾನೆ ಗೊತ್ತಾಗುವುದು? ನಮ್ಮ ಸಾಹೇಬರು ಸ್ಕೂಲಿನಲ್ಲಿ ಚರಿತ್ರೆಯ ಪಾಠವನ್ನು ಹೇಳುವಾಗ, ಇಂಗ್ಲಿಷ್ ರಾಜರುಗಳಲ್ಲಿ ಅನೇಕರು ದೇಶಸಂಚಾರ ಮಾಡುವರೆಂತಲೂ, ಇಂತಹ ಪ್ರಯಾಣ ಗಳಿಂದ ಬಹಳ ಪ್ರಯೋಜನವುಂಟೆಂತಲೂ ನಿತ್ಯವೂ ಹೇಳುತ್ತಿದ್ದಾರೆ. ಇದಲ್ಲದೆ, ಈಗ ನೀಲಗಿರಿಯನ್ನು ನೋಡಬೇಕೆಂದು ನನಗೂ ಆಸೆ ಇದೆ. ನನ್ನನ್ನು ಕಳುಹಿಸಿ ಕೊಡಿರಿ, ಕೂಡಲೆ ಬಂದುಬಿಡುವೆನು" ಎಂದು ತಾಯಿಯನ್ನು ಸಮಾಧಾನಪಡಿಸಿ ಕೇಳಿಕೊಂಡರು.

ಮಹಾರಾಜರು ನೀಲಗಿರಿಗೆ ಪ್ರಯಾಣಮಾಡಿದ ಕಾಲದಲ್ಲಿ ನಡೆದ ಸಂಗತಿಯನ್ನು ಅವರ ಜೊತೆಯಲ್ಲಿಯೇ ಪ್ರಯಾಣಮಾಡಿದ ಒಬ್ಬಾನೊಬ್ಬ ವೃದ್ಧಸೇವಕನು ಹೀಗೆಂದು ಹೇಳುತ್ತಾನೆ. "ಚಾಮರಾಜೇಂದ್ರ ಒಡೆಯರವರು ಮೊತ್ತಮೊದಲು ನೀಲಗಿರಿಗೆ ಹೊರಟಾಗ ಅವರಿಗೆ ಸುಮಾರು ಒಂಬತ್ತು ವರುಷ ವಯಸ್ಸು. ಅವರು ರಾಜಧಾನಿ ಯನ್ನು ಬಿಟ್ಟು ಹೊರಗೆ ಹೊರಡುವುದಕ್ಕೆ ಇದೇ ಮೊದಲು. ಮ್ಯಾಲಿಸನ್ ಸಾಹೇಬರು ಮಹಾರಾಜರನ್ನು ಹಿಂದೆ ಬೇಸಗೆಯ ಕಾಲದಲ್ಲಿ ಕಮಿಷನರ್ ಕಬ್ಬನ್ ಸಾಹೇಬರೇ ಮೊದಲಾದವರು ವಿಹರಿಸುತ್ತಿದ್ದ ನಂದೀ ಬೆಟ್ಟಕ್ಕೆ ಕರೆದುಕೊಂಡು ಹೋಗಬೇಕೆಂದಿ ದ್ದರು. ನಂದೀ ಬೆಟ್ಟದಲ್ಲಿ ಮಹಾರಾಜರಿಗೆ ಯೂರೋಪಿಯನ್ ಸರದಾರರ ಪರಿಚಯವು ದೊರಕುವುದಿಲ್ಲವೆಂತಲೂ ಈಗ ಅಲ್ಲಿಗೆ ವಿಶೇಷವಾಗಿ ಯಾವ ಯೂರೋಪಿಯನರೂ ಹೋಗುವುದಿಲ್ಲವೆಂತಲೂ ತಿಳಿಯಬಂದಿತು. ಅನಂತರ, ನೀಲಗಿರಿಯ ಪಯಣವೇ ಮೇಲೆಂದು ನಿರ್ಧರಿಸಿ, ಈ ವಿಷಯವನ್ನು ಮಹಾರಾಜ್ಞಿಯರುಗಳಿಗೆ ಹೇಳಿ ಕಳುಹಿಸಿ ದರು. ಇದಕ್ಕೆ ಅವರು ಸಮ್ಮತಿಸಲಿಲ್ಲ. ಆದರೂ ಮ್ಯಾಲಿಸನ್ ಅವರು ಧೈರ್ಯಗೆಡದ ನಾಳೆಯ ದಿವಸವೇ ಮಹಾರಾಜರೊಡನೆ ನೀಲಗಿರಿಯನ್ನು ಸೇರಬೇಕೆಂದು ರಂಗಾ ಚಾರ್ಲುರಿಗೆ ಅಪ್ಪಣೆ ಮಾಡಿ ತಾವು ಮುಂದಿನ ದಿವಸವೇ ಅಲ್ಲಿಗೆ ಹೊರಟುಹೋದರು.

ಆಗ ಮಹಾರಾಜರ ಜೊತೆಯಲ್ಲಿ ಹೆಚ್ಚು ಜನರು ಯಾರೂ ಹೊರಡಲಿಲ್ಲ. ಮಹಾರಾಜರ ಇಬ್ಬರು ಸಹೋದರರೂ, ಬಕ್ಷಿ ಬನಪ್ಪಾಜಿ ಅರಸಿನವರೂ ರಂಗಾಚಾರ್ಯರೂ ಮಾತ್ರ ಬಂದಿದ್ದರು. ಅವರ ಮೈಗಾವಲವನಾಗಿದ್ದುದರಿಂದ ನಾನೂ ಹೋಗಿದ್ದೆನು. ಮಹಾರಾಜರು ನೀಲಗಿರಿಗೆ ಹೊರಟದಿನ ಮಾರ್ಗದಲ್ಲಿ ತಂಗುವುದಕ್ಕೆ ಯಾವ ಏರ್ಪಾಡೂ ನಡೆದಿರಲಿಲ್ಲ. ಪಾಯಿಗೆರೆ ಹತ್ತಿರವಿರುವ ಒಂದು ಮಂಟಪದಲ್ಲಿ ಮಹಾರಾಜರಿಗೆ ಮಧ್ಯಾಹ್ನದ ಫಲಾಹಾರವನ್ನು ಮಾತ್ರ ಮಾಡಿಸಿದ್ದರು. ಆಗ ದಾರಿಯು ಈಗಿನ ಹಾಗೆ ಇರಲಿಲ್ಲ. ಈ ಕಾಡುದಾರಿಯಲ್ಲಿ ಜನರು ಸಂಚಾರಮಾಡಲು ಈಗಲೂ ಹೆದರುವರು. ಇಂತಹ ದಾರಿಯಲ್ಲಿ ಪ್ರಯಾಣಮಾಡುತ್ತಿರುವಾಗಲೇ, ಕೃಷ್ಣಪಕ್ಷದ ಮುಂಗತ್ತಲೆಯು ಕವಿದುಕೊಂಡು ಜಡಿ ಮಳೆಗೆ ಪ್ರಾರಂಭವಾಯಿತು. ಗಾಡಿಯ ಚಕ್ರಗಳು ಅಡಿಗಡಿಗೂ ಹೂತುಕೊಳ್ಳುತ್ತಿದ್ದುವು. ಕೊನೆಗೆ ಗಾಢಾಂಧಕಾರವು ಕವಿಯಿತು. ಇಂತಹ ವಿಷಮಕಾಲದಲ್ಲಿ, ಹೋಗುತ್ತಿದ್ದ ನಮ್ಮ ಗಾಡಿಯು ಒಂದು ಹೊರತು ಮಾರ್ಗದಲ್ಲಿ ಮತ್ತಾರೂ ಇರಲಿಲ್ಲ. ನಾವು ಹೋಗುತ್ತಿರುವ ಮಾರ್ಗಕ್ಕೆ ಸ್ವಲ್ಪ ದೂರದಲ್ಲಿ ಕಾಡಾನೆಗಳು ಕೂಗಿಕೊಳ್ಳುತ್ತಿದ್ದುವು. ಹುಲಿಯು ಆರ್ಭಟಿಸುತ್ತಿದ್ದಿತು. ಅಡಿಗಡಿಗೂ ಗಾಳಿ ಬೀಸಿದಾಗಲೆಲ್ಲ ಅಡವಿಯ ಮರಗಳು ಒಂದಕ್ಕೊಂದು ಉಜ್ಜಿಕೊಂಡು ಭೀಕರ ಶಬ್ದವನ್ನು ಮಾಡುತ್ತಿದ್ದುವು. ಅಡವಿಯ ಇಂತಹ ಘೋರತರವಾದ ಗಹ್ವರವನ್ನೂ ಕರ್ಣಕಠೋರವಾಗಿ ಕೂಗುವ ಕ್ರೂರಮೃಗಗಳ ಆರವವನ್ನೂ ಕಂಡು ಮಹಾರಾಜರು ಭಯಪಡಬಹುದೆಂದು ನಮ್ಮೆಲ್ಲರಿಗೂ ದಿಗಿಲಾಗಿದ್ದಿತು. ಆದರೆ ಅವರು ಗೋಪಾಲರಾಜ ಅರಸಿನವರನ್ನು ಕುರಿತು, “ಅಣ್ಣಯ್ಯ, ಈ ಕತ್ತಲೆಯಲ್ಲಿ ಎಲ್ಲವೂ ನಿಶ್ಶಬ್ದವಾಗಿರಬೇಕಲ್ಲ! ಈ ಶಬ್ದಗಳೇನು?” ಎಂದು ಕೇಳಿದರು. ಅವರು, “ಮಹಾಸ್ವಾಮಿ! ಇದು ಅರಣ್ಯ. ಇಲ್ಲಿ ಹುಲಿ, ಆನೆ, ಕರಡಿ, ಚಿರತೆ ಮುಂತಾದುವು ಯಥೇಚ್ಛವಾಗಿರುವುವು. ಅವು ಶಬ್ದಮಾಡುತ್ತವೆ” ಎಂದು ಬಿನ್ನವಿಸಿದರು. ಮಹಾರಾಜರು, “ಈ ಕತ್ತಲೆಯಲ್ಲಿ ಅವುಗಳು ನಿದ್ರೆ ಮಾಡುವುದಿಲ್ಲವೆ?” ಎಂದು ಪುನಃ ಪ್ರಶ್ನೆ ಮಾಡಿದರು. ಬಕ್ಷಿ ಬನಪ್ಪಾಜಿ ಅರಸಿನವರು, “ಮಹಾಸ್ವಾಮಿ, ಈ ದುಷ್ಟಪ್ರಾಣಿಗಳೆಲ್ಲ ಪ್ರಾಯಶಃ ರಾತ್ರಿಯ ಹೊತ್ತೇ ಸಂಚಾರಮಾಡುವುವು. ರಾತ್ರಿಯ ಕಾಲದಲ್ಲಿ ಇವು ತಮ್ಮ ಆಹಾರಾರ್ಥವಾಗಿ ನೆರೆಹೊರೆಯ ಗ್ರಾಮಗಳನ್ನು ಹೊಕ್ಕು, ಕುರಿ, ದನ, ಮುಂತಾದುವುಗಳನ್ನು ಹಿಡಿದುಕೊಂಡು ಹೋಗುವುವು” ಎಂದು ಅರಿಕೆ ಮಾಡಿದರು. ಮಹಾರಾಜರು ಅವರನ್ನು ಕುರಿತು, “ಭಾವಾಜೀ, ಹಾಗಾದರೆ ನಾಳೆಯ ದಿನ ನಾವು ಬೇಟೆಗೆ ಹೋಗೋಣವೆ?” ಎಂದು ಅಪ್ಪಣೆ ಕೊಟ್ಟರು. ಹೀಗೆ ಮಾತಾಡುತ್ತ ಮಧ್ಯಾಹ್ನವೇ ತಲಪಬೇಕೆಂದು ನಿರೀಕ್ಷಿಸಿಕೊಂಡಿದ್ದ ಪಾಯಿಗೆರೆಯ ಸಾಲುಮಂಟಪವನ್ನು ರಾತ್ರಿ ಹತ್ತು ಗಂಟೆಯ ಹೊತ್ತಿಗೆ ಸೇರಿದುದಾಯಿತು. ಮೊದಲೇ ನಮ್ಮ ಸಾಮಾನುಗಳೆಲ್ಲವೂ ನೀಲಗಿರಿ ಬೆಟ್ಟಕ್ಕೆ ಸಾಗಿಹೋಗಿದ್ದುವು. ಆ ಮಂಟಪದಲ್ಲಿ ಬಿಡದಿಯವರಿಬ್ಬರು ಮಹಾರಾಜರ ಮಧ್ಯಾಹ್ನದ ಫಲಾಹಾರವನ್ನು ಸಿದ್ಧ

ಮಾಡಿಕೊಂಡು ಕಾದಿದ್ದರು. ಆ ಪದಾರ್ಥಗಳನ್ನು ಮಾತ್ರವೇ ಮಹಾರಾಜರು ಆರೋಗಣೆ ಮಾಡಿದರು. ನಾನು ಎಲ್ಲೋ ಸ್ವಲ್ಪವಾಗಿ ಸಿಕ್ಕಿದ ಒಣಹುಲ್ಲನ್ನು ತಂದು ಹಾಸಿ ಮಹಾರಾಜರಿಗೆ ಒಂದು ಹಾಸಿಗೆಯನ್ನು ಮಾಡಿಕೊಟ್ಟೆನು. ಅವೇಳೆಯಾಗಿದ್ದುದರಿಂದಲೂ ಹತ್ತಿರದಲ್ಲೆಲ್ಲೂ ಗ್ರಾಮಗಳಿಲ್ಲವೆಂಬುದಾಗಿ ತಿಳಿಯಬಂದುದರಿಂದಲೂ ಯಾವ ಏರ್ಪಾಡೂ ಮಾಡಲಾಗಲಿಲ್ಲ. ನಾನೂ ಬಸಪ್ಪಾಜಿ ಅರಸಿನವರೂ ಗೋಪಾಲರಾಜ ಅರಸಿನವರೂ ರಾತ್ರಿಯೆಲ್ಲ ಎಚ್ಚರವಾಗಿ ಕಾದಿದ್ದೆವು. ಮಾರನೆಯ ದಿನ ಪ್ರಾತಃಕಾಲ ಹೊರಟು, ಸೌಖ್ಯವಾಗಿ ನೀಲಗಿರಿಯನ್ನು ಸೇರಿದೆವು. ಅಲ್ಲಿ ಬ್ರಿಟಿಷ್ ಗವರ್ನ್ಮೆಂಟಿನವರು ಮಹಾರಾಜರವರ ಅನುಕೂಲತೆಗೆ ಬೇಕಾದ ಸಕಲ ಏರ್ಪಾಡುಗಳನ್ನೂ ಮಾಡಿದ್ದರು. ಒಂದು ವಾರದ ಮಟ್ಟಿಗೆ ಅಲ್ಲಿದ್ದು ಎಲ್ಲರೂ ತಿರುಗಿ ರಾಜಧಾನಿಗೆ ಬಂದು ಸೇರಿದೆವು.''

ಇಲ್ಲಿಂದಮುಂದೆ ಮಹಾರಾಜರಿಗೆ ವಿದ್ಯಾಭ್ಯಾಸದೊಂದಿಗೆ ವರುಷಕ್ಕೆ ಎರಡುಸಾರಿ ರಾಜಧಾನಿಯನ್ನು ಬಿಟ್ಟು ಹೊರಗೆ ಸಂಚಾರಮಾಡುವ ಸಂದರ್ಭವು ಒದಗುತ್ತಿದ್ದಿತು. ಬೇಸಗೆಯಲ್ಲಿ ನೀಲಗಿರಿಯ ಪಯಣವೂ, ಚಳಿಗಾಲದಲ್ಲಿ ಬೆಂಗಳೂರು ಪಯಣವೂ ಕ್ರಮವಾಗಿ ನಡೆಯುತ್ತಿದ್ದುವು. ಆದರೂ ಇದರಿಂದ ಅವರ ಪಾಠಕ್ರಮಕ್ಕೇನೂ ತೊಂದರೆಯಾಗುತ್ತಿರಲಿಲ್ಲ. ಆ ಕಾಲದಲ್ಲಿ ದಳವಾಯಿ ದೇವರಾಜ ಅರಸಿನವರೂ ಸುಬ್ರಹ್ಮಣ್ಯರಾಜ ಅರಸಿನವರೂ ಇನ್ನೂ ಒಬ್ಬಿಬ್ಬರು ಮಹಾರಾಜರ ಜೊತೆಯಲ್ಲಿ ಹೋಗುತ್ತಿದ್ದರು. ಉಳಿದ ವಿದ್ಯಾರ್ಥಿಗಳೆಲ್ಲರಿಗೂ ರಾಯಲ್ ಸ್ಕೂಲಿನಲ್ಲಿಯೇ ಪಾಠ ನಡೆಯುತ್ತಿದ್ದಿತು. ನೀಲಗಿರಿಗೆ ಹೋದಾಗಲೆಲ್ಲ ಮಹಾರಾಜರು ಮಹಾರಾಜರಂತೆ ಇರುತ್ತಿರಲಿಲ್ಲ. ಅವರು ಸಾಮಾನ್ಯರಾದ ಒಬ್ಬ ದೊಡ್ಡಮನುಷ್ಯರ ಮಕ್ಕಳಂತೆ ಯೂರೋಪಿಯನ್ ದೊಡ್ಡ ಮನುಷ್ಯರ ಸಂಗಡ ಕಲೆಯುತ್ತಿದ್ದರು. ನೀಲಗಿರಿಯ ವಾಸದಿಂದ ಮಹಾರಾಜರಿಗೆ ಮದರಾಸ್ ಗವರ್ನರವರೇ ಮೊದಲಾದ ಯೂರೋಪಿಯನರ ಪರಿಚಯವೂ ಸ್ನೇಹವೂ ಲಭಿಸುತ್ತಿದ್ದುದಲ್ಲದೆ, ಅವರ ನಡೆನುಡಿಗಳನ್ನೂ ಸದ್ಗುಣಗಳನ್ನೂ ಕಲಿಯಲು ಅವಕಾಶವೂ ಉಂಟಾಯಿತು. ಇದಲ್ಲದೆ, ಅಲ್ಲಿ ರಾಜಧಾನಿಯಲ್ಲಿದ್ದ ನಿರ್ಬಂಧಗಳೊಂದೂ ಇಲ್ಲದೆ, ಜನಗಳೊಡನೆ ಸಾಮಾನ್ಯವಾಗಿ ಕಲೆತು ಅವರ ಸುಖದುಃಖಗಳನ್ನೂ ಕಷ್ಟನಿಷ್ಠುರಗಳನ್ನೂ ತಿಳಿದುಕೊಂಡು ಯಥಾಯೋಗ್ಯವಾಗಿ ಪರೋಪಕಾರವನ್ನು ಮಾಡುವ ಸ್ವಭಾವವು ನೆಲೆಗೊಳ್ಳುವುದಕ್ಕೆ ಆಸ್ಪದವುಂಟಾಯಿತು.

ಇಷ್ಟರಲ್ಲಿ ಮಹಾರಾಜರಿಗೆ ಒಂಬತ್ತು ವರುಷಗಳು ತುಂಬಲು, ಅಂಗಿರಸನಾಮ ಸಂವತ್ಸರದ ವೈಶಾಖ ಬಹುಳ ನವಮೀ ಶುಕ್ರವಾರದಲ್ಲಿ ಉಪನಯನ ಮಹೋತ್ಸವವು ನಡೆಯತಕ್ಕದೆಂದು ನಿಶ್ಚಯವಾಯಿತು. ಅದಕ್ಕಾಗಿ ಅರಮನೆಯೂ ಪಟ್ಟಣವೂ ಅಲಂಕೃತವಾಯಿತು. ಹಿಂದೂ ದೇವಾಲಯಗಳಲ್ಲಿಯೂ ಮುಸಲ್ಮಾನರ ಮಸೀದುಗಳಲ್ಲಿಯೂ ಶ್ರೀಮನ್ಮಹಾರಾಜರವರಿಗೆ ಶ್ರೇಯಃಪ್ರಾರ್ಥನೋತ್ಸವಗಳು ನಡೆಯಲಾರಂಭವಾಯಿತು. ಸರಕಾರದ ಸತ್ರವಲ್ಲದೆ, ಪಟ್ಟಣದ ನಾಲ್ಕು ದಿಕ್ಕುಗಳಲ್ಲಿಯೂ

ಪಾಕಶಾಲೆಗಳು ಕಟ್ಟಲ್ಪಟ್ಟುವು. ಅನೇಕ ಸಹಸ್ರಜನ ಬ್ರಾಹ್ಮಣರಿಗೂ ಇತರ ವರ್ಣದವರಿಗೂ ಸಂತರ್ಪಣೆಯಾಗಲು ಏರ್ಪಾಡಾಯಿತು. ಈ ಉತ್ಸವವನ್ನು ನೋಡಲು ಬಗೆಬಗೆಯ ಜನಾಂಗದವರು ನಾನಾ ಪ್ರಾಂತಗಳಿಂದ ಬಂದು ಮೈಸೂರಿನಲ್ಲಿ ಸೇರಲಾರಂಭಿಸಿದರು.

ಇಷ್ಟರಲ್ಲಿ, ಎಲ್ಲರೂ ಔತ್ಸುಕ್ಯದಿಂದ ಇದಿರುನೋಡುತ್ತಿದ್ದ ದಿವಸವು ಮೆಲ್ಲಮೆಲ್ಲಗೆ ಬಂದೊದಗಿತು. ಪಾಠಶಾಲೆಯು ವಿಚಿತ್ರಾಲಂಕಾರಗಳಿಂದಲೂ ಸಮಯೋಚಿತವಾದ ವಸ್ತ್ರಾಲಂಕಾರ ಭೂಷಿತರಾದ ಅಧಿಕಾರಿಗಳಿಂದಲೂ ಮನೋಹರವಾಗಿದ್ದಿತು. ಮಹಾರಾಜರಿಗೆ ವಿಧ್ಯುಕ್ತವಾಗಿ ತೈಲಾಭ್ಯಂಜನ ಮಂಗಳಸ್ನಾನಾದಿಗಳು ನಡೆದುವು. ಅವರು ದಿವ್ಯವಸ್ತ್ರಾಭರಣಗಳಿಂದಲಂಕೃತರಾಗಿ ರಾಜವೈಭವದಿಂದ ವೇದಿಕೆಯ ಮೇಲೆ ಬಂದು ಕುಳಿತರು. ದಿಙ್ಮಂಡಲವು ಮಂಗಳವಾದ್ಯಧ್ವನಿಯಿಂದಲೂ ಸ್ವಸ್ತಿವಾಚನದಿಂದಲೂ ಮೊಳಗಿತು. ರಾಜಬಂಧುಗಳೂ ಅಧಿಕಾರಿಗಳೂ ಬಂದು ತತ್ತದುಚಿತಸ್ಥಾನಗಳಲ್ಲಿ ಕುಳಿತರು. ಬಳಿಕ ಮಂಗಳಪ್ರದವಾದ ವೇದಮಂತ್ರಗಳಿಂದ ಶಾಸ್ತ್ರೀಯವಾಗಿ ಮಹಾರಾಜರಿಗೆ ಉಪನಯನೋತ್ಸವವು ವಿಜೃಂಭಣೆಯಿಂದ ಬೆಳೆಯಿತು. ಆ ದಿನ ಮೊದಲ್ಗೊಂಡು ಐದು ದಿನಗಳವರೆಗೂ ಯಥೇಷ್ಟವಾದ ದಾನಧರ್ಮಾದಿಗಳಿಂದ ಬ್ರಾಹ್ಮಣರ ತಂಡವು ತೃಪ್ತಿಪಟ್ಟಿತು. ಬಡವರೂ ಅನಾಥರೂ ಅನ್ನಪಾನಾದಿಗಳಿಂದ ತಣಿದರು.

ಈ ರೀತಿಯಾಗಿ ಉಪನಯನೋತ್ಸವವು ವಿಶೇಷ ವೈಭವದಿಂದ ನಡೆದಬಳಿಕ, ೧೮೭೨ನೆಯ ಇಸವಿ ಅಕ್ಟೋಬರ್ ೧೨ರಲ್ಲಿ ಮಹಾರಾಜರವರ ನಿಜ ಜನನಿಯವರಾದ ದೇವಾಜಮ್ಮಣ್ಣಿಯವರು ಕಾಲವಾದರು. ಅದರಿಂದ ಮಹಾರಾಜರಿಗೆ ಬಹಳ ದುಃಖ ಪ್ರಾಪ್ತವಾಯಿತು. ಆಗ ರಮಾವಿಲಾಸ ಸೀತಾವಿಲಾಸ ಸನ್ನಿಧಾನಗಳ ಮಹಾರಾಜ್ಞಿಯವರುಗಳೂ ಮಹಾರಾಜರ ಸಹೋದರರೂ ಬಹಳಮಟ್ಟಿಗೆ ಸಮಾದಾನಹೇಳಿ ದುಃಖೋಪಶಮನವನ್ನು ಮಾಡಿದರು. ಅನಂತರ ಶ್ರೀಚಾಮರಾಜೇಂದ್ರ ಒಡೆಯರವರು ಸ್ವಜನನಿಯೊಡನೆ ವಾಸಮಾಡುತ್ತಿದ್ದ ಜನನ ಗೃಹವನ್ನು ಬಿಟ್ಟು ಅರಮನೆಗೆ ಬಂದು ನೆಲೆಗೊಂಡರು.

ಬಳಿಕ, ೧೮೭೪ನೆಯ ಇಸವಿ ಡಿಸೆಂಬರ್ ತಿಂಗಳಲ್ಲಿ ಕರ್ನಲ್ ಮ್ಯಾಲಿಸನ್ ಅವರು ಮಹಾರಾಜರವರಿಗೆ ಅತ್ಯದ್ಭುತವಾದ ಜೋಗದ ಜಲಪಾತವನ್ನು ತೋರಿಸುವುದಕ್ಕೆ ಕರೆದುಕೊಂಡುಹೋದರು. ಈ ಜೋಗೆಂಬುದು ಇಂಡಿಯಾ ದೇಶದಲ್ಲೆಲ್ಲ ಅತ್ಯಂತ ರಮಣೀಯವಾದ ಪ್ರದೇಶ. ಇದನ್ನು ವರ್ಣಿಸುವುದಕ್ಕೆ ಮನುಷ್ಯಮಾತ್ರನಿಗೆ ಶಕ್ತಿ ಸಾಲದೆಂದು ನೋಡಿದವರೆಲ್ಲರೂ ತಿಳಿಸುವರು. ಇದು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿರುವುದು. ಇದನ್ನು ಗೇರುಸೊಪ್ಪೆ ಎಂದು ಕರೆಯುವರು. ಇದು ಪ್ರಪಂಚದ ಜಲಪಾತಗಳಲ್ಲೆಲ್ಲ ಅತ್ಯಂತ ಎತ್ತರದಿಂದ ಬೀಳುವ ಜಲಪಾತ. ಈ ಪ್ರಪಾತವು ಶರಾವತಿ ಎಂಬ ನದಿಯಿಂದುಂಟಾಗಿದೆ. ಈ ನದಿಯು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಮಧ್ಯಭಾಗದಲ್ಲಿ

ಹುಟ್ಟಿ ಪಶ್ಚಿಮದಿಕ್ಕಿಗೆ ಪ್ರವಹಿಸುತ್ತ ಕ್ರಮೇಣ ಅಲ್ಲಲ್ಲಿ ಸೇರುವ ಹಳ್ಳಕೊಳ್ಳಗಳಿಂದ ದೊಡ್ಡದಾಗುತ್ತ ಬರುವುದು. ಹೀಗೆಯೇ ಹರಿಯುತ್ತ ಬಂದು, ಗೇರುಸೊಪ್ಪೆ ಎಂಬ ಸ್ಥಳದಲ್ಲಿ ಒಂಬೈನೂರು ಅಡಿಗಳ ಎತ್ತರದಿಂದ ಮೂರು ಶಾಖೆಗಳಾಗಿ ದುಮುಕುತ್ತದೆ. ಇದರ ಮುಖ್ಯವಾದ ಪಾತಕ್ಕೆ ರಾಜಾ ಎಂದು ಹೆಸರು. ಇದರ ಬಳಿ ಸೋಗೆರಾಜನು ಒಂದು ದೇವಸ್ಥಾನವನ್ನು ಕಟ್ಟಿಸಲು ಪ್ರಾರಂಭಿಸಿದನಂತೆ; ಅಂದಿನಿಂದ ಇದು ಹೀಗೆ ಕರೆಯಲ್ಪಟ್ಟಿದೆ. ಹೀಗೆ ದುಮುಕುವ ಜಲರಾಶಿಯು ಏಕಾಕಾರವಾಗಿ ಕೆಳಗಿನಿಂದ ಮೇಲಿನವರೆಗೂ ನಿಂತಿರುವಂತೆ ನೋಟಕರಿಗೆ ವಿಸ್ಮೃತಿಯನ್ನುಂಟುಮಾಡುವುದು. ಸೂರ್ಯಕಿರಣಗಳು ಹರಡಿಕೊಂಡು ಸುತ್ತಲೂ ಇರುವ ಗಹ್ವರ ಪ್ರಾಂತಗಳನ್ನು, ನಿಬಿಡ ತರುಷಂಡಗಳನ್ನೂ, ನೆಟ್ಟಗೆ ನಿಂತಿರುವ ಅರೆಯ ಬಂಡಗಳನ್ನೂ ಪ್ರಕಾಶಪಡಿಸಿ ನೋಡುವವರ ಚಿತ್ತವನ್ನು ಭ್ರಾಂತಿಪಾಶದಿಂದ ಕಟ್ಟುವುದು. ಮೇಲಿನಿಂದ ನೀರು ದುಮುಕುವ ರಭಸಕ್ಕೆ ನೀರೆಲ್ಲ ತುಂತುರುಗಳಾಗಿ ಒಡೆದು ಮಂಜುಮುಸುಕಿದಂತೆ ಸ್ವಲ್ಪ ಮೋಡದವರೆಗೂ ಅವರಿಸಿಕೊಳ್ಳುವುದು. ನಡುವಗಲಿನಲ್ಲಿ ಬೆಳಕು ವಿಶೇಷವಾಗಿರುವುದರಿಂದ, ಮೇಲಿನಿಂದ ನೋಡುವವರಿಗೆ ತಳದ ಭಾಗವೆಲ್ಲವೂ ಸ್ಪಷ್ಟವಾಗಿ ಕಾಣುವುದಲ್ಲದೆ, ನೀರಿನ ಆವಿಯ ಮೋಡಗಳಲ್ಲಿ ಸೂರ್ಯಕಿರಣಗಳು ವ್ಯಾಪಿಸಿ ನಾನಾವಿಧವಾದ ಬಣ್ಣಗಳಾಗಿ ಒಡೆದು ಇಂದ್ರಚಾಪಗಳಂತೆ ಕಂಗೊಳಿಸುತ್ತಿರುವುವು. ಬಿಸಲಿನಿಂದುಂಟಾದ ಧಾವಳ್ಯವೂ, ನೆರಳಿನ ಕಪ್ಪುಬಣ್ಣವೂ, ವೃಕ್ಷಗಳ ಹಸಿರುಬಣ್ಣವೂ, ಆಕಾಶದ ನೀಲವರ್ಣವೂ ಸೇರಿಕೊಂಡು, ಪ್ರಖ್ಯಾತ ಚಿತ್ರಗಾರನು ಬರೆದ ಮನೋಹರವಾದ ಚಿತ್ರಪಟದಂತೆ ಶೋಭಿಸುತ್ತಿರುವುದು. ಸಂಧ್ಯಾಕಾಲದಲ್ಲಿ ನದೀ ನಾರಿಯು ಸಂಜೆಗೆಂಪೆಂಬ ಸೀರೆಯನ್ನುಟ್ಟು ಅಸ್ತಮಯಿಸುತ್ತಿರುವ ಸೂರ್ಯನನ್ನು ನೋಡಿ ನಗುವಂತೆ ತೋರುವುದು.

ಇಷ್ಟು ರಮಣೀಯವಾಗಿಯೂ ಅಪೂರ್ವವಾಗಿಯೂ ಇರುವ ಪ್ರದೇಶವನ್ನು ಕಂಡು ಯಾರಿಗೆತಾನೆ ಆನಂದಾಶ್ಚರ್ಯಗಳು ಹುಟ್ಟದಿರುವುವು! ಹೀಗಿರುವಲ್ಲಿ, ಬಾಲ್ಯಾವಸ್ಥೆಯಲ್ಲಿ ವಿಕಾಸವನ್ನು ಪಡೆಯುವ ಕುಸುಮದೋಪಾದಿಯಲ್ಲಿದ್ದ ಶ್ರೀಮನ್ಮಹಾರಾಜರವರ ಚಿತ್ತಕ್ಕೆ ಏತದ್ದೇಶೀಯವಾದ ವನಗಿರ್ಯಾದಿಗಳ ವಿಚಿತ್ರಸಂದರ್ಶನದಿಂದ ಆಹ್ಲಾದವುಂಟಾಯಿತೆಂದು ಹೇಳುವುದರಲ್ಲಿ ಏನೇನೂ ಸಂಶಯವಿಲ್ಲ. ಇಂತಹ ಪ್ರಪಾತವನ್ನು ನೋಡುವುದಕ್ಕೆ ಮಹಾರಾಜರು ಮಲೆನಾಡಿನ ಮೂಲಕವಾಗಿ ಪ್ರಯಾಣ ಮಾಡಿದರು. ಆಗ ಆಯಾ ದೇಶದ ಜನಗಳ ಪರಿಚಯವೂ, ಅವರ ಸ್ಥಿತಿಗತಿಗಳೂ, ಅವರು ವಾಸಮಾಡುವ ರೀತಿಯೂ, ಆಚಾರ ವ್ಯವಹಾರಗಳೂ ಸ್ವಲ್ಪಮಟ್ಟಿಗೆ ತಿಳಿಯಬಂದುವು. ಕರ್ನಲ್ ಮ್ಯಾಲಿಸನ್ ಸಾಹೇಬರೂ ಗಾರ್ಡನ್ ಸಾಹೇಬರೂ ಇದಕ್ಕೆಲ್ಲ ಅವಕಾಶವನ್ನುಂಟುಮಾಡಿದುದೂ ಅಲ್ಲದೆ, ತಮ್ಮ ಅಭಿಪ್ರಾಯಗಳನ್ನು ಮಹಾರಾಜರಿಗೆ ತಿಳಿಯಪಡಿಸುತ್ತಲೂ ಇದ್ದರು. ಈ ರೀತಿಯಲ್ಲಿ ಶ್ರೀಮನ್ಮಹಾರಾಜರವರು ಒಂದು ವಾರದ ಪರ್ಯಂತ ಮಲೆನಾಡಿನಲ್ಲಿ ಸಂಚಾರಮಾಡಿಕೊಂಡು ಬಂಗಳೂರಿಗೆ ದಯಮಾಡಿಸಿದರು.



ಶ್ರೀಮನ್ಮಹಾರಾಜರವರ ಬೆಂಗಳೂರ ಅರಮನೆ.

ಹೀಗಿರುವಲ್ಲಿ, ಇಂಗ್ಲೆಂಡ್ ದೇಶದ ವಿಕ್ಟೋರಿಯಾ ಮಹಾರಾಜ್ಞಿಯವರು ತಮ್ಮ ರಾಜ್ಯಭಾಗವಾದ ಭರತಖಂಡವನ್ನೂ ಅಲ್ಲಿಯ ಪ್ರಜೆಗಳನ್ನೂ ತಮ್ಮ ರಾಜ್ಯಭಾರದಿಂದ ಹಿಂದೂಸ್ಥಾನದಲ್ಲಿ ನೆಲೆಗೊಂಡಿರುವ ಶಾಂತಿಸುಖವನ್ನೂ ಪ್ರತ್ಯಕ್ಷವಾಗಿ ನೋಡುವುದಕ್ಕೆ ಅವಕಾಶವಾಗದೆ ಹೋದುದರಿಂದ, ಪ್ರಿನ್ಸ್ ಆಫ್ ವೇಲ್ಸ್ ಎಂಬ ಬಿರುದುಳ್ಳ ತಮ್ಮ ಜ್ಯೇಷ್ಠಕುಮಾರರಾದ ಪ್ರಿನ್ಸ್ ಎಡ್ವರ್ಡ್ ಅವರನ್ನು ಹಿಂದೂಸ್ಥಾನಕ್ಕೆ ಕಳುಹಿಸಿಕೊಟ್ಟರು. ಅವರ ಆಗಮನದಿಂದುಂಟಾದ ಸಂತೋಷವು ಈ ದೇಶದವರಿಗೆ ೧೮೭೫ನೆಯ ಇಸವಿಯ ಕೊನೆಯಲ್ಲಿ* ಲಭಿಸಿತು. ಆಗ ಮಹಾರಾಜರವರು ಅವರ ಸಂದರ್ಶನಾರ್ಥವಾಗಿ ಮುಂಬಯಿಗೆ ದಯಮಾಡಿಸಿದ್ದರು. ಆ ಮರುದಿನ ನಡೆದ ಪ್ರಿನ್ಸ್ ಆಫ್ ವೇಲ್ಸ್ ಅವರ ವರ್ಧಂತೀ ಮಹೋತ್ಸವದ ದರ್ಬಾರಿನಲ್ಲಿ ಶ್ರೀಮನ್ಮಹಾರಾಜರವರಿಗೂ ಇಂಗ್ಲಿಷ್ ಯುವರಾಜರಿಗೂ ಭೇಟಿಯಾಗಿ ಸಂಭಾಷಣೆ ನಡೆಯಿತು. ಸಂತುಷ್ಟಚಿತ್ತರಾದ ಪ್ರಿನ್ಸ್‌ರವರು ಶ್ರೀಮನ್ಮಹಾರಾಜರವರಿಗೆ ಯೂರೋಪ್ ನಗರದಲ್ಲಿ ತಯಾರಾದ ಕೆಲವು ಅಪೂರ್ವವಸ್ತುಗಳನ್ನೂ ತಮ್ಮ ನಿಜನಾಮಾಂಕಿತವನ್ನು ಕೆತ್ತಿದ ಒಂದು ಕೋವಿಯನ್ನೂ ಬಹುಮಾನ ಮಾಡಿದರು. ಬಳಿಕ ಮಹಾರಾಜರವರು, ಭಾರತವರ್ಷದಲ್ಲಿ ಅತ್ಯಂತ ವಿಸ್ತಾರವಾಗಿಯೂ ಅತಿ ರಮಣೀಯವಾಗಿಯೂ ಅನೇಕ ಜನ ಭರಿತವಾಗಿಯೂ ಸಾಹಸಿಗಳ ತೌರುಮನೆಯಾಗಿಯೂ, ಈ ಕಾಲದ ಪಟ್ಟಣಗಳಲ್ಲಿ ಬಹು ಮನೋಹರವಾದುದೆಂಬುದಾಗಿಯೂ ವಿಖ್ಯಾತಿಯನ್ನು ಹೊಂದಿರುವ ಮುಂಬಯಿ ಪಟ್ಟಣದ ಕೈಗಾರಿಕೆ ಮತ್ತು ವ್ಯಾಪಾರಾದಿ ವೈಭವಗಳನ್ನು ಕಂಡು ಆನಂದಾಶ್ಚರ್ಯ ಭರಿತರಾಗಿ, ತಮ್ಮ ವಿದ್ಯಾಗುರುಗಳೊಡನೆ ಮುಂಬಯಿ ಯೂನಿವರ್ಸಿಟಿ, ಸರ್ವವಸ್ತು ಪ್ರದರ್ಶನಶಾಲೆ, ಸಮುದ್ರ, ಹಡಗು, ಪ್ರಖ್ಯಾತವಾದ ಕೆಲವು ವಾಣಿಜ್ಯ ಶಾಲೆಗಳು, ಅಲ್ಲಿಯ ನಾನಾ ಜನಾಂಗದವರ ನಾಗರಿಕತೆ ಮುಂತಾದುವುಗಳನ್ನು ನೋಡಿಕೊಂಡು ರಾಜಧಾನಿಗೆ ದಯಮಾಡಿಸಿದರು. ಆ ಕಾಲದಲ್ಲಿ ಮೈಸೂರು ಪಟ್ಟಣದಲ್ಲಿ ವಾಂತಿಭೇದಿ ಯುಪದ್ರವವು ಹೆಚ್ಚಾಗಿದ್ದುದರಿಂದ ಇಂಗ್ಲಿಷ್ ಯುವರಾಜರು ಮೈಸೂರಿಗೆ ಬರಬೇಕೆಂದು ಮಾಡಿದ್ದ ಪ್ರಯತ್ನವು ಮಾನಸಿಕವಾಯಿತು.

ಈ ರೀತಿಯಲ್ಲಿ, ಆವಶ್ಯಕವಾದ ದೇಶಸಂಚಾರಗಳು ಆಗಾಗ ಒದಗಿದರೂ, ಮಹಾರಾಜರ ವಿದ್ಯಾಭ್ಯಾಸವು ವಿಘ್ನವಿಲ್ಲದೆ ನಡೆಯುತ್ತಿದ್ದಿತು. ಕರ್ನಲ್ ಮ್ಯಾಲಿಸನ್ ಅವರು ೧೮೭೭ನೆಯ ವರುಷದಲ್ಲಿ ತಮ್ಮ ಕೆಲಸದಿಂದ ನಿವೃತ್ತರಾದರು. ಅಷ್ಟರೊಳಗೆ ಮಹಾರಾಜರ ವಿದ್ಯಾಭ್ಯಾಸವು ಎಷ್ಟರಮಟ್ಟಿಗೆ ನಡೆದಿತ್ತೆಂಬುದನ್ನು ತಿಳಿಸುವುದಕ್ಕೆ ಕೆಲವು ಸಾಧನಗಳಿವೆ. ಅವುಗಳಲ್ಲಿ—ಒಂದನೆಯದು, ೧೮೭೫ನೆಯ ಇಸವಿಯಲ್ಲಿ ಮಹಾರಾಜರು ನೀಲಗಿರಿಯಿಂದ ತಮ್ಮ ಜೊತೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಮಹಮದ್ ಇಬ್ರಾಹಿಂ ಎಂಬವರಿಗೆ ಬರೆದ ಕಾಗದ. ಎರಡನೆಯದು, ಮೈಸೂರು ಛೀಫ್ ಕಮಿಷನರ ಉದ್ಯೋಗದಿಂದ ಹೈದರಾಬಾದ್ ಛೀಫ್ ಕಮಿಷನರ ಕೆಲಸಕ್ಕೆ ವರ್ಗಾಯಿಸಲ್ಪಟ್ಟಿದ್ದ ಸರ್ ರಿಚರ್ಡ್ ಮೀಡ್ ಸಾಹೇಬರಿಗೆ ಮಹಾರಾಜರು ಬರೆದ

ಕಾಗದ. ಮೂರನೆಯದು, ಕರ್ನಲ್ ಮ್ಯಾಲಿಸನ್ ಅವರು ತಾವು ಕೆಲಸದಿಂದ ನಿವೃತ್ತರಾಗುವಾಗ, ಮಹಾರಾಜರವರ ವಿದ್ಯಾಭಿವೃದ್ಧಿಯ ವಿಷಯದಲ್ಲಿ ಬರೆದಿಟ್ಟ ಬರೆವಣಿಗೆ. ನಾಲ್ಕನೆಯದು, ಮಹಾರಾಜರು ಪ್ರಿನ್ಸ್ ಆಫ್ ವೇಲ್ಸ್ ಅವರ ಭೇಟಿಗಾಗಿ ಮುಂಬಯಿಗೆ ದಯೆಮಾಡಿಸಿದ್ದಾಗ ಇವರ ವಿಷಯವಾಗಿ ಪ್ರಿನ್ಸ್ ಆಫ್ ವೇಲ್ಸ್ ಅವರ ಪ್ರೈವೇಟ್ ಸೆಕ್ರೆಟರಿಯವರಾದ ವಿಲಿಯಂ ಹವರ್ಡ್ ರಸ್ಸೆಲ್ ಅವರು ಹೇಳಿರುವ ಅಭಿಪ್ರಾಯ.

(1)

OOTY,
Wednesday, 28th April 1875.

MY DEAR FRIEND MAHAMAD IBRAHIM,

We are quite well by the good grace of our Creator. I received your kind letter on the 28th April. I am very glad to see that letter We are spending time in reading, walking, running and every day cricket playing. In reading Physical Geography of India we finished beginning three chapters. We are going hunting twice a week and we killed one tiger and twenty porcupines, and some jackals, ... Convey my best compliments to Abbas Khan, Bheema Rao and C. Subbaraja Urs. Here all the boys give their compliments to you.

I am Yours,
CHAMA RAJENDRA WADIAR.

ಇದರ ಅಭಿಪ್ರಾಯವೇನೆಂದರೆ—

ಊಟಿ,
ಬುಧವಾರ, ೨೮ನೇ ಏಪ್ರಿಲ್ ೧೮೭೫.

ನನ್ನ ಪ್ರಿಯಮಿತ್ರರಾದ ಮಹಮದ್ ಇಬ್ರಾಹಿಂ ಸಾಹೇಬರೆ,

ಸೃಷ್ಟಿಕರ್ತನಾದ ಭಗವಂತನ ದಯೆಯಿಂದ ನಾವೆಲ್ಲರೂ ಇಲ್ಲಿ ಕ್ಷೇಮದಿಂದಿದ್ದೇವೆ. ನೀವು ದಯವಿಟ್ಟು ಬರೆದ ಕಾಗದವು ಏಪ್ರಿಲ್ ೨೮ ರಲ್ಲಿ ತಲುಪಿತು. ಅದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ನಾವು ಓದುವುದರಲ್ಲಿಯೂ, ಗಾಳಿಸಂಚಾರ ಮಾಡುವುದರಲ್ಲಿಯೂ, ಓಡುವುದರಲ್ಲಿಯೂ, ಪ್ರತಿದಿನವೂ ಕ್ರಿಕೆಟ್ ಆಡುವುದರಲ್ಲಿಯೂ, ಕಾಲಹರಣ ಮಾಡುತ್ತಿರುವೆವು. ಇಂಡಿಯಾ ದೇಶದ ಫಿಸಿಕಲ್ ಜಿಯಾಗ್ರಫಿ—ಎಂದರೆ, ಪ್ರಾಕೃತಿಕ ಭೂಗೋಳಶಾಸ್ತ್ರದಲ್ಲಿ ಮೊದಲು ಮೂರು ಅಧ್ಯಾಯಗಳು ಮುಗಿಯಿತು. ನಾವು ವಾರಕ್ಕೆ ಎರಡಾವೃತ್ತಿ ಬೇಟೆಗೆ ಹೋಗುತ್ತೇವೆ. ಒಂದು ಹುಲಿಯನ್ನೂ ಇಪ್ಪತ್ತು ಮುಳ್ಳುಹಂದಿಗಳನ್ನೂ ಕೆಲವು ನರಿಗಳನ್ನೂ ಬೇಟೆಯಾಡಿದೆವು. . . . . . ಅಬ್ಬಾಸ್‌ಖಾನ್, ಭೀಮರಾವ್, ಸಿ. ಸುಬ್ಬರಾಜ ಅರಸು—ಇವರಿಗೆ ನನ್ನ ವಂದನೆಗಳನ್ನು ತಿಳಿಸಿರಿ. ಇಲ್ಲಿರುವ ನಮ್ಮ ಜೊತೆಗಾರರೆಲ್ಲರೂ ನಿಮಗೆ ವಂದನೆಗಳನ್ನು ಸಮರ್ಪಿಸುತ್ತಾರೆ.

ತಮ್ಮ ಮಿತ್ರ,
ಚಾಮರಾಜೇಂದ್ರ ಒಡೆಯರ್.

ಈ ಕಾಗದವನ್ನು ಮಹಾರಾಜರವರು ನೀಲಗಿರಿಯಿಂದ ಬರೆದುಕಳುಹಿಸಿದರು. ಆಗ ಅವರಿಗೆ ಹನ್ನೆರಡು ವರುಷ ವಯಸ್ಸು. ಈ ಹನ್ನೆರಡನೆಯ ವಯಸ್ಸಿನಲ್ಲಿ ಇಂತಹ ಅಭಿಪ್ರಾಯವುಳ್ಳ ಕಾಗದವನ್ನು ಬರೆಯುವುದು ಸಾಮಾನ್ಯವಲ್ಲ. ಇದರಿಂದ ಮಹಾರಾಜರಿಗೆ ಎಷ್ಟುಮಟ್ಟಿನ ಇಂಗ್ಲಿಷ್ ಭಾಷಾ ಪರಿಚಯವುಂಟಾಗಿತ್ತೆಂಬುದು ಗೊತ್ತಾಗುವುದು ಮಾತ್ರವಲ್ಲದೆ, ತಾವು ರಾಜರು, ಇತರರು ಸಾಮಾನ್ಯರು ಎಂಬ ಅಹಂಭಾವವಿಲ್ಲದೆ ಸ್ನೇಹಿತರುಗಳಲ್ಲಿ ಸಮಭಾವವನ್ನಿಟ್ಟುಕೊಂಡು, ತಮಗೆ ಅವರು ಹೇಗೋ ಅವರಿಗೆ ತಾವೂ ಹಾಗೆಯೇ ಎಂಬ ಭಾವವನ್ನು ಹೊಂದಿದ್ದರೆಂಬುದು ವ್ಯಕ್ತವಾಗುವುದು.

(2)

MYSORE,
23rd December 1875

MY DEAR SIR RICHARD MEADE,

Colonel Malleson delivered to me this morning your letter of the 18th instant, at the same time that he explained to me the reasons of duty which had caused you to accede to the wishes of His Excellency the Viceroy, and to leave Mysore for Hyderabad.

I can easily understand your preference for a place which you know, when the other is comparatively unknown. I used to experience a similar feeling when it was proposed to take me from Mysore to Bangalore. But I trust the results in both cases may be the same.

At all events you have given me the example of sacrificing inclination to duty; though, I must admit, since my journey to Bombay, my previous prejudices against change have been removed

My best wishes will go with you; and it will always be pleasure to me to hear that you and Lady Meade are happy.

I remain,
Dear Sir Richard Meade,
Your sincere friend,
CHAMA RAJENDRA WADIAR

ಮೈಸೂರು,
೨೩ನೆಯ ಡಿಸೆಂಬರ್ ೧೮೭೫

ನನ್ನ ಮಿತ್ರರಾದ ಸರ್ ರಿಚರ್ಡ್ ಮೀಡ್ ಸಾಹೇಬರವರೆ,

ಕರ್ನಲ್ ಮ್ಯಾಲಿಸನ್ ಅವರು ಈ ದಿನ ಪ್ರಾತಃಕಾಲದಲ್ಲಿ ತಾವು ೧೮ನೆಯ ತಾರೀಖಿನ ಬರೆದ ಕಾಗದವನ್ನು ನನಗೆ ತಲುಪಿಸಿದರು ; ಇದಲ್ಲದೆ, ತಾವು ವೈಸ್ರಾಯಿಯವರ ಇಚ್ಛಾನುವರ್ತಿಗಳಾಗಿ ಮೈಸೂರನ್ನು ಬಿಟ್ಟು ಹೈದರಾಬಾದಿಗೆ ದಯಮಾಡುವುದಕ್ಕೆ ಕಾರಣಗಳನ್ನು

ವಿವರಿಸಿ ತಿಳಿಸಿದರು. ಮತ್ತೊಂದು ಸ್ಥಳವು ವಿಶೇಷ ಪರಿಚಯವಿಲ್ಲದೆ ಇರುವ ಕಾಲದಲ್ಲಿ ಪರಿಚಿತವಾದ ಸ್ಥಳದ ವಿಷಯದಲ್ಲಿ ತಮಗೆ ಹೆಚ್ಚು ವಿಶ್ವಾಸವಿರುವುದಕ್ಕೆ ಕಾರಣವನ್ನು ನಾನು ಸುಲಭವಾಗಿ ಗ್ರಹಿಸಬಲ್ಲೆನು. ಮೈಸೂರನ್ನು ಬಿಡಿಸಿ ಬೆಂಗಳೂರಿಗೆ ನನ್ನನ್ನು ಕರೆದುಕೊಂಡು ಹೋಗಬೇಕೆಂದು ಉದ್ದೇಶಮಾಡಿದ ಕಾಲದಲ್ಲಿ ನನಗೂ ಈ ರೀತಿಯಾದ ಮನೋಭಾವವೇ ಅನುಭವಕ್ಕೆ ಬರುತ್ತಿದ್ದಿತು. ಆದರೆ ಫಲಿತಾಂಶವು ಎರಡು ಸಂದರ್ಭಗಳಲ್ಲಿಯೂ ಒಂದೇ ಎಂದು ನಂಬಿರುವೆನು.

ಸರ್ವಕಾಲದಲ್ಲಿಯೂ ಕರ್ತವ್ಯವನ್ನು ನೆರವೇರಿಸುವುದಕ್ಕೋಸ್ಕರ ಐಚ್ಛಿಕವಾದುದನ್ನು ಬಿಡಬೇಕೆಂಬುದಕ್ಕೆ ತಾವೇ ನನಗೆ ಉದಾಹರಣಪ್ರಾಯರಾಗಿರುವಿರಿ. ಆದರೆ ನಾನು ಮುಂಬಯಿಗೆ ಸಂಚಾರ ಹೋಗಿಬಂದ ಕಾಲದಿಂದ ಸ್ಥಾನಾಂತರಕ್ಕೆ ಹೋಗುವುದಕ್ಕೆ ನನಗಿದ್ದ ವಿರುದ್ಧಾಭಿಪ್ರಾಯಗಳು ಸಡಿಲಿಹೋಗಿವೆ.

ನಿಮಗೆ ಶ್ರೇಯಸ್ಸುಂಟಾಗಬೇಕೆಂಬುವೇ ನನ್ನ ಮುಖ್ಯಾಶಯವು. ತಾವೂ ತಮ್ಮ ಪತ್ನಿಯವರಾದ ಲೇಡಿ ಮೀಡ್ ಅವರೂ ಸೌಖ್ಯವಾಗಿರುವುದನ್ನು ಕೇಳಲು ಸರ್ವದಾ ಸಂತೋಷಿಸುವೆನು.

ತಮ್ಮ ಮಿತ್ರ,
ಚಾಮರಾಜೇಂದ್ರ ಒಡೆಯರ್.

ಈ ಲೇಖನವನ್ನು ಓದಿದರೆ ಯಾರಾಗಲಿ ಸ್ವೇಚ್ಛಾನುವರ್ತಿಗಳಾಗಿರದೆ ಕರ್ತವ್ಯ ಭಾರವನ್ನು ಮೊದಲು ವಹಿಸಿ ಅದನ್ನು ನೆರವೇರಿಸುವುದೇ ಮುಖ್ಯವೆಂತಲೂ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಬೇಕಾದರೆ ಮೊದಲಲ್ಲಿದ್ದ ದುರಭಿಪ್ರಾಯಗಳು ಅನುಭವಜ್ಞಾನದಿಂದ ನಿವೃತ್ತವಾಗುವುವೆಂತಲೂ ಈ ವಿಷಯವನ್ನು ಶ್ರೀಮನ್ಮಹಾರಾಜರವರು ಮೊದಲಿಂದ ತಿಳಿದಿದ್ದರೆಂತಲೂ ವ್ಯಕ್ತವಾಗುವುದು.

(3) ಮ್ಯಾಲಿಸನ್ ಸಾಹೇಬರು ಮಹಾರಾಜರವರ ವಿದ್ಯಾಭ್ಯಾಸದ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಿರುವುದೇನೆಂದರೆ: "ಆ ಕಾಲದಿಂದ—ಎಂದರೆ, ೧೮೭೨ರಿಂದ ಇದುವರೆಗೆ (೧೮೭೭) ಮಹಾರಾಜರ ವಿದ್ಯಾಭಿವೃದ್ಧಿಯು ತಪ್ಪದೆ ನಡೆದುಬಂದಿರುವುದಲ್ಲದೆ ತೃಪ್ತಿಕರವಾಗಿಯೂ ಇದೆ. ಇವರಿಗೆ ಲ್ಯಾಟಿನ್ ಮತ್ತು ಗ್ರೀಕ್—ಈ ಎರಡು ಭಾಷೆಗಳು ಹೊರತು ಇಂಗ್ಲಿಷ್ ಪಾಠಶಾಲೆಯಲ್ಲಿ ಬೋಧಿಸುವ ಸಕಲ ವಿಷಯಗಳೂ ಬೋಧಿಸಲ್ಪಡುತ್ತವೆ. ಈಗ ಇವರು ಕುದುರೆಯ ಸವಾರಿ ಮಾಡುವುದಕ್ಕೂ, ಬೇಟೆ ನಾಯಿಗಳೊಡನೆ ಬೇಟೆಯಾಡುವುದಕ್ಕೂ, ಕ್ರಿಕೆಟ್ ಎಂಬ ಚೆಂಡಿನಾಟವನ್ನಾಡುವುದಕ್ಕೂ, ಅಶ್ವರಥವನ್ನು ನಡೆಸುವುದಕ್ಕೂ ಬಲ್ಲರು. ವಿದ್ಯಾಭ್ಯಾಸಂಗದಲ್ಲಿ ಇವರು ಉಲ್ಲಾಸದಿಂದ, ಹಿಡಿದುದನ್ನು ಬಿಡದೆ ಶ್ರಮಪಟ್ಟು ಸಾಧಿಸುವ ಸ್ವಭಾವವನ್ನು ತೋರ್ಪಡಿಸಿಕೊಂಡಿರುವರು. ಇದಲ್ಲದೆ, ಇವರು ಕಾಲನಿಯಮವನ್ನು ಅತಿಕ್ರಮಿಸದವರಾಗಿಯೂ ಯಾವ ಕೆಲಸವನ್ನು ಮಾಡಿದರೂ ಕ್ರಮವನ್ನು ತಪ್ಪದೆ ನಡೆವವರಾಗಿಯೂ ಇರುವುದಲ್ಲದೆ, ಬಹು ಸರಸಿಗಳಾಗಿ ಮುಂದೆ ಸತ್ಸ್ವಭಾವವನ್ನು ಪಡೆವಂತೆ ಕಾಣಿಸುತ್ತಿರುವರು. ಮುಂದೆ ಇವರು ವಹಿಸಬೇಕಾಗುವ ಭಾರವನ್ನು ವಹಿಸಿ ಕರ್ತವ್ಯಗಳನ್ನು ನೆರವೇರಿಸುವಷ್ಟು ಸಮರ್ಥರಾಗುವಂತೆ ಮಾಡಬೇಕಾದರೆ,

ಇವರ ವಿಷಯದಲ್ಲಿ ಇದುವರೆಗೂ ತೆಗೆದುಕೊಂಡ ವಿಚಾರಣೆಯನ್ನೂ ಅಕ್ಕರೆಯನ್ನೂ ಇನ್ನು ಮುಂದೆಯೂ ನಡೆಯಿಸಿಕೊಂಡು ಬರಬೇಕಾಗಿದೆ.''

(4) ಪ್ರಿನ್ಸ್ ಆಫ್ ವೇಲ್ಸ್ ಅವರ ಪ್ರೈವೆಟ್ ಸೆಕ್ರಿಟೆರಿಯವರಾದ ವಿಲಿಯಂ ಹವರ್ಡ್ ರಸ್ಸಲ್ ಅವರು ' ಪ್ರಿನ್ಸಸ್ ಟೂರ್ ' ಎಂಬ ತಮ್ಮ ಪುಸ್ತಕದಲ್ಲಿ ಪ್ರಿನ್ಸ್ ಆಫ್ ವೇಲ್ಸ್ ಅವರ ಸಂದರ್ಶನಾರ್ಥವಾಗಿ ಮಹಾರಾಜರವರು ಹೋಗಿದ್ದಾಗ ಅವರು ಧರಿಸಿದ್ದ ಅಮೂಲ್ಯವಾದ ವಸ್ತ್ರಾಭರಣಗಳನ್ನೆಲ್ಲ ಇದ್ದಿದ್ದಹಾಗೆಯೇ ವರ್ಣಿಸಿ ಬರೆದಿರುವುದೇನೆಂದರೆ : '' ಮಹಾರಾಜರು ಬಹಳ ಬುದ್ಧಿವಂತರಾಗಿ ಕಾಣಿಸಿ ಕೊಳ್ಳುವರು. ಅವರಿಗೆ ಹದಿಮೂರು ವರುಷ . . . . . . ಅವರು ಇಂಗ್ಲಿಷಿನಲ್ಲಿ ತಡೆಯಿಲ್ಲದೆ ನಿರರ್ಗಳವಾಗಿ ಮಾತಾಡುವುದನ್ನು ಯುವರಾಜರು ಪ್ರತ್ಯಕ್ಷವಾಗಿ ಕೇಳಿದುದಲ್ಲದೆ, ಅವರಿಗೆ ಬೇಟೆಯಾಡುವುದರಲ್ಲಿ ಬಹುಕುತೂಹಲವುಂಟೆಂದೂ, ಚೆನ್ನಾಗಿ ಗುರಿಯಿಟ್ಟು ಬಂದೂಕು ಹಾರಿಸಬಲ್ಲರೆಂದೂ, ಕ್ರಿಕೆಟ್ ಆಡುವುದಕ್ಕೆ ಬರುವುದೆಂದೂ ಅವರ ಬೋಧಕರು ತಿಳಿಸಿದ ಬಳಿಕ, ಪ್ರಿನ್ಸ್ ಆಫ್ ವೇಲ್ಸ್ ಅವರು ತಮಗುಂಟಾದ ಸಂತೋಷವನ್ನು ವಾಚಾ ತಿಳಿಸಿ, ಮಹಾರಾಜರನ್ನು ಬಹು ಪ್ರೇಮದೊಡನೆ ಕಳುಹಿಸಿ ಕೊಟ್ಟರು '' ಎಂದು ಬರೆದಿರುತ್ತಾರೆ.

ಮುಂಬಯಿ ಪ್ರಯಾಣವನ್ನು ತೀರಿಸಿಕೊಂಡು ಮಹಾರಾಜರು ದಯಮಾಡಿದ ಕೆಲವು ದಿವಸಗಳ ಮೇಲೆ—ಎಂದರೆ, ೧೮೭೭ರಲ್ಲಿ ಕರ್ನಲ್ ಮ್ಯಾಲಿಸನ್ ಅವರು ಇಂಗ್ಲೆಂಡಿಗೆ ಹೊರಟುಹೋದರು. ಇವರು ಪ್ರಯಾಣ ಮಾಡುವುದಕ್ಕಿಂತ ಮುಂಚಿತ ವಾಗಿ ಇಂಗ್ಲಿಷ್ ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಪರೀಕ್ಷೆ ಕೊಟ್ಟು ವಿಚಾರಶೀಲ ನಾಗಿರತಕ್ಕ ಒಬ್ಬ ಪಂಡಿತನನ್ನು ಮಹಾರಾಜರಿಗೆ ಬೋಧಕನನ್ನಾಗಿ ಕಳುಹಿಸಿ ಕೊಡಬೇಕೆಂದು ಇಂಡಿಯಾ ಸರಕಾರದವರನ್ನು ಕೇಳಿದ್ದರು. ಅದಕ್ಕೆ ಆಗ ಇಂಡಿಯಾ ಸ್ಟೇಟ್ ಸೆಕ್ರಿಟರಿಗಳಾದ ಮಾರ್ಕ್ವಿಸ್ ಸ್ಯಾಲಿಸ್‌ಬರಿ ಸಾಹೇಬರು, '' ಮಹಾರಾಜ ರನ್ನು ಇಂಗ್ಲಿಷ್ ಶಾಸ್ತ್ರ ಸಾಹಿತ್ಯಗಳಲ್ಲಿ ಪಂಡಿತರನ್ನಾಗಿ ಮಾಡುವುದೊಂದೇ ಉದ್ದೇಶ ವಾಗಿದ್ದರೆ ಮ್ಯಾಲಿಸನ್ ಅವರು ಹೇಳಿದಂತೆ ಮಾಡಬಹುದಾಗಿದ್ದಿತು ; ಆದರೆ ಅದು ಒಂದೇ ಉದ್ದೇಶವಲ್ಲವಾದುದರಿಂದ, ಮುಂದೆ ರಾಜ್ಯಭಾರವನ್ನು ಸ್ವತಃ ವಹಿಸಿ, ಅನೇಕ ಪ್ರಜೆಗಳ ಕಷ್ಟಸುಖಗಳನ್ನೂ ರಾಜ್ಯಭಾರಕ್ರಮಗಳನ್ನೂ ತಿಳಿದುಕೊಂಡು, ಸರಿಯಾದ ಮಾರ್ಗದಲ್ಲಿ ನಡೆಯದೆ ಅಕ್ರಮಕ್ಕೆಬಿದ್ದ ರಾಜರ ಪಾಡೇನಾಯಿತೆಂಬು ದನ್ನೂ ಧರ್ಮಪ್ರಜಾಪಾಲನದಿಂದ ಉಂಟಾಗುವ ಪ್ರಯೋಜನಗಳನ್ನೂ ಮಹಾ ರಾಜರು ತಿಳಿದುಕೊಳ್ಳಬೇಕಾದರೆ, ರಾಜನೀತಿ ಸಿದ್ಧಾಂತಗಳನ್ನೆಲ್ಲ ತಿಳಿಸುವ ರಾಜ ಕೀಯ ವಿದ್ಯೆಯನ್ನು ಅವರಿಗೆ ಬೋಧಿಸಬೇಕೆಂತಲೂ ಈ ಕಾರಣದಿಂದ, ಬೋಧಕ ರಾಗಿರುವುದಕ್ಕೆ ಇಂಡಿಯಾ ಮಿಲಿಟರಿ ಅಥವಾ ಸಿವಿಲ್ ಸರ್ವಿಸ್ಸಿನಲಿದ್ದು ಅನುಭವ ಶಾಲಿಯಾದ ಯೂರೋಪಿಯನ್ ಅಧಿಕಾರಿಯನ್ನು ನಿಯಮಿಸತಕ್ಕುದೆಂತಲೂ ಅಭಿ ಪ್ರಾಯಕೊಟ್ಟರು.''

ಈ ಅಭಿಪ್ರಾಯಾನುಗುಣವಾಗಿ ಆಗ ವೈಸ್ರಾಯಿಯವರಾಗಿದ್ದ ಲಾರ್ಡ್ ಲಿಟ್ಟನ್ ಸಾಹೇಬರವರು ಮೊದಲು ಜನರಾ ನವಾಬರಿಗೆ ವಿದ್ಯಾಗುರುವಾಗಿದ್ದ ಕ್ಯಾಪ್ಟನ್ ವಿಲ್ಸನ್ ಸಾಹೇಬರನ್ನು ಅದೇ ವರುಷದ ಜೂಲೈ ತಿಂಗಳಲ್ಲಿ ಚಾಮರಾಜೇಂದ್ರ ಮಹಾರಾಜರಿಗೆ ಬೋಧಕರನ್ನಾಗಿ ನೇಮಿಸಿದರು. ಇವರು ಬಂದಮೇಲೂ ಮಹಾರಾಜರ ಆಟಪಾಟಗಳ ಮತ್ತು ಪಾಠಪ್ರವಚನಗಳ ಕ್ರಮವು ಮೊದಲಿನಂತೆಯೇ ನಡೆಯುತ್ತಿದ್ದಿತು. ಆದರೆ, ಇವರ ದಿವಸದಲ್ಲಿ ಪೋಲೋ ಆಟವು ಏರ್ಪಾಡಾಯಿತು. ಇದೊಂದು ಮಾತ್ರ ವಿಶೇಷ. ಈ ಮಧ್ಯದಲ್ಲಿ ಶ್ರೀಮನ್ಮಹಾರಾಜರವರು ತಮ್ಮ ವಿದ್ಯಾವಿನಯಾದಿ ಸದ್ಗುಣಗಳನ್ನು ತೋರ್ಪಡಿಸತಕ್ಕ ಒಂದು ಕುಶಲಪತ್ರಿಕೆಯನ್ನು ಬರೆದು ವೈಸ್ರಾಯಿಯವರಿಗೆ ಕಳುಹಿಸಿದರು. ಅದಕ್ಕೆ ವೈಸ್ರಾಯಿಯವರು ಮಹಾರಾಜರವರ ಶ್ರೇಯೋಭಿವೃದ್ಧಿಯನ್ನು ಬಯಸತಕ್ಕವರಾಗಿ, ಅವರಲ್ಲಿ ತಮಗಿರುವ ನಿಜವಾದ ವಿಶ್ವಾಸಾತಿಶಯವನ್ನು ತೋರ್ಪಡಿಸಿ, ಬುದ್ಧಿವಾದ ರೂಪವಾದ ಪ್ರತ್ಯುತ್ತರವನ್ನು ಕೊಟ್ಟರು. ಅದರ ಕನ್ನಡ ಪರಿವರ್ತನವು ಈ ಕೆಳಗೆ ಬರೆಯಲ್ಪಟ್ಟಿವೆ.

ಸಿಮ್ಲಾ ಮೊಕ್ಕಾಂ,
೨೧ನೆಯ ಆಗಸ್ಟ್ ೧೮೭೭

ನನ್ನ ಪ್ರಿಯ ಬಾಲಕರಾದ ಸ್ನೇಹಿತರೆ,

ತಮ್ಮ ಕುಶಲಪತ್ರಿಕೆಯಿಂದ ನನಗೆ ಬಹಳ ಆನಂದವಾಯಿತು. ಅದಕ್ಕಾಗಿ ನಾನು ತಮಗೆ ವಂದನೆಮಾಡಿ ಉತ್ತರಬರೆಯುವ ಕುತೂಹಲದಲ್ಲಿ ದೃಢವಾಗಿ ತಿಳಿಯಪಡಿಸುವುದೆನೆಂದರೆ: ಮಹಾರಾಜರವರಾದ ನಿಮ್ಮ ಸೌಖ್ಯಾಭಿವೃದ್ಧಿಯಲ್ಲಿಯೂ, ಇನ್ನು ಕೆಲವು ವರುಷಗಳಲ್ಲಿ ತಮ್ಮ ರಾಜ್ಯವನ್ನು ನಾನು ಸಂತೋಷದಿಂದ ತಮ್ಮ ಸ್ವಾಧೀನಮಾಡುವೆನೆಂಬುದಾಗಿ ನಂಬಿರುವ ಪ್ರಜೆಗಳ ಸೌಖ್ಯಾಭಿವೃದ್ಧಿಯಲ್ಲಿಯೂ, ಚಕ್ರವರ್ತಿನಿಯರಾದ ಶ್ರೀಮನ್ಮಹಾರಾಜ್ಞಿಯವರು ಕೇವಲ ಮನಃಪೂರ್ವಕವಾದ ಶ್ರದ್ಧೆಯನ್ನು ಹೊಂದಿರುತ್ತಾರೆ. ಮುಖ್ಯವಾಗಿ ಬಹುಕಾಲದಿಂದ ಇಂಗ್ಲಿಷ್ ರಾಜ್ಯಭಾರದ ರಕ್ಷಣೆಯಲ್ಲಿರುವ ಈ ಸಂಸ್ಥಾನದ ಪ್ರಜೆಗಳ ಕ್ಷೇಮದಲ್ಲಿ ಶ್ರೀಮನ್ಮಹಾರಾಜ್ಞಿಯವರಿಗೆ ಎಂದಿಗೂ ಅಶ್ರದ್ಧೆ ಯುಂಟಾಗಲಾರದು. ಇದಲ್ಲದೆ ಹಿಂದೂದೇಶದಲ್ಲಿ ಇಂಗ್ಲಿಷರ ರಾಜ್ಯಭಾರವನ್ನು ನಡೆಸುತ್ತಿರುವ ನಾನು ನನ್ನ ಅಧಿಕಾರಬಲದಿಂದ ಮಹಾರಾಜರವರಾದ ತಮಗೆ ಬಹಳ ನಂಬಿಕೆಯಾಗಿಯೂ ಮನಃಪೂರ್ವಕವಾಗಿಯೂ ತಿಳಿಯಪಡಿಸುವುದೇನೆಂದರೆ: ಶ್ರೀಮನ್ಮಹಾರಾಜ್ಞಿಯವರ ವಿಷಯದಲ್ಲಿಯೂ ಹಿಂದೂದೇಶದ ಪ್ರಜೆಗಳ ವಿಷಯದಲ್ಲಿಯೂ ನನ್ನ ಜವಾಬ್ದಾರಿಯುಳ್ಳ ಇಂಗ್ಲಿಷ್ ದೊರೆತನಕ್ಕೆ ಯಾವುದೊಂದು ವಿರೋಧವಿಲ್ಲದಹಾಗೆ, ಮೈಸೂರು ಸಂಸ್ಥಾನದ ಪ್ರಜೆಗಳನ್ನು ವಿವೇಕದಿಂದಲೂ ಉಚಿತವಾದ ಮಾರ್ಗದಿಂದಲೂ ತಾವು ರಕ್ಷಣೆಮಾಡುವುದನ್ನು ನೋಡುವುದಕ್ಕಿಂತಲೂ ದೊಡ್ಡ ಕುತೂಹಲವು ಬೇರೆ ಯಾವುದೂ ನನಗಿಲ್ಲ. ಇಂತಹ ಭಾಗ್ಯವನ್ನು ನಾನು ಕಣ್ಣಿಂದ ನೋಡುವುದು ಮಾತ್ರವಲ್ಲದೆ, ಅದನ್ನು ನೆರವೇರಿಸುವ ವಿಷಯದಲ್ಲಿ ಸಾಧಕನಾಗಿರುವುದು ನನ್ನ ಕರ್ತವ್ಯವೆಂಬುದಾಗಿ ನಂಬಿರುತ್ತೇನೆ.

ಈ ಉದ್ದೇಶದಿಂದ, ಪ್ರಾಪ್ತವಯಸ್ಕರಾಗುವ ಮಹಾರಾಜರಾದ ತಮಗೆ ರಾಜ್ಯವನ್ನು ವಹಿಸುವ ಕಾಲದಲ್ಲಿ, ಬಹಳ ಜವಾಬ್ದಾರಿಯೂ ತೊಂದರೆಗಳೂ ಉಳ್ಳುದಾಗಿರುವ ರಾಜ್ಯಭಾರದ ನಿರ್ವಾಹಕ್ಕೆ ಅನುಕೂಲಗಳಾಗಿಯೂ ಅವುಗಳಲ್ಲಿರುವ ತೊಂದರೆಗಳನ್ನು ಕೂಡಿದಮಟ್ಟಿಗೆ

ನಿಷ್ಪತ್ತಿಪಾದುಪವ್ರಗಳಾಗಿಯೂ ಇರುವ ಸಮಯೋಚಿತವಾದ ಕಾರ್ಯಗಳನ್ನು ನಡೆಯಿಸಬೇಕೆಂಬುದು ನನ್ನ ಅಪೇಕ್ಷೆಯಾಗಿರುತ್ತದೆ. ಇಂತಹ ದೂರದೃಷ್ಟಿಯಿಂದ ಮಾಡತಕ್ಕ ಸನ್ನಾಹಗಳು ಎರಡು ವಿಧಗಳಾಗಿರುತ್ತವೆ. ಒಂದು ಭಾಗವು ನಮ್ಮ ಸರಕಾರದವರಿಂದ ಆಗತಕ್ಕುದಾಗಿರುತ್ತದೆ. ಆದರೆ ಮುಖ್ಯವಾದ ಇನ್ನೊಂದು ಭಾಗವು ಮಹಾರಾಜರವರಾದ ನಿಮ್ಮ ಸ್ವಂತ ವಿದ್ಯಾಬುದ್ಧಿ ಮೊದಲಾದ ಪ್ರಯತ್ನಗಳಿಂದಲೇ ಆಗಬೇಕಾಗಿದೆಯೆಂಬುದನ್ನು ಕುರಿತು ಎಷ್ಟು ಹೇಳಿದರೂ ಸ್ವಲ್ಪವೇ ಆಗಿರುತ್ತದೆ. ತಕ್ಕಕಾಲದಲ್ಲಿ ಮೈಸೂರು ಸಂಸ್ಥಾನದ ರಾಜ್ಯವನ್ನು ಬಹಳ ಅನುಕೂಲವಾದ ಸ್ಥಿತಿಯಲ್ಲಿ ತಮ್ಮ ವಶಪಡಿಸುವುದಕ್ಕೆ ನಮ್ಮ ಸರಕಾರದವರಿಂದ ಸರ್ವಪ್ರಯತ್ನವೂ ಮಾಡಲ್ಪಡುವುದು. ಇದೇ ನನ್ನ ಮನಃಪೂರ್ವಕವಾದ ಇಷ್ಟವು. ಇದನ್ನು ಪೂರಯಿಸುವುದಕ್ಕೆ ಸಾಧಕಗಳಾದ ಪ್ರಯತ್ನಗಳನ್ನು ಮುಖ್ಯವಾಗಿ ಆಲೋಚನೆಯಲ್ಲಿ ಇರುವಹಾಗೆ ಛೀಫ್ ಕಮಿಷನರವರಿಗೆ ಬರೆದುಕಳುಹಿಸಿದ್ದೇನೆ. ಆದರೆ ತಮ್ಮ ಮುಂದಣ ರಾಜ್ಯಭಾರಕ್ಕೆ ಕ್ಷೇಮವನ್ನುಂಟುಮಾಡುವುದರಲ್ಲಿ ಪ್ರಬಲವಾದ ಜವಾಬ್ದಾರಿಯ ಕೆಲಸಗಳು ತಮ್ಮಿಂದ ಸರಿಯಾಗಿ ಗ್ರಹಿಸಲ್ಪಡದೆ ಹೋದರೆ, ಅಥವಾ ಅಲಕ್ಷ್ಯಮಾಡಲ್ಪಟ್ಟರೆ, ನಮ್ಮ ಸರಕಾರದವರು ಮಾಡುವ ಸರ್ವಪ್ರಯತ್ನಗಳೂ ನಿಷ್ಪ್ರಯೋಜನಗಳಾಗುವುವು.

ನನ್ನ ಪ್ರಿಯಬಾಲಕರಾದ ಸ್ನೇಹಿತರೇ, ಮನಃಪೂರ್ವಕವಾದ ಅಧಿಕ ವಿಶ್ವಾಸದಿಂದಲೂ ತಮ್ಮ ಕ್ಷೇಮಚಿಂತನೆಯಲ್ಲಿ ಇರುವ ನಿಜವಾದ ಆಸಕ್ತಿಯಿಂದಲೂ ತಮಗೆ ಈ ಲೇಖನವನ್ನು ಬರೆದಿರುತ್ತೇನೆ. ದೊರೆತನಮಾಡುವ ಕೆಲಸವು ಬಹಳ ಕಷ್ಟವಾದುದು. ದೊರೆತನಮಾಡುವವರು ಅನೇಕ ಪ್ರಜೆಗಳ ಕ್ಷೇಮಲಾಭದ ಭಾರವನ್ನು ವಹಿಸಿದವರಾಗಿರುತ್ತಾರೆ. ಈ ಮಹಾಪದವಿಯ ಕೆಲಸಗಳನ್ನು ಸತ್ಯದಿಂದಲೂ ಸಾಮರ್ಥ್ಯದಿಂದಲೂ ಚೆನ್ನಾಗಿ ನಡೆಯಿಸಿದರೆ, ಅವರ ಸಂಸ್ಥಾನವು ಉನ್ನತಿಗೇರಿ ಅವರು ಪ್ರಜಾನುರಾಗಕ್ಕೆ ಪಾತ್ರರಾಗಿ, ಒಳ್ಳೇ ಪ್ರಜಾಪಾಲಕರೆಂಬುದಾಗಿ ಯಾವಾಗಲೂ ಸ್ತುತ್ಯರಾಗುವರು. ಹಾಗಲ್ಲದೆ ಅವರ ರಾಜ್ಯಭಾರವು ಕೆಟ್ಟುಹೋದುದೇ ಆದರೆ, ಅವರು ತಮ್ಮ ಸ್ವಂತ ಕ್ಷೇಮವನ್ನು ಹೋಗಲಾಡಿಸಿಕೊಳ್ಳುವುದಲ್ಲದೆ, ಪ್ರಜೆಗಳ ಕ್ಷೇಮವನ್ನೂ ಹೋಗಲಾಡಿಸುವರು. ಅದಕ್ಕಾಗಿ ಪ್ರಜೆಗಳು ಅವರನ್ನು ಬಹಳವಾಗಿ ನಿಂದಿಸುವರು. ಇದಕ್ಕೆ ದೃಷ್ಟಾಂತವೇನೆಂದರೆ—ಈಗ ಒಬ್ಬ ಮನುಷ್ಯನು ಕುದುರೆಯ ಸವಾರಿಯನ್ನು ಕಲಿತುಕೊಳ್ಳದೆ ಸವಾರಿ ಮಾಡಲಾರನೆಂಬುದನ್ನು ನೀವು ಚೆನ್ನಾಗಿ ಬಲ್ಲಿರಿ. ಹೀಗಿರುವಲ್ಲಿ, ಯಾರಾದರೂ ಸರಿಯೆ, ದೊರೆತನ ಮಾಡುವುದನ್ನು ಕಲಿತುಕೊಳ್ಳದೆ ಚೆನ್ನಾಗಿ ದೊರೆತನ ಮಾಡುವುದು ಸಾಧ್ಯವೆ? ಆದರೆ ದೊರೆತನ ಮಾಡುವುದನ್ನು ಹೇಗೆ ಕಲಿಯಬೇಕು? ಸವಾರಿ ಮಾಡುವುದನ್ನು ಕಲಿಯುವುದು ಹೇಗೋ ಅದೇಪ್ರಕಾರವೇ ದೊರೆತನ ಮಾಡುವುದನ್ನೂ ಕಲಿಯಬೇಕು. ಕಲಿಯತಕ್ಕವನು ಮೊದಲು ತಾನು ಕಲಿಯುವೆನೆಂಬುದಾಗಿ ಮನಸ್ಸಿನಲ್ಲಿ ನಿರ್ಧರಿಸಿಕೊಳ್ಳಬೇಕು. ಅನಂತರ ಕುದುರೆಯ ಸವಾರಿಗೆ ಹೇಗೆ ಕುದುರೆಯ ಗುಣಗಳನ್ನೂ ಬೇಕಾದ ಇತರ ಸಾಧನಗಳನ್ನೂ ತಿಳಿದುಕೊಳ್ಳುತ್ತಾನೆಯೋ ಹಾಗೆಯೇ ಪ್ರಜೆಗಳ ಗುಣಗಳನ್ನೂ ಅವರನ್ನು ಸೌಖ್ಯದಲ್ಲಿಡುವುದಕ್ಕೆ ಬೇಕಾದ ಉಪಕರಣಗಳನ್ನೂ ಚೆನ್ನಾಗಿ ತಿಳಿದುಕೊಳ್ಳಬೇಕು. ಬಳಿಕ ಪ್ರಜೆಗಳ ಯೋಗಕ್ಷೇಮ ಕಾರ್ಯವನ್ನು ಚೆನ್ನಾಗಿ ನಿರ್ವಾಹಮಾಡುವುದಕ್ಕೂ ಅಭಿವೃದ್ಧಿಗೆ ತರುವುದಕ್ಕೂ ಬೇಕಾದ ಸಮಸ್ತೋಪಾಯಗಳ ಮತ್ತು ಸಾಧನಗಳ ಸ್ವರೂಪಜ್ಞಾನವನ್ನು ಸಂಪಾದಿಸುವುದಕ್ಕೆ ಪ್ರಯತ್ನಪಡಬೇಕು. ಹೀಗೆ ಪಡೆದ ಪಾಂಡಿತ್ಯವನ್ನು ಸರಿಯಾಗಿ ಉಪಯೋಗಿಸತಕ್ಕ ಸಾಮರ್ಥ್ಯವುಂಟಾಗುವುದಕ್ಕೋಸ್ಕರ ತನ್ನ ಮನಸ್ಸನ್ನೂ ನಡತೆಯನ್ನೂ ಬಹು ಜಾಗರೂಕತೆಯಿಂದ ಸನ್ಮಾರ್ಗದಲ್ಲಿ ಪ್ರವರ್ತನ ಮಾಡಿಸತಕ್ಕುದು ಅತ್ಯಾವಶ್ಯಕ. ಮೊದಲು ಉತ್ಸಾಹದಿಂದ ಮಾಡುವ ಕೆಲಸಕ್ಕೆ ಫಲಕಾಲದಲ್ಲಿ ವಿಘ್ನವನ್ನುಂಟುಮಾಡುವುದಕ್ಕಾಗಿ ಬರುವ ಇತರ ಕಾರ್ಯಗಳಲ್ಲಿ ಚಾಪಲ್ಯವನ್ನು ಖಂಡಿತವಾಗಿ ಬಿಡಬೇಕು.

ಮಹಾರಾಜರವರಾದ ತಾವು ಈಗ ಬಹಳ ಚಿಕ್ಕವರಾಗಿದ್ದೀರಿ; ಆದರೆ ಬಹಳ ಬುದ್ಧಿ ಶಾಲಿತನವುಳ್ಳ ರಾಜರೂ ಬಹು ವಿವೇಕದಿಂದ ದೊರೆತನಮಾಡುವವರೂ ಇಂಗ್ಲಿಷ್ ಸರಕಾರದ ಶ್ರೇಷ್ಠವಾದ ವಿಶ್ವಾಸಕ್ಕೆ ಪಾತ್ರರಾದ ಸ್ನೇಹಿತರೂ ಎಂದು ಈ ಹಿಂದೂಸ್ಥಾನದ ಚರಿತ್ರೆಯಲ್ಲಿ ಹೆಸರು ಪಡೆದುಕೊಳ್ಳುವ ಮಹಾಪದವಿಯು ತಮಗೆ ಸಿಕ್ಕುವಹಾಗೆ ಜಗತ್ತಿನಲ್ಲಿ ಇತರರಿಗೆ ಸಿಕ್ಕುವುದು ಅಪೂರ್ವ. ಈಗ ಇಂಗ್ಲಿಷ್ ಸರಕಾರದವರ ರಕ್ಷಣೆಯಲ್ಲಿರುವ ಸಂಸ್ಥಾನವನ್ನು ಇನ್ನು ಸ್ವಲ್ಪ ಕಾಲದಲ್ಲಿ ನಿಮ್ಮ ಸ್ವಾಧೀನಮಾಡುವುದು ನ್ಯಾಯವಾಗಿ ತೋರುವಹಾಗೆ ನೀವು ತಕ್ಕ ವಿದ್ಯಾಭ್ಯಾಸವನ್ನೂ ಲೋಕೋತ್ತರವಾದ ನಡತೆಯನ್ನೂ ಸಂಪಾದಿಸಿಕೊಳ್ಳುವುದರಲ್ಲಿ ಈಗ ನಿಮ್ಮ ಕೈಲಾದ ಮಟ್ಟಿಗೆ ಒಂದು ನಿಮಿಷವನ್ನಾದರೂ ವ್ಯರ್ಥವಾಗಿ ಕಳೆಯಕೂಡದೆಂದು ಹೇಳುವುದರಲ್ಲಿ ಮನಃಪೂರ್ವಕವಾದ ವಿಶ್ವಾಸವುಳ್ಳ ಶುಭಾಕಾಂಕ್ಷಿಯಾಗಿರುತ್ತೇನೆ.

ಪ್ರೀತಿಪೂರ್ವಕವಾದ ವಿಶ್ವಾಸದಿಂದ ಪ್ರೇರಿತನಾಗಿ ಬಹಳ ಜವಾಬ್ದಾರಿಯುಳ್ಳ ತಮ್ಮ ವಿದ್ಯಾಭ್ಯಾಸವನ್ನು ಪೂರ್ತಿಮಾಡುವುದಕ್ಕಾಗಿ ಕ್ಯಾಪ್ಟನ್ ವಿಲ್ಸನ್ ಸಾಹೇಬರನ್ನು ತಕ್ಕವರೆಂದು ನಂಬಿ ಕಳುಹಿಸಿರುತ್ತೇನೆ. ಅವರು ನಿಮ್ಮ ಮುಂದಣ ಕ್ಷೇಮಕ್ಕೆ ಬೇಕಾಗಿರುವ ಸಕಲ ವಿಷಯಗಳನ್ನೂ ಮೈಸೂರು ಮಹಾರಾಣಿಯವರುಗಳ ಮನೋಗತಕ್ಕೂ ಅವರು ನಿಮ್ಮಲ್ಲಿಟ್ಟಿರುವ ಪುತ್ರವಾತ್ಸಲ್ಯಕ್ಕೂ ಅನುಗುಣವಾಗಿ, ಇಂಗ್ಲಿಷ್ ಸರಕಾರದವರು ಗೌರವವಾಗಿ ಎಣಿಸುವ ರೀತಿಯಲ್ಲಿ, ಬಹು ಚೆನ್ನಾಗಿ ನೋಡಿಯಾರು.

ನೀವು ಚಿಕ್ಕವರಾಗಿರುವ ಇನ್ನು ಕೆಲವು ವರುಷಗಳ ಕಾಲದಲ್ಲೇ, ನೀವು ಮುಂದಕ್ಕೆ ದೊರೆತನ ಮಾಡಬೇಕಾಗಿ ಬರುವ ರಾಜ್ಯದ ನಾನಾಭಾಗಗಳನ್ನೂ ಪ್ರಜೆಗಳನ್ನೂ ಚೆನ್ನಾಗಿ ತಿಳಿದುಕೊಳ್ಳುವುದಕ್ಕೋಸ್ಕರ ಕ್ಯಾಪ್ಟನ್ ವಿಲ್ಸನ್ ಸಾಹೇಬರ ಸಂಗಡ ಮೈಸೂರು ಸೀಮೆಯನ್ನೆಲ್ಲ ನೋಡಬೇಕೆಂಬುದು ನನ್ನ ಇಷ್ಟವಾಗಿದೆ. ಮಹಾರಾಜರವರು ರಾಜಧಾನಿಯಾದ ಮೈಸೂರನ್ನು ಬಿಟ್ಟು ಹೊರಗೆ ವಾಸಮಾಡಬೇಕೆಂಬುದು ನನ್ನ ತಾತ್ಪರ್ಯವಲ್ಲ. ಆದರೆ, ನಾನು ಈ ವಿಷಯದಲ್ಲಿ ಎಣಿಸುವುದೇನೆಂದರೆ--ವಿದ್ಯಾಭ್ಯಾಸಕ್ಕಾಗಿ ಮಾಡಲ್ಪಡುವ ಪ್ರಯಾಣಗಳು ತಮಗೆ ಪ್ರಯೋಜನಕರವಾಗಿಯೂ ತಮ್ಮ ಬಂಧುಗಳಿಗೆ ಸಮಾಧಾನಕರವಾಗಿಯೂ ನಡೆಯಬಹುದು. ತಾವು ರಾಜ್ಯಭಾರ ಮಾಡುವುದಕ್ಕೆ ಸರಿಯಾದ ಯೋಗ್ಯತೆಯನ್ನು ಹೊಂದಿದ್ದೀರೆಂಬುದಾಗಿ ನನಗೆ ದೃಢವಾಗಿ ತಿಳಿದಕೂಡಲೆ, ನಾನು ತಮ್ಮ ವಶಕ್ಕೆ ಒಪ್ಪಿಸುವುದಕ್ಕೆ ಸಿದ್ಧವಾಗಿರುವಂಥ ರಾಜ್ಯದ ನಾನಾಭಾಗಗಳನ್ನು ತಾವು ಹೋಗಿನೋಡಿ ಪ್ರಜಾಪಾಲನ ಮಾಡುವ ರೀತಿಯನ್ನು ಕಲಿತುಕೊಳ್ಳುವುದಕ್ಕೆ ಯಾವುದೊಂದು ಸಮಯವನ್ನೂ ವ್ಯರ್ಥವಾಗಿ ಕಳೆಯಕೂಡದೆಂಬ ನನ್ನ ಅಪೇಕ್ಷೆಗೆ ಅನುಸಾರವಾಗಿ ಮೈಸೂರು ಮಹಾರಾಜ್ಞಿಯರುಗಳ ಮನಸ್ಸೂ ಇದ್ದೀತೆಂಬುದಾಗಿ ನಂಬಿರುತ್ತೇನೆ.

ನನ್ನ ಸಂಪೂರ್ಣವಾದ ನಂಬಿಕೆಗೆ ಪಾತ್ರರಾಗಿಯೂ ಸಾಮರ್ಥ್ಯವುಳ್ಳವರಾಗಿಯೂ ಅನುಭವಶಾಲಿಗಳಾಗಿಯೂ ಸ್ನೇಹಭಾವದಲ್ಲಿ ವಿದ್ಯಾಭ್ಯಾಸ ಮಾಡಿಸುವವರಾಗಿಯೂ ಇರುವ ಕ್ಯಾಪ್ಟನ್ ವಿಲ್ಸನ್ ಸಾಹೇಬರವರ ಸಂಗಡ ನೀವು ಪದೇಪದೇ ಪ್ರಯಾಣಮಾಡುವುದರಿಂದ ಬಹಳ ಪ್ರಯೋಜನವಾದೀತೆಂಬುದಾಗಿಯೂ, ಇದರಿಂದ ವಿದ್ಯಾಭ್ಯಾಸವನ್ನೂ ವಿವೇಕವಾದ ಆಲೋಚನೆಗಳನ್ನೂ ಪಡೆಯುವ ಈ ಸಮಯದಲ್ಲಿ ನೀವು ಬಹು ಕುತೂಹಲದಿಂದಲೂ ಶ್ರದ್ಧೆಯಿಂದಲೂ ವಿದ್ಯಾಭ್ಯಾಸಮಾಡುವಿರಿ ಎಂಬುದಾಗಿಯೂ ನಾನು ಬಹಳ ನಂಬಿಕೆಯುಳ್ಳವನಾಗಿದ್ದೇನೆ.

ತಾವು ಮನಸ್ಸಿಟ್ಟು ಅಪೇಕ್ಷಿಸಿದರೆ, ವಿಲ್ಸನ್ ಸಾಹೇಬರವರು ತಮಗೆ ವಾಸ್ತವವಾದ ಮತ್ತು ವಿವೇಕವುಳ್ಳ ಸ್ನೇಹಿತರಾಗುವರು. ಹಿಂದೂಸ್ಥಾನದ ರಾಜ ರಾಜರಿಗೂ ಇದುವರೆಗೆ ಬರೆಯಲಟ್ಟ ಕಾಗದಗಳಿಗಿಂತ ದೊಡ್ಡ ಕಾಗದವನ್ನು ತಮಗೆ ನಾನು ಬರೆದಿರುತ್ತೇನೆ. ನಾನು

ಬಹಳ ಶ್ರದ್ಧೆಯುಳ್ಳ ತಮ್ಮ ಕ್ಷೇಮಚಿಂತಕನಾಗಿದ್ದೇನೆಂಬುದನ್ನೂ, ಈಗಿನ ಬಾಲ್ಯದ ಸ್ಥಿತಿಯಲ್ಲಿ ತಾವು ಮಾಡಬೇಕಾಗಿರುವ ವಿದ್ಯಾಭ್ಯಾಸ ಮೊದಲಾದ ಕೆಲಸಗಳನ್ನು ನಾನು ಮನಃಪೂರ್ವಕವಾಗಿ ತಿಳಿದು ಅವುಗಳಿಗೆ ಅನುಕೂಲವಾಗಿರುತ್ತೇನೆಂಬುದನ್ನೂ, ಮುಂದೆ ರಾಜ್ಯಭಾರ ಮಾಡುವವರಲ್ಲಿ ಉಂಟಾಗುವ ತೊಂದರೆಗಳನ್ನು ಕೂಡಿದಮಟ್ಟಿಗೆ ನಿವೃತ್ತಿ ಮಾಡಿ ತಮ್ಮನ್ನು ಕ್ಷೇಮದಲ್ಲಿಡುವುದಕ್ಕೆ ಸಾಧಕವಾದವುಗಳನ್ನು ಏರ್ಪಡಿಸುವುದಕ್ಕಾಗಿ ಬಹಳ ಅಪೇಕ್ಷೆಯುಳ್ಳವನಾಗಿರುತ್ತೇನೆಂಬುದನ್ನೂ ಈ ದೊಡ್ಡ ಕುಶಲಪತ್ರಿಕೆಯಿಂದಲೇ ನೀವು ತಿಳಿದುಕೊಳ್ಳುವಿರೆಂದು ನಂಬಿರುತ್ತೇನೆ.

ಮಹೋನ್ನತರಾದ ಶ್ರೀಮನ್ಮಹಾರಾಜ್ಞಿಯವರು ಹಿಂದೂಸ್ಥಾನದ ರಾಜ್ಯದ ಕ್ಷೇಮಲಾಭವನ್ನು ವಿಶೇಷ ಗಣನೆಯಲ್ಲಿಡುವುದಕ್ಕಾಗಿ ಹೊಸದಾಗಿ ಚಕ್ರವರ್ತಿನಿಯೆಂಬ ಹೆಸರನ್ನು ಗೌರವದಿಂದಲೂ ಸಂತೋಷದಿಂದಲೂ ಪಡೆದುದಕ್ಕೆ ಕಾರಣಗಳನ್ನು ಹಿಂದೂದೇಶದ ರಾಜರುಗಳಿಗೆ ನಾನೇ ಸ್ವತಃ ಪ್ರಸಿದ್ಧಿಪಡಿಸುವ ಉದ್ದೇಶದಿಂದ ಮುಂಬರುವ ಜನವರಿ ಮೊದಲನೆಯ ತಾರೀಖಿನಲ್ಲಿ ಒಂದು ದೊಡ್ಡ ರಾಜಸಭೆಯನ್ನು ಮಾಡುವುದಕ್ಕೆ ಏರ್ಪಡಿಸಿದ್ದೇನೆಂಬುದನ್ನು ಈ ಸಮಯದಲ್ಲಿ ತಮಗೆ ತಿಳಿಸುತ್ತೇನೆ. ಈ ಮಹೋತ್ಸವಕ್ಕೆ ತಾವು ಕುತೂಹಲದಿಂದಲೂ ವಿಶ್ವಾಸದಿಂದಲೂ ಬಿಜಯಂಗೈಯ್ಯುವಿರೆಂದು ಸಂಪೂರ್ಣವಾಗಿ ನಂಬಿ, ತಾವು ದಯೆಮಾಡಿಸಬೇಕೆಂಬುದಾಗಿ ಕೇಳಿಕೊಳ್ಳುತ್ತೇನೆ.

ಯಾವಾಗ ತಮ್ಮನ್ನು ಪ್ರತ್ಯಕ್ಷವಾಗಿ ಕಂಡು ತಮ್ಮ ಪರಿಚಯವನ್ನು ಹೊಂದುವೆನೋ ಎಂಬ ಆಶೆಯೂ, ತಮ್ಮನ್ನು ಈ ಸಭೆಗೆ ಕರೆಯುವ ಸಂತೋಷವೂ ನನಗೆ ಬಹಳವಾಗಿರುತ್ತವೆ. ಇದರ ಮಧ್ಯೇ ತಮ್ಮ ನಿಜಸ್ನೇಹಿತನೂ ಹಿತಚಿಂತಕನೂ ಆದ ನನ್ನಿಂದ ಆಗಬೇಕಾದ ಯಾವುದೊಂದು ಆಲೋಚನೆಯೇ ಆಗಲಿ, ಸಹಾಯವೇ ಆಗಲಿ ಆವಶ್ಯಕವಿದ್ದಲ್ಲಿ ನಾನು ತಮಗೆ ಹೇಗೆ ಧಾರಾಳವಾಗಿ ಈ ಕಾಗದವನ್ನು ಬರೆದು ಇದ್ದೇನೆಯೋ ಅದೇ ರೀತಿಯಲ್ಲಿ ನೀವೂ ಧಾರಾಳವಾಗಿ ನಂಬಿಕೆಯಿಂದ ಏನೂ ಸಂದೇಹಪಡದೆ ಬರೆಯುವಿರಿ ಎಂಬುದಾಗಿ ನಂಬಿರುತ್ತೇನೆ.

ತಮ್ಮ ನಿಜಸ್ನೇಹಿತನೂ ಹಿತಚಿಂತಕನೂ ಆದ,
ಲಿಟ್ಟನ್.

ಈ ಕಾಗದ ತಲಪಿದ ಕೆಲವು ದಿವಸದಮೇಲೆ ಶ್ರೀಮನ್ಮಹಾರಾಜರವರು ವೈಸ್ರಾಯಿಯವರಿಂದ ಆಹ್ವಾನಿತರಾಗಿ ವಿಕ್ಟೋರಿಯಾ ಮಹಾರಾಜ್ಞಿಯವರು ಇಂಡಿಯಾ ಚಕ್ರವರ್ತಿನಿಯೆಂಬ ಬಿರುದನ್ನು ವಹಿಸಿದ ಸಂದರ್ಭದಲ್ಲಿ ಡೆಲ್ಲಿಯಲ್ಲಿ ಸೇರಿದ ಮಹಾಜನಸಭೆಗೆ ೧೮೭೬ನೆಯ ಇಸವಿ ಡಿಸೆಂಬರ್ ತಾರೀಖು ೧೦ನೆಯ ಭಾನುವಾರ ಮಧ್ಯಾಹ್ನ ತಮ್ಮ ಸಹೋದರರಾದ ಪ್ರಿನ್ಸ್ ಗೋಪಾಲರಾಜ ಅರಸಿನವರು, ಪ್ರಿನ್ಸ್ ಸುಬ್ರಹ್ಮಣ್ಯರಾಜ ಅರಸಿನವರು, ಬಾವಂದಿರಾದ ಬಕ್ಷಿ ಬಸಪ್ಪಾಜಿ ಅರಸಿನವರು, ದಳವಾಯಿ ದೇವರಾಜ ಅರಸಿನವರು ಮುಂತಾದ ರಾಜಬಂಧುಗಳಿಂದಲೂ, ಛೀಫ್ ಕಮಿಷನರ್ ಸಿ. ಬಿ. ಸಾಂಡರ್ಸ್ ಸಾಹೇಬರು, ಜುಡಿಷಿಯಲ್ ಕಮಿಷನರ್ ಜೆ. ಡಿ. ಗಾರ್ಡನ್ ಸಾಹೇಬರು, ಛೀಫ್ ಸೆಕ್ರೆಟರಿ ಮೇಜರ್ ಟ್ರೆಡ್‌ವೆ ಕ್ಲಾರ್ಕ್ ಸಾಹೇಬರು, ಸಿ. ವಿ. ರಂಗಾಚಾರ್ಯರು, ಅಂಬಲ್ ನರಸಿಂಹಯ್ಯಂಗಾರ್ಯರು ಮುಂತಾದ ಅಧಿಕಾರಿಗಳಿಂದಲೂ ಕೂಡಿ ಸಕಲ ಸೇನಾ ಸಂವೃತರಾಗಿ ಡೆಲ್ಲಿಗೆ ದಯಮಾಡಿಸಿದರು.

ಶ್ರೀಮನ್ಮಹಾರಾಜರವರ ಹೆಲಿಯಾತ್.

ಈ ಪ್ರಾಚೀನ ಪಟ್ಟಣದಲ್ಲಿ ನಡೆದ ಚಿರಸ್ಮರಣೀಯವಾದ ಈ ಮಹಾ ಸಭಾ ಮಹೋತ್ಸವಕ್ಕೆ ಶ್ರೀಮನ್ಮಹಾರಾಜರವರು ದಯಮಾಡಿದುದು ಈ ಚರಿತ್ರೆಯಲ್ಲಿ ಒಂದು ಮುಖ್ಯತಮವಾದ ವಿಷಯವಾಗಿದೆ. ಏಕೆಂದರೆ: ಪೂರ್ವದಲ್ಲಿ ಅಷ್ಟದಿಕ್ಕುಗಳಲ್ಲಿರುವ ಸಕಲ ಪೃಥ್ವೀಪಾಲರನ್ನೂ ಜಯಿಸಿದ ಸಾರ್ವಭೌಮರು ಕೈಕೊಳ್ಳುತ್ತಿದ್ದ ರಾಜಸೂಯಾಶ್ವಮೇಧ ಮುಂತಾದ ಯಾಗಗಳ ಸಂಭ್ರಮದಲ್ಲಿ ಇಂತಹ ಮಹಾಸಭೆಗಳು ಸೇರುತ್ತಿದ್ದುವು. ಆದರೆ ಕೀರ್ತಿಶೇಷನಾದ ಧರ್ಮರಾಜನ ಕಾಲದಿಂದೀಚೆಗೆ ಕೇವಲ ಕಷ್ಟಸಾಧ್ಯವಾದ ಈ ಯಾಗಗಳನ್ನು ಯಾವ ರಾಜನೂ ಕೈಕೊಳ್ಳಲಿಲ್ಲ, ಇಂತಹ ಸಭೆಯೂ ಸೇರಲಿಲ್ಲ. ಪ್ರಕೃತದಲ್ಲಿ ನಡೆದ ಉತ್ಸವವು ಈ ವಿಸ್ತಾರವಾದ ರಾಜ್ಯದ



ಶ್ರೀಮನ್ಮಹಾರಾಜರವರ ಡೆಲ್ಲೀ ಕ್ಯಾಂಪು.

ಸಕಲ ಭಾಗಗಳ ರಾಜರುಗಳನ್ನೂ ಪ್ರಜೆಗಳನ್ನೂ ಮೈತ್ರೀಭಾವದಲ್ಲಿ ಒಂದುಗೂಡಿಸ ತಕ್ಕುದಾಗಿ ಇಪ್ಪುದು ಮಾತ್ರವಲ್ಲದೆ, ನಿರಪಾಯವಾದ ರಾಜ್ಯಕ್ಷೇಮಾಭಿವೃದ್ಧಿಗೂ ಶಿಲ್ಪಕರಾದಿಗಳ ಪ್ರೋತ್ಸಾಹಕ್ಕೂ ಸಾಧನವಾದುದೆಂಬಂಶವನ್ನು ಎಲ್ಲರ ಮನಸ್ಸಿ ನಲ್ಲಿಯೂ ಚೆನ್ನಾಗಿ ನೆಲೆಗೊಳಿಸಿತು. ಈ ದಿವ್ಯಮಹೋತ್ಸವವು ಅನೇಕ ಚಕ್ರವರ್ತಿಗಳಿಗೆ ರಾಜಧಾನಿಯಾಗಿದ್ದ ಡೆಲ್ಲೀ ಪಟ್ಟಣದಲ್ಲಿ ನಡೆಯತಕ್ಕುದೆಂದು ನಿರ್ಧರವಾದ ಬಳಿಕ, ವೈಸ್ರಾಯಿಯವರೂ, ಭರತಖಂಡದ ಸಕಲ ರಾಜರುಗಳೂ, ಇಂಗ್ಲೆಂಡ್ ಫ್ರಾನ್ಸ್ ಮುಂತಾದ ಚಕ್ರಾಧಿಪತ್ಯಗಳ ಪ್ರತಿನಿಧಿಗಳೂ, ಬಂಗಾಳ ಮದರಾಸ್ ಮುಂಬಯಿ ಪ್ರಾಂತಗಳ ಗವರ್ನರುಗಳೂ, ಸೇನಾಪತಿಗಳೂ, ನ್ಯಾಯಾಧ್ಯಕ್ಷರುಗಳೂ, ಆಶ್ರಿತ ಸಂಸ್ಥಾನಗಳ ರೆಸಿಡೆಂಟರುಗಳೂ, ಇತರ ಅಧಿಕಾರಿಗಳೂ ಪರಿವಾರ ಸಹಿತರಾಗಿ ಬಂದು ಸೇರಿದರು. ಇಷ್ಟು ಜನ ದೊರೆಗಳೂ ಅವರ ಸೈನ್ಯವೂ ಏಕಕಾಲದಲ್ಲಿ ಡೆಲ್ಲಿಯಲ್ಲಿ ಸೇರಿ, ಪ್ರಳಯಕಾಲಪ್ರಭಂಜನ ಸಂಕ್ಷುಭಿತಾಬ್ಧಿಯಂತೆ ಉದ್ಘೋಷಿಸುತ್ತಿ ದ್ದುದನ್ನು ನೋಡಿದ ಡೆಲ್ಲಿಯ ಜನಗಳು ಏಕಚ್ಛತ್ರಾಧಿಪತ್ಯದ ಸ್ಮರಣೆಗೂ ಇತಿಹಾಸೋ ಕ್ತಿಗೂ ಆವಾಸಭೂತವಾದ ಈ ನಗರದಲ್ಲಿ ತಿರುಗೇನಾದರೂ ಕುರುಸೇನೆ ಕೂಡಿತೋ ಎಂದು ಭ್ರಾಂತರಾಗುತ್ತಿದ್ದರು. ಆ ಕಾಲದಲ್ಲಿ ವೈಸ್ರಾಯಿ ಲಾರ್ಡ್ ಲಿಟ್ಟನ್ ಸಾಹೇ ಬರು ಸಕಲ ಸಾಮಂತರಾಜರೊಡನೆಯೂ ಗವರ್ನರುಗಳೊಡನೆಯೂ ಸೇರಿ ಅಂಬಾರಿ ಗಳಲ್ಲಿ ಕುಳಿತು ಹೊರಟ ಉತ್ಸವವು ಭರತಖಂಡದ ಇತಿಹಾಸದಲ್ಲೆಲ್ಲ ಅಶ್ರುತದೃಷ್ಟ ಪೂರ್ವವೆನಿಸಿಕೊಂಡಿತು. ಆ ಮಹಾಸಭಾಮಂಟಪದಲ್ಲಿ ಶ್ರೀಚಾಮರಾಜೇಂದ್ರ ಒಡೆಯ ರವರಿಗೂ ಗಾಯಕವಾಡರಿಗೂ ನಿಜಾಮರಿಗೂ ಪ್ರತ್ಯೇಕ ದಿವ್ಯಪೀಠಗಳನ್ನೇರ್ಪಡಿಸಿ ದ್ದುದರಿಂದ ಇವರ ಗೌರವವೂ, ಈ ರಾಜರಿಗೂ ಇತರ ರಾಜರಿಗೂ ಇದ್ದ ತಾರ ತಮ್ಯವೂ ಪ್ರಕಾಶಿತವಾಯಿತು. ವೈಸ್ರಾಯಿಯವರು ಮೈಸೂರು ಮಹಾರಾಜರಲ್ಲಿ ತಮಗಿರುವ ಆದರವನ್ನೂ ಸ್ನೇಹವನ್ನೂ ವ್ಯಕ್ತಪಡಿಸುವುದಕ್ಕಾಗಿ, ಯೋಗ್ಯವಾದ ಕೆಲವು ಸದ್ಗ್ರಂಥಗಳನ್ನು ಬಹುಮಾನಪೂರ್ವಕವಾಗಿ ಕಳುಹಿಸಿಕೊಟ್ಟರು. ಅವುಗಳ ರಕ್ಷಾಪತ್ರದಲ್ಲಿ—

His Highness Maharaja
Chamarajendra Wadiyar Bahadur of Mysore,
From His Highness' Sincere Well-wisher,
LYTTON.

Delhi, January 1st, 1877.

"ಮೈಸೂರು ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಅವರಿಗೆ, ಅವರ ನಿಜವಾದ ಹಿತಚಿಂತಕ ಲಿಟ್ಟನ್ ಒಪ್ಪಿಸಿದುದು ; ಡೆಲ್ಲಿ, ಜನವರಿ ೧ನೆ ತಾರೀಖು ೧೮೭೭ನೆಯ ಇಸವಿ" ಎಂದು ಸ್ವಹಸ್ತಾಕ್ಷರಗಳಿಂದ ಬರೆದಿರುವರು.

ಶ್ರೀಮನ್ಮಹಾರಾಜರವರು ಡೆಲ್ಲಿಯಲ್ಲಿದ್ದ ಕಾಲದಲ್ಲಿ, ಅವರ ಸ್ವೀಕೃತ ಮಾತೆ ಯವರೂ ರಮಾವಿಲಾಸ ಸನ್ನಿಧಾನದ ಮಹಾರಾಜ್ಞಿಯವರೂ ಆದ ಚೆಲುವಾಜಮ್ಮಣ್ಣಿ

ಯವರು ಈ ಕೆಳಗೆ ಹೇಳುವ ಲೇಖನವನ್ನು ಬರೆದಿರುವರು. ಇದರಿಂದ, ಅವರಿಗೆ ಮಹಾರಾಜರ ಮೇಲೆಯೂ ಸ್ವಬಂಧುಗಳ ಮೇಲೆಯೂ ಪ್ರಜೆಗಳ ಮೇಲೆಯೂ ಇದ್ದ ವಿಶ್ವಾಸಾತಿಶಯವೂ, ಬ್ರಿಟಿಷ್ ಸರಕಾರದವರಲ್ಲಿದ್ದ ರಾಜಭಕ್ತಿಯೂ, ಈ ಸಂಸ್ಥಾನದ ರಕ್ಷಣೆಯಲ್ಲಿದ್ದ ಆದರವೂ ವ್ಯಕ್ತವಾಗುತ್ತದೆ.

ಮಹಾಮಾತೃಶ್ರೀಯವರಾದ ರಮಾವಿಲಾಸ ಸನ್ನಿಧಾನದಿಂದ.

ಚಿರಂಜೀವಿ ವಿಜಯಾಭವ ಸಹಸ್ರಾಯುಷ್ಯರಾದ ಅಯ್ಯಾಜಿಯವರಿಗೆ ಹರಸಿ ಕಳುಹಿಸಿದ ಅನಂತವಾದ ಅಮೋಘಾಶೀರ್ವಾದಗಳು. ಈ ಧಾತುಸಂವತ್ಸರದ ಪುಷ್ಯ ಶುದ್ಧ ತ್ರಯೋದಶೀ ಪರ್ಯಂತರ ಇಲ್ಲಿರುವಂದ ಚಿರಂಜೀವಿ ಸೌಭಾಗ್ಯವತಿ ಮರಿಯಮ್ಮಣ್ಣಿ ಆದಿಯಾಗಿ ಸಮಸ್ತರಿಂದಲೂ ಶ್ರೀಚಾಮುಂಡೇಶ್ವರೀ ಕಟಾಕ್ಷದಿಂದ ನಾವು ಆರೋಗ್ಯದಲ್ಲಿದ್ದೇವೆ. ಅಲ್ಲಿ ಇರುವಂಥ ಚಿರಂಜೀವಿಗಳಾದ ಗೋಪಾಲಸ್ವಾಮಿ, ಸುಬ್ರಹ್ಮಣ್ಯಸ್ವಾಮಿ ಮುಂತಾಗಿ ಸರ್ವರಿಂದಲೂ ಶ್ರೀಚಾಮುಂಡೇಶ್ವರೀ ಕೃಪೆಯಿಂದ ನೀವೂ ಆರೋಗ್ಯಭಾಗ್ಯಾತಿಶಯದಲ್ಲಿ ಇರುವ ಬಗ್ಗೆ ಬರೆಯುತ್ತಾ ಬಂದು ಸಂತೋಷಪಡಿಸಬೇಕು. ನೀವು ನಿನ್ನೇ ದಿವಸ ಕಳುಹಿಸಿದ ತಂತೀ ಸಮಾಚಾರದಿಂದ ನಿಮ್ಮ ಕುಶಲಗಳನ್ನು ತಿಳಿದು ಬಹಳ ಸಮಾಧಾನಪಡುತ್ತ ಇದ್ದೇವೆ. ದಿನವಹಿಯಲ್ಲೂ ಸಕಾಲದಲ್ಲಿ ಸ್ನಾನ, ಸಂಧ್ಯಾವಂದನೆ, ನಿತ್ಯದಾನ, ಗೋಪೂಜೆ, ಆರೋಗಣೆ ಇವು ಯಾವತ್ತೂ ಪದ್ಧತಿಯ ಪ್ರಕಾರ ಜರಿಸುತ್ತ ಬಂದು, ಆ ಸಂಗತಿ ಬರೆಸಬೇಕು. ನಿನ್ನೇ ದಿವಸ ನಾವು ತಂತೀವರ್ತಮಾನ ಬಿಡಿಸಿರುವ ಮೇರೆ, ಮಹಾಘನತೆಹೊಂದಿದ ಗವರ್ನರ್ ಜನರಲ್ ಸಾಹೇಬ್ ಬಹದ್ದೂರ್ರವರಿಗೆ ನಮ್ಮ ಕಡೆಯಿಂದ ವಿಶೇಷ ಮರ್ಯಾದೋಚಿತವಾದ ಸಲಾಮುಗಳನ್ನು ತಿಳಿಸಬೇಕಲ್ಲದೆ, ನಮ್ಮ ಸಂಸ್ಥಾನವನ್ನು ಎಲ್ಲಾ ವಿಧದಿಂದಲೂ ಅಭಿವೃದ್ಧಿಗೆ ತಂದು ಪೂರ್ವದಂತೆ ವಿಶಿಷ್ಟ ಮರ್ಯಾದೆಗಳನ್ನೆಲ್ಲ ನಡೆಯಿಸಿಕೊಂಡು ಬರಬೇಕೆಂದೂ, ಸರ್ವವಿಷಯದಲ್ಲಿಯೂ ಬ್ರಿಟಿಷ್ ಗವರ್ನಮೆಂಟಿನವರನ್ನು ತಂದೆತಾಯಿಗಳಂತೆ ಭಾವಿಸಿಕೊಂಡು ಇದ್ದೇವೆಂದೂ, ನಮ್ಮ ಛೀಫ್ ಕಮಿಷನರ್ ಸಾಹೇಬರ ಮೂಲಕವಾಗಿಯೂ, ಕ್ಯಾಪ್ಟನ್ ವಿಲ್ಸನ್ ಸಾಹೇಬರ ಕಡೆಯಿಂದಲೂ, ನಮ್ಮ ರಂಗಾಚಾರ್ಯರ ಮುಖವಾಗಿಯೂ ಶ್ರುತಪಡಿಸಬೇಕು. ಮುಖ್ಯವಾಗಿ, ಅಭಿಮಾನಶಾಲಿಗಳಾದವರಿಗೆ ನಾವು ವಿಶೇಷವಾಗಿ ತಿಳಿಯಪಡಿಸಿ ಮುಂದಿನ ಕಾರ್ಯಗಳು ಸಾಧಿತವಾಗಬೇಕೆಂಬುದು ಇಲ್ಲ. ನಮ್ಮ ಬಳಿ ಚಿರಂಜೀವಿ ಸೌಭಾಗ್ಯವತಿ ಮರಿಯಮ್ಮಣ್ಣಿ, ದೇವೀರಮ್ಮಣ್ಣಿ, ಚಿರಂಜೀವಿ ಮಗು ಮುಂತಾದವರೆಲ್ಲರೂ ಆರೋಗ್ಯವಾಗಿದ್ದಾರೆ.

ಚಿರಂಜೀವಿ ಸಹಸ್ರಾಯುಷ್ಯನಾದ ಅಯ್ಯಾಜಿಯವರಿಗೆ ಮಾಡುವ ಅನಂತ ಆಶೀರ್ವಾದ.

ಈ ಉತ್ಸವಾನಂತರದಲ್ಲಿ ಶ್ರೀಮನ್ಮಹಾರಾಜರವರು ಡೆಲ್ಲೀ ರಾಜಧಾನಿಯಲ್ಲಿ ವ ದಿವಾನೀಖಾಸನ್ನೂ ಆಗ್ರಾದಲ್ಲಿರುವ ತಾಜಮಹಲನ್ನೂ ನೋಡಿಕೊಂಡು, ಸ್ಸಿಂದ ಹೊರಟು ಗೋಕುಲಬೃಂದಾವನ, ಕಾಶಿ, ಗಯಾ, ಪ್ರಯಾಗ ಮುಂತಾದ ತ್ರಕ್ಷೇತ್ರಗಳಲ್ಲಿ ಸಂಚಾರಮಾಡುತ್ತ ಸಮವಯಸ್ಕರಾದ ಅನೇಕ ಭಾರತೀಯ ಸ್ಥಾನಾಧಿಪತಿಗಳ ಪರಿಚಯವನ್ನು ಮಾಡಿಕೊಂಡು ಬಂದು ಪುನಃ ನಿಜ ನಗರಿನ್ನು ಸೇರಿದರು.

ಡೆಲ್ಲಿಯ ಮಹಾಸಭೆಗೆ ಹೋಗಿಬರುವ ವರೆಗೆ ಶ್ರೀಮನ್ಮಹಾರಾಜರವರ ವಿದ್ಯಾ
ಭ್ಯಾಸಂಗಕ್ಕೆ ಸ್ವಲ್ಪ ಚ್ಯುತಿಯುಂಟಾದಂತಿದ್ದರೂ, ವಿಲ್ಸನ್ ಸಾಹೇಬರೂ ಗಾರ್ಡನ
ಸಾಹೇಬರೂ ಮಹಾರಾಜರವರಿಗೆ ಅನೇಕ ಇತಿಹಾಸ ಪ್ರಸಿದ್ಧರಾದ ರಾಜ
ಕಥೆಗಳನ್ನೂ, ಪ್ರಪಂಚದ ನಾನಾಭಾಗದ ಚರಿತ್ರೆಗಳನ್ನೂ, ರಾಜನೀತಿಗಳನ್ನ
ಹೇಳಿಕೊಡುತ್ತಿದ್ದರು. ಈ ಸಂದರ್ಭದಲ್ಲಿ ಕ್ಯಾಪ್ಟನ್ ವಿಲ್ಸನ್ ಅವರಿಗೂ ಕರ್ನಲ
ಮ್ಯಾಲಿಸನ್ ಅವರಿಗೂ ಅಧಿಕಾರದಲ್ಲಿ ಬಹಳ ವ್ಯತ್ಯಾಸವಿದ್ದಿತು. ವಿಲ್ಸನ್ ಸಾಹೇಬರ
ಮ್ಯಾಲಿಸನ್ ಸಾಹೇಬರಹಾಗೆ ಗಾರ್ಡಿಯನ (ರಕ್ಷಕ) ರಾಗಿರಲಿಲ್ಲ. ಟ್ಯೂಟರಾಗಿ (ಶಿಕ್ಷ
ರಾಗಿ) ಮಾತ್ರವೇ ಇದ್ದರು. ಹೀಗೆ ಸ್ವಲ್ಪ ಹೆಚ್ಚುಕಡಿಮೆ ಒಂದೂವರೆ ವರುಷಕಾ
ನಡೆವುದರೊಳಗಾಗಿ ಮಹಾರಾಜರಿಗೆ ಒಬ್ಬ ಗಾರ್ಡಿಯನರೂ, ವಿಲ್ಸನ್ ಸಾಹೇಬ
ಗಿಂತ ಹೆಚ್ಚು ಅನುಭವಶಾಲಿಗಳಾದ ಮತ್ತೊಬ್ಬ ಇಂಗ್ಲಿಷ್ ಉಪಾಧ್ಯಾಯರು
ಇರಬೇಕೆಂಬುದಾಗಿ ಮಹಾರಾಜ್ಞಿಯವರಿಗೆ ತೋರಿಬಂದುದರಿಂದ, ಅವರ
೧೮೭೭ನೆಯ ಇಸವಿಯಲ್ಲಿ ತಮ್ಮ ಇಷ್ಟವನ್ನು ಲೇಖನ ಮೂಲಕವಾಗಿ ವೈಸ್ರಾಯಿಯವ
ರಿಗೆ ಶ್ರುತಪಡಿಸಿದರು. ಆ ಲೇಖನಕ್ಕೆ ವೈಸ್ರಾಯಿಯವರು ಇತ್ತ ಉತ್ತರವೇನೆಂದರೆ
"ನೀವು ಮಹಾರಾಜರವರ ವಿದ್ಯಾಭ್ಯಾಸ ವಿಷಯವಾಗಿ ಬರೆದಿರೋಣವಾಗಿದೆ. ಈ
ವಿಷಯದಲ್ಲಿ ಇಂಡಿಯಾ ಸರಕಾರದವರು ಬಹುಕಾಲ ಚೆನ್ನಾಗಿ ಆಲೋಚಿಸಿ ಮಾಡಿ
ರುವ ಏರ್ಪಾಟನ್ನು ನಾನು ನನ್ನ ಸ್ವಂತ ವಿಷಯದಂತೆ ಅತ್ಯಂತ ಶ್ರದ್ಧೆಯಿಂ
ಗ್ರಹಿಸಿರುತ್ತೇನೆ. ಮಹಾರಾಜರವರ ವಿದ್ಯಾಭ್ಯಾಸ ವಿಷಯದಲ್ಲಿಯೂ, ಅವ
ಬುದ್ಧಿಗೆ ವಿಕಾಸವನ್ನುಂಟುಮಾಡುವ ವಿಷಯದಲ್ಲಿಯೂ, ಈಗ ಮಾಡಿರುವ ಏರ್ಪಾ
ಟುಗಳು ಕೆಲವು ಭಾಗದಲ್ಲಿ ಕಡಿಮೆಯಾಗಿರುವುದಾಗಿ ತಾವು ಗ್ರಹಿಸಿರುವಂತೆ ನನಗೆ
ತೋರಿಬರುತ್ತೆಯಾದುದರಿಂದ, ಗಾರ್ಡಿಯನ್ ಅಧಿಕಾರವನ್ನು ಪುನಃ ಏರ್ಪಾಟು
ಮಾಡುವುದಕ್ಕೂ ಮಹಾರಾಜರವರ ವಿದ್ಯಾಭ್ಯಾಸವನ್ನು ನಡೆಯಿಸುವುದಕ್ಕೂ,
ಯೂನಿವರ್ಸಿಟಿಯಲ್ಲಿ ವಿದ್ಯಾಭ್ಯಾಸ ಮಾಡಿದವನಾಗಿಯೂ ಅನುಭವಶಾಲಿಯಾಗಿಯೂ
ಇರುವ ಒಬ್ಬ ಉಪಾಧ್ಯಾಯನನ್ನು ನೇಮಿಸುವ ವಿಷಯದಲ್ಲಿ ನಮ್ಮ ಸರಕಾರದವರು
ಇಂಗ್ಲೆಂಡ್ ಮಹಾರಾಜ್ಞಿಯವರ ಸರಕಾರಕ್ಕೆ ಬರೆಯಿಸಿದ್ದಾರೆ."

ಬಳಿಕ ಇದೇ ವಿಷಯವಾಗಿ ಪುನಃ ವೈಸ್ರಾಯಿಯವರಿಗೂ ಇಂಡಿಯಾ ಸ್ಟೇಟ್
ಸೆಕ್ರೆಟರಿಯವರಿಗೂ ಬಹಳ ಚರ್ಚೆ ನಡೆದು, ಅದೇ ವರುಷದ ಜೂಲೈ ತಿಂಗಳಲ್ಲಿ
ದಕ್ಷಿಣದೇಶದೊಳಗೆ ವಿದ್ಯಾಭ್ಯಾಸ ವಿಚಾರದಲ್ಲಿ ಬಹುಸಮರ್ಥರೆಂದು ಪ್ರಸಿದ್ಧಿ
ಗೊಂಡಿದ್ದ ವಿಲಿಯಂ ಪೋರ್ಟರ್ ಸಾಹೇಬರನ್ನು ಉಪಾಧ್ಯಾಯರನ್ನಾಗಿಯೂ
ಸರ್ ಜೇಮ್ಸ್ ಗಾರ್ಡನ್* ಸಾಹೇಬರನ್ನು ಗಾರ್ಡಿಯನರನ್ನಾಗಿಯೂ ನೇಮಕ
ಮಾಡಿದರು.

---

* ಇವರು ಈ ಸಂಸ್ಥಾನಕ್ಕೆ ಮಾಡಿದ ಒಳ್ಳೆಯ ಕೆಲಸಗಳ ಜ್ಞಾಪನಾರ್ಥವಾಗಿ ಇವ
ಲೋಹಪ್ರತಿಮೆಯು ಮೈಸೂರು ಅಠಾರಾ ಕಚೇರಿಯ ಮುಂದುಗಡೆಯಲ್ಲಿ ನಿಲ್ಲಿಸಲ್ಪಟ್ಟಿದೆ.

ಡೆಲ್ಲಿಯ ದರ್ಬಾರು ನಡೆದ ಕೆಲವು ತಿಂಗಳುಗಳನಂತರ—ಎಂದರೆ, ೧೮೭೭ನೆಯ ಇಸವಿ ಸೆಪ್ಟಂಬರ್ ತಾರೀಖು ೧೭ರಲ್ಲಿ, ವೈಸ್ರಾಯಿಯವರಾದ ಲಾರ್ಡ್ ಲಿಟ್ಟನ್ ಸಾಹೇಬರವರು ನೀಲಗಿರಿಯ ಮಾರ್ಗವಾಗಿ ಮೈಸೂರಿಗೆ ದಯಮಾಡಿಸಿದರು. ಆ ಕಾಲದಲ್ಲಿ ಭರತಖಂಡದ ಎಲ್ಲ ಕಡೆಗಳಲ್ಲಿಯೂ ವೀರಕ್ಷಾಮವು ಆವರಿಸಿಕೊಂಡಿದ್ದಿತು. ವೈಸ್ರಾಯಿಯವರು ಶ್ರೀಮನ್ಮಹಾರಾಜರವರ ಮತ್ತು ವೃದ್ಧಮಹಾರಾಜ್ಞಿಯವರುಗಳ ಸಂದರ್ಶನವನ್ನು ತೆಗೆದುಕೊಂಡ ಬಳಿಕ, ತರುಣ ಮಹಾರಾಜರಿಗೆ ಪಾಠ ಪ್ರವಚನಗಳು ನಡೆಯುವ ಸ್ಥಳವನ್ನೂ ಅವರು ಮಲಗುವ ಸ್ಥಳವನ್ನೂ ಪರಾಮರ್ಶಿಸಿ ಶ್ರೀಮನ್ಮಹಾರಾಜರವರ ವಿದ್ಯಾಭ್ಯಾಸ ವಿಷಯದಲ್ಲೂ ಕ್ಷಾಮಪೀಡಿತರ ರಕ್ಷಣೆಯ ವಿಷಯದಲ್ಲೂ ಹೆಚ್ಚಾದ ಪರಾಮರಿಕೆಯನ್ನಿಡಬೇಕೆಂಬುದಾಗಿ ರಂಗಾಚಾರ್ಯರಿಗೂ ಛೀಫ್ ಕಮಿಷನರಿಗೂ ತಿಳಿಯಪಡಿಸಿ ಉತ್ತರ ಪ್ರಾಂತಕ್ಕೆ ತೆರಳಿದರು. ಬಳಿಕ ಅದೇ ವರುಷದ ಅಕ್ಟೋಬರ್ ತಾರೀಖು ೧೧ರಲ್ಲಿ, ಮುಮ್ಮಡಿ ಕೃಷ್ಣರಾಜ ಒಡೆಯರವರ ತೃತೀಯ ಪಟ್ಟಮಹಿಷಿಯರೂ ಶ್ರೀಚಾಮರಾಜೇಂದ್ರ ಒಡೆಯರವರ ಸ್ವೀಕೃತ ಜನನಿಯರೂ ಆದ ರಮಾವಿಲಾಸ ಸನ್ನಿಧಾನದ ಚೆಲುವಾಜಮ್ಮಣ್ಣಿಯವರು ಪತಿಲೋಕವನ್ನು ಪಡೆದರು. ಅಲ್ಲಿಂದಮುಂದೆ ಶ್ರೀಮನ್ಮಹಾರಾಜರವರ ಪೋಷಣೆಯು ಸಂಪೂರ್ಣವಾಗಿ ಸೀತಾವಿಲಾಸ ಸನ್ನಿಧಾನದವರಿಗೆ ಸೇರಿತು.

ಪೋರ್ಟರ್ ಸಾಹೇಬರು ಬಂದಮೇಲೆ ಮಹಾರಾಜರವರ ವಿದ್ಯಾಭ್ಯಾಸ ಕ್ರಮದಲ್ಲಿ ಒಂದು ದೊಡ್ಡ ಬದಲಾವಣೆ ನಡೆಯಿತು. ಅದುವರೆಗೂ ಮಹಾರಾಜರಿಗೆ ಪಾಠವು ಸ್ಕೂಲಿನಲ್ಲಿ ಇತರ ಬಾಲಕರ ಜೊತೆಯಲ್ಲಿಯೇ ನಡೆಯುತ್ತಿದ್ದಿತು. ಪೋರ್ಟರ್ ಸಾಹೇಬರು ಅದನ್ನು ತಪ್ಪಿಸಿಬಿಟ್ಟು ತಾವು ಪ್ರತ್ಯೇಕವಾಗಿ ಮಹಾರಾಜರೊಬ್ಬರಿಗೆ ಮಾತ್ರವೇ ಪಾಠಗಳನ್ನು ಹೇಳಿಕೊಡಲಾರಂಭಿಸಿದರು. ಪ್ರಕೃತಿಶಾಸ್ತ್ರ, ಪ್ರಾಕೃತಿಕ ಭೂಗೋಳಶಾಸ್ತ್ರ, ಅರ್ಥಶಾಸ್ತ್ರ, ರಾಜನೀತಿ ಬೋಧಕ ಚರಿತ್ರೆ ಮೊದಲಾದ ಪ್ರೌಢ ಗ್ರಂಥಗಳ ಪಾಠಪ್ರವಚನಕ್ಕೆ ಏರ್ಪಾಡು ಮಾಡಿದುದಲ್ಲದೆ, ಸಾಹೇಬರು ಮಹಾರಾಜರವರ ಬುದ್ಧಿಯನ್ನು ಇನ್ನೂ ಅನೇಕ ಸಂಗತಿಗಳಲ್ಲಿ ವಿಕಾಸಗೊಳಿಸುತ್ತ ಬಂದರು. ಆಗ ಜನಗಳ ತಾರತಮ್ಯವನ್ನು ಕಂಡುಹಿಡಿಯುವುದರಲ್ಲಿಯೂ ವಿಷಯಗಳನ್ನು ವಿಚಾರ ಮಾಡುವುದರಲ್ಲಿಯೂ ಮಹಾರಾಜರಿಗಿದ್ದ ಸೂಕ್ಷ್ಮಬುದ್ಧಿಯನ್ನೂ ಸರಿಯಾದ ಊಹೆಗಳನ್ನೂ ಕಂಡು, ಪೋರ್ಟರ್ ಸಾಹೇಬರು ಬಹಳ ಸಂತೋಷಪಟ್ಟು, ಮಹಾರಾಜರು ತಮ್ಮ ಪಾಠಗಳಿಗೆ ಕ್ರಮತಪ್ಪದೆ ಬರುತ್ತಿದ್ದುದನ್ನು ನೋಡಿ, ಇಂಡಿಯಾ ಗವರ್ನ್ಮೆಂಟಿಗೆ ಬರೆದಿರುವುದೇನೆಂದರೆ: "ಬೇಟೆಯಲ್ಲಿ ಬಹಳ ದೂರ ಹೋಗಿ ದಣಿದ ದಿವಸ ಮಾತ್ರ ಹೊರತು ಉಳಿದ ದಿವಸಗಳಲ್ಲಿ ಮಹಾರಾಜರು ಎಂದೂ ಹೊತ್ತುಮಾಡಿಕೊಂಡು ಪಾಠಕ್ಕೆ ಬಂದಿಲ್ಲ ; ಪಾಠಕ್ಕೆ ಎಂದೂ ತಪ್ಪಿಸಿಕೊಂಡಿಲ್ಲ. ಬರುವುದರಲ್ಲಿ ಎಷ್ಟು ಕ್ರಮವಾಗಿರುವರೋ ಹಾಗೆಯೇ ಅವರು ಸಕಲ ಪಾಠಗಳನ್ನೂ, ತಮಗೆ ಇಷ್ಟವಿಲ್ಲದ ಅಥವಾ ಬುದ್ಧಿಪ್ರವೇಶ ಮಾಡದ ಪಾಠಗಳನ್ನೂ ಕೂಡ, ಉಲ್ಲಾಸದಿಂದಲೂ ಶ್ರದ್ಧೆಯಿಂದಲೂ ಕಲಿಯತೊಡಗುವರು. ಅವರ ಮನಸ್ಸಿಗೆ ಪಾಠದಲ್ಲಿ ಎಷ್ಟು ಕಷ್ಟತೋರಿದರೂ

ಗಂಟುಮೋರೆತನವೂ ಕೋಪದಿಂದ ರೇಗುವಿಕೆಯೂ ಕಾಣಬರುವುದಿಲ್ಲ ; ಏನು ಕೊಟ್ಟರೂ ಸಂತೋಷಚಿತ್ತದೊಡನೆ ತಮ್ಮ ಕೈಯಲ್ಲಾದಷ್ಟು ಚೆನ್ನಾಗಿ ಮಾಡುತ್ತಾರೆ.''

ಈ ಸಂದರ್ಭದಲ್ಲಿಯೂ ಮಹಾರಾಜರು ಪೂರ್ವದಂತೆಯೇ ನೀಲಗಿರಿಗೂ ಬೆಂಗಳೂರಿಗೂ ಹೋಗುತ್ತಿದ್ದರು. ಇದರಿಂದ ಮಹಾರಾಜರ ವಿವೇಕವೂ ಧರ್ಮಬುದ್ಧಿಯೂ ವಿಕಾಸವಾಗುವುದಕ್ಕೆ ವಿಶೇಷಾವಕಾಶವುಂಟಾಯಿತು. ಈ ವಿಷಯದಲ್ಲಿ ಪೋರ್ಟರ್ ಸಾಹೇಬರು ಬರೆದಿರುವುದೇನೆಂದರೆ : "ಆಗಾಗ ನೀಲಗಿರಿಗೂ ಬೆಂಗಳೂರಿಗೂ ಸವಾರಿ ಚಿತ್ತೈಸುವುದರಿಂದುಂಟಾಗುವ ಆನಂದವು ಮಹಾರಾಜರಅನುಭವಕ್ಕೇ ಬಂದಿತು. ಇದರಿಂದ ಸಂತೋಷಮಾತ್ರವಲ್ಲದೆ, ಮಹಾ ಪ್ರಯೋಜನವೂ ಉಂಟೆಂದು ನಾನು ಎಣಿಸುತ್ತೇನೆ. ಈ ಎರಡು ಪ್ರದೇಶಗಳಲ್ಲಿಯೂ, ಮುಖ್ಯವಾಗಿ ನೀಲಗಿರಿಯಲ್ಲಿ, ತಾವು ಮೈಸೂರಿನಲ್ಲಿ ನಿರ್ವಾಹವಿಲ್ಲದೆ ಅನುಭವಿಸಬೇಕಾದ ರಾಜೋಪಚಾರ ನಿರ್ಬಂಧಗಳೊಂದೂ ಇಲ್ಲದಿರುವುದರಿಂದ, ತಮಗೆ ಸ್ವಾತಂತ್ರ್ಯ ಹೆಚ್ಚುಂಟೆಂದೂ, ಮೈಸೂರಿನಲ್ಲಿರುವುದಕ್ಕಿಂತ ನೀಲಗಿರಿಯಲ್ಲಿದ್ದರೆ ತಮ್ಮ ಪ್ರಕೃತಿಗೆ ಅದು ಸರಿಯಾಗಿರುವುದೆಂದೂ, ಅವರೇ ನನ್ನೊಡನೆ ಹೇಳಿರುತ್ತಾರೆ. ನೀಲಗಿರಿಯ ಜನಸಮಾಜದಲ್ಲಿ ಮಹಾರಾಜರು ತಾವೂ ಸೇರಿಕೊಂಡು, ನಾನಾವಿಧ ಜನಗಳೊಡನೆ ಕಲೆತು ಪ್ರಾಪಂಚಿಕ ಜ್ಞಾನವನ್ನು ಪಡೆಯಲು ಹೆಚ್ಚು ಅವಕಾಶವಿರುವುದು.''

೧೮೭೮ನೆಯ ಇಸವಿ ಏಪ್ರಿಲ್ ತಿಂಗಳಲ್ಲಿ ಗಾರ್ಡನ್ ಸಾಹೇಬರಿಗೆ ಛೀಫ್ ಕಮಿಷನರ್ ಕೆಲಸವಾಯಿತು. ಅವರು ಮೊದಲಿನಂತೆ ಮಹಾರಾಜರವರಿಗೆ ಗಾರ್ಡಿಯನರಾಗಿದ್ದುಕೊಂಡು, ಆ ಕೆಲಸವನ್ನೂ ನಿರ್ವಾಹ ಮಾಡಬೇಕಾಯಿತು ; ಮಹಾರಾಜರಿಗೆ ರಾಜ್ಯಭಾರಕ್ರಮವನ್ನು ತಿಳಿಯಪಡಿಸಿ, ರಾಜ್ಯವನ್ನು ಯಾವ ರೀತಿಯಲ್ಲಿ ಪರಿಪಾಲಿಸಬೇಕೆಂಬುದರಲ್ಲಿ ಅನುಭವವನ್ನುಂಟುಮಾಡುವ ಭಾರವೂ ಅವರಿಗೇ ಸೇರಿತು. ಆದುದರಿಂದ, ಅವರು ಮೈಸೂರಿನಲ್ಲಿಯೂ ಬೆಂಗಳೂರಿನಲ್ಲಿಯೂ ನೀಲಗಿರಿಯಲ್ಲಿಯೂ ಮಹಾರಾಜರವರೊಡನೆ ಬಹಳಕಾಲ ಇರುತ್ತಿದ್ದು, ಅವರ ಮನಸ್ಸು ಗ್ರಾಹ್ಯವಾದ ಅನೇಕ ವಿಷಯಗಳಲ್ಲಿ ಪ್ರವೇಶಿಸುವಂತೆ ಮಾಡುತ್ತಿದ್ದರು. ಇದರಿಂದ ಮಹಾರಾಜರವರಿಗೆ ರಾಜ್ಯಭಾರದಲ್ಲಿ ಅನುಭವ ಹೆಚ್ಚಲು ಕಾರಣವಾಯಿತು.

ಬಳಿಕ ಅದೇ ವರುಷದ ಮೇ ತಿಂಗಳಲ್ಲಿ ಮಹಾರಾಜರವರಿಗೆ ವಿವಾಹ ಮಂಗಳವೂ ಬೆಳೆಯಿತು. ಈ ವಿಷಯವನ್ನು ಮುಂದೆ ವಿಶದವಾಗಿ ತಿಳಿಸಲಾಗುವುದು.

ಈ ಕಾಲದಲ್ಲಿ ಮಹಾರಾಜರವರಿಗೆ ಕಾಯಪುಷ್ಟಿಗೆ ಅನುಕೂಲವಾದ ಅಂಗಸಾಧನೆಯ ಆಟಗಳಲ್ಲಿಯೂ ವಿನೋದಗಳಲ್ಲಿಯೂ ಉತ್ಸಾಹವು ದಿನೇದಿನೇ ಹೆಚ್ಚಿತು ಈ ವಿಷಯದಲ್ಲಿ ೧೮೭೯ನೆಯ ಇಸವಿ ಸೆಪ್ಟಂಬರಿನಲ್ಲಿ ಪೋರ್ಟರ್ ಸಾಹೇಬರು ಮತ್ತೆ ಬರೆದಿರುವುದೇನೆಂದರೆ: "ಬೇಟೆಯಾಡುವುದಕ್ಕೆ ಅನುಕೂಲವಾದ ಋತುವಿನಲ್ಲಿ ಮಹಾರಾಜರು ವಾರಕ್ಕೆ ಎರಡಾವೃತ್ತಿ ಬೇಟೆಗೆ ಹೋಗುತ್ತಾರೆ, ಅವರಲ್ಲಿ ಯಾವಾಗಲೂ

ಮುಂದೆ ನುಗ್ಗುವ ಸ್ವಭಾವವು ಕಾಣಬರುತ್ತದೆ. ಬೇಟೆಗೆ ಹೋಗದ ದಿವಸಗಳಲ್ಲಿ ಬೆಳಗಿನ ಹೊತ್ತು ಸಾಧನೆಗಾಗಿ ಕುದುರೆಯ ಸವಾರಿಗೆ ಹೋಗುತ್ತಾರೆ. ಮಧ್ಯಾಹ್ನದ ಹೊತ್ತು ಲಾನ್‌ಟೆನಿಸ್, ಕ್ರಿಕೆಟ್ ಎಂಬ ಚೆಂಡಿನಾಟಗಳಿಂದಲೂ ಕುದುರೆಯ ಗಾಡಿಯ ಸವಾರಿಯಿಂದಲೂ ವಿನೋದವನ್ನು ಪಡೆಯುತ್ತಾರೆ. ವಾರಕ್ಕೊಂದು ದಿನ ಸಾಯಂಕಾಲ ಪೋಲೋ ಎಂಬ ಕುದುರೆಯ ಚೆಂಡಿನಾಟವನ್ನು ಆಡುತ್ತಾರೆ. ಲಾನ್‌ಟೆನಿಸ್ಸಿನಲ್ಲಿ ಇವರಿಗೆ ಅಭಿರುಚಿ ಹೆಚ್ಚು; ಈಗ ಇವರು ಪಟ್ಟಣದ ದೊಡ್ಡ ಮನುಷ್ಯರು ಲಾನ್‌ಟೆನಿಸ್ ಆಡುವ ಸ್ಥಾನಕ್ಕೆ ಮೊದಲಿಗಿಂತಲೂ ವಿಶೇಷವಾಗಿ ಹೋಗಿಬರುತ್ತಾರೆ. ಇವರಿಗೆ ರಾಯಲ್ ಸ್ಕೂಲಿನಲ್ಲಿ ತಮ್ಮ ಜೊತೆಯ ಹುಡುಗರೊಡನೆ ಆಡುವ ಆಟಕ್ಕಿಂತಲೂ ಇಲ್ಲಿಯ ಹೆಚ್ಚು ಆಟವು ಉತ್ಸಾಹಜನಕವಾಗಿರುವುದು.''

ಗಾರ್ಡನ್ ಸಾಹೇಬರೂ, ಅವರಿಲ್ಲದ ಕಾಲದಲ್ಲಿ ಮೈಸೂರು ಡಿವಿಜನ್ ಕಮಿಷನರಾಗಿದ್ದ ಕರ್ನಲ್ ಹೇ ಸಾಹೇಬರೂ ಮಹಾರಾಜರೊಡನೆ ಇದ್ದುಕೊಂಡು, ರಾಜ್ಯಭಾರಕ್ರಮವನ್ನು ಚರ್ಚಿಸುತ್ತಲೂ ರಾಜನೀತಿಯ ಮೂಲತತ್ತ್ವಗಳನ್ನು ಹೇಳಿಕೊಡುತ್ತಲೂ ಇದ್ದರು. ಗಾರ್ಡನ್ ಸಾಹೇಬರು ಮಹಾರಾಜರಿಗೆ ರಾಜಕಾರ್ಯದಲ್ಲಿ ಅಭಿರುಚಿ ಹುಟ್ಟುವಂತೆ ಮಾಡುವುದಕ್ಕೂ, ಸಾಮಾನ್ಯ ವಿಷಯಗಳಲ್ಲಿ ಪರಿಚಯವನ್ನು ಹೆಚ್ಚುಮಾಡುವುದಕ್ಕೂ, ಮುಂದೆ ಅವರು ವಹಿಸಬೇಕಾಗಿರುವ ರಾಜ್ಯದ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ನೋಡಿ ಅನುಭವ ಹೊಂದುವುದಕ್ಕೂ, ೧೮೭೯ನೆಯ ಇಸವಿ ನವೆಂಬರ್ ತಿಂಗಳಲ್ಲಿ ಮಹಾರಾಜರನ್ನು ಕರೆದುಕೊಂಡು ಮೈಸೂರು ಸೀಮೆಯಲ್ಲೆಲ್ಲ ಸಂಚಾರ ಹೊರಟರು. ಮಹಾರಾಜರ ಜೊತೆಯಲ್ಲಿ ಪೋರ್ಟರ್ ಸಾಹೇಬರೂ, ಆಗ ಜನರಲ್ ಸೆಕ್ರಿಟರಿಯವರಾಗಿದ್ದ ಕನ್ನಿಂಗ್‌ಹ್ಯಾಂ ಸಾಹೇಬರೂ, ರೆವಿನ್ಯೂ ಸೆಕ್ರಿಟರಿಯವರಾಗಿದ್ದ ರಂಗಾಚಾರ್ಯರೂ, ಚೀಫ್ ಎಂಜನಿಯರಾಗಿದ್ದ ಕರ್ನಲ್ ಜಾನ್ಸನ್ ಸಾಹೇಬರೂ—ಇವರೇ ಮುಂತಾದವರು ಹೋಗಿದ್ದರು. ಈ ಸಂಚಾರಕಾಲದಲ್ಲೂ ಪೋರ್ಟರ್ ಸಾಹೇಬರು ಮಹಾರಾಜರ ಪಾಠವನ್ನು ಯಥಾಕ್ರಮವಾಗಿ ನಡೆಯಿಸುತ್ತಿದ್ದರು. ನೋಡಿದ ಸ್ಥಳಗಳಲ್ಲೆಲ್ಲ ಅಲ್ಲಿಯ ದೊಡ್ಡದೊಡ್ಡ ಅಧಿಕಾರಿಗಳೂ ಮುಖಂಡರಾದ ಪ್ರಜೆಗಳೂ ಮಹಾರಾಜರ ಸಂದರ್ಶನವನ್ನು ತೆಗೆದುಕೊಂಡರು. ಮಹಾರಾಜರು ಅಲ್ಲಲ್ಲಿದ್ದ ಇಂಗ್ಲಿಷ್ ಸ್ಕೂಲುಗಳನ್ನೂ ಕನ್ನಡ ಪಾಠಶಾಲೆಗಳನ್ನೂ ದೊಡ್ಡದೊಡ್ಡ ಬಂಗಲೆ, ರಸ್ತೆ, ಸೇತುವೆ, ಕೆರೆ, ಕಾಲುವೆ ಮುಂತಾದುವುಗಳನ್ನೂ ನೋಡುತ್ತ ಹೋದರು. ಆ ಕಾಲದಲ್ಲೆಲ್ಲ ಗಾರ್ಡನ್ ಸಾಹೇಬರು ಮಹಾರಾಜರಿಗೆ ಅವಶ್ಯಕವಾಗಿ ತಿಳಿಯಬೇಕಾದ ಅನೇಕ ಸ್ವಾರಸ್ಯವಾದ ಸಂಗತಿಗಳನ್ನೂ, ರಾಜ್ಯಭಾರವನ್ನು ವಹಿಸಿದಮೇಲೆ ಅವರು ಗ್ರಹಿಸಬೇಕಾಗಿರುವ ವಿಷಯಗಳನ್ನೂ ಅವರ ಚಿತ್ತಕ್ಕೆ ನಾಟುವಂತೆ ತಿಳಿಸುತ್ತ ಬಂದರು. ಈ ರೀತಿಯಾಗಿ ಮಹಾರಾಜರವರು ಸಂಚಾರಮಾಡುವಾಗ, ಒಂದೊಂದು ಸ್ಥಳದಲ್ಲಿ ಒಂದೆರಡು ದಿನಗಳಿದ್ದು, ದರ್ಬಾರನ್ನು ನಡೆಯಿಸಿ, ಪ್ರಜೆಗಳು ಒಪ್ಪಿಸಿದ ವಿಜ್ಞಾಪನಾ ಪತ್ರಿಕೆಗಳನ್ನು ಸ್ವೀಕರಿಸಿ, ಅವುಗಳಿಗೆಲ್ಲ ಸದುತ್ತರಗಳನ್ನು

ಕೊಡುತ್ತ, ಆಯಾ ಸ್ಥಳಾಧಿಕಾರಿಗಳೂ ಪ್ರಜೆಗಳೂ ಭಕ್ತಿಪುರಸ್ಸರವಾಗಿ ಮಾಡಿ ಆತಿಥ್ಯವನ್ನು ಕೈಕೊಂಡು ಹಿಂದಿರುಗಿ ರಾಜಧಾನಿಯನ್ನು ಸೇರಿದರು. ಶ್ರೀಮನ್ಮಹ ರಾಜರವರು ಹಾಸನದಲ್ಲಿರುವ ಕಾಲದಲ್ಲಿ ತಮ್ಮ ಮಾತೃಶ್ರೀಯವರಿಗೆ ಕನ್ನಡದ ಒಂದು ಯೋಗಕ್ಷೇಮಸಮಾಚಾರದ ಕಾಗದವನ್ನು ಬರೆದರು. ಅದರಿಂದ ಅವರಿಗ ಮಾತೃಭಕ್ತಿಯೂ ದೈವ ಭಕ್ತಿಯೂ ವಿಷಯಜ್ಞಾನವೂ ಪ್ರಜಾವಾತ್ಸಲ್ಯವೂ ಎಷ್ ಮಟ್ಟಿಗೆ ಅಭಿವೃದ್ಧಿಯಾಗಿದ್ದಿತೆಂದು ತಿಳಿಯಬರುವುದು.

ಮಹಾಮಾತೃಶ್ರೀ ಅಮ್ಮಯ್ಯನವರ ದಿವ್ಯಶ್ರೀ ಚರಣ ಸನ್ನಿಧಾನಕ್ಕೆ.

ತಮ್ಮ ಅತ್ಯಂತ ಪ್ರೇಮಪಾತ್ರರಾದ ಚಾಮರಾಜೇಂದ್ರ ಒಡೆಯರ್ ಬಹದ್ದರವ ಮಾಡುವ ಅನಂತಾನಂತ ಶಿರಸಾಷ್ಟಾಂಗ ಬಿನ್ನಹ. ಈ ನಿಜ ಆಶ್ವಯುಜ ಬಹುಳ ಅಷ್ಟ ಶುಕ್ರವಾರದ ವರೆಗೆ ಶ್ರೀಚಾಮುಂಡೇಶ್ವರಿ ಅಮ್ಮನವರ ಚರಣಾನುಗ್ರಹದಿಂದಲೂ ತಮ ಆಶೀರ್ವಾದ ಕಟಾಕ್ಷದಿಂದಲೂ ಹಾಸನದಲ್ಲಿ ಆರೋಗ್ಯಭಾಗ್ಯದಲ್ಲಿ ಇದ್ದೇವೆ. ಮೈಸೂ ಮಹಾಮಾತೃಶ್ರೀಯವರು ಕಾಲಕಾಲಕ್ಕೆ ಶಿವಪೂಜೆ, ಆರೋಗಣೆ ಮುಂತಾದ್ದನ್ನು ಬೆಳ ಕೊಂಡು ಸಂತೋಷಚಿತ್ತರಾಗಿ ಇರುವ ಬಗ್ಗೆ ದಿನವಹಿಯಲ್ಲೂ ಆಶೀರ್ವಾದ ಪತ್ರಿಕೆಯ ಅಪ್ಪಣೆ ಕೊಡಿಸುತ್ತ ಬರಬೇಕೆಂದು ಪ್ರಾರ್ಥಿಸುತ್ತಲಿದ್ದೇವೆ.

ಮೈಸೂರು ಬಿಟ್ಟು ಹೊರಟ ದಿನ ಕಾವೇರೀ ನದಿಯನ್ನು ದಾಟಿ ನರಸೀಪುರಕ್ಕೆ ತ ಹೇಮಾವತೀ ತೀರದಲ್ಲಿ ಆ ದಿನವೆಲ್ಲ ಇಳಿದಿದ್ದು, ನಿನ್ನೇದಿವಸ ಪ್ರಾತಃಕಾಲದಲ್ಲಿ ಅಲ್ಲಿ ಪ್ರಯಾಣಮಾಡಿ ಹಾಸನಕ್ಕೆ ಬಂದು ತಲಪಿದೆವು. ಇಲ್ಲಿ ಇನ್ನು ಎರಡು ದಿವಸಗಳು ಮೊಕಾ ಮಾಡಿದ್ದು, ಅನಂತರ ಬೇಲೂರಿಗೆ ಮಾತೃಶ್ರೀಯವರ ಆಶೀರ್ವಾದ ಕಟಾಕ್ಷದಿಂದ, ಪ್ರಯ ಮಾಡುತ್ತೇವೆ. ನಮ್ಮ ಗಾರ್ಡನ್ ಸಾಹೇಬರವರು ಸರ್ವದಾ ನಮ್ಮ ಸಂಗಡವೇ ಇದ್ದುಕೊಂ ಇದ್ದಾರೆ. ಪ್ರಜೆಗಳು ಬಹುದೂರ ಪ್ರಾಂತಗಳಿಂದ ನಾವು ಮೊಕ್ಕಾಂ ಮಾಡುವ ಸ್ಥಳಗ ಅಪರಿಮಿತವಾಗಿ ಬಹು ಸಂತೋಷದಿಂದ ಬರುತ್ತಲಿದ್ದಾರೆ.

ಇಂತಿ ಅನಂತಾನಂತ ಬಿನ್ನಹ.

೧೮೮೦ನೆಯ ಜನವರಿಯಲ್ಲಿ ಮಹಾರಾಜರವರ ವಿದ್ಯಾಪಾರೀಣತೆಯ ವಿಷ ವಾಗಿ ಚೀಫ್ ಕಮಿಷನರ್ ಗಾರ್ಡನ್ ಸಾಹೇಬರು ಇಂಡಿಯಾ ಸರಕಾರಕ್ಕೆ ಬರೆದಿ ರುವುದೇನೆಂದರೆ : "ಪೋರ್ಟರ್ ಸಾಹೇಬರು ಬಂದ ಕಾಲದಿಂದ ಮಹಾರಾಜರ ಬುದ್ಧಿ ಕೌಶಲದಲ್ಲಿಯೂ ಮನೋಬುದ್ಧಿ ವಿಕಾಸದಲ್ಲಿಯೂ ಉಂಟಾದ ಅಭಿವೃದ್ಧಿ ಸ್ಪಷ್ಟವಾಗಿ ಕಾಣಬರುವುದಲ್ಲದೆ, ತೃಪ್ತಿಕರವಾಗಿಯೂ ಇದೆಯೆಂದು ನಾನು ಹೇ ಬಲ್ಲೆನು. ಮಹಾರಾಜರು ಈಗ ಸಾಮಾನ್ಯವಾದ ಗ್ರಂಥಗಳನ್ನೂ ವೃತ್ತಾಂತ ಪ ಗಳನ್ನೂ ತಾವೇ ಓದಿಕೊಂಡು ಅರ್ಥಮಾಡಿಕೊಳ್ಳಬಲ್ಲರು. ಇತರರ ಸಹಾಯ ದೆಯೂ ಶುದ್ಧವಾಗಿಯೂ ಕಾಗದಗಳನ್ನು ತಾವೇ ಚೆನ್ನಾಗಿ ಬರೆಯಬಲ್ಲರು. ಈ ಪರಿಶೀಲನ ಶಕ್ತಿಯು ಚುರುಕಾಗಿಯೂ, ಜನಗಳ ಮತ್ತು ವಸ್ತುಗಳ ತಾರತಮ್ಯ ತಿಳಿಯುವ ಶಕ್ತಿಯು ತೃಪ್ತಿಕರವಾಗಿಯೂ ಇದೆ. ಇಷ್ಟು ಚಿಕ್ಕವರಾದರೂ ಈ ವ ಸ್ಸಿಗೆ ದುರ್ಲಭವಾದ ಜಾಗರೂಕತೆಯೂ ಜಾಣತನವೂ ಇವರಲ್ಲಿ ಉಂಟು."

ಇದುವರೆಗೆ ವರ್ಣಿಸಿರುವ ರೀತಿಯಲ್ಲಿ ಶ್ರೀಚಾಮರಾಜೇಂದ್ರ ಒಡೆಯರವರ ವಿದ್ಯಾಭ್ಯಾಸವು ಪರಿಪೂರ್ಣತೆಯನ್ನು ಪಡೆಯಿತು. ಮುಮ್ಮಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿ ದೇಶೀಯ ಉಪಾಧ್ಯಾಯರುಗಳಿಂದ ಶ್ರೀಚಾಮರಾಜೇಂದ್ರ ಒಡೆಯರವರ ಮಾನಸ ಸುಕ್ಷೇತ್ರದಲ್ಲಿ ಬಿತ್ತಲ್ಪಟ್ಟ ವಿದ್ಯಾಬೀಜವು, ಪೇಸ್ಟ್ ಸಾಹೇಬರ ಬೋಧೆಯೆಂಬ ಜಲಸೇಚನದಿಂದ ಅಂಕುರಿತವಾಗಿ, ಮ್ಯಾಲಿಸನ್ ಸಾಹೇಬರು ಬೋಧಿಸಿದ ರಾಜನೀತಿ ವಾಕ್ಯಗಳೆಂಬ ಗಾಳಿ ಬೆಳಕುಗಳಿಂದ ಕೋಮಲವಾಗಿಯೂ ನಾನಾ ಶಾಖಭರಿತವಾಗಿಯೂ ಬೆಳೆದು ವೃದ್ಧಿಯನ್ನು ಹೊಂದಿ, ವಿಲ್ಸನ್ ಸಾಹೇಬರ ಪರಾಮರ್ಶವೆಂಬ ಬೋಹಳಿಯಿಂದ ಸುರಕ್ಷಿತವಾಗಿ ಪುಷ್ಪಿಸಿ, ಗಾರ್ಡನ್ ಪ್ರಭುಗಳ ಪೋಷಣೆಯಿಂದಲೂ ಪೋರ್ಟರ್ ಸಾಹೇಬರ ಪರಿಣತ ಶಿಕ್ಷಣದಿಂದಲೂ ಫಲೋನ್ಮುಖವಾಗಿ ಪರಿಣಮಿಸಿತು. ಈ ವಿದ್ಯಾಲತೆಗೆ ಅಂಬಿಲ್ ನರಸಿಂಹಯ್ಯಂಗಾರ್ಯರು ಕಾಲಕಾಲಕ್ಕೆ ಅಗತೆಮಾಡಿ ಕಳೆಯನ್ನು ಕಿತ್ತು ಸಂತತ ನೀತಿಬೋಧ ಜಲಧಾರೆಯನ್ನೆರೆದು ಅದರ ಅಭಿವೃದ್ಧಿಯನ್ನು ಅಹರ್ನಿಶವೂ ಹಾರೈಸುತ್ತ ಅದನ್ನು ರಕ್ಷಿಸಿಕೊಂಡು ಬಂದರು. ಪರಿಣಾಮದಲ್ಲಿ ಬಿಟ್ಟ ಪಕ್ವ ಫಲಾಸ್ವಾದವನ್ನು ಮಾಡಿದವರು ಒಬ್ಬರಿಬ್ಬರೇ ಅಲ್ಲ, ಭರತಖಂಡದಲ್ಲಿ ಆಸೇತು ಹಿಮಾಚಲ ಪರ್ಯಂತವಿರುವ ಜನರೆಲ್ಲರೂ ಎಂದು ಹೇಳಬೇಕು. ಇದಲ್ಲದೆ, ಮ್ಲೇಚ್ಛಾಕ್ರಾಂತೆಯಾಗಿ ವಿದೇಶೀಯರಿಂದಾಗುವ ಅನೇಕ ಕಂಟಕಕೋಟಿಗೆ ಗುರಿಯಾಗಿ ಕಳೆಗುಂದಿ ಕಂಗೆಟ್ಟಿದ್ದ ಮೈಸೂರು ಧರಾವನಿತೆಯು ಬ್ರಿಟಿಷ್ ಪ್ರಭುಪ್ರಸಾದದಿಂದ ಬಂಧನಿವೃತ್ತಿಯನ್ನು ಪಡೆದು, ಮೇಲೆ ಹೇಳಿದ ವಿದ್ಯಾಫಲದ ರಸಾಸ್ವಾದನದಿಂದ ಚೇತರಿಸಿಕೊಂಡು, ಪುನಃ ಪ್ರೇಮವನ್ನು ತಳೆದು ವಿಖ್ಯಾತೆಯಾದಳು. ಹೀಗಾಗುವುದಕ್ಕೆ ಬ್ರಿಟಿಷ್ ಸಾಮ್ರಾಜ್ಯಲಕ್ಷ್ಮಿಯ ಕಟಾಕ್ಷಮರೀಚಿಮಾಲೆಯೇ ಮುಖ್ಯಕಾರಣವು.

ಆರನೆಯ ಅಧ್ಯಾಯ.

ಶ್ರೀಚಾಮರಾಜೇಂದ್ರ ಒಡೆಯರವರ ವಿವಾಹ ಮಹೋತ್ಸವ.

ಕ್ರಿ. ಶ. ೧೮೭೬-೭೭ಕ್ಕೆ ಸರಿಯಾದ ಧಾತು ಈಶ್ವರ ಸಂವತ್ಸರಗಳಲ್ಲಿ ಹಿಂದೂಸ್ಥಾನದ ದಕ್ಷಿಣದೇಶಗಳಲ್ಲೆಲ್ಲ ಅನಾವೃಷ್ಟಿಯು ಪ್ರಾಪ್ತವಾಗಿ, ಮೈಸೂರು ಸಂಸ್ಥಾನದಲ್ಲೂ ಬಹುದಿವಸ ಮಳೆಯಿಲ್ಲದೆ ಕೆರೆ, ಕುಂಟೆ, ಬಾವಿಗಳೆಲ್ಲ ಬತ್ತಿಹೋದುವು. ಜನರು ಚಾತಕಪಕ್ಷಿಗಳಂತೆ ದಿನಂಪ್ರತಿಯೂ ಆಕಾಶವನ್ನು ನೋಡಿ ನೋಡಿ ಭಗ್ನಾಶರಾಗಿ ನಿಟ್ಟುಸಿರು ಬಿಡಲಾರಂಭಿಸಿದರು. ಗೋಶಾಲೆಗಳಲ್ಲಿ ದನಕರುಗಳಿಗೆ ಮೇವಿ

ಲ್ಲವೆ ಕುಚಲಿಸೋಗು ವಿನಾ ಇನ್ನೇನೂ ದೊರೆಯದಂತಾಯಿತು. ಅಗ್ನಿಕಣಗಳ
ನಷ್ಟಶವಾದ ಸೂರ್ಯರಶ್ಮಿಯನ್ನು ತಾಳಲಾರದೆ ಪ್ಶರುಪಕ್ಷಿಗಳು ಸುಟ್ಟು ಹಾಳ
ದುವು. ರೈತರು ಸರಕಾರಕ್ಕೆ ಕೊಡಬೇಕಾದ ಕಂದಾಯದ ಬಾಕಿಗಾಗಿ ತಮ
ತಮ್ಮ ಹೊಲಗದ್ದೆಗಳನ್ನೇ ಬಿಟ್ಟುಬಿಟ್ಟರು. ಕೆಲವರು ಒಪ್ಪೊತ್ತಿನ ಗ್ರಾಸದಿಂ
ಪ್ರಾಣಧಾರಣ ಮಾಡಿಕೊಳ್ಳಬೇಕಾಯಿತು. ಮತ್ತೆ ಕೆಲವರು ಹೊಟ್ಟೆಗಿಲ್ಲದೆ ಭೂತಾ
ಗಡ್ಡೆಯನ್ನು ತಿಂದು ಕಾಲಕಳೆಯುತ್ತಿದ್ದರು. ಕೊನೆಕೊನೆಗೆ ಅದುಕೂಡ ಸಿಕ
ನಂತಾಯಿತು. ಈ ಮಹಾಕ್ಷಾಮದಿಂದ ಅನೇಕಾನೇಕರು ತಿನ್ನುವುದಕ್ಕೆ ಅನ್ನವಿಲ್ಲದ
ಅಸ್ಥಿಚರ್ಮಗತರಾಗಿ ಬೀದಿಗಳಲ್ಲಿಯೂ ಚಂರಡಿಗಳಲ್ಲಿಯೂ ಹಳ್ಳಿಗಾಡುಗಳ ದಾರಿಗ
ಲ್ಲಿಯೂ ಸಾಲುಮರಗಳ ಕೆಳಗೂ ಸಿಕ್ಕಿದ ಕಡೆ ಸಾಯುತ್ತ, ಹದ್ದುಕಾಗೆಗಳ ಕೈಯ
ಕಣ್ಣುಗಳನ್ನೂ ಬರಿಯ ಎಲುಬುಗಳನ್ನೂ ಕೀಳಿಸಿಕೊಳ್ಳುತ್ತಿದ್ದರು. ಇವರುಗಳನ್ನೇ
ಸರಕಾರದವರು ಒಟ್ಟೊಟ್ಟಿಗೆ ಗಾಡಿಗಳಲ್ಲಿ ತುಂಬಿ ಊರಹೊರಗೆ ಮಾಡಿದ್ದ ದೊಡ
ದೊಡ್ಡ ಗುಂಡಿಗಳಲ್ಲಿ ಕಸವನ್ನು ಸುರಿದು ಸುಡುವಂತೆ ಸುಡುತ್ತಿದ್ದರು. ಆ
ಕ್ಷಾಮದ ಜೊತೆಯಲ್ಲಿ ಅನೇಕ ಸಾಂಕ್ರಾಮಿಕ ರೋಗಗಳೂ ತಲೆದೋರಿದುವು
ರೋಗಬರುವುದೇ ತಡ; ಬಂದಮೇಲೆ ಅದರ ಹಾವಳಿಯನ್ನು ಇಷ್ಟಿಷ್ಟೆಂದು ಹೇ
ಳಾಗದು. ಅದು ದೊಡ್ಡವರು, ಚಿಕ್ಕವರು, ಹೆಂಗಸರು, ಮಕ್ಕಳು, ಬಡವರು
ಭಾಗ್ಯವಂತರು ಎಂದು ನೋಡದೆ, ಎಲ್ಲರನ್ನೂ ಒಂದೇ ರೀತಿಯಾಗಿ ಹೊತ್ತುಕೊಂಡ
ಹೋಗುತ್ತಿದ್ದಿತು. ಕ್ಷಾಮತಗಲಿದ ದೇಶದ ಸ್ಥಿತಿಯನ್ನು ವರ್ಣಿಸಲಳವಲ್ಲ; ಎ
ನೋಡಿದರೂ ಜನರು ಸಾಯುತ್ತಿದ್ದುದರಿಂದ, ದೇಶದ ಮೇಲೆಲ್ಲ ಯಮನು ತನ
ಪಾಶವನ್ನು ಬಿಸಿದಂತೆ ಕಾಣುತ್ತಿದ್ದಿತು. ಸತ್ತವರಪಾಡು ಮೇಲು, ಬದುಕಿರ
ವವರ ಸ್ಥಿತಿ ಅತಿ ಶೋಚನೀಯವಾಗಿದ್ದಿತು. ದಾನ ಧರ್ಮ ದಯೆಗಳೆಲ್ಲ ಶುದ್ಧಾಂ
ವಾಗಿ ಅಡಗಿ ಹೋದುವು. ವರ್ಣಾಶ್ರಮ ಧರ್ಮಗಳೆಲ್ಲ ಮಾಯವಾದುವು. ಹೀ
ಕ್ಷಾಮದ ಬೇಸೆಯಿಂದ ಗ್ರಾಮದಿಂದ ಪಟ್ಟಣಕ್ಕೂ, ಪಟ್ಟಣದಿಂದ ಮುಖ್ಯನಗರಗಳಿಗೂ
ಅಲ್ಲಿಂದ ನಾಡಿಗೂ ಸಂಸ್ಥಾನಕ್ಕೂ ಅನಿಷ್ಟಪರಂಪರೆಯು ಹಬ್ಬಿಕೊಂಡಿತು.

ಹೀಗೆ ದೇಶವೆಲ್ಲವೂ ದುರ್ದಶೆಗೀಡಾಗಿ ಬಹಳ ಅಪಾಯಸ್ಥಿತಿಯಲ್ಲಿರುವಾ
—ಎಂದರೆ, ೧೮೭೭ರಲ್ಲಿ, ಮಳೆಯು ಒಂದೆರಡು ಹನಿ ಬಿದ್ದು ಹಾಗೆಯೇ ನಿಂತ
ಹೋಯಿತು. ಇದರಿಂದ ಮತ್ತಷ್ಟು ಕೇಡಿಗಾಸ್ಪದವಾಯಿತು. ಮಾರನೆಯ ವರ
ಷವೂ ಮಳೆ ಬೀಳದೆ ಹೋಯಿತು. ಆಗ ಬೆಂಗಳೂರಿನ ವರೆಗೆ ಮಾತ್ರವೆ
ರೈಲ್ ಮಾರ್ಗವು ಬಂದಿದ್ದಿತು. ದಿನವೊಂದಕ್ಕೆ ಸುಮಾರು ಐನೂರು ಟನ್ನುಗ
ಧಾನ್ಯವು ಮದರಾಸು, ರಂಗೂನ್ ಮುಂತಾದ ಪ್ರಾಂತಗಳಿಂದ ಬರುತ್ತಿದ್ದಿತು
ಆದರೂ ಜನರ ಹಾಹಾಕಾರವು ಅಡಗುತ್ತಿರಲಿಲ್ಲ. ಸರಕಾರದವರ ಅನೇಕ ಪ್ರದೇ
ಗಳಲ್ಲಿ ರಿಲೀಫ್ (ಕಷ್ಟನಿವಾರಣಕ್ಕಾಗಿ) ಕಾಮಗಾರಿಗಳನ್ನು ಪ್ರಾರಂಭಿಸಿದರು
ಭೂಮಿಯ ಕಂದಾಯಗಳನ್ನು ಮಾಫ್ ಮಾಡಿದರು. ಸರಕಾರದ ಅಧಿಕಾರಿಗಳನ್ನೇ

ರೈತರ ದನಕರುಗಳ ಮೇವಿಗೋಸ್ಕರ ಬಿಟ್ಟುಕೊಟ್ಟರು. ಅಲ್ಲಲ್ಲಿ ಅನ್ನ ಸತ್ರಗಳನ್ನೂ ಏರ್ಪಡಿಸಿದರು. ಮನೆಮನೆಗೂ ಸುತ್ತಿ ವಿಚಾರಮಾಡಿ ಅನಾಥರಾದವರಿಗೆ ಸಹಾಯವನ್ನು ಕೊಟ್ಟರು. ಆಗ ಸರಕಾರದ ರಿಲೀಫ್ ಪಾಕಶಾಲೆಗಳಲ್ಲಿ ಸುಮಾರು ೨,೨೭,೦೦೦ ಮಂದಿ ಅನಾಥರಿಗೆ ಅನ್ನ ಹಾಕುತ್ತಿದ್ದರು. ೬೦,೦೦೦ ಜನರು ರಿಲೀಫ್ ಕಾಮಗಾರಿಯಿಂದ ಹೊಟ್ಟೆ ಹೊರೆದುಕೊಳ್ಳುತ್ತಿದ್ದರು. ಮೈಸೂರಿಗೆ ಹೊಸದಾಗಿ ಹಾಕಬೇಕೆಂದು ಏರ್ಪಾಡಾದ ಲೋಹಮಾರ್ಗದ ಕಾಮಗಾರಿಯಲ್ಲಿ ೨೦,೦೦೦ ಜನರು ಜೀವಿಸುತ್ತಿದ್ದರು. ಹೀಗೆ ಮಾಡಿದರೂ ಮಧ್ಯಮ ತರಗತಿಯ ಲಕ್ಷಾಂತರ ಜನರು ರಿಲೀಫ್ ಕಾಮಗಾರಿಗಳಿಗೆ ಹೋಗದೆ ಮೃತ್ಯುವಶರಾದರು. ಅಂತೂ ಇಂತೂ ಈ ಮಹಾ ಕ್ಷಾಮದಲ್ಲಿ ಮೈಸೂರು ಸೀಮೆಯ ಪ್ರಜೆಗಳೊಳಗೆ ಐದರಲ್ಲಿ ಒಂದು ಪಾಲು ನಷ್ಟವಾಯಿತು. ಸಾಮಾನ್ಯವಾಗಿ ಕ್ಷಾಮವು ಹಿಂದೂದೇಶವನ್ನೆಲ್ಲ ಆಕ್ರಮಿಸಿದ್ದಿತು. ಆದರೆ ಮೈಸೂರು ಸಂಸ್ಥಾನಕ್ಕಾದಷ್ಟು ಅನರ್ಥವು ಮತ್ತೆಲ್ಲೂ ಸಂಭವಿಸಲಿಲ್ಲ. ಕ್ಷಾಮ ಪೀಡಿತರಾದ ಜನರ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ನೋಡುವುದಕ್ಕೆ ಆಗ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಲಿಟ್ಟನ್ ಸಾಹೇಬರು ಕೂಡ ಮೈಸೂರಿಗೆ ಬಂದಿದ್ದರು. ಬಳಿಕ ಬಡವರ ಕಷ್ಟನಿವಾರಣಾರ್ಥವಾಗಿ ಮಾಡಬೇಕಾದ ಕೆಲಸಗಳ ವಿಚಾರಣೆಗೋಸ್ಕರ ಉತ್ತರದೇಶದಿಂದ ಸಮರ್ಥರಾದ ಬಹುಮಂದಿ ಯೂರೋಪಿಯನ್ ಅಧಿಕಾರಿಗಳನ್ನು ಇಲ್ಲಿಗೆ ಕರೆಯಿಸಿದರು. ಆಗ ಸರ್ ಚಾರ್ಲ್ಸ್ ಎಲಿಯಟ್ ಅವರು ಫ್ಯಾಮಿನ್ ಕಮಿಷನರಾಗಿಯೂ, ಸರ್ ಕಾಲಿನ್ ಸ್ಕಾಟ್ ಮಾಂಕ್ರೀಫ್ ಅವರು ಛೀಫ್ ಎಂಜನಿಯರಾಗಿಯೂ ನೇಮಿಸಲ್ಪಟ್ಟರು.

ಬಳಿಕ, ೧೮೭೮ನೆಯ ಇಸವಿ ಸೆಪ್ಟಂಬರ್ ಅಕ್ಟೋಬರ್ ತಿಂಗಳುಗಳಲ್ಲಿ ಭಗವತ್ಕಟಾಕ್ಷದಿಂದ ಕೆಲವು ದೊಡ್ಡ ಮಳೆಗಳಾದುವು. ಇದರಿಂದ ಕ್ಷಾಮಬಾಧೆಯು ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತ ಬಂದಿತು. ಆದರೂ, ರೋಗದಿಂದ ಸಾಯುತ್ತಿದ್ದವರ ಸಂಖ್ಯೆ ಕಡಿಮೆಯಾಗಲಿಲ್ಲ. ಅನಂತರ, ರಿಲೀಫ್ ಕಾಮಗಾರಿಗಳು ಕೆಲವು ಮುಖ್ಯಸ್ಥಳದಲ್ಲಿ ಮಾತ್ರ ನಡೆಯುವಂತೆ ಏರ್ಪಾಡು ಮಾಡಿದರು. ಈ ಕ್ಷಾಮಕಾಲದಲ್ಲಿ ಸಾಮಾನ್ಯಜನರು ಮನೆಯಲ್ಲಿದ್ದ ನಗನಾಣ್ಯಗಳನ್ನು ಕಾಸಿಗೊಂದು ಕೊಸರಿಗೊಂದರಂತೆ ಮಾರಿಬಿಟ್ಟರು. ಕ್ರೈಸ್ತ ಪಾದರಿಗಳು ಸರಕಾರದಿಂದ ಸಹಾಯವನ್ನು ಪಡೆದು, ಅನೇಕ ಮಂದಿ ಅನಾಥರಿಗೆ ಆಶ್ರಯವನ್ನಿತ್ತರು. ಇದರಿಂದ ದೇಶೀಯ ಕ್ರೈಸ್ತರ ಸಂಖ್ಯೆಯು ಹೆಚ್ಚಲು ಕಾರಣವಾಯಿತು.

ಕ್ಷಾಮದಲ್ಲಿ ಸರಕಾರದವರು ಹಿಂದಿನಿಂದಲೂ ಖಜಾನೆಯಲ್ಲಿ ಕೂಡಿಸಿಟ್ಟಿದ್ದ ಒಂದು ಕೋಟಿ ರೂಪಾಯನ್ನು ಲಕ್ಷ್ಯವಿಡದೆ ಪ್ರಜಾಕ್ಷೇಮಕ್ಕಾಗಿ ವೆಚ್ಚ ಮಾಡಿದರು. ಸಾಲದುದಕ್ಕೆ ಬ್ರಿಟಿಷ್ ಸರಕಾರದಿಂದ ೮೦ ಲಕ್ಷ ರೂಪಾಯಿಗಳ ಸಾಲವನ್ನು ತೆಗೆಯಬೇಕಾಗಿ ಬಂದಿತು. ಕ್ಷಾಮಕ್ಕೆ ಮುಂಚೆ ದೇಶದ ಹುಟ್ಟುವಳಿಯು ೧೦೯ ಲಕ್ಷಕ್ಕಿಂತಲೂ ಹೆಚ್ಚಾಗಿದ್ದುದು, ೧೮೭೬–೭೭ನೆಯ ಸಂವತ್ಸರದಲ್ಲಿ ೮೨ ಲಕ್ಷಕ್ಕೂ,

೧೮೭೭-೭೮ರಲ್ಲಿ ೬೯ ಲಕ್ಷಕ್ಕೂ ಇಳಿಯಿತು. ಎಲ್ಲ ವಿಧವಾದ ರಾಜಾದಾಯವೂ ಬಹಳ ಕ್ಷೀಣಸ್ಥಿತಿಗೆ ಬಂದು ಸಂಸ್ಥಾನವು ಸಾಲಕ್ಕೆ ಗುರಿಯಾಯಿತು. ಹೀಗೆ ಉತ್ಪತ್ತಿಯು ಕಡಿಮೆಯಾಗಿ ವೆಚ್ಚವು ಹೆಚ್ಚಾಗಿ ದೇಶವು ವಿಪನ್ನಾವಸ್ಥೆಯನ್ನು ಹೊಂದಿದುದರಿಂದ, ದೇಶದ ಆಯವ್ಯಯಗಳನ್ನು ಕ್ರಮಪಡಿಸಲು ಒಂದು ಕಮಿಟಿಯು (ಮಂಡಲಿಯು) ಏರ್ಪಾಡಾಯಿತು. ಆ ಕಮಿಟಿಯ ಹೇಳಿಕೆಯಪ್ರಕಾರ ಅನೇಕ ಇಲಾಖೆಗಳನ್ನು ವಜಾ ಮಾಡಿದರು. ಹೆಚ್ಚು ಸಂಬಳವನ್ನು ಪಡೆಯುತ್ತಿದ್ದ ಯೂರೋಪಿಯನ್ ಅಧಿಕಾರಿಗಳನ್ನು ತೆಗೆದು ಹಾಕಿದರು. ಅವರ ಸ್ಥಳಕ್ಕೆ ಕಡಿಮೆಯ ಸಂಬಳದಿಂದ ತೃಪ್ತರಾಗಿ ಚೆನ್ನಾಗಿ ಕೆಲಸಮಾಡುವ ದೇಶೀಯ ಅಧಿಕಾರಿಗಳು ನೇಮಿಸಲ್ಪಟ್ಟರು.

ಇಷ್ಟರಲ್ಲಿ, ಹಿಂದಣ ಅಧ್ಯಾಯದಲ್ಲಿ ವಿವರಿಸಿರುವಂತೆ, ರಾಜಯೋಗ್ಯವಾದ ವಿದ್ಯಾಭ್ಯಾಸವನ್ನು ಪಡೆದು ರಾಜತೇಜೋವಿರಾಜಮಾನರಾಗಿ ಪ್ರವರ್ಧಮಾನರಾಗುತ್ತಿದ್ದ ಶ್ರೀಚಾಮರಾಜೇಂದ್ರ ಒಡೆಯರವರಿಗೆ ಷೋಡಶ ವರ್ಷಗಳು ತುಂಬಿದುವು. ಮಹಾರಾಜರಿಗೆ ವಯಸ್ಸು ಹೆಚ್ಚಿದಹಾಗೆಲ್ಲ, ಅವರ ವಿದ್ಯಾ ಬುದ್ಧಿ ವಿನಯ ಗಾಂಭೀರ್ಯಾದಿ ಸದ್ಗುಣಗಳೂ ಹೆಚ್ಚುತ್ತ ಬಂದುವು. ಅವರು ಪ್ರಾಪ್ತವಯಸ್ಕರಾದುದನ್ನು ತಿಳಿದು, ಮಹಾರಾಜ್ಞಿಯವರಾದ ಸೀತಾವಿಲಾಸದಮ್ಮನವರು ಅವರಿಗೆ ವಿವಾಹ ಮಂಗಳ ಮಹೋತ್ಸವವನ್ನು ಬೆಳೆಯಿಸಬೇಕೆಂದು ಸತ್ಕುಲಪ್ರಸೂತೆಯಾದ ಕನ್ಯಾರತ್ನವನ್ನು ಹುಡುಕಲಾರಂಭಿಸಿದರು. ಸ್ವಲ್ಪಕಾಲಕ್ಕೆ ಮುಂಚೆ ವಿಕ್ಟೋರಿಯಾ ಮಹಾರಾಜ್ಞಿಯವರು ಬ್ರಿಟಿಷ್ ರಾಜ್ಯದ ಸಾರ್ವಭೌಮ ಪದವಿಯನ್ನು ವಹಿಸಿದಾಗ ನಡೆದ ಮಹೋತ್ಸವಕ್ಕೆ ಶ್ರೀಮನ್ಮಹಾರಾಜರವರು ಡೆಲ್ಲಿಗೆ ಹೋಗಿದ್ದರಷ್ಟೆ. ಆಗ ಅವರ ಪೋಷಕರಾಗಿದ್ದ ಛೀಫ್ ಕಮಿಷನರವರೂ ರಂಗಾಚಾರ್ಯರೂ ಹಿಂದೂಸ್ಥಾನದಲ್ಲಿ ಪ್ರಖ್ಯಾತಿಗೊಂಡ ಯಾವುದಾದರೊಂದು ರಾಜವಂಶೀಯರಲ್ಲಿ ಮಹಾರಾಜರಿಗೆ ಕನ್ಯೋಪಾರ್ಜನೆಯನ್ನು ಮಾಡಬೇಕೆಂದಾಲೋಚಿಸಿ ಅದಕ್ಕನುಗುಣವಾಗಿ, ಡೆಲ್ಲಿಯಿಂದ ಹಿಂದಿರುಗಿ ಬರುವಾಗ, ರೀವಾ ಪಟ್ಟಣದ ಮಹಾರಾಜ ರಾಘುರಾಜಸಿಂಹರವರ ಕುಮಾರಿಯನ್ನು ನೋಡಿಕೊಂಡು ಬಂದಿದ್ದರು. ಆದರೆ, ಈ ನೂತನ ಸಂಬಂಧವನ್ನು ಮಾಡುವುದು ಸೀತಾವಿಲಾಸದಮ್ಮನವರಿಗೆ ಇಷ್ಟವಿಲ್ಲದುದರಿಂದಲೂ, ಮಹಾರಾಜರಿಗೆ ಅರ್ಹವಾದ ಕನ್ಯಕಾಮಣಿಯ ಘಟನಾದಿಯೋಗವು ದೈವಸಂಕಲ್ಪದಲ್ಲಿ ಬೇರೆಯಾಗಿದ್ದುದರಿಂದಲೂ, ಈ ಪ್ರಸ್ತಾವಕ್ಕೆ ಅವರು ಮನಗೊಡಲಿಲ್ಲ.

ಹೀಗಿರಲು, ಮಹಾರಾಜ್ಞಿಯವರು ಮಹಾರಾಜರಿಗೆ ಅಲ್ಲಲ್ಲಿ ಕನ್ಯೆಯರನ್ನು ವಿಚಾರಿಸುತ್ತಿರುವಲ್ಲಿ, ನರಸೇಅರಸಿನವರ ಮನೆಯಲ್ಲಿ ಯದುಕುಲಕ್ಕೆ ಸದೃಶವಾದ ಕನ್ಯಾರತ್ನವನ್ನು ಚತುರ್ಮುಖನು ಮೊದಲೇ ಸೃಷ್ಟಿಸಿರುವನೆಂದು ತಿಳಿಯಬಂದುದರಿಂದ, ಅವರ ಪತ್ನಿಯರನ್ನು ಕರೆಯಿಸಿ ಕೇಳಿದರು. ಈ ದಾಂಪತ್ಯಾನುಬಂಧವು ಎಲ್ಲರ ಮನಸ್ಸಿಗೂ ಸಮರ್ಪಕವಾಯಿತು. ಈ ಯಭಿಪ್ರಾಯವನ್ನು ಮಹಾರಾಜ್ಞಿ

ಯವರು ವೈಸ್ರಾಯಿಯವರಿಗೆ ತಿಳಿಯಪಡಿಸಲು, ಅವರೂ ಮಹಾರಾಜ್ಞಿಯವರ ಅಭಿಪ್ರಾಯವನ್ನೇ ಅನುಮೋದಿಸಿದರು. ಬಳಿಕ ವಿವಾಹಪ್ರಸ್ತುತವು ಅದೇ ಬಹುಧಾನ್ಯ ಸಂವತ್ಸರದ ವೈಶಾಖ ಮಾಸದಲ್ಲಿ ನಡೆಯತಕ್ಕದೆಂದು ನಿಶ್ಚಿತವಾಯಿತು.

ಮಹಾರಾಜರವರ ವಿವಾಹ ಮಂಗಳ ಮಹೋತ್ಸವವನ್ನು ವರ್ಣಿಸುವುದಕ್ಕೆ ಮೊದಲು, ಮಹಾರಾಜ್ಞೀ ಕೆಂಪನಂಜಮ್ಮಣ್ಣಿಯವರ ವಿಷಯವನ್ನು ಕುರಿತು ಪ್ರಸ್ತಾವಿಸತಕ್ಕದು ಅತ್ಯಾವಶ್ಯಕವಾಗಿರುವುದು. ಮಹಾರಾಜ್ಞೀ ಕೆಂಪನಂಜಮ್ಮಣ್ಣಿಯವರು ಕಳಲೆ ಮನೆತನದ ನರಸೇಅರಸಿನವರ ಕುಮಾರಿಯರು. ನರಸೇಅರಸಿನವರು ಮುಮ್ಮಡಿ ಕೃಷ್ಣರಾಜ ಒಡೆಯರವರ ಕರುಣಾಕಟಾಕ್ಷವೆಂಬ ಕಲ್ಪವೃಕ್ಷವನ್ನಾಶ್ರಯಿಸಿ ಸತ್ಕಾಲಯಾಪನೆ ಮಾಡುತ್ತಿದ್ದ ಕುಟುಂಬಿಗಳಲ್ಲಿ ಒಬ್ಬರು. ಇವರು ದಿವಾನ್ ಪೂರ್ಣಯ್ಯನವರ ಅನಂತರದಲ್ಲಿ ಸ್ವಲ್ಪಕಾಲ ಮೈಸೂರು ಸಂಸ್ಥಾನದ ದಿವಾನಗಿರಿಯನ್ನು ನೋಡಿದರೆಂಬ ಪ್ರತೀತಿಯುಂಟು. ಹೀಗಿರುವಲ್ಲಿ, ಕ್ರಿ. ಶ. ೧೮೬೬ಕ್ಕೆ ಸರಿಯಾದ ಅಕ್ಷಯನಾಮ ಸಂವತ್ಸರದ ಜ್ಯೇಷ್ಠ ಬಹುಳ ಸಪ್ತಮಿಯ ದಿನ ನರಸೇಅರಸಿನವರ ಧರ್ಮಪತ್ನಿಯರಾದ ಕೆಂಪನಂಜಮ್ಮಣ್ಣಿಯವರ ಗರ್ಭಸಾಗರದಲ್ಲಿ ಒಂದು ಪುತ್ರಿಕಾರತ್ನವು ಜನಿಸಿತು. ಜನನವಾದ ಕಾಲದಲ್ಲಿ ಶಿಶುವಿನ ಗ್ರಹಸ್ಥಿತಿಯನ್ನು ಪರಿಗಣಿಸಿದ ದೈವಜ್ಞರು ಅದು ಬಹಳ ಪ್ರಶಸ್ತವಾಗಿವೆಯೆಂದು ಹೊಗಳಿದರು. ಜಗದಂಬೆಯ ಅನುಗ್ರಹದಿಂದ ಜನನವಾದ ಮಗುವಿಗೆ ಕೆಂಪನಂಜಮ್ಮಣ್ಣಿಯವರೆಂಬುದಾಗಿ ತಾಯಿಯ ಹೆಸರನ್ನೇ ಇಟ್ಟರು. ನರಸೇಅರಸಿನವರಿಗೆ ಕೆಂಪನಂಜಮ್ಮಣ್ಣಿಯವರೆಂಬ ಜ್ಯೇಷ್ಠಪುತ್ರಿಯರಲ್ಲದೆ, ಕಾಂತರಾಜರೆಂಬ ಒಬ್ಬ ಕುಮಾರರೂ ಕಾಂತಮ್ಮಣ್ಣಿಯವರೆಂಬ ಕುಮಾರಿಯರೂ ಜನಿಸಿದರು. ಈ ಸಂತಾನವಾದ ಒಂದೆರಡು ವರುಷಗಳ ಮೇಲೆ ನರಸೇಅರಸಿನವರು ಪರಮಪದಕ್ಕೆ ಸಂದರು.

ಕೆಂಪನಂಜಮ್ಮಣ್ಣಿಯವರಿಗೆ ಐದು ವರುಷ ತುಂಬಲು, ನರಸೇಅರಸಿನವರು ಯೋಗ್ಯನಾದ ಒಬ್ಬ ಉಪಾಧ್ಯಾಯನಿಂದ ಅವರಿಗೆ ಓದುಬರೆಹಗಳನ್ನು ಕಲಿಸಿದರು. ರಾಮಾಯಣ ಮಹಾಭಾರತ ಭಾಗವತಾದಿ ಪುರಾಣಗಳಲ್ಲಿ ಹೇಳಿರುವ, ಸೀತೆ ದ್ರೌಪದಿ ದಮಯಂತಿ ಸಾವಿತ್ರಿ ಅಹಲ್ಯೆ ಮುಂತಾದ ಪತಿವ್ರತಾ ಶಿರೋಮಣಿಗಳ ಚರಿತ್ರೆಯನ್ನು ಓದಿ ಗ್ರಹಿಸಿದ ಕೆಂಪನಂಜಮ್ಮಣ್ಣಿಯವರ ಪವಿತ್ರತೆಯನ್ನೂ ಸೌಶೀಲ್ಯವನ್ನೂ ನೋಡಿ ನಂಟರಿಷ್ಟರೆಲ್ಲರೂ ಆಶ್ಚರ್ಯಪಡುತ್ತಿದ್ದರು. ಬಾಲ್ಯದಿಂದಲೂ ಇವರ ದೈವಭಕ್ತಿಯೂ ದಯಾಳುತ್ವವೂ ಔದಾರ್ಯವೂ ಸಕಲರಿಗೂ ಸಂತೋಷಜನಕವಾಗುತ್ತ ಬಂದುವು. ಇವರ ಮುಖ ಕಮಲವು ನೈಸರ್ಗಿಕ ರಾಜತೇಜೋವಿರಾಜಮಾನವಾಗಿದ್ದಿತೆಂದು ಇವರನ್ನು ಬಾಲ್ಯದಲ್ಲಿ ನೋಡಿದ್ದವರು ಹೇಳುವರು. ಹೀಗೆ ಪ್ರವರ್ಧಮಾನೆಯಾಗುತ್ತಿರುವ ಮಗಳಿಗೆ ಹನ್ನೆರಡು ವರುಷ ತುಂಬಲು, ನರಸೇಅರಸಿನವರ ಪತ್ನಿ ಕೆಂಪನಂಜಮ್ಮಣ್ಣಿಯವರು ಅನುರೂಪನಾದ ವರನನ್ನು ಹುಡುಕುವ ಆಲೋಚನೆಯನ್ನು ಮಾಡುತ್ತಿದ್ದರು. ಹೀಗಿರಲು, ಸೀತಾವಿಲಾಸ ಸನ್ನಿಧಾನದ

ಮಹಾರಾಣಿಯವರು ಸಮೀಪದ ಬಂಧುಗಳೂ ರಾಜ್ಞೀಪದವಿಗೆ ತಕ್ಕ ವಿದ್ಯಾಬುದ್ಧಿ ಸುಶೀಲಗಳಿಂದ ವಿರಾಜಿಸುವವರೂ ಆಗಿದ್ದ ಕೆಂಪನಂಜಮ್ಮಣ್ಣಿಯವರನ್ನು ಮಹಾರಾಜರಿಗೆ ತಂದುಕೊಂಡು ಲಗ್ನ ಬೆಳೆಯಿಸಬೇಕೆಂಬುದಾಗಿ ನಿರ್ಧರಿಸಿಕೊಂಡರು.

ಬಳಿಕ ಶ್ರೀಮನ್ಮಹಾರಾಜರವರ ವಿವಾಹಮಹೋತ್ಸವಕ್ಕೆ ಬೇಕಾದ ಸಕಲ ಸಾಮಗ್ರಿಗಳೂ ಅಣಿಯಾದರೂ, ೧೮೭೮ನೆಯ ಇಸವಿ ಏಪ್ರಿಲ್ ತಿಂಗಳ ವರೆಗೂ ವಿವಾಹವು ನೆರವೇರಲಿಲ್ಲ. ಏಕೆಂದರೆ: ೧೮೭೭ನೆಯ ವರುಷದ ಮಹಾಕ್ಷಾಮವು ದೇಶದಲ್ಲಿ ವಿಶೇಷ ಪ್ರಜಾಕ್ಷೋಭವನ್ನುಂಟುಮಾಡುತ್ತಿದ್ದಿತು. ೧೮೭೮ರಲ್ಲಿಯೂ ಮಳೆ ಯಾಗದೆ ಇದ್ದುದರಿಂದ, ಆ ವರುಷವೂ ವಿವಾಹ ಮಹೋತ್ಸವವನ್ನು ಬೆಳೆಯಿಸುವುದು ಅನೇಕರಿಗೆ ಸಮಂಜಸವಾಗಿ ತೋರಲಿಲ್ಲ. ಆದರೆ ಮಳೆಯನ್ನು ನಿರೀಕ್ಷಿಸಿಕೊಂಡು ಕುಳಿತರೆ, ಲಗ್ನಕಾಲವು ಮೀರಿಹೋಗುತ್ತದೆಂಬ ಆತಂಕದಿಂದ ಕೊನೆಗೆ ಬಹುಧಾನ್ಯ ಸಂವತ್ಸರದ ವೈಶಾಖ ಬಹುಳ ದಶಮೀ ಭಾನುವಾರ (೧೮೭೮ನೆಯ ಇಸವಿ ಮೇ ತಿಂಗಳು ೨೬ನೆಯ ತಾರೀಖು) ಸಿಂಹಲಗ್ನದಲ್ಲಿ ವಿವಾಹ ಮುಹೂರ್ತವು ನೆರವೇರು ವಂತೆ ನಿಶ್ಚಿತವಾಯಿತು. ವಿವಾಹಕ್ಕೆ ಆಗಬೇಕಾಗಿದ್ದ ಸನ್ನಾಹಗಳೆಲ್ಲವೂ ಒಂದು ತಿಂಗ ಳೊಳಗಾಗಿ ಮಾಡಿಕೊಳ್ಳಬೇಕಾಯಿತು ; ಕಟ್ಟಬೇಕಾದ ಕಟ್ಟಡಗಳೂ ಸಿದ್ಧವಾದುವು. ಚಿನ್ನ ಬೆಳ್ಳಿ ಅಂಬಾರಿಗಳನ್ನೂ ಮರ್ಯಾದಾರ್ಹವಾದ ಅನೇಕ ಆಭರಣಗಳನ್ನೂ ಹೊಸದಾಗಿ ಮಾಡಿಸಿದರು. ಅನೇಕ ಪದಾರ್ಥಗಳನ್ನು ಮದರಾಸು ಮುಂಬಯಿ ಮುಂತಾದ ಪ್ರದೇಶಗಳಿಂದ ಬೆಲೆಗೆ ತರಿಸಿಕೊಂಡರು.

ಹೀಗೆ ಸಕಲವೂ ಸಿದ್ಧವಾದ ಬಳಿಕ, ಅರಮನೆಯನ್ನೆಲ್ಲ ಬಹಳ ಚಿತ್ರಿತವಾಗಿ ಅಲಂಕರಿಸಿದರು. ಅರಮನೆಯ ಮುಂದಿದ್ದ ತಾಳಪ್ರಮಾಣವುಳ್ಳ ಸ್ತಂಭರಾಜಿಗಳು ಶಿಲ್ಪಿಗಳಿಂದ ನಾನಾಬಣ್ಣಗಳಲ್ಲಿ ಚಿತ್ರಿಸಲ್ಪಟ್ಟುವು. ಚಜ್ಜೆಯ ಮೇಲಣಂತಸ್ತಿನಲ್ಲಿದ್ದ ಸುವರ್ಣ ಕಲಶಗಳು ಮೇಘಮಂಡಲಗತವಾದ ಸೌದಾಮಿನೀ ಮರೀಚಿ ಮಾಲೆಯಂತೆ ಅಂತರಿಕ್ಷಭಾಗದಲ್ಲಿ ಕಂಗೊಳಿಸುತ್ತಿದ್ದುವು. ಅರಮನೆಯ ಒಳವಳಯದಲ್ಲಿ ಕಟ್ಟಲ್ಪ ಟ್ಟಿದ್ದ ವಿವಾಹಮಂಟಪದ ಸ್ತಂಭರಾಜಿಯು ರಜತ ಮಯವಾಗಿ ರಂಜಿಸುತ್ತಿದ್ದಿತು. ಅಲ್ಲಿ ಕಟ್ಟಿದ್ದ ಉತ್ತಮತರವಾದ ಚಿತ್ರಪಟಗಳೂ ಕನ್ನಡಿಗಳೂ ವಿದ್ಯುಚ್ಛಕ್ತಿಯ ದೀಪಗಳೂ ನೋಡಿದವರ ಕಣ್ಮನಗಳನ್ನು ಸೂರೆಗೊಳ್ಳುತ್ತಿದ್ದುವು. ಅಲ್ಲಿ ಹಾಸಿದ್ದ ರತ್ನಗಂಬಳಿಗಳು ನವರತ್ನಗಳನ್ನು ಹರಡಿದಂತೆ ನಾನಾ ಬಣ್ಣಗಳಿಂದ ಒಪ್ಪುತ್ತಿದ್ದುವು. ಆ ವಿವಾಹಮಂಟಪವು, ವಿಚಿತ್ರ ವಸ್ತ್ರಗಳಿಂದಲಂಕೃತರಾಗಿ ಶಸ್ತ್ರ ಪಾಣಿಗಳಾಗಿ ನಾಲ್ಕು ದಿಕ್ಕಿನಲ್ಲಿಯೂ ನಿಂತಿರುವ ಸೈನಿಕರಿಂದಲೂ, ಚಿನ್ನ ಬೆಳ್ಳಿಯ ಮಕರ ಮತ್ಸ್ಯ ಕೂರ್ಮಾದಿ ರಾಜಬಿರುದುಗಳನ್ನು ಹಿಡಿದಿರುವ ಭಟರುಗಳಿಂದಲೂ ಭಯಂಕರವಾಗಿರುತ್ತ ಇತರರಿಗೆ ನೋಡಲುಕೂಡ ದುರ್ಲಭವಾಗಿದ್ದಿತು. ಈ ಮಹೋತ್ಸವವನ್ನು ನೋಡಲು ನಾನಾದೇಶಗಳಿಂದ ಬಂದ ಜನರು ರಾಜಧಾನಿಯನ್ನು ತುಂಬುತ್ತಿದ್ದರು.



ಮೈಸೂರಿನಲ್ಲಿದ್ದ ಪೂರ್ವದ ಅರಮನೆ.

ಹೀಗೆ ಸಕಲ ಸನ್ನಾಹವೂ ಮದುವೆಯ ಹಿಂದಿನ ದಿವಸವೇ ಮುಗಿದು ಎಲ್ಲವೂ ಸಿದ್ಧವಾಯಿತು. ದೇಶಕ್ಕೆ ಮಾತ್ರ ಕ್ಷಾಮಬಾಧೆಯು ಇನ್ನೂ ತಪ್ಪಿರಲಿಲ್ಲ. ದೇಶವೆಲ್ಲ ನೀರಿಲ್ಲದೆ ಹಾಹಾಕಾರ ಪಡುತ್ತಿದ್ದಿತು. ಆದರೆ ದೇವರ ಮಹಿಮೆಯು ಅಮೋಘವಾದುದೆಂಬ ಮಾತು ಸುಳ್ಳಲ್ಲ. ಕೂಡಲೇ ಆಕಾಶದಲ್ಲಿ ಮೋಡಗಳು ಕವಿದು ನಾಲ್ಕು ದಿಕ್ಕುಗಳನ್ನೂ ಮುಚ್ಚಿಕೊಂಡುವು. ಗುಡುಗುಮಿಂಚುಗಳಿಂದ ಕೂಡಿದ ದೊಡ್ಡ ಮಳೆಯು ಆರ್ಭಟಿಸುತ್ತ ಸುರಿಯಿತು. ಜನರಿಗಾದ ಆನಂದವನ್ನು ಎಷ್ಟು ಬಣ್ಣಿಸಿದರೂ ತೀರದು. ಆ ವೃಷ್ಟಿಯನ್ನು ಎಲ್ಲರೂ ಶುಭಸೂಚಕವನ್ನಾಗಿ ಎಣಿಸಿದರು.

ಮೇ ೨೩ನೆಯ ತಾರೀಖು ಸಪ್ತಮಿಯ ದಿನ ಶುಭಮುಹೂರ್ತದಲ್ಲಿ ದೇವತಾ ಪ್ರಸ್ತುತ, ನಿಶ್ಚಿತಾರ್ಥ, ಕಂಕಣಧಾರಣೆ ಮೊದಲಾದ ಶುಭಕರ್ಮಗಳು ನಡೆದುವು. ನವಮಿಯು ಪ್ರಾತಃಕಾಲ ನಾಂದಿಯೂ ಆ ಮೇಲೆ ಕಾಶೀಯಾತ್ರೆಯೂ ಬೆಳೆದುವು. ಆ ದಿನ ರಾತ್ರಿ ಮಳೆಯಲ್ಲಿಯೇ ಕೆರೆಯಿಂದ ಬಹಳ ಉತ್ಸವದೊಡನೆ ಅರಮನೆಗೆ ದೇವರನ್ನು ತಂದರು. ಅನಂತರದಲ್ಲಿ ನಡಿಯಬೇಕಾಗಿದ್ದ ಉದಕಶಾಂತಿ ಮುಂತಾವ ಶಾಸ್ತ್ರಸಂಬಂಧ ಕರ್ಮಗಳೆಲ್ಲವೂ ಕ್ರಮವಾಗಿ ನಡೆದುವು. ಇಷ್ಟರಲ್ಲಿ ಎಲ್ಲರೂ ಔತ್ಸುಕ್ಯದಿಂದ ಇದಿರುನೋಡುತ್ತಿದ್ದ ದಶಮಿಯು ಬಂದೊದಗಿತು. ಆ ದಿನವೇ ಶ್ರೀಚಾಮರಾಜೇಂದ್ರ ಒಡೆಯರವರ ಮತ್ತು ಅವರ ಅರ್ಧಾಂಗಿಯೆನಿಸುವ ಕೆಂಪನಂಜಮ್ಮಣ್ಣಿಯವರ ಪರಿಣಯಮಹೋತ್ಸವದ ಧನ್ಯದಿನವು. ಆ ದಿನವೇ ಚಾಮರಾಜರೆಂಬ ಕಲ್ಪವೃಕ್ಷಕ್ಕೆ ಕೆಂಪನಂಜಮ್ಮಣ್ಣಿಯವರೆಂಬ ಕನಕಲತೆಯು ಹಬ್ಬುವ ದಿನ. ಇದಕ್ಕಾಗಿ ಅರಮನೆಯಲ್ಲಿ ಹಿಂದಣ ರಾತ್ರಿಯಿಂದಲೂ ಬೇಕಾದ ಸಾಮಗ್ರಿಗಳೆಲ್ಲವೂ ಬಹು ಸಂಭ್ರಮದಿಂದ ಸಿದ್ಧವಾಗುತ್ತಿದ್ದುವು. ಅರಮನೆಯೊಂದೇ ಅಲ್ಲದೆ ಊರೆಲ್ಲವೂ ಉತ್ಸವಮಯವಾಗಿಯೂ ಅಲಂಕಾರಭರಿತವಾಗಿಯೂ ಇದ್ದಿತು. ಪ್ರಾತಃಕಾಲವಾದೊಡನೆಯೇ ಸಕಲ ಸೈನ್ಯವೂ ಸಿದ್ಧವಾಗಿ ಅರಮನೆಯ ಮುಂದೆ ಬಂದು ನಿಂತಿತು. ಸೈನಿಕರ ತುತೂರಿಗಳ ಧ್ವನಿಯು ವರ್ಷಾಕಾಲದ ಮೇಘ ಗರ್ಜನೆಯಂತೆ ಕೇಳಬರುತ್ತಿದ್ದಿತು. ಎಲ್ಲೆಲ್ಲಿಯೂ ಆಯುಧ ಧ್ವಜ ಪತಾಕಾ ಯುಕ್ತರಾದ ವೀರಭಟರ ಸಿಂಹನಾದಗಳೂ, ಘೋರಗರ್ರೆವ ಮಂಗಳವಾದ್ಯಗಳೂ, ದಿಕ್ಕು ದಿಕ್ಕುಗಳನ್ನೆಲ್ಲ ವ್ಯಾಪಿಸಿದುವು. ಆಗ ಅಧಿಕಾರಿಗಳೆಲ್ಲರು ಸಮಯೋಚಿತವಾದ ವಸ್ತ್ರಾಭರಣಗಳನ್ನು ತೊಟ್ಟು, ಆನಂದಭರಿತರಾಗಿ ಅರಮನೆಗೆ ಹೋಗುತ್ತಿದ್ದರು. ಪ್ರಜೆಗಳು ತಂಡತಂಡವಾಗಿ ಹೆಮ್ಮೆಯನ್ನೂ ಆನಂದವನ್ನೂ ಮುಖಭಾವದಿಂದ ತೋರ್ಪಡಿಸುತ್ತ ತಮ್ಮ ತಮ್ಮ ಕೆಲಸಗಳನ್ನೆಲ್ಲ ಬಿಟ್ಟು ಮೆರವಣಿಗೆಯನ್ನು ನೋಡಲು ಬೀದಿಬೀದಿಗಳಲ್ಲೂ ಜಗತಿಗಳ ಮೇಲೂ ಗವಾಕ್ಷಗಳಲ್ಲೂ ಉಪ್ಪರಿಗೆಗಳ ಮೇಲೂ ನೆರೆದು ನಿಂತಿದ್ದರು. ಆಗ ಮಧ್ಯಾಹ್ನದ ಸೂರ್ಯನು ತನ್ನ ತೀವ್ರಕಿರಣಗಳಿಂದ ಜಡಜಗತ್ತನ್ನು ತಪಿಸುತ್ತಿದ್ದನು. ಮಹಾರಾಜರು ಸುವರ್ಣವಸ್ತ್ರರತ್ನಾಭರಣಗಳನ್ನು ಧರಿಸಿ, ನೀಲಾದ್ರಿಯಂತೆ ಎತ್ತರವಾದ ಒಂದು ಮತ್ತಗಜವನ್ನಾರೋಹಿಸಿ, ತತ್ಪರ್ವತ ಶಿಖರ ಸದೃಶವಾಗಿಯೂ

ಸ್ವರ್ಣಖಚಿತವಾಗಿಯೂ ಇರುವ ಅಂಬಾರಿಯಲ್ಲಿ ಕುಳಿತು ಉತ್ಸವಹೊರಟರು. ಇವರ ವಾಮಪಾರ್ಶ್ವದಲ್ಲಿ ಮಹಾರಾಜರವರ ಚಿಕ್ಕಣ್ಣಂದಿರಾದ ಸುಬ್ರಹ್ಮಣ್ಯರಾಜ ಅರಸಿನವರು, ದಕ್ಷಿಣಪಾರ್ಶ್ವದಲ್ಲಿ ದೊಡ್ಡಣ್ಣಂದಿರಾದ ಗೋಪಾಲರಾಜ ಅರಸಿನವರು ಮುಂತಾದ ರಾಜಕುಮಾರರು ತಮ್ಮತಮ್ಮ ವೈಭವಕ್ಕನುಗುಣವಾದ ವಸ್ತ್ರಾಭರಣಗಳನ್ನು ತೊಟ್ಟು ದಿವ್ಯಾಶ್ವಗಳನ್ನೇರಿ ಉತ್ಸವದ ಬೆಡಗನ್ನು ಹೆಚ್ಚಿಸುತ್ತಲಿದ್ದರು. ಆಗ ಮಹಾರಾಜರು ಐರಾವತವನ್ನೇರಿ ದೇವಸಮೂಹದಿಂದ ಪರಿವೃತನಾಗಿ ಭೂಮಿಯ ಸೌಭಾಗ್ಯವನ್ನು ನೋಡುವುದಕ್ಕೆ ಬಂದಿರುವ ದೇವೇಂದ್ರನಂತೆ ಪ್ರಕಾಶಿಸುತ್ತ ಉತ್ಸವದಿಂದ ಬರುತ್ತಿದ್ದರು.

ಈ ರೀತಿಯಾಗಿ ಶ್ರೀಮನ್ಮಹಾರಾಜರವರ ಉತ್ಸವವು ಕೋಟೆಯ ರಾಜವೀಧಿಗಳಲ್ಲಿ ಮಂದಗಮನದಿಂದ ಹೊರಡಲು, ಸುಮಂಗಲಿಯರು ಅಲ್ಲಲ್ಲಿ ನಿಂತು ಆರತಿಯನ್ನು ಬೆಳಗಿದರು. ವೇದಪಾರಗರಾದ ಬ್ರಾಹ್ಮಣರು ಸ್ವಸ್ತಿವಾಚನವನ್ನು ಹೇಳಿ ಆಶೀರ್ವದಿಸಿದರು. ಸ್ಥಳ ಸಂಕೋಚದಿಂದ ಒಬ್ಬರನ್ನೊಬ್ಬರು ನೂಕುತ್ತ ನಿಂತಿದ್ದ ಪ್ರಜಾಕೋಟಿಯು ಹೂಮಳೆಯನ್ನು ಕರೆದು ಕರತಾಳನವನ್ನು ಮಾಡಿತು. ವಿದ್ಯಾರ್ಥಿಗಳು ಜಯಘೋಷವನ್ನು ಮಾಡಿದರು. ಮಹಾರಾಜರು ಪ್ರಜೆಗಳಿಂದ ಮಾಡಲ್ಪಟ್ಟ ಮರ್ಯಾದೆಗಳನ್ನು ಕೈಕೊಳ್ಳುತ್ತ, ಅವರಲ್ಲಿ ಯಥಾಯೋಗ್ಯವಾಗಿ ಅನುರಾಗವನ್ನು ತೋರಿಸುತ್ತ, ಲಗ್ನಸಮಯಕ್ಕೆ ಸರಿಯಾಗಿ ಅರಮನೆಯ ಆನೆಯ ಬಾಗಿಲ ಬಳಿಗೆ ಬಂದು ನಿಂತರು. ಆಗ ವಧೂಪಕ್ಷದಲ್ಲಿ ಬಕ್ಷಿ ಬಸಪ್ಪಾಜಿ ಅರಸಿನವರು ಬಂದುನಿಂತು, ಮಹಾರಾಜರನ್ನು ಆದರಿಸಿ ವಿವಾಹಮಂಟಪಕ್ಕೆ ಕರೆದುಕೊಂಡು ಹೋದರು. ಆಗ ಭೋರ್ಗರೆಯುತ್ತಿರುವ ಭೇರಿ ಮೃದಂಗ ಢಕ್ಕಾ ಕಹಳಾದಿ ನಾನಾವಾದ್ಯರವದಿಂದ ದಿಙ್ಮಂಡಲವು ಪ್ರತಿಧ್ವನಿಗೊಳ್ಳುತ್ತಿದ್ದಿತು.

ವಿವಾಹ ಮಂಟಪದಲ್ಲಿ ಒಂದು ಕಡೆ ರಾಜಬಂಧುಗಳೂ ಅಧಿಕಾರಿಗಳೂ ಅರಸುಗಳೂ ಸಮಯೋಚಿತ ವಸ್ತ್ರಾಭರಣಗಳಿಂದಲಂಕೃತರಾಗಿ ಕುಳಿತಿದ್ದರು. ಇನ್ನೊಂದು ಕಡೆ ವೈದಿಕಮಂಡಲಿಯ ವಿದ್ವಾಂಸರು ವೇದಘೋಷವನ್ನು ಮಾಡುತ್ತ ಜಾನಕಿಯ ವಿವಾಹ ಮಂಟಪದಲ್ಲಿ ನೆರೆದಿದ್ದ ಋಷಿಮಂಡಲಿಯನ್ನು ಅನುಕರಿಸುತ್ತಿದ್ದರು. ಮತ್ತೊಂದು ಕಡೆ ತೆರೆಯೊಳಗೆ ವಿವಿಧಾಲಂಕಾರ ಭೂಷಿತರಾದ ರಾಜಸ್ತ್ರೀಯರು ಆಕಾಶಮಂಡಲದಲ್ಲಿರುವ ಉಜ್ವಲಾನನೆಯರಾದ ತಾರಾಲಲನೆಯರಂತೆ ಆನಂದೋತ್ಫುಲ್ಲಮಾನಸೆಯರಾಗಿ ಶುಭಗೀತಗಳನ್ನು ಹಾಡುತ್ತಿದ್ದರು. ಬೇರೊಂದು ಭಾಗದಲ್ಲಿ ಇಂಗ್ಲಿಷ್ ವಾದ್ಯವಾಗುತ್ತಿದ್ದಿತು. ವೇಶ್ಯಾಂಗನೆಯರು ನರ್ತನ ಮಾಡುತ್ತಿದ್ದರು. ವಂದಿಮಾಗಧರು ಸಾಲುಸಾಲಾಗಿ ಕೈಕಟ್ಟಿಕೊಂಡು ಪರಾಕು ಪರಾಕೆಂದು ಹೊಗಳುತ್ತಿದ್ದರು.

ಈ ರೀತಿಯಾಗಿ ಒಪ್ಪುತ್ತಿರುವ ವಿವಾಹ ಮಂಟಪದಲ್ಲಿ ಸಮಸ್ತ ಮಂಗಳ ದ್ರವ್ಯಗಳಿಂದ ಭರಿತವಾದ ವಿವಾಹ ವೇದಿಕೆಯಮೇಲೆ ಪ್ರಜ್ವಲಿಸುತ್ತಿರುವ ಅಗ್ನಿಯ

ಲಗ್ನಕ್ಕೆ ಶ್ರೀಚಾಮರಾಜೇಂದ್ರ ಒಡೆಯರವರು ವಿವಾಹದೀಕ್ಷೆಗೆ ಯೋಗ್ಯವಾದ ಅಲಂಕಾರದೊಡನೆ ಕೂಡಿ ಪುರೋಹಿತಾಮಾತ್ಯ ಬಂಧುಜನ ಸಮೇತರಾಗಿ ಬಿಜಯಂಗೈದು ವರಪೂಜೆಯೂ ಶಚೀಪುರಂದರ ಪೂಜೆಯೂ ನಡೆದಮೇಲೆ, ಬಾರದ್ವಾಜ ಗೋತ್ರೋತ್ಪನ್ನರಾದ ಸರಸೇ ಅರಸಿನವರಿಗೆ ಪುತ್ರಿಕಾ ರೂಪವಾಗಿ ಅವತರಿಸಿದ ಮಂಗಳರೂಪಿಣಿಯರಾದ ಕೆಂಪನಂಜಮ್ಮಣ್ಣಿಯವರನ್ನು ಶಾಸ್ತ್ರಿಯರು ತೆರೆಯಲ್ಲಿ ರಾಜರಿಗಭಿಮುಖವಾಗಿ ಕರೆತಂದು ನಿಲ್ಲಿಸಿದರು. ವಧೂವರರಿಬ್ಬರನ್ನೂ ಮೆಟ್ಟಕ್ಕಿಗಳಲ್ಲಿ ನಿಲ್ಲಿಸಿ ಮಂಗಳಶ್ಲೋಕಗಳನ್ನು ಹೇಳಿದ ಬಳಿಕ, ಕನ್ಯಾವೀಕ್ಷಣವೂ ಅಕ್ಷತಾರೋಪಣವೂ ಜರುಗಿದುವು. ಬಳಿಕ ಬಕ್ಷಿ ಬಸಪ್ಪಾಜಿ ಅರಸಿನವರು ಗಂಗಾಜಲ ಧಾರಾಪೂರ್ವಕವಾಗಿ ಕನ್ಯಾದಾನ ಮಾಡಿದರು. ಒಡನೆಯೇ ವಧುವಿನ ಸಮೀಪ ರಾಜಬಂಧುಗಳಲ್ಲಿ ಹಿರಿಯರಾದವರೆಲ್ಲರೂ ಧಾರೆಯೆರೆದರು. ಅನಂತರ ಅಗ್ನಿಸಾಕ್ಷಿಕವಾಗಿ ಪಾಣಿಗ್ರಹಣ ಮಾಂಗಲ್ಯಧಾರಣಾದಿ ಶುಭಕಾರ್ಯಗಳೆಲ್ಲ ವೈಭವದಿಂದ ನೆರವೇರಿದುವು.

ಶ್ರೀಚಾಮರಾಜೇಂದ್ರ ಒಡೆಯರವರ ವಿವಾಹಮಹೋತ್ಸವದ ದರ್ಬಾರು.

ಈ ಮಹೋತ್ಸವ ಮಧ್ಯದಲ್ಲಿ ಚೀಫ್ ಕಮಿಷನರವರು ಅರಮನೆಗೆ ದಯೆಮಾಡಿಸಿ ಮಹಾರಾಜ್ಞೀ ಸೀತಾವಿಲಾಸ ಸನ್ನಿಧಾನದಲ್ಲಿ ವೈಸ್ರಾಯಿ ಲಾರ್ಡ್ ಲಿಟ್ಟನ್ ಸಾಹೇಬರು ಮಹಾರಾಜರವರ ಮದುವೆಯ ವಿಷಯದಲ್ಲಿ ತಮಗುಂಟಾದ ಸಂತೋಷವನ್ನೂ ಆ ಮಹೋತ್ಸವಕ್ಕೆ ಬರಲವಕಾಶವಾಗದಂತೆ ತಮಗೆ ಅನಿವಾರ್ಯ ಸಂಭವಿಸಿದುದರಿಂದ ತಮ್ಮ ಮನಸ್ಸಿಗುಂಟಾದ ಕೊರತೆಯನ್ನೂ ತಂತೀ ಮೂಲಕ ಸೂಚಿಸಿದ್ದಾರೆಂಬುದಾಗಿ ತಿಳಿಯಪಡಿಸಿ, ವಧೂವರರಿಗೆ ವೈಸ್ರಾಯಿಯವರು ಕಳುಹಿಸಿದ್ದ ಖಿಲ್ಲತ್ತುಗಳನ್ನು ಒಪ್ಪಿಸಿದರು. ಸೀತಾವಿಲಾಸ ಸನ್ನಿಧಾನದ ಮಹಾರಾಜ್ಞಿಯವರೂ ತಮ್ಮ ಸಂತೋಷ

ವನ್ನು ಸೂಚಿಸಿ, ವೈಸ್ರಾಯಿಯವರಿಗೆ ತಕ್ಕ ಬಹುಮಾನಗಳನ್ನು ಚೀಫ್ ಕಮಿಷನರ ಮೂಲಕ ಕಳುಹಿಸಿಕೊಟ್ಟರು. ಬಳಿಕ ಬಂದಿದ್ದವರಿಗೆಲ್ಲ ಯಥೋಚಿತವಾಗಿ ಮರ್ಯಾದೆಗಳು ನಡೆದುವು. ವಿವಾಹ ಪ್ರಾರಂಭ ದಿನದಿಂದ ಆರು ದಿವಸದ ವರೆಗೂ ಸ್ಥಳ ಪರಸ್ಥಳದ ಸಕಲ ವರ್ಣಾಶ್ರಮದವರಿಗೂ ಮೃಷ್ಟಾನ್ನಭೋಜನವು ನಡೆಯಿತು. ಶಿಷ್ಟರಾದವರಿಗೆಲ್ಲ ಭೂರಿದಕ್ಷಿಣೆ ದೊರೆಯಿತು. ದೀನಾನಾಥರಿಗೆಲ್ಲ ಧನ ಕನಕ ವಸ್ತ್ರಾದಿಗಳು ಕೊಡಲ್ಪಟ್ಟುವು. ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಕ್ಷಾಮಬಾಧೆಯಿಂದ ಶ್ರಮಪಡುತ್ತಿದ್ದ ಬಡವರಿಗೆ ಯಥೋಚಿತವಾದ ದ್ರವ್ಯಸಹಾಯವು ಮಾಡಲ್ಪಟ್ಟಿತು. ಈ ವಿವಾಹಮಹೋತ್ಸವದ ಸಂತೋಷಾರ್ಥವಾಗಿ ಕಾರಾಗೃಹವಾಸಿಗಳಾಗಿದ್ದವರೊಳಗೆ ಅನೇಕರು ಸೆರೆಯಿಂದ ಬಿಡುಗಡೆಯಾದರು. ಆ ರಾತ್ರಿ ವಿವಾಹಕ್ಕಾಗಿ ಬಂದಿದ್ದ ಯೂರೋಪಿಯನ್ ದೊಡ್ಡಮನುಷ್ಯರಿಗೆಲ್ಲ ಜಗನ್ಮೋಹನ ಬಂಗಲೆಯಲ್ಲಿ ಔತಣವು ಅತಿ ವಿಜೃಂಭಣೆಯಿಂದ ಜರುಗಿತು. ನಾಕಬಲ್ಯುತ್ಸವಾನಂತರ ರಾಜದಂಪತಿಗಳ ಮೆರೆವಣಿಗೆಯು ಪ್ರಾರಂಭವಾಯಿತು. ಶ್ರೀಮನ್ಮಹಾರಾಜರವರು ಪಾಣಿಗ್ರಹೀತೆಯರಾದ ಪಟ್ಟಮಹಿಷಿಯರೊಡನೆ ದಿವ್ಯಗಜಾರೂಢರಾಗಿ ಚಿನ್ನದ ಅಂಬಾರಿಯಲ್ಲಿ ಕುಳಿತು ಐರಾವತವನ್ನೇರಿದ ಶಚೀಪುರಂದರರಂತೆ ಶೋಭಿಸುತ್ತ ರಾಜವೀದಿಗಳಲ್ಲೆಲ್ಲ ಸಂಚರಿಸಿದರು. ರಾಜಬಂಧುಗಳೂ ಅಧಿಕಾರಿಗಳೂ ಇತರ ದೊಡ್ಡಮನುಷ್ಯರೂ ಪಾದಚಾರಿಗಳಾಗಿ ಮುಂದೆ ಹೊರಟರು. ಮೆರವಣಿಗೆಯು ನವರಾತ್ರಿಯ ಮೆರವಣಿಗೆಗಿಂತಲೂ ಅತಿಶಯವಾಗಿದ್ದಿತು, ನಗರವಾಸಿಗಳೂ ಉತ್ಸವಾರ್ಥವಾಗಿ ಬಂದು ನೆರೆದಿದ್ದ ಲಕ್ಷೋಪಲಕ್ಷ ಪ್ರಜೆಗಳೂ ಉತ್ಸವ ಸಂರಂಭವನ್ನು ಕಣ್ಣಾರೆ ನೋಡಿ ಆನಂದಪರಿತರಾದರು.

ಕಂದ ॥ ಮಂಗಳಮಂ ಕುಡುಗೆ ವೃಷೋ । ತ್ತುಂಗತುರಂಗಂ ಕುರಂಗಧರ ನಗತನಯೋ ।
ತ್ಸಂಗಂ ಧವಳಾಂಗಂ ಶ್ರೀ । ಗಂಗಾಧರನತುಳ ಚಾಮರಾಜಂಗೊಲವಿಂ ॥ ೧ ॥

ವೃತ್ತ ॥ ನಿಯತಂ ಪದ್ಮೋದ್ಭವಂ ಭಾರತಿಯನಗಜೆಯಂ ಶಂಕರಂ ಪ್ರೇಮರೂಪಾ ।
ಲಯೆಯಂ ನಾರಾಯಣಂ ವಾಸವನುರೆ ಶಚಿಯಂ ಭಾಸ್ಕರಂ ಛಾಯೆಯಂ ನಂ ॥
ದಯಮೇಂ ಕಂದರ್ಪದೇವಂ ರತಿಯನೆಸೆವವೋಲ್ ಸಂತತಂ ಚಾಮರಾಜಾ ।
ನಯ ಬಾಲಾ ಕೆಂಪನಂಜಾಂಬೆಯನೆಸೆಯುತೆ ಪೇರಾಯು ಭಾಗ್ಯ ಗುಣಾಢ್ಯೇ ॥ ೨ ॥
ಹಾಡೆ ಸುಧಾರಸಾಬ್ಧಿರವದಂತಿರೆ ಕಿನ್ನರಿಯರ್ ವಿಲಾಸದಿಂ ।
ಪಾಡೆ ಸುರೂಪಿನಪ್ಸರಸಿಯರ್ ಜಯ ಶಂಕರ ಶರ್ವ ಎಂದು ಕೊಂ ।
ಡಾಡೆ ಗಣವ್ರಜಂ ಗಿರಿಸುತಾ ಕರಮಂ ಪಿಡಿದಿಂದುಶೇಖರಂ ।
ನೀಡೆ ವಧೂವರರ್ಗೆ ಶುಭಸಂತತಿಯಂ ಬಿಡದೀಗೆ ಶಂಕರಂ ॥ ೩ ॥
ವರಕೃಷ್ಣಕ್ಷೋಣಿನಾಥಂಗುರೆ ಸುತನೆನಿಸುತ್ತುದ್ಧ ಕರ್ಣಾಟಕಾಧೀ ।
ಶ್ವರನಾಗುತ್ತಾ, ಪ್ರಿಯಂತ ಸ್ಮರ ನಳಮುಖರಂ ಮೀರಿ ಸೌಂದರ್ಯದಿಂ ಧಿ ॥
ಕ್ಕರಿಸುತ್ತಂ ಸದ್ಗುಣಕ್ಕಂ ನೆಲೆವನೆಯೆನಿಸುತ್ತೀಗಳಾ ಪ್ರಾಜ್ಞವಿದ್ಯಾ ।
ಧರಿಯೊಪ್ಪಿ ಕೆಂಪನಂಜಾಂಬಿಕೆಯ ಪರಿಣಯಂಗೊಂಡ ಚಾಮಕ್ಷಿತೀಶಾ ॥ ೪ ॥

ಕಂದ ॥ ಶುಭಮಕ್ಕೆ ಚಾಮರಾಜ । ಪ್ರಭುಗಂ ಸೀತಾವಿಲಾಸವಧುಗಮನಿಶಂ ।
ವಿಭವದೊಳಿಂತರಮನೆಯೊಳ್ । ಪ್ರಭವಿಸುಗೆ ಮಹೋತ್ಸವಂಗಳಿಪ್ಪರಕ್ಕಯಿಂ ॥ ೫ ॥

P. R. K.

ಏಳನೆಯ ಅಧ್ಯಾಯ.

ಶ್ರೀಚಾಮರಾಜೇಂದ್ರ ಒಡೆಯರವರ ರಾಜ್ಯಾಭಿಷೇಕೋತ್ಸವ.

ಹಿಂದೆ ಮುಮ್ಮಡಿ ಕೃಷ್ಣರಾಜ ಒಡೆಯರವರು ಜೀವಿಸಿದ್ದ ಕಾಲದಲ್ಲಿ ಇಂಡಿಯಾ ಸ್ಟೇಟ್ ಸೆಕ್ರಿಟೆರಿಗಳಾದ ಲಾರ್ಡ್ ನಾರ್ತ್‌ಕೋಟ್ ಅವರು ಬರೆದು ಕಳುಹಿಸಿದ ನಿರೂಪದಲ್ಲಿ—ಮುಂದೆ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರು ರಾಜಯೋಗ್ಯವಾದ ವಿದ್ಯಾಭ್ಯಾಸವನ್ನು ಮಾಡಿ ರಾಜ್ಯಭಾರವನ್ನು ವಹಿಸುವ ತಕ್ಕ ಅರ್ಹತೆಯನ್ನು ಪಡೆದು ಪ್ರಾಪ್ತವಯಸ್ಕರಾದ ಕೂಡಲೆ, ಸಂಪ್ರದಾಯಾನುಸಾರವಾಗಿ ಬಂದ ಯಾದವ ಕುಲದ ಸಿಂಹಾಸನಾಧಿಪತ್ಯವನ್ನು ಪುನಃ ಅವರ ವಶಕ್ಕೆ ಒಪ್ಪಿಸಿಬಿಡುವುದಾಗಿ ವಾಗ್ದಾನ ಮಾಡಿದ್ದರಷ್ಟೆ. ಈಗ ಸಮರ್ಥರಾದ ವಿದ್ವಾಂಸರುಗಳ ಬಳಿಯಲ್ಲಿ ವಿದ್ಯಾಭ್ಯಾಸವನ್ನು ಪೂರಯಿಸಿಕೊಂಡು, ಉಪನಯನ ವಿವಾಹಾದಿ ಸಂಸ್ಕಾರಗಳನ್ನು ಪಡೆದು, ಪ್ರಾಪ್ತವಯಸ್ಕರಾಗಿಯೂ ರಾಜತೇಜೋವಿರಾಜಮಾನರಾಗಿಯೂ ಇರುವ ಶ್ರೀಚಾಮರಾಜೇಂದ್ರ ಒಡೆಯರವರಿಗೆ ಮೈಸೂರು ರಾಜ್ಯಲಕ್ಷ್ಮಿಯ ಹಸ್ತಗ್ರಹಣವನ್ನು ಮಾಡುವುದಕ್ಕೆ ತಕ್ಕಕಾಲವು ಒದಗಿತು. ಇದನ್ನು ಸತ್ಯಸಂಧರಾದ ಬ್ರಿಟಿಷ್ ಸರಕಾರದವರು ಆಡಿದ ಭಾಷೆಗೆ ನ್ಯೂನತೆ ಬಾರದಂತೆ ೧೮೮೧ನೆಯ ಇಸವಿ ಮಾರ್ಚಿ ೧ರಲ್ಲಿ ಒಂದು ಹೊಸ * ತಹನಾಮೆಯನ್ನು ಹೊರಡಿಸಿದರು. ಈ ತಹನಾಮೆಯನ್ನು ಮಹಾರಾಜರವರ ಕಡೆಯ ಸಂಭಾವಿತರು ಒಪ್ಪಿದ ಬಳಿಕ ಅದೇ ಮಾರ್ಚಿ ತಿಂಗಳು ೨೫ನೆಯ ದಿನ ಪ್ರಾತಃಕಾಲದಲ್ಲಿ ಶ್ರೀಚಾಮರಾಜೇಂದ್ರ ಒಡೆಯರವರಿಗೆ ರಾಜ್ಯಾಭಿಷೇಕವು ನಡೆಯತಕ್ಕದೆಂದು ನಿರ್ಧರವಾಯಿತು.

---

* ತಹನಾಮೆ.

ಬ್ರಿಟಿಷ್ ಸರಕಾರದವರು ಮೈಸೂರು ಸಂಸ್ಥಾನವನ್ನು ಬಹುಕಾಲದ ವರೆಗೆ ಸ್ವಾಧೀನದಲ್ಲಿಟ್ಟುಕೊಂಡು ಇಲ್ಲಿಯ ರಾಜ್ಯಭಾರದಲ್ಲಿ ಸರ್ವೋತ್ತಮವಾದ ಕ್ರಮವನ್ನು ನೆಲೆಗೊಳಿಸಿರುವರು. ಮುಮ್ಮಡಿ ಕೃಷ್ಣರಾಜ ಒಡೆಯರವರು ಗತಿಸಿದ ಕಾಲದಲ್ಲಿ ಬ್ರಿಟಿಷ್ ಸರಕಾರದವರು ಹಾಗೆ ತಾವು ನೆಲೆಗೊಳಿಸಿರುವ ರಾಜ್ಯಭಾರಕ್ರಮಕ್ಕೆ ಸ್ವಲ್ಪವೂ ನ್ಯೂನತೆ ಬಾರದಂತೆ ಕಾಪಾಡಿಕೊಂಡು ಬರುವುದಕ್ಕೆ ಅವಶ್ಯಕಗಳಾದ ನಿಬಂಧನೆಗಳಿಗೂ ಒಡಂಬಡಿಕೆಗೂ ಅನುಸಾರವಾಗಿ ಈ ದೇಶದ ರಾಜರು ಈ ಸಂಸ್ಥಾನವನ್ನು ಆಳಬೇಕೆಂಬ ಉದಾರೇಚ್ಛೆಯುಳ್ಳವರಾಗಿರುವುದರಿಂದ, ಗತಿಸಿದ ಮಹಾರಾಜರ ಸ್ವೀಕೃತ ಪುತ್ರರಾದ ಶ್ರೀಚಾಮರಾಜೇಂದ್ರ ಒಡೆಯರವರು ಈ ಸಂಸ್ಥಾನವನ್ನು ಪರಿಪಾಲಿಸುವ ರಾಜರಾಗಿರುವುದಕ್ಕೆ ಅರ್ಹತೆಯುಳ್ಳವರಾಗುವರೆಂದು ತಿಳಿದುಬಂದ ಪಕ್ಷದಲ್ಲಿ, ಇನ್ನುಮುಂದೆ ನಿರ್ಧರಿಸಲ್ಪಡುವ ನಿಬಂಧನೆ

ಈ ಮಧ್ಯದಲ್ಲಿ—ಎಂದರೆ, ೧೮೮೧ನೆಯ ಇಸವಿ ಮಾರ್ಚಿ ೧೧ಕ್ಕೆ ಸರಿಯಾದ ವಿಕ್ರಮನಾಮ ಸಂವತ್ಸರದ ಫಾಲ್ಗುಣ ಶುದ್ಧ ಏಕಾದಶೀ ಶುಕ್ರವಾರದ ದಿನ ಶ್ರೀಚಾಮರಾಜೇಂದ್ರ ಒಡೆಯರವರಿಗೆ ಮುಂದೆ ಪ್ರಾಪ್ತವಾಗುವ ರಾಜ್ಯಾಭಿಷೇಕಕ್ಕೆ ಶುಭಸೂಚಕವಾಗಿ ಜ್ಯೇಷ್ಠ ಪುತ್ರಿಕೋತ್ಸವಾನಂದವು ಒದಗಿತು. ಒಡನೆಯೇ ನಗರದಲೆಲ್ಲ ಉತ್ಸವ ಪರಂಪರೆಗಳು ನೆಗಳಿದುವು. ಹಿಂದೆ ಮುಮ್ಮಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿ ದೈವೇಚ್ಛೆಯಿಂದ ಕೈಬಿಟ್ಟುಹೋಗಿದ್ದ ರಾಜ್ಯಲಕ್ಷ್ಮಿಯು ಮರಳಿ ತಮ್ಮ ಕೈಸೇರಿ ತಾವು ಜಯಶೀಲರಾಗಿಯೇ ಇರುವುದಕ್ಕೆ ಈಗಾದ ಪುತ್ರಿಕಾಜನನೋತ್ಸವವೇ ಸೂಚಕವಾಗಿ ಪರಿಣಮಿಸಿದುದರಿಂದ ಮಹಾರಾಜರವರು ಈ ಜ್ಯೇಷ್ಠ ಪುತ್ರಿಯರಿಗೆ ಜಯಲಕ್ಷ್ಮಮ್ಮಣ್ಣಿಯವರೆಂದು ನಾಮಕರಣವನ್ನು ಮಾಡಿದರು.

ಬಳಿಕ, ಅದೇ ಮಾರ್ಚಿ ೨೫ನೆಯ ದಿನ ನಡೆಯಬೇಕಾದ ರಾಜ್ಯಾಭಿಷೇಕೋತ್ಸವಕ್ಕೆ ಬೇಕಾದ ಸನ್ನಾಹಗಳೆಲ್ಲವೂ ಸಿದ್ಧವಾದುವು. ಇದಕ್ಕಾಗಿ ಅರಮನೆಯೂ ನಗರವೂ ಶೋಭಾಯಮಾನವಾಗಿ ಅಲಂಕರಿಸಲ್ಪಟ್ಟುವು. ಈ ದಿವ್ಯಮಹೋತ್ಸವವನ್ನು

ಒಡಂಬಡಿಕೆಗಳಿಗೂ ಅನುಸಾರವಾಗಿ ಆಳತಕ್ಕುದೆಂದು ಗೊತ್ತುಮಾಡಿ ಈ ಸಂಸ್ಥಾನಾಧಿಪತ್ಯವನ್ನು ಅವರ ವಶಕ್ಕೆ ಒಪ್ಪಿಸತಕ್ಕುದೆಂದು ನಿರ್ಣಯಮಾಡಿದರು. ಈಗ ಶ್ರೀಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರು ಹದಿನೆಂಟು ವರುಷ ವಯಸ್ಸನ್ನು ಪಡೆದು ರಾಜತ್ವಕ್ಕೆ ಅರ್ಹರಾಗಿರುವರೆಂದು ಬ್ರಿಟಿಷ್ ಸರಕಾರದವರಿಗೆ ಕಂಡುಬಂದು ಹಿಂದೆ ಸೂಚಿಸಿರುವ ಪ್ರಕಾರ ಮೇಲ್ಕಂಡ ಸಂಸ್ಥಾನದ ರಾಜ್ಯಭಾರವನ್ನು ಈಗ ಒಪ್ಪಿಸಬೇಕಾಗಿರುವುದರಿಂದ, ಯಾವ ಒಡಂಬಡಿಕೆಗಳಿಗೆ ಅನುಸಾರವಾಗಿ ಅವರಿಗೆ ರಾಜ್ಯವನ್ನು ಒಪ್ಪಿಸಬೇಕೋ ಅಂತಹ ಒಡಂಬಡಿಕೆಗಳನ್ನು ನಿರ್ಧಾರಣಮಾಡಿ ಲೇಖನಮೂಲಕ ಒಂದು ತಹನಾಮೆಯನ್ನು ಹುಟ್ಟಿಸಿ ಆ ಮಹಾರಾಜರಿಗೆ ಒಪ್ಪಿಸತಕ್ಕುದು ಯುಕ್ತವಾಗಿದೆ. ಆ ತಹನಾಮೆ ಏನೆಂದರೆ :—

೧. ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರಿಗೆ ೧೮೮೧ನೆಯ ಇಸವಿ ಮಾರ್ಚಿ ೨೫ನೆಯ ತಾರೀಖಿನ ದಿವಸ ಮೈಸೂರು ರಾಜ್ಯದ ಆಡಳಿತವನ್ನು ಒಪ್ಪಿಸಿ ರಾಜ್ಯಾಭಿಷೇಕೋತ್ಸವವನ್ನು ನೆರವೇರಿಸತಕ್ಕುದು.

೨. ಮೇಲೆ ಹೇಳಿದ ಮಹಾರಾಜರವರೂ ಮತ್ತು ಅವರ ಉತ್ತರಾಧಿಕಾರಿಗಳೂ ಮುಂದೆ ಹೇಳುವ ಕರಾರುಗಳಂತೆ ನಡೆದುಕೊಂಡು ಬರುವವರೆಗೂ ಮೇಲೆ ಹೇಳಿದ ರಾಜ್ಯಸ್ವಾಧೀನಕ್ಕೆ ಅರ್ಹತೆಯನ್ನು ಪಡೆದಿರತಕ್ಕುದು.

೩. ಮೇಲೆ ಕಂಡ ರಾಜ್ಯಕ್ಕೆ ಚಾಮರಾಜೇಂದ್ರ ಒಡೆಯರವರ ಸಂತತಿಯವರು—ಎಂದರೆ, ಔರಸ ಪುತ್ರರಾಗಲಿ ಅವರ ಕುಲಾಚಾರದಂತೆ ಸ್ವೀಕೃತ ಪುತ್ರರಾಗಲಿ ಹಕ್ಕುದಾರರಾಗಿರುತ್ತಾರೆ. ಆದರೆ, ಆಳುವುದಕ್ಕೆ ಶುದ್ಧಾಂಗವಾಗಿ ಯೋಗ್ಯತೆಯಿಲ್ಲದಿದ್ದರೆ ಅಂಥವರಿಗೆ ಹಕ್ಕು ಇರುವುದಿಲ್ಲ. ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರು ಒಪ್ಪಿದ ಹೊರತು ಯಾವ ಹಕ್ಕೂ ನಿರ್ಣಯವಾಗುವುದಿಲ್ಲ. ಮೇಲ್ಕಂಡ ಚಾಮರಾಜೇಂದ್ರ ಒಡೆಯರವರಿಗೆ ಔರಸ ಪುತ್ರರಾಗಲಿ ಸ್ವೀಕೃತ ಪುತ್ರರಾಗಲಿ ಇಲ್ಲದ ಪಕ್ಷಕ್ಕೆ ಅವರಿಗೆ ಸೇರಿದ ರಾಜಸಂತತಿಯಿಂದ ಹಕ್ಕುದಾರರನ್ನು ಗೊತ್ತುಮಾಡತಕ್ಕುದು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರ ಅಧಿಕಾರದಲ್ಲಿರುತ್ತದೆ.

ನೆರವೇರಿಸಲು ಮದರಾಸು ಗವರ್ನರವರಾದ ಆಡಂ ಸಾಹೇಬರು ಇಂಡಿಯಾ ದೇಶದ ವೈಸ್ರಾಯಿ ಮತ್ತು ಗವರ್ನರ್ ಜನರಲ್ ಅವರ ಪ್ರತಿನಿಧಿಯಾಗಿ ರಾಜಧಾನಿಗೆ ದಯೆಮಾಡಿಸಿದರು. ಪಟ್ಟಾಭಿಷೇಕ ದಿನದ ಪ್ರಾತಃಕಾಲ ಬಕ್ಷಿ ಬಸಪ್ಪಾಜಿ ಅರಸಿನವರೇ ಮುಂತಾದ ಸೇನಾಪತಿಗಳೆಲ್ಲರೂ ಸೂರ್ಯೋದಯಕ್ಕೆ ಮುಂಚಿತವಾಗಿ ತಮ್ಮ ತಮ್ಮ ಸೈನ್ಯಗಳನ್ನೆಲ್ಲ ಸಿದ್ಧಪಡಿಸಿಕೊಂಡು ಅರಮನೆಯ ಮುಂದುಗಡೆ ಬಂದು ನಿಂತರು. ಪ್ರಾತಃಕಾಲ ಏಳು ಗಂಟೆಗೆ ಸರಿಯಾಗಿ ಮದರಾಸು ಗವರ್ನರವರು ಸಪರಿವಾರವಾಗಿ ಅರಮನೆಗೆ ದಯೆಮಾಡಿಸಿ, ಶ್ರೀಚಾಮರಾಜೇಂದ್ರ ಒಡೆಯರವರಿಗೆ ರಾಜ್ಯವನ್ನು ಒಪ್ಪಿಸುವುದಕ್ಕೋಸ್ಕರ ಸಂಸ್ಥಾನದ ಮಹಾಜನ ಸಭೆಯನ್ನು ಕೂಡಿಸಿದರು. ಆ ಸಭಾಭವನದ ಮಧ್ಯದಲ್ಲಿ ವಿಸ್ತಾರವಾಗಿಯೂ ಎತ್ತರವಾಗಿಯೂ ಇರುವಂತೆ ಪೀಠವನ್ನು ಕಲ್ಪಿಸಿದ್ದರು. ಅದರ ಮೇಲೆ ಮಧ್ಯದಲ್ಲಿ ಗವರ್ನರವರೂ ಅವರ ಬಲಗಡೆಯಲ್ಲಿ ಶ್ರೀಮನ್ಮಹಾರಾಜರವರೂ ಗವರ್ನರವರ ಎಡಗಡೆಯಲ್ಲಿ ಛೀಫ್ ಕಮಿಷನರವರೂ ದಿವ್ಯಾಸನಾಸೀನರಾದರು. ಬ್ರಿಟಿಷ್ ಕಮ್ಯಾಂಡರ್ ಇನ್ ಛೀಫ್ ಅವರೂ, ಸಿವಿಲ್

೪. ಮಹಾರಾಜ ಚಾಮರಾಜೇಂದ್ರ ಒಡೆಯರವರೂ ಅವರ ಉತ್ತರಾಧಿಕಾರಿಗಳೂ ಸಹ ಇನ್ನು ಮುಂದೆ ಮೈಸೂರು ಮಹಾರಾಜರೆಂದು ಕರೆಯಲ್ಪಡತಕ್ಕದು. ಇವರುಗಳು ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ರಾಜ್ಯಗಳಿಗೆ ರಾಣಿಯವರಾಗಿಯೂ ಹಿಂದೂಸ್ಥಾನದ ಚಕ್ರವರ್ತಿನಿಯವರಾಗಿಯೂ ಇರುವ ಮಹಾರಾಜ್ಞಿಯವರಿಗೂ ಅವರ ಹಕ್ಕುದಾರರಿಗೂ ಸಹ ಯಾವಾಗಲೂ ವಿಧೇಯರಾಗಿಯೂ ನಂಬಿಕೆಗೆ ಪಾತ್ರರಾಗಿಯೂ ಇರತಕ್ಕದು; ಅಂತಹ ವಿಧೇಯತೆಯ ಸಂಬಂಧದಿಂದ ಅವರು ಕೇಳಿದ ಸಹಾಯವನ್ನೆಲ್ಲ ಮಾಡುತ್ತಿರಬೇಕು.

೫. ಬ್ರಿಟಿಷ್ ಸರಕಾರದವರು, ಮೇಲೆ ಹೇಳಿದ ರಾಜ್ಯಕ್ಕೆ ಹೊರಗಿನಿಂದ ಶತ್ರುಬಾಧೆಯಿಲ್ಲದಿರುವಂತೆ ಕಾಪಾಡುವುದಕ್ಕೂ, ಸಮಯ ಬಂದಾಗ ಇಂಗ್ಲಿಷ್ ಸೈನ್ಯಕ್ಕೆ ಸಹಾಯ ಮಾಡುವುದಕ್ಕಾಗಿ ಸೈನ್ಯಗಳನ್ನು ಇಟ್ಟುಕೊಳ್ಳಬೇಕಾದ ತೊಂದರೆಯನ್ನು ಮೈಸೂರು ಮಹಾರಾಜರಿಗೆ ತಪ್ಪಿಸುವುದಕ್ಕೂ ಒಪ್ಪಿಕೊಂಡಿರುತ್ತಾರೆ. ಇದಕ್ಕಾಗಿ ೧೮೮೧ನೆಯ ಸಂವತ್ಸರದ ಮಾರ್ಚಿ ತಾರೀಖು ೨೫ರ ಮೊದಲುಗೊಂಡು ಮೇಲೆ ಹೇಳಿದ ರಾಜ್ಯದ ಉತ್ಪತ್ತಿಯಿಂದ ಬ್ರಿಟಿಷ್ ಸರಕಾರಕ್ಕೆ, ವರುಷವೊಂದಕ್ಕೆ ಎರಡು ಕಂತುಗಳಾಗಿ, ಮೂವತ್ತೈದು ಲಕ್ಷ ಗವರ್ನಮೆಂಟ್ ರೂಪಾಯಿಗಳನ್ನು ಕೊಡಬೇಕು.

೬. ಮಹಾರಾಜರು ಮೈಸೂರು ದೇಶವನ್ನು ಸ್ವಾಧೀನಕ್ಕೆ ತೆಗೆದುಕೊಂಡ ತಾರೀಖು ಮೊದಲುಗೊಂಡು ಶ್ರೀರಂಗಪಟ್ಟಣದಲ್ಲಿ ಬ್ರಿಟಿಷ್ ಅಧಿಕಾರವು ಬೈದಾಗತಕ್ಕದು. ಮತ್ತು ಮಹಾರಾಜರು ಇತರ ಭಾಗಗಳನ್ನು ಯಾವ ಕರಾರುಗಳಿಗೆ ಒಳಪಟ್ಟು ನಡೆಯಿರುವರೋ ಅದೇ ಕರಾರಿನಿಂದ ಆ ದ್ವೀಪವನ್ನೂ ಆಳತಕ್ಕದು.

೭. ಮೈಸೂರು ಮಹಾರಾಜರವರು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರ ಮಂಜೂರಾತಿಯಿಲ್ಲದೆ ಹೊಸದಾಗಿ ಕೋಟೆ ಮುಂತಾದುವನ್ನು ಕಟ್ಟಕೂಡದು. ತಮ್ಮ ರಾಜ್ಯದಲ್ಲಿರುವ ಹಳೆಯ ಕೋಟೆ ಕೊತ್ತಳಗಳನ್ನು ರಿಪೇರಿ ಮಾಡಿಸಲೂ ಕೂಡದು.

೮. ಮೈಸೂರು ಮಹಾರಾಜರು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರ ಸಮ್ಮತಿಯಿಲ್ಲದೆ ತಮ್ಮ ರಾಜ್ಯದೊಳಕ್ಕೆ ಆಯುಧಗಳನ್ನಾಗಲಿ ಮದ್ದು ಗುಂಡುಗಳನ್ನಾಗಲಿ

ಮತ್ತು ಮಿಲಿಟೆರಿ ಅಧಿಕಾರಿಗಳೂ ಛೀಫ್ ಕಮಿಷನರವರ ಎಡಗಡೆಯಲ್ಲಿಯೂ, ಮೈಸೂರು ರಾಜಬಂಧುಗಳೂ ಅಧಿಕಾರಿಗಳೂ ದೇಶೀಯ ದೊಡ್ಡಮನುಷ್ಯರೂ ಮಹಾರಾಜರವರ ಬಲಗಡೆಯಲ್ಲಿಯೂ ಕುಳಿತರು.

ಮದರಾಸು ಗವರ್ನರವರು ಮಹಾರಾಜರವರಿಗೆ ಮೈಸೂರು ರಾಜ್ಯಭಾರವನ್ನು ಒಪ್ಪಿಸತಕ್ಕ ಮಹೋತ್ಸವ ಕಾಲದಲ್ಲಿ ವೈಸ್ರಾಯಿ ಮತ್ತು ಗವರ್ನರ್ ಜನರಲ್ ಅವರಿಗೆ ಪ್ರತಿನಿಧಿಯಾಗಿ ತಾವು ಬಂದಿರುವಂತೆ ತಿಳಿಸಿ, ಮದರಾಸು ಗವರ್ನ್ಮೆಂಟಿನ ಪೊಲಿಟಿಕಲ್ ಇಲಾಖಾ ಸೆಕ್ರಿಟೆರಿಯವರಿಗೆ ಈ ಮುಂದೆ ಹೇಳುವ ಪ್ರಕಟನ ಪತ್ರಿಕೆಯನ್ನು ಓದುವಂತೆ ಆಜ್ಞೆ ಮಾಡಿದರು.—

" ಇಂಡಿಯಾ ದೇಶದ ವೈಸ್ರಾಯಿ ಮತ್ತು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರು ೧೮೬೮ನೆಯ ಇಸವಿಯಲ್ಲಿ ಮೈಸೂರು ದೇಶದ ಪ್ರಮುಖರಿಗೂ ಪ್ರಜೆಗಳಿಗೂ ಪ್ರಸಿದ್ಧಿಪಡಿಸಿದ ಇಸ್ತಿಹಾರಿನಲ್ಲಿ, ಗತಿಸಿದ ಮಹಾರಾಜ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರ ಸ್ವೀಕೃತ ಪುತ್ರರಾದ ಶ್ರೀಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರು ಸದರಿ

ಸೈನ್ಯಕ್ಕೆ ಬೇಕಾದ ಸಾಮಗ್ರಿಗಳನ್ನಾಗಲಿ ತರಿಸಕೂಡದು, ತರಿಸತಕ್ಕವರಿಗೆ ಅಪ್ಪಣೆಯನ್ನು ಕೊಡಲೂ ಕೂಡದು. ಮತ್ತು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರು ಹೇಳಿದಾಗ ತಮ್ಮ ರಾಜ್ಯದ ಯಾವಭಾಗದಲ್ಲಾದರೂ ಆಯುಧ, ಮದ್ದು, ಗುಂಡು ಮುಂತಾದುವುಗಳು ತಯಾರಾಗುತ್ತಿದ್ದರೆ ಅವುಗಳನ್ನು ನಿಲ್ಲಿಸಬೇಕು.

೯. ತಮ್ಮ ರಾಜ್ಯದಲ್ಲಿ ಯಾವ ಸ್ಥಳದಲ್ಲಾಗಲಿ ಇಂಗ್ಲಿಷ್ ಕಂಟೋನ್ಮೆಂಟುಗಳನ್ನು ಇಡುವುದು ಅಗತ್ಯವೆಂದು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರಿಗೆ ತೋರಿದಾಗ, ಕಂಟೋನ್ಮೆಂಟುಗಳನ್ನು ಕಟ್ಟುವುದಕ್ಕೆ ಮೈಸೂರು ಮಹಾರಾಜರವರು ಆಕ್ಷೇಪಣೆ ಮಾಡಬಾರದು; ಮತ್ತು ಹಾಗೆ ಕಂಟೋನ್ಮೆಂಟಿಗಾಗಿ ಬೇಕಾಗುವ ಸ್ಥಳವನ್ನು ಬರೀದಿಯಿಲ್ಲದೆ ಕೊಡಬೇಕಲ್ಲದೆ, ಆ ಸ್ಥಳದಲ್ಲಿ ತಮ್ಮ ಆಡಳಿತವನ್ನು ನಿಲ್ಲಿಸಬೇಕು. ಅಂತಹ ಕಂಟೋನ್ಮೆಂಟಿಗೆ ಸೇರಿರುವ ತಮ್ಮ ಸ್ಥಳದಲ್ಲಿ ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರು ಅಗತ್ಯವೆಂದು ಹೇಳುವ ಆರೋಗ್ಯಕರವಾದ ನಿಬಂಧನೆಗಳನ್ನು ಜಾರಿಯಲ್ಲಿ ತರಬೇಕು. ಅಂತಹ ಕಂಟೋನ್ಮೆಂಟಿನಲ್ಲಿರುವ ಸೈನ್ಯಕ್ಕಾಗಿ ಬೇಕಾಗುವ ಎಲ್ಲ ಸಾಮಾನುಗಳ ವಿಷಯದಲ್ಲಿ ಎಲ್ಲ ಅನುಕೂಲ್ಯಗಳನ್ನು ಮಾಡಿಕೊಡಬೇಕು. ಮತ್ತು ಆ ಉದ್ದೇಶದಿಂದ ತರಿಸತಕ್ಕಂತಹ ಅಥವಾ, ಕೊಂಡುಕೊಂಡ್ದ ಸಾಮಾನುಗಳ ಮೇಲೆ ಬ್ರಿಟಿಷ್ ಸರಕಾರದ ಸಮ್ಮತಿಯಿಲ್ಲದೆ ಯಾವ ವಿಧವಾದ ತೆರಿಗೆಯನ್ನೂ ಅಥವಾ, ಸುಂಕವನ್ನೂ ಹಾಕಕೂಡದು.

೧೦. ಮೈಸೂರು ಸಂಸ್ಥಾನದಲ್ಲಿ ರಾಜ್ಯವನ್ನು ತಹಬಂದಿಯಲ್ಲಿಟ್ಟುಕೊಂಡಿರುವುದಕ್ಕೂ, ಮಹಾರಾಜರ ಮರ್ಯಾದಾರ್ಥವಾಗಿಯೂ, ಮತ್ತು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರು ಸಮ್ಮತಿಸುವ ಇತರ ಉಪಯೋಗಕ್ಕಾಗಿಯೂ ಇಡುವ ಮಿಲಿಟೆರಿ ಸೈನ್ಯವು, ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರು ಗೊತ್ತುಮಾಡುವುದಕ್ಕಿಂತಲೂ ಹೆಚ್ಚಾಗಿರಕೂಡದು. ಸೈನ್ಯದ ಜವಾನರ ಹೆಚ್ಚಿಸುವುದು, ಕವಾಯಿತು—ಇವೇ ಮುಂತಾದುವುಗಳ ವಿಷಯದಲ್ಲಿ ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರು ಹೇಳುವ ರೀತಿಯಲ್ಲಿ ನಡೆಯಿಸತಕ್ಕದು.

ಮಹಾರಾಜ ಕೃಷ್ಣರಾಜ ಒಡೆಯರ್ ಬಹದ್ದೂರ್ರವರ ಸ್ಥಾನವನ್ನು ಹೊಂದಿದವರೆಂದು ಇಂಡಿಯಾಗವರ್ನ್ಮೆಂಟಿನವರಿಂದ ಅಂಗೀಕರಿಸಲ್ಪಟ್ಟುದಾಗಿ ಪ್ರಕಟಿಸಿದುದಲ್ಲದೆ, ಮಹಾರಾಜರಿಗೆ ಹದಿನೆಂಟು ವರುಷದ ವಯಸ್ಸು ಬಂದನಂತರ ಆಗ್ಗೆ ನಿಷ್ಕರ್ಷೆ ಮಾಡುವ ನಿಬಂಧನೆಗಳನ್ನನುಸರಿಸಿ ರಾಜ್ಯದ ಆಳಿಕೆಯು ಅವರಿಗೆ ಒಪ್ಪಿಸಲ್ಪಡುವುದೆಂದು ತಿಳಿಸಿರುತ್ತಾರಷ್ಟೆ. ಆದುದರಿಂದ, ಈಗ ಘನತೆಯನ್ನು ಹೊಂದಿದ ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ದೇಶಗಳ ರಾಜ್ಞಿಯವರೂ ಇಂಡಿಯಾ ದೇಶದ ಚಕ್ರವರ್ತಿನಿಯವರೂ ಆದ ವಿಕ್ಟೋರಿಯಾಯವರ ಆಜ್ಞಾನುಸಾರವಾಗಿ ಇಂಡಿಯಾ ದೇಶದ ವೈಸ್ರಾಯಿ ಮತ್ತು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರು ಮೈಸೂರು ದೇಶದ ಪ್ರಮುಖರಿಗೂ ಪ್ರಜೆಗಳಿಗೂ ತಿಳಿಯಪಡಿಸುವುದೇನೆಂದರೆ: ಮೈಸೂರು ಸೀಮೆಯನ್ನು ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ರವರ ಸ್ವಾಧೀನಮಾಡಿ ಆ ರಾಜ್ಯದ ಆಳಿಕೆಯನ್ನು ಅವರಿಗೆ ಒಪ್ಪಿಸಿರುತ್ತಾರೆ. ಇಂದಿಯಾ ದೇಶದ ವೈಸ್ರಾಯಿ ಮತ್ತು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರು ಮೈಸೂರು ದೇಶದ ಪ್ರಮುಖ

---

೧೧. ಮೈಸೂರು ಮಹಾರಾಜರವರು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರ ಅನುಮತಿಯಿಂದ ಅವರ ಮೂಲಕವಾಗಿ ಹೊರತು ರಾಜ್ಯದ ಇತರ ಆಡಳಿತದ ವಿಷಯದಲ್ಲಿ ಪ್ರವರ್ತಿಸಕೂಡದು. ಅಥವಾ, ಇತರ ರಾಜ್ಯದ ರಾಜರೊಡನೆಯಾಗಲಿ, ಅಥವಾ ಅಧಿಕಾರಿಗಳೊಡನೆಯಾಗಲಿ, ಕಾಗದಪತ್ರಗಳನ್ನು ನಡೆಯಿಸಕೂಡದು.

೧೨. ಮೈಸೂರು ಮಹಾರಾಜರವರು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರ ಅನುಮತಿಯಿಲ್ಲದೆ ಇಂಡಿಯಾ ದೇಶದವನಲ್ಲದ ಯಾವ ಮನುಷ್ಯನನ್ನೂ ತಮ್ಮ ನೌಕರಿಯಲ್ಲಿಟ್ಟುಕೊಳ್ಳಕೂಡದು, ಹಾಗೆ ನೌಕರಿಯಲ್ಲಿರುವ ಯಾವ ಮನುಷ್ಯನನ್ನಾದರೂ, ಅವರು ಹೇಳಿದ ಪಕ್ಷದಲ್ಲಿ, ಕೆಲಸದಿಂದ ನಿವೃತ್ತಿ ಮಾಡಬೇಕು.

೧೩. ಬ್ರಿಟಿಷ್ ಇಂಡಿಯಾ ಗವರ್ನ್ಮೆಂಟಿನವರ ನಾಣ್ಯವು ಚಲಾವಣೆಯಲ್ಲಿರುವವರೆಗೂ ಮೈಸೂರು ದೇಶದಲ್ಲಿಯೂ ಅದೇ ನಾಣ್ಯವು ಚಲಾವಣೆಯಲ್ಲಿರತಕ್ಕುದು. ಬ್ರಿಟಿಷ್ ಇಂಡಿಯಾದ ನಾಣ್ಯಗಳ ಕಾಯಿದೆ ಕಾನೂನುಗಳೆಲ್ಲ ಮೇಲೆಹೇಳಿದ ದೇಶದಲ್ಲಿಯೂ ಜಾರಿಯಲ್ಲಿರತಕ್ಕುದು. ಬಹುಕಾಲದಿಂದ ನಿಲ್ಲಿಸಲ್ಪಟ್ಟಿರುವ ಮೈಸೂರು ದೇಶದ ನಾಣ್ಯವನ್ನು ಪುನಃ ಜಾರಿಯಲ್ಲಿ ತರಕೂಡದು.

೧೪. ಮೈಸೂರು ಮಹಾರಾಜರವರು ತಮ್ಮ ರಾಜ್ಯದಲ್ಲಿ ಟೆಲಿಗ್ರಾಫ್ ಲೈನ್ ಹಾಕುವದಕ್ಕೋಸ್ಕರ ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರು ಅಪೇಕ್ಷಿಸುವ ಸ್ಥಳವನ್ನು ಉಚಿತಾರ್ಥವಾಗಿ ಕೊಡುವುದಲ್ಲದೆ, ಅದರ ಕಾಮಗಾರಿಯ ಅನುಕೂಲಕ್ಕಾಗಿ ತಮ್ಮ ಸರ್ವಪ್ರಯತ್ನದಿಂದಲೂ ಸಹಾಯಮಾಡಬೇಕು. ಮತ್ತು ಮೇಲೆ ಹೇಳಿದ ರಾಜ್ಯದಲ್ಲಿರುವ ಎಲ್ಲ ಟೆಲಿಗ್ರಾಫ್ ಲೈನುಗಳು ಬ್ರಿಟಿಷ್ ಸರಕಾರದಿಂದ ಕಟ್ಟಿಸಲ್ಪಟ್ಟದ್ದಾಗಿರಲಿ, ಅಥವಾ ಮೈಸೂರು ರಾಜ್ಯದ ಹಣದಿಂದ ಕಟ್ಟಿಸಲ್ಪಟ್ಟದ್ದಾಗಿರಲಿ, ಬ್ರಿಟಿಷ್ ಟೆಲಿಗ್ರಾಫಿಗೆ ಸೇರತಕ್ಕುದು; ಮತ್ತು ಬ್ರಿಟಿಷ್ ಟೆಲಿಗ್ರಾಫ್ ಇಲಾಖೆಯಿಂದ ಕೆಲಸ ಮಾಡಲ್ಪಡತಕ್ಕುದು. ಮೈಸೂರು ಮಹಾರಾಜರವರಿಗೂ ಬ್ರಿಟಿಷ್ ಸರಕಾರಕ್ಕೂ ಇದಕ್ಕಾಗಿ ಹೊಸ ಕರಾರು ನಡೆದಿದ್ದ ಪಕ್ಷದಲ್ಲಿ ಮಾತ್ರ ಆ ಲೈನು ಮಹಾರಾಜರವರಿಗೆ ಸೇರತಕ್ಕುದು. ಬ್ರಿಟಿಷ್ ಇಂಡಿಯಾದಲ್ಲಿ ಟೆಲಿಗ್ರಾಫ್ ಸಂಬಂಧವಾಗಿ ಜಾರಿಯಲ್ಲಿರುವ ಎಲ್ಲ ಕಾಯಿದೆ ಕಾನೂನುಗಳೂ ಮೇಲಿನ ಸೀಮೆಯಲ್ಲಿಯೂ ಜಾರಿಯಲ್ಲಿರತಕ್ಕುದು.

ರಿಗೂ ಪ್ರಜೆಗಳಿಗೂ ಮತ್ತು ತಿಳಿಯಪಡಿಸುವುದೇನೆಂದರೆ: ಸದರಿ ಮೈಸೂರು ಸೀಮೆಯಲ್ಲಿ ಬ್ರಿಟಿಷ್ ಗವರ್ನಮೆಂಟಿನವರ ಆಡಳಿತವು ಈ ದಿವಸಕ್ಕೆ ಅಖೈರಾಗಿ ನಿಂತುಹೋಗಿರುತ್ತದೆ.

"ಇಂಡಿಯಾ ದೇಶದ ವೈಸ್ರಾಯಿ ಮತ್ತು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರ ಆಜ್ಞೆಯ ಪ್ರಕಾರ."

ಈ ರೀತಿಯಾಗಿ, ಮೇಲೆ ಹೇಳಿದ ಪ್ರಕಟನೆಯನ್ನು ಓದಿದ ಬಳಿಕ, ಮದರಾಸು ಗವರ್ನರವರು ಮಹಾರಾಜರವರನ್ನು ಕುರಿತು ಭಾಷಿಸಿದುದೇನೆಂದರೆ: "ಮೈಸೂರು ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ರವರೇ, ನಾನು ಇಂಡಿಯಾ ದೇಶದ ಗವರ್ನರ್ ಜನರಲ್ ಅವರಿಗೆ ಪ್ರತಿನಿಧಿಯಾಗಿ ಬಂದು, ಈಗ ತಾನೆ ಓದಿದ ರಾಜಶಾಸನಕ್ಕನುಗುಣವಾಗಿ ಮೈಸೂರು ಸೀಮೆಯ ರಾಜ್ಯಭಾರವನ್ನು ನಿಮಗೆ ಒಪ್ಪಿಸಿರುತ್ತೇನೆ. ಇಂತಹ ಶುಭಸಮಯದಲ್ಲಿ ನನಗುಂಟಾದ ಆನಂದಾತಿಶಯವನ್ನು ತಮಗೆ ತಿಳಿಸಬೇಕಾಗಿದೆ. ಇಂಡಿಯಾ ಚಕ್ರವರ್ತಿನಿಯವರು, ವೈಸ್ರಾಯಿಯವರು

---

೧೫. ಬ್ರಿಟಿಷ್ ಸರಕಾರದವರು ತಾವೇಯಾಗಲಿ ಅಥವಾ ಇತರರಿಂದಾಗಲಿ ಮೇಲೆ ಹೇಳಿದ ಸೀಮೆಯಲ್ಲಿ ರೈಲು ಹಾಕುವುದಾಗಿ ಅಪೇಕ್ಷಿಸಿದರೆ, ಮೈಸೂರು ಮಹಾರಾಜರವರು ಅದಕ್ಕೆ ಬೇಕಾಗುವ ಸ್ಥಳವನ್ನು ಉಚಿತಾರ್ಥವಾಗಿ ಕೊಡುವುದಲ್ಲದೆ, ಆ ಸ್ಥಳದ ಹಕ್ಕನ್ನೆಲ್ಲ ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರಿಗೆ ಕೊಡತಕ್ಕುದು. ಈ ಸೀಮೆಯಲ್ಲಿ ಇಳಿಸದೆ ಆ ರೈಲಿನಲ್ಲಿ ತೆಗೆದುಕೊಂಡು ಹೋಗುವ ಸಾಮಾನುಗಳ ಮೇಲೆ ತೆರಿಗೆ ಮುಂತಾದುವುಗಳನ್ನು ಹಾಕಕೂಡದು.

೧೬. ಬ್ರಿಟಿಷ್ ಇಂಡಿಯಾದಲ್ಲಿ ಅಪರಾಧಮಾಡಿ, ತಮ್ಮ ಸೀಮೆಯಲ್ಲಿರತಕ್ಕ ಯಾವ ಮನುಷ್ಯನನ್ನಾದರೂ ಮೈಸೂರಲ್ಲಿರುವ ಬ್ರಿಟಿಷ್ ರೆಸಿಡೆಂಟರಾಗಲಿ ಅಥವಾ ಬ್ರಿಟಿಷರು ಈ ವಿಷಯದಲ್ಲಿ ಅಧಿಕಾರ ಕೊಟ್ಟಿರುವ ಯಾವ ಅಧಿಕಾರಿಯಾಗಲಿ ಹೇಳಿದಕೂಡಲೆ ಆ ಮನುಷ್ಯನನ್ನು ಹಿಡಿದು ಬ್ರಿಟಿಷ್ ಸರಕಾರಕ್ಕೆ ಒಪ್ಪಿಸಬೇಕಲ್ಲದೆ, ಅವನ ಮೊಕದ್ದಮೆಯ ವಿಚಾರದಲ್ಲಿ ಬೇಕಾದ ಸಾಕ್ಷಿಯವರನ್ನೂ ಹಾಜರ್ಮಾಡಬೇಕು.

೧೭. ಮೇಲೆಹೇಳಿದ ರಾಜ್ಯದಲ್ಲಿ ಯೂರೋಪಿಯನರಾದ ಇಂಗ್ಲಿಷ್ ಪ್ರಜೆಗಳ ಕ್ರಿಮಿನಲ್ ವಿಚಾರಣೆ ಮಾಡುವ ಸರ್ವಾಧಿಕಾರವನ್ನು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರಿಗೆ ಬಿಟ್ಟು ಕೊಡಬೇಕು. ಮತ್ತು ಮೈಸೂರು ಮಹಾರಾಜರವರು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರಿಂದ ಆಗಾಗ ಕೊಡಲ್ಪಡುವ ಅಧಿಕಾರಕ್ಕೊಳಪಟ್ಟು ಯೂರೋಪಿಯನರಾದ ಇಂಗ್ಲಿಷ್ ಪ್ರಜೆಗಳ ವಿಷಯದಲ್ಲಿ ಅಂತಹ ನ್ಯಾಯವಿಚಾರಣೆಯನ್ನು ನಡೆಯಿಸತಕ್ಕುದು.

೧೮. ಉಪ್ಪು, ಅಫೀಮು ತಯಾರ್ಮಾಡುವುದನ್ನೂ, ಗಸಗಸೆ ಬೆಳೆಯುವುದನ್ನೂ, ಮೈಸೂರಿನಲ್ಲಿ ಕಡಿಮೆ ಮಾಡುವ ವಿಷಯದಲ್ಲಾಗಲಿ ಅಥವಾ ನಿಲ್ಲಿಸುವ ವಿಷಯದಲ್ಲಾಗಲಿ ಮೈಸೂರು ಮಹಾರಾಜರವರು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರ ಇಷ್ಟವನ್ನು ನೆರವೇರಿಸಬೇಕು. ಮತ್ತು ಉಪ್ಪು, ಅಫೀಮು, ಗಸಗಸೆ ಇವುಗಳನ್ನು ಹೊರಕ್ಕೆ ಕಳುಹಿಸುವುದರಲ್ಲಾಗಲಿ ಅಥವಾ ತಮ್ಮ ಸೀಮೆಯೊಳಕ್ಕೆ ತರಿಸಿಕೊಳ್ಳುವ ವಿಷಯದಲ್ಲಾಗಲಿ ಅವರು ಯೋಗ್ಯವೆಂದು ಹೇಳುವ ಎಲ್ಲ ಕಾನೂನುಗಳನ್ನೂ ಜಾರಿಯಲ್ಲಿ ತರತಕ್ಕುದು.

ಮತ್ತು ಈ ದಿನ ಇಲ್ಲಿಗೆ ದಯಮಾಡಿಸಿರುವವರು—ಇವರೆಲ್ಲರ ಪಕ್ಷವಾಗಿ ನಾನು ತಿಳಿಸಬೇಕಾದುದೇನೆಂದರೆ: ನೀವು ಉತ್ತರೋತ್ತರ ಶ್ರೇಯೋಭಿವೃದ್ಧಿಯುಳ್ಳವರಾಗಿ, ಶಾಂತಚಿತ್ತರೂ ಸುಖಿಗಳೂ ಸಂತೃಪ್ತರೂ ಆದ ಪ್ರಜೆಗಳನ್ನು ದೀರ್ಘಕಾಲ ಪರಿಪಾಲನೆ ಮಾಡುವಂತೆ ಭಗವಂತನು ಕರುಣಿಸಲೆಂದು ಬಯಸುತ್ತೇನೆ. ಇಂಡಿಯಾ ಚಕ್ರವರ್ತಿನಿಯವರು ೧೮೫೮ನೆಯ ಇಸವಿಯಲ್ಲಿ ಹಿಂದೂಸ್ಥಾನದ ರಾಜರಲ್ಲಿಯೂ ರಾಜಪುತ್ರರಲ್ಲಿಯೂ ಪ್ರಜೆಗಳಲ್ಲಿಯೂ ಪ್ರಕಟಿಸಿದ ಪ್ರಸಿದ್ಧಿಪತ್ರಿಕೆಯಲ್ಲಿ ತಾವು ಅಪ್ಪಣೆಕೊಡಿಸಿರುವ ಮಾತುಗಳನ್ನು ಸರ್ವದಾ ಸ್ಮರಿಸಿಕೊಂಡು, ಆ ಪ್ರಕಟನೆಯಲ್ಲಿರುವ ಯಾವ ಮಾತಿಗೂ ಸ್ವಲ್ಪವೂ ತಪ್ಪದೆ ಅದರಂತೆಯೇ ನಡೆದುಕೊಳ್ಳುತ್ತಾರೆಂಬ ಅವರ ಉದಾರಭಾವಕ್ಕೆ ಈ ದಿನ ನಾವು ನಡೆಯಿಸುತ್ತಿರುವ ಮಹೋತ್ಸವವೇ ಪ್ರತ್ಯಕ್ಷ ದೃಷ್ಟಾಂತವಾಗಿದೆ. ಶ್ರೀಮನ್ಮಹಾರಾಜ್ಞೀ ಸರಕಾರದವರು ಈಗ ತಮಗೆ ಒಪ್ಪಿಸಿರುವ ರಾಜ್ಯಭಾರದ ಗೌರವವೂ ಜವಾಬ್ದಾರಿಯೂ ತಮಗೂ ಇಂಡಿಯಾ ಚಕ್ರವರ್ತಿನಿಯವರಿಗೂ ವೈಸ್ರಾಯಿಯವರಿಗೂ ತಿಳಿದ ವಿಷಯಗಳೇ ಆಗಿವೆ. ಆದರೆ ನೀವು

---

೧೯. ಮಹಾರಾಜ ಚಾಮರಾಜೇಂದ್ರ ಒಡೆಯರವರಿಗೆ ರಾಜ್ಯವನ್ನು ಒಪ್ಪಿಸುವಾಗ, ಸದರಿ ಸೀಮೆಯಲ್ಲಿ ಜಾರಿಯಲ್ಲಿದ್ದ ಎಲ್ಲ ಕಾಯಿದೆ ಕಾನೂನುಗಳನ್ನು ಜಾರಿಯಲ್ಲಿಟ್ಟು ಅದರಂತೆಯೇ ಕೆಲಸ ನಡೆಸತಕ್ಕದ್ದು. ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರ ಸಮ್ಮತಿಯಿಲ್ಲದೆ ಮೈಸೂರು ಮಹಾರಾಜರವರು ಆ ಕಾಯಿದೆ ಕಾನೂನುಗಳನ್ನು ವಜಾ ಮಾಡಕೂಡದು; ಅಥವಾ ಅದಕ್ಕೆ ವಿರುದ್ಧವಾದ ಯಾವ ಕಾಯಿದೆಯನ್ನೂ ಜಾರಿಯಲ್ಲಿ ತರಕೂಡದು.

೨೦. ಮಹಾರಾಜ ಚಾಮರಾಜೇಂದ್ರ ಒಡೆಯರವರಿಗೆ ರಾಜ್ಯವನ್ನು ಕೊಟ್ಟಾಗ ಸದರಿ ಸೀಮೆಯಲ್ಲಿ ಜಾರಿಯಲ್ಲಿದ್ದ ರಾಜ್ಯದಾಡಳಿತದಲ್ಲಿ ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರ ಸಮ್ಮತಿಯಿಲ್ಲದೆ ಯಾವ ದೊಡ್ಡ ಬದಲಾವಣೆಯನ್ನೂ ಮಾಡಕೂಡದು.

೨೧. ಮೇಲ್ಕಂಡ ಸೀಮೆಯಲ್ಲಿ ಬ್ರಿಟಿಷರ ಆಳಿಕೆಯಲ್ಲಿ ಮಾಡಿದ ರೆವಿನ್ಯೂ ಸೆಟಲ್ಮೆಂಟುಗಳನ್ನೂ, ಕೊಡಲ್ಪಟ್ಟಿದ್ದ ಎಲ್ಲ ಸನ್ನದುಗಳನ್ನೂ, ಸಮರ್ಥರಾದ ಲಾ ಕೋರ್ಟಿನಿಂದಾಗಲಿ, ಅಥವಾ ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರ ಅನುಮತಿಯಿಂದಾಗಲಿ ವಜಾಮಾಡಲ್ಪಟ್ಟರೆ ಅಥವಾ, ಬದಲಾಯಿಸಲ್ಪಟ್ಟರೆ ಹೊರತು ಇಲ್ಲವಾದರೆ, ೧೮೮೧ನೆಯ ಇಸವಿ ಮಾರ್ಚಿ ತಾರೀಖು ೨೫ನೆಯ ದಿವಸ ಜಾರಿಯಲ್ಲಿದ್ದಂತೆ ಆಯಾ ಷರತ್ತಿಗೆ ಸರಿಯಾಗಿ ನಡೆಯಿಸಿಕೊಂಡು ಬರತಕ್ಕದ್ದು.

೨೨. ಮೈಸೂರು ಮಹಾರಾಜರವರು ತಮ್ಮ ಹಣದ ಆಡಳಿತದ ಬಗ್ಗೆ ರೆವಿನ್ಯೂ ವಸೂಲ್ಮಾಡುವುದು, ತೆರಿಗೆ ಹಾಕುವುದು, ನ್ಯಾಯವಿಚಾರಣೆ, ವ್ಯಾಪಾರಾಭಿವೃದ್ಧಿ, ಕೃಷಿ, ಕೈಗಾರಿಕೆ ಮುಂತಾದುವುಗಳ ಪ್ರೋತ್ಸಾಹ ಮತ್ತು ಮಹಾರಾಜರವರ ಉತ್ತರೋತ್ತರ ಶ್ರೇಯೋಭಿವೃದ್ಧಿ, ಅವರ ಪ್ರಜೆಗಳ ಸೌಖ್ಯ, ಅವರಿಗೂ ಬ್ರಿಟಿಷ್ ಸರಕಾರಕ್ಕೂ ಇರುವ ಸಂಬಂಧ, ಇವುಗಳ ವಿಷಯವಾಗಿ ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರು ಹೇಳುವ ಬುದ್ಧಿವಾದಗಳಂತೆ ನಡೆಯಬೇಕು.

೨೩. ಮೈಸೂರು ಮಹಾರಾಜರವರು ಮೇಲೆ ಹೇಳಿದ ಷರತ್ತುಗಳಿಗೆ ತಪ್ಪಿದರೂ ಅಥವಾ, ಅದರಂತೆ ನಡೆಯದಿದ್ದರೂ ಅವರ ಸೀಮೆಯನ್ನು ವಾಪಸು ತೆಗೆದುಕೊಂಡು

ನಿಮ್ಮ ಮೇಲೆ ಬೀಳುವ ಮಹತ್ಕರ್ತವ್ಯಗಳ ಭಾರವನ್ನು ವಹಿಸುವುದಕ್ಕೆ ತಕ್ಕ ಸಾಮರ್ಥ್ಯವನ್ನು ಪಡೆಯಲುದ್ಯುಕ್ತರಾಗಿರುವಿರಲ್ಲದೆ, ಮೈಸೂರು ಛೀಫ್ ಕಮಿಷನರಾಗಿರುವ ಜೆ. ಡಿ. ಗಾರ್ಡನ್ ಅವರು ತೋರಿಸಿದ ಪ್ರಕಾರ ಸಕಲ ರಾಜನೀತಿಗಳನ್ನೂ ತಿಳಿದಿರುವಿರೆಂಬಂಶವನ್ನು ವೈಸ್ರಾಯಿಯವರೂ ಚಕ್ರವರ್ತಿನಿಯವರೂ ಚೆನ್ನಾಗಿ ಬಲ್ಲರು. ರಾಜನೀತಿ ವಿದ್ಯಾಭ್ಯಾಸದಲ್ಲಿ ನೀವು ತೋರಿಸಿರುವ ಆಸಕ್ತಿಯಿಂದಲೂ ನಿಮ್ಮ ಧೀರೋದಾತ್ತ ಲಕ್ಷಣದಿಂದಲೂ ಸಚ್ಚರಿತ್ರದಿಂದಲೂ ಮುಂದೆ ವಿವೇಕೌದಾರ್ಯ ನಾಗರಿಕತಾದಿ ಗುಣಭರಿತರಾದ ಪ್ರಭುಗಳನ್ನೆನಿಸಿಕೊಳ್ಳುವಿರೆಂಬುದಕ್ಕೆ ಬೇಕಾದ ನಿದರ್ಶನಗಳನ್ನೆಲ್ಲ ತೋರ್ಪಡಿಸಿರುವಿರಿ. ಆದುದರಿಂದ ನಾನು ನಿಮ್ಮ ಸದ್ಗುಣಗಳಲ್ಲಿ ತುಂಬಾ ಭರವಸೆಯುಳ್ಳವನಾಗಿ ನಿಮ್ಮ ಸಂಸ್ಥಾನದ ಅಧಿಕಾರಿಗಳೂ ಪ್ರಜೆಗಳೂ ನಿಮ್ಮಲ್ಲಿ ಕೇವಲ ಮಮತೆಯುಳ್ಳವರೂ ಬ್ರಿಟಿಷ್ ಸರಕಾರದ ವಿಷಯದಲ್ಲಿ ಕೇವಲ ರಾಜಭಕ್ತಿಯುಳ್ಳವರೂ ಆಗಿದ್ದಾರೆಂದು ನಂಬಿ, ಇಂಡಿಯಾ ದೇಶದ ಗವರ್ನರ್ ಜನರಲ್ ಅವರಿಗೆ ಪ್ರತಿನಿಧಿಯಾಗಿ ಬಂದು, ಈ ಸಂಸ್ಥಾನದಲ್ಲಿ ಬ್ರಿಟಿಷ್ ಅಧಿಕಾರವನ್ನು ತಪ್ಪಿಸಿ, ರಾಜ್ಯಭಾರವನ್ನು ನಿಮ್ಮ ವಶಪಡಿಸುವ ರಾಜಶಾಸನವನ್ನು ಒಪ್ಪಿಸಿರುತ್ತೇನೆ. ನಾವುನಾವು ಯಾವ ಮತದವರಾಗಿದ್ದರೂ ನಮ್ಮೆಲ್ಲರನ್ನೂ ಈಕ್ಷಿಸಿ ರಕ್ಷಿಸತಕ್ಕವನಾದ ಭಗವಂತನು ನೀವು ತೊಡಗುವ ಸಕಲ ಕಾರ್ಯಗಳಲ್ಲಿಯೂ ನಿಮಗೆ ಮಾರ್ಗದರ್ಶಿಯಾಗಿದ್ದುಕೊಂಡು ನಾವುಗಳೆಲ್ಲ ಈ ದಿನ ಜರುಗಿಸುವ ಮಹತ್ಕಾರ್ಯವನ್ನು ಸಾಫಲ್ಯಗೊಳಿಸಿ ರಕ್ಷಿಸಬೇಕೆಂಬುದಾಗಿ ಪ್ರಾರ್ಥಿಸುತ್ತೇನೆ.''

ಈ ಭಾಷಣವಾದ ಬಳಿಕ ಗವರ್ನರವರು ಮಹಾರಾಜರವರಿಗೆ ತಖನಾಮೆಯನ್ನು ಕೊಟ್ಟು, ವೈಸ್ರಾಯಿ ಮತ್ತು ಗವರ್ನರ್ ಜನರಲ್ ಅವರು ಕಳುಹಿಸಿದ್ದ ಖಿಲ್ಲತ್ತುಗಳನ್ನು ಒಪ್ಪಿಸಿದರು. ಅವುಗಳನ್ನು ಸ್ವೀಕರಿಸಿದ ಬಳಿಕ, ಶ್ರೀಮನ್ಮಹಾರಾಜ

ಸ್ವತಂತ್ರವಾಗಿ ಆಳುವುದಕ್ಕೂ ಅದೂ, ಮೈಸೂರು ಜನಗಳ ಸತ್ಪಾಲನೆಗೂ, ಸದರಿ ಸೀಮೆಯಲ್ಲಿ ಇಂಗ್ಲಿಷರ ಹಕ್ಕನ್ನು ಸ್ಥಾಪಿಸಿಕೊಳ್ಳುವುದಕ್ಕೂ, ಅಗತ್ಯವಾಗಿ ಕಂಡುಬರುವ ಯಾವ ವಿಧವಾದ ಏರ್ಪಾಡುಗಳನ್ನಾದರೂ ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರು ಮಾಡಬಹುದು.

೨೪. ಬ್ರಿಟಿಷ್ ಸರಕಾರಕ್ಕೂ ಮೈಸೂರು ಸೀಮೆಗೂ ಇರುವ ಸಂಬಂಧವನ್ನು ಸಮರ್ಥಿಸುವುದಕ್ಕಾಗಿ ಇದಕ್ಕೆ ಮೊದಲು ಹುಟ್ಟಿರುವ ಎಲ್ಲ ಕಾಗದಪತ್ರಗಳೂ ಇದರಿಂದ ರದ್ದಾಗಿರುತ್ತವೆ. ಮೇಲೆ ಹೇಳಿದ ಷರತ್ತುಗಳಂತೆ ಮಹಾರಾಜರವರು ನಡೆಯುತ್ತಾರೆಯೋ ಇಲ್ಲವೋ ಎಂದಾಗಲಿ, ಅಥವಾ, ರಾಜ್ಯಕ್ಕೆ ಹಕ್ಕುದಾರರು ಯಾರೆಂದಾಗಲಿ, ಆಳುವುದಕ್ಕೆ ಯಾರು ಯೋಗ್ಯರೆಂದಾಗಲಿ, ವಿವಾದ ಬಂದಾಗ ಆ ವಿಷಯದಲ್ಲಿ ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರು ಮಾಡುವ ತೀರ್ಮಾನವೇ ಕಡೆಯದಾಗಿರುತ್ತದೆ.

ವಿಲಿಯಂ ಕೋಟೆ,
೨ನೆಯ ಮಾರ್ಚಿ, ೧೮೮೧.

ರಿಪ್ಪನ್,
ಇಂಡಿಯಾ ದೇಶದ ವೈಸ್ರಾಯಿ
ಮತ್ತು ಗವರ್ನರ್ ಜನರಲ್.

ರವರು ಅಪ್ಪಣೆಕೊಡಿಸಿದುವೇನೆಂದರೆ : " ಮಹಾಪ್ರಭುಗಳೇ, ಇಂಡಿಯಾ ಚಕ್ರವರ್ತಿನಿಯವರು ನಮ್ಮ ರಾಜಕುಟುಂಬವನ್ನು ಏಕಪ್ರಕಾರವಾದ ಉದಾರತೆಯಿಂದಲೂ ದಯೆಯಿಂದಲೂ ಕಾಪಾಡಿಕೊಂಡು ಬರುತ್ತಿರುವರೆಂಬ ಅಂಶವು ನನಗೆ ಚೆನ್ನಾಗಿ ತಿಳಿದಿದೆ. ಇಂಡಿಯಾ ಚಕ್ರವರ್ತಿನಿಯವರು ನನ್ನ ಪೂರ್ವಿಕರಿಗೆ ಸೇರಿದ ಈ ರಾಜ್ಯಕ್ಕೆ ಪ್ರಭುವಾಗಿರುವಂತೆ ನನಗೆ ರಾಜ್ಯಾಭಿಷೇಕ ಮಾಡಿದುದರಿಂದ, ಬ್ರಿಟಿಷ್ ಸರಕಾರದವರಿಂದ ಮೈಸೂರು ರಾಜವಂಶದವರು ಯಾವಾಗಲೂ ಪಡೆಯುತ್ತಿರುವ ನ್ಯಾಯಕ್ಕೂ ಉದಾರತ್ವಕ್ಕೂ ಮತ್ತೊಂದು ನಿದರ್ಶನವನ್ನು ಕೊಟ್ಟಂತಾಯಿತು. ಇದರಿಂದ ಬ್ರಿಟಿಷ್ ಸರಕಾರದ ವಿಷಯದಲ್ಲಿ ನನಗುಂಟಾಗಿರುವ ಕೃತಜ್ಞತಾ ಪೂರ್ವಕವಾದ ರಾಜಭಕ್ತಿ ಮಮತೆಗಳನ್ನೂ, ಅವರು ನನ್ನಲ್ಲಿಟ್ಟಿರುವ ನಂಬಿಕೆಗೆ ನಾನು ಪಾತ್ರನೆಂದು ತೋರಿಸಿಕೊಳ್ಳುವುದಕ್ಕೂ ಪ್ರಜೆಗಳ ಸೌಖ್ಯವನ್ನು ವೃದ್ಧಿಗೊಳಿಸುವುದಕ್ಕೂ ಸದಾ ಪ್ರಯತ್ನಿಸುತ್ತಿರುವೆನೆಂದು ಮಾಡುವ ಈ ನನ್ನ ವಾಗ್ದಾನವನ್ನೂ ತಾವು ಇಂಡಿಯಾ ಚಕ್ರವರ್ತಿನಿಯವರಿಗೆ ತಿಳುಹಿಸಬೇಕೆಂದು ಪ್ರಾರ್ಥಿಸುತ್ತೇನೆ. ಈ ಉತ್ಸವ ಸಮಯದಲ್ಲಿ ನನ್ನ ವಿಷಯದಲ್ಲಿ ತಾವು ತೋರಿಸಿದ ಆದರಕ್ಕಾಗಿ ನಾನು ಅರ್ಪಿಸುವ ವಂದನೆಗಳನ್ನು ಸ್ವೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ."

ಈ ರೀತಿಯಾಗಿ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದ ಮೇಲೆ ಆಗ ತಾನೆ ವೈಸ್ರಾಯಿಯವರಿಂದ ಬಂದ ಒಂದು ತಂತೀವರ್ತಮಾನವು * ಓದಲ್ಪಟ್ಟಿತು. ಅದೆಂತೆಂದರೆ : " ಆಳಿದ ಮಹಾಸ್ವಾಮಿಯವರಾದ ನಿಮಗೆ ರಾಜ್ಯಾಭಿಷೇಕವಾದುದರಿಂದ, ಶ್ರೀಮನ್ಮಹಾರಾಜ್ಞೀ ಇಂಡಿಯಾ ಚಕ್ರವರ್ತಿನಿಯವರಿಗುಂಟಾದ ಸಂತೋಷಾತಿಶಯವನ್ನೂ, ನೀವೂ ನಿಮ್ಮ ದೇಶವೂ ಶ್ರೇಯೋಭಿವೃದ್ಧಿಯನ್ನು ಪಡೆಯಬೇಕೆಂದು ಅವರಿಗಿರುವ ಕೋರಿಕೆಯನ್ನೂ ನಿಮಗೆ ತಿಳಿಸುವಂತೆ ನಾನು ಆಜ್ಞಪ್ತನಾಗಿರುವೆನು. ಇದಲ್ಲದೆ, ಚಕ್ರವರ್ತಿನಿಯವರು ತಮಗೆ ನಿಮ್ಮಿಂದ ಬಂದು ತಲುಪಿದ ರಾಜಭಕ್ತಿ ವಿಶ್ವಾಸಸೂಚಕವಾದ ತಂತೀ ಸಮಾಚಾರಕ್ಕೋಸ್ಕರ ವಿಶೇಷವಾಗಿ ವಂದಿಸುವೆನೆಂದು ನಿಮಗೆ ತಿಳಿಸುವಂತೆ ನನಗೆ ಆಜ್ಞೆ ಮಾಡಿರುವರು."

ಈ ಅಭಿನಂದನರೂಪವಾದ ಪತ್ರಿಕೆಯನ್ನು ಓದಿದ ಕೂಡಲೆ ಅಧಿಕಾರಿಗಳ ಜಯಜಯಧ್ವನಿಯೂ ಮೊರೆಯುವ ಮಂಗಳವಾದ್ಯವೂ ಸಿಪಾಯಿಗಳ ಬಂದೂಕಗಳ ಸುರಟೂ ದ್ಯುಮ್ಯಂತರಿಕ್ಷಗಳನ್ನು ಪ್ರತಿಧ್ವನಿಗೊಳಿಸಿದುವು. ಆಸ್ಥಾನದಲ್ಲಿದ್ದ ಅಧಿಕಾರಿಗಳೆಲ್ಲರೂ ಮಹಾರಾಜರ ಮೇಲೆ ಪುಷ್ಪವೃಷ್ಟಿಯನ್ನು ವರ್ಷಿಸಿ ನಜರು ಮುಜರೆ

---

* *A massage from the Viceroy.*—I am commanded by the Queen Empress to offer to Your Highness Her Majesty's congratulations upon your Installation and to express Her Majesty's best wishes for Your Highness' prosperity and that of your country. The Queen Empress also commands me to thank Your Highness warmly for the very kind and loyal telegram which Her Majesty has received from you.

ಮಾಡಿದರು. ಆಗ ವರ್ಷಾಕಾಲವಲ್ಲದಿದ್ದರೂ ಶ್ರೀಮನ್ಮಹಾರಾಜರವರ ಆಳಿಕೆಯಿಂದ ಪ್ರಜಾನಿಕರಕ್ಕೆ ಮುಂದಾಗುವ ಕ್ಷೇಮಲಾಭವನ್ನು ಸೂಚಿಸುವುದೋ ಎಂಬಂತೆ ಶುಭಸೂಚಕವಾದ ಸುವೃಷ್ಟಿಯೂ ಆಯಿತು. ಸುಮಾರು ಐವತ್ತು ವರುಷಗಳ ವರೆಗೆ ಕೈತಪ್ಪಿದ್ದ ರಾಜ್ಯವು ತಿರುಗಿ ದೇಶೀಯರಾಜರ ಅನುಭವಕ್ಕೆ ಬಂದುದಕ್ಕಾಗಿ ದೇಶವತ್ಸಲರಾದ ಪ್ರಜೆಗಳೆಲ್ಲರೂ ಅನಿರ್ವಚನೀಯವಾದ ಆನಂದದಿಂದ ತಮ್ಮ ಭಕ್ತಿ ಸಂತೋಷ ಕೃತಜ್ಞತಾ ಸೂಚಕವಾದ ವಿಜ್ಞಾಪನಾ ಪತ್ರಿಕೆಯಿಂದ ಲಾರ್ಡ್ ರಿಪ್ಪನ್ ಪ್ರಭುಗಳನ್ನೂ ಆಪಂ ಸಾಹೇಬರನ್ನೂ ಕೊಂಡಾಡಿದರು.

ರಾಜರ ಸಂಪತ್ತಿಗೆ ಕಲ್ಪವೃಕ್ಷಪ್ರಾಯರಾಗಿರುವ ಪ್ರಜೆಗಳನ್ನು ಧರ್ಮದಿಂದ ಪರಿಪಾಲನೆ ಮಾಡುವುದೇ ಪ್ರಭುಗಳ ಧರ್ಮವಾಗಿದೆ. ಅಂತಹ ಪ್ರಭುಗಳಲ್ಲಿ ವಿಶ್ವಾಸವನ್ನೂ ವಿಧೇಯತೆಯನ್ನೂ ತೋರಿಸುವುದು ಪ್ರಜೆಗಳಿಗೆ ಮುಖ್ಯ ಕರ್ತವ್ಯವಾಗಿರುವುದು. ರಾಜರ ಸುಖದುಃಖಗಳೇ ಪ್ರಜೆಗಳದಾಗಿಯೂ ಪ್ರಜೆಗಳ ತೊಂದರೆಯೇ ರಾಜರದಾಗಿಯೂ ಇರುವುವು. "ರಾಜಾ ಕಾಲಸ್ಯ ಕಾರಣಂ," "ಆಳುಕಟ್ಟಿದವನೇ ಅರಸು" ಎಂಬ ಲೋಕೋಕ್ತಿಗಳು ಕೇವಲ ಅನುಭವದಿಂದ ಬಂದುವುಗಳು. ಪ್ರಭುಗಳಿಗೂ ಪ್ರಜೆಗಳಿಗೂ ಇರುವ ಅನ್ಯೋನ್ಯ ಮೈತ್ರಿಯೇ ಸಾಮ್ರಾಜ್ಯಭಾರಕ್ಕೆ ಮುಖ್ಯಲಕ್ಷಣವು. ಈ ವಿಷಯವಾಗಿ ರಾಜಪುತ್ರ ಸಂಸ್ಥಾನದ ಇತಿಹಾಸ ಲೇಖಕರಲ್ಲಿ ಪ್ರಸಿದ್ಧರಾದ ಕರ್ನಲ್ ಜೇಮ್ಸ್ ಟಾಡ್ ಸಾಹೇಬರು ಬರೆದಿರುವುದೇನೆಂದರೆ: "ಯಾವ ದೇಶದಲ್ಲಿ ರಾಜ್ಯಭಾರವು ರಾಜರ ಇಚ್ಛಾಧೀನವಾಗಿರದೆ ನ್ಯಾಯನಿಬಂಧನೆಗೆ ಅಧೀನವಾಗಿರುವುದೋ, ಮತ್ತು ರಾಜರು ಆ ನ್ಯಾಯನಿಬಂಧನೆಗಳನ್ನನುಸರಿಸಿ ರಾಜಕಾರ್ಯಗಳನ್ನು ಮಾಡುವುದು ತಮ್ಮ ಕರ್ತವ್ಯವೆಂದೆಣಿಸಿ ನಡೆವರೋ, ಆ ದೇಶದ ಪ್ರಜೆಗಳು ಎಷ್ಟು ಪುಣ್ಯವಂತರೊ! ಹಾಗಿಲ್ಲದೆ, ಯಾವ ದೇಶದಲ್ಲಿ ರಾಜ್ಯಭಾರಕ್ರಮವು ರಾಜರ ಇಚ್ಛಾನುಸಾರವಾಗಿರುವುದೋ, ಆ ದೇಶದ ಮಂಗಳಾಮಂಗಳಗಳು ರಾಜರ ಗುಣದೋಷಮಾರ್ಗವನ್ನು ಹಿಡಿಯುವುವು. ದೈವವಶದಿಂದ ರಾಜರು ಧಾರ್ಮಿಕರಾದರೆ ರಾಜ್ಯವು ಉನ್ನತಿಯ ಶಿಖರವನ್ನೇರಿ ಸಕಲ ಸೌಭಾಗ್ಯಗಳನ್ನೂ ಪಡೆಯುವುದು; ಅವರು ದುರಾತ್ಮರಾದರೆ, ರಾಜ್ಯವು ಅಧೋಗತಿಗಿಳಿದು ಎಣೆಯಿಲ್ಲದ ದೌರ್ಭಾಗ್ಯಕ್ಕೆ ಈಡಾಗಿ ಹೋಗುವುದು. ಅರಸರು ಶೂರರಾಗಿಯೂ ಸಾಹಸಿಗಳಾಗಿಯೂ ಇದ್ದಲ್ಲಿ ಹಗೆಗಳ ಕಾಟವಿಲ್ಲದೆ ದೇಶವು ಸುರಕ್ಷಿತವಾಗಿರುವುದು; ಅವರು ಹೇಡಿಗಳಾಗಿಯೂ ಅಲಸರಾಗಿಯೂ ಇದ್ದಲ್ಲಿ ಶತ್ರುಗಳ ಬಾಧೆಯಿಂದ ದೇಶವು ಹಾಳಾಗುವುದು" ಎಂದು. ಹೀಗಿರುವಲ್ಲಿ, ರಾಜರು ಎಂತಹ ಸಾಮರ್ಥ್ಯವುಳ್ಳವರಾದರೂ ಅಸಹಾಯರಾಗಿ ರಾಜ್ಯಭಾರವನ್ನೆಲ್ಲ ತಾವೇ ಹೊತ್ತಿರಲಾಗುವುದಿಲ್ಲ. ಅವರಿಗೆ ಅಭಿಜ್ಞರಾದ ಸುಮಂತ್ರಿಗಳಿರಬೇಕು. ಅಂತಹ ಸುಮಂತ್ರಿಗಳ ಸಹಾಯದಿಂದ ಅವರು ತಮಗೆ ಬರುವ ಬಾಧೆಗಳನ್ನೂ ವಿಪತ್ತುಗಳನ್ನೂ ಪರಿಹರಿಸಿಕೊಂಡು, ದೇಶದ ಸೌಭಾಗ್ಯವನ್ನು ಹೆಚ್ಚಿಸಬಹುದು. ರಾಜ್ಯಾಂಗಕ್ಕೆ ಸೇರಿದ ಅಧಿಕಾರಿಗಳಲ್ಲಿ ಮಂತ್ರಿತ್ವವೇ ಸರ್ವಶ್ರೇಷ್ಠವಾದುದು. ಅದಕ್ಕೆ ಯುಕ್ತಾಯುಕ್ತ

ಪರಿಜ್ಞಾನಶೀಲರೂ ದಕ್ಷರೂ ಆದವರೇ ಬೇಕು. ಅವರ ಹೊರತು ರಾಜ್ಯಭಾರವನ್ನು ನಿರ್ವಹಿಸಲಾಗುವುದಿಲ್ಲ. ಅಂತಹ ಮಂತ್ರಿ ಶಿರೋಮಣಿಗಳು ಸ್ವಮತ, ಸ್ವದೇಶ, ಸ್ವಜನಗಳಲ್ಲಿ ದುರಭಿಮಾನಗಳಿಲ್ಲದವರಾಗಿಯೂ, ವಿದ್ಯಾವಿನಯಶಾಂತಿಗುಣಗಳುಳ್ಳವರಾಗಿಯೂ, ರಾಜಪಕ್ಷದಲ್ಲಿಯೂ ಪ್ರಜಾಪಕ್ಷದಲ್ಲಿಯೂ ದ್ರೋಹವನ್ನೆಣಿಸದವರಾಗಿಯೂ ಪ್ರಜಾರಂಜಕರಾಗಿಯೂ ಇರಬೇಕು. ಈ ಅಂಶಗಳನ್ನೆಲ್ಲ ಮೊದಲೇ ಪರಿಷ್ಕಾರವಾಗಿ ತಿಳಿದಿದ್ದ ಶ್ರೀಚಾಮರಾಜೇಂದ್ರ ಒಡೆಯರವರು ಪಟ್ಟಾಭಿಷೇಕದ ದಿನ ಸಾಯಂಕಾಲ ಐದು ಗಂಟೆಯ ದರ್ಬಾರಿನಲ್ಲಿ ರೆಸಿಡೆಂಟರೇ ಮೊದಲಾದ ಸಕಲಾಧಿಕಾರಿಗಳನ್ನೆಲ್ಲ ಪುನಃ ಬರಮಾಡಿಕೊಂಡು ಒಂದು ಪ್ರಸಿದ್ಧಿಪತ್ರಿಕೆಯನ್ನು ಪ್ರಕಟಿಸಿದರು. ಅದೆಂತೆಂದರೆ :—

ಇದುವರೆಗೆ ನಮ್ಮ ತರಫಿನಲ್ಲಿ ಬ್ರಿಟಿಷ್ ಗವರ್ನ್‌ಮೆಂಟಿನವರಿಂದ ನಡಿಸಲ್ಪಡುತ್ತ ಬಂದಿದ್ದ ಮೈಸೂರು ಸೀಮೆಯ ರಾಜ್ಯಭಾರವು ಇಂಡಿಯಾ ದೇಶದ ವೈಸ್ರಾಯಿ ಮತ್ತು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರ ೧೮೮೧ನೇ ಇಸವಿ ಮಾರ್ಚಿ ೨೫ನೆಯ ತಾರೀಖಿನ ಪ್ರಸಿದ್ಧಿಪತ್ರಿಕೆಯ ಮೂಲಕವಾಗಿ ಈ ದಿವಸ ನಮ್ಮ ವಶಮಾಡಲ್ಪಟ್ಟಿರುವುದರಿಂದ, ಸದರಿ ರಾಜ್ಯಭಾರವನ್ನು ಈ ದಿವಸ ನಾವು ವಹಿಸಿರುತ್ತೇವೆಂದು ಸಮಸ್ತರಿಗೂ ತಿಳಿಯಪಡಿಸುವುದು ಶಿವಾಯಿ, ನಮಗೂ ನಮ್ಮ ವಾರಸುದಾರರುಗಳಿಗೂ ಮತ್ತು ನಮ್ಮ ಸಂಸ್ಥಾನವನ್ನು ಹೊಂದತಕ್ಕವರಿಗೂ ನಂಬಿಕೆಯುಳ್ಳವರಾಗಿಯೂ ನಿಜವಾದ ರಾಜಭಕ್ತಿಯುಳ್ಳವರಾಗಿಯೂ ಇರಬೇಕೆಂದು ಸದರಿ ಸೀಮೆಯಲ್ಲಿರುವ ನಮ್ಮ ಸಮಸ್ತ ಪ್ರಜೆಗಳಿಗೆ ಆಜ್ಞಾಪಿಸುತ್ತೇವೆ.

ಸದರಿ ಸೀಮೆಯೊಳಗೆ ಇದುವರೆಗೆ ಜಾರಿಯಲ್ಲಿದ್ದ ಕಾನೂನುಗಳೂ ಮತ್ತು ಕಾನೂನುಗಳಿಗೆ ಸಮವಾದ ಬಲವುಳ್ಳ ನಿಬಂಧನೆಗಳೂ ಸದರೀ ಸೀಮೆಯೊಳಗೆ ಮುಂದೆಯೂ ಜಾರಿಯಲ್ಲಿರತಕ್ಕದೆಂದು ನಾವು ಇದರಿಂದ ಪ್ರಚಾರ ಪಡಿಸುತ್ತೇವೆ.

ಇದುವರೆಗೆ ಸದರಿ ಸೀಮೆಯೊಳಗೆ ಬ್ರಿಟಿಷ್ ಗವರ್ನ್‌ಮೆಂಟಿನವರು ಮಾಡಿರುವ ಫೈಸಲಾತಿಗಳನ್ನೂ ಅವರು ಕೊಟ್ಟಿರುವ ಸನ್ನದುಗಳನ್ನೂ ತಕ್ಕ ಅಧಿಕಾರವುಳ್ಳ ನ್ಯಾಯಪರಿಶೀಲನೆಯ ಕೋರ್ಟುಗಳಿಂದಾಗಲಿ, ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರ ಅನುಮತಿಯಿಂದಾಗಲಿ ಬದಲಾಯಿಸಿದ ಹೊರತು ಅಥವಾ ರದ್ದುಮಾಡಲ್ಪಟ್ಟ ಹೊರತು ಸದರಿ ಫೈಸಲಾತಿಗಳನ್ನೂ ಸನ್ನದುಗಳನ್ನೂ ಅವುಗಳ ಷರತ್ತುಗಳ ಪ್ರಕಾರ ನಾವು ಅಂಗೀಕರಿಸಿ ನಡಿಸುವುದಕ್ಕೆ ಬಾಧ್ಯರಾಗಿರುತ್ತೇವೆ.

ಸದರಿ ಸೀಮೆಯೊಳಗೆ ಈಗ ಇರತಕ್ಕ ನ್ಯಾಯ ಪರಿಶೀಲನೆಯ ಕೋರ್ಟುಗಳಿಗೆ ಈಗ ಅವುಗಳಿಗಿರತಕ್ಕ ಅಧಿಕಾರಗಳನ್ನು ಇದರಿಂದ ನಾವು ಕಾಯಂ ಮಾಡಿರುವುದು ಶಿವಾಯಿ ಸದರಿ ಸೀಮೆಯೊಳಗೆ ಈಗ ಕೆಲಸದಲ್ಲಿರುವ ಜಡ್ಜಿಗಳನ್ನೂ ಇತರ ಸಿವಿಲ್ ಮತ್ತು ಮಿಲಿಟರಿ ಆಫೀಸರುಗಳನ್ನೂ ಅವರವರ ಉದ್ಯೋಗದಲ್ಲಿ ಕಾಯಂ ಮಾಡಿರುತ್ತೇವೆ.

ನಮ್ಮ ಆಜ್ಞೆ ಮತ್ತು ವಿಚಾರಣೆಗಳಿಗೊಳಪಟ್ಟು, ಸದರಿ ಸೀಮೆಯ ಆಡಳಿತವನ್ನು ನಡಿಸುವುದಕ್ಕೋಸ್ಕರ ಒಬ್ಬ ದಿವಾನರನ್ನು ನೇಮಿಸಬೇಕೆಂದು ತೀರ್ಮಾನಿಸಿ ಸೆಟ್ಟಿಪಣ್ಯಂ ವೀರವಲ್ಲಿ ರಂಗಾಚಾರ್ಲು, ಸಿ.ಐ.ಇ. ಅವರ ರಾಜಭಕ್ತಿ ಸಾಮರ್ಥ್ಯಗಳಲ್ಲಿಯೂ ವಿವೇಕದಲ್ಲಿಯೂ ನಂಬಿಕೆಯಿಟ್ಟು, ಅವರನ್ನು ನಮ್ಮ ದಿವಾನರನ್ನಾಗಿ ಮುಕರರ್ ಮಾಡಿರುತ್ತೇವೆ.

ಹಾಲಿ ಜುಡಿಷಿಯಲ್ ಕಮಿಷನರಾಗಿರುವ ಬ್ಯಾರಿಸ್ಟರ್-ಅಟ್-ಲಾ ಮತ್ತು ಮಾಸ್ಟರ್ ಆಫ್ ಆರ್ಟ್ಸ್ ಆದ, ಬೆಂಗಾಲ್ ಸಿವಿಲ್ ಸರ್ವಿಸ್ಸಿಗೆ ಸೇರಿದ, ಮಿಸ್ಟರ್ ಜಾನ್ ವಗ್ಗನ್

ಸ್ಟ್ಯಾಂಡ್‌ಫರ್ಡ್ ಅವರನ್ನು ನಮ್ಮ ಕೋರಿಕೆಯ ಪ್ರಕಾರ ವೈಸ್‌ರಾಯಿ ಮತ್ತು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅವರು ನಮ್ಮ ರಾಜ್ಯದಲ್ಲಿ ನ್ಯಾಯಪರಿಶೀಲನೆಗೆ ನಮ್ಮ ಸಹಾಯಕ್ಕೋಸ್ಕರ ಕೊಟ್ಟಿರುವುದರಿಂದ, ಸದರಿ ಮಿಸ್ಟರ್ ಜಾನ್ ಡಗ್ಲಸ್ ಸ್ಟ್ಯಾಂಡ್‌ಫರ್ಡ್ ಅವರನ್ನು ಮೈಸೂರು ಸೀಮೆಯ ಛೀಫ್ ಜಡ್ಜ (ಮುಖ್ಯನ್ಯಾಯಾಧಿಪತಿ) ಉದ್ಯೋಗದಲ್ಲಿ ಕಾಯಂ ಮಾಡಿರುತ್ತೇವೆ.

ದಿವಾನ್ ಸೇಟ್ಪಣ್ಯಂ ವೀರವಲ್ಲಿ ರಂಗಾಚಾರ್ಲು ಸಿ.ಐ.ಇ., ಅವರು.

ಮತ್ತು ಮೈಸೂರು ಸೀಮೆಯ ಶ್ರೀಮನ್ಮಹಾರಾಜರವರ ಮಂತ್ರಾಲೋಚನ ಸಭೆಯೆಂದು ಒಂದು ಸಭೆಯನ್ನು ಏರ್ಪಾಡು ಮಾಡಿ, ಆ ಸಭೆಗೆ ಆಯಾ ಕಾಲದಲ್ಲಿರತಕ್ಕ ದಿವಾನನ್ನು ಪ್ರೆಸಿಡೆಂಟರನ್ನಾಗಿಯೂ, ಇಬ್ಬರು ಅಥವಾ ಹೆಚ್ಚು ಜನಗಳನ್ನು ಮೆಂಬರುಗಳನ್ನಾಯೂ ಆಗಾಗ್ಗೆ ನೇಮಿಸಬೇಕೆಂದು ತೀರ್ಮಾನಿಸಿರುತ್ತೇವೆ. ಸದರಿ ಸಭೆಯ ಮೆಂಬರುಗಳು

ಕಾನೂನು ಮಾಡುವ ವಿಷಯಗಳಲ್ಲಿಯೂ, ಕಂದಾಯ ಹಾಕುವ ವಿಷಯಗಳಲ್ಲಿಯೂ, ನಮ್ಮ ಸೀಮೆಯ ರಾಜ್ಯಭಾರಕ್ಕೂ ನಮ್ಮ ಪ್ರಜೆಗಳ ಕ್ಷೇಮಕ್ಕೂ ಸಂಬಂಧಪಟ್ಟ ಇತರ ಮುಖ್ಯವಾದ ಎಲ್ಲ ಏರ್ಪಾಡುಗಳ ವಿಷಯದಲ್ಲಿಯೂ ಅವರುಗಳ ಅಭಿಪ್ರಾಯವನ್ನು ನಮ್ಮ ಆಲೋಚನೆಗೆ ಶ್ರುತಪಡಿಸತಕ್ಕದು. ಸದರಿ ಸಭೆಗೆ ದಿವಾನ್ ಸೆಟ್ಟಿಪಣ್ಯಂ ವೀರವಲ್ಲಿ ರಂಗಾಚಾರ್ಲು, ಸಿ.ಐ.ಇ. ಅವರನ್ನು ಪ್ರೆಸಿಡೆಂಟರಾಗಿಯೂ, ಜಸ್ಟಿಸ್ ತಿರುಚನಾಪಳ್ಳಿ ರಾಯಲು ಆರೋಗ್ಯಸ್ವಾಮಿ ತಂಬೂ ಸೆಟ್ಟಿಯವರನ್ನೂ, ಪೂರ್ಣ ಕೃಷ್ಣರಾಯರನ್ನೂ ಅಟ್ಟೂಪಾಕಂ ರತ್ನಸಭಾಪತಿ ಮೊದಲಿಯಾರನ್ನೂ ಮೆಂಬರುಗಳನ್ನಾಗಿಯೂ ಮುಕರರ್ ಮಾಡಿರುತ್ತೇವೆ. ಸದರಿಯವರುಗಳು ಮೂರು ವರುಷ ಅಥವಾ, ನಮ್ಮ ಇಷ್ಟವಿರುವ ವರೆಗೆ ಸದರಿ ಸಭೆಯ ಮೆಂಬರುಗಳಾಗಿರತಕ್ಕದು.

ಸನ್ ೧೮೮೧ನೆಯ ಇಸವಿ ಮಾರ್ಚಿ ೨೫ನೆಯ ತಾರೀಖಿನಲ್ಲು ಮೈಸೂರಿನಲ್ಲಿ ನಮ್ಮ ದಸ್ತತ್ ಮೊಹರ್ ಸಹಿ ಪ್ರಕಟಿಸಲ್ಪಟ್ಟು ಇರುತ್ತದೆ.

ಚಾಮರಾಜೇಂದ್ರ ಒಡೆಯರ್.

ಮೇಲ್ಕಂಡ ಪ್ರಸಿದ್ಧಿಪತ್ರಿಕೆಯು ಪ್ರಕಟಿಸಿದ ದಿನ ಸಾಯಂಕಾಲ ಮದರಾಸು ಗವರ್ನರವರೇ ಮುಂತಾದ ಸಕಲ ಯೂರೋಪಿಯನರಿಗೂ ಜಗನ್ಮೋಹನ ಬಂಗಲೆಯಲ್ಲಿ ರಾಜೋಪಚಾರದಿಂದ ಕೂಡಿದ ಆತಿಥ್ಯವೂ, ಆ ಮಾರನೆಯ ದಿನ ಪ್ರಾತಃಕಾಲ ಸೈನ್ಯದ ರಿವ್ಯೂ ಸಮಾರಂಭವೂ ನಡೆದುವು. ಅದೇದಿನ ಮಧ್ಯಾಹ್ನ ನಗರವಾಸಿಗಳೂ ಸಂಸ್ಥಾನದ ಸಕಲ ಡಿಸ್ಟ್ರಿಕ್ಟ್ ನಿವಾಸಿಗಳ ಪ್ರತಿನಿಧಿಗಳೂ ಶ್ರೀಮನ್ಮಹಾರಾಜರವರಿಗೆ ಅಭಿನಂದನ ಪತ್ರಿಕೆಗಳನ್ನು ಒಪ್ಪಿಸಿದರು. ಅವರಿಗೆಲ್ಲ ಶ್ರೀಮನ್ಮಹಾರಾಜರವರು ಸಮುತ್ತರಗಳನ್ನು ದಯಪಾಲಿಸಿದುದಲ್ಲದೆ, ಉತ್ಸವಕ್ಕಾಗಿ ಬಂದಿದ್ದ ದೊಡ್ಡ ಮನುಷ್ಯರಿಗೆ ಖಿಲ್ಲತ್ತುಗಳ ಮೂಲಕ ಮರ್ಯಾದೆಮಾಡಿ ಅವರವರ ಊರುಗಳಿಗೆ ಕಳುಹಿಸಿಕೊಟ್ಟರು.

ಎಂಟನೆಯ ಅಧ್ಯಾಯ.

ನಾಲ್ವಡಿ ಶ್ರೀಕೃಷ್ಣರಾಜ ಒಡೆಯರವರ ಜನನ.

ಈ ಪ್ರಕಾರವಾಗಿ ಶ್ರೀಮನ್ಮಹಾರಾಜ ಶ್ರೀಚಾಮರಾಜೇಂದ್ರ ಒಡೆಯರವರು ವಂಶಾನುಕ್ರಮವಾಗಿಯೂ ಇಂಡಿಯಾ ಚಕ್ರವರ್ತಿನಿಯವರ ಅಪ್ಪಣೆಯ ಪ್ರಕಾರ ಒಪ್ಪಿಸಲ್ಪಟ್ಟುದಾಗಿಯೂ ಇರುವ ರಾಜ್ಯದಲ್ಲಿ ಮೂರ್ಧಾಭಿಷಿಕ್ತರಾಗಿ, ಸದ್ರಾಜ್ಯಭಾರ ನಿರ್ವಹಣಕ್ಕೆ ಸಮರ್ಥರಾದ ಮಂತ್ರಿಶ್ರೇಷ್ಠರನ್ನೂ ಮಂತ್ರಾಲೋಚನಾ ಸಭೆಯ ಸದಸ್ಯರನ್ನೂ ನಿಯಮಿಸಿ, ಆ ಸಭೆಯವರ ದಕ್ಷ್ಪ್ರದರ್ಶನಾರ್ಥವಾಗಿ ಕೆಲವು

*ಕಟ್ಟಳೆಗಳನ್ನು ಮಾಡಿ, ಕೆಲಕೆಲವು ಇಲಾಖೆಗಳನ್ನು ಅವರಿಗೆ ಹಂಚಿಕೊಟ್ಟು, ಪ್ರಜಾಪಾಲನವೇ ಸರ್ವೋತ್ಕೃಷ್ಟವಾದ ಶ್ರೇಯಸ್ಸೆಂಬುದಾಗಿ ತಿಳಿದು, ದುಷ್ಟನಿಗ್ರಹ ಶಿಷ್ಟಪರಿಪಾಲನವನ್ನು ಮಾಡುತ್ತ ರಾಜ್ಯಭಾರವನ್ನು ಕೈಕೊಂಡರು.

ಅಷ್ಟರಲ್ಲಿ ಆ ವರುಷದ ನವರಾತ್ರೀ ಮಹೋತ್ಸವವು ಸಮೀಪಿಸಿತು. ಈ ಯುತ್ಸವವು ಪ್ರತಿವರುಷವೂ ಮೈಸೂರು ಸಂಸ್ಥಾನದಲ್ಲಿ ನಡೆಯುವಂತೆ ಭರತ ಭೂಮಿಯಲ್ಲಿ ಮತ್ತೆಲ್ಲಿಯೂ ನಡೆಯುವುದಿಲ್ಲ. ಮಹಾರಾಜರವರ ಪೂರ್ವಜರಾದ ರಾಜ ಒಡೆಯರಿಗೆ ಶ್ರೀರಂಗಪಟ್ಟಣದ ಸಿಂಹಾಸನವು ಪ್ರಾಪ್ತವಾದ ಕಾಲದಿಂದಲೂ ಯಥಾಶಾಸ್ತ್ರವಾಗಿ ನಿಬಂಧನೆಯಾಗಿರುವಂತೆ ಮೈಸೂರು ಅರಮನೆಯಲ್ಲಿ ಆಶ್ವಯುಜ ಶುದ್ಧ ಪಾಡ್ಯದಿಂದ ದಶಮಿಯವರೆಗೂ ಬಹು ವೈಭವದೊಡನೆ ಉತ್ಸವ ಪರಂಪರೆಯು ನಡೆಯುತ್ತಿರುವುದು. ಈ ಉತ್ಸವಕ್ಕೆ ಅನೇಕ ಸಹಸ್ರಜನರು ದರ್ಶನೋತ್ಸುಕತೆಯಿಂದಲೂ ರಾಜಭಕ್ತಿಯಿಂದಲೂ ರಾಜಧಾನಿಗೆ ಬಂದು, ಕಣ್ಮನಗಳು ದಣಿಯುವಂತೆ ಸಕಲ ವಿನೋದಗಳನ್ನು ನೋಡಿಕೊಂಡು, ಅದೇ ಕಾಲದಲ್ಲಿ ನಡೆಯುವ ಶ್ರೀ ಚಾಮುಂಡೇಶ್ವರೀ ದೇವಿಯ ರಥೋತ್ಸವವನ್ನು ತೀರಿಸಿಕೊಂಡು, ನಂಜನಗೂಡಿಗೆ ಹೋಗಿ ಕಪಿಲಾಸ್ನಾನವನ್ನೂ ಶ್ರೀಕಂಠೇಶ್ವರ ದರ್ಶನವನ್ನೂ ಪೂರಯಿಸಿಕೊಂಡು, ಸಂತುಷ್ಟಚಿತ್ತರಾಗಿ ತಮ್ಮತಮ್ಮ ಸ್ಥಳಗಳಿಗೆ ತೆರಳುವರು. ಈ ಕಾಲದಲ್ಲಿ ರಾಜಧಾನಿಯಲ್ಲಿ ನಾನಾ ವಿನೋದಗಳು ನಡೆಯುವುವಲ್ಲದೆ, ವರ್ತಕರ ನೆರವಿಯು ಸೇರಿ ಲಕ್ಷಾಂತರ ರೂಪಾಯಿಗಳ ವ್ಯಾಪಾರವೂ ಜರುಗುವುದು. ಇಂತಹ ಕಾಲವಿಶೇಷವೇ ಪ್ರಜೆಗಳಿಗಿರುವ ರಾಜಭಕ್ತಿಯನ್ನೂ, ಪ್ರಭುಗಳಿಗಿರುವ ಪ್ರಜಾವಾತ್ಸಲ್ಯವನ್ನೂ, ಸ್ನೇಹಿತರೂ ಬಂಧುಗಳೂ ತಮತಮಗಿರುವ ಪರಸ್ಪರ ಪ್ರೀತಿಯನ್ನೂ, ಕೈಗಾರಿಕೆಯವರು ತಮ್ಮ ತಮ್ಮ ಕಲಾಕೌಶಲವನ್ನೂ ಪ್ರದರ್ಶನಗೊಳಿಸಿ ಕೃತಾರ್ಥರಾಗುವುದಕ್ಕೆ ಅನುಕೂಲವಾದದ್ದು. ಮುಮ್ಮಡಿ ಶ್ರೀಕೃಷ್ಣಭೂಪತಿಗಳ ಕಾಲದಲ್ಲಿ ಹಸ್ತಚ್ಯುತವಾಗಿದ್ದ ರಾಜ್ಯಲಕ್ಷ್ಮಿಯು ಐವತ್ತು ವರುಷಗಳನಂತರದಲ್ಲಿ ಶ್ರೀಚಾಮರಾಜೇಂದ್ರ ಒಡೆಯ

---

*ಆ ಕಟ್ಟಳೆಗಳು ಯಾವುವೆಂದರೆ.—(೧) ಕಂದಾಯ ತಂಗೆಗಳ ಬಾಕಿಗಳು. (೨) ಕಾನೂನ್ ಏರ್ಪಾಡು. (೩) ಮುಂದಣ ವರುಷದ ಆಯವ್ಯಯಗಳ ಅಂದಾಜುಪಟ್ಟಿಗಳು. (೪) ಎಲ್ಲ ಇಲಾಖೆಗಳ ಸಂವತ್ಸರದ ಕಾರುಬಾರು. (೫) ಎಲ್ಲ ಡಿಸ್ಟ್ರಿಕ್ಟ್ ಅಧಿಕಾರಿಗಳು, ಜಡ್ಜಿಗಳು, ಇವರಿಗೂ ಮೇಲ್ಪಟ್ಟ ಅಧಿಕಾರಿಗಳು—ಇವರನ್ನು ನೇಮಿಸುವಿಕೆ ಮತ್ತು ವರ್ಗಾವಣೆಮಾಡುವಿಕೆ. (೬) ಕೋರ್ಟು ಮೊಕದ್ದಮೆಗಳ ರಿವಿಷನ್. (೭) ಅವಾಸ್ಥಳೀಯ ಸರಕಾರದವರ ಅನುಮತಿಯನ್ನು ಪಡೆದು ತಪ್ಪುಮಾಡಿದ ಅಧಿಕಾರಿಗಳನ್ನು ನ್ಯಾಯಾನುಸಾರವಾಗಿ ವಿಚಾರಣೆಗೆ ಗುರಿಮಾಡುವುದು. (೮) ಮುಜರಾಯಿ ಇಲಾಖೆಯು ಬಿಟ್ಟಿಟ್ಟು ಮತ್ತು ಆ ಇಲಾಖೆಯೊಳಗೆ ಯಾವ ಏರ್ಪಾಟುಗಳಾಗಲೀ ಸಂಬಂಧಪಟ್ಟ ವಿಚಾರಗಳು. (೯) ಸೈನ್ಯದ ಏರ್ಪಾಡಿಗೆ ಸಂಬಂಧಪಟ್ಟ ವಿಷಯಗಳು. (೧೦) ಸಂಸ್ಥಾನಕ್ಕೆ ಸಂಬಂಧಪಟ್ಟವುಗಳಾಗಿಯೂ, ದಾಖಲೆಗಾಗಿ ಇಂಡಿಯಾ ಸರಕಾರಕ್ಕೆ ತಿಳಿಸತಕ್ಕವುಗಳಾಗಿಯೂ ಇರುವ ಸಕಲ ಮುಖ್ಯ ವಿಷಯಗಳು

ರವರಿಗೆ ಪುನಃ ಹಸ್ತಗತವಾದ ಈ ಸಂವತ್ಸರದ ನವರಾತ್ರೀ ಮಹೋತ್ಸವವು ಪೂರ್ವಾಚಾರಕ್ಕೂ ಶಾಸ್ತ್ರವಿಧಿಗೂ ಸ್ವಲ್ಪವೂ ವಿರೋಧವಿಲ್ಲದೆ ವಿಶೇಷ ವೈಭವದೊಡನೆ ನಡೆಯಿತು.

ವೃತ್ತ || ಶ್ರೀಮತ್ಸ್ವರ್ಣಾಗ್ರಪೀಠಾಸನಮುಪರಿಪ ಲಸಚ್ಛ್ರೀಲತಾಬಾಹುದೀಪ್ಯ |
ದ್ದಾಮಾಸಂಸಕ್ತವಕ್ಷಂ ವಿಬುಧನಿಚಯ ಕಲ್ಪೋರ್ವಿಜಂ ವೀರಲಕ್ಷ್ಮೀ ||
ಪ್ರೇಮಾವಾಸೀಕೃತೋದ್ಯದ್ಭುಜವ ಬುಜತಟಂ ಸರ್ವದಿಕ್ಕಾಂತಕಾಂತಾ |
ಸ್ತೋಮಶ್ರೀಬಂಧದೀವ್ಯಾಯುತ ವಿಮಲಯಶಂ ರಾಜಿಕುಂ ಚಾಮರಾಜಂ ||೧||

ಕಂದ || ಶ್ರೀಮಣಿ ಸಿಂಹಾಸನಮಂ | ಚಾಮಕ್ಷಿತಿನಾಥನ್ಮೈದೆ ಮಂಡಿಸಿ ಮೆರೆದಂ ||
ಹೇಮಾದ್ರಾಗ್ರದೊಳೊಗೆದು | ದ್ದಾಮ ಫಲಪ್ರಸವಭರಿತ ಕಲ್ಪದ್ರುಮದೊಲ್ ||೨||
ಉದಯಧರಾದ್ರಂ ಮೀರಿದ | ದೊದವಿದ ಮಣಿಕಾಂತಿಪೂರದೊಜ್ಜ್ವಲಮಾಗಲ್ ||
ಪದೆದೊಪ್ಪಿರೆ ರವಿಯೋಲ್ಬ್ರ | ಮುದತೀಶ್ವರನುದ್ಭವದಖಿಲನೇತ್ರಸರೋಜಂ ||೩||
ಪಂಬಗಳುಗ್ಗಡಣೆಯ ತಾ | ನೊಂದಿದ ಜಲಘೋಷಮಂತೆ ಚಾಮರಮಾಗಲ್ ||
ಸಿಂಧುವೆನೆ ಮೆರೆವ ನಭೆಯೊಳ್ | ಚಂದಿರನಂತೆಸೆಯೆ ಭೂಪನುತ್ಸವಿಸದರಾರ್ ||೪||
ವಿತತ ಸಭಾಜಲನಿಧಿಯೊಳ್ | ನುತ ಹರಿಪೀಠಾಧಿರೂಢನುಂ ಧೃತಲೋಕಂ ||
ಪ್ರಥಿತ ಸಭಾಸದಜಯನುಂ | ಕ್ಷಿತಿಪತಿ ಹರಿಯಂತೆ ಮೆರೆದನುರೆಮಾಧಾರಂ ||೫||
ಪರ ರಾಜಹಂಸ ಮಂಜುಳ | ನುರುವಿಬುಧ ವಿನೂತನಾಗಿರಲ್ ಚಾಮೇಂದ್ರಂ ||
ನರಸತಿಯೊಂದಿದಳೀ ಭೂ | ವರನಂ ಜರೆದನೃತವಾದಿಯಂ ವಿಧಿಯಂದಲ್ ||೬||
ದೀನರ್ಗಮರೋರ್ವಿಜಂ | ಮಾನಸಮುನ್ನತ ರಿಪುವ್ರಜಕ್ಕಂತಕನುಂ ||
ಮಾನಿನಿಯರ್ಗಂಗಜನುಂ | ತಾನೆನೆ ಚಾಮೇಂದ್ರನೆಸವನೇನಚ್ಚರಿಯೋ ||೭||
ನಿಜಬಲದಿಂ ಜಲನಿಧಿಯಂ | ನಿಜವಿಕ್ರಮಬಲದೆ ರವಿಯ ಕೆಂಗದಿರಂ ತಾಂ ||
ನಿಜಯಶದಿಂ ಚಂದ್ರಿಕೆಯಂ | ನಿಜದಿಂತಾಂ ಜಯಿಸಿಮೆರೆವನೀ ಚಾಮೇಂದ್ರಂ ||೮||

ವೃತ್ತ || ಸಡಗರದಿಂದೆ ಕುಂಬಿಡುವ ಮಂತ್ರಿಚಮೂವರ ಮುಖ್ಯರೊಳ್ಗಿನಿಂ |
ಬಿಡದೆ ಜಯಾರವಂಗುಡುವ ಸತ್ಕವಿ ನಾಯಕರಿಂದಮಿರ್ಕೆಲಂ ||
ಪಿಡಿದುರೆ ಚಾಮರ ವ್ಯಜನಮಂ ನಲಿ ಡಾಳಿಪ ಸೇವಕಾಳಿಯಿಂ |
ಗಡಣಿಸಿ ಮನ್ನಣೆಪ್ಪ ಧನಿಕವ್ರಜದಿಂ ಮಿಗೆ ರಂಜಿಪಂ ನೃಪಂ ||೯||

ಕಂದ || ಇಂತಾಭೂಮಿಸನೋಲಗ | ವಾಂತಿರೆ ಕಟ್ಟಿದಿರೊಳೆಸೆವ ಚತುರಂಗಬಲಂ ||
ತಾಂತಳೆದೊಪ್ಪಿರೆ ಮಲ್ಲರ | ನಂತವಿಧದೆ ಕಾಳೆಗದ ನೋಡರ್ವಪರದಟಂ ||೧೦||
ತನ್ನಯ ವಂಶದೊಳೊಗೆದ | ತ್ಯುನ್ನತ ವೈಭವವೆ ಮೆರೆವ ನೃಪನಂ ನೋಡಲ್ ||
ಜೊನ್ನ್ವದಲನಮಿತಗುಣನಂ | ಚನ್ನಂ ಬಂದನೆನೆ ಮೆರೆದುದಾಶುಗದೀಪಂ ||೧೧||
ವಿಳಸದ್ಭೇರೀರವಮ | ಗ್ಗಳಿಸಿ ನಭೋವಲಯಮಂ ಪಳಂಚಲ್ಬರದಿಂ ||
ಪಳಪಳನುದಿರಿದ ತಾರಾ | ವಳಿಯ ವೋಲದೊಂದು ಮಾರ್ದಿನಸೊಗನದುಯೆಸಗುಂ ||೧೨||
ಇಳೆಯಾಣ್ಮನೊಸಗೆಸೊಬಗಂ | ನಿಳಿಂಪರೀಕ್ಷಿಸುತೆ ನಭದಿನಿಂ ಕರೆದಲರೊ ||
ಳ್ಪೊಳೆಯುತಿರೆ ತಾರಾಮಂ | ಡಳಮೆಂಬಾ ಮದ್ದುರ್ವಪತ್ರಿ ಮೆರೆದುದು ನಭದೊಳ್ ||೧೩||
ಪ್ರತಿದಿನಮಿಂತುತ್ಸವಮಂ | ತತಿಶಯಮೆನೆ ಕಳೆದು ನವದಿನಂಗಳನಾಗಳ್ ||
ಕ್ಷಿತಿಪತಿ ವಶವಿಯೊಳ್ಬರದ | ನತುಲಮುದಂ ವಿಜಯದಶಮಿಯೆಡೆಗೇವೇಳ್ಕೆಂ ||೧೪||



ದಸರಾ ಮಹೋತ್ಸವದ ವಿಜಯದಶಮಿ ಉತ್ಸವದಲ್ಲಿ ಶ್ರೀಮನ್ಮಹಾರಾಜರವರು ಬನ್ನೀ ಮಂಟಪಕ್ಕೆ ದಯಮಾಡುವುದು.

ವೃತ್ತ ॥ ಭದ್ರದಂತಿವರಕಂ ಧರಾಗ್ರದೊಳ್ । ಸದ್ರುಚಿಸ್ಫುರಿತ ಹೇಮಪೀಠಮಂ ॥
ಅಧ್ಯಧಿಷ್ಠಿತನದಿರ್ದ್ದನೆಲ್ಲರು । ಸ್ನಿಗ್ಧಲೋಚನ ರಧೀಕ್ಷಿಸುತ್ತಿರಲ್ ॥೧೫॥
ನಾಥಮನೇರಿ ನೋಳ್ಪ ಯುವತೀಜನರುಜ್ವ್ವಳನೇತ್ರ ಕಾಂತಿಯಿಂ ।
ಮೇಘವರ್ಣದ ದಂತಿಯುನಡದರ್ ಹಿಮಾದ್ರಿಯನೇಳಿಪಾ ಮಹಾ ॥
ಯೂವಪದಾಗ್ರದೊಳ್ಕೆರೆದು ಪೆರ್ಚಿದ ಸಂಭ್ರಮದಿಂದೆ ಚೈತ್ರಯಾ ।
ತ್ರಾದರನಾದ ವಿಷ್ಣುವಿನವೋಲ್ ನಡೆಗೊಂಡನು ರಾಜಭೂವರಂ ॥೧೬॥

ಕಂದ ॥ ಇಂತೈದಿ ನೆರೆದ ಬಹುಜನ । ಸಂಗತಿಗತಿ ಮುದವನೀವುತರಮನೆವೊಕ್ಕಂ ॥
ಕಾಂತಕೆಪೆತ್ತೆಸೆವ ಗಿರಿಗು । ಹಾಂತರಮಂ ಪೊಕ್ಕ ಕೇಸರಿಯವೋಲ್ ಭೂಪಂ ॥೧೭॥

ವೃತ್ತ ॥ ದಾನವಾರಿ ಲೋಚನಾಂಬುಜಾಂಕ ಪಾದಪಂಕಜಂ ।
ದೀನವಾರಿ ರಕ್ಷಣೈಕ ಧುರ್ಯನುಕ್ಷವಧ್ವಜಂ ॥
ಫೇನ ಭೇನ ಮೇನ ಕೇನ ಗೌರನಿಂದು ಶೇಖರಂ ।
ಸಾನುರಾಗನೀಗೆ ಚಾಮಭೂಮಿಪಂಗಭೀಷ್ಟಮಂ ॥ ೧೮ ॥

N. R. K.

ಇಂತಹ ನವರಾತ್ರೀ ಮಹೋತ್ಸವ ಪರಂಪರೆಯ ಮಧ್ಯದಲ್ಲಿ ಆ ಕಾಲದ ಮಹಿಮೆಯನ್ನು ಕಂಡು, ಶ್ರೀಮನ್ಮಹಾರಾಜರವರು ಸ್ವಲ್ಪವೂ ಕೊರತೆಬಾರದಂತೆ ಪ್ರಜಾಪರಿಪಾಲನೆಯನ್ನು ಮಾಡಿಕೊಂಡು ಬರುವುದಕ್ಕೆ ಸರಿಯಾದುದೊಂದು ಸಾಧನವನ್ನು ಕಲ್ಪಿಸಬೇಕೆಂದು ತಮ್ಮ ಮಂತ್ರಿವರ್ಯರೂ ರಾಜತಂತ್ರಪಾರೀಣರೂ ಆದ ಶ್ರೀಮಾನ್ ರಂಗಾಚಾರ್ಯರೊಡನೆ ಪರ್ಯಾಲೋಚನೆ ಮಾಡಿದರು. ಈ ನಾಗರಿಕ ದಿನಗಳಲ್ಲಿ ನಿರಂಕುಶಪ್ರಭುತ್ವವು ನಿರ್ದುಷ್ಟವಾದುದೆಂದು ಯಾರೂ ಎಣಿಸರು. ಕೇವಲ ಪ್ರಜಾಪ್ರತಿನಿಧಿ ರಾಜ್ಯಭಾರವು ಕೆಲವು ದೇಶಗಳಲ್ಲಿ ನೆಲೆಗೊಂಡಿದ್ದರೂ, ಅದೂ ದೋಷವತ್ತಾಗಿ ಸಕಲಪರಿಗ್ರಾಹ್ಯವಲ್ಲದಿರುವುದು. ಇದ್ದಮಟ್ಟಿಗೆ ಸಾಂಕುಶ ಪ್ರಭುತ್ವವೇ ಸರ್ವೋತ್ತಮವಾದುದು. ಈ ಸಾಂಕುಶ ಪ್ರಭುತ್ವಕ್ಕೆ ಬ್ರಿಟಿಷ್ ಸಾರ್ವಭೌಮರ ನಿಜದೇಶವಾದ ಇಂಗ್ಲೆಂಡು ತೌರೂರಾಗಿರುವುದು. ಆದರೂ ಬ್ರಿಟಿಷ್ ಇಂಡಿಯಾದಲ್ಲಿ ಅಂತಹ ರಾಜ್ಯಭಾರಕ್ರಮವಾಗಲಿ, ಅದಕ್ಕೆ ಸದೃಶವಾದ ಮತ್ತಾವ ಕ್ರಮವಾಗಲಿ ಇರಲಿಲ್ಲ. ಹೀಗೆ ಯಾವ ಮಾದರಿಯೂ ಇಲ್ಲದ ಕಾಲದಲ್ಲಿ ಶ್ರೀಮನ್ಮಹಾರಾಜರವರು ತಮ್ಮ ಪ್ರಜೆಗಳನ್ನೂ ರಾಜ್ಯವನ್ನೂ ಉತ್ತಮ ಸ್ಥಿತಿಗೆ ತರಲು ಪ್ರಯತ್ನಿಸಿ "ಮೈಸೂರು ಪ್ರಜಾಪ್ರತಿನಿಧಿ ಸಭೆ" ಎಂಬ ಒಂದು ದೊಡ್ಡ ಸಭೆಯ ಏರ್ಪಾಡನ್ನು ಮಾಡಿದರು. ಪ್ರಭುಪದವಿಯಲ್ಲಿ ಇರತಕ್ಕವರೂ, ಪ್ರಜಾಪಕ್ಷದವರೂ ಒಂದು ಕ್ಲಿಷ್ಟ ಕಾಲದಲ್ಲಿಯೂ ಒಂದು ಕ್ಲಿಷ್ಟಸ್ಥಲದಲ್ಲಿಯೂ ಸೇರಿ, ರಾಜ್ಯಭಾರಕ್ಕೆ ಸಂಬಂಧಪಟ್ಟ ಕಾರ್ಯಗಳನ್ನು ಕುರಿತು ವಿಚಾರಮಾಡುವುದೇ ಈ ಸಭೆಯ ಮುಖ್ಯೋದ್ದೇಶವಾಗಿರುವುದು. ಪ್ರಭುಗಳು ಪ್ರಜೆಗಳ ಕಷ್ಟಸುಖಗಳನ್ನೂ ದೇಶೋನ್ನತಿಗೆ ಆವಶ್ಯಕಗಳಾದ ಸಂಗತಿಗಳನ್ನೂ ಪ್ರಜೆಗಳಿಂದ ತಿಳಿದುಕೊಂಡು, ಅವರ ಕಷ್ಟನಿವಾರಣೆ ಮಾಡಿ, ದೇಶದ ಪುರೋವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಮಾಡುವುದಕ್ಕೂ, ಪ್ರಜಾ

ಪಕ್ಷದವರು ತಮ್ಮ ಕಷ್ಟಸುಖಗಳನ್ನು ಪ್ರತ್ಯಕ್ಷವಾಗಿ ಅರಿಕೆಮಾಡಿ, ಪ್ರಭುಗಳು ಮಾಡುವ ಏರ್ಪಾಡುಗಳಲ್ಲಿ ತಾವೂ ಸಹಾಯಕರಾಗಿ ನಿಲ್ಲುವುದಕ್ಕೂ ಈ ಸಭೆಯು ಉತ್ತಮವಾದ ಸಾಧನವಾಗಿರುವುದು. ವಿಶೇಷಜ್ಞರಲ್ಲದ ರೈತರಿಗೂ ಕೂಡ ರಾಜಕೀಯ ವಿಷಯಗಳಲ್ಲಿ ಪರಿಜ್ಞಾನವುಂಟಾಗುವಂತೆ ಅವಕಾಶವನ್ನು ಕಲ್ಪಿಸಿ, ಕೃಷಿ ವಾಣಿಜ್ಯಾದಿ ವೃತ್ತಿಗಳೆಲ್ಲ ವೃದ್ಧಿಗೆ ಬಂದು ಕ್ರಮೇಣ ದೇಶೋನ್ನತಿಯುಂಟಾಗುವಂತೆ ಮಾಡಿರುವ ಈ ಏರ್ಪಾಡು ಶ್ರೀಮನ್ಮಹಾರಾಜರವರ ಪ್ರಜಾವಾತ್ಸಲ್ಯವನ್ನೂ ದೂರದೃಷ್ಟಿಯನ್ನೂ ವ್ಯಕ್ತಪಡಿಸುವುದಲ್ಲವೆ?

ಈ ಸಭೆಗೆ, ಸಂಸ್ಥಾನದ ಸಕಲ ಭಾಗಗಳಲ್ಲಿರುವ ಲೋಕಲ್ ಬೋರ್ಡ್ ಎಂಬ ಸಂಘ, ಮ್ಯುನಿಸಿಪಾಲಿಟಿಯೆಂಬ ನಗರಸಂಘ, ಇತರ ಸಮಾಜಗಳು—ಇವೇ ಮುಂತಾದುವುಗಳಿಂದಲೂ ಜಮೀನುದಾರರು, ವರ್ತಕರು, ರೈತರು—ಇವರಿಂದಲೂ ಗಣ್ಯರಾದ ಪ್ರತಿನಿಧಿಗಳು ಬರುವರು. ಇವರಿಗೆ ದಿವಾನರವರು ಹಿಂದಣ ವರುಷದ ರಾಜ್ಯಭಾರದ ಆಯವ್ಯಯಗಳನ್ನೂ ಫಲಾಫಲಗಳನ್ನೂ ಮುಂದಣವರುಷ ನಡೆಯಿಸಬೇಕೆಂದಿರುವ ವಿಷಯಗಳನ್ನೂ ತಿಳಿಸುವರು. ಅನಂತರ, ಪ್ರತಿನಿಧಿಗಳು ತಮ್ಮ ಡಿಸ್ಟ್ರಿಕ್ಟುಗಳಲ್ಲಿ ಪ್ರಜೆಗಳಿಗಿರುವ ಕೊರತೆಗಳನ್ನೂ, ಅವುಗಳನ್ನು ನಿವಾರಿಸುವುದಕ್ಕೆ ತಮಗೆ ತೋರುವ ಸಲಹೆಗಳನ್ನೂ ಹೇಳಿಕೊಳ್ಳುವರು. ಒಡನೆಯೇ ಚರ್ಚೆಯು ಉಪಕ್ರಮವಾಗಿ ಎಲ್ಲವೂ ಮುಗಿಯಬೇಕಾದರೆ ಒಂದುವಾರ ಹಿಡಿಯುವುದು. ಬಳಿಕ, ನಡೆದ ವಿಷಯಗಳೆಲ್ಲ ಮುದ್ರಿತವಾಗಿ ಪ್ರಕಟಿಸಲ್ಪಡುವುವು. ಪ್ರತಿನಿಧಿಗಳು ತಿಳಿಸಿದ ಸಲಹೆಗಳನ್ನೆಲ್ಲ ದಿವಾನರವರು ಆಯಾ ಇಲಾಖೆಯ ಅಧಿಕಾರಿಗಳೊಡನೆ ವಿಚಾರಮಾಡಿ, ಪ್ರಜೆಗಳ ಕುಂದುಕೊರತೆಗಳನ್ನು ನಿವಾರಣೆಮಾಡುವ ಪ್ರಯತ್ನಗಳನ್ನು ಮಾಡುವರು. ಈ ರೀತಿಯಲ್ಲಿ ೧೮೮೧ನೆಯ ಇಸವಿಯಲ್ಲಿ ಸ್ಥಾಪಿಸಲ್ಪಟ್ಟ ಪ್ರಜಾಪ್ರತಿನಿಧಿ ಸಭೆಯು ಇಂದಿನವರೆಗೂ ರಾಜಧಾನಿಯಲ್ಲಿ ಪ್ರತಿಸಂವತ್ಸರವೂ ನಡೆಯುತ್ತಿರುವುದು.

ಶ್ರೀಮನ್ಮಹಾರಾಜರವರು ಪ್ರಜಾಪ್ರತಿನಿಧಿ ಸಭೆಯನ್ನು ಕಲ್ಪಿಸಿದುದು ಮಾತ್ರವಲ್ಲದೆ, ತಮ್ಮ ಮಂತ್ರಾಲೋಚನಾ ಸಭೆಯ ಬಲದಿಂದಲೂ ದಿವಾನ್ ರಂಗಾಚಾರ್ಯರವರ ಬುದ್ಧಿಶಕ್ತಿಯಿಂದಲೂ ಸಂಸ್ಥಾನದ ಸಕಲ ಇಲಾಖೆಗಳಲ್ಲಿಯೂ ಅಪ್ರಕೃತವಾಗಿ ಮಿತಿಮೀರಿದ್ದ ಸಿಬ್ಬಂದಿಯನ್ನೆಲ್ಲ ಕಡಿಮೆಮಾಡಿ, ಹೆಚ್ಚುಸಂಬಳವನ್ನು ಪಡೆಯುತ್ತಿದ್ದ ಯೂರೋಪಿಯನ್ ಅಧಿಕಾರಿಗಳನ್ನು ತೆಗೆದುಹಾಕಿ, ಅವರ ಸ್ಥಾನಗಳಲ್ಲಿ ಸಮರ್ಥರಾದ ದೇಶೀಯರನ್ನು ಮಿತವಾದ ಸಂಬಳಕೊಟ್ಟು ನೇಮಕಮಾಡಿ, ತಾಲ್ಲೂಕುಗಳ ಸಂಖ್ಯೆಯನ್ನು ತಗ್ಗಿಸಿ, ಬರಿದಾಗಿದ್ದ ಭಂಡಾರದಲ್ಲಿ ಸಾಧ್ಯವಾದ ಮಟ್ಟಿಗೆ ದ್ರವ್ಯವನ್ನು ಸಂಚಯಮಾಡಿಸುತ್ತ, ರಾಜ್ಯಭಾರವನ್ನು ಕ್ರಮಗೊಳಿಸುತ್ತ, ಮೈಸೂರು ಸ್ಟೇಟ್ ರೈಲ್ವೆಯನ್ನು ಹಾಕಿ, ತನ್ಮೂಲಕ ಪ್ರಯಾಣಿಕರಿಗೂ, ಮುಖ್ಯವಾಗಿ ವರ್ತಕರಿಗೂ, ವಿಶೇಷವಾದ ಆನುಕೂಲ್ಯವನ್ನು ಕಲ್ಪಿಸಿ, ಪ್ರಜಾಹಿತವೇ ತಮ್ಮ ಹಿತವೆಂದು ಭಾವಿಸಿ ಧರ್ಮಪರಿಪಾಲನವನ್ನು ಮಾಡುತ್ತ ಬಂದರು. ಆದರೆ ಉಪಕ್ರಮಿಸಿದ ತಿದ್ದುಪಾಟು

ಗಳೂ ಏರ್ಪಾಡುಗಳೂ ಪೂರಯಿಸಿ ಸಂಪೂರ್ಣ ಫಲವನ್ನು ಕೊಡುವಷ್ಟರೊಳಗೆ, "ಶ್ರೇಯಾಂಸಿ ಬಹುವಿಘ್ನಾನಿ" ಎಂಬಂತೆ ಅಲ್ಪಕಾಲದಲ್ಲಿಯೇ—ಎಂದರೆ ೧೮೮೩ನೆಯ ಇಸವಿ ಜನವರಿ ೨೧ರಲ್ಲಿ ಮಂತ್ರಿವರ್ಯರಾದ ರಂಗಾಚಾರ್ಲ್ಯರವರು ದೇಹಾಲಸ್ಯದಿಂದ ಮದರಾಸಿನಲ್ಲಿ ಕಾಲಗತಿಯನ್ನೈದಿದರು. ಈ ಶೋಚನೀಯವಾದ ವೃತ್ತಾಂತವನ್ನು ಕೇಳಿದಕೂಡಲೆ, ಶ್ರೀಮನ್ಮಹಾರಾಜರವರು ಬಹಳ ವ್ಯಸನಪಟ್ಟು, ರಾಜ್ಯಕಾರ್ಯ ನಿರ್ವಾಹದಲ್ಲಿ ಬಹು ಸಮರ್ಥರೂ, ದೃಢವಾದ ರಾಜಭಕ್ತಿಯುಳ್ಳವರೂ, ಪ್ರಜಾಹಿತ ಚಿಂತಕರೂ ಆಗಿದ್ದ ಆ ಮಂತ್ರಿಶ್ರೇಷ್ಠರ ವಿಯೋಗದಿಂದ, ತಮಗೂ ತಮ್ಮ ರಾಜ್ಯಕ್ಕೂ

ದಿವಾನ್ ಕೊಮಾರಪುರಂ ಸರ್ ಶೇಷಾದ್ರಿಯ್ಯರ್, ಕೆ.ಸಿ.ಎಸ್ ಐ. ಅವರು.

ಉಂಟಾದ ಅಪಾರವಾದ ನಷ್ಟವನ್ನು ಪ್ರಜೆಗಳಿಗೆ ತಿಳುಹಿಸಿ, ಮರಣವನ್ನು ಹೊಂದಿದ ಆ ಮಂತ್ರಿಶ್ರೇಷ್ಠರ ಘನತೆಯನ್ನು ಸೂಚಿಸುವುದಕ್ಕಾಗಿ ತಮ್ಮ ಆಡಳಿತಕ್ಕೆ ಒಳಪಟ್ಟ ಸಕಲ ಕೋರ್ಟು ಕಚೇರಿಗಳನ್ನು ಎರಡು ದಿವಸಗಳ ವರೆಗೆ ಮುಚ್ಚಬೇಕೆಂದು ಅಪ್ಪಣೆ ಕೊಡಿಸಿದರು. ಬಳಿಕ, ರಂಗಾಚಾರ್ಲ್ಯರು ಕೊಟ್ಟಿದ್ದ ಸಲಹೆಯ ಮೇರೆಗೆ, ಈ ದೇಶದ ಡೆಪ್ಯುಟಿ ಕಮಿಷನರ್ ಹುದ್ದೆಯಲ್ಲಿದ್ದ ಕೊಮಾರಪುರಂ ಶೇಷಾದ್ರಿಯ್ಯರ್‌ಯವರನ್ನು ಶ್ರೀಮನ್ಮಹಾರಾಜರವರು ಕರೆಯಿಸಿ ಅವರಿಗೆ ಮಂತ್ರಿಪದವಿಯನ್ನು ಅದೇ ವರುಷದ

ಫೆಬ್ರುವರಿಯಲ್ಲಿ ಕೊಟ್ಟು, ರಾಜತಂತ್ರಧುರೀಣರಾಗಿ, ಪ್ರಭುಮಂತ್ರೋತ್ಸಾಹ ಶಕ್ತಿಗಳನ್ನು ಕಾಲಕಾಲಗಳಲ್ಲಿ ಉಪಯೋಗಿಸುತ್ತ, ಯುಕ್ತಾಯುಕ್ತ ವಿವೇಚನೆಯಿಂದ ಪ್ರಜೆಗಳನ್ನು ಪರಿಪಾಲಿಸುತ್ತಿದ್ದರು.

ಇವಾದ ಕೆಲವು ತಿಂಗಳೊಳಗೆ ಶ್ರೀಮನ್ಮಹಾರಾಜರವರಿಗೆ ದ್ವಿತೀಯ ಪುತ್ರಿಕೋತ್ಸವವಾಯಿತು. ಆ ಮಗುವಿಗೆ ಕೃಷ್ಣಾಜಮ್ಮಣ್ಣಿಯವರೆಂಬುದಾಗಿ ನಾಮಕರಣವು ನಡೆಯಿತು.

ಹೀಗಿರುವಲ್ಲಿ, ವೈಸ್ರಾಯಿಯವರಾಗಿದ್ದ ಲಾರ್ಡ್ ರಿಪ್ಪನ್ ಪ್ರಭುಗಳು ಇಂಡಿಯಾ ದೇಶೀಯರ ಸ್ಥಿತಿಗತಿಯನ್ನು ವಿಚಾರಣೆ ಮಾಡುವುದಕ್ಕಾಗಿ ದೇಶಾಟನವನ್ನು ಮಾಡುತ್ತ, ಮದರಾಸಿನ ಮಾರ್ಗವಾಗಿ, ಮೈಸೂರಿಗೆ ಬರುವವರಾಗಿದ್ದರು. ಆದರೆ ಸಾಂತಿಭೇದಿ ರೋಗವು ಮೈಸೂರಲ್ಲೆಲ್ಲ ಹಬ್ಬಿದ್ದುದರಿಂದ, ವೈಸ್ರಾಯಿಯವರಿಗೆ ಈ ದೇಶಾಗಮನವು ಅಭಿಮತವಾಗಲಿಲ್ಲ. ಮಹಾರಾಜರವರೇ ಮದರಾಸಿಗೆ ದಯೆಮಾಡಿ ವೈಸ್ರಾಯಿಯವರ ಸಂದರ್ಶನವನ್ನು ತೆಗೆದುಕೊಂಡರು. ಈ ಸಂದರ್ಭದಲ್ಲಿ ಶ್ರೀಮನ್ಮಹಾರಾಜರವರು ಮದರಾಸು ಯೂನಿವರ್ಸಿಟಿ, ಕ್ರಿಶ್ಚಿಯನ್ ಕಾಲೇಜು, ಪಚ್ಚೆಯಪ್ಪಯ್ಯನವರ ಕಾಲೇಜು ಮುಂತಾದ ಕಲಾಶಾಲೆಗಳಿಗೆ ದಯೆಮಾಡಿಸಿ, ಅಲ್ಲಿಯ ವಿದ್ಯಾಭಿವೃದ್ಧಿಯನ್ನು ಪ್ರತ್ಯಕ್ಷವಾಗಿ ಪರಾಮರ್ಶಿಸಿ ಅವುಗಳ ಅಭಿವೃದ್ಧಿಗೆ ದ್ರವ್ಯಸಹಾಯಮಾಡಿ, ರಿತೃಪ್ತರಾದರು. ಆ ಕಾಲದಲ್ಲಿ ಮದರಾಸ್ ಸಿನೇಟಿನ ಪ್ರಮುಖರಾದ ಡಾಕ್ಟರ್ ಎಲ್ಲರ್ ಮುಂತಾದವರು ಶ್ರೀಮನ್ಮಹಾರಾಜರವರಿಗೆ ವಿಜ್ಞಾಪನಾ ಪತ್ರಿಕೆಗಳನ್ನು ಪ್ಪಿಸಿದರು.

ಮದರಾಸಿನಿಂದ ಹಿಂದಿರುಗಿ ಬಂದಬಳಿಕ, ಬೆಂಗಳೂರು ಕೃಷ್ಣಾಪುರದಲ್ಲಿ ಒಂದು ದೊಡ್ಡ ಸೈನ್ಯಸಮಾರಂಭವು ನಡೆಯಿತು. ಈ ಕವಾಯಿತಿನಲ್ಲಿ ಶ್ರೀಮನ್ಮಹಾರಾಜರವರು ಏರಿದ್ದ ಅಶ್ವವು ಒಂದು ಹುತ್ತಕ್ಕೆ ಕಾಲಿಟ್ಟು ಮುಗ್ಗರಿಸಿ ಬಿದ್ದಿತು. ಮಹಾರಾಜರವರಿಗೆ ವಿಶೇಷವಾದ ಪೆಟ್ಟುತಾಕಿ ಪ್ರಜ್ಞೆತಪ್ಪುವಂತೆ ಮಾಡಿತು. ಪ್ರಜೆಗಳೆಲ್ಲರೂ ಬಹುಭೀತರಾದರು. ಆದರೆ ಭಗವತ್ಕಟಾಕ್ಷದಿಂದ ಒಂದೆರಡು ವಾರಗಳಲ್ಲಿ ಮಹಾರಾಜರಿಗೆ ಗುಣವಾಯಿತು.

ಶ್ರೀಚಾಮರಾಜೇಂದ್ರ ಒಡೆಯರವರು ಪ್ರಜಾಹಿತೈಕ ದೃಷ್ಟಿಗಳಾಗಿ ಬಹು ವಿಚಕ್ಷಣತೆಯಿಂದ ಮಾಡುತ್ತಿರುವ ನಿರ್ದುಷ್ಟವಾದ ರಾಜ್ಯಭಾರಕ್ರಮವನ್ನು ಕೇಳಿ, ಶ್ರೀಮದಿಂಡಿಯಾ ಚಕ್ರವರ್ತಿನಿಯವರು ತಮ್ಮ ಅಪಾರವಾದ ಅಭಿಮಾನವನ್ನು ಸೂಚಿಸುವ ಘನತರವಾದ ಜಿ. ಸಿ. ಎಸ್. ಐ., ಎಂಬ ಬಿರುದನ್ನು ಮಹಾರಾಜರವರಿಗೆ ಕಳುಹಿಸಿಕೊಟ್ಟರು. ಇದನ್ನು ಸ್ವೀಕರಿಸುವ ಉತ್ಸವವು ರಾಜಧಾನಿಯಲ್ಲಿಯೇ ನಡೆಯಬೇಕೆಂದು ಮಹಾರಾಜರವರ ಚಿತ್ತಕ್ಕೆ ತೋರಿದುದರಿಂದ ಅದಕ್ಕೆ ತಕ್ಕ ಏರ್ಪಾಡುಗಳೆಲ್ಲ ನಡೆದುವು. ೧೮೮೪ನೆಯ ಇಸವಿ ಮೇ ತಾರೀಖು ೨೦ರಲ್ಲಿ ಆಗ ಮೈಸೂರು ರೆಸಿಡೆಂಟರಾಗಿದ್ದ ಲಯಲ್ ಸಾಹೇಬರು ಶ್ರೀಮದಿಂಡಿಯಾ ಚಕ್ರವರ್ತಿನಿಯವರ

ಪ್ರತಿನಿಧಿಗಳಾಗಿ ಬಿರುದಿನೊಡನೆ ರಾಜಧಾನಿಗೆ ಬಂದು, ಬಹು ವಿಜೃಂಭಣೆಯಿಂದ ಉತ್ಸವವನ್ನು ನಡೆಯಿಸಿ ಆ ಬಿರುದನ್ನು ಮಹಾರಾಜರಿಗೆ ಒಪ್ಪಿಸಿದರು. ✓

ಈ ಉತ್ಸವವು ಮುಗಿದ ಕೆಲವು ದಿವಸಗಳಮೇಲೆ— ಎಂದರೆ, ಜೂನ್ ತಾರೀಖು ೪ರಲ್ಲಿ ಶ್ರೀಮನ್ಮಹಾರಾಜರವರಿಗೆ ಉತ್ತರೋತ್ತರಾಭಿವೃದ್ಧಿಗೂ ಉತ್ಸವಪರಂಪರೆಗೂ ಸಾಧನವಾದ ಪುತ್ರಸಂತಾನವಾಯಿತು. ಈ ಪುತ್ರೋತ್ಸವ ವೃತ್ತಾಂತವನ್ನು ಕೇಳಿ ಸಕಲ ಪ್ರಜೆಗಳೂ ಆನಂದಪರವಶರಾದರು. ಆಗ ಸಂತೋಷಸೂಚನಾರ್ಥವಾಗಿ ಕೋಟೆಯ ದಕ್ಷಿಣೋತ್ತರದ ಅಲಂಗಗಳಿಂದ ಕುಶಾಲ್ ಫಿರಂಗಿಗಳು ಹಾರಿಸಲ್ಪಟ್ಟುವು. ಸುಪ್ರೀತರಾದ ಪ್ರಜೆಗಳು ತಮ್ಮ ಭಾವಿಸಮ್ರಾಜರು ಹುಟ್ಟಿದರೆಂಬುದಾಗಿ ಸಂತೋಷ ಸಮುದ್ರದಲ್ಲಿ ಮುಳುಗಿ ತಂತಮ್ಮ ಪುರಗಳನ್ನು ತೋರಣಾದಿಗಳಿಂದ ಅಲಂಕರಿಸಿದರು. ರಾಜಧಾನಿಯ ಸಕಲ ವೀಧಿಗಳಲ್ಲೂ ಸಕ್ಕರೆ ಮುಂತಾದುವು ಹಂಚಲ್ಪಟ್ಟುವು. ದೇವಮಂದಿರಗಳಲ್ಲೆಲ್ಲ ಅಹೋರಾತ್ರಿಗಳಲ್ಲಿ ಪೂಜೋತ್ಸವಾದಿಗಳು ನಡೆದುವು. ಮಠಸತ್ರಾದಿಗಳಲ್ಲಿ ಅನೇಕ ಸಹಸ್ರಜನರು ಭೋಜನಾದಿಗಳಿಂದ ತೃಪ್ತಿಹೊಂದಿದರು. ಕಾರಾಗೃಹಗಳಲ್ಲಿ ಸೆರೆಯಲ್ಲಿದ್ದ ಕೆಲವರಿಗೆ ಬಂಧವಿಮೋಚನೆಯಾಯಿತು. ದೀನಾನಾಥರಿಗೆಲ್ಲ ಧನಕನಕ ವಸ್ತ್ರಾದಿಗಳು ಕೊಡಲ್ಪಟ್ಟುವು. ಹತ್ತನೆಯದಿನ ಶಿಶುವಿಗೆ ಶ್ರೀಕೃಷ್ಣರಾಜ ಒಡೆಯರೆಂಬುದಾಗಿ ನಾಮಕರಣವಾಯಿತು.

ಕಂದ ॥ ಸುರುಚಿರ ತಾರಣಸಂವ । ತ್ಸರ ಭಾಸ್ವಜ್ಜ್ಯೇಷ್ಠ ಶುಕ್ಲದೇಕಾದಶಿಯೊಳ್ ॥
ತರಣಿ ಸುವಾಸರಯುತದೊಳ್ । ವರಚಿತ್ರಾತುಲ ತೃತೀಯ ಚರಣದೊಳಾಗಳ್ ॥೧॥
ಮೆರೆದಿರೆ ಶುಭಗ್ರಹಂಗಳ್ । ನಿರುತಂ ತಾಮುಚ್ಚಮೆನಿಪ ತಾಣದೊಳೊಲವಿಂ ॥
ಪುರಜನ ಪರಿಜನ ದೇಶೀ । ಯರುಮೆಲ್ಲಂ ಹರ್ಷಜಲಧಿಯೊಳ್ತೇಂಕಾಡಲ್ ॥೨॥
ಚಾಮಮಹೀಪತಿ ಮಹಿಳೆ । ಪ್ರೇಮಾಸ್ಪದ ಮಹಿಷಿಯಮಳ ಗರ್ಭಾಂಬುಧಿಯೊಳ್ ॥
ಸೋಮನವೋಲ್ ಜನಿಯಿಸಿದಂ । ಕೋಮಲತನು ಸೂನು ಕುವಲಯಾಹ್ಲಾದಕರಂ ॥
ತಿಳಿದುವು ಕೂಪಾದಿ ಜಳಂ । ತೊಳಗಿದುದಾಕಾಶವೊಡನೆ ಭಾಸ್ಕರ ಬಿಂಬಂ ॥
ಬೆಳಗಿದುದು ತೀದಿತಾಗಳ್ । ಸುಳಿಗಾಳಿ ಪಳಚ್ಚನಾದುವೆಲ್ಲಾ ದೆಸೆಗಳ್ ॥೪॥
ಸುರಲೋಕದೈಸಿರಿಯನಾ । ಸುರಪತಿಯನುಭವಿಸಿ ಭುವಿಯ ನಾಳಕೈಳಸು ॥
ತ್ತಿರೆ ಯದುವಂಶದೊಳೊಗೆದಂ । ತಿರೆ ಮೆರೆವ ಸುತಂಗೆ ಮುದದೆ ಜನನೀಜನಕರ್ ॥
ಪೆಸರಿಟ್ಟರಸಮ ವೈಭವ । ದೆಸಕಂ ಪಸರಿಸಿರೆ ಕೃಷ್ಣರಾಜನೆನುತ್ತಂ ॥
ವಸುಧೆಯೊಳೀತಂ ವಿಬುಧ । ಪ್ರಸರಸ್ತುತನಾಗದಿರ್ಪನೇನನವರತಂ ॥೬॥
ಸುತಸೌಭಾಗ್ಯಮನಾನಾ । ಕ್ಷಿತಿಪತಿಗಳನೇಕರಾಂತ ನಿಯಮಾದಿಗಳಿಂ ॥
ದತಿಶಯಮಿವರ್ತ್ತ ಚಾಮನೃ । ಪತಿ ಕೃತವರ ಧರ್ಮದೇಳ್ಗೆ ಧರಣೀತಲದೊಳ್ ॥೭॥
ಗತಿಕರ್ಣಾಟಕೆನಿಸಿದೀ ಕ್ಷಿತಿ । ಪತಿ ತನಯಂಗೆ ಮುದಿತ ಜನನೀಜನಕ ॥
ಗರ್ತಿದೀರ್ಘಾಯುಮನತುಲಿತ । ಮತಿಯಂ ನಲಿದಿತ್ತು ಪೊರೆಗೆ ಗೌರೀರಮಣಂ ॥

ವೃತ್ತ ॥ ಸೋಮಂ ಸೋಮಕಲಾ ಕಿರೀಟನಮಲಾಮ್ನಾಯಾಂತ ದೀವ್ಯತ್ಪದಂ ।
ಭೀಮಂ ಭೀಮ ಸಹೋದ್ಧವಷ್ಟ ವರದಂ ಭೀಮಾಂಧಕ ಧ್ವಂಸಕಂ ॥
ರಾಮಂ ರಾಮ ಕೃತ ಸ್ತವಪ್ರ ಮುದಿತಂ ರಾಜೀವನಾಭಾನತಂ ।
ಭೂಮಂ ಭೂಮಹಿತಂಗೆ ಚಾಮವಿಭುಗೀಗಿಷ್ಟಾರ್ಥ ಸಾರ್ಥಂಗಳಂ ॥೯॥

P. R. K.

ಈ ರೀತಿಯಲ್ಲಿ, ಕೃಷ್ಣರಾಜೋದಯದಿಂದ ಮಹೀಶೂರ ಸಂಸ್ಥಾನದ ಪ್ರಜೆಗಳ ಆನಂದಾತಿಶಯವೆಂಬ ಧವಳ ಚಂದ್ರಿಕಾಲಹರಿಯು ಎಲ್ಲೆಲ್ಲೂ ವ್ಯಾಪಿಸುತ್ತಿರಲು, ಚಂದ್ರವಂಶ ದುಗ್ಧಾಂಬುಧಿಯು ಉಕ್ಕಿ, ಖ್ಯಾತಿಯೆಂಬ ತರಂಗಮಾಲೆಯು ಹೊಲ್ಪರಿದು ಸಮಸ್ತ ದಿಗ್ದೇಶಗಳಿಗೂ ಪ್ರಸರಿಸತೊಡಗಿತು. ಮಹಾರಾಜರವರಿಗೆ ಚಕ್ರವರ್ತಿನಿಯವರಿಂದ ಕಳುಹಿಸಲ್ಪಟ್ಟ ಬಿರುದನ್ನು ವಹಿಸಿದ ಸಂತೋಷವೂ, ವಂಶವರ್ಧಕವಾದ ಪುತ್ರರತ್ನ ವುದಯಿಸಿದ ಆನಂದವೂ ಏಕಕಾಲದಲ್ಲಿ ಸಂಭವಿಸಿದುದರಿಂದ, ತತ್ಸೂಚಕಗಳೂ ಕಾಲೋಚಿತಗಳೂ ರಾಜಗೌರವಾರ್ಹಗಳೂ ಆದ ಉತ್ಸವಗಳು ರಾಜಧಾನಿಯಲ್ಲಿ ಅನೇಕವಾಗಿ ನಡೆದುವು. ಈ ಯುತ್ಸವಕಾಲದಲ್ಲಿ ಶ್ರೀಮನ್ಮಹಾರಾಜರವರಿಗೆ ಶ್ರೇಯೋಭಿವೃದ್ಧಿಯನ್ನೂ ಆನಂದಾತಿಶಯವನ್ನೂ ಸೂಚಿಸುವ ಅನೇಕ ಅಭಿನಂದನ ಪತ್ರಿಕೆಗಳು ಬರಲು, ಮಹಾರಾಜರವರು ಅವಕ್ಕೆಲ್ಲ ಸದುತ್ತರಗಳನ್ನು ದಯೆಪಾಲಿಸಿದರು. ಅವುಗಳೊಳಗೆಲ್ಲ ಪೂರ್ವದಲ್ಲಿ ಈ ಸಂಸ್ಥಾನದ ಚೀಫ್ ಕಮಿಷನರಾಗಿದ್ದು ಆಗ ವಿಲಾಯತಿಯಲ್ಲಿ ವಾಸಮಾಡುತ್ತಿದ್ದ ಕರ್ನಲ್ ಮೀಡ್ ಸಾಹೇಬರಿಗೆ ಶ್ರೀಮನ್ಮಹಾರಾಜರವರು ಬರೆದ ಲೇಖನವು ತಿಳಿಸುವುದೇನೆಂದರೆ :—

ಬೆಂಗಳೂರು.
೨೬ನೆಯ ಜೂಲೈ ೧೮೮೪.

ಪ್ರಿಯ ಮಿತ್ರರಾದ ಸರ್ ರಿಚರ್ಡ್ ಮೀಡ್ ಸಾಹೇಬರವರೇ,

ನನಗೆ ಪುತ್ರೋತ್ಸವವಾದುದಕ್ಕಾಗಿಯೂ ಜಿ. ಸಿ. ಎಸ್. ಐ. ಎಂಬ ಬಿರುದು ಲಭಿಸಿದುದಕ್ಕಾಗಿಯೂ ತಾವು ಬರೆದ ಸಂತೋಷ ಸೂಚಕವಾದ ಸ್ನೇಹಪತ್ರಿಕೆಗಾಗಿ ನಿಮ್ಮನ್ನು ಮನಸಾರೆ ವಂದಿಸುತ್ತೇನೆ. ಈ ಎರಡು ಉತ್ಸವಗಳೂ ನನ್ನ ಸಂಸ್ಥಾನದಲ್ಲಿ ಅಮಂದಾನಂದಸಂದೋಹಕ್ಕೆ ಕಾರಣಭೂತಗಳಾಗಿರುವುವು.

ಇದುವರೆಗೂ ವರ್ಷಾಕಾಲವು ವಿಮುಖವಾಗಿರುವುದೆಂದು ತಿಳಿಸಲು ವಿಷಾದಿಸುತ್ತೇನೆ. ಆದರೆ ಕಾಲಸ್ಥಿತಿಯು ಉತ್ತಮವಾಗಬಹುದೆಂಬ ಚಿಹ್ನವಸವೂ ತೋರುತ್ತಿರುವುದು. ಹೈಕೋರ್ಟಿಗೆ ಸಂಬಂಧಿಸಿದ ಏರ್ಪಾಡುಗಳೆಲ್ಲ ಮುಗಿಯುತ್ತ ಬಂದುವು. ಇದು ಪ್ರಜೆಗಳ ಗೌರವಕ್ಕೆ ಪಾತ್ರವಾದ ನ್ಯಾಯಸ್ಥಾನವಾಗಿರುವುದೆಂದು ಎಣಿಸುತ್ತೇನೆ.

ನಮ್ಮ ಸಂಸ್ಥಾನದ ರೈಲ್ವೆಗಳು ಕ್ರಮೇಣ ವೃದ್ಧಿಯಲ್ಲಿ ಬರುತ್ತಿರುವುವೆಂದು ತಿಳಿಸಿದರೆ ತಾವು ಸಂತೋಷಪಡುವಿರಿ. ಇಲ್ಲಿಗೂ ಮೈಸೂರಿಗೂ ಮಾತ್ರವಲ್ಲದೆ, ಬೆಂಗಳೂರಿಂದ ತಿಪಟೂರ ಕಡೆಗೆ ಐವತ್ತು ಮೈಲುಗಳಿಗಿಂತ ಹೆಚ್ಚಾಗಿ ರೈಲ್ ರಸ್ತೆಯು ಮುಗಿಯುತ್ತ ಬಂದಿರುವುದು ; ಬರುವ ತಿಂಗಳಲ್ಲಿ ಪ್ರಯಾಣಕ್ಕೆ ತೆರೆಯಲ್ಪಡುವುದು. ಈ ರಸ್ತೆಯು ಕಳೆದ ಕ್ಷಾಮದಲ್ಲಿ ಪರಮ ಕಷ್ಟಕ್ಕೊಳಗಾಗಿದ್ದ ಪ್ರದೇಶದಲ್ಲಿ ಹಾದು ಹೋಗುವುದು.

ತಮ್ಮ ಪತ್ನಿಯವರಾದ ಲೇಡಿ ಮೀಡ್ ಅವರಿಗೆ ವಿಶ್ವಾಸಪೂರ್ವಕವಾದ ನನ್ನ ಧನ್ಯವಾದಗಳನ್ನು ದಯವಿಟ್ಟು ತಿಳಿಸಬೇಕು.

ತಮ್ಮ ಮಿತ್ರ,
ಚಾಮರಾಜೇಂದ್ರ ಒಡೆಯರ್.

ಲೋಕದಲ್ಲಿ "ದುಃಖಬೆರಸದ ಸುಖವದಾರಿಗೆ ಸಿಕ್ಕುವುದು ಹೇಳ್ಕಂದ" ಎಂಬ ಕವಿವಾಕ್ಯದಂತೆ, ನಿರಂತರವೂ ಸುಖವೊಂದೇ ಲಭಿಸುವುದು ಯಾರಿಗೂ ಸಾಧ್ಯವಲ್ಲ. ಇದರ ತತ್ವವನ್ನರಿತ ಮಹಾರಾಜರವರು ಉತ್ಸವದ ಮೇಲೆ ಉತ್ಸವವು ಒದವಿದರೂ, ಅದರಿಂದ ಪರವಶರಾಗದೆ, ಮನಸ್ಸಿಗೆ ದೈವೇಚ್ಛೆಯಿಂದ ಏನೋ ವಿಕಲ್ಪವು ತೋರಿ, ಭಗವಂತನನ್ನು ಸ್ಮರಿಸಿಕೊಂಡು, "ಎಲೈ ಜಗದೀಶ್ವರಾ, ನನಗೆ ಈಗ ನೀನು ಅಪರಿಮಿತಾನಂದವನ್ನು ಕೊಟ್ಟಿರುವೆ. ಆದರೆ ಮುಂದೆ ಇದಕ್ಕೆ ತಕ್ಕ ದುಃಖವನ್ನು ಮಾತ್ರ ಕೊಡಬೇಡ. ಒಂದುವೇಳೆ ಹಾಗೆ ಕೊಡಬೇಕೆಂಬುದಾಗಿ ನಿನ್ನ ದಿವ್ಯಚಿತ್ತದಲ್ಲಿದ್ದರೆ ಅದನ್ನು ತಾಳುವಷ್ಟು ಧೈರ್ಯವನ್ನೂ ನನಗೆ ಕರುಣಿಸುವುದು ನಿನ್ನ ಕೆಲಸವಾಗಿದೆ" ಎಂದು ತಮ್ಮ ಆಪ್ತಸಮಾಜದಲ್ಲಿ ಭಗವಂತನನ್ನು ಪ್ರಾರ್ಥಿಸಿದರು. ಇದಕ್ಕೆ ಸರಿಯಾಗಿ ಮಹಾರಾಜರ ಆನಂದವನ್ನು ಭಂಗಪಡಿಸುವ ವ್ಯಸನವು ಒಂದು ಪಕ್ಷದೊಳಗಾಗಿ ಪ್ರಾಪ್ತವಾಯಿತು. ಅವರ ಜ್ಯೇಷ್ಠ ಸೋದರರಾದ ಗೋಪಾಲರಾಜ ಅರಸಿನವರು ತಮ್ಮ ಮೂವತ್ತೆರಡನೆಯ ವಯಸ್ಸಿನಲ್ಲಿ ಇಹಲೋಕವನ್ನು ಬಿಟ್ಟರು. ಈ ರೀತಿಯಾದ ಭ್ರಾತೃವಿಯೋಗದಿಂದ ಮಹಾರಾಜರವರಿಗೆ ಅಪಾರವಾದ ದುಃಖವೊದವಿತು. ಆದರೂ ಧೀರೋದಾತ್ತರಾದುದರಿಂದ ಉಕ್ಕಿ ಬರುವ ದುಃಖವನ್ನು ತಡೆದು "ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ । ಚಕ್ರವತ್ಪರಿವರ್ತಂತೆ ದುಃಖಾನಿಚ ಸುಖಾನಿಚ ॥" ಎಂಬ ಆರ್ಯಾನುಭೂತ ವಾಕ್ಯವನ್ನು ನೆನೆದು ಧೈರ್ಯವನ್ನು ತಾಳಿ, ನಿತ್ಯಕೃತ್ಯ ನಿರತರಾಗಿ ನಡೆದುಕೊಳ್ಳತೊಡಗಿದರು. "ಎಡರಿನರ್ಲೆದೆಗುಂದದುಬ್ಬದೆ ಪೊಡವಿಯಧಿಪತಿಯಾಗೆ" ಎಂಬ ಕವಿವಾಕ್ಯವು ಇಂತಹ ಪುರುಷರಲ್ಲಲ್ಲವೇ ಅನ್ವಯಿಸುವುದು ?

ಬಳಿಕ ಅದೇ ಸಂವತ್ಸರದ ಕಾರ್ತಿಕ ಮಾಸದಲ್ಲಿ ಗಜಾರಣ್ಯ (ತಲಕಾಡು) ಕ್ಷೇತ್ರದಲ್ಲಿ ಪ್ರಸಿದ್ಧವಾದ ಪಂಚಲಿಂಗ ಯಾತ್ರೆಯು ಪ್ರಾಪ್ತವಾಗಲು, ಮಹಾರಾಜರು ಪರಿವಾರದೊಡನೆ ದಯಮಾಡಿ ಗೋಕರ್ಣೇಶ್ವರ, ಸೈಕತೇಶ್ವರ, ಪಾತಾಳೇಶ್ವರ, ವೈದ್ಯೇಶ್ವರ, ಮಲ್ಲಿಕಾರ್ಜುನೇಶ್ವರ ಎಂಬ ಪಂಚಲಿಂಗಗಳನ್ನೂ, ಇತರ ದೇವರುಗಳನ್ನೂ ದರ್ಶನ ಮಾಡಿಕೊಂಡು ಬರುತ್ತ, ಮಾರ್ಗಮಧ್ಯದಲ್ಲಿ ಮಧ್ವಾಚಾರ್ಯರ ಶಿಷ್ಯಪರಂಪರೆಯಲ್ಲಿ ಒಬ್ಬರಾದ ಸೋಸಲೆಯ ಶ್ರೀಮದ್ವಿದ್ಯಾ ಶ್ರೀನಿವಾಸತೀರ್ಥರೆಂಬ ಸ್ವಾಮಿಗಳಿಂದ ಸತ್ಕೃತರಾಗಿ ಪುರಾತನವೂ ಶಿಲ್ಪಕಲಾಚರಿತವೂ ಆದ ವಿಖ್ಯಾತವಾದ ಸೋಮನಾಥಪುರದ ದೇವಾಲಯವನ್ನು ನೋಡಿಕೊಂಡು ರಾಜಧಾನಿಗೆ ದಯಮಾಡಿಸಿದರು.

ಇಷ್ಟರಲ್ಲಿ, ಗತಿಸಿದ ಶ್ರೀಮಾನ್ ರಂಗಾಚಾರ್ಯರ ಸ್ಮರಣಾರ್ಥವಾಗಿ ಪುರಜನರೆಲ್ಲರೂ ಸೇರಿ, 'ಟೌನ್‌ಹಾಲ್' ಎಂಬ ಒಂದು ಸ್ಮಾರಕ ಮಂದಿರವನ್ನು ಕಟ್ಟಿಸಿದರು. ಆ ಕಟ್ಟಡವು ನಾಲ್ವಡಿ ಶ್ರೀಕೃಷ್ಣರಾಜ ಒಡೆಯರವರ ವರ್ಷವರ್ಧಂತೀ ಮಹೋತ್ಸವದ ದಿನ ಮುಗಿಯಿತು. ಪ್ರಜೆಗಳೆಲ್ಲರೂ ಮಹಾಸ್ವಾಮಿಯವರೇ ದಯಮಾಡಿ ಕಟ್ಟಡವನ್ನು

ಪ್ರಜೆಗಳ ಪ್ರಯೋಜನಾರ್ಥವಾಗಿ ಪ್ರತಿಷ್ಠಿಸಬೇಕೆಂದು ಕೇಳಿಕೊಂಡರು. ಮಹಾಸ್ವಾಮಿಯವರು ಪ್ರಜೆಗಳ ವಿಜ್ಞಾಪನೆಯನ್ನು ಲಾಲಿಸಿ, ಆ ದಿನ ಸಾಯಂಕಾಲ ತೋರಣಾದಿಗಳಿಂದಲಂಕೃತವಾಗಿದ್ದ ಆ ದಿವ್ಯಭವನಕ್ಕೆ ದಯಮಾಡಿಸಿ, ಪ್ರಾರಂಭೋತ್ಸವ ಕಾಲದಲ್ಲಿ ಅಲ್ಲಿ ನೆರೆದಿದ್ದವರನ್ನು ಕುರಿತು ಅಪ್ಪಣೆಕೊಡಿಸಿದುದೇನೆಂದರೆ :—

ಮಹಾಶಯರೇ, ಪ್ರಜೆಗಳ ಪ್ರಯೋಜನಾರ್ಥವಾಗಿ ಈ ಕಟ್ಟಡವನ್ನು ಪ್ರತಿಷ್ಠಿಸುವ ಉದ್ದೇಶದಿಂದ ನಮ್ಮನ್ನು ಬರಮಾಡಿದುದಕ್ಕಾಗಿ ನಾವು ಅತ್ಯಂತವಾಗಿ ಸಂತೋಷಿಸುವೆವು. ಇಂದಿಗೆ ಹದಿನೈದು ತಿಂಗಳುಗಳ ಕೆಳಗೆ ಕಲಸಕ್ಕೆ ಉಪಕ್ರಮವಾಗಿ ಇಷ್ಟು ಶೀಘ್ರದಲ್ಲಿ ಕಟ್ಟಿಸಿದ್ದವಾದ ಇಂತಹ ದಿವ್ಯಭವನವು, ಈ ಪಟ್ಟಣಕ್ಕೆ ಕೇವಲ ಗೌರವಪ್ರದಾಯಕವಾಗಿರುತ್ತದೆ. ಇಷ್ಟುಬೇಗನೆ ಇದರ ಕೆಲಸವು ಪೂರಯಿಸಿದುದನ್ನು ಪರ್ಯಾಲೋಚಿಸಿದರೆ, ಇದರ ಕಾರ್ಯನಿರ್ವಾಹಕರಾಗಿ ನೇಮಿಸಲ್ಪಟ್ಟಿದ್ದವರ ಸಾಹಸ ಪ್ರಯತ್ನಗಳು ಕೊಂಡಾಡತಕ್ಕವುಗಳಾಗಿವೆ. ಶ್ರೀಮಾನ್ ರಂಗಾಚಾರ್ಯರವರು ನಮ್ಮ ರಾಜ್ಯಕ್ಕೂ ಪ್ರಜೆಗಳಿಗೂ ಮಾಡಿದ ಸೌಕರ್ಯಗಳ ಜ್ಞಾಪನಾರ್ಥವಾಗಿಯೂ, ಅವರ ವಿಷಯದಲ್ಲಿ ಸಾಧಾರಣವಾಗಿ ಎಲ್ಲರೂ ಇಟ್ಟಿದ್ದ ಗೌರವ ಕೃತಜ್ಞತಾದಿ ಭಾವಗಳ ದ್ಯೋತನಾರ್ಥವಾಗಿಯೂ, ಅವರ ಮರಣಾನಂತರ ಅವರ ಹೆಸರನ್ನು ಈ ದೇಶದಲ್ಲಿ ಯಾವರೀತಿಯಿಂದಲಾದರೂ ಶಾಶ್ವತವಾಗಿರುವಂತೆ ಮಾಡಬೇಕೆಂಬ ಅಪ್ರೇರಿತವಾದ ತಾತ್ಪರ್ಯ ಪ್ರಯತ್ನಗಳು ಅನೇಕರಿಗೆ ಉಂಟಾಗಿ ಕಟ್ಟಿಸಿದ ಈ ಕಟ್ಟಡವು, ಪ್ರಜಾಪ್ರಯೋಜನಾರ್ಥವಾದ ಕಾರ್ಯಗಳಲ್ಲಿ ನಿರತರಾಗಿದ್ದು ದೇಹವನ್ನು ಬಿಟ್ಟವರ ಸ್ಮರಣೆಯನ್ನು ನಿರಂತರವೂ ಉಂಟುಮಾಡದಿರದು. ಅಲ್ಲದೆ, ಗತಿಸಿದ ಆ ಮಹನೀಯರ ಸ್ವಭಾವಿಕ ಗುಣವಾಗಿದ್ದ ಪ್ರಜಾ ಹಿತೈಕಚಿಂತನೆಯು, ಮುಂದೆ ಮಂತ್ರಿಪದವಿಯನ್ನು ಹೊಂದತಕ್ಕವರ ನೆನಪಿಗೆ ಪ್ರತಿದಿನವೂ ಬಂದು, ನಾವೂ ರಂಗಾಚಾರ್ಯರಂತೆ ನಡೆಯಬೇಕೆಂಬುದಾಗಿ ಅವರನ್ನು ಪ್ರೇರಿಸಲಿಕ್ಕೆ ಇದೊಂದು ಸಾಧನಸಂಪತ್ತಿಯಾಗಿರಬೇಕೆಂಬುದೇ ನಮ್ಮ ಕೋರಿಕೆಯಾಗಿರುತ್ತದೆ. ಈಗ ಓದಿದ ವರದಿಯಲ್ಲಿ ಕಂಡ ಕಾರ್ಯನಿರ್ವಾಹಕ ಮಂಡಲಿಯವರು ಬಹಳ ಕಷ್ಟಪಟ್ಟು ಕೆಲಸಮಾಡಿರುವುದರಿಂದ, ಮೈಸೂರು ನಿವಾಸಿಗಳೆಲ್ಲರೂ ಅವರಿಗೆ ಕೃತಜ್ಞರಾಗಿರಬೇಕು ಎಂದು ಅಪ್ಪಣೆ ಕೊಟ್ಟರು.

ಬಳಿಕ ಶ್ರೀಮನ್ಮಹಾರಾಜರವರು ರಂಗಾಚಾರ್ಯರ ಛಾಯಾಚಿತ್ರ ಪಟವನ್ನಿಟ್ಟಿದ್ದ ಸ್ಥಳಕ್ಕೆ ಹೋಗಿ, ಅದರ ಮೇಲಣ ಗವಸಣಿಗೆಯನ್ನು ತೆಗೆದರು. ಆಗ ಅಲ್ಲಿ ನೆರೆದಿದ್ದ ಪ್ರಜೆಗಳೆಲ್ಲರೂ, ರಂಗಾಚಾರ್ಯರನ್ನು ಮತ್ತೆ ನೋಡಿದಷ್ಟು ಸಂತೋಷಪಟ್ಟರು. ಒಡನೆಯೇ, ಶ್ರೀಚಾಮರಾಜೇಂದ್ರ ಕರ್ಣಾಟಕ ನಾಟಕ ಸಂಘದವರು, ದ್ರೌಪದೀ ಸ್ವಯಂವರವೆಂಬ ನಾಟಕವನ್ನು ಆಡಿದರು. ಮಹಾರಾಜರವರು ಸ್ವಲ್ಪ ಹೊತ್ತು ನಾಟಕವನ್ನು ಪರಾಮರ್ಶಿಸುತ್ತಿದ್ದು ಅರಮನೆಗೆ ದಯಮಾಡಿಸಿದರು.

ಒಂಬತ್ತನೆಯ ಅಧ್ಯಾಯ.

ಶ್ರೀಚಾಮರಾಜೇಂದ್ರ ಒಡೆಯರವರ ಸ್ವದೇಶ ಸಂಚಾರ.

ಶ್ರೀಚಾಮರಾಜೇಂದ್ರ ಒಡೆಯರವರು ರಾಜ್ಯಭಾರವನ್ನು ವಹಿಸಿದಮೇಲೆ ತಮ್ಮ ಪ್ರಜೆಗಳ ಆಭ್ಯಂತರವಾದ ಕಷ್ಟವನ್ನೂ ಅಧಿಕಾರಿಗಳ ಕಾರುಬಾರನ್ನೂ ಪ್ರತ್ಯಕ್ಷವಾಗಿ ತಿಳಿಯಬೇಕೆಂಬ ಅಭಿಲಾಷೆಯಿಂದಲೂ, ಪುರಾತನವಾದ ಕೋಟೆ ಕೊತ್ತಳಗಳನ್ನು ಪ್ರಸಿದ್ಧವಾದ ದುರ್ಗಗಳನ್ನೂ ನೋಡಬೇಕೆಂಬ ಕುತೂಹಲದಿಂದಲೂ, ೧೮೮೫ನೆಯ ಇಸವಿ ನವೆಂಬರ್ ೨೭ರಲ್ಲಿ ಸ್ವದೇಶ ಸಂಚಾರಾರ್ಥವಾಗಿ ಪ್ರಯಾಣವನ್ನು ಬೆಳೆಸಿದರು. ಆಗ ಸಂಗಡ ಅನೇಕ ಮಂದಿ ಯೂರೋಪಿಯನ್ ಅಧಿಕಾರಿಗಳೂ ದೇಶೀಯ ಅಧಿಕಾರಿಗಳೂ ರಾಜಬಂಧುಗಳೂ ಹೊರಟರು. ಸವಾರಿಯು ಎಡತೊರೆಯ ಮಾರ್ಗವಾಗಿ ಹೊರಟು, ಚುಂಚನಕಟ್ಟೆಯ ಬಳಿ ಕಾವೇರೀ ಜಲಪಾತವನ್ನು ನೋಡಿಕೊಂಡು, ಸಾಯಂಕಾಲದ ವೇಳೆಗೆ ಅರಕಲಗೂಡನ್ನು ಸೇರಿ ಆ ರಾತ್ರಿ ಅಲ್ಲಿದ್ದು, ಮಾರನೆಯ ದಿನ ಕಾಫಿಯ ವ್ಯವಸಾಯಕ್ಕೆ ತೌರೂರಾದ ಸಕಲೇಶಪುರವನ್ನು ತಲಪಿದರು. ಅಲ್ಲಿ ರೆಸಿಡೆಂಟ್ ಗಾರ್ಡನರ್‌ಸ್ಟನ್ ಅವರೂ, ಡೆಪ್ಯುಟಿ ಕಮಿಷನರ್ ಮೆಕ್ಕರ್‌ಜಾಕ್ ಸಾಹೇಬರೂ, ಟಿ. ಆನಂದರಾಯರೂ ಮಹಾರಾಜರನ್ನು ಇದಿರ್ಗೊಂಡರು. ೨೯ನೆಯ ತಾರೀಖಿನ ಬೆಳಗ್ಗೆ ಸಕಲರೂ ಮಂಜರಾಬಾದ್ ದುರ್ಗವನ್ನೂ ಹೇಮಾವತೀ ನದಿಗೆ ಕಟ್ಟಿರುವ ಕಬ್ಬಿಣದ ಸೇತುವೆಯನ್ನೂ ಪರಾಮರ್ಶಿಸಿಕೊಂಡು ಬಂದನಂತರ ಮಹಾರಾಜರವರು ಸಕಲೇಶಪುರದ ಮೊಕ್ಕಾಮಿನಲ್ಲಿ ದರ್ಬಾರನ್ನು ಮಾಡಿದರು. ಅಲ್ಲಿಯವರು ತೋರಿಸಿದ ರಾಜಭಕ್ತಿಯನ್ನೂ ಆಟಪಾಟಗಳನ್ನೂ ನೋಡಿ ಆನಂದಿಸಿ ಮೂಡಗೆರೆಗೆ ದಯಮಾಡಿಸಿದರು. ಅಲ್ಲಿಯ ರೈತರೂ ಅಧಿಕಾರಿಗಳೂ ಮಹಾರಾಜರವರನ್ನು ಬಹಳವಾಗಿ ಸತ್ಕರಿಸಿದರು.

ಬಳಿಕ ಮಹಾರಾಜರವರು ಕೊಟಗೆಹಾರನ್ನು ತಲಪಿ, ಅಲ್ಲಿ ತೂರಮೇಗುಡ್ಡವೆಂಬ ಪರ್ವತವನ್ನು ಹತ್ತಿ, ಬಿಸಲಿಗೆ ಕನ್ನಡಿಯಂತೆ ಹೊಳೆಯುತ್ತಿದ್ದ ಪಶ್ಚಿಮ ಸಮುದ್ರವನ್ನೂ ಕುದುರೆಯ ಮುಖವೆಂಬ ಬೆಟ್ಟವನ್ನೂ ಸುತ್ತಲೂ ಇರುವ ಗಿರಿದುರ್ಗಗಳನ್ನೂ ದೂರದರ್ಶಕಯಂತ್ರ ಸಹಾಯದಿಂದ ಕಂಡು ಆನಂದಿಸಿ ಬಾಳೆಹೊನ್ನೂರಿಗೆ ಬಿಜಯಮಾಡಿದರು. ಶ್ರೀರೇಣುಕಾಚಾರ್ಯರ ಮೂಲಪೀಠವೆನಿಸಿರುವ ಬಾಳೇಹಳ್ಳಿ ಮಠದ ಸ್ವಾಮಿಗಳು ಶ್ರೀಮನ್ಮಹಾರಾಜರವರನ್ನು ಮಠಕ್ಕೆ ಬರಮಾಡಿಕೊಂಡು ಬಹಳ ಮರ್ಯಾದೆ ಮಾಡಿದರು. ಅನಂತರ ಸವಾರಿ ಕೊಪ್ಪಕ್ಕೆ ದಯಮಾಡಿತು

ಅಲ್ಲಿ ಯೂರೋಪಿಯನ್ ಪ್ಲಾಂಟರುಗಳೂ ದೇಶೀಯ ಮಹಾಶಯರೂ ಭಕ್ತಿಪೂರ್ವಕವಾಗಿ ಒಪ್ಪಿಸಿದ ವಿಜ್ಞಾಪನಾ ಪತ್ರಿಕೆಗಳನ್ನು ಮಹಾರಾಜರವರು ಪ್ರೀತಿಪುರಸ್ಸರವಾಗಿ ಸ್ವೀಕರಿಸಿ ಶೃಂಗೇರಿಗೆ ಚಿತ್ತೈಸಿದರು. ಇಲ್ಲಿ ಹಿಂದೆ ವಿಭಾಂಡಕ ಮಹರ್ಷಿಯು ಆಶ್ರಮವನ್ನು ಕಲ್ಪಿಸಿಕೊಂಡು ತಪಸ್ಸು ಮಾಡುತ್ತಿದ್ದಾಗ, ಋಷಿಪುತ್ರನಾದ ಋಷ್ಯ



ಶ್ರೀಮನ್ಮಹಾರಾಜರವರು ತಮ್ಮ ಯೂರೋಪಿಯನ್ ಪರಿವಾರದೊಡನೆ ಪ್ರಯಾಣ ಮಾಡುವದು.

ಶೃಂಗನು ಜನಿಸಿದುದರಿಂದ, ಇದಕ್ಕೆ ಶೃಂಗಗಿರಿ ಅಥವಾ ಶೃಂಗೇರಿ ಎಂಬ ನಾಮವುಂಟಾಯಿತು. ಕ್ರಿ. ಶ. ಎಂಟನೆಯ ಶತಮಾನದಲ್ಲಿ ಷಣ್ಮತಸ್ಥಾಪನಾಚಾರ್ಯರಾದ ಶ್ರೀಶಂಕರಾಚಾರ್ಯರು, ಆಸೇತು ಹಿಮಾಚಲ ಪರ್ಯಂತ ಸಂಚರಿಸಿ, ಕಾಶ್ಮೀರ ದೇಶಕ್ಕೆ ಹೋಗಿ ಶಾರದಾವಿಗ್ರಹವನ್ನು ತಂದು ಈ ಶೃಂಗೇರಿಯಲ್ಲಿ ಸ್ಥಾಪನೆಮಾಡಿ

ತಾವೂ ಇಲ್ಲಿಯೇ ನಿಂತರು. ಆದುದರಿಂದಲೇ ಈ ಮಠಕ್ಕೆ ಷಣ್ಮತಸ್ಥಾಪನಾಚಾರ್ಯರ ಪೀಠವೆಂದು ಹೆಸರು.

ಶ್ರೀಮನ್ಮಹಾರಾಜರವರು ದಾರಿಯಲ್ಲಿ ಹರಿಹರಪುರದ ಬಳಿ ತುಂಗಾನದಿಯನ್ನು ದಾಟಿ, ಅಲ್ಲಿ ಬ್ರಾಹ್ಮಣರು ಕೊಟ್ಟ ವೇದಮಂತ್ರಾಕ್ಷತೆಗಳನ್ನು ಸ್ವೀಕರಿಸಿ, ಶೃಂಗೇರಿಯಿಂದ ಎರಡು ಮೈಲಿಗಳ ದೂರಕ್ಕೆ ಶ್ರೀಸ್ವಾಮಿಗಳು ಕಳುಹಿಸಿದ್ದ ಇಸ್ತಕಪಾಲಿನೊಡನೆ ಪುರಪ್ರವೇಶವನ್ನು ಮಾಡಿ, ದಾರಿಯಲ್ಲಿ ಕಟ್ಟಿಸಿದ್ದ ಚಪ್ಪರಗಳ ಸೊಬಗನ್ನು ವೀಕ್ಷಿಸುತ್ತ ಮಠದ ಬಳಿಗೆ ದಯಮಾಡಿ, ಅಲ್ಲಿ ತಮ್ಮ ಆಗಮನವನ್ನೇ ನಿರೀಕ್ಷಿಸುತ್ತಿದ್ದ ಶ್ರೀಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳನ್ನು ಕಂಡು ದಂಡಪ್ರಣಾಮವನ್ನು ಮಾಡಿದರು. ಆಗ ಶ್ರೀಸ್ವಾಮಿಗಳು ಆಶೀರ್ವಾದಮಾಡಿ, ಶ್ರೀಮಠಕ್ಕೆ ಪ್ರತ್ಯಕ್ಷವಾಗಿ ದಯಮಾಡಿದ ಮೈಸೂರು ಮಹಾರಾಜರುಗಳಲ್ಲಿ ಶ್ರೀಚಾಮರಾಜೇಂದ್ರ ಒಡೆಯರವರೇ ಮೊದಲಿನವರಾದುದರಿಂದ, ತಮಗೆ ಉಂಟಾದ ಪರಮಾನಂದವನ್ನು ವಾಚಾ ತಿಳಿಸಿ, ಮಹಾರಾಜರನ್ನು ಕುರಿತು, "ಚಾಮರಾಜ ಎಂಬ ಶಬ್ದದಲ್ಲಿ ಚ=ಚಕ್ರಿ+ಅಮರ=ಶಿವ+ಅಜ=ಬ್ರಹ್ಮ ಎಂಬ ತ್ರಿಮೂರ್ತಿಗಳ ನಾಮಧೇಯಗಳೂ ಅಡಗಿರುವುದರಿಂದ, ನೀವೂ ನಿಮ್ಮ ಪ್ರಜಾಪಾಲನಾ ಕರ್ತವ್ಯದಲ್ಲಿ ಆ ತ್ರಿಮೂರ್ತಿಗಳು ಹೇಳಿರುವ ವಿಧಿವಾಕ್ಯಗಳನ್ನು ತಪ್ಪದೆ ಮನಸ್ಸಿನಲ್ಲಿಟ್ಟು ನಡೆದುಕೊಳ್ಳುವಿರೆಂದು ಕೋರುವೆವು" ಎಂದು ತಿಳಿಸಿ, ರೆಸಿಡೆಂಟರು ಮೊದಲಾದವರೊಡನೆ ಕಾಲೋಚಿತವಾಗಿ ಸಂಭಾಷಣೆ ಮಾಡಿ, ಮಹಾರಾಜರವರು, ಅಲ್ಲಿರುವವರೆಗೂ ಮಠಕ್ಕೆ ಅತಿಥಿಗಳಾಗಿರಬೇಕೆಂದು ಅಪ್ಪಣೆ ಕೊಡಿಸಿದರು. ಆ ದಿನ ಸಾಯಂಕಾಲ ಶ್ರೀಮನ್ಮಹಾರಾಜರವರು ಪರಿವಾರ ಸಮೇತರಾಗಿ ಸ್ವಾಮಿಗಳ ಸಂದರ್ಶನಕ್ಕೂ ಶ್ರೀಶಾರದಾಂಬಾ ಪೂಜೆಗೂ ಮಠಕ್ಕೆ ದಯಮಾಡಿಸಿದರು. ಆಗ ಶ್ರೀಸ್ವಾಮಿಗಳವರು ಮಠದ ಬೊಕ್ಕಸದಲ್ಲಿದ್ದ ರತ್ನಖಚಿತವಾದ ಕಿರೀಟವನ್ನು ತರಿಸಿ, ಶ್ರೀ ಶಾರದಾಂಬಾ ಸನ್ನಿಧಿಯಲ್ಲಿ ತಮ್ಮ ಅಮೃತ ಹಸ್ತದಿಂದ ಶ್ರೀಚಾಮರಾಜೇಂದ್ರ ಮಹೀಪಾಲರಿಗೆ ಅದನ್ನು ಧಾರಣಮಾಡಿಸಿ ವಿದ್ಯಾರಣ್ಯ ಸ್ವಾಮಿಗಳಿಂದ ಸ್ಥಾಪಿತವಾದ ಕರ್ಣಾಟಕ ಸಿಂಹಾಸನಾಧಿಪತ್ಯವೂ ರತ್ನಕಿರೀಟಾಧಿಪತ್ಯವೂ ಮೈಸೂರು ಮಹಾರಾಜರುಗಳಿಗೆ ಆಚಂದ್ರಾರ್ಕವಾಗಿ ನಡೆದು ಬರಬೇಕೆಂದಿದ್ದ ತಮ್ಮ ಗುರುಗಳ ಸತ್ಯಸಂಕಲ್ಪವು ಈ ದಿನ ಪೂರ್ಣವಾಯಿತೆಂತಲೂ ಮಹಾಸ್ವಾಮಿಯವರು ಸಿಂಹಾಸನಾರೋಹಣ ಮಾಡತಕ್ಕ ಕಾಲದಲ್ಲಿ ಶ್ರೀರಾಮಚಂದ್ರನಂತೆ ಈ ರತ್ನ ಕಿರೀಟವನ್ನು ಧಾರಣಮಾಡಬೇಕೆಂತಲೂ ಅಪ್ಪಣೆ ಕೊಟ್ಟು ತೀರ್ಥ ಪ್ರಸಾದಗಳನ್ನು ಸಕಲರಿಗೂ ಸ್ವಹಸ್ತದಿಂದ ವಿನಿಯೋಗಮಾಡಿದರು.

ಮರುದಿನ ಸವಾರಿ ಅಲ್ಲಿಂದ ಆಗುಂಬೆಗೆ ದಯಮಾಡಿ ಅಲ್ಲಿಯ ವೈಚಿತ್ರ್ಯವನ್ನು ಪರಾಮರ್ಶಿಸಿ, ಆ ಅರಣ್ಯದಲ್ಲಿ ಬೇಟೆಯಾಡಿ ರೆಸಿಡೆಂಟರೊಡನೆ ತೀರ್ಥಹಳ್ಳಿಯನ್ನು ತಲುಪಿ, ಅಲ್ಲಿ ತಮ್ಮ ದರ್ಶನೈಕ ಲಾಲಸರಾಗಿ ಇದಿರುನೋಡುತ್ತಿದ್ದ ಪ್ರಜೆಗಳ ಯೋಗಕ್ಷೇಮವನ್ನು ವಿಚಾರಿಸಿ, ಆ ಸಾಯಂಕಾಲ ರಾಮೇಶ್ವರದೇವಾಲಯಕ್ಕೆ ವಿಜಯಮಾಡಿ,

ದೇವರದರ್ಶನವನ್ನು ಮಾಡಿಕೊಂಡು ಕವಿಲೇದುರ್ಗವನ್ನು ಸೇರಿದರು. ದುರ್ಗಾ ರೋಹಣವನ್ನು ಮಾಡುವ ಕಾಲದಲ್ಲಿ, ದೃಷ್ಟಿಗೋಚರವಾಗುವ ಪರ್ವತಶ್ರೇಣಿಗಳನ್ನೂ ಕಣಿವೆಗಳನ್ನೂ ದಟ್ಟವಾದ ಅರಣ್ಯಗಳನ್ನೂ ದೂರದಲ್ಲಿ ಥಳಥಳಿಸುತ್ತಿರುವ ಪಶ್ಚಿಮ ಸಮುದ್ರವನ್ನೂ ಕಂಡು, ಅಲ್ಲಿಂದ ಮುಂದಕ್ಕೆ ಹೋಗಿ ಕೃಷ್ಣಶಿಲಾ ಸ್ತಂಭರಾಜಿಗಳಿಂದ ರಂಜಿತವಾಗಿಯೂ. ಭಗ್ನಾವಶೇಷವಾಗಿಯೂ ಇರುವ ಪ್ರಖ್ಯಾತರಾದ ಪಾಳೆಯಗಾರರ ಅರಮನೆಯಲ್ಲಿಯ ಒಡ್ಡೋಲಗದ ಚಾವಡಿ, ದವಸಧಾನ್ಯಗಳ ಕಣಜ, ಎಣ್ಣೆತುಪ್ಪಗಳ ಬಾವಿ ಮೊದಲಾದುವನ್ನು ನೋಡಿ. ದುರ್ಗದಮೇಲೆಯೇ ಆ ರಾತ್ರಿಯನ್ನು ಕಳೆದು, ಮರುದಿನ ಅಶ್ವಾರೂಢರಾಗಿ ಅಲ್ಲಿಂದ ಹೊರಟು ಹುಲಿಕಲ್ಲನ್ನು ಸೇರಿ ಭೋಜನಾನಂತರ ದಲ್ಲಿ ಹೈದರ್‌ಘಾಟು, ಬಿದನೂರುಕೋಟೆ ಮುಂತಾದುವನ್ನು ನೋಡಿಕೊಂಡು ದೊಡ್ಡನಗರವನ್ನು ತಲಪಿದರು.

ಡಿಸೆಂಬರ್ ೧೬ನೆಯ ತಾರೀಖಿನ ದಿನ ಮಹಾರಾಜರವರು ದೊಡ್ಡ ನಗರದಿಂದ ಪ್ರಯಾಣಮಾಡಿ ನಗೋಡಿಯನ್ನು ಸೇರಿ, ಕೊಲ್ಲೂರು ಘಾಟಿನಲ್ಲಿರುವ ಮೂಕಾಂಬಿಕಾ ಅಮ್ಮನವರ ದರ್ಶನಮಾಡಿಕೊಂಡು. ಸುಬ್ರಹ್ಮಣ್ಯರಾಜ ಅರಸಿನವರನ್ನೂ ಬಕ್ಷೀ ಬಸಪ್ಪಾಜಿ ಅರಸಿನವರನ್ನೂ ಮೇಜರ್ ಮಾರ್ಟಿನ್ ಸಾಹೇಬರನ್ನೂ ಡಾಕ್ಟರ್ ಬೆಣಸನ್ ಸಾಹೇಬರನ್ನೂ ಸಂಗಡ ಕರೆದುಕೊಂಡು, ನೋಡುವವರ ಕಣ್ಣಿಗೆ ನಿರಾಶ್ರಯವಾದ ಅಂತರಿಕ್ಷಕ್ಕೆ ಕೊಟ್ಟ ಊರೆ ಕಂಭದಂತೆ ಕಾಣುತ್ತಿರುವ ಕೊಡಚಾದ್ರಿಯನ್ನು ಹತ್ತಿ, ಹುಲಿದೇವರ ದರ್ಶನಾನಂತರ ಸೂರ್ಯಕಿರಣಗಳಿಂದ ಚಕಚಕಾಯಮಾನವಾಗಿ ಹರಿಯುತ್ತಿರುವ ಗಿರಿನದಿಗಳ ರಮಣೀಯತೆಯನ್ನೂ ಅಡವಿಯ ಬೆಡಗನ್ನೂ ನೋಡುತ್ತ, ವನಕುಸುಮಗಳ ಪರಿಮಳವನ್ನಾಘ್ರಾಣಿಸುತ್ತ, ವಿಚಿತ್ರವಾದ ಪಕ್ಷಿಗಳ ಕಲಕಲ ಧ್ವನಿಯನ್ನು ಆಲಿಸುತ್ತ ಬಂದು, ತಮ್ಮ ಚತುರಂಗಬಲವನ್ನು ಸೇರಿ, ಶರಾವತೀ ನದಿಯಲ್ಲಿ ಸ್ನಾನಾಹ್ನಿಕಾದಿಗಳನ್ನು ನೆರವೇರಿಸಿ, ಭೋಜನಾನಂತರ ನದಿ ಯಲ್ಲಿ ತಮಗಾಗಿ ರಚಿಸಿದ್ದ ತೆಪ್ಪದ ಮೇಲೆ ಇಷ್ಟಮಿತ್ರರೊಡನೆ ಕುಳಿತು ಸಂಗೀತ ಗಾರರ ಗಾನವನ್ನು ಕೇಳುತ್ತ ವಿನೋದವಾಗಿ ವಿಹರಿಸುತ್ತಿದ್ದು, ಆ ರಾತ್ರಿಯನ್ನು ಕಳೆದು ಮರುದಿನ ರಥಾರೋಹಣ ಮಾಡಿ ಹೊರಟು, ವರದಾನದಿಯನ್ನು ದಾಟಿ ಸಾಗರವೆಂಬ ಊರನ್ನು ತಲಪಿದರು. ಮಂಗಳವಾದ್ಯಗಳೊಡನೆ ಮಹಾರಾಜರ ಆಗಮನವನ್ನೇ ನಿರೀಕ್ಷಿಸುತ್ತಿದ್ದ ಅಲ್ಲಿಯ ಅಧಿಕಾರಿಗಳೂ ರೈತರೂ ಮಹಾರಾಜರನ್ನು ಕಂಡೊಡನೆಯೇ ನಿಧಿಯನ್ನು ಕಂಡ ಬಡವರಂತೆ ಆನಂದಿಸಿ ಮಹಾಸ್ವಾಮಿಯವರನ್ನು ಬಹಳವಾಗಿ ಸ್ಕರಿಸಿದರು. ಮಹಾರಾಜರವರು ಅವರನ್ನು ಸವಿನುಡಿಗಳಿಂದ ಸನ್ಮಾನಿಸಿ ಆನೆಯ ಸೇರಿ, ಚತುರಂಗಬಲ ಸಹಿತರಾಗಿ ದೀಪಮಾಲೆಗಳಿಂದಲಂಕೃತವಾದ ಪಟ್ಟಣವನ್ನು ವೇಶಿಸಿದರು.

ಮಾರನೆಯ ದಿನ ಶ್ರೀಮನ್ಮಹಾರಾಜರವರು ಸೈನಿಕರ ಕಲಕಲಧ್ವನಿಯಿಂದ ರುಣೋದಯಕ್ಕೆ ಮುಂಚೆಯೇ ಎಚ್ಚರಗೊಂಡು, ಸುಪ್ರಭಾತವನ್ನು ಹೊಂದಿದ

ಬಳಿಕ, ಮುಂದಕ್ಕೆ ಪ್ರಯಾಣವನ್ನು ಬೆಳಸಿ, ಕೆಳದೀ ರಾಜರ ರಾಜಧಾನಿಯಾಗಿದ್ದ
ಇಕ್ಕೇರಿಗೆ ತಲಪಿ, ಅಲ್ಲಿ ಪಾಳುಬಿದ್ದಿರುವ ಅರಮನೆಯನ್ನು ನೋಡಿ, ಕೀರ್ತಿಶೇಷ
ನಾದ ಶಿವಪ್ಪನಾಯಕನ ಸಿಸ್ತಿನ ಕ್ರಮವನ್ನೂ ಅವನ ರಾಜ್ಯಭಾರ ವಿಚಕ್ಷಣತೆಯನ್ನೂ
ಕೇಳಿ ಶ್ಲಾಘಿಸುತ್ತ, ತಾವು ಬಾಲ್ಯದಲ್ಲಿ ನೋಡಿದ್ದ ಅತ್ಯದ್ಭುತವಾದ ಜೋಗಿನ ಜಲ
ಪಾತವನ್ನು ಕುರಿತು ಹೊರಡುವಾಗ, ದಾರಿಯಲ್ಲಿ ಬ್ರಿಟಿಷ್ ರಾಜ್ಯದ ಉತ್ತರ ಕನಡಾ
ಜಿಲ್ಲೆಯ ಕೊಂಕಣಿ ಜನರು ಮಾಡಿದ ಸತ್ಕಾರವನ್ನು ಕೈಕೊಂಡು, ಮುಂದುವರಿದು
ಜಲಪಾತವನ್ನೂ ಅದರ ಸುತ್ತುಮುತ್ತಲಿನ ಸೌಂದರ್ಯ ಸಂಪತ್ತನ್ನೂ ನೋಡಿ
ಕೊಂಡು ಸೊರಬವನ್ನು ತಲಪಿದರು. ಇಲ್ಲಿ ಶ್ರೀರಂಗನಾಥಸ್ವಾಮಿಯು ಸ್ವಯಂ
ವ್ಯಕ್ತನಾಗಿ ಉದ್ಭವಿಸಿರುವಾಗ, ದೇವೇಂದ್ರನ ಆಜ್ಞಾನುಸಾರವಾಗಿ ಕಾಮಧೇನುವು
ಬಂದು ದೇವರ ಶಿರಸ್ಸಿನ ಮೇಲೆ ಹಾಲು ಕರೆದುದರಿಂದ, ಈ ಗ್ರಾಮಕ್ಕೆ ಸುರಭಿಪುರ
ವೆಂಬುದಾಗಿ ಹೆಸರುಂಟಾಯಿತೆಂದೂ, ತದನಂತರ ಪರಶುರಾಮನು ಪುರಾತನವಾದ
ಈ ದೇವಾಲಯವನ್ನು ಜೀರ್ಣೋದ್ಧಾರಮಾಡಿ, ತನಗೆ ಪ್ರಾಪ್ತವಾಗಿದ್ದ ಮಾತೃಹತ್ಯಾ
ದೋಷವನ್ನು ಪರಿಹಾರಮಾಡಿಕೊಂಡನೆಂದೂ, ರಘುಕುಲಸಂಭವನಾದ ಶ್ರೀರಾಮ
ಚಂದ್ರನು ಸೀತಾಸಹಿತನಾಗಿ ಬಂದು, ಈ ಪಟ್ಟಣದ ಸಮೀಪದಲ್ಲಿರುವ ಕುಪ್ಪೀಗ್ರಾಮ
ದಲ್ಲಿ ದುರ್ದಾಂತನೂ ರಾವಣನ ಅನುಚರನೂ ಆದ ವೇತ್ರಪನೆಂಬ ರಾಕ್ಷಸನನ್ನು
ಸಂಹಾರಮಾಡಿ, ತನ್ನ ದನುರ್ದಂಡವನ್ನು ಇಲ್ಲಿರುವ ಕೂಪದಲ್ಲಿ ಕ್ಷಾಳನಮಾಡಿದುದ
ರಿಂದ, ಈ ಕೂಪದಿಂದ ಉತ್ಪನ್ನವಾಗಿ ಪ್ರವಹಿಸುವ ನದಿಗೆ ದಂಡಾವತಿಯೆಂದು ಹೆಸ
ರಾಯಿತೆಂದೂ ಪ್ರತೀತಿಯುಂಟು.

ಶ್ರೀಮನ್ಮಹಾರಾಜರವರು ಅಲ್ಲಿ ಭೋಜನಾದಿಗಳನ್ನು ನೆರವೇರಿಸಿ, ಸಾಯಂ
ಕಾಲ ಪುರಜನರಿಂದ ಪರಿವೃತರಾಗಿ ಚತುರಂಗಬಲದೊಡನೆ ಗಜಾರೋಹಣವನ್ನು
ಮಾಡಿ, ವಿಜಯತೋರಣಾದಿಗಳಿಂದಲಂಕೃತವಾದ ರಾಜವೀಥಿಯಲ್ಲಿ ಹೊರಟು,
ರಾಮೇಶ್ವರಸ್ವಾಮಿಯ ದೇವಾಲಯದ ಮುಂದುಗಡೆಯಲ್ಲಿದ್ದ ದರ್ಬಾರ್ ಮಂಟಪ
ವನ್ನೈದಿದರು. ಅಲ್ಲಿ ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ವಿಜ್ಞಾಪನಾ ಪತ್ರಿಕೆ
ಗಳು ಒಪ್ಪಿಸಲ್ಪಟ್ಟುವು. ಅವುಗಳನ್ನು ಕೈಕೊಂಡು ಗಣ್ಯರಾದವರಿಗೆಲ್ಲ ದರ್ಶನವನ್ನು
ಕೊಟ್ಟು, ಮರುದಿನ ಅಲ್ಲಿಂದ ಹೊರಟು, ಚಾಲುಕ್ಯರಾಜಧಾನಿಯಾದ ಬೆಳಗಾವಿಯ
ಭಗ್ನಾವಶೇಷಗಳನ್ನೆಲ್ಲ ಪರಾಮರ್ಶಿಸಿ ಶಿಕಾರಿಪುರವನ್ನು ಸೇರಿದರು. ಅಲ್ಲಿಯ ಪ್ರಜೆ
ಗಳು ಮಹಾರಾಜರವರನ್ನು ಕಂಡು ಆನಂದೋತ್ಫುಲ್ಲಹೃದಯಾರವಿಂದರಾಗಿ ತಮ್ಮ
ಅಸಾಧಾರಣವಾದ ರಾಜಭಕ್ತಿಯನ್ನು ಪ್ರಕಾಶಗೊಳಿಸಿದರು. ಮಧ್ಯಾಹ್ನದ ಮೇಲೆ
ಮಹಾರಾಜರವರು ದಿವಾನರನ್ನೂ ಡೆಪ್ಯುಟಿ ಕಮಿಷನರನ್ನೂ ಅಲ್ಲಿಯ ಶ್ಯಾನುಭೋಗ
ರನ್ನೂ ಸಂಗಡ ಕರೆದುಕೊಂಡು ಗ್ರಾಮನಕ್ಷೆಯನ್ನೂ ತರಿಸಿ ಕೆಲವು ರೈತರುಗಳ
ಜಮೀನುಗಳನ್ನೂ ಸರಕಾರಿ ಬಾಂದು ಗುಡ್ಡೆಗಳನ್ನೂ ಇತರವಾದ ಸನ್ನಿವೇಶಗಳನ್ನೂ
ಪರಾಮರ್ಶಿಸಿದರು. ಮರುದಿನ ಹುಲಿಯ ಶಿಕಾರಿಯನ್ನು ಮಾಡಿಕೊಂಡು, ಬಳಿಕ

ಶ್ರೀಮನ್ಮಹಾರಾಜರವರು ಸೌಲಂಗಕ್ಕೆ ದಯಮಾಡಿಸಿ, ಅಲ್ಲಿ ಹೊನ್ನಾಳಿ ತಾಲ್ಲೂಕಿನ ಪ್ರಜೆಗಳೂ ಮಹಾಜನರೂ ಸೇರಿ ಮಾಡಿದ ಸತ್ಕಾರವನ್ನು ಸ್ವೀಕರಿಸಿ, ಅಲ್ಲಿಂದ ಶಿವಮೊಗ್ಗೆಗೆ ಪ್ರಯಾಣ ಮಾಡಿದರು. ಅಲ್ಲಿಯು ಡೆಪ್ಯುಟಿ ಕಮಿಷನರೇ ಮುಂತಾದ ಅಧಿಕಾರಿಗಳೂ ಪ್ರಜೆಗಳೂ ಪುರವನ್ನು ತೋರಣಾದಿಗಳಿಂದಲಂಕರಿಸಿ, ರಾಜಾಗಮನವನ್ನು ಪ್ರತೀಕ್ಷಿಸುತ್ತ ನಿಂತಿರುವಾಗ, ಶ್ರೀಮನ್ಮಹಾರಾಜರವರು ನಾಲ್ಕು ಕುದುರೆಗಳನ್ನು ಕಟ್ಟಿದ್ದ ದಿವ್ಯರಥದಲ್ಲಿ ಮಂತ್ರಿ ಸೇನಾಪತಿಗಳಿಂದ ಸಹಿತರಾಗಿ ಚಿತ್ತೈಸಲು,



ಶಿವಮೊಗ್ಗೆಯಲ್ಲಿ ನಡೆದ ಉತ್ಸವ.

ಏಕಕಾಲದಲ್ಲಿ ಮಂಗಳವಾದ್ಯಗಳು ಮೊಳಗಿದುವು, ಪುರನಿವಾಸಿಗಳು ಹೂ ಮಳೆಯನ್ನು ಕರೆದರು, ವಿದ್ಯಾರ್ಥಿಗಳು ಜಯಜಯಧ್ವನಿಯನ್ನು ಮಾಡಿದರು, ವೈದಿಕರು ಫಲ ಮಂತ್ರಾಕ್ಷತೆಗಳನ್ನು ಒಪ್ಪಿಸಿದರು, ಮುತ್ತೈದೆಯರು ಆರತಿಯನ್ನು ಬೆಳಗಿದರು. ಮಹಾರಾಜರು ಅಲ್ಲಿ ನೆರೆದಿದ್ದ ಪೌರಜನರು ಒಪ್ಪಿಸಿದ ವಿಜ್ಞಾಪನಾ ಪತ್ರಗಳನ್ನು ಅಂಗೀಕರಿಸಿ, ಉದ್ಯೋಗಸ್ಥರೇ ಮೊದಲಾದವರನ್ನು ಮಾತನಾಡಿಸಿ ತಮ್ಮ ಬೀಡಾರವನ್ನು ಸೇರಿದರು.

ಬಳಿಕ ಶ್ರೀಮನ್ಮಹಾರಾಜರವರು ಭೋಜನ ತೀರಿಸಿಕೊಂಡು, ತಮ್ಮ ಆಗಮನ ಜ್ಞಾಪನಾರ್ಥವಾಗಿ ಮಾಡಿದ್ದ ಒಂದು ಪುಷ್ಪೋದ್ಯಾನಕ್ಕೆ ದಯಮಾಡಿ ಪ್ರಜೆಗಳ

ಪ್ರಾರ್ಥನಾನುಸಾರವಾಗಿ ಅದಕ್ಕೆ "ಮಹಾರಾಜಾಸ್ ಪಾರ್ಕ್" ಎಂಬ ಅಂಕಿತವನ್ನಿಟ್ಟು ಅಲ್ಲಿಂದ ಕಾಲೇಜ್ (ಪ್ರೌಢ ವಿದ್ಯಾಭ್ಯಾಸದ) ಕಟ್ಟಡದಲ್ಲಿ ನೆರೆದಿದ್ದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಹಂಚಿ, ರೋಮನ್ ಕ್ಯಾಥಲಿಕ್ ಪಾದ್ರಿಗಳ ದೇವಾಲಯ ಅನಾಥಾಲಯ ಮುಂತಾದುವುಗಳನ್ನು ನೋಡಿಕೊಂಡು, ತಮ್ಮಲ್ಲಿ ಸಕಲ ಪ್ರಜೆಗಳಿಗೂ ಇರುವ ರಾಜಭಕ್ತಿ ವಿಶ್ವಾಸಾದಿಗಳನ್ನು ಪ್ರತ್ಯಕ್ಷವಾಗಿ ಕಂಡು ಸಂತೃಪ್ತರಾದರು. ಆ ಸಾಯಂಕಾಲ ದರ್ಬಾರಿನಲ್ಲಿ ಅಲ್ಲಿಯ ಸಕಲಾಧಿಕಾರಿಗಳೂ, ವರ್ತಕರೂ, ನಗರ ಸಭೆಯವರೂ, ಶ್ರೀಮನ್ಮಹಾರಾಜರವರ ಗುಣಾತಿಶಯಗಳನ್ನೂ ಪ್ರಜಾಹಿತೈಷಿತೆಯನ್ನೂ, ವಿದ್ಯಾಪಕ್ಷಪಾತವನ್ನೂ ಸರ್ವತ್ರ ಸಮಭಾವವನ್ನೂ ನಿರ್ದೇಶಿಸಿ ಅನೇಕ ವಿಜ್ಞಾಪನಾ ಪತ್ರಿಕೆಗಳನ್ನು ಒಪ್ಪಿಸಲು. ಅವುಗಳನ್ನು ಸ್ವೀಕರಿಸಿ ಪ್ರತ್ಯುತ್ತರವನ್ನು ಅಪ್ಪಣೆ ಕೊಡಿಸಿದ ಬಳಿಕ, ಅವರಿಗೆಲ್ಲ ಸನ್ಮಾನಮಾಡಿ ಕಳುಹಿಸಿಕೊಟ್ಟು, ಆ ರಾತ್ರಿ ಭೋಜನಾನಂತರ ಶ್ರೀಮನ್ಮಹಾರಾಜರವರು ರಾಜಕೀಯವಾದ ತಮ್ಮ ಅಲಂಕಾರಗಳನ್ನು ದರಿಸಿ, ತಮ್ಮ ಸಹೋದರರು, ಶ್ಯಾಲಕರು ಮುಂತಾದ ರಾಜಬಂಧುಗಳೊಡನೆಯೂ, ರೆಸಿಡೆಂಟರು ದಿವಾನರು ಮುಂತಾದ ಅಧಿಕಾರಿಗಳೊಡನೆಯೂ ಆನೆಗಳನ್ನೇರಿ ಉತ್ಸವ ಹೊರಟು, ಸಹಸ್ರೋಪ ಸಹಸ್ರವಾಗಿ ಬಂದು ಸೇರಿದ್ದ ಪ್ರಜೆಗಳನ್ನು ಆನಂದ ತುಂದಿಲ ಸ್ವಾಂತರನ್ನಾಗಿ ಮಾಡಿದರು.

ಈ ರೀತಿಯಲ್ಲಿ ಶ್ರೀಮನ್ಮಹಾರಾಜರವರು ಶಿವಮೊಗ್ಗೆಯ ಪ್ರಜೆಗಳಿಗೆ ಉತ್ಸವ ಪರಂಪರೆಯನ್ನಿತ್ತು ನಾಲ್ಕನೆಯ ದಿವಸ ಅರುಣೋದಯಕ್ಕೆ ಸರಿಯಾಗಿ ಶಿವಮೊಗ್ಗೆಯನ್ನು ಬಿಟ್ಟು, ತೆಂಗಿನಮರ ತಾಳೆಯಮರಗಳ ನೆರಳಿನಿಂದ ತಂಪಾಗಿಯೂ ನೋಟಕ್ಕೆ ರಮಣೀಯವಾಗಿಯೂ ಇದ್ದ ಗುಡ್ಡಗಳನ್ನೂ ಅಡವಿಗಳನ್ನೂ ಹಾದು ತರೀಕೆರೆಯನ್ನು ಸೇರಿದರು. ಭೋಜನಾನಂತರ ಮಹಾರಾಜರವರು, ದಿವಾನರು ರೆಸಿಡೆಂಟರು ಮೊದಲಾದ ಪರಿವಾರದೊಡನೆ ಪಟ್ಟಣವನ್ನು ನೋಡುವುದಕ್ಕೆ ದಯಮಾಡಿಸಲು, ಒಬ್ಬಾನೊಬ್ಬ ಮುಸಲ್ಮಾನ ಸಾಹುಕಾರನು ಮಹಾರಾಜರನ್ನು ಒಂದು ಮಸೀದಿಗೆ ಕರೆದುಕೊಂಡು ಹೋಗಿ ಬಹಳವಾಗಿ ಸತ್ಕರಿಸಿದನು. ಮಸೀದಿಯ ಬಾಗಿಲಲ್ಲಿ ಕಟ್ಟಿದ್ದ ದಿವ್ಯವಾದ ಭುವನೇಶ್ವರೀ ಮಂಟಪವನ್ನು ಪ್ರವೇಶಮಾಡುವಾಗ, ಮಹಾರಾಜರವರ ಮೇಲೆ ಚಿನ್ನ ಬೆಳ್ಳಿಯಿಂದ ಮಾಡಿದ್ದ ಹೂಗಳನ್ನು ಎರಚಿದರು. ಮಹಾರಾಜರು ಪೀಠಾಸೀನರಾದಮೇಲೆ ಮುಸಲ್ಮಾನ ಪ್ರಜೆಗಳು ನಜರು ಮುಜರೆಗಳನ್ನು ಮಾಡಿದರು. ಬಳಿಕ ಅಲ್ಲಿಂದ ಕಲ್ಹತ್ತಿಗಿರಿಯನ್ನು ಕುರಿತು ತೆರಳಿ ಪರ್ವತಾರೋಹಣವನ್ನು ಮಾಡಿ, ಅಯ್ಯನಕೆರೆ ಮದಗಕೆರೆಗಳ ತೆರೆಗಳಿಂದ ತೊಳೆಯಲ್ಪಡುವಂತಿರುವ ಬಾಬಾಬುಡನ್ ಗಿರಿಯ ತಪ್ಪಲುಗಳನ್ನೂ, ಕುದುರೆಯ ಗೊರಸಿನ ಹಾಗೆ ಕಾಣುತ್ತ ಗಿರಿನದಿಗಳ ಜಲಸಮೃದ್ಧಿಯಿಂದಲೂ ಸಸ್ಯಕೋಟಿಯಿಂದಲೂ ಕಂಗೊಳಿಸುತ್ತಿರುವ ಜಾಗರಿ ಕಣಿವೆಯನ್ನೂ, ಕೊಡಚಾದ್ರಿ ಪರ್ವತವನ್ನೂ ಕಂಡು ಆಶ್ಚರ್ಯಾನ್ವಿತರಾಗಿ ಗಿರಿಯನ್ನಿಳಿದು ಅಶ್ವವನ್ನೇರಿ ಆಕಾಶದಲ್ಲಿ ನೀಲಮೇಘದ ಹಾಗೆ ಕಾಣಿಸುತ್ತಿದ್ದ

ಮುಳ್ಳಯ್ಯನ ಗಿರಿ, ಸೀತಲಯ್ಯನ ಗಿರಿ ಮುಂತಾದ ಶಿಖರಪಙ್ಕ್ತಿಗಳನ್ನು ನೋಡುತ್ತ ಬೀಡಾರಕ್ಕೆ ದಯೆಮಾಡಿಸಿದರು.

ಬಳಿಕ ಪ್ರಬಲಪ್ರಭಂಜನಹತಿಯಿಂದ ಸರ್ವದಾ ಕ್ಷುಬಿತವಾಗಿರುವ ಗಾಳಿಯ ಕೆರೆಗೆ ಪ್ರಯಾಣಮಾಡಿ, ಸರಿಯಾದ ಮಾರ್ಗವಿಲ್ಲದುದರಿಂದ ಹನ್ನೆರಡು ಮೈಲುಗಳ ದೂರ ಪಾದಚಾರಿಗಳಾಗಿಯೇ ಬಂದರು. ಅಲ್ಲಿಯ ದೇಶೀಯ ಪ್ಲಾಂಟರುಗಳು (ಕಾಫಿ ಮೊದಲಾದುವುಗಳನ್ನು ಬೆಳೆಯುವ ಆರಂಭಗಾರರು) ಶ್ರೀಮನ್ಮಹಾರಾಜರವರನ್ನು ಕೇವಲ ಭಕ್ತಿಯಿಂದ ನಮಸ್ಕರಿಸಿ, ಚಿನ್ನಬೆಳ್ಳಿಗಳಿಂದ ರಚಿಸಿದ್ದ ಒಂದು ಕಾಫಿಯ ಗಿಡವನ್ನು ಮಹಾರಾಜರವರಿಗೆ ಕಾಣಿಕೆಯಾಗಿ ಒಪ್ಪಿಸಿದರು. ಆ ಗಿಡದ ಪುಷ್ಪಗಳು ಮುಕ್ತಾಮಯವಾಗಿಯೂ ಫಲಗಳು ರತ್ನಮಯವಾಗಿಯೂ ಇದ್ದುವು. ಮಹಾಸ್ವಾಮಿಯವರು ಅದನ್ನು ಸ್ವೀಕರಿಸಿ, ತತ್ಕಾಲೋಚಿತವಾದ ಉಪಚಾರೋಕ್ತಿಗಳನ್ನು ಅಪ್ಪಣೆಕೊಡಿಸಿ ಅಲ್ಲಿಂದ ಹೊರಟು, ಪಾಂಡವರ ಹಳ್ಳಿಯೆಂಬ ಗ್ರಾಮದ ಹತ್ತಿರ ಗದಾತೀರ್ಥವೆಂದು ಖ್ಯಾತಿಗೊಂಡ ಒಂದು ಮನೋಹರವಾದ ಸರೋವರವನ್ನು ಕಂಡು ಅಲ್ಲಿ ಪಾಳೆಯವನ್ನು ಬಿಟ್ಟರು. ಇದು ಹಿಂದೆ ಲಕ್ಷಾಗೃಹ ದಹನಕಾಲದಲ್ಲಿ ಪಾಂಡವರು ಇಳಿದುಕೊಂಡಿದ್ದ ಘಟೋತ್ಕಚ ವನವಿದೆಂತಲೂ, ಇಲ್ಲಿರುವ ಸರೋವರವನ್ನು ಬಾಯಾರಿಕೆಯಿಂದ ಬಳಲಿದ ಭೀಮನು ತನ್ನ ಗದೆಯಿಂದ ತೋಡಿದನೆಂತಲೂ, ಇಲ್ಲಿಟ್ಟಿರುವ ಒರಳು ಒನಕೆ ಮುಂತಾದುವುಗಳನ್ನು ಪಾಂಡವ ಮಾತೆಯಾದ ಕುಂತೀದೇವಿಯು ಉಪಯೋಗಿಸುತ್ತಿದ್ದಳೆಂತಲೂ, ಈ ಗುಡ್ಡಕ್ಕೆ ಸೇರಿದ ಹುಲಿಗೊಂದಿ ಎಂಬ ಸ್ಥಳದಲ್ಲಿ ಪಾಂಡವರು ಪಂಚಲಿಂಗಗಳನ್ನು ಪ್ರತಿಷ್ಠೆ ಮಾಡಿದರೆಂತಲೂ, ಆದುದರಿಂದಲೇ ಈ ಲಿಂಗಗಳನ್ನು ಈಗಲೂ ಧರ್ಮೇಶ್ವರ, ಭೀಮೇಶ್ವರ. ಫಲ್ಗುಣೇಶ್ವರ, ನಕುಲೇಶ್ವರ, ಪೇವೇಶ್ವರ ಎಂದು ಕರೆಯುವರೆಂತಲೂ ಪ್ರತೀತಿಯುಂಟು.

ಇಲ್ಲಿ ಶ್ರೀಮನ್ಮಹಾರಾಜರವರು ಸ್ನಾನಾಹ್ನಿಕಾದಿಗಳನ್ನು ತೀರಿಸಿಕೊಂಡು, ಸ್ವಲ್ಪ ವಿಶ್ರಾಂತಿಪಡೆದು ಚಂದ್ರದ್ರೋಣಪರ್ವತವನ್ನು ಹತ್ತಿದರು. ಆ ಪರ್ವತವು ವಿಜನವಾಗಿಯೂ ವಿಶಾಲವಾಗಿಯೂ ಪರಿಶುದ್ಧವಾದ ದತ್ತಾತ್ರೇಯ ಪೀಠದಿಂದಲೂ, ವೇದಾವತೀ ನದಿಯ ಪ್ರವಾಹದಿಂದಲೂ, ಮೇಘಾವಲಂಬಿಗಳಾದ ವೃಕ್ಷರಾಜಿಗಳಿಂದಲೂ ಕೂಡಿ ಮನೋಹರವಾಗಿಯೂ ಇದ್ದಿತು. ಅಲ್ಲಿಯ ಖಾಜಾ ಬಹದ್ದೂರ್ ಗೌಸ್ ಷೇಕ್ ಖಾದ್ರಿಯವರು ಮಹಾರಾಜರವರನ್ನು ಇದಿರ್ಗೊಂಡು, ನಾರಾಯಣಾಂಶಸಂಭೂತರಾದ ಗುರುದತ್ತಾತ್ರೇಯರ ಪೀಠವನ್ನೂ ಗುಹೆಯನ್ನೂ ತೋರಿಸಿ, ಚಂದ್ರದ್ರೋಣವು ಬಾಬಾಬುಡನ್ ಬೆಟ್ಟವೆಂಬುದಾಗಿ ಖ್ಯಾತಿಪಡೆದ ರೀತಿಯನ್ನು ತಿಳಿಸಿ, ಅಲ್ಲಿಯ ವಿಶೇಷಗಳನ್ನೆಲ್ಲ ತೋರಿಸಿದರು. ಮಹಾರಾಜರವರು ಅಲ್ಲಿ ವಿಶೇಷವಾದ ಪೂಜೋತ್ಸವಗಳನ್ನು ನಡೆಯಿಸಿ, ಶಾಲು ಮುಂತಾದ ಉಡುಗೊರೆಗಳನ್ನು ಖಾದ್ರಿಯವರಿಗೆ ಬಹುಮಾನಮಾಡಿ, ಅಲ್ಲಿಂದ ಮುಂಬರಿದು, ಸಂಧ್ಯಾವಳಿಯ ಸೊಂಪಿನಲ್ಲಿ ಕಾಣುವ ಮಾರ್ಗದ ನೆರೆಹೊರೆಯ ಪ್ರಕೃತಿ ಸೌಂದರ್ಯವನ್ನು ಅನುಭವಿಸುತ್ತ ಚಿಕ್ಕ

ಮಗಳೂರನ್ನು ತಲುಪಿದರು. ಅಲ್ಲಿಯ ಡೆಪ್ಯುಟಿ ಕಮಿಷನರ್ ಮೆಕ್ಲರ್‌ಜಾನ್ ಸಾಹೇಬರೇ ಮುಂತಾದವರು ಮಹಾರಾಜರಿಗೆ ಸ್ವಾಗತವನ್ನು ಬಯಸಿ, ದೀಪಾವಳಿಯಿಂದ ಪ್ರಕಾಶಮಾನವಾದ ಪಟ್ಟಣವನ್ನು ಪ್ರವೇಶಮಾಡಿಸಿ ಬೀಡಾರದಲ್ಲಿ ಇಳಿಸಿದರು.

ಮರುದಿನ ಶ್ರೀಮನ್ಮಹಾರಾಜರವರು ದಿವಾನರೇ ಮುಂತಾದ ಪರಿವಾರದೊಡನೆ ಹಿರೀಮಗಳೂರನ್ನು ನೋಡುವುದಕ್ಕೆ ದಯೆಮಾಡಿಸಿದರು. ಹಿಂದೆ ಸಕ್ಕರೆಯ ಪಟ್ಟಣದ ರಾಜನಾದ ರುಕ್ಮಾಂಗದನು ತನ್ನ ಇಬ್ಬರು ಹೆಣ್ಣುಮಕ್ಕಳಿಗೆ ಬಳಿವಳಿಯಾಗಿ ಕೊಟ್ಟುದುದರಿಂದ, ಈ ಊರುಗಳನ್ನು ಹಿರೀಮಗಳೂರು ಚಿಕ್ಕಮಗಳೂರು ಎಂದು

ಹುಲೀ ಷಿಕಾರಿ.

ಕರೆಯುತ್ತಾರೆ. ಯುಗಾಂತರದಲ್ಲಿ ಪರೀಕ್ಷಿದ್ರಾಜನ ಮಗನಾದ ಜನಮೇಜಯರಾಯನು ಇಲ್ಲಿ ಸರ್ಪಯಾಗವನ್ನು ಮಾಡಿದನೆಂಬುದಾಗಿ ಶಿಲಾಶಾಸನವಿರುತ್ತದೆ. ಶ್ರೀಮನ್ಮಹಾರಾಜರವರು ಶ್ರೀರಾಮದೇವರ ದರ್ಶನವನ್ನು ಮಾಡಿಕೊಂಡು ಪುನ ಚಿಕ್ಕಮಗಳೂರಿಗೆ ದಯೆಮಾಡಿಸಿದರು. ಅಲ್ಲಿಯ ಪ್ರಜೆಗಳು ಮಹಾರಾಜರವರನ್ನು ನಾನಾ ವಿನೋದಗಳಿಂದಲೂ ಆಟಪಾಟಗಳಿಂದಲೂ ಸತ್ಕರಿಸಿದರು. ಬಳಿಕ ದಕ್ಷಿಣ ವಾರಾಣಸಿಯೆಂದು ಮತ್ತು ಪುರಾಣಗಳಲ್ಲಿ ಹೇಳಿರುವ ವೇಲಾಪುರವೆಂದು ಕರೆಯುತ್ತಿದ್ದ ಬೇಲೂರನ್ನು ತಲುಪಿದರು. ಇಲ್ಲಿ ಚಾಲುಕ್ಯರಾಜನಾದ ವಿಷ್ಣುವರ್ಧನನು ಕಟ್ಟಿಸಿದ ಚನ್ನಕೇಶವಸ್ವಾಮಿಯ ದೇವಾಲಯವನ್ನು ಶ್ರೀಮನ್ಮಹಾರಾಜರವರು ಪ್ರವೇಶಿಸಿ ಕೇಶವಸ್ವಾಮಿಯ ದರ್ಶನಮಾಡಿ, ಆ ದೇವಾಲಯದ ಶಿಲ್ಪಕಲಾಕೌಶಲವನ್ನು ಕಂಡ

ಭಿನಂದಿಸಿ, ಪೂರ್ವದಲ್ಲಿ ಹೊಯ್ಸಳ ಬಲ್ಲಾಳರಿಗೆ ರಾಜಧಾನಿಯಾಗಿದ್ದ ಹಳೇಬೀಡನ್ನು ಕುರಿತು ತೆರಳಿದರು. ಅಲ್ಲಿ ಶ್ರೀಮನ್ಮಹಾರಾಜರವರಿಗೆ ಬಿಡಾರವನ್ನು ದೇವಾಲಯದ ಪ್ರಾಕಾರದಲ್ಲಿಯೇ ಮಾಡಿದ್ದರು. ಶ್ರೀಮನ್ಮಹಾರಾಜರವರು ಕೇವಲ ಕುತೂಹಲಭರಿತರಾಗಿ ಹೊಯಿಸಳೇಶ್ವರಾಲಯವನ್ನೂ ಕೈಟಭೇಶ್ವರಾಲಯವನ್ನೂ ನೋಡಿ, ಈ ದೇವಾಲಯಗಳನ್ನು ಕಟ್ಟಿದವನ ಕಲಾಕೌಶಲವನ್ನೂ ಸುಂದರವಾದ ಶಿಲಾಪ್ರತಿಮೆಗಳನ್ನು ನಿರ್ಮಿಸಿದವನ ನೈಪುಣ್ಯವನ್ನೂ ಕೊಂಡಾಡುತ್ತ, ಹೊರಗಣ ಪ್ರಾಕಾರದಲ್ಲಿ ಭಾರತೀಯ ಶಿಲ್ಪಶಾಸ್ತ್ರಜ್ಞರ ನಿಪುಣತೆಯನ್ನು ವ್ಯಕ್ತಪಡಿಸುವ ರಾಮಾಯಣ, ಭಾರತ, ಭಾಗವತಾದಿ ಇತಿಹಾಸಸ್ಮಾರಕವಾದ ಅನೇಕ ಚಿತ್ರಗಳನ್ನು ಛಾಯಾಗ್ರಾಹಿ ಎಂಬ ಯಂತ್ರದಿಂದ 'ಪೋಟೋ' ತೆಗೆದುಕೊಂಡು, ಜಾವಗಲ್ಲಿಗೆ ಬಂದು ಬೇಟೆಯಾಡಿ, ಆ ಅರಣ್ಯದ ಅಂದಚಂದಗಳಿಂದ ಸಂಭ್ರಾಂತರಾಗಿ ಅರಸೀಕೆರೆಯನ್ನು ಕುರಿತು ತೆರಳಿದರು.

ಬಳಿಕ ಶ್ರೀಮನ್ಮಹಾರಾಜರವರು ಅಮರಗಿರಿಯೆಂದು ಪ್ರಖ್ಯಾತವಾದ ಮಲೆಕಲ್ಲು ತಿರುಪತಿಯ ದೇವಸ್ಥಾನಕ್ಕೆ ದಯಮಾಡಿ, ಅಲ್ಲಿಯ ಅತಿಸುಂದರವಾದ ಶಿಲಾವಿಗ್ರಹಗಳನ್ನು ನೋಡಿಕೊಂಡು ಹಾಸನವನ್ನು ತಲುಪಿ, ನಾಲ್ಕು ದಿವಸಗಳವರೆಗೆ ಅಲ್ಲಿಯ ಪ್ರಜೆಗಳಿಗೆ ನಿತ್ಯೋತ್ಸವವನ್ನು ಕಲ್ಪಿಸಿಕೊಟ್ಟು, ಪ್ರಜೆಗಳು ಮಾಡಿದ ನಾನಾ ವಿಧವಾದ ಉತ್ಸವಗಳಿಂದ ತಣಿದು, ಚನ್ನರಾಯಪಟ್ಟಣದ ಮಾರ್ಗವಾಗಿ ಶ್ರವಣಬೆಳುಗೊಳಕ್ಕೆ ಚಿತ್ತೈಸಿದರು. ಮಧ್ಯಾಹ್ನದಮೇಲೆ ಚಂದ್ರಬೆಟ್ಟವನ್ನು ಹತ್ತಿ ಅತ್ಯುನ್ನತವಾದ ಗೋಮಟೇಶ್ವರಸ್ವಾಮಿಯ ದರ್ಶನವನ್ನು ಮಾಡಿ, ವಿಗ್ರಹದ ಛಾಯಾಚಿತ್ರವನ್ನು ತೆಗೆದುಕೊಂಡು, ಜೈನ ಬಸದಿಗಳನ್ನೂ ಜೈನ ಸಂನ್ಯಾಸಿಗಳನ್ನೂ ನೋಡಿ, ಅವರಿಗೆಲ್ಲ ಮರ್ಯಾದಾ ವಸ್ತ್ರಗಳನ್ನು ದಯಪಾಲಿಸಿ, ಅಲ್ಲಿಯ ಪೂರ್ವಚರಿತ್ರೆಯನ್ನೆಲ್ಲ ಕೇಳಿ, ಇಂದ್ರಬೆಟ್ಟದಲ್ಲಿರುವ ಪ್ರಖ್ಯಾತರಾದ ಭದ್ರಬಾಹು ಮುಂತಾದವರ ಸ್ಮಾರಕಚಿಹ್ನೆಗಳನ್ನೂ ಪಾತ್ರೆಪದಾರ್ಥಗಳನ್ನು ತಯಾರ್ಮಾಡುವ ಅಲ್ಲಿಯ ಕೈಗಾರಿಕೆಯ ಕೆಲಸದ ಕಾರ್ಖಾನೆಗಳನ್ನೂ ಪರಾಮರ್ಶಿಸಿ ಮುಂದಕ್ಕೆ ಹೊರಟು ಕುಣಿಗಲನ್ನು ಸೇರಿದರು. ಅಲ್ಲಿ ಮಿಲಿಟೆರಿ ಸೆಕ್ರಿಟೆರಿಯವರಾದ ಕರ್ನಲ್ ಹೇ ಸಾಹೇಬರೂ, ಡೆಪ್ಯುಟಿ ಕಮಿಷನರ್ ಮೇಜರ್ ಮೆಕ್ಕಂಟೇರ್ ಸಾಹೇಬರೂ ಮಹಾರಾಜರನ್ನು ಇದಿರ್ಗೊಂಡು ಸ್ವಾಗತವನ್ನು ಬಯಸಿದರು. ಮಹಾರಾಜರವರು ಅಲ್ಲಿ ಮರಿಗಳನ್ನು ಇಳಿಸುವುದಕ್ಕಾಗಿ ಇಟ್ಟಿರುವ ಅನೇಕ ಜಾತ್ಯಶ್ವಗಳನ್ನೂ, ಸಣ್ಣಸಣ್ಣ ಮರಿಗಳನ್ನು ಸಾಕುವ ರೀತಿಯನ್ನೂ, ಅಲ್ಲಿಯ ಇತರ ವಿಧವಾದ ಕಾರ್ಯಾಲಯಗಳನ್ನೂ ಪರಮಾರ್ಶಿಸಿಕೊಂಡು, ನೆಲಮಂಗಲದ ಮಾರ್ಗವಾಗಿ ಬೆಂಗಳೂರನ್ನು ತಲುಪಿ ಅಲ್ಲಿ ಎರಡು ವಾರಗಳಿದ್ದು, ಅನಂತರ ರಾಜಧಾನಿಗೆ ದಯಮಾಡಿಸಿದರು.

ಹತ್ತನೆಯ ಅಧ್ಯಾಯ.

ಶ್ರೀಮದಿಂಡಿಯಾ ಚಕ್ರವರ್ತಿನಿಯವರ ಜೂಬಿಲೀ ಮಹೋತ್ಸವ.

ಈ ಪ್ರಕಾರವಾಗಿ ಶ್ರೀಚಾಮರಾಜೇಂದ್ರ ಒಡೆಯರವರು ಪ್ರಸಿದ್ಧವಾದ ದೇವ ಸ್ಥಾನಗಳನ್ನೂ, ಜಗದ್ವಿಖ್ಯಾತವಾದ ಜಲಪಾತಗಳನ್ನೂ, ಅಭೇದ್ಯವಾದ ದುರ್ಗ ಗಳನ್ನೂ, ಎತ್ತರವಾದ ಬೆಟ್ಟಗಳನ್ನೂ, ರಮಣೀಯವೂ ಭೀಕರವೂ ಆದ ಅರಣ್ಯ ಪ್ರದೇಶಗಳನ್ನೂ, ಚರಿತ್ರಾರ್ಹವಾದ ಪುರಾತನ ಪಟ್ಟಣಗಳನ್ನೂ, ಪ್ರಸಿದ್ಧವಾದ ಇತರ ಸ್ಥಳಗಳನ್ನೂ ನೋಡಿಕೊಂಡು, ನಿಜಪ್ರಜೆಗಳ ಕಷ್ಟಸುಖಗಳನ್ನು ಪ್ರತ್ಯಕ್ಷವಾಗಿ ಅರಿತು, ಅವರ ಅನುರಾಗವನ್ನು ಸಂಪಾದಿಸಿ, ರಾಜ್ಯಪರಿಪಾಲನೆಯನ್ನು ಮಾಡುತ್ತಿ ರುವಲ್ಲಿ, ೧೮೮೬ನೆಯ ಇಸವಿ ನವೆಂಬರ್ ತಿಂಗಳಲ್ಲಿ, ಆಗ ಇಂಡಿಯಾ ದೇಶದ ವೈಸ್ರಾಯಿಯವರಾಗಿದ್ದ ಲಾರ್ಡ್ ಡಫರಿನ್ ಸಾಹೇಬರು ಪತ್ನೀಸಹಿತರಾಗಿ ಮೈಸೂರಿಗೆ ದಯೆಮಾಡಿಸಿದರು. ಶ್ರೀಮನ್ಮಹಾರಾಜರವರು ಬಹು ಸಂಭ್ರಮದೊಡನೆ ಅವರನ್ನು ಇದಿರ್ಗೊಂಡು ಕರೆದುಕೊಂಡು ಬಂದರು. ವೈಸ್ರಾಯಿ ಮತ್ತು ಗವರ್ನರ್ ಜನರಲ್ ಅವರು, ವಿಶಾಲಮತಿಯುತರಾದ ಶ್ರೀಮನ್ಮಹಾರಾಜರವರ ವಿನಯಪೂರ್ವಕ ವಾದ ಆದರಕ್ಕೂ ಸಚ್ಚರಿತ್ರೆಗೂ ಸಂತುಷ್ಟಾಂತರಂಗರಾಗಿ, ರಾಜ್ಯದಲ್ಲಿ ನೆಲೆಗೊಂಡಿ ರುವ ಕ್ಷೇಮಸೌಭಾಗ್ಯಗಳನ್ನು ತಿಳಿದು, ಸಂಸ್ಥಾನದ ಸಕಲ ಪ್ರಜೆಗಳ ಅಭಿಪ್ರಾಯ ಗಳನ್ನೂ ಗ್ರಹಿಸುವುದಕ್ಕೋಸ್ಕರ ಆಯಾ ಪ್ರದೇಶಗಳಲ್ಲಿಯ ಮುಖ್ಯರೂ ವಿವೇಕಿಗಳೂ ಆದವರನ್ನು ಸೇರಿಸಿ ಮಾಡಿರುವ ಪ್ರಜಾಪ್ರತಿನಿಧಿ ಸಭೆಯನ್ನು ಕೊಂಡಾಡಿ, ಶ್ರೀರಂಗ ಪಟ್ಟಣದಲ್ಲಿರುವ, ಹೈದರಲ್ಲೀಖಾನ್ ಟೀಪೂ ಸುಲ್ತಾನರ ಸ್ಮಾರಕಚಿಹ್ನೆಗಳನ್ನೂ ಪೂರ್ವದ ಯುದ್ಧರಂಗವನ್ನೂ ಪರಾಮರ್ಶಿಸಿಕೊಂಡು ಕಲ್ಕತ್ತೆಗೆ ತೆರಳಿದರು. ಇವರ ಜ್ಞಾಪನಾರ್ಥವಾಗಿ ಮೈಸೂರು ಮಾರ್ಕೆಟ್ಟಿನ ಮುಂದಿರುವ ಡಫರಿನ್ ಗಡಿಯಾರವು ಸ್ಥಾಪಿತವಾಯಿತು.

ಬಳಿಕ ಅದೇ ವರುಷದ ಡಿಸೆಂಬರ್ ತಿಂಗಳಲ್ಲಿ ಶ್ರೀಮನ್ಮಹಾರಾಜರವರಿಗೆ ತೃತೀಯ ಪುತ್ರಿಯರು ಜನಿಸಿದರು. ಇವರೇ ಚಲುವಾಜಮ್ಮಣ್ಣಿಯವರು.

ಹೀಗಿರುವಲ್ಲಿ, ೧೮೮೭ರಲ್ಲಿ ಶ್ರೀಮನ್ಮಹಾರಾಜ್ಞೀ ಇಂಡಿಯಾ ಚಕ್ರವರ್ತಿನಿ ಯವರ ಐವತ್ತನೆಯ ವರುಷದ ಜೂಬಿಲೀ ಮಹೋತ್ಸವವು ಪ್ರಾಪ್ತವಾಯಿತು. ಈ ಮಹೋತ್ಸವದ ಸಂತೋಷಾರ್ಥವಾಗಿ ಸಂಸ್ಥಾನದ ಎಲ್ಲ ಕಡೆಗಳಲ್ಲಿಯೂ ಅನೇಕವಾದ ಆಟಪಾಟಗಳು ನಡೆದುವು. ಬೆಂಗಳೂರು ಅರಮನೆಯಲ್ಲಿ ದರ್ಬಾರ್ ನಡೆಯಿತು.

ಈ ದರ್ಬಾರಿಗೆ ಸುಬ್ರಹ್ಮಣ್ಯರಾಜ ಅರಸಿನವರೇ ಮುಂತಾದ ಅನೇಕ ರಾಜಬಂಧುಗಳೂ, ದಿವಾನರೇ ಮೊದಲಾದ ಸಕಲ ಅಧಿಕಾರಿಗಳೂ, ರೆಸಿಡೆಂಟರೇ ಮೊದಲಾದ ಯೂರೋಪಿಯನ್ ದೊಡ್ಡಮನುಷ್ಯರೂ ಬಂದಿದ್ದರು. ಆ ಸಭೆಯಲ್ಲಿ ರೆಸಿಡೆಂಟರು ಶ್ರೀಮನ್ಮಹಾರಾಜರವರಿಗೆ ವೈಸ್ರಾಯಿಯವರಿಂದ ಬಂದಿದ್ದ ಲೇಖನವನ್ನು ಓದಿ ಒಪ್ಪಿಸಿದರು. ಅದೇನೆಂದರೆ:—

ಆಳುವ ಮಹಾಸ್ವಾಮಿಯವರಾದ ಶ್ರೀಚಾಮರಾಜೇಂದ್ರ ಒಡೆಯರ್ ಬಹದ್ದೂರ್
ಜಿ.ಸಿ.ಎಸ್.ಐ., ಅವರ ಸಮಕ್ಷಮಕ್ಕೆ.

ಡಫರಿನ್ ಅವರ ಬಿನ್ನಹ ಅದಾಗಿ. ಇಂಡಿಯಾ ಚಕ್ರವರ್ತಿನಿಯವರ ಐವತ್ತನೆಯ ವರುಷದ ಪಟ್ಟಾಭಿಷೇಕ ಮಹೋತ್ಸವವನ್ನು ವಿಶೇಷ ವಿಜೃಂಭಣೆಯಿಂದ ನಡೆಯಿಸುವುದಕ್ಕೋಸ್ಕರ ನೀವು ಮಾಡುತ್ತಿರುವ ಪ್ರಯತ್ನಗಳನ್ನು ಕೇಳಿ ನಾನು ಬಹಳ ಸಂತುಷ್ಟನಾದೆನು. ಶ್ರೀಮನ್ಮಹಾರಾಜ್ಞಿಯವರ ವಿಷಯದಲ್ಲಿ ನಿಮಗಿರತಕ್ಕ ನೈಸರ್ಗಿಕ ಭಕ್ತಿಯನ್ನೂ ವಿಶ್ವಾಸವನ್ನೂ ಕುರಿತು ನಾನು ಶ್ರೀಮನ್ಮಹಾರಾಜ್ಞಿಯವರಿಗೆ ವಿಜ್ಞಾಪನೆ ಮಾಡುತ್ತೇನೆ. ಶ್ರೀಮನ್ಮಹಾರಾಜ್ಞಿಯವರ ಚಿರಕಾಲ ರಾಜ್ಯಭಾರದಲ್ಲಿ, ಆಸೇತು ಹಿಮಾಚಲವೂ ವ್ಯಾಪಿಸಿಕೊಂಡಿರತಕ್ಕ ಕೋಟ್ಯಂತರ ಜನಗಳ ಸೌಖ್ಯವು ಅವಿಚ್ಛಿನ್ನವಾಗಿ ವೃದ್ಧಿಯಾಗುತ್ತಲೇ ಇದೆ. ಎಲ್ಲೆಲ್ಲಿಯೂ ನಿರಂತರವಾದ ಸಮಾಧಾನವು ನೆಲೆಗೊಂಡಿದೆ. ಮಹಾರಾಜ್ಞಿಯವರ ಆಶ್ರಯದಲ್ಲಿರತಕ್ಕ ಆಶ್ರಿತ ಸಂಸ್ಥಾನಾಧಿಪತಿಗಳೆಲ್ಲರೂ ಪರದೇಶದ ಶತ್ರುಗಳ ಭಯದಿಂದ ಮುಕ್ತರಾಗಿ, ತಮ್ಮ ರಾಜ್ಯಭಾರಕ್ಕೆ ಪ್ರತಿಬಂಧಕವಾದ ಸ್ವದೇಶೀಯರ ಯಾವ ಭಯವೂ ಇಲ್ಲದೆ ಪ್ರಜಾಕ್ಷೇಮಚಿಂತನೆಯನ್ನು ಮಾಡುತ್ತ ಅವರ ಅಭಿವೃದ್ಧಿಗೆ ಬೇಕಾದ ಕಾರ್ಯಗಳನ್ನೆಲ್ಲ ಮಾಡುತ್ತಿದ್ದಾರೆ. ಇಂತಹ ಶುಭೋದಯದಲ್ಲಿ, ಶ್ರೀಮನ್ಮಹಾರಾಜ್ಞಿಯವರ ರಾಜ್ಯಭಾರದಲ್ಲಿ ತಮಗೆ ಲಬ್ಧವಾಗಿರತಕ್ಕ ಸ್ಮರಣೆಯನ್ನು ಈ ರೀತಿಯಲ್ಲಿ ತಾವು ಪ್ರಕಾಶಗೊಳಿಸುವುದಕ್ಕೆ ಪ್ರಯತ್ನಪಾಡಿದುದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ತಮಗೆ ಆವಶ್ಯಕವಾದ ಕಾಲದಲ್ಲಿ ಬೇಕಾದ ಸಹಾಯವನ್ನು ವಿಶ್ವಾಸದಿಂದ ಮನಃಪೂರ್ತಿಯಾಗಿ ಮಾಡುವುದೂ, ತಮ್ಮ ಅಧಿಕಾರವನ್ನು ನೆರೆಗೊಳಿಸುವುದೂ, ತಮ್ಮ ಗೌರವವನ್ನು ವೃದ್ಧಿಮಾಡುವುದೂ, ಶ್ರೀಮನ್ಮಹಾರಾಜ್ಞಿಯವರಿಗೂ ತಮಗೂ ಇರತಕ್ಕ ಸ್ನೇಹಕ್ಕೆ ಚ್ಯುತಿಯಿಲ್ಲದಂತೆ ಕಾಪಾಡುವುದೂ, ಇವುಗಳೆಲ್ಲ ಶ್ರೀಮನ್ಮಹಾರಾಜ್ಞಿಯವರಿಗೆ ಅತ್ಯಂತಾಭಿಮತವಾದ ವಿಷಯಗಳು. ತಮ್ಮ ವಿಷಯದಲ್ಲಿ ನನಗಿರತಕ್ಕ ಗೌರವಾತಿಶಯವು ತಮಗೆ ಮನವರಿಕೆಯಾಗಿರುವುದೆಂದು ನಂಬಿರುತ್ತೇನೆ.

ತಮ್ಮ ನಿಜವಾದ ಮಿತ್ರ,
ಡಫರಿನ್.

ಈ ಲೇಖನವನ್ನು ರೆಸಿಡೆಂಟರು ಓದಿದಮೇಲೆ, ಶ್ರೀಮನ್ಮಹಾರಾಜರವರು ಅಪ್ಪಣೆಕೊಟ್ಟುದೇನೆಂದರೆ: "ಮಿಸ್ಟರ್ ಲಯಲ್ ಸಾಹೇಬರವರೇ, ವೈಸ್ರಾಯಿಯವರು ದಯವಿಟ್ಟು ಕಳುಹಿಸಿರತಕ್ಕ ಲೇಖನದಿಂದಲೂ ಅದರಲ್ಲಿರುವ ವಿಶ್ವಾಸಗರ್ಭಿತವಾದ ಅಭಿಪ್ರಾಯದಿಂದಲೂ ನಮಗೆ ಸಂತೋಷವಾಯಿತು. ಇಂಡಿಯಾ ಚಕ್ರವರ್ತಿನಿಯವರ ಐವತ್ತನೆಯ ವರುಷದ ಪಟ್ಟಾಭಿಷೇಕ ಮಹೋತ್ಸವದ ವಿಷಯದಲ್ಲಿ ನಮಗುಂಟಾಗಿರುವ ಸಂತೋಷಾತಿಶಯವನ್ನೂ ನಮ್ಮ ಕೃತಜ್ಞತೆಯನ್ನೂ ಶ್ರೀಮ

ನ್ಮಹಾರಾಜ್ಞಿಯವರಿಗೆ ವಿಜ್ಞಾಪನೆ ಮಾಡಬೇಕೆಂಬುದಾಗಿ ವೈಸ್ರಾಯಿಯವರಿಗೆ ದಯವಿಟ್ಟು ತಿಳಿಸಬೇಕು. ನಮಗೂ ನಮ್ಮ ಪ್ರಜೆಗಳಿಗೂ ಶ್ರೀಮನ್ಮಹಾರಾಜ್ಞಿಯವರ ವಿಷಯದಲ್ಲಿ ಅವಿಚ್ಛಿನ್ನವಾದ ಭಕ್ತಿಯಿದೆ. ನಾವೂ ನಮ್ಮ ಸಕಲ ಪ್ರಜೆಗಳೂ

ಘನವನ್ನು ಹೊಂದಿದ ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾ ಚಕ್ರವರ್ತಿನಿಯವರು.

ಶ್ರೀಮನ್ಮಹಾರಾಜ್ಞಿಯವರ ರಾಜ್ಯಭಾರವು ಇನ್ನೂ ಬಹು ದೀರ್ಘಕಾಲ ನಮಗೆ ಲಭಿಸಬೇಕೆಂಬುದಾಗಿ ದೇವರನ್ನು ಪ್ರಾರ್ಥಿಸುತ್ತೇವೆ" ಎಂದು ಅಪ್ಪಣೆಕೊಟ್ಟು ಸಭಾಸದರ ಕಡೆಗೆ ತಿರುಗಿ, "ವೈಸ್ರಾಯಿಯವರ ಏರ್ಪಾಡುಗಳನ್ನು ಅನುಸರಿಸಿ, ನಮ್ಮ ರಾಜ್ಯ

ದಲ್ಲಿಯೂ ಶ್ರೀಮನ್ಮಹಾರಾಜ್ಞಿಯವರ ಪಟ್ಟಾಭಿಷೇಕ ಮಹೋತ್ಸವವು ಈ ದಿನ ನಡೆಯತಕ್ಕದೆಂದು ನಿಬಂಧನೆ ಮಾಡಿದೆವು. ಶ್ರೀಮನ್ಮಹಾರಾಜ್ಞಿಯವರು ಈ ಭೂಮಂಡಲದಲ್ಲಿ ಏಳರಲ್ಲಿ ಒಂದುಭಾಗವಾದ ಈ ಇಂಡಿಯಾ ದೇಶವನ್ನು ಐವತ್ತು ವರುಷಗಳಿಂದಲೂ ಬಹಳ ಕೀರ್ತಿಯಿಂದ ಆಳುತ್ತಿದ್ದಾರೆ. ಶ್ರೀಮನ್ಮಹಾರಾಜ್ಞಿಯವರು ಮಹಾವಿಸ್ತಾರವಾದ ಅವರ ರಾಜ್ಯದ ಪ್ರಜೆಗಳೊಳಗೆ, ನಮ್ಮ ದೇಶದ ಪ್ರಜೆಗಳಮೇಲೆ ಅತಿಶಯವಾದ ಅಭಿಮಾನವುಳ್ಳವರಾಗಿದ್ದಾರೆ. ಇಂಡಿಯಾ ದೇಶದ ರಾಜ್ಯಭಾರವನ್ನು ಇವರು ಸ್ವೀಕರಿಸಿದಾಗ, ಈ ದೇಶದ ಸಕಲ ಪ್ರಜೆಗಳನ್ನೂ ನಿಷ್ಪಕ್ಷಪಾತವಾಗಿ ಧರ್ಮದಿಂದ ಪರಿಪಾಲನೆ ಮಾಡುವಂತೆ ತಮ್ಮ ತಾತ್ಪರ್ಯವನ್ನು ಪ್ರಕಟಿಸಿದರು. ಅದೇರೀತಿಯಲ್ಲಿ ಮಾಡುವ ಇವರ ಧರ್ಮಪರಿಪಾಲನೆಯಿಂದ ಇಂಡಿಯಾ ದೇಶದ ಪ್ರಜೆಗಳಿಗೆ ಉಂಟಾಗಿದ್ದ ಈತಿಬಾಧೆಗಳ ನಿವಾರಣೆಯೂ, ಅನೇಕ ವಿಧವಾದ ಸೌಖ್ಯಗಳ ಪ್ರಾಪ್ತಿಯೂ, ಅಷ್ಟಿಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಈ ಉಪಕಾರಕ್ಕಾಗಿ ಈ ದೇಶದ ಪ್ರಜೆಗಳೆಲ್ಲರೂ ಶ್ರೀಮನ್ಮಹಾರಾಜ್ಞಿಯವರಿಗೆ ಬಹಳ ಕೃತಜ್ಞರಾಗಿದ್ದಾರೆ. ಇಂದಿಗೆ ಹತ್ತು ವರುಷಗಳ ಹಿಂದೆ ಡೆಲ್ಲಿಯಲ್ಲಾದ ದರ್ಬಾರಿನಲ್ಲಿ ಶ್ರೀಮನ್ಮಹಾರಾಜ್ಞಿಯವರು ಇಂಡಿಯಾ ಚಕ್ರವರ್ತಿನಿಯರೆಂಬ ಬಿರುದನ್ನು ಧರಿಸಿದಾಗ, ಆಗಿನ ವೈಸ್ರಾಯಿಯವರ ಮೂಲಕ, ಇಂಡಿಯಾ ದೇಶದ ರಾಜರ ಮತ್ತು ಪ್ರಜೆಗಳ ಕ್ಷೇಮಚಿಂತನೆಯೇ ತಮ್ಮ ಕ್ಷೇಮಚಿಂತನೆಯೆಂತಲೂ, ಅವರ ಕಷ್ಟಸುಖಗಳೇ ತಮ್ಮ ಕಷ್ಟಸುಖಗಳೆಂತಲೂ ತಾವು ಭಾವಿಸಿರುವಂತೆ ತಿಳಿಸಿದರು. ಈ ಭಾವನೆಯಂತೆಯೇ ಅವರು ಪ್ರಜಾಕ್ಷೇಮಚಿಂತನೆಯನ್ನು ಮಾಡುತ್ತಿರುವುದು ಸಕಲರಿಗೂ ವಿದಿತವಾಗಿರುವುದಷ್ಟೆ. ಆದುದರಿಂದಲೇ ಶ್ರೀಮನ್ಮಹಾರಾಜ್ಞಿಯವರ ವಿಷಯದಲ್ಲಿ ಇಂಡಿಯಾ ದೇಶದ ಸಕಲ ನಿವಾಸಿಗಳೂ ಅಪಾರವಾದ ರಾಜಭಕ್ತಿಯುಕ್ತರಾಗಿದ್ದಾರೆ. ನಮ್ಮ ರಾಜ್ಯದ ವಿಷಯದಲ್ಲಿ ಅವರಿಗಿರತಕ್ಕ ವಾತ್ಸಲ್ಯವು ಅಸದೃಶವಾಗಿದೆ. ಐವತ್ತು ವರುಷಗಳಕಾಲ ಈ ರಾಜ್ಯವನ್ನು ತಮ್ಮ ಧರ್ಮಪರಿಪಾಲನೆಯಲ್ಲಿಟ್ಟುಕೊಂಡದ್ದು, ವಿಶ್ವಾಸದಿಂದ ನಮ್ಮನ್ನು ರಾಜ್ಯಭಾರ ಮಾಡುವುದಕ್ಕೆ ಸಮರ್ಥರನ್ನಾಗಿಮಾಡಿ, ಅನಂತರದಲ್ಲಿ ನಮ್ಮ ರಾಜ್ಯವನ್ನು ನಮಗೆ ಒಪ್ಪಿಸಿದುದಕ್ಕಾಗಿಯೂ ಈ ರಾಜ್ಯವನ್ನು ಒಪ್ಪಿಸುವುದಕ್ಕೆ ಮುಂಚೆಯೂ ಅದರಿಂದೀಚೆಗೂ ನಮ್ಮ ಕ್ಷೇಮಚಿಂತನೆಯ ವಿಷಯದಲ್ಲಿ ಯಾವಾಗಲೂ ನಿರತರಾಗಿರುವುದಕ್ಕಾಗಿಯೂ, ಶ್ರೀಮನ್ಮಹಾರಾಜ್ಞಿಯವರಿಗೆ ನಾವು ಎಷ್ಟು ಕೃತಜ್ಞರಾಗಿದ್ದರೂ ಸ್ವಲ್ಪವೇ ಸರಿ. ನಮ್ಮ ರಾಜ್ಯದ ಎಲ್ಲ ಪ್ರದೇಶಗಳಲ್ಲಿಯೂ ಶ್ರೀಮನ್ಮಹಾರಾಜ್ಞಿಯವರ ಪಟ್ಟಾಭಿಷೇಕ ಮಹೋತ್ಸವವು ಪ್ರಜೆಗಳಿಗೆ ಅಪೂರ್ವವಾದ ಸಂತೋಷಾತಿಶಯವನ್ನು ಉಂಟುಮಾಡಿದೆ. ಈ ದಿನ ಎಲ್ಲೆಲ್ಲಿಯೂ ವಿಶೇಷವಾದ ದಾನಧರ್ಮ ಪರೋಪಕಾರಾದಿಗಳು ಅತಿಶಯವಾಗಿ ನಡೆಯುತ್ತಿವೆ. ಈ ಉತ್ಸವದ ಗೌರವಾರ್ಥವಾಗಿ, ಈ ಸಂಸ್ಥಾನದ ಎಲ್ಲ ಕಾರಾಗೃಹಗಳಿಂದಲೂ ಅನೇಕ ಬಂದೀವಾನರಿಗೆ ಬಂಧವಿಮೋಚನವನ್ನು ಮಾಡುವಂತೆ ಆಜ್ಞೆ ಮಾಡುತ್ತೇವೆ. ಇದಲ್ಲದೆ, ಸಕಲ ಶಿಲ್ಪಿಗಳು.

ಶಾಸ್ತ್ರಗಳು ಮುಂತಾದುವುಗಳ ಅಭಿವೃದ್ಧಿಗಾಗಿ, ಶ್ರೀಮನ್ಮಹಾರಾಜ್ಞಿಯವರ ರಾಜಧಾನಿಯಲ್ಲಿ ಕಟ್ಟತಕ್ಕ ಇಂಪೀರಿಯಲ್ ಇನ್‌ಸ್ಟಿಟ್ಯೂಟೆಂಬ ವಿದ್ಯಾಶಾಲೆಗೆ ತಕ್ಕ ಚಂದಾಹಣಗಳನ್ನು (೭೦ ಸಾವಿರ ರೂಪಾಯಿ) ಕಳುಹಿಸುವುದಕ್ಕೆ ಏರ್ಪಾಡು ಮಾಡಿರುವುದಲ್ಲದೆ, ಈ ರಾಜ್ಯದ ಪ್ರಜೆಗಳಿಗೆ ಅನುಕೂಲವಾಗುವಂತೆ, ಸಕಲ ಶಿಲ್ಪಗಳು, ಕೈಗಾರಿಕೆಗಳು ಮುಂತಾದುವುಗಳಿಗೆ ಪ್ರೋತ್ಸಾಹಕಾರಿಯಾಗಿರುವಂತೆಯೂ ಓದತಕ್ಕವರಿಗೆ ಎಲ್ಲ ಪುಸ್ತಕಗಳೂ ಅನುಕೂಲಿಸುವಂತೆಯೂ 'ಜೂಬಿಲಿ ಇನ್‌ಸ್ಟಿಟ್ಯೂಟ್' ಎಂಬ ಒಂದು ಪುಸ್ತಕ ಶಾಲೆಯನ್ನು ಮೈಸೂರಿನಲ್ಲಿ ಏರ್ಪಾಡು ಮಾಡಬೇಕೆಂದು ನಿರ್ಣಯಮಾಡಿದೆ. ಹೀಗೆಯೇ, ಬೆಂಗಳೂರಿನಲ್ಲಿಯೂ ಪ್ರಜೆಗಳ ಪ್ರಯೋಜನಾರ್ಥವಾದ ಏರ್ಪಾಡು ಮಾಡಬೇಕೆಂದು ಆಲೋಚಿಸುತ್ತಿದ್ದೇವೆ. ಶ್ರೀಮನ್ಮಹಾರಾಜ್ಞಿಯವರು ನಮಗಳಿಗೆ ಮಾಡಿರತಕ್ಕ ಉಪಕಾರದಿಂದಲೂ, ಅವರ ಲೋಕಪ್ರಸಿದ್ಧವಾದ ಸದ್ಗುಣಗಳಿಂದಲೂ, ಇಂಡಿಯಾ ದೇಶದ ಪ್ರಜೆಗಳ ವಿಷಯದಲ್ಲಿ ಅವರಿಗಿರತಕ್ಕ ಅಸಮಾನವಾದ ಕ್ಷೇಮಚಿಂತನೆಯಿಂದಲೂ, ಅವರ ವಿಷಯದಲ್ಲಿ ನಮಗುಂಟಾಗಿರುವ ವಿಶ್ವಾಸಾತಿಶಯವನ್ನು ವ್ಯಕ್ತಮಾಡುವುದಕ್ಕಾಗಿ ಇಂತಹ ಪ್ರಜಾನುಕೂಲವಾದ ಏರ್ಪಾಡುಗಳನ್ನು ಎಷ್ಟು ಮಾಡಿದರೂ ಸ್ವಲ್ಪವೇ ಆಗಿದೆ ಈ ಕಾಲದಲ್ಲಿ ನಮ್ಮ ರಾಜ್ಯದ ಪ್ರಜೆಗಳೆಲ್ಲರೂ ಶ್ರೀಮನ್ಮಹಾರಾಜ್ಞಿಯವರಿಗೆ ದೀರ್ಘಾಯುರಾರೋಗ್ಯಗಳುಂಟಾಗಲೆಂದು ಈಶ್ವರನನ್ನು ಪ್ರಾರ್ಥಿಸುತ್ತಿದ್ದಾರೆ. ನಾವೂ ಹಾಗೆಯೇ ಪ್ರಾರ್ಥಿಸೋಣ" ಎಂಬುದಾಗಿ ಅಪ್ಪಣೆ ಕೊಟ್ಟರು. ಬಳಿಕ ಎಲ್ಲರೂ ಸೇರಿ ಇಂಡಿಯಾ ಚಕ್ರವರ್ತಿನಿಯವರನ್ನು ರಕ್ಷಿಸಲಿ ಎಂದು ದೇವರನ್ನು ಪ್ರಾರ್ಥಿಸಿದರು.



ಜೂಬಿಲಿಹಾಲ್ ಎಂಬ ಓರಿಯಂಟಲ್ ಲೈಬ್ರೆರಿ.

ಬಳಿಕ, ಅದೇ ಜೂನ್ ತಿಂಗಳ ೨೦ನೆಯ ತಾರೀಖಿನ ದಿನ, ಶ್ರೀಮನ್ಮಹಾರಾಜರವರು ರಾಜಧಾನಿಯ ಪಶ್ಚಿಮಭಾಗದಲ್ಲಿ, ಚಕ್ರವರ್ತಿನಿಯವರ ಜ್ಞಾಪನಾರ್ಥವಾಗಿ, ಶಿಲ್ಪಕಲೆಗಳು, ಶಾಸ್ತ್ರಗಳು, ಕಾವ್ಯಗಳು ಮುಂತಾದುವುಗಳ ವಿಷಯವಾದ ಸಂಸ್ಕೃತ ಕರ್ಣಾಟಕ ಗ್ರಂಥಗಳನ್ನು ಸಂಚಯಮಾಡಿಡುವ 'ಜೂಬಿಲಿ ಇನ್‌ಸ್ಟಿಟ್ಯೂಟ್' ಎಂಬ ಶಿಲ್ಪಕೌಶಲ ಪ್ರದರ್ಶಕಶಾಲೆಯ ಕಟ್ಟಡಕ್ಕೂ, ಮೈಸೂರು ಪಬ್ಲಿಕ್ ಆಫೀಸುಗಳ ಕಟ್ಟಡಕ್ಕೂ, ತಮ್ಮ ಶ್ರೀಕರವಾದ ಹಸ್ತದಿಂದ ಶಂಕುಸ್ಥಾಪನೆ ಮಾಡಿದರು.

ಹನ್ನೊಂದನೆಯ ಅಧ್ಯಾಯ.

ಶ್ರೀಚಾಮರಾಜೇಂದ್ರ ಒಡೆಯರವರ ಉತ್ತರದೇಶ ಸಂಚಾರ.

ಹೀಗಿರುವಲ್ಲಿ, ಶ್ರೀಚಾಮರಾಜೇಂದ್ರ ಮಹಾರಾಜರವರು ರಾಜಕಾರ್ಯಗೌರವದಿಂದಲೂ ದೇಶಾಟನದಿಂದುಂಟಾಗುವ ಪ್ರಪಂಚಸ್ವರೂಪಜ್ಞಾನವನ್ನು ಸಂಪಾದಿಸಬೇಕೆಂಬ ಉದಾರೇಚ್ಛೆಯಿಂದಲೂ ಪ್ರೇರಿತರಾಗಿ ಉತ್ತರದೇಶ ಸಂಚಾರವನ್ನು ಬಯಸಿ, ಪ್ರಯಾಣಕ್ಕೆ ಬೇಕಾದ ಸನ್ನಾಹಗಳನ್ನೆಲ್ಲ ಸಿದ್ಧಮಾಡಿಕೊಂಡು, ತಾವು ರಾಜಧಾನಿಯಲ್ಲಿಲ್ಲದ ವೇಳೆಯಲ್ಲಿ ರಾಜ್ಯಭಾರಕ್ರಮವು ಸರಿಯಾಗಿ ನಡೆಯುವಂತೆ, ಅನುಭವಶಾಲಿಗಳೂ ಸಮರ್ಥರೂ ಆದ ತಂಬೂಸೆಟ್ಟರನ್ನು ಮುಖ್ಯಮಂತ್ರಿಸ್ಥಾನದಲ್ಲಿ ನೇಮಿಸಿ, ೧೮೮೭ನೆಯ ಇಸವಿ ಡಿಸೆಂಬರ್ ತಿಂಗಳು ೧೬ರಲ್ಲಿ ಪೂಜನೀಯರೂ ಮಹಾಮಾತೃಶ್ರೀಯವರೂ ಆದ ಸೀತಾವಿಲಾಸದ ಮಹಾರಾಜ್ಞಿಯವರ ಸನ್ನಿಧಾನಕ್ಕೆ ದಯಮಾಡಿ, ಅವರ ಚರಣಕಮಲಗಳಿಗೆ ಸಾಷ್ಟಾಂಗ ಪ್ರಣಾಮವನ್ನಾಚರಿಸಿ ಮಂಗಳಾಶೀರ್ವಾದವನ್ನು ಪಡೆದು, ಅಧಿಕಾರಿಗಳಿಂದಲೂ ರಾಜಬಂಧುಗಳಿಂದಲೂ ಕೂಡಿ, ಶುಭ ಮುಹೂರ್ತದಲ್ಲಿ ರಾಜಧಾನಿಯನ್ನು ಬಿಟ್ಟು ಹೊರಟು, ಪ್ರಯಾಣಮಾಡಿಕೊಂಡು ಹೈದರಾಬಾದ್ ರಾಜ್ಯದ ಕಲ್ಬುರ್ಗಿಯನ್ನು ತಲಪಿದರು. ಕೂಡಲೇ ನಿಜಾಮರ ಕಡೆಯ ವಜೀರರು ಸೈನ್ಯಸಹಿತರಾಗಿ ಬಂದು, ಶ್ರೀಮನ್ಮಹಾರಾಜರವರನ್ನು ಇದಿರ್ಗೊಂಡು ಕರೆದುಕೊಂಡುಹೋಗಿ ಬಹಳವಾಗಿ ಸತ್ಕರಿಸಿದರು. ಮಹಾರಾಜರವರು ಅವರ ಸತ್ಕಾರವನ್ನು ಕೈಕೊಂಡು, ಹಸನ್ ಗಂಗೂ ಮುಂತಾದ ಬಹಮನೀ ರಾಜರಿಗೆ ರಾಜಧಾನಿಯಾಗಿದ್ದ ಆ ಕಲ್ಬುರ್ಗೀ ಶಹರಿನ ವಿಶೇಷಗಳನ್ನು ಪರಾಮರ್ಶಿಸಿ, ಮುಂದಕ್ಕೆ ಪ್ರಯಾಣ ಬೆಳೆಯಿಸಿ, ಸೌಂದರ್ಯಕ್ಕೂ ಸಮೃದ್ಧಿಗೂ ಆಶ್ರಯಸ್ಥಾನವಾದ ಮುಂಬಯಿ ಪಟ್ಟಣವನ್ನು ಸೇರಿದರು. ಆಗ ಗವರ್ನರವರ ಸೆಕ್ರೆಟರಿ

ಯವರು ರಾಜ ಮುರಾರ್‌ಜೀ ಗೋಕುಲದಾಸರವರು, ತಾತಾಸಾಹೇಬರು ಮುಂತಾದ ಆ ಪಟ್ಟಣದ ದೊಡ್ಡಮನುಷ್ಯರನೇಕರೊಡನೆ ಬಂದು, ಶ್ರೀಮನ್ಮಹಾರಾಜರನ್ನು ಇದಿರ್ಗೊಂಡು ರಾಜಮರ್ಯಾದೆಯಿಂದ ಉಪಚರಿಸಿದರು. ಆಗ ಮುಂಬಯಿ ಅಸೋಸಿಯೇಷನ್ ಸಮಾಜದವರು ಶ್ರೀಮನ್ಮಹಾರಾಜರವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು. ಶ್ರೀಮನ್ಮಹಾರಾಜರವರು ಅದನ್ನು ಸ್ವೀಕರಿಸಿ ಸದುತ್ತರವನ್ನಿತ್ತು, ಗವರ್ನರವರ ವಿಜಯರಥದಲ್ಲಿ ಕುಳಿತು, ಕಂಬಾಲ ಹೋಟೇಲಿನ ಸಮೀಪದಲ್ಲಿ ಗೊತ್ತುಮಾಡಿದ್ದ ಬೀಡಾರದಲ್ಲಿ ಇಳಿದರು.

ಬಳಿಕ ಶ್ರೀಮನ್ಮಹಾರಾಜರವರು ಅತ್ಯುತ್ತಮವಾದ ಕಟ್ಟಡಗಳಿಂದಲೂ, ಗಗನ ಚುಂಬಿಗಳಾದ ಗೋಪುರಗಳಿಂದಲೂ, ಮುಗಿಲನ್ನು ಮುಟ್ಟುತ್ತಿರುವ ರಾಜಗೃಹಗಳಿಂದಲೂ, ಕುಬೇರನಿಗೆ ಸಮಾನರಾದ ಧನಿಕರ ಉಪ್ಪರಿಗೆಗಳಿಂದಲೂ, ನಾನಾತೆರನಾಗಿ ಅಲಂಕರಿಸಲ್ಪಟ್ಟ ಕ್ರೀಡಾಶೈಲಗಳಿಂದಲೂ ಕೂಡಿ, ಶೋಭಿಸುತ್ತ, ಸುರನಗರದಂತೆ ಕಣ್ಗೊಳಿಸುತ್ತಿರುವ ಪಟ್ಟಣದ ವೈಭವವನ್ನು ಕಂಡು ಆಶ್ಚರ್ಯಾನ್ವಿತರಾಗಿ, ಅಲ್ಲಿಯ ಕಟ್ಟಡಗಳಲ್ಲಿ ಮುಖ್ಯವಾದ ವಿಕ್ಟೋರಿಯಾ ಟರ್ಮಿನಸ್ ಎಂಬ ರೈಲ್ವೇ ಸ್ಟೇಷನನ್ನೂ ಜೀಜೀಬಾಯಿಯವರ ಶಿಲ್ಪಕಲಾಶಾಲೆಯನ್ನೂ, ಪಬ್ಲಿಕ್ ವರ್ಕ್ಸ್ ಆಫೀಸನ್ನೂ, ಹೈಕೋರ್ಟೆಂಬ ನ್ಯಾಯವಿಧಾಯಕ ಸ್ಥಾನವನ್ನೂ, ರಾಜಾಬಾಯಿ ಟವರೆಂಬ ಅತ್ಯುನ್ನತವಾದ ಗೋಪುರವನ್ನೂ, ಮುಂಬಯಿ ಯೂನಿವರ್ಸಿಟಿಯ ವಿಶ್ವವಿದ್ಯಾ ನಿಲಯವನ್ನೂ, ಸೆಕ್ರೆಟೇರಿಯಟ್ಟಿನ ರೀತಿಯನ್ನೂ, ಪಿಂಜ್ರಾಪೋಲ್ ಎಂಬ ಪಶ್ವಾದಿ ಗಳಿಗಾಗಿ ಮಾಡಿರುವ ದರ್ಮದ ಆಸ್ಪತ್ರೆಯನ್ನೂ, ಲೋಕಪ್ರಸಿದ್ಧವಾದ ಕ್ರಾಫರ್ಡ್ ಮಾರ್ಕೆಟ್ಟನ್ನೂ, ನಾಣ್ಯಗಳಾಗತಕ್ಕ ಟಂಕಸಾಲೆಯನ್ನೂ, ಹತ್ತಿ ಮತ್ತು ತುಪ್ಪಟದ ನೆಯ್ಗೆ ಕಾರ್ಖಾನೆಗಳನ್ನೂ, ಎಲಿಫಾಂಟಾ ಕೇವ್ಸ್ ಎಂಬ ಗುಹಾದ್ವಾರಗಳಲ್ಲಿ ಮಾಡಿರುವ ಶಿಲ್ಪಕೌಶಲವನ್ನೂ ನೋಡಿ ಸಂತುಷ್ಟರಾಗಿ, ತೀರದಲ್ಲಿ ಸಂಜೆಗೆಂಪಿನಿಂದ ದೇದೀಪ್ಯ ಮಾನವಾಗಿ ಸುನೀಲವಾದ ವಾರಾಶಿಯಲ್ಲಿ, ಒಯ್ಯಾರದಿಂದ ಸಾಲುಸಾಲಾಗಿ ನಿಂತಿರುವ ಯಾನಪಾತ್ರಗಳನ್ನು ಕಂಡು ಬಹಳವಾಗಿ ಆನಂದಿಸಿ, ಕಾಮಾ ಎಂಬ ಪಾರ್ಸೀ ದೊಡ್ಡಮನುಷ್ಯರಿಂದ ಸ್ಥಾಪಿತವಾದ ವೈದ್ಯಶಾಲೆಯನ್ನು ಪರಾಮರ್ಶಿಸಿ, ಅದರ ಪಂಡಿಗೆ ದ್ರವ್ಯಸಹಾಯವನ್ನು ಮಾಡಿ, ಆ ಕಾಲದಲ್ಲಿ ಮುಂಬಯಿಗೆ ಬಂದಿದ್ದ ಡಾಕ್ಟರ್ ಪಿಲ್ಲಿನ್ ಅವರ ಅದ್ಭುತವಾದ ಸರ್ಕಸ್ಸನ್ನೂ ಇತರ ವಿಧವಾದ ಆಟಪಾಟ ಗಳನ್ನೂ ನೋಡುತ್ತ ಹತ್ತು ದಿವಸಗಳ ವರೆಗೆ ಮುಂಬಯಿ ನಗರದಲ್ಲಿ ವಾಸಮಾಡಿ ಅನಂತರ ಮುಂದಕ್ಕೆ ಪ್ರಯಾಣವನ್ನು ಬೆಳೆಯಿಸಿ ಪ್ರಯಾಗಕ್ಷೇತ್ರವನ್ನು ಸೇರಿದರು.

ಶ್ರೀಮನ್ಮಹಾರಾಜರವರು ಪರಿವಾರದೊಡನೆ ಗಂಗಾ ಯಮುನಾ ಸರಸ್ವತೀ ನದಿಗಳು ಕೂಡಿರುವ ತ್ರಿವೇಣೀ ಸಂಗಮದಲ್ಲಿ ಸ್ನಾನಾಹ್ನಿಕಗಳನ್ನು ಮಾಡಿ, ತೀರ್ಥ ಶ್ರಾದ್ಧಾದಿಗಳನ್ನು ನೆರವೇರಿಸಿ, ಬೌದ್ಧಮತೋದ್ಧಾರಕನಾದ ಅಶೋಕ ಚಕ್ರವರ್ತಿಯು ನಟ್ಟಿರುವ ಶಿಲಾಶಾಸನಸ್ತಂಭವೇ ಮುಂತಾದ ಸ್ಮಾರಕ ಚಿಹ್ನೆಗಳನ್ನು ಪರಾಮರ್ಶಿಸಿ,

ಅಲಹಾಬಾದ್ ಲೆಫ್ಟಿನೆಂಟ್ ಗವರ್ನರವರ ಸಂದರ್ಶನವಾದ ಬಳಿಕ, ಅಲ್ಲಿಂದ ಹೊರಟು ಕಲ್ಕತ್ತಾ ಪಟ್ಟಣವನ್ನು ಸೇರಿದರು. ಸ್ಟೇಷನ್ ಬಳಿಯಲ್ಲಿ ನಿರೀಕ್ಷಿಸುತ್ತ ನಿಂತಿದ್ದ, ಫಾರಿನ್ ಸೆಕ್ರಿಟೆರಿಯವರೇ ಮೊದಲಾದ ದೊಡ್ಡಮನುಷ್ಯರು ಮಹಾರಾಜರನ್ನು ಸಂಧಿಸಿ, ಯೋಗಕ್ಷೇಮವನ್ನು ವಿಚಾರಿಸಿ, ಹೂಗ್ಲೀ(ನದಿಯ) ತೀರದಲ್ಲಿ ನೇಮಕಮಾಡಿದ್ದ ಬೀಡಾರಕ್ಕೆ ಮರ್ಯಾದೆಯಿಂದ ಬಿಜಯಮಾಡಿಸಿದರು.

ಅಲ್ಲಿ ಮಹಾರಾಜರಿಗೂ ಬಂಗಾಳಾ ಲೆಫ್ಟಿನೆಂಟ್ ಗವರ್ನರವರಿಗೂ ಪರಸ್ಪರ ಸಂದರ್ಶನೋತ್ಸವವು ನೆರೆದಬಳಿಕ, ವೈಸ್ರಾಯಿಯವರ ಮಿಲಿಟೆರೀ ಸೆಕ್ರಟರಿಯವರೂ, ಫಾರಿನ್ ಇಲಾಖೆಯ ಅಂಡರ್ ಸೆಕ್ರಿಟರಿಯವರೂ, ವೈಸ್ರಾಯಿಯವರು ಕಳುಹಿಸಿದ್ದ

ಲಾರ್ಡ್ ಡಫರಿನ್ ಅವರ ಭೇಟಿ (ಮೈಸೂರಿನಲ್ಲಿ ತೆಗೆದದ್ದು.)

ದಿವ್ಯರಥದೊಡನೆ ಮಹಾರಾಜರವರ ಬೀಡಾರಕ್ಕೆ ಬಂದು, ಅವರನ್ನು ಕುಳ್ಳಿರಿಸಿಕೊಂಡು, ಬೆಂಗಾಲ್ ಕೇವಲ್ರಿಯೆಂಬ ಸೈನಿಕರಿಂದ ಪರಿವೃತರಾಗಿ ವೈಸ್ರಾಯಿಯವರ ಅರಮನೆಗೆ ಕರೆದುಕೊಂಡು ಹೋದರು. ಆಗ ರಾಜಮರ್ಯಾದಾರ್ಥವಾಗಿ ಇಪ್ಪತ್ತೊಂದು ತೋಪುಗಳಾದುವು. ಆ ಅರಮನೆಯನ್ನು ಪ್ರವೇಶಿಸಿದ ಕೂಡಲೆ, ಲಾರ್ಡ್ ಡಫರಿನ್ ಅವರು ಮಿತಪರಿವಾರದೊಡನೆ ಎದ್ದು ಬಂದು, ಶ್ರೀಮನ್ಮಹಾರಾಜರವರನ್ನು ಇದಿರ್ಗೊಂಡು ಕರೆದುಕೊಂಡು ಹೋಗಿ, ತಮ್ಮ ಬಲಗಡೆ ಸಿದ್ಧಮಾಡಿದ್ದ ಉಚಿತಾಸನದಲ್ಲಿ ಕುಳ್ಳಿರಿಸಿದರು. ಬಳಿಕ ರೆಸಿಡೆಂಟರೇ ಮೊದಲಾದ ಮೈಸೂರು ಅಧಿಕಾರಿಗಳು ಮಹಾರಾಜರವರ ಎಡಗಡೆಯಲ್ಲಿ ಕುಳಿತುಕೊಂಡರು. ಸ್ವಲ್ಪಹೊತ್ತು ಪರಸ್ಪರ ಯೋಗಕ್ಷೇಮ ವಿಚಾರವಾದಬಳಿಕ, ಮಹಾರಾಜರವರು ೧೦೦ ಬಂಗಾರದ ಮೊಹರಾ

ಗಳನ್ನು ವೈಸ್ರಾಯಿಯವರಿಗೆ ಕಾಣಿಕೆಯಾಗಿ ಒಪ್ಪಿಸಲು, ಅವರು ಅದನ್ನು ಸಂಸ್ಪರ್ಶಿಸಿ, ಹಿಂದೂರಾಜರ ಮರ್ಯಾದೆಗೆ ತಕ್ಕಂತೆ ತಾವೇ ಪ್ರತ್ಯುತ್ಥಾನ ಮಾಡಿ, ಮಹಾರಾಜರಿಗೆ ಗಂಧಪುಷ್ಪ ತಾಂಬೂಲಾದಿಗಳನ್ನು ಒಪ್ಪಿಸಿದರು. ಆಗ ಫಾರಿನ್ ಸೆಕ್ರಿಟೆರಿಯವರು ಮಹಾರಾಜರ ಜೊತೆಯಲ್ಲಿ ಬಂದಿದ್ದ ಅಧಿಕಾರಿಗಳನ್ನೆಲ್ಲ ಸತ್ಕರಿಸಿದರು. ತರುವಾಯ ಮಹಾರಾಜರವರು ವೈಸ್ರಾಯಿಯವರ ಅಪ್ಪಣೆಯನ್ನು ಪಡೆದು ಬೀಡಾರಕ್ಕೆ ತೆರಳಿದರು. ಆಗಲೂ ರಾಜಮರ್ಯಾದಾರ್ಥವಾಗಿ ಇಪ್ಪತ್ತೊಂದು ತೋಫುಗಳು ಹಾರಿಸಲ್ಪಟ್ಟುವು.

ಮಾರನೆಯ ದಿನ ಲಾರ್ಡ್ ಡಫರಿನ್ ಪ್ರಭುಗಳು ಮಹಾರಾಜರ ಸಂದರ್ಶನಕ್ಕೆ ತಮ್ಮ ಇಷ್ಟಮಿತ್ರ ಸಾಮಾಜಿಕರೊಡನೆ ದಯೆಮಾಡಿಸಿದರು. ಆ ಸಾಯಂಕಾಲ ಇಂಡಿಯಾ ದೇಶದ ಕಮ್ಯಾಂಡರ್-ಇನ್-ಛೀಫ್ ಅವರಾದ ಲಾರ್ಡ್ ರಾಬರ್ಟ್ಸ್ ಅವರು ಶ್ರೀಮನ್ಮಹಾರಾಜರವರಿಗೆ ಒಂದು ವನಭೋಜನ (ಗಾರ್ಡನ್ ಪಾರ್ಟಿ) ವನ್ನು ಮಾಡಿಸಿದರು. ಆ ಔತಣಕ್ಕೆ ಕಲ್ಕತ್ತೆಯಲ್ಲಿರತಕ್ಕ ಪ್ರಖ್ಯಾತರಾದ ಆನರೆಬಲ್ ಗುರುದಾಸಬಾನರ್ಜಿ, ಸುರೇಂದ್ರನಾಥಬಾನರ್ಜಿ, ಟಾಗೂರ್, ಮಹಾರಾಜ ದುರ್ಗಾಚರಣಲಾಲ್, ಡಾಕ್ಟರ್ ಜಗದೀಶಚಂದ್ರಬೋಸ್ ಮುಂತಾದ ಬಂಗಾಳಿ ದೊಡ್ಡ ಮನುಷ್ಯರೂ, ಜಸ್ಟಿಸ್ ಅಮೀರ್ ಅಲ್ಲೀಖಾನ್ ಸಾಹೇಬ್, ನವಾಬ್ ಅಬ್ದುಲ್ ಲತೀಫ್ ಸಾಹೇಬ್ ಮುಂತಾದ ಮಹಮ್ಮದೀಯ ದೊಡ್ಡಮನುಷ್ಯರೂ ಬಂದಿದ್ದರು. ಆಗ ನಡೆದ ವೀಣಾದಿ ವಾದ್ಯನಾದ ರಸವು ಸಂಧ್ಯಾಕಾಲದ ತಂಗಾಳಿಯಲ್ಲಿ ಹರಿದು ಬಂದು ಕರ್ಣಕುಹರವನ್ನು ತುಂಬಿದಾಗ ಉಂಟಾದ ಸುಖವನ್ನು ಅನುಭವಿಸಿದವರಲ್ಲಿ ಯಾರೂ ಮರೆತಿರಲಾರರು.

ಈ ಮಧ್ಯದಲ್ಲಿ, ಶ್ರೀಮನ್ಮಹಾರಾಜರವರು ಕೆಲವು ಮಂದಿ ಅಧಿಕಾರಿಗಳಿಗೂ ಅರಸುಗಳಿಗೂ ಬೇಕಾದಷ್ಟು ದ್ರವ್ಯವನ್ನಿತ್ತು ಗಯಾಧಾಮಕ್ಕೆ ಹೋಗಿ ತೀರ್ಥವಿಧಿಗಳನ್ನು ಪೂರಯಿಸಿಕೊಂಡು ಬರುವಂತೆ ಅಪ್ಪಣೆಮಾಡಿ ಕಳುಹಿಸಿಕೊಟ್ಟರು. ವಾಣೀವಿಲಾಸ ಸನ್ನಿಧಾನದ ಮಹಾರಾಜ್ಞಿಯವರು ಗರ್ಭವತಿಯರಾಗಿದ್ದುದರಿಂದ, ಶ್ರೀಮನ್ಮಹಾರಾಜರವರ ಸವಾರಿ ಗಯಾಧಾಮಕ್ಕೆ ದಯೆಮಾಡಲಿಲ್ಲ.

ಶ್ರೀಮನ್ಮಹಾರಾಜರವರು, ಅರಮನೆಗಳ ಪಟ್ಟಣವೆಂಬುದಾಗಿ ಖ್ಯಾತಿಗೊಂಡ ಕಲ್ಕತ್ತಾ ಪಟ್ಟಣದಲ್ಲಿರುವ 'ಇಂಪೀರಿಯಲ್ ಮ್ಯೂಜಿಯಂ' ಎಂಬ ಸರ್ವವಸ್ತು ಪ್ರದರ್ಶನ ಶಾಲೆ, ಹೈಕೋರ್ಟು, ಬೋಟಾನಿಕಲ್ ಗಾರ್ಡನ್ಸ್ ಎಂಬ ಉದ್ಯಾನವನ, ವಿಶ್ವವಿದ್ಯಾನಿಲಯ, ಟೌನ್‌ಹಾಲ್, ಫೋರ್ಟ್‌ವಿಲಿಯಂ ಎಂಬ ಕೋಟೆ, ಬೆಲ್ವೆಡಿಯರ್ ಅರಮನೆ, ಗವರ್ನ್‌ಮೆಂಟ್ ಹೌಸ್, ನಗರಕ್ಕೆ ತಿಲಕಪ್ರಾಯವಾದ ಚೌರಂಗಿ, ಈಡನ್ ತೋಟ, ಆಲಿಪೂರ್ ಜುಟೇಖಾನ ಎಂಬ ಪಶ್ವಾದಿಗಳ ಶಾಲೆ, ಮುಂತಾದುವುಗಳನ್ನು ಪರಾಮರ್ಶಿಸಿ, ಆ ನಗರದಿಂದ ಹೊರಟು, ನಾನಾ ವೇಷಭಾಷಾದಿಗಳುಳ್ಳ ಯಾತ್ರಾರ್ಥಿಗಳಿಂದ ತುಂಬಿ ತುಳುಕಾಡುತ್ತ, ವಾಣಿಜ್ಯಕ್ಕೆ ತವರುಮನೆಯಾಗಿ, ಅಗಣ್ಯಪುಣ್ಯ ನಿವಾಸಸ್ಥಾನವೆನಿಸಿಕೊಂಡಿರುವ ಕಾಶೀಕ್ಷೇತ್ರವನ್ನು ತಲುಪಿ, ವಿಜಯನಗರದ ಮಹಾ

ರಾಜರವರ ಅರಮನೆಯಲ್ಲಿ ಇಳಿದು ಅವರಿಂದ ಬಹಳ ಸತ್ಕಾರವನ್ನು ಹೊಂದಿದರು. ಶ್ರೀಮನ್ಮಹಾರಾಜರವರು ಪುಣ್ಯಾಶ್ರಮಗಳಿಂದಲೂ ಅಲ್ಲಲ್ಲಿ ಕುಳಿತು ವೇದಾಧ್ಯಯನ ಮಾಡುತ್ತಿರುವ ವೇದಪಾರಗರಾದ ಬ್ರಾಹ್ಮಣಶ್ರೇಷ್ಠರಿಂದಲೂ ಕೂಡಿ, ದೇವತಾಗಣ ಸೇವಿತವಾಗಿ ಗಂಗೆ ಎಂಬ ಹೆಸರಿನಿಂದ ಲೋಕತ್ರಯಗಳನ್ನು ಪವಿತ್ರಮಾಡುತ್ತ ಸಕಲವಿಧ ಪ್ರಾಣಿಗಳಿಗೂ ಆಧಾರವಾಗಿ ಅತಿ ವಿಸ್ತಾರವುಳ್ಳದ್ದಾಗಿ ಸ್ವಾದೂದಕ ಪರಿಪೂರ್ಣವಾಗಿ ಪುಣ್ಯಸ್ವರೂಪವಾದ ಗಂಗಾನದಿಯಲ್ಲಿ ಸ್ನಾನಾಹ್ನಿಕಗಳನ್ನು ತೀರಿಸಿಕೊಂಡು, ವಿಶ್ವೇಶ್ವರ, ಅನ್ನಪೂರ್ಣೆ, ಕಾಲಭೈರವ, ಬಿಂದುಮಾಧವ ಮುಂತಾದ ದೇವರುಗಳ ದರ್ಶನವನ್ನು ಮಾಡಿದರು.

ಬಳಿಕ ಶ್ರೀಮನ್ಮಹಾರಾಜರವರು, ಪರಿವಾರ ಸಹಿತ ದೋಣಿಗಳಲ್ಲಿ ಕುಳಿತು ಪಟ್ಟಣದ ಒಂದು ಕೊನೆಯಿಂದ ಮತ್ತೊಂದು ಕೊನೆಯವರಿಗೂ ಭಗೀರಥನ ಕೀರ್ತಿ ಪ್ರವಾಹವೋ ಎನ್ನುವಂತೆ ಜಲರಾಶಿಯಿಂದ ವಿಪುಳವಾಗಿ ಹರಿಯುತ್ತಿರುವ ಗಂಗೆಯ ಗಭೀರವಾದ ಪ್ರವಾಹದಲ್ಲಿ ಹೊರಟು, ಚಿತ್ರಕಾರರ ಕಲಾಕೌಶಲಕ್ಕೆ ಯೋಗ್ಯವಾಗಿಯೂ, ಮಹಾಕವಿಗಳ ವರ್ಣನೆಗೆ ಪಾತ್ರವಾಗಿಯೂ ಇರುವ ಘಟ್ಟಗಳ ಸೊಗಸನ್ನೂ, ದೇವಾಲಯ ರಾಜಾಲಯ ಧರ್ಮಶಾಲಾದಿಗಳನ್ನು ಹಿಡಿದು ಪ್ರವಾಹ ಪರ್ಯಂತವೂ ಪ್ರಸರಿಸಿರುವ ಸೋಪಾನಪಙ್ಕ್ತಿಗಳ ಸೌಂದರ್ಯವನ್ನೂ ಕಂಡು ಆಶ್ಚರ್ಯಪಡುತ್ತ, ಶ್ರೀಗುರು ಜಂಗಮವಾಡಿ ಮಠಕ್ಕೆ ದಯಮಾಡಿ, ಸ್ವಾಮಿಗಳಿಂದ ಸನ್ಮಾನಿತರಾಗಿ ಅವರಿಗೆ ಮರ್ಯಾದಾ ವಸ್ತ್ರಗಳನ್ನು ದಯಪಾಲಿಸಿ, ಆ ರಾತ್ರಿ ಕಾಶೀಪಟ್ಟಣದ ಅನೇಕ ವಿದ್ವಾಂಸರುಗಳನ್ನು ಕರೆಯಿಸಿ, ಬೀಡಾರದಲ್ಲಿ ವಿದ್ವತ್ಸಭೆಯನ್ನು ನಡೆಯಿಸಿ, ಅವರುಗಳಿಗೆಲ್ಲ ಉಚಿತವಾದ ಬಹುಮಾನಗಳನ್ನು ಕೊಟ್ಟರು.

ಮರುದಿನ ಪ್ರಾತಃಕಾಲ ಆರೋಗಣೆಯನ್ನು ತೀರಿಸಿಕೊಂಡು, ಅಯೋಧ್ಯಾ—ರೋಹಿಲ ಖಂಡದ ರೈಲ್ವೆಯನ್ನು ಹತ್ತಿ ಲಕ್ನೋಪಟ್ಟಣವನ್ನು ತಲಪಿ, ನಾನಾರಾಯನ ದಂಗೆಯಲ್ಲಿ ನಡೆದ ಅದ್ಭುತಗಳನ್ನು ಸೂಚಿಸುವ ರೆಸಿಡೆನ್ಸೀ ಕಟ್ಟಡವೇ ಮೊದಲಾದುವನ್ನೂ, ಮಾರ್ಟನೀರ್ ಎಂಬ ಮಹಾಪುರುಷನನ್ನೂ ಸರ್ ಹೆನ್ರಿ ಲಾರೆನ್ಸ್ ಎಂಬ ದೊಡ್ಡ ಅಧಿಕಾರಿಯನ್ನೂ ನಿಕ್ಷೇಪ ಮಾಡಿರುವ ಸ್ಥಳಗಳನ್ನೂ ಕಬ್ಬಿಣದ ಸೇತುವೆಯನ್ನೂ ನೋಡಿಕೊಂಡು, ಮುರಾದಾಬಾದನ್ನು ಸೇರಿ, ಆ ನಗರದ ವಿಶೇಷಗಳನ್ನೀಕ್ಷಿಸಿ, ಸರ್ ಸೈಯದ್ ಅಹಮದ್‌ಖಾನ್ ಸಾಹೇಬ್ ಮುಂತಾದ ದೊಡ್ಡಮನುಷ್ಯರನ್ನು ಕಂಡು ಮಾತನಾಡಿಸಿ, ಪ್ರಖ್ಯಾತವಾದ ಅಲ್ಲಿಘರ್‌ಕಾಲೇಜಿನ ಅಭಿವೃದ್ಧಿಗೆ ದ್ರವ್ಯಸಹಾಯಮಾಡಿ, ಆ ಸಾಯಂಕಾಲವೇ ಹರಿದ್ವಾರವನ್ನು ಸೇರಿದರು. ಆ ಮಾರನೆಯ ದಿನ ಪ್ರಾತಃಕಾಲ ಹರಿಕ್ಷೇತ್ರವೆಂಬ ಪುಣ್ಯಕ್ಷೇತ್ರದಲ್ಲಿಯೂ ಬ್ರಹ್ಮಕುಂಡದಲ್ಲಿಯೂ ಸ್ನಾನಮಾಡಿ, ದೇವರ ದರ್ಶನದಿಂದ ಕೃತಾರ್ಥರಾಗಿ, ಸುಬ್ರಹ್ಮಣ್ಯರಾಜ ಅರಸಿನವರು ಬಕ್ಷಿ ಬಸಪ್ಪಾಜಿ ಅರಸಿನವರು, ನರಸಿಂಹಯ್ಯಂಗಾರ್ಯರು—ಇವರುಗಳನ್ನು ಸಂಗಡ ಕರೆದುಕೊಂಡು ನಾಲ್ಕು ಮೈಲಿ ದೂರದಲ್ಲಿದ್ದ ಚಂಡೀಪೆಟ್ಟಕ್ಕೆ ದಯಮಾಡಿ ಅಮ್ಮನವರ ದರ್ಶನವಾದ

ಕೊಂಡುಬಂದು, ಭೋಜನಾನಂತರ ಅಲ್ಲಿಂದ ಪ್ರಯಾಣವನ್ನು ಬೆಳೆಯಿಸಿ, ದಾರಿಯಲ್ಲಿ ಸಿಕ್ಕಿದ ರೂರ್ಕೀ ಸ್ಟೇಷನ್ನಿನ ಹತ್ತಿರ ಗಂಗಾನದಿಗೆ ಕಟ್ಟಿರುವ ಅಣೆಕಟ್ಟಿನ ಕಾಮಗಾರಿಯನ್ನು ಪರಾಮರ್ಶಿಸಿಕೊಂಡು ಲಾಹೋರಿಗಭಿಮುಖರಾಗಿ ಹೊರಟರು.

ಇತ್ತ, ಮಹಾರಾಜರವರು ಬರುವ ವರ್ತಮಾನವನ್ನು ತಿಳಿದಿದ್ದ ಪಂಜಾಬ್ ಗವರ್ನರವರಾದ ಲಯಲ್ ಸಾಹೇಬರವರು, ಶ್ರೀಮನ್ಮಹಾರಾಜರವರನ್ನು ಇದಿರ್ಗೊಂಡು ಕರೆತರುವಂತೆ ತಮ್ಮ ಸೆಕ್ರೆಟೆರಿಯವರನ್ನೂ ಅಂಗರಕ್ಷಕರನ್ನೂ ಕಳುಹಿಸಿದ್ದರು. ಅವರು ಮಹಾರಾಜರನ್ನು ಸಂಧಿಸಿ, ಆರು ಒಂಟೆಗಳಿಂದ ಅಲಂಕೃತವಾದ ರಥದಲ್ಲಿ ಕುಳ್ಳಿರಿಸಿಕೊಂಡು, ಗವರ್ನರವರ ಅರಮನೆಯ ಇದಿರಿಗಿರುವ ಗವರ್ನ್ಮೆಂಟ್ ಹೌಸಿನಲ್ಲಿ ಇಳಿಸಿದರು. ಆ ದಿನ ಗವರ್ನರವರಿಗೂ ಮಹಾರಾಜರವರಿಗೂ ಪರಸ್ಪರ ಸಂದರ್ಶನೋತ್ಸವವು ನಡೆದಮೇಲೆ, ಅಲ್ಲಿಯ ಉದ್ಯೋಗಸ್ಥರೆಲ್ಲರೂ ಸೇರಿ ಮಹಾರಾಜರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು.

ಬಳಿಕ ಶ್ರೀಮನ್ಮಹಾರಾಜರವರು (ಕೆಲವು ದಿವಸಗಳ ಕೆಳಗೆ ಮೈಸೂರು ರೆಸಿಡೆಂಟರಾಗಿದ್ದ) ಲಯಲ್ ಸಾಹೇಬರೊಡನೆ ಪುರವನ್ನು ನೋಡುವುದಕ್ಕೆ ಹೊರಟು, ಮಾರ್ಗದಲ್ಲಿ ತಮ್ಮ ದರ್ಶನಾರ್ಥವಾಗಿ ನೆರೆದಿದ್ದ ಜನರ ಸಂದಣಿಯನ್ನು ನೋಡುತ್ತ, ಯೂರೋಪಿಯನ್ ಸೈನಿಕರಿಂದ ತುಂಬಿರುವ ಕೋಟೆಯನ್ನೂ, ರಣಜಿತ್‌ಸಿಂಗ್ ಮಹಾರಾಜರವರ ಅರಮನೆಯನ್ನೂ, ಷಹಜಿಹಾನ್ ಚಕ್ರವರ್ತಿಯ ಷಾಲಿಮಾರ್ ತೋಟವನ್ನೂ, ಬಾದಷಾ ಔರಂಗಜೇಬಿನ ಮಸೀದಿಯನ್ನೂ, ಸಿಕ್‌ಜನಗಳ ಆಯುಧಶಾಲೆಯನ್ನೂ, ಪಂಜಾಬ್ ಯೂನಿವರ್ಸಿಟೀ ಕಾಲೇಜನ್ನೂ, ಮ್ಯೂಜಿಯಂ ಬಂಗಲೆಯನ್ನೂ ನೋಡಿಕೊಂಡು ಬಂದರು. ಆ ರಾತ್ರಿ ಗವರ್ನರವರು ಮಹಾರಾಜರವರಿಗೆ ‘ ಬಾಲ್ ’ ಎಂಬ ಒಂದು ಭಾರಿ ಔತಣವನ್ನು ಮಾಡಿಸಿದರು.

ಬಳಿಕ ಮಹಾರಾಜರವರು ಲಾಹೋರಿನಿಂದ ಹೊರಟು, ಅಮೃತಸರೋವರವನ್ನು ಸೇರಿ, ಪಟ್ಟಣದ ಮಧ್ಯೇ ಮನೋಹರವಾದ ಒಂದು ಸರೋವರದಲ್ಲಿ, ಎತ್ತರವಾದ ಚೌಕದ ಮೇಲೆ ರಣಜಿತ್‌ಸಿಂಗ್ ಮಹಾರಾಜರವರ ಗುರುಗಳಾದ ಗುರುಗೋವಿಂದ ಸಿಂಗರವರು ತಮ್ಮ ನಾನಾತಪ್ರೋ ಎಂಬ ಗುರುವಿಗೆ ಅಮೃತಶಿಲೆಯ ನೆಲಕಟ್ಟುಗಳಿಂದಲೂ, ಚಿನ್ನಬೆಳ್ಳಿ ತಗಡುಗಳಿಂದ ಮಾಡಿದ ಕಿಟಿಕಿ ಮತ್ತು ಬಾಗಿಲುಗಳಿಂದಲೂ ಶೋಭಾಯಮಾನವಾಗಿರುವಂತೆ ಕಟ್ಟಿಸಿಕೊಟ್ಟ ದೇವಾಲಯವನ್ನು ಪ್ರವೇಶಮಾಡಿ, ಅದರಲ್ಲಿ ನಿರಂತರವೂ ಆದಿಗ್ರಂಥವನ್ನು ಶ್ರವಣಮಾಡುತ್ತಿರುವ ಸಿಕ್‌ಜನಗಳ ಭಕ್ತಿಭಾವವನ್ನು ನೋಡಿ ಹರ್ಷಚಿತ್ತರಾಗಿ, ನಗರದ ವಿಸ್ತಾರವನ್ನೂ, ಶಾಲು ರತ್ನಕಂಬಳಿಗಳ ಕಾರ್ಖಾನೆಗಳನ್ನೂ ಪರಾಮರ್ಶಿಸಿ. ಆ ಸಾಯಂಕಾಲವೇ ಪ್ರಯಾಣೋನ್ಮುಖರಾಗಿ ಪಟವಾರ ಸಹಿತ ಪಂಜಾಬ್ ರೈಲ್ವೆಯನ್ನು ಹತ್ತಿ ಕುರುಜಾಂಗಲದೇಶದ ಮಾರ್ಗವಾಗಿ ಹೊರಟು, ನೀಲಸಲಿಲಮಯವಾದ ಯಮುನಾನದಿಯ ಪಶ್ಚಿಮತೀರದ ಮೇಲೆ ನಾನಾವರ್ಣದ ಯಮುನಾಶಿಲೆಗಳಿಂದ ನಿರ್ಮಿತವಾದ ಮಿನಾರತುಗಳಿಂದಲೂ

ಗುಂಮಜುಗಳಿಂದಲೂ ಬುರುಜುಗಳಿಂದಲೂ ತಲೆಯೆತ್ತಿಕೊಂಡು, ಬೆಳದಿಂಗಳಿನ ರಶ್ಮಿ ರಾಶಿಯಲ್ಲಿ ಪ್ರತಿಫಲಿಸುತ್ತಿರುವ ದೆಹಲೀ ಪಟ್ಟಣವನ್ನು ತಲಪಿದರು.

ಭೋಜನಾನಂತರದಲ್ಲಿ ಶ್ರೀಮನ್ಮಹಾರಾಜರವರು ಮುಖ್ಯಪರಿವಾರದೊಡನೆ ರಥವನ್ನೇರಿ, ಅಲ್ಲಿಯ ಅನುಭವಶಾಲಿಯಾದ ಅಧಿಕಾರಿಯೊಬ್ಬನನ್ನು ಸಂಗಡ ಕರೆದು ಕೊಂಡು, ದಶಗ್ರೀವನ ಪದವಿಯನ್ನೂ ದುರ್ಯೋಧನನ ಸಂಪತ್ತನ್ನೂ ನಿರಾಕರಿಸುವ, ಮೊಗಲಾಯಿ ಬಾದಷಾಗಳ ಮಹದೈಶ್ವರ್ಯಭರಿತವಾದ ಕಟ್ಟಡಗಳನ್ನೂ, ಲಕ್ಷ್ಮೀ ದೇವಿಗೆ ನಾಟ್ಯಸ್ಥಾನವಾಗಿ ಸಕಲ ಸಮೃದ್ಧಿಯನ್ನು ಹೊಂದಿರುವ ಅಂಗಡಿಯ ಸಾಲು ಗಳ ಸೊಬಗನ್ನೂ ನೋಡುತ್ತ, ಚಾಂದನೀ ಚೌಕವನ್ನು ಹಾಯ್ದು, ವಿಕ್ಟೋರಿಯಾ ಗೇಟಿನಿಂದ ಅಜೇಯವಾದ ಹನ್ನೊಂದು ಬಾಗಿಲುಗಳುಳ್ಳ ದೆಹಲಿಯ ಕೋಟೆಯನ್ನು ಪ್ರವೇಶಮಾಡಿ, ಅನನ್ಯಸದೃಶವಾದ ಅಚ್ಚಬಿಳಿಯ ಅಮೃತಶಿಲೆಯಿಂದ ಕಟ್ಟಿ, ಅಮೂಲ್ಯ ವಾದ ನಾನಾವರ್ಣದ ಯಮುನಾ ಕಲ್ಲುಗಳಿಂದ ಮಾಡಿರುವ ಜೇಲ್‌ದಾರಿಯ ಕೆಲಸ ವುಳ್ಳವುಗಳಾಗಿ, ಪ್ರಪಂಚವನ್ನೇ ಬೆರಗುಮಾಡತಕ್ಕ ಸುಂದರಾಕೃತಿಯುಳ್ಳ ಮೊಗಲಾ ಯರ ಅರಮನೆಗಳಲ್ಲಿ ಹಾಳಾಗದೆ ಉಳಿದಿರುವ ಭಾಗಗಳನ್ನೂ, ಜಗದ್ವಿಖ್ಯಾತವಾದ ಮಯೂರ ಸಿಂಹಾಸನವನ್ನಿಡುತ್ತಿದ್ದ ದರ್ಬಾರ್‌ದೇವಡಿಯ ಚೆಲುವಿಕೆಯನ್ನೂ, ಮೊಗಲ್ ಚಕ್ರೇಶ್ವರರ ವಿಲಾಸವೈಭವಗಳನ್ನು ತೋರಿಸುವ ರಂಗಮಹಲ್, ದಿವಾನೀಖಾಸ್, ದಿವಾನೀಆಮ್ ಮುಂತಾದುವುಗಳ ವೈಚಿತ್ರ್ಯವನ್ನೂ, ಕುತುಬ್ ಮಿನಾರಿನ ಔನ್ನತ್ಯ ವನ್ನೂ, ಭಗ್ನಾವಶೇಷವಾಗಿ ಕಾಣುತ್ತಿರುವ ಇಂದ್ರಪ್ರಸ್ಥದ ವೈಭವಚಿಹ್ನೆಯನ್ನೂ, ಮೊಗಲಾಯರ ಅನನ್ಯಸದೃಶವಾದ ಐಶ್ವರ್ಯವನ್ನು ವ್ಯಕ್ತಪಡಿಸುವ ಜುಮ್ಮಾಮಸೀದಿ, ಮೋತೀಮಸೀದಿ, ಹುಮಾಯೂನ್ ಗೋರಿ—ಇವುಗಳ ಶಿಲ್ಪಕಲಾ ಕೌಶಲವನ್ನೂ ನೋಡಿ ಆಶ್ಚರ್ಯಾನ್ವಿತರಾಗಿ, ದೆಹಲಿಯಲ್ಲಿ ಒಂದೆರಡು ದಿನಗಳನ್ನು ಕಳೆದು, ಮೂರ ನೆಯ ದಿನ ಸೂರ್ಯಾಸ್ತಮಯವಾದ ಬಳಿಕ ಅಲ್ಲಿಂದ ಹೊರಟು, ಮೊಗಲ್ ಚಕ್ರವರ್ತಿ ಗಳಿಂದ ಕಟ್ಟಿಸಲ್ಪಟ್ಟ ಅರಮನೆಗಳ ಸಂಖ್ಯೆಯನ್ನು ಸೂಚಿಸುತ್ತವೋ ಎಂಬಂತೆ ರಾತ್ರಿಯ ಬೆಳದಿಂಗಳಿನ ಬೆಳಕಿನಲ್ಲಿ ಜಗಜಗಾಯಮಾನವಾಗಿ ಕಂಗೊಳಿಸುತ್ತ ನಿಂತಿ ರುವ ಭಗ್ನಾವಶೇಷಗಳಾದ ಅರಮನೆಗಳನ್ನೂ, ಕೋಟೆ ಕೊತ್ತಳಗಳನ್ನೂ, ದಟ್ಟಡವಿ ಗಳನ್ನೂ ನೋಡುತ್ತ ಆಗ್ರಾ ಪಟ್ಟಣವನ್ನು ಸೇರಿದರು.

ಗ್ವಾಲಿಯರ್ ಮಹಾರಾಜರವರು ಶ್ರೀಚಾಮರಾಜೇಂದ್ರ ಒಡೆಯರವರ ಆಗಮನವನ್ನು ತಿಳಿದು, ಅವರನ್ನು ಇದಿರ್ಗೊಳ್ಳುವುದಕ್ಕಾಗಿ ಬೇಕಾದ ಏರ್ಪಾಡುಗಳ ನ್ನೆಲ್ಲ ಮಾಡಿದ್ದರು. ಮಹಾರಾಜರವರು ಭೋಜನತೀರಿಸಿಕೊಂಡು, ಮೋತೀಮಸೀದಿ, ಜಸ್‌ಮೈನ್ ಮಿನಾರ್, ಖಾಸ್‌ಮಹಲ್, ಶೀಷ್‌ಮಹಲ್, ದಿವಾನೀಖಾಸ್, ದಿವಾನೀ ಆಮ್, ಮಚ್ಛೀಭವನ್, ನೋಮುಸಾಥಾಲಯದ ಬಾಗಿಲುಗಳಿಂದ ರಂಜಿಸುವ ಜಹಂ ಗೀರ್ ಮಹಲ್ ಮುಂತಾದುವನ್ನು ನೋಡಿ, ಮುಂದೆ ನಡೆದು, ಕೀರ್ತಿಶೇಷನಾದ ಷಾಜಹಾನ್ ಚಕ್ರವರ್ತಿಯು ತನ್ನ ಪ್ರಿಯತಮೆಯಾದ ಮುಂಮ್ತಾಜ್ ಮಹಲ್ ಎಂಬ

ನಾರೀಮಣಿಗಾಗಿ, ಯಮುನಾನದೀ ತೀರದಲ್ಲಿ ವಿವಿಧ ವೃಕ್ಷರಾಜಿಗಳಿಂದಲೂ, ಅವ್ಯಕ್ತಮಧುರವಾಗಿ ಧ್ವನಿಗೈಯ್ಯುತ ವಿಹರಿಸುವ ಶುಕಪಿಕಾದಿ ಪಕ್ಷಿಜಾಲಗಳಿಂದಲೂ, ರಮಣೀಯವಾದ ಒಂದು ಪುಷ್ಪೋದ್ಯಾನದಲ್ಲಿ ಕಟ್ಟಿಸಿ, ಗೋಡೆಗಳಿಗೆಲ್ಲ ಕೆಂಪು, ಕಪ್ಪು, ಹಸಿರು, ಹಳದಿ, ನೀಲಿ ಬಣ್ಣದ ಯಮುನಾ ಶಿಲೆಗಳಿಂದ ವಿಚಿತ್ರವಾದ ನಕಾಸು ಕೆಲಸವನ್ನು ಮಾಡಿ, ನಾನಾವಿಧ ಲತೆಗಳನ್ನೂ ಹೂಗಳನ್ನೂ ಭ್ರಮರಗಳನ್ನೂ ಫಲಗಳನ್ನೂ ಪಕ್ಷಿಗಳನ್ನೂ ಜೀವಜಂತುಗಳನ್ನೂ ಅರಬ್ಬೀ ಭಾಷೆಯ ಅಕ್ಷರಗಳನ್ನೂ ಕೆತ್ತಿ, ಷಾಜಹಾನ್, ಮುಂಮ್ತಾಜ್ ಮಹಲ್—ಇವರ ಸಮಾಧಿಗಳಿಂದ ಕೂಡಿ, ಈ ಜಗತ್ತಿನಲ್ಲಿರುವ ಕಟ್ಟಡಗಳಿಗೆಲ್ಲ ತಿಲಕಪ್ರಾಯವಾಗಿರುವಂತೆ, ಕೇವಲ ಶ್ವೇತಶಿಲಾ ಮಯವಾಗಿ ವಿರಚಿಸಿರುವ ತಾಜ್ ಮಹಾಲನ್ನೂ, ಆಗ್ರಾಕ್ಕೆ ವಾಯುವ್ಯದಿಕ್ಕಿನಲ್ಲಿ ಸಿಕಂದ್ರಾದಲ್ಲಿರುವ ಸಚ್ಚರಿತ್ರನಾದ ಅಕ್ಬರ್ ಬಾದಷಾಹನ ಸಮಾಧಿಯನ್ನೂ ನೋಡಿ ಕೊಂಡು ಬಂದರು.

ಜನವರಿ ೨೯ನೆಯ ಭಾನುವಾರ ಪ್ರಾತಃಕಾಲ ಮಹಾರಾಜರು ಆಗ್ರಾದಲ್ಲಿ ಪರಿವಾರವನ್ನು ಬಿಟ್ಟು, ಕೆಲವುಮಂದಿ ಅಧಿಕಾರಿಗಳನ್ನು ಸಂಗಡ ಕರೆದುಕೊಂಡು ಪವಿತ್ರಭೂಮಿಯಾದ ಮಧುರೆಗೆ ಹೋಗಿ, ಯಮುನಾ ನದಿಯಲ್ಲಿ ಸ್ನಾನಮಾಡಿ, ಶ್ರೀಕೃಷ್ಣನ ಜನ್ಮಭೂಮಿಯನ್ನೂ ಲೀಲಾವಿಲಾಸಸ್ಥಾನಗಳನ್ನೂ ಪರಾಂಬರಿಸಿ, ಅಲ್ಲಿಂದ ನದೀ ತೀರಸ್ಥವಾಗಿಯೂ, ವೃಕ್ಷರಾಜಿಗಳ ನೆಳಲಿನಿಂದ ತಂಪಾಗಿಯೂ, ಸೌಂದರ್ಯಕ್ಕೆ ನೆಲೆಯಾಗಿಯೂ, ಪರಮಾತ್ಮನ ಲೀಲಾವಿಲಾಸಾಸ್ಪದವಾಗಿಯೂ ಇದ್ದ ಗೋಕುಲ ಬೃಂದಾವನಕ್ಕೆ ಹೋಗಿ, ಭೂಭಾರವನ್ನು ಪರಿಹರಿಸಲೋಸುಗ ಅವತರಿಸಿದ ಪೀತಾಂಬರ ಧಾರಿಯಾದ ಶ್ರೀಕೃಷ್ಣಪರಮಾತ್ಮನು ಗೋವುಗಳನ್ನು ಕಾಯುತ್ತಿದ್ದ ಸ್ಥಳವನ್ನೂ, ಪರಮಾತ್ಮನ ವೇಣುಗಾನವನ್ನು ಕೇಳುವುದಕ್ಕೆ ಬರುತ್ತಿದ್ದ ಗೋಪಿಕಾ ಸುಂದರಿಯರು ವಿಹರಿಸಿದ ಸ್ಥಳಗಳನ್ನೂ, ನಂದಗೋಪನ ಅರಮನೆಯನ್ನೂ ನೋಡಿ, ಸ್ಥಳಿಕರಿಂದ ಅದರ ವೃತ್ತಾಂತವನ್ನೆಲ್ಲ ತಿಳಿದು, ಆ ಸಾಯಂಕಾಲವೇ ಹಿಂದಿರುಗಿ ಆಗ್ರಾಕ್ಕೆ ಚಿತ್ತೈಸಿ, ಅಲ್ಲಿಂದ ಜಯಪುರವನ್ನು ಕುರಿತು ಪ್ರಯಾಣಮಾಡಿದರು. ಅಲ್ಲಿಯ ಮಹಾ ರಾಜರವರಾದ ಶ್ರೀಮಂತ ಮಾಧವಸಿಂಗರವರು ರಾಜಧಾನಿಯಲ್ಲಿಲ್ಲದುದರಿಂದ, ಅವರ ಮಂತ್ರಿ ಪ್ರಧಾನರು ಸಮಸ್ತ ಸೈನ್ಯದೊಡನೆ ಬಂದು, ಮಹಾಸ್ವಾಮಿಯವ ರನ್ನು ಇದಿರ್ಗೊಂಡು ಕರೆದುಕೊಂಡುಹೋಗಿ ರಾಮುಗಾರ್ಡನ್ ಎಂಬ ಬಂಗಲೆಯಲ್ಲಿ ಇಳಿಸಿದರು.

ಬಳಿಕ ಶ್ರೀಮನ್ಮಹಾರಾಜರವರು, ಲೇಶವೂ ವಕ್ರವಿಲ್ಲದೆ ವಿಶಾಲವಾಗಿಯೂ ನಿರ್ಮಲವಾಗಿಯೂ ಉಭಯಪಾರ್ಶ್ವಗಳಲ್ಲಿಯೂ ಅಲಂಕೃತವಾದ ಉಪ್ಪರಿಗೆಗಳಿಂದ ಕೂಡಿರುವ ರಾಜವೀಥಿಗಳುಳ್ಳ ಜಯಪುರಪಟ್ಟಣವನ್ನೂ, ಪಟ್ಟಣದ ಮಧ್ಯದಲ್ಲಿ ಮನೋ ಹರವಾದ ಉಪವನದಲ್ಲಿ ಕಟ್ಟಿರುವ ಅರಮನೆಯನ್ನೂ, ಅಶ್ವಶಾಲೆಯನ್ನೂ, ನಕ್ಷತ್ರ ಗತಿಯನ್ನು ನೋಡುವುದಕ್ಕಾಗಿ ರಾಜಾ ಜಯಸಿಂಗರಿಂದ ಕಟ್ಟಿಸಲ್ಪಟ್ಟ ಉನ್ನತವಾದ

ಗೋಪುರವನ್ನೂ, ಅನೇಕವಿಧವಾದ ಕಸಬುಗಳನ್ನು ಕಲಿಸುತ್ತಿರುವ ಕೈಗಾರಿಕೆಯ ಪಾಠಶಾಲೆಯನ್ನೂ, ಹೊಸದಾಗಿ ಕಟ್ಟುತ್ತಿದ್ದ ಮ್ಯೂಜಿಯಂ ಬಂಗಲೆಯನ್ನೂ ನೋಡಿ ಅತ್ಯಾನಂದವನ್ನು ಹೊಂದಿ ದಿವಾನರಿಗೆ ಆ ಕೈಗಾರಿಕೆ ಪಾಠಶಾಲೆಯ ವಿಷಯವನ್ನು ಚೆನ್ನಾಗಿ ಪರಿಶೀಲಿಸುವಂತೆ ಅಪ್ಪಣೆಕೊಟ್ಟು ಬೀಡಾರಕ್ಕೆ ದಯಮಾಡಿಸಿದರು.

ಮಾರನೆಯದಿನ ಅಲ್ಲಿಂದ ಹೊರಟು, ಶೈಲಮಾಲೆಗಳಿಂದಲಂಕೃತವಾದ ಅಜ್ಮೀರಿನಲ್ಲಿ ಇಳಿದು, ಪ್ರಭಾತದ ತಂಗಾಳಿಯಿಂದ ತೂಗಾಡುತ್ತಿರುವ ಕುಮುದ ಕಮಲಾದ್ಯನೇಕ ಜಲಜಾತಪುಷ್ಪಗಳ ದಿವ್ಯಪರಿಮಳದಿಂದಲೂ, ಮಕರಂದ ಪಾನಾಸಕ್ತಗಳಾದ ಭ್ರಮರಮಾಲೆಗಳ ಝೇಂಕಾರದಿಂದಲೂ, ಜಲಚರಪಕ್ಷಿಗಳ ಕಲಕಲಧ್ವನಿಯಿಂದಲೂ ಕೂಡಿರುವ ಬ್ರಹ್ಮಪುಷ್ಕರಿಣೀ ಸರೋವರವನ್ನು ಸೇರಿ ಸ್ನಾನಮಾಡಿ, ಅಲ್ಲಿ ಮಾಡತಕ್ಕ ಕ್ರಿಯಾದಿಗಳನ್ನೂ ದಾನಧರ್ಮಗಳನ್ನೂ ನಡೆಯಿಸಿ, ಬ್ರಹ್ಮದೇವರನ್ನೂ ಸರಸ್ವತೀ ದೇವಿಯನ್ನೂ ದರ್ಶನಮಾಡಿ, ಕಣ್ಣುಗಳಿಗೂ ಮನಸ್ಸಿಗೂ ಆನಂದವನ್ನುಂಟು ಮಾಡತಕ್ಕ ಪ್ರದೇಶಗಳನ್ನೆಲ್ಲ ನೋಡಿ ಸಂತುಷ್ಟಹೃದಯರಾಗಿ ಜ್ಯೋತಿಪುರವನ್ನು ಸೇರಿದರು. ಅಲ್ಲಿಯ ವೃದ್ಧಮಹಾರಾಜರವರಾದ ರಾಣಾ ಯಶವಂತಸಿಂಹರವರು ಅಮಾತ್ಯರೇ ಮೊದಲಾದ ಅಧಿಕಾರಿಗಳಿಂದಲೂ, ಪ್ರತಾಪಸಿಂಹ ಮೊದಲಾದ ರಾಜಬಂಧುಗಳಿಂದಲೂ ಕೂಡಿ ಬಂದು, ಶ್ರೀಚಾಮರಾಜೇಂದ್ರ ಒಡೆಯರವರಿಗೆ ಹಸ್ತಲಾಘವವನ್ನಿತ್ತು ದರ್ಶನತೆಗೆದುಕೊಂಡು, ದಿವ್ಯರಥಾರೋಹಣವನ್ನು ಮಾಡಿಸಿ, ಸುಖಸಂಕಥಾಲಾಪವನ್ನು ಗೆಯ್ಯುತ್ತ, ನೇತ್ರಾನಂದಕರವಾದ ಮಕರತೋರಣಗಳಿಂದಲೂ, ಈ ಉತ್ಸವದರ್ಶನದಿಂದ ಆನಂದತುಂದಿಲರಾಗಿರುವ ಪುರಜನರ ಕೋಲಾಹಲದಿಂದಲೂ ರಂಜಿಸುತ್ತಿರುವ ಪಟ್ಟಣವನ್ನು ಪ್ರವೇಶಿಸಿ, ವೈಸ್ರಾಯಿಯವರಿಗಾಗಿ ನೂತನವಾಗಿ ಮರದಿಂದಲೇ ತಯಾರುಮಾಡಿದ್ದ ಅತಿವಿಚಿತ್ರವಾದ ಬೀಡಾರಕ್ಕೆ ಕರೆದುಕೊಂಡು ಹೋಗಿ ಇಳಿಸಿದರು. ಬಳಿಕ ಶ್ರೀಚಾಮರಾಜೇಂದ್ರ ಒಡೆಯರವರು ಭೋಜನವನ್ನು ತೀರಿಸಿಕೊಂಡು, ತಮ್ಮ ಮುಖ್ಯಪರಿವಾರದೊಡನೆ, ಜ್ಯೋತಿಪುರದ ಮಹಾರಾಜರವರ ಅರಮನೆಗೆ ದಯಮಾಡಿಸಿ, ಆ ಮಹಾರಾಜರವರನ್ನೂ ಯುವರಾಜರನ್ನೂ ರಾಜಬಂಧುಗಳನ್ನೂ ಕಂಡು ಮಾತನಾಡಿಸಿ, ಅವರೆಲ್ಲರಿಂದಲೂ ಸತ್ಕೃತರಾಗಿ, ಬೀಡಾರಕ್ಕೆ ದಯಮಾಡಿಸಿದರು. ಅನಂತರ, ಯಶವಂತಸಿಂಹರವರು ಸಕಲ ಪರಿವಾರದೊಡನೆ ಶ್ರೀಮನ್ಮಹಾರಾಜರವರ ದರ್ಶನಕ್ಕೆ ಬಂದಿದ್ದರು. ಉಭಯ ಮಹಾರಾಜರುಗಳು ಸೇರಿ ದರ್ಬಾರ್ ನಡೆಸಿದ ಬಳಿಕ, ರಾಣಾ ಯಶವಂತಸಿಂಹರವರು ಬಕ್ಷೀ ಬಸಪ್ಪಾಜಿ ಅರಸಿನವರೊಡನೆ ತಮ್ಮ ಅರಮನೆಗೆ ತೆರಳಿದರು.

ಬಳಿಕ, ಶ್ರೀಚಾಮರಾಜೇಂದ್ರ ಒಡೆಯರವರು ಪಟ್ಟಣವನ್ನೂ, ದುರ್ಗಮವಾದ ಕೋಟೆಯಲ್ಲಿ ಕಟ್ಟಿರುವ ಹಳೆಯ ಅರಮನೆಯನ್ನೂ, ಆ ಅರಮನೆಯಲ್ಲಿ ಭರತಖಂಡದ ಭಾಗ್ಯೋದಯವನ್ನು ಬಾಚಿಕೊಂಡು ಹೋಗಲು ಬಂದ ಅನ್ಯದೇಶೀಯರೊಡನೆ ಹೋರಾಡಿ ವೀರಸ್ವರ್ಗವನ್ನು ಹೊಂದಿದ ಆ ಮಹಾರಾಜರ ಪೂರ್ವಪುರುಷರ

ಪತ್ನಿಯರು ಚಿತಾರೋಹಣಕಾಲದಲ್ಲಿ ಹಸ್ತಸ್ಪರ್ಶದಿಂದ ಗೋಡೆಯಮೇಲೆ ಮಾಡಿರುವ ಗುರುತುಗಳೇ ಮುಂತಾದ ಅನೇಕ ಪುರಾತನವಾದ ಅತಿಶಯಗಳನ್ನೂ ನೋಡಿಕೊಂಡು ಬೀಡಾರಕ್ಕೆ ಬಂದರು. ಆ ರಾತ್ರಿ ಮಹಾರಾಜರವರ ಬೀಡಾರದಲ್ಲಿ ಸುಮಾರು ಮುನ್ನೂರುಮಂದಿ ನರ್ತಕಿಯರು ಏಕಕಾಲದಲ್ಲಿ ನಾಟ್ಯವಾಡಿದರು.

ಮರುದಿನ ದಿನನಾಥನು ಪೂರ್ವಾಚಲವನ್ನಲಂಕರಿಸಿದ ಬಳಿಕ, ಶ್ರೀಮನ್ಮಹಾರಾಜರವರು, ಆ ರಾಜಸಹೋದರರಾದ ಪ್ರತಾಪಸಿಂಹರೊಡನೆ ಮೃಗಯಾ ವಿಹಾರಾರ್ಥವಾಗಿ ಹೊರಟು, ಆಕಾಶವನ್ನು ಮುಟ್ಟುತ್ತಿರುವ ಶಾಖಾಗ್ರಗಳಿಂದ ಕೂಡಿ, ವಿವಿಧರಾಗ ರಂಜಿತವಾಗಿ ಅನೇಕ ಪುಷ್ಪಗುಚ್ಛಗಳಿಂದ ಕಂಗೊಳಿಸುತ್ತ, ಲತೆಗಳಿಂದ ಆಲಿಂಗಿಸಲ್ಪಟ್ಟು ಶುಕ ಪಿಕಾದಿ ಪಕ್ಷಿಗಳಿಗೆ ಆಶ್ರಯವಾಗಿರುವ ವೃಕ್ಷಗಳಿಂದ ತುಂಬಿ, ಕೃಷ್ಣಸಾರ, ವನಮಹಿಷ, ಭಲ್ಲೂಕ, ವರಾಹ, ವ್ಯಾಘ್ರ, ಗಂಡಮೃಗಾದಿಗಳಿಗೆ ಆವಾಸವಾಗಿರುವ ಒಂದು ಅರಣ್ಯವನ್ನು ಪ್ರವೇಶಿಸಿ, ಕ್ರೂರವಾದ ಕಾಡು ಹಂದಿಯ ಹಿಂಡುಗಳನ್ನು ಕೆಣಕಿ, ಹೊಡೆದು, ಸಂಹರಿಸಿ, ಮೃಗಯಾ ವಿನೋದವನ್ನನುಭವಿಸಿ ಬೀಡಾರಕ್ಕೆ ಚಿತ್ತೈಸಿದರು. ಆ ಕಾಲದಲ್ಲಿ ಜ್ಯೋತಿಪುರದ ಮಹಾರಾಜರವರು ಶ್ರೀಚಾಮರಾಜೇಂದ್ರ ಒಡೆಯರವರಿಗೆ ಅಮೂಲ್ಯವಾದ ಅನೇಕ ವಸ್ತ್ರಾಭರಣ ರಥ ಗಜಾಶ್ವಗಳನ್ನು ಮರ್ಯಾದಾರ್ಥವಾಗಿ ಒಪ್ಪಿಸಿದರು. ಅವುಗಳು ಯಾವುವೆಂದರೆ :—

೪ ವಜ್ರದ ಆಭರಣಗಳು—.
- ೧ ವಜ್ರ ಮುತ್ತು ಕೆಂಪು ಇರತಕ್ಕ ಶಿರಪೇಷ್ ತುರಾಯಿ.
- ೧ ಮುತ್ತು ಮತ್ತು ಕೆಂಪಿನ ಹತ್ತೊಂಟಿಯ ಜೋಡಿ.
- ೧ ಎಡಹೆಳೆಯ ಮುತ್ತಿನ ಪದಕ.
- ೧ ವಜ್ರ ಮತ್ತು ಕೆಂಪು ಹಾಕಿದ ನಾಗಮುರೀ ಜೋಡಿ.

೨ ಶಾಲ್ ಜೋಡಿಗಳು—
- ೧ ಕಲಾಪತ್ತು ಚಾರೆಹಾಸೆ ಕೆಂಪಿನದು
- ೨ ಸಾದಾ ಕೆಂಪಿನದು.

೫ ಬನಾರಸ್ ದುಪ್ಪಟ್ಟಗಳು—
- ೨ ಕಲಾಪತ್ತು ಬೂಟೇದಾರಿ.
- ೨ ನಿರಾಜೀ ಬಚ್ಚಬಾನೆ.
- ೧ ಕೇಸರೀ ರಂಗಿನದು.

೨ ನಿರಾಜಿ ತುಕಡ ಗಜ ೧|||ರ ಬಾಬತು.

೪ ಪಾಗುಗಳು—
- ೧ ಬನಾರಸ್ ಥಡೀದಾರಿ ಕೆಂಪು ರೇಷ್ಮಾನಿ.
- ೨ ಮಾರ್ವಾಡಿ ಸೂಸೀದು.
- ೧ ನಿರಾಜೀದು.

೧ ನಿರಾಜೀ ಕಂಬರ್‌ಬಂದ್.

೬ ಸಿಕಾಕೋಲ್ ತಾನುಗಳು.

೩ ಕಿನ್‌ಕಾಬು ತಾನುಗಳು—
- ೨ ಅಪರಫಿ ಬೂಟಾದ್ದು.
- ೧ ಗಿಡದ ಬೂಟಾದ್ದು.

೧ ಆನೆ—(ಆಭರಣ ಸಹಿತ)

೨ ಕುದುರೆಗಳು—(ಆಭರಣ ಸಹಿತ)

೧ ಬೆಳ್ಳಿ ನಾಣ್ಯದ ತೈಲ.

೧ ಕತ್ತಿ.

ಅನಂತರ ಶ್ರೀಮನ್ಮಹಾರಾಜರವರು ಮುಂದಕ್ಕೆ ಪ್ರಯಾಣ ಹೊರಡುವಾಗ ರೈಲ್ವೇ ಸ್ಟೇಷನ್ನಿನ ಮುಂಭಾಗದಲ್ಲಿ ಉಭಯ ಮಹಾರಾಜರೂ, ಅವರ ಮಂತ್ರಿ ಸಾಮಾಜಿಕರಲ್ಲಿ ಮುಖ್ಯರೂ, ರಾಜಬಂಧುಗಳೂ, ರೆಸಿಡೆಂಟರೂ, ಅಲ್ಲಿಯ ಯುವರಾಜರೂ ಇರುವ ಭಾವಚಿತ್ರವನ್ನು ಛಾಯಾಗ್ರಾಹಿ ಯಂತ್ರದಿಂದ ತೆಗೆದರು.

ಹೀಗೆ ಶ್ರೀಮನ್ಮಹಾರಾಜರವರು ರೈಲ್ವೇ ಪ್ರಯಾಣವನ್ನರಿಯದ ಪರಿವಾರಕ್ಕೆ ದೇಶಾಂತರಗಳ ವಿಲಾಸ ವಿಭವಗಳನ್ನು ತೋರಿಸುತ್ತ, ಇರುಳೆನ್ನದೆ ಹಗಲೆನ್ನದೆ

ಶ್ರೀಚಾಮರಾಜೇಂದ್ರ ಒಡೆಯರವರು ಮತ್ತು ಜಿಲ್ಯೇತ್ಪುರದ ಮಹಾರಾಣಾ ಯಶವಂತ ಸಿಂಹರವರು.

ಪ್ರಯಾಣಮಾಡುತ್ತ, ಕಲಾಕೌಶಲಕ್ಕೆ ಪ್ರಸಿದ್ಧವಾದ ಅಹಮ್ಮದಾಬಾದನ್ನು ತಲಪಿದರು. ಅಲ್ಲಿಯ ಅಧಿಕಾರಿಗಳೂ ಸಾಹುಕಾರರೂ ಮಹಾರಾಜರವರನ್ನು ಸತ್ಕರಿಸಲು, ಮಹಾರಾಜರವರು ಎರಡು ದಿವಸಗಳು ಅಲ್ಲಿದ್ದು, ಮೊಗಲಾಯರ ಕಾಲದಲ್ಲಿ ಕಟ್ಟಿದ ಕಲಾಪೂರ್ಣವಾದ ಕಟ್ಟಡಗಳನ್ನೂ ಕಾರ್ಖಾನೆಗಳನ್ನೂ ಪರಾಮರ್ಶಿಸಿ, ತಮ್ಮನ್ನು ಕರೆದುಕೊಂಡು ಹೋಗುವುದಕ್ಕಾಗಿ ಸಕಲ ರಾಜಮರ್ಯಾದೆಗಳೊಡನೆ ಬಂದಿದ್ದ ಶ್ರೀಮಂತ ಆನಂದರಾವ್ ಗಾಯಕವಾಡ್, ಸಂಪತರಾವ್ ಗಾಯಕವಾಡ್ ಮೊದಲಾದ ರಾಜಬಂಧುಗಳೊಡನೆ ಬರೋಡಾ ಪಟ್ಟಣಕ್ಕೆ ಪ್ರಯಾಣವನ್ನು ಬೆಳೆಸಿದರು.

ಶ್ರೀಮಂತ ಗಾಯಕವಾಡರವರು ಇಂಗ್ಲೆಂಡಿಗೆ ಪ್ರಯಾಣಮಾಡಿದ್ದ ಕಾರಣ, ಬರೋಡಾ ಮಹಾರಾಜರವರ ಜನನಿಯವರಾದ ಜಮುನಾಬಾಯಿಯವರು ಮೈಸೂರು ಮಹಾರಾಜರು ಬರುವರೆಂದಾನಂದಿಸಿ, ಅವರು ಬರುವ ಮಾರ್ಗದಲ್ಲೆಲ್ಲ ವಿಜಯ ತೋರಣಾದಿಗಳನ್ನು ಕಟ್ಟಿಸಿ, ಬಾಳೆಯ ಕಂಬಗಳನ್ನು ನಡಿಸಿ, ಬೀಡಾರಗಳನ್ನು ಸಿದ್ಧಪಡಿಸಿ, ಅಡಿಗೆ ಯೂಟಗಳಿಗೆ ಹೇಳಲಸದಳವಾದ ಏರ್ಪಾಡುಗಳನ್ನು ಮಾಡಿ, ತಮ್ಮ ಮೊಮ್ಮಕ್ಕಳಾದ ಪ್ರತಾಪಸಿಂಹರು, ರಥ ಗಜ ತುರಗ ಪದಾತಿಗಳೊಡನೆಯೂ, ಇಷ್ಟ ಮಿತ್ರ ಪರಿವಾರದೊಡನೆಯೂ, ಚಿನ್ನ ಬೆಳ್ಳಿಯ ಫಿರಂಗಿಗಳೊಡನೆಯೂ ರೈಲ್ವೇ ಸ್ಟೇಷನ್ನಿನಲ್ಲಿ ಕಾದಿರುವಂತೆ ಏರ್ಪಾಡು ಮಾಡಿದ್ದರು. ಸ್ಟೇಷನ್ನಿನ ಬಳಿ ಶೋಭಾಯಮಾನವಾದ ಮಂಟಪವನ್ನು ಕಟ್ಟಿ, ನಾನಾ ಚೀನಾಂಬರ ಪತಾಕಾದಿಗಳಿಂದ ಅಲಂಕರಿಸಿದ್ದರು. ರಾಜಮಾರ್ಗಗಳ ಉಭಯ ಪಾರ್ಶ್ವಗಳಲ್ಲಿಯೂ ಬಹುದೂರ ಸಹಸ್ರಾರು ಜನರು ಮೈಸೂರು ಮಹಾರಾಜ ದರ್ಶನೈಕ ಲಾಲಸರಾಗಿ ಬಹು ಕುತೂಹಲದಿಂದ ನೆರೆದಿದ್ದರು. ಶ್ರೀಮನ್ಮಹಾರಾಜರವರು ಬಂಡಿಯಿಂದ ಇಳಿದ ಕೂಡಲೆ ಒಟ್ಟಾಗಿ ಬೋರ್ಗರೆದ ನಾನಾ ಮಂಗಳ ವಾದ್ಯಗಳ ಘೋಷವೂ ಫಿರಂಗಿಗಳ ಆರ್ಭಟವೂ ಕಿವುಡುಗೊಳಿಸುವಂತಾಯಿತು. ಮಹಾರಾಜರವರು ಬರೋಡಾ ಯುವರಾಜರು ಮತ್ತು ರಾಜಬಂಧುಗಳೊಡನೆ ಸ್ವಲ್ಪ ಹೊತ್ತು ಸುಖ ಸಂಕಥನವನ್ನು ಮಾಡಿ, ಅಲ್ಲಿಯ ಅಧಿಕಾರಿಗಳು ಮಾಡಿದ ಮುಜರೆಯನ್ನು ಸ್ವೀಕರಿಸಿ, ದಿವ್ಯಾಶ್ವಗಳನ್ನು ಹೂಡಿ ಸಿದ್ಧವಾಗಿ ನಿಂತಿದ್ದ ಉನ್ನತವಾದ ವಿಜಯರಥವನ್ನೇರಿದರು. ರಥದ ಹಿಂದೆ ಗಾಯಕವಾಡರ ಸೈನಿಕರು, ಅಧಿಕಾರಿಗಳು, ಮಹಾರಾಷ್ಟ್ರ ಗುಜರಾತಿ ಪಾರ್ಸೀ ದೊಡ್ಡ ಮನುಷ್ಯರು—ಇವರುಗಳಲ್ಲಿ ಕೆಲವರು ರಥಗಳ ಮೇಲೂ, ಕೆಲವರು ಕುದುರೆಗಳ ಮೇಲೂ—ಹೊರಟರು. ಮಹಾರಾಜರವರು ಪಟ್ಟಣವನ್ನು ಪ್ರವೇಶಮಾಡಿದ ಕಾಲದಲ್ಲಿ ನಾಲ್ಕು ಕಡೆಯಿಂದಲೂ ಪುಷ್ಪವೃಷ್ಟಿಯೂ ಜಯಜಯ ಧ್ವನಿಯೂ ಆಯಿತು. ಪಾಠಶಾಲಾ ಬಾಲೆಯರು ಆರತಿಯೆತ್ತಿ ಹಾಡುಗಳನ್ನು ಹೇಳಿದರು. ಪುರಜನರು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು.

ಈ ರೀತಿಯಾಗಿ ಶ್ರೀಮನ್ಮಹಾರಾಜರವರು ಬರೋಡಾ ದೇಶದ ಪ್ರಜೆಗಳು ಮಾಡಿದ ಸತ್ಕಾರಗಳನ್ನು ಕೈಕೊಳ್ಳುತ್ತ ಮೋತೀಮಹಲ್ ಅರಮನೆಗೆ ಬಿಜಯಮಾಡಿಸಿ, ಆರೋಗಣೆ ಬೆಳೆದ ಬಳಿಕ, ತಮ್ಮ ಪರಿವಾರಪ್ರಮುಖರೊಡನೆ ಬರೋಡಾ ಮಹಾರಾಜ

ರವರ ಜನನಿಯುವರಾದ ರಾಣೀ ಜಮುನಾಬಾಯಿಯವರ ದರ್ಶನಕ್ಕೆ ದಯಮಾಡಿ, ಅಲ್ಲಿಯ ಯುವರಾಜರೇ ಮುಂತಾದವರೊಡನೆ ಸ್ವಲ್ಪಹೊತ್ತು ಮಾತನಾಡಿ, ಇಂಗ್ಲೆಂಡಿಗೆ ದಯಮಾಡಿಸಿದ್ದ ಶ್ರೀಮಂತ ಸಯಾಜಿರಾವ್ ಮಹಾರಾಜರವರ ಕ್ಷೇಮಲಾಭವನ್ನು ವಿಚಾರಿಸಿದರು. ಆ ಕಾಲದಲ್ಲಿ ಆ ವೃದ್ಧಮಹಾರಾಜ್ಞಿಯವರು ಶ್ರೀ ಚಾಮರಾಜೇಂದ್ರ ಒಡೆಯರವರನ್ನು ಜನನಿಗಿಂತಲೂ ಹೆಚ್ಚಾಗಿ ಆದರಿಸಿ ಬಹಳವಾಗಿ ಸತ್ಕರಿಸಿದರು. ಈ ಸತ್ಕಾರಗಳನ್ನು ಕೈಕೊಂಡು, ಬಂಗಾರದ ಫಿರಂಗಿಗಳನ್ನಿಟ್ಟಿರುವ ತೋಫ್‌ಖಾನೆಯನ್ನೂ, ನೂತನವಾಗಿ ಕಟ್ಟುತ್ತಿದ್ದ ಲಕ್ಷ್ಮೀವಿಲಾಸವೆಂಬ ಹೊಸ ಅರಮನೆಯನ್ನೂ, ಅಮೂಲ್ಯವಾದ ರತ್ನಾಭರಣಗಳ ಬೊಕ್ಕಸವನ್ನೂ, ಟಗರು ಕಾಳಗ ಮೊದಲ್ಗೊಂಡು ಆನೆಯ ಕಾಳಗದ ಪರ್ಯಂತ ನಡೆಸಿದ ಕಾಳಗ ವಿಶೇಷಗಳನ್ನೂ, ಮದವೇರಿದ ಆನೆಗೂ ಅಶ್ವಾರೋಹಕನಾದ ಸೈನಿಕನಿಗೂ ನಡೆವ ಅದ್ಭುತವಾದ ಸಾತ್ಮಾರಿಯೆಂಬ ವಿನೋದವನ್ನೂ, ಮಲ್ಲರ ಬಾಹುಯುದ್ಧಗಳನ್ನೂ, ಗಜ ತುರಗಾದಿಗಳ ಆಟಪಾಟಗಳನ್ನೂ ಪರಾಮರ್ಶಿಸಿಕೊಂಡು ಬೀಡಾರಕ್ಕೆ ದಯಮಾಡಿಸಿದರು. ಈ ರೀತಿಯಾಗಿ ಶ್ರೀಮನ್ಮಹಾರಾಜರವರು ಮೂರು ದಿವಸಗಳ ವರೆಗೆ ಅನೇಕ ಉತ್ಸವ ಪರಂಪರೆಗಳಿಂದ ದಣಿದು, ಮುಂದಕ್ಕೆ ಹೊರಡುವ ಕಾಲದಲ್ಲಿ, ಆ ಮಹಾರಾಜ್ಞಿಯವರೂ, ಯುವರಾಜರೂ, ರಾಜಬಂಧುಗಳೂ, ಅಧಿಕಾರಿಗಳೂ ಸೇರಿ ದರ್ಬಾರ್ ನಡೆಯಿಸಿ, ಈ ಕೆಳಗೆ ಹೇಳುವ ಖಿಲ್ಲತ್ತುಗಳನ್ನು ಒಪ್ಪಿಸಿದರು :—

೨ ಆಭರಣಗಳು—
- ೧ ಐದೆಳೆಯ ವಜ್ರದ ಕಮಲಮಾಲೆ.
- ೧ ವಜ್ರ ಮತ್ತು ಪಚ್ಚೆ ಇರತಕ್ಕ ತುರಾಯಿ.

೩ ಪಾಗುಗಳು—
- ೧ ಕಲಾಪತ್ತು ಕಾಡಿದಾರಿ ಹಸಿರು.
- ೧ ನಿರಾಜೀ ಕಾಡಿದಾರಿ ಕೆಂಪು.
- ೧ ಕಲಾಪತ್ತು ಬೂಟೇದಾರಿ ಕೆಂಪು ಸೂತೀದು.

೨ ಇರಾನೀ ಕೋಟುಗಳು—
- ೧ ಗುಲಾಬಿ ರಂಗಿನ ಪೂರ್ಣಿ ಕೆಲಸದ್ದು.
- ೧ ಹಸಿರು ಧಡಿದಾರಿ ಕಿಕ್ಕಾಬಿನದು.

೧ ನವಲುಕಣ್ಣು ಬೂಟೆ ನೀಲಿ ಕಿಕ್ಕಾಬಿನ ಷರಾಯಿ.

೧ ಅಂಜೂರೀ ರಂಗಿನ ಬನಾರಸ್ ಮುಗಟ ಅಥವಾ ಪೀತಾಂಬರ.

೨ ಧೋತ್ರದ ಜೋಡಿ—
- ೧ ಕಲಾಪತ್ತು ಗುಂದು ಅಂಚಿನದು.
- ೧ ದುರಂಗಿ ರೇಷ್ಮಾನೀದು.

೧ ಕಲಾಪತ್ತು ಬಾಜೀರಾಯಿನ ದುಪ್ಪಟ್ಟ.

೧ ಮೃಗಜಾತಿ ಶರಗಿನ ಕಂಬರ್‌ಬಂದ್.

೧ ಕಲಾಪತ್ತು ಕಪ್ಪುಚೌಕಳಿ ವೆಂಕಟಗಿರಿ ಸೀರೆ.

೧ ಕಿಕ್ಕಾಬಿನ ರವಿಕೆ ಕಣ.

೫ ಕಿಕ್ಕಾಬು ತಾನುಗಳು—
- ೧ ಜರ್ದಾರಿ ಲಾಯರಿ ಕೆಂಪು.
- ೧ ನೀಲೀ ಬಿಳೀಬಾಬತು.
- ೧ ಗಂಗಾ ಯಮುನಾ ಹಸಿರು ಬಿಳೀ ಬೂಟೇದಾರಿ.
- ೨ ಅಷರಫಿ ಕೆಂಪುಹಸಿರು ಬೂಟೇದಾರಿ

೩ ಡಾಕಮಲ್ ತಾನುಗಳು—
- ೧ ಡೋರೀದು.
- ೨ ಸಾದಾ.

೨ ಕಲಾಪತ್ತು ಚಾರೇಹಾಸ್ ಕಾಶ್ಮೀರದ ಶಾಲುಜೋಡಿ—
- ೧ ಹಸಿರು.
- ೧ ಕೆಂಪು.

೧ ಆನೆ—(ಆಭರಣ ಸಹಿತ)

೧ ಬಿಳಿಯ ಅರಬ್ಬಿ ಕುದುರೆ (ಆಭರಣಸಹಿತ)

೧ ಕತ್ತಿ.

೧ ನಕಾಸು ಕೆಲಸಮಾಡಿ ಗಿಲೀಟು ಚೌಕಟ್ಟು ಹಾಕಿದ ಮೂರುಜನ ಹೆಂಗಸರ ಚಿತ್ರವಿರುವ ಪಟ.

೧ ಬರೋಡಾ ಮಹಾರಾಜರು, ಸರಕಾರದ ಉದ್ಯೋಗಸ್ಥರು, ಅಲ್ಲಿಯ ಕಟ್ಟಡಗಳು ಸೈನ್ಯ, ಆಭರಣ ಮೊದಲಾದುವುಗಳ ಚಿತ್ರಗಳು ಇರತಕ್ಕ ಕಂಚು ಪುಸ್ತಕ (Album)

ಮಹಾರಾಜರವರು ಈ ಖಿಲ್ಲತ್ತುಗಳನ್ನು ಸ್ವೀಕರಿಸಿ, ಭೋಜನ ತೀರಿಸಿಕೊಂಡು ತಂಜಾವೂರು ನಾಟ್ಯವನ್ನು ನೋಡುತ್ತ ಸ್ವಲ್ಪ ಹೊತ್ತನ್ನು ಕಳೆದು, ಬರೋಡಾ ಮಹಾರಾಜ್ಞಿಯವರು ಕಳುಹಿಸಿದ ಸಕಲ ಮರ್ಯಾದೆಗಳೊಡನೆ ಹೊರಟು, ಆ ರಾತ್ರಿ ರಸ್ತೆಗಳಲ್ಲಿ ಹತ್ತಿಸಿದ್ದ ದೀಪಮಾಲೆಗಳನ್ನು ಅವಲೋಕಿಸುತ್ತ, ರೈಲ್ವೇ ಸ್ಟೇಷನ್ನಿಗೆ ತಲಪಿ, ಮುಂದಕ್ಕೆ ಪ್ರಯಾಣವನ್ನು ಬೆಳೆಯಿಸಿ, ಪುನಃ ಮುಂಬಯಿ ಪಟ್ಟಣವನ್ನು ಸೇರಿದರು. ಆ ದಿವಸವೇ ಅಲ್ಲಿಯ ಗವರ್ನರವರಾದ ಲಾರ್ಡ್ ರೇ ಸಾಹೇಬರಿಗೂ ಮಹಾರಾಜರವರಿಗೂ ಭೇಟಿಯಾಯಿತು. ಉಭಯ ಕುಶಲ ಪ್ರಶ್ನೆಗಳಾದ ಬಳಿಕ, ಇಬ್ಬರೂ ರಥಾರೋಹಣವನ್ನು ಮಾಡಿ, ಶ್ರೀಮನ್ಮಹಾರಾಜ್ಞೀ ಇಂಡಿಯಾ ಚಕ್ರವರ್ತಿನಿಯವರ ಎರಡನೆಯ ಕುಮಾರರೂ, ಮುಂಬಯಿ ದೇಶದ ಸೈನ್ಯಾಧ್ಯಕ್ಷರೂ ಆದ ಡ್ಯೂಕ್ ಆಫ್ ಕನ್ನಾಟ್ ಅವರ ದರ್ಶನಕ್ಕೆ ಹೋದರು. ಅಲ್ಲಿ ಪರಸ್ಪರ ಯೋಗಕ್ಷೇಮಾದಿಗಳು ಜರುಗಿದನಂತರ, ಮೂವರೂ ಸೇರಿ ಡಚ್ಚಸ್ ಆಫ್ ಕನ್ನಾಟ್ ಅವರು ಇಟ್ಟಿದ್ದ ಫ್ಯಾನ್ಸೀ ಬಜಾರಿಗೆ ದಯಮಾಡಿಸಿದರು.

ಈ ರೀತಿಯಾಗಿ ಪರಸ್ಪರ ಪ್ರಭುದರ್ಶನ ಸಲ್ಲಾಪಾದಿಗಳಲ್ಲಿ ಎರಡು ದಿನಗಳನ್ನು ಕಳೆದ ಬಳಿಕ, ಶ್ರೀಮನ್ಮಹಾರಾಜರವರು ತಮ್ಮ ನಿಜ ನಗರಿಯನ್ನೂ ಸ್ವಪ್ರಜಾ ನಿಕರವನ್ನೂ ಜ್ಞಾಪಿಸಿಕೊಂಡು, ಅರುಣೋದಯಕ್ಕೆ ಮುಂಚೆ ಪ್ರಯಾಣಮಾಡಿ, ದಾರಿಯಲ್ಲಿರುವ ಘೋರಾರಣ್ಯಗಳನ್ನೂ, ಝುರೀವಾತಗಳನ್ನೂ, ಬೆಟ್ಟಗಳಲ್ಲಿ ಕೊರೆದು ಮಾಡಿರುವ ಸುರಂಗದ್ವಾರಗಳನ್ನೂ, ಸೇತುವೆಗಳನ್ನೂ ನೋಡುತ್ತ, ಬೋರೆಘಾಟ್ ಎಂಬ ಕಣಿವೆಯ ಮಾರ್ಗವಾಗಿ ಪಶ್ಚಿಮಘಟ್ಟಗಳನ್ನು ದಾಟಿ ಸರ್ಪದ ಹಾಗೆ ಹೋಗುವ ರೈಲ್ವೇ ಗಾಡಿಗಳನ್ನೂ, ಇನ್ನೂ ಅನೇಕ ವಿಧವಾದ ಪ್ರಕೃತಿಯ ಅದ್ಭುತ ಲೀಲೆಗಳನ್ನೂ ಕಂಡು ಮಹಾಶ್ಚರ್ಯಪಡುತ್ತ, ಪೂಣೆಯ ಪಟ್ಟಣವನ್ನು ಸೇರಿದರು. ಆಗ ಅಲ್ಲಿಯ ಕಲೆಕ್ಟರವರು ಮಹಾರಾಜರನ್ನು ಇದಿರ್ಗೊಂಡರು. ಮಹಾರಾಜರು ಅಲ್ಲಿರುವ ಸ್ತ್ರೀಯರ ನಾರ್ಮಲ್ ಸ್ಕೂಲನ್ನೂ, ಸಿವಿಲ್ ಎಂಜನಿಯರಿಂಗ್ ಕಾಲೇಜನ್ನೂ, ಕೌನ್ಸಿಲ್ ಹಾಲನ್ನೂ, ರೇಷ್ಮೇ ಕಾರ್ಖಾನೆಗಳನ್ನೂ ಪರಾಮರ್ಶಿಸಿ, ಅಲ್ಲಿ ವ್ಯಾಸಂಗ ಮಾಡುತ್ತಿದ್ದ, ಮೈಸೂರು ವಿದ್ಯಾರ್ಥಿಗಳ ವಿದ್ಯಾವೈದುಷ್ಯಾದಿಗಳನ್ನು ಕಂಡು ಸಂತೋಷಿಸಿ, ಪ್ರೋತ್ಸಾಹಕರವಾದ ಮಧುರೋಕ್ತಿಗಳನ್ನು ನುಡಿದು, ಪುಣೆಯನ್ನು ಬಿಟ್ಟು ಮುಂದಕ್ಕೆ ಪಯಣವನ್ನು ಬೆಳೆಯಿಸಿ, ಮರುದಿನ ದಾರಿಯಲ್ಲಿ ಸಿಕ್ಕಿದ ಕೃಷ್ಣಾ ಸ್ಟೇಷನ್ನಿನಲ್ಲಿಳಿದು, ಕೃಷ್ಣಾನದಿಯಲ್ಲಿ ಸ್ನಾನಾಹ್ನಿಕಾದಿಗಳನ್ನೂ ಭೋಜನವನ್ನೂ ತೀರಿಸಿಕೊಂಡು, ಆ ಸಾಯಂಕಾಲವೇ ಮೈಸೂರಿಗಭಿಮುಖವಾಗಿ ಹೊರಟು, ೧೮೮೮ನೆಯ ಇಸವಿ ಫೆಬ್ರುವರಿ ೧೭ನೆಯ ತಾರೀಖಿನ ದಿನ ಆರೋಗ್ಯಭಾಗ್ಯದೊಡನೆ ಸವಾರಿಯು ರಾಜಧಾನಿಗೆ ಚಿತ್ತೈಸಿತು. ಸಜಲ ಮೇಘೋದಯವನ್ನು ಬಯಸಿ ಕಾದಿರುವ ಚಾತಕ ಪಕ್ಷಿಗಳೋಪಾದಿಯಲ್ಲಿ ಸಕಲ ರಾಜಮರ್ಯಾದೆಗಳೊಡನೆ ನೆರೆದಿದ್ದ ಪ್ರಜೆಗಳು ರಾಜದರ್ಶನದಿಂದ ಪರಮಾನಂದಭರಿತರಾಗಿ, ಚಂದ್ರನನ್ನು ಕಂಡ ಕಡಲಿನಂತೆ ಸಂತೋಷಸಾಗರದಲ್ಲಿ ಮಗ್ನರಾದರು.

ಹನ್ನೆರಡನೆಯ ಅಧ್ಯಾಯ.

ಶ್ರೀಕಂಠೀರವ ನರಸಿಂಹರಾಜ ಒಡೆಯರವರ ಜನನ ಮುಂತಾದುವು.

ಶ್ರೀಮನ್ಮಹಾರಾಜರವರು ಅತ್ಯಾವಶ್ಯಕವಾದ ದೇಶಾಟನವನ್ನು ಮಾಡಿ, ಇತರ ದೇಶಾಧಿಪತಿಗಳಿಂದ ಸನ್ಮಾನವನ್ನು ಪಡೆದು, ದೇಶಸಂಚಾರಮಾಡಿದ ಮೈಸೂರು ರಾಜರುಗಳಲ್ಲಿ ಮೊದಲಿಗರೆನಿಸಿಕೊಂಡು ರಾಜಧಾನಿಯನ್ನು ತಲಪಿದ ಬಳಿಕ, ತಾವು ಜಯಪುರದಲ್ಲಿ ನೋಡಿದ ಕೈಗಾರಿಕೆಗಳ ಪಾಠಶಾಲೆಯಂತೆ, ಸಕಲವಿಧವಾದ ಶಿಲ್ಪಕಲೆಗಳನ್ನು ಬೋಧಿಸುವ 'ಇಂಡಸ್ಟ್ರಿಯಲ್ ಸ್ಕೂಲ್' ಎಂಬ ಕಲಾಶಾಲೆಗಳನ್ನು ಸಂಸ್ಥಾನದ ಮುಖ್ಯಮುಖ್ಯವಾದ ಭಾಗಗಳಲ್ಲಿ ಸ್ಥಾಪಿಸಿ, ಪ್ರಜೆಗಳಿಗೆ ಕೈಗಾರಿಕೆಯ ಕೆಲಸಗಳಲ್ಲಿ ವಿಶೇಷಾಸಕ್ತಿ ಹುಟ್ಟುವಂತೆ ಮಾಡಿದರು. ಇದಲ್ಲದೆ, ತಮ್ಮ ಸಂಚಾರಕಾಲದಲ್ಲಿ ಕಲ್ಕತ್ತೆಯಲ್ಲಿ ಅಯೋಧ್ಯಾ ನವಾಬರ ಬಂಗಲೆಯಲ್ಲಿ ತಾವು ನೋಡಿದ ಜೀವಜಂತುಶಾಲೆಯಂತೆ ಒಂದು ಶಾಲೆಯನ್ನು ತಮ್ಮ ಪ್ರಜೆಗಳ ಪ್ರಯೋಜನಾರ್ಥವಾಗಿ ರಾಜಧಾನಿಯಲ್ಲಿ ಏರ್ಪಡಿಸಿ, ದೇಶದೇಶಾಂತರದ ನಾನಾ ಜಾತಿಯ ಮೃಗಪಕ್ಷಿಗಳನ್ನು ತರಿಸಿ ಇಡಿಸಿದರು. ಬಳಿಕ ತಮ್ಮ ಪ್ರಜೆಗಳು ಕೈಗಾರಿಕೆಯ ಕೆಲಸಗಳಲ್ಲಿಯೂ ಕುಶಲವಿದ್ಯೆಗಳಲ್ಲಿಯೂ ಹೊಂದಿರುವ ಅಭಿವೃದ್ಧಿಯನ್ನೂ, ಮುಂದೆ ಹೊಂದಬಹುದಾದ ಪ್ರವೀಣತೆಯನ್ನೂ ಪರೀಕ್ಷಿಸಬೇಕೆಂಬುದಾಗಿ ದೀರ್ಘಾಲೋಚನೆಯನ್ನು ಮಾಡಿ, ಒಂದು ವಸ್ತುಪ್ರದರ್ಶನವನ್ನು ೧೮೮೮ನೆಯ ವರುಷದ ನವರಾತ್ರಿಯಲ್ಲಿ ನಡೆಯಿಸಿದರು. ಆ ಪ್ರದರ್ಶನಶಾಲೆಗೆ ಸಂಸ್ಥಾನದ ಸಕಲ ಪ್ರದೇಶಗಳಿಂದಲೂ, ಶಿಲ್ಪಿಗಳು ರೈತರು ವರ್ತಕರು ತಮ್ಮ ತಮ್ಮ ಕಲಾಕೌಶಲದಿಂದ ನಿರ್ಮಿಸಿದ ವಿಚಿತ್ರವಸ್ತುಗಳನ್ನೂ, ಕೃಷಿಯಿಂದ ಬೆಳೆದ ನಾನಾ ಪದಾರ್ಥಗಳನ್ನೂ, ನೆಯ್ಗೆಯ ಕೆಲಸಗಳನ್ನೂ, ಚಿನ್ನಬೆಳ್ಳಿ ಮುಂತಾದ ಲೋಹದ ಸಾಮಾನುಗಳನ್ನೂ, ತಾವಾಗಿ ಕಾಡಿನಲ್ಲಿ ಬೆಳೆವ ಅಪೂರ್ವವಸ್ತುಗಳನ್ನೂ, ಹಸು ಹೋರಿ ಎಮ್ಮೆ ಆಡು ಕುರಿ ಮೊದಲಾದ ಪಶುಜಾತಿಗಳಲ್ಲಿ ಉತ್ಕೃಷ್ಟವಾದುವುಗಳನ್ನೂ ತಂದಿದ್ದರು. ಜನರು ತಂದಿದ್ದ ಪದಾರ್ಥಗಳ ಸಂಖ್ಯೆಯು ಸುಮಾರು ಮೂವತ್ತು ಸಾವಿರಕ್ಕಿಂತಲೂ ಹೆಚ್ಚಾಗಿದ್ದಿತೆಂದು ಪರಿಗಣಿಸಲ್ಪಟ್ಟಿತು. ಉತ್ಕೃಷ್ಟವಾದ ಪದಾರ್ಥಗಳಿಗೆಲ್ಲ ಪ್ರೋತ್ಸಾಹರೂಪವಾಗಿ ಅನೇಕ ಬಹುಮಾನಗಳು ಕೊಡಲ್ಪಟ್ಟುವು. ಇಂತಹ ಪ್ರದರ್ಶನೋತ್ಸವವು ಹಿಂದೆ ಯಾವಾಗಲೂ ಯಾವರಾಜರ ಕಾಲದಲ್ಲೂ ಈ ದೇಶದಲ್ಲಿ ನಡೆದಿರಲಿಲ್ಲ. ಇದರಿಂದ ಮೂಲೆಗೆ ಬಿದ್ದಿದ್ದ ಅನೇಕವಾದ ಕಸಬುಗಳು ಪುನರುಜ್ಜೀವಿಸಿ ದೇಶದ ಸಂಪತ್ತು ಹೆಚ್ಚಲು ಕಾರಣವಾಯಿತು. ಇಲ್ಲಿಂದೀಚೆಗೆ ಇಂತಹ ಪ್ರದರ್ಶನಗಳು ಬೆಂಗಳೂರಿನಲ್ಲಿ ಆಗಾಗ ನಡೆಯುವಂತೆ ನಿಯಾಮಕ

ಮಾಡಿದರು. ಇವು ಈಗಲೂ 'ಲಾಲ್‌ಬಾಗ್ ಷೊ, ಮಾರ್ಕೆಟ್ ಷೊ' ಎಂಬ ಅಭಿದಾನದಿಂದ ನಡೆಯುವುವು.

ಶ್ರೀಗಿರುವಲ್ಲಿ, ಆ ವರುಷದ ಜೂನ್ ತಿಂಗಳಲ್ಲಿ ಶ್ರೀಮನ್ಮಹಾರಾಜರವರಿಗೆ ದ್ವಿತೀಯ ಪುತ್ರೋತ್ಸವವಾಗಲು, ತತ್ಪುತ್ರರಿಗೆ ಕಂಠೀರವ ನರಸಿಂಹರಾಜ ಒಡೆಯರೆಂಬುದಾಗಿ ನಾಮಕರಣ ಮಾಡಿದರು. ಈ ರಾಜ ಸಂತಾನಾಭಿವೃದ್ಧಿ ಕಾಲದಲ್ಲಿ, ಪ್ರಜೆಗಳು ರಾಜಧಾನಿಯಲ್ಲಿ ನಡೆದ ಅನೇಕೋತ್ಸವಗಳಿಂದ ಸಂತುಷ್ಟರಾದರಲ್ಲದೆ, ರಾಜ್ಯಭಾರಕ್ರಮಗಳ ವಿಚಾರವನ್ನು ಸಹ ಕುರಿತು ಪ್ರಸ್ತಾಪಿಸತೊಡಗಿ—ನಮ್ಮ ಮಹಾರಾಜರವರು, ಮುಂದಣ ರಾಜ್ಯಭಾರಕ್ಕೆ ಒಬ್ಬ ಪುತ್ರರನ್ನೂ, ಮಂತ್ರಿತ್ವಕ್ಕೆ ಒಬ್ಬ ಪುತ್ರರನ್ನೂ ಪಡೆದರೆಂದು ಕೊಂಡಾಡಿದರು.

ವೃತ್ತ ॥ ಶ್ರೀದೇವೀ ಕುಚಕುಂಬಿ ಕುಂಕುಮ ರಜಶ್ಶೋಣೀಕೃತೋರಸ್ಥಲಂ ।
ಪಾದಾಗ್ರಪ್ರಣತಾಮರೇಂದ್ರ ನಮುಲಂ ನೀಲಾಂಬುದಶ್ಯಾಮಳಂ ॥
ಭೂದೇವಾರ್ಚಿತನಚ್ಯುತಂ ಕರುಣಿಸಲ್ ಶ್ರೀಚಾಮಭೂಪಾಧಿಪಂ ।
ಗ್ರಾದಂಪೋದವನಿತ್ತು ಪುಟ್ಟಿ ತನುಜಂ ಬಾಲೇಂದುವೋಲ್ ವರ್ಧಿಪಂ ॥ ೧ ॥

ಕಂದ ॥ ಸರಸಿಜಮಂದಿರೆಯುನ್ನತ । ಸಿರಿಯಂ ಹಿಮಶೈಲಪುತ್ರಿಯುರು ಧೈರ್ಯಮುಮಂ ॥
ಸರಸತಿ ತಾನೀಯಲಿ ವಾ । ಗ್ಸಿರಿಯಂ ವರಚಾಮರಾಜ ಸೂನುಗೆ ಮುದದಿಂ ॥೨॥

ಬಳಿಕ, ೧೮೮೯ನೆಯ ನವೆಂಬರ್ ತಿಂಗಳಲ್ಲಿ ಇಂಡಿಯಾ ಚಕ್ರವರ್ತಿನಿಯವರ ಪೌತ್ರರಾದ ಪ್ರಿನ್ಸ್ ಆಲ್ಬರ್ಟ್ ವಿಕ್ಟರವರು ಮೈಸೂರಿಗೆ ದಯಮಾಡಿಸಿದರು. ಶ್ರೀಮನ್ಮಹಾರಾಜ್ಞಿಯವರು, ಕೀರ್ತಿಹೊಂದಿದ ತಮ್ಮ ಪೌತ್ರರನ್ನು ಕಳುಹಿಸಿ, ಮೈಸೂರು ಸಂಸ್ಥಾನದ ವಿಷಯದಲ್ಲಿ ತೋರಿಸಿದ ಪ್ರೀತಿ ವಿಶ್ವಾಸಗಳು ಅಸದೃಶವಾದುವೆಂದು ಹೇಳುವಲ್ಲಿ ಸಂಶಯವಿಲ್ಲ. ಪ್ರಿನ್ಸ್ ವಿಕ್ಟರವರು ಮೈಸೂರಿಗೆ ದಯಮಾಡಿಸಿದ ಕಾಲದಲ್ಲಿ, ಮಹಾರಾಜರವರು ಇವರಿಗೆ ರಾಜಧಾನಿಯಲ್ಲಿಯೂ ಶ್ರೀರಂಗಪಟ್ಟಣದಲ್ಲಿಯೂ ಇರತಕ್ಕ ವಿಶೇಷಗಳನ್ನೂ, ಬಿಳಿಗಿರಿ ರಂಗನ ಬೆಟ್ಟದ ಅಡವಿಯಲ್ಲಿ ಕಾಡಾನೆಗಳನ್ನು ಹಿಡಿಯುವ ವಿನೋದವನ್ನೂ ತೋರಿಸಿದರು. ಮೈಸೂರು 'ಗಾರ್ಡನ್ ಪಾರ್ಕು' ಎಂಬ ಪ್ರದೇಶದಲ್ಲಿ ಪ್ರಾರಂಭಿಸಿದ್ದ ಮಹಾರಾಜಾ ಕಾಲೇಜಿನ ಹೊಸಕಟ್ಟಡಕ್ಕೆ ಆಲ್ಬರ್ಟ್ ರಾಜಕುಮಾರರ ಕೈಯಿಂದ ಹಸ್ತಿಬಾರವನ್ನು ಹಾಕಿಸಿದರು. ಈ ಕಾಲೇಜ್ ಭವನವೂ, ಬೆಂಗಳೂರು ಲಾಲ್‌ಬಾಗ್ ತೋಟದಲ್ಲಿರುವ 'ಆಲ್ಬರ್ಟ್ ಹಾಲ್' ಎಂಬ ಗಾಜಿನ ಮಂದಿರವೂ ಆ ರಾಜಕುಮಾರರ ಆಗಮನವನ್ನು ಸೂಚಿಸುವ ಚಿಹ್ನೆಗಳಾಗಿರುತ್ತವೆ.

ಆಲ್ಬರ್ಟ್ ರಾಜಕುಮಾರರು ಚಿತ್ತೈಸಿ ಕೆಲವುಕಾಲ ಕಳೆದ ಮೇಲೆ, ೧೮೯೦ನೆಯ ಜೂಲೈ ೭ರಲ್ಲಿ, ಶ್ರೀಮನ್ಮಹಾರಾಜರವರಿಗೆ ರಾಜಒಡೆಯರೆಂಬ ಮೂರನೆಯ ಕುಮಾರರು ಜನಿಸಿದರು. ಈ ಶಿಶುವು ಒಂದು ವರುಷ ವಯಸ್ಸಿನೊಳಗಾಗಿಯೇ ದೈವಾಧೀನವಾಗಿ ಮಹಾರಾಜರವರಿಗೂ ಮಹಾರಾಣಿಯವರಿಗೂ ಕೇವಲ ವ್ಯಸನವನ್ನುಂಟುಮಾಡಿತು.

ಶ್ರೀಮನ್ಮಹಾರಾಜರವರ ಜ್ಯೇಷ್ಠ ಸಹೋದರರಾದ ಗೋಪಾಲರಾಜ ಅರಸಿನವರು ತಮ್ಮ ಮೂವತ್ತೆರಡನೆಯ ವರುಷದ ವಯಸ್ಸಿನಲ್ಲಿ ಗತಿಸಿದರೆಂಬ ಶೋಚನೀಯವಾದ ವೃತ್ತಾಂತವನ್ನು ಹಿಂದೆಯೇ ತಿಳಿಸಿದೆಯಷ್ಟೆ. ಅವರ ಮರಣಾನಂತರ, ಮಹಾರಾಜರವರು ತಮ್ಮ ಎರಡನೆಯ ಸಹೋದರರಾದ ಸುಬ್ರಹ್ಮಣ್ಯರಾಜ ಅರಸಿನವರನ್ನು ಸರ್ವಕಾಲದಲ್ಲಿಯೂ ಹತ್ತಿರದಲ್ಲಿಟ್ಟುಕೊಂಡು ಜ್ಯೇಷ್ಠ ಭ್ರಾತೃ ವಿಯೋಗ ಜನಿತವಾದ ದುಃಖವನ್ನು ಸ್ವಲ್ಪಮಟ್ಟಿಗೆ ಮರೆತಿದ್ದರು. ಆದರೆ ದೇವರ ಸಂಕಲ್ಪವು ಆ ರೀತಿಯಲ್ಲಿರಲಿಲ್ಲ. ಹಾಗೆ ಮಹಾರಾಜರ ನಿರಂತರ ಛಾಯಾನುವರ್ತಿಗಳೂ



ಇಂಡಿಯಾ ಚಕ್ರವರ್ತಿನಿಯವರ ಮೊಮ್ಮಕ್ಕಳಾದ ಪ್ರಿನ್ಸ್ ಆಲ್ಬರ್ಟ್ ವಿಕ್ಟರವರ ಭೇಟಿ.

ಹಿತಚಿಂತಕರೂ ಆಗಿದ್ದ ಸುಬ್ರಹ್ಮಣ್ಯರಾಜ ಅರಸಿನವರೂ ೧೮೯೦ನೆಯ ಸಂವತ್ಸರದಲ್ಲಿ ತಮ್ಮ ಪೂರ್ವ ವಯಸ್ಸಿನಲ್ಲೇ ಗತಿಸಿಹೋದರು. ಈ ರೀತಿಯಲ್ಲಿದ್ದ ಇಬ್ಬರು ಸಹೋದರರೂ ಲೋಕಾಂತರವನ್ನೈದಲು, ಶ್ರೀಚಾಮರಾಜೇಂದ್ರ ಒಡೆಯರವರಿಗೆ ದುರಂತವಾದ ದುಃಖಭಾರವುಂಟಾಯಿತು. ಪದೇಪದೇ ಭ್ರಾತೃಗಳನ್ನು ನೆನೆದುಕೊಂಡು ಅಂತರಂಗದಲ್ಲಿಯೇ ಕೊರಗುತ್ತಿದ್ದರು. ಈ ಭ್ರಾತೃವಿಯೋಗ ದುಃಖವು ಮಹಾರಾಜರವರಿಗೆ ಅತ್ಯಂತ ವ್ಯಸನವನ್ನುಂಟುಮಾಡಿದುದು ಮಾತ್ರವಲ್ಲದೆ, ತಮಗೂ ತಮ್ಮ ಸಹೋದರರುಗಳಂತೆ ಅಲ್ಪಾಯುಸ್ಸೇ ಇರುವುದೋ ಎಂಬ ಶಂಕೆಯು ಮನಸ್ಸಿನಲ್ಲಿ ನಾಟಿಕೊಂಡಿತು. ಭ್ರಾತೃ ವಿಯೋಗಕಾಲದಲ್ಲಿ, ಛೀಫ್ ಜಡ್ಜರಾಗಿದ್ದ ತಂಬೂಸೆಟ್ಟಿ

ರವರು ಶ್ರೀಮನ್ಮಹಾರಾಜರವರಿಗೆ ದುಃಖೋಪಶಮನಾರ್ಥವಾಗಿ ಒಂದು ಲೇಖನವನ್ನು ಬರೆದರು. ಅದಕ್ಕೆ ಮಹಾರಾಜರವರು ಕೊಟ್ಟ ಉತ್ತರವೇನೆಂದರೆ :—

ಮೈಸೂರು,
೩೧ನೆಯ ಜೂಲೈ ೧೮೯೦.

ನನ್ನ ಮಿತ್ರವರ್ಯರಾದ ತಂಬೂಸೆಟ್ಟಿರವರೇ,

ದುಃಖೋಪಶಮನಕ್ಕೋಸ್ಕರ ನೀವು ಬರೆದ ಲೇಖನಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ. ನನ್ನ ಸಹೋದರರ ವಿಯೋಗವು ನನಗೆ ಮಹಾ ಘೋರತರವಾದ ದೌರ್ಭಾಗ್ಯವು. ಆದರೆ ನಾನು ಅದನ್ನು ಕೈಯಲ್ಲಾದ ಮಟ್ಟಿಗೂ ಸಹಿಸಿಕೊಳ್ಳಲು ಯತ್ನಿಸುವೆನಲ್ಲದೆ, ಎಲ್ಲವೂ ಭಗವಂತನ ಚಿತ್ತದಂತಾಗಲೆಂದು ಆತನನ್ನು ಶರಣು ಹೊಕ್ಕಿರುವೆನು. . . . . .

ತಮ್ಮ ಮಿತ್ರ,
ಚಾಮರಾಜೇಂದ್ರ ಒಡೆಯರ್.

ಈ ರೀತಿಯಾಗಿ ಅನೇಕರು ಶ್ರೀಮನ್ಮಹಾರಾಜರವರಿಗೆ ಅನುತಾಪ ಸೂಚಕಗಳಾದ ಪತ್ರಿಕೆಗಳನ್ನು ಬರೆದು, ಮಹಾರಾಜರವರಿಗುಂಟಾಗಿದ್ದ ಭ್ರಾತೃವಿಯೋಗ ಜನಿತ ದುಃಖವನ್ನು ಆರಿಸುತ್ತ ಬಂದರು.

ಇಷ್ಟರಲ್ಲಿ ಯುವರಾಜರಿಗೆ ಆರು ವರುಷಗಳು ತುಂಬಿದುವು. ಮಹಾರಾಜರು ಅವರಿಗೆ ಚೌಲಕರ್ಮವನ್ನು ಮಾಡಿಸಿ, ಅವರ ವಿದ್ಯಾಭ್ಯಾಸಕ್ಕಾಗಿ ಒಂದು ಪಾಠಶಾಲೆಯನ್ನು ಏರ್ಪಡಿಸಿದರು. ಅದಕ್ಕೆ ವೈಟ್ಲೀ ಸಾಹೇಬರು, ಪೂರ್ಣ ರಾಘವೇಂದ್ರರಾಯರು ಮೊದಲಾದ ಸಮರ್ಥರಾದ ಉಪಾಧ್ಯಾಯರುಗಳನ್ನು ನೇಮಿಸಿ, ಆ ವಿದ್ಯಾವ್ಯಾಸಂಗದಲ್ಲಿ ಅತ್ಯಂತ ಶ್ರದ್ಧೆಯನ್ನು ವಹಿಸಿ, ಅವರನ್ನು ಕೆಲವುಕಾಲ ಮೈಸೂರಿನಲ್ಲಿಯೂ, ಕೆಲವುಕಾಲ ಬೆಂಗಳೂರಿನಲ್ಲಿಯೂ, ಕೆಲವುಕಾಲ ನೀಲಗಿರಿಯ ಫರ್ನ್‌ಹಿಲ್ ಅರಮನೆಯಲ್ಲಿಯೂ ಇಟ್ಟು, ಸನ್ಮಾರ್ಗ ಸದಾಚಾರ ಸದ್ವಿದ್ಯೆಗಳಲ್ಲಿ ಅವರಿಗೆ ಅಭಿರುಚಿ ಹುಟ್ಟುವಂತೆ ಬಹಳ ಜಾಗರೂಕತೆಯಿಂದ ಬೋಧನೆಗೆ ಏರ್ಪಾಡು ಮಾಡಿದರು. ಯುವರಾಜರಿಗೆ ತಾವೇ ಕುದುರೆಯ ಸವಾರಿ ಮುಂತಾದುವನ್ನು ಕಲಿಸಿಕೊಡುತ್ತಿದ್ದರು.

ಬಳಿಕ, ೧೮೯೦ನೆಯ ನವೆಂಬರ್ ತಿಂಗಳಲ್ಲಿ, ಶ್ರೀಮನ್ಮಹಾರಾಜರವರು ಪುನಃ ಸಂಸ್ಥಾನದ ಮತ್ತೆ ಕೆಲವು ಭಾಗಗಳಲ್ಲಿ ಸಂಚಾರ ಹೊರಟು, ಹೊಳೇನರಸೀಪುರ, ಹಾಸನ, ಸಕಲೇಶಪುರ, ಮೂಡಗೆರೆ, ಕೊಟಿಗೆಹಾರ್, ಕಳಸ, ಬಾಳೇಹೊನ್ನೂರು, ಚಿಕ್ಕಮಗಳೂರು, ಬೇಲೂರು, ಬಾಣಾವಾರ, ಗಂಡಸಿ, ಅತ್ತಿಗುಪ್ಪೆ, ಮೇಲ್ಕೋಟೆ ಮುಂತಾದ ಸ್ಥಳಗಳಲ್ಲಿ ಸಂಚಾರಮಾಡಿ ಅಲ್ಲಲ್ಲಿಯ ವಿದ್ಯಮಾನಗಳನ್ನೆಲ್ಲ ಪ್ರತ್ಯಕ್ಷವಾಗಿ ಪರಾಮರ್ಶಿಸಿಕೊಂಡು ಬಂದು, ಪ್ರಜೆಗಳ ಮತ್ತು ಸಂಸ್ಥಾನದ ಉನ್ನತಿಗಾಗಿ ಅನೇಕ ಉಪಾಯಾಂತರಗಳನ್ನು ಕಲ್ಪಿಸಿ, ಅನುಭವಶಾಲಿಗಳೂ ಸಾಮರ್ಥ್ಯವುಳ್ಳವರೂ ರಾಜಕಾರ್ಯ ನಿರ್ವಾಹಕರೂ ಆದ ಅಧಿಕಾರಿಗಳು ಸರಕಾರದ ಕೆಲಸಗಳನ್ನು ಅತ್ಯಾಸಕ್ತಿಯಿಂದ ಮಾಡುವಂತೆ ಅವರಿಗೆಲ್ಲ ವಿಶೇಷ ಪ್ರೋತ್ಸಾಹವನ್ನೀಯುತ್ತ ಪ್ರಜಾರಂಜನೆಯನ್ನು ಮಾಡುತ್ತಿದ್ದರು.

ಹೀಗಿರುವಲ್ಲಿ, ೧೮೯೧ನೆಯ ಜೂನ್ ತಿಂಗಳಲ್ಲಿ ಬರೋಡಾ ಗಾಯಕವಾಡ ಮಹಾರಾಜರವರು, ಪತ್ನೀ ಪುತ್ರಾದಿಗಳೊಡನೆ ಮೈಸೂರಿಗೆ ದಯಮಾಡಿಸಲು, ಆಗ ಮಹಾರಾಜರವರು ಅವರ ಆಗಮನವನ್ನು ಅಭಿನಂದಿಸಿ, ಗಾಯಕವಾಡಾ ಶ್ರೀಮಂತರನ್ನು ತಾವೇ ಇದಿರುಗೊಂಡು ಕರೆದುಕೊಂಡು ಬಂದು ಜಗನ್ಮೋಹನ ಮಹಲೆಂಬ ರಾಜಭವನದಲ್ಲಿಳಿಸಿ, ಅನೇಕೋತ್ಸವಗಳಿಂದಲೂ, ನವರತ್ನಾಭರಣಗಳಿಂದ ಕೂಡಿದ ಖಿಲ್ಲತ್ತುಗಳಿಂದಲೂ ಅವರನ್ನು ಆದರಿಸಿ ಕಳುಹಿಸಿಕೊಟ್ಟರು. (ರಾಜಧಾನಿಯಲ್ಲಿ 'ಸ್ಯಾಯಾಜಿರಾವ್ ರೋಡ್' ಎಂಬ ರಾಜವೀಧಿಯು ಈ ಉತ್ಸವಕ್ಕೆ ಗುರುತಾಗಿರುವುದು.) ಈ ಸಂದರ್ಭದಲ್ಲಿ, ಶ್ರೀಮನ್ಮಹಾರಾಜರವರಿಗೆ ತಮ್ಮ ತೃತೀಯ ಪುತ್ರರ ವಿಯೋಗದಿಂದುಂಟಾಗಿದ್ದ ವ್ಯಸನಕ್ಕೆ ಸ್ವಲ್ಪ ವಿರಾಮ ಸಿಕ್ಕಿದಹಾಗಾಯಿತು.

ಬರೋಡಾ ಗಾಯಕವಾಡರವರ ಭೇಟಿ.

ಬಳಿಕ, ಅದೇ ವರುಷದ ಕೊನೆಯಭಾಗದಲ್ಲಿ ಶ್ರೀಮನ್ಮಹಾರಾಜರವರು ತಮ್ಮ ದೇಹಾರೋಗ್ಯಕ್ಕಾಗಿ ಮದರಾಸಿಗೆ ದಯಮಾಡಿಸಿದರು. ಆಗ ಫ್ರೆಂಚ್ ಇಂಡಿಯಾ ರಾಜ್ಯದ ಪ್ರಜೆಗಳಾದ ನಾಯಕಾರ್ ಲಕ್ಷ್ಮಣಸ್ವಾಮಿ ಸೆಟ್ಟಿಯಾರ್ ಮುಂತಾದವರು ಬಂದು ಶ್ರೀಮನ್ಮಹಾರಾಜರವರ ಸವಾರಿಯನ್ನು ಬಹಳ ಉತ್ಸಾಹಪೂರ್ವಕವಾಗಿ ಪುದುಚೆರಿಗೆ (ಪಾಂಡುಚೆರಿ) ಬಿಜಯಮಾಡಿಸಿಕೊಂಡು ಹೋದರು. ಆಗ ಬ್ರಿಟಿಷ್ ಕಾನ್ಸಲ್

ಏಜೆಂಟರಾದ ಲೆಫ್ಟಿನೆಂಟ್ ಜನರಲ್ ಮೆಕ್ಲೀಡ್ ಅವರೂ, ಫ್ರೆಂಚ್ ಗವರ್ನರು ಮುಂತಾದವರೂ ಮಹಾರಾಜರವರನ್ನು ಪ್ರೀತಿ ಪೂರ್ವಕವಾಗಿ ಕಂಡು ಅನೇಕ ಸನ್ಮಾನಗಳಿಂದ ಸತ್ಕರಿಸಿ ಕಳುಹಿಸಿಕೊಟ್ಟರು. ಈ ಮಧ್ಯದಲ್ಲಿ—ಎಂದರೆ, ೧೮೮೯ನೆಯ ಜೂಲೈ ತಿಂಗಳಲ್ಲಿ, ಮಹಾರಾಜರವರಿಗೆ ನಾಲ್ಕನೆಯ ಪುತ್ರೋತ್ಸವ ವಾಯಿತು. ಇವರಿಗೆ ದೇವರಾಜ ಒಡೆಯರೆಂಬುದಾಗಿ ನಾಮಕರಣವು ನಡೆಯಿತು. ಈ ಪುತ್ರೋತ್ಸವದಿಂದ ಮಹಾರಾಜರವರ ದುಸ್ಸಹವಾದ ದುಃಖಾಗ್ನಿಯು ತತ್ಕಾಲಕ್ಕೆ ಬಹಳಮಟ್ಟಿಗೆ ಶಮನವಾಯಿತು.

ಆ ಮೇಲೆ, ಅದೇ ವರುಷದ ನವೆಂಬರ್ ೧೧ರಲ್ಲಿ ಇಂಡಿಯಾ ಚಕ್ರವರ್ತಿನಿ ಯವರ ಪ್ರತಿನಿಧಿಗಳಾದ ಮಾರ್ಕ್ವಿಸ್ ಲ್ಯಾನ್ಸ್‌ಡೌನ್ ಅವರು ತಮ್ಮ ಪರಿವಾರ ಸಹಿತ ಮೈಸೂರಿಗೆ ಬಂದರು. ಆಗಲೂ ಹೃದಯಂಗಮವಾದ ಅನೇಕ ಉತ್ಸವ ಪರಂಪರೆ ಗಳು ನಡೆದುವು. ಅದೇ ತಿಂಗಳ ತಾರೀಖು ೧೭ರಲ್ಲಿ ಮಹಾರಾಜರವರು ವೈಸ್ರಾಯಿ ಯವರನ್ನು ಷಿಕಾರಿಗಾಗಿ ಕಾಕನಕೋಟೆಯ ಜಂಗಲಿಗೆ ಕರೆದುಕೊಂಡು ದಯೆ ಮಾಡಿಸಿದರು. ಈ ಕಾಕನಕೋಟೆಯು ವಿವಿಧ ವೃಕ್ಷಲತಾದಿಗಳಿಂದ ಸಮೃದ್ಧವಾದ ಅರಣ್ಯವು. ಇಲ್ಲಿರುವ ವೃಕ್ಷಗಳು, ಸೂರ್ಯರಶ್ಮಿಯಿಂದ ಜನಿತವಾದ ಅತ್ಯಲ್ಪ ಉಷ್ಣವನ್ನೂ ಪಲಾಯನಗೊಳಿಸುವಂತೆ ಸಾಂದ್ರವಾದ ನೆರಳನ್ನು ಕೊಡತಕ್ಕವುಗಳಾಗಿರುವುವು. ಈ ಶೀತಲವಾದ ವಿಪಿನಾಂತರದಲ್ಲಿ, ಶೈಲಮಾಲೆಗಳ ನಡುವೆ, ತರಂಗ ಹತಿಯಿಂದ ಗಂಭೀರವಾಗಿ ಧ್ವನಿಗೈಯುತ್ತ ಕಪಿಲಾ ಮೊದಲಾದ ಸಣ್ಣಸಣ್ಣ ತಟನಿಗಳು ಹರಿಯು ತ್ತಿರುವುವು. ಈ ಕಾನನದಲ್ಲಿ ಲತಾವಲಿಯುಗಳಿಂದ ಸುತ್ತುವರಿಯಲ್ಪಟ್ಟ ವೃಕ್ಷಗಳು ಅಪೂರ್ವವಾದ ಮಂಟಪಗಳಂತೆ ಪರಿಣಮಿಸಿರುವುವು. ಇಲ್ಲಿ ಗಗನವನ್ನು ಸೋಕುವಂತೆ ಬೆಳೆದಿರುವ ತೇಗದ ಮರಗಳೂ, ಬಿದಿರು ಮೆಳೆಗಳೂ ಮೇಘವನ್ನು ಭೇದಿಸಿಕೊಂಡು ಮೇಲಕ್ಕೆದ್ದು, ವಿಶ್ವವನ್ನೆಲ್ಲ ಇಣಿಕಿ ನೋಡುವುವೋ ಎಂಬಂತೆ ತೋರುತ್ತಿರುವುವು ; ನಾನಾವಿಧವಾದ ಅಡವಿಯ ಹಕ್ಕಿಗಳು ಸತತವು ಸುಸ್ವರದಿಂದ ಗಾನಮಾಡು ತ್ತಿರುವುವು; ಮದಗಜಗಳು ಹೆಣ್ಣಾನೆಗಳೊಡನೆ ನದೀ ಹ್ರದಗಳಲ್ಲಿ ಮುಳುಗಾಡಿ ಬಿದಿರಕ್ಕಿಯನ್ನೂ, ಎಳೆಯ ಬಿದಿರನ್ನೂ ಮೆದ್ದು. ತಾವೇತಾವಾಗಿ ಸುತ್ತುತ್ತಿರುವುವು ; ಹುಲಿ, ಚಿರತೆ, ಕಾಡೆಮ್ಮೆ, ಜಿಂಕೆ, ಕರಡಿ ಮೊದಲಾದ ಮೃಗಗಳು ಅಲ್ಲಲ್ಲಿ ಆವಾಸಮಾಡಿ ಕೊಂಡಿರುವುವು. ಇಲ್ಲಿ ಆನೆಗಳನ್ನು ಹಿಡಿಯತಕ್ಕ ಕ್ರಮವು ಬಹು ವಿಚಿತ್ರವಾಗಿರುವುದು. ಅದನ್ನು ನೋಡುವುದಕ್ಕಾಗಿ ದೇಶದೇಶಾಂತರದ ಜನರು ಬರುವರು. ಧರಣೀ ಕಾಂತೆಯ ಅಳಕಮಂಜರಿಯಂತೆ ಕಂಗೊಳಿಸುತ್ತಿರುವ ಆ ಕಾಂತಾರದ ಶೋಭಾರಾಶಿ ಯನ್ನು ನೋಡಲು ವೈಸ್ರಾಯಿಯವರೂ ಮಹಾರಾಜರವರೂ ದಯೆಮಾಡಿ, ಒಂದು ವಾರ ಅಲ್ಲಿದ್ದು, ಆನೆಗಳನ್ನೂ ಹುಲಿಗಳನ್ನೂ ಚಿರತೆಗಳನ್ನೂ ಕಡವೆ ಕಾಡೆಮ್ಮೆಗಳನ್ನೂ ಬೇಟೆಯಾಡಿ, ಸಾಹುಕಾರ್ ಗುಂಜಾಲನೃಸಿಂಹಯ್ಯನವರು ತಮ್ಮ ಮಾಗಡಹಳ್ಳಿ ಕಡುವಿನಲ್ಲಿ ಮಾಡಿದ ಸತ್ಕಾರವನ್ನು ಕೈಕೊಂಡು ರಾಜಧಾನಿಗೆ ದಯೆಮಾಡಿಸಿದರು. ಈಗ

ಮೈಸೂರು ರಾಜಧಾನಿಯಲ್ಲಿರುವ 'ಲ್ಯಾನ್ಸ್‌ಡೌನ್ ಬಜಾರ್' ಎಂಬ ಪಣ್ಯವೀಥಿಯು ಈ ವೈಸ್ರಾಯಿಯವರು ದಯೆಮಾಡಿಸಿದ್ದಾಗ ನಡೆದ ಉತ್ಸವ ಪರಂಪರೆಗೆ ಸ್ಮಾರಕ ಚಿಹ್ನವಾಗಿರುವುದು.

ವೈಸ್ರಾಯಿಯವರು ಕಲ್ಕತ್ತೆಗೆ ತೆರಳಿದ ಬಳಿಕ, ತಾವು ಕಾಕನಕೋಟೆಯ ಕಾಡಿನಲ್ಲಿದ್ದಾಗ, ತಮ್ಮ ಛಾಯಾಗ್ರಾಹಿ ಯಂತ್ರದಿಂದ ತೆಗೆದ ಅಲ್ಲಿಯ ವಸ್ತುಗಳ ಭಾವಚಿತ್ರಗರ್ಭಿತವಾದ ಪುಸ್ತಕವೊಂದನ್ನು ಶ್ರೀಮನ್ಮಹಾರಾಜರವರಿಗೆ ತಮ್ಮ ಜ್ಞಾಪನಾರ್ಥವಾಗಿಯೂ, ತಮ್ಮ ಅಸಾಧಾರಣ ಪ್ರೀತಿ ಸೂಚನಾರ್ಥವಾಗಿಯೂ ಕಳುಹಿಸಿಕೊಟ್ಟರು. ಆ ಪುಸ್ತಕದ ರಕ್ಷಾಪತ್ರದ ಮೇಲ್ಗಡೆಯಲ್ಲಿ ವೈಸ್ರಾಯಿಯವರು ಸ್ವಹಸ್ತಾಕ್ಷರಗಳಿಂದ ಹೀಗೆ ಬರೆದಿರುವರು.—

ಕಲ್ಕತ್ತಾ,
೧೫ನೆಯ ಮಾರ್ಚಿ ೧೮೯೩.

ನನ್ನ ಮಿತ್ರವರ್ಯರಾದ ಮಹಾರಾಜರವರೇ,
ಂದು ಹ

ಮೈಸೂರು ನಗರದಲ್ಲಿ ತಮ್ಮ ಅತಿಥಿಯಾಗಿದ್ದ ಕಾಲದಲ್ಲಿ ನ್ನುವನ್ನು ಛಾಯಾಗ್ರಾಹಿ ಯಂತ್ರದಲ್ಲಿ ತೆಗೆದ ಕೆಲವು ಚಿತ್ರಗಳನ್ನು ನೋಡಿದರೆ ತಮಗೆ ವಿನೋ ಹುದು. ನಾನು ತಮ್ಮ ಜ್ಞಾಪಕಕ್ಕೆ ಬರುವುದಕ್ಕಾಗಿ ಕಳುಹಿಸಿರುವ ಈ ಚಿತ್ರ ಸ ಾವು ಸ್ವೀಕರಿಸುವಿರಿ ಎಂದು ನಿರೀಕ್ಷಿಸುತ್ತೇನೆ.

ದೆರಡು ದಿನಗಳನ್ನು
ತಮ್ಮ ಸಮುದ್ರಯಾನ
ಲ್ಯಾನಸ್ಡೌ ಗದ್.

ಹದಿಮೂರನೆಯ ಅಧ್ಯಾಯ.

ಶ್ರೀಚಾಮರಾಜೇಂದ್ರ ಒಡೆಯರವರ ಸಮುದ್ರಯಾನ.

ಶ್ರೀಚಾಮರಾಜೇಂದ್ರ ಒಡೆಯರವರು ಪ್ರಾಪಂಚಿಕ ವ್ಯವಹಾರದಲ್ಲಿ ಪ್ರವೇಶ ಮಾಡಿ ವಿಷಯಪರಿಜ್ಞಾನದಲ್ಲಿ ಪ್ರವರ್ಧಮಾನರಾದಹಾಗೆಲ್ಲ ಯಾವ ಯಾವ ದೇಶದಲ್ಲಿ ಯಾವ ಯಾವ ವಿಷಯಗಳು ಉತ್ತಮಫಲದಾಯಕಗಳಾಗಿರುವುವೋ ಅಂಥವುಗಳನ್ನು ಅರಿಸಿಕೊಂಡುಬಂದು, ಸ್ವರಾಜ್ಯದಲ್ಲಿ ಪ್ರಚಾರಕ್ಕೆ ತಂದು ದೇಶಾಭಿವೃದ್ಧಿಗೆಯ್ಯ ಬೇಕೆಂಬ ಮುಖ್ಯೋದ್ದೇಶದಿಂದ ೧೮೯೨ನೆಯ ಇಸವಿಯ ಡಿಸೆಂಬರ್ ೧೧ನೆಯ ಭಾನು ವಾರ ಮರಳಿ ಉತ್ತರದೇಶ ಸಂಚಾರವನ್ನು ಬಯಸಿ, ರಾಜಧಾನಿಯಿಂದ ಹೊರಟು ಮಾರನೆಯದಿನ ಮದರಾಸನ್ನು ತಲಪಿದರು. ಮದರಾಸು ಗವರ್ನರವರ ಅಂಗರಕ್ಷಕ ರಾದ ಕ್ಯಾಪ್ಟನ್ ಹೋಮ್ಸ್ ಅವರು, ರಾಜಾ ಸರ್ ಸಾವಳೇ ರಾಮಸ್ವಾಮಿ ಮೊದಲಿ ಯಾರರು, ದಿವಾನ್ ಬಹದ್ದೂರ್ ರಘುನಾಥರಾಯರು, ಬಿಳಿಗಿರಯ್ಯಂಗಾರ್ಯರು,

ಭಾಷ್ಯಮ್ಕೈಯ್ಯಂಗಾರ್ಯರು ಮುಂತಾದವರು ಬಂದು ಶ್ರೀಮನ್ಮಹಾರಾಜರವರನ್ನು ಅತ್ಯಾದರದಿಂದ ಇದಿರ್ಗೊಂಡು ಮರ್ಯಾದೆ ಮಾಡಿದರು. ಮಹಾರಾಜರವರು ಅಲ್ಲಿ ನೆರೆದಿದ್ದವರೊಡನೆ ಸ್ವಲ್ಪ ಸಂಭಾಷಣೆಯನ್ನು ಮಾಡಿ, ದಿವಾನ್ ಬಹದ್ದೂರ್ ರಘುನಾಥ ರಾಯರು ಒಪ್ಪಿಸಿದ ಹಾರ ತುರಾಯಿಗಳನ್ನು ಸ್ವೀಕರಿಸಿ, ಗವರ್ನರವರ ಅಂಗರಕ್ಷಕ ರೊಡನೆ ತ್ರೈನಾಂ ಪೇಟೆಯಲ್ಲಿರುವ 'ಫೆಲೋ ಫೀಲ್ಡ್' ಎಂಬ ಬಂಗಲೆಗೆ ತೆರಳಿದರು. ಮರುದಿನ ಗವರ್ನರವರ ಸಂದರ್ಶನವಾಯಿತು. ಆ ರಾತ್ರಿ ಬಿಳಿಗಿರ್ರೈಯ್ಯಂಗಾರ್ಯರು ತಮ್ಮ 'ಕ್ಯಾಸಲ್ ಕರ್ನಾನ್' ಎಂಬ ಬಂಗಲೆಯಲ್ಲಿ ಶ್ರೀಮನ್ಮಹಾರಾಜರವರಿಗೆ ಔತಣವನ್ನು ಮಾಡಿದರು.

ಶನಿವಾರದ ದಿವಸ ಶ್ರೀಮನ್ಮಹಾರಾಜರವರು ಪರಿವಾರಸಮೇತರಾಗಿ ನೌಕಾರೋಹಣವನ್ನು ಮಾಡುವುದಕ್ಕೆ ಸಮುದ್ರತೀರಕ್ಕೆ ದಯಮಾಡಿಸಿದರು. ಇಲ್ಲಿಯ ಬಂದರು ಮನುಷ್ಯಕಲ್ಪಿತವಾದುದು. ಭೂದೇವಿಯು ಸಮುದ್ರರಾಜನನ್ನು ಅಪ್ಪಿಕೊಳ್ಳ ಲೆಳಸಿ ತನ್ನ ಎರಡು ಬಾಹುಗಳನ್ನೂ ಚಾಚಿರುವಳೋ ಎಂಬಂತೆ, ಎರಡು ಸೇತುವೆ ಗಳು ಬಂದರದ ಉಭಯಪಾರ್ಶ್ವಗಳಲ್ಲೂ ಸಮುದ್ರದೊಳಗಡೆಗೆ ವಿಸ್ತರಿಸಿಕೊಂಡಿರು ವುವು. ಬಂದರು ಸುಮಾರು ೮,೩೦,೦೦೦ ಚದರ ಗಜಗಳ ವಿಸ್ತಾರವಾಗಿಯೂ ಮಧ್ಯದಲ್ಲಿ ನೀರು ಹಿಳಾಳುದ್ದ ಆಳವಾಗಿಯೂ ಇರುವುದು.

ಶ್ರೀಮನ್ಮಹಾರಾಜರವರು ಸಕಲ ಸಾಮಗ್ರಿಗಳಿಂದ ಭರಿತವಾಗಿ ತಮ್ಮ ಪ್ರಯಾ ಣಕ್ಕಾಗಿ ಸಿದ್ಧವಾಗಿದ್ದ ಲಾರ್ಪುರನೆಂಬ ಹೊಗೆಯ ಹಡಗನ್ನು ಹತ್ತಿದರು. ನೌಕಾ ರೋಹಣ ಕಾಲದಲ್ಲಿ ವಿಜಯನಗರದ ಮಹಾರಾಜರವರಾದ ಸರ್ ಪಿ. ಆನಂದಗಜಪತಿ ರಾಜರು, ತಂಬೂಸೆಟ್ಟರು, ಗವರ್ನರವರ ಛೀಫ್ ಸೆಕ್ರೆಟೆರಿಯವರು, ಎಯ್ಡಿಕಾಂಗರು ಮುಂತಾದ ಅನೇಕಮಂದಿ ದೊಡ್ಡಮನುಷ್ಯರು ಬಂದಿದ್ದರು. ಎಲ್ಲರೂ ಮಹಾರಾಜ ರವರಿಗೆ ದೇವರು ಸುಖಪ್ರಯಾಣವನ್ನೀಯಲೆಂದು ಪ್ರಾರ್ಥಿಸಿ ಸಾಗಕಳುಹಿಸಿದರು. ಬಳಿಕ ಹಡಗು ಆವಿಯ ಬಲದಿಂದ ಅತಿವೇಗವನ್ನು ಪಡೆದು, ಪ್ರಭಾತದ ತಂಗಾಳಿ ಯಿಂದೆದ್ದ ತರಂಗಮಾಲೆಗಳನ್ನು ತಳ್ಳಿಕೊಂಡು, ಆ ಅನಂತವಾದ ಸಮುದ್ರದಲ್ಲಿ ಉಯ್ಯಾಲೆಯಂತೆ ತೂಗಾಡುತ್ತ, ಸಮುದ್ರತೀರದ ಪ್ರಕೃತಿ ವಿಶೇಷದಿಂದ ಕೆಲವು ಕಾಲ ಮಹಾನಂದವನ್ನುಂಟುಮಾಡುತ್ತ ಕಲ್ಕತ್ತಾಭಿಮುಖವಾಗಿ ಹೊರಟಿತು. ಹಡಗು ತೀರವನ್ನು ಬಿಟ್ಟು ಹೊರಟ ಸ್ವಲ್ಪ ಹೊತ್ತಿನಮೇಲೆ, ಎತ್ತ ನೋಡಿದರೂ ಜಲರಾಶಿ ಯೂ ಆಕಾಶಮಂಡಲವೂ ಹೊರತು ಇನ್ನೇನೂ ಕಾಣದುದರಿಂದ ಹೊತ್ತುಕಳೆಯು ವುದೇ ಕಷ್ಟವಾಗಿ ತೋರಿತು. ಮಹಾರಾಜರು ಮಾತ್ರ ಬೇಸರಿಕೆಯುಂಟಾದಾಗಲೆಲ್ಲ ತಮ್ಮ ಪಿಟೀಲನ್ನು ತೆಗೆದುಕೊಂಡು ಶ್ರುತಿಮಾಡಿ ಬಾಜಿಸುತ್ತ, ಭಗವನ್ನಾಮಸಂಕೀ ರ್ತನವನ್ನು ಮಾಡುತ್ತಿದ್ದರು. ಒಂದೊಂದು ವೇಳೆ ಹಡಗಿನ ಮೇಲ್ಗಡೆಗೆ ದಯಮಾಡಿ ನಾಲ್ಕು ದಿಕ್ಕುಗಳನ್ನೂ ನೋಡುವರು. ಯಾವ ಕಡೆ ನೋಡಿದರೂ ನೀಲಾಂಬು ರಾಶಿಯು ಅನಂತಾಕಾಶದೊಡನೆ ಕೂಡಿಕೊಂಡಂತೆ ಕಾಣುವುದು. ಮಧ್ಯಮಧ್ಯದಲ್ಲಿ

ಪರ್ವತಪ್ರಮಾಣವುಳ್ಳ ತರಂಗಮಾಲೆಗಳು ಒಂದಾದಮೇಲೆ ಮತ್ತೊಂದು ಬಂದು ಭೀಷಣವಾಗಿ ಘಾತಮಾಡುತ್ತಿದ್ದುವು ಇದನ್ನೆಲ್ಲ ನೋಡಿ ಮಹಾರಾಜರವರು, "ಏನು ಭಯಂಕರವಾದ ಸಮುದ್ರ!" ಎಂದು ಹೇಳಿದರು. ಹತ್ತಿರವಿದ್ದ ವೃದ್ಧರಲ್ಲಿ ಕೆಲವರು ಸಗರಸಂತತಿ ಕಥನ, ಗಂಗಾವತರಣ, ಅಗಸ್ತ್ಯೋಪಾಖ್ಯಾನ ಮುಂತಾದುವುಗಳನ್ನು ಹೇಳಿ ಹೊತ್ತನ್ನು ಕಳೆದರು. ಹೊರಟ ಮೊದಲನೆಯ ದಿನ ಶ್ರೀಮನ್ಮಹಾರಾಜರವರೂ ಯೂರೋಪಿಯನರೂ ಹೊರತು ಹಡಗಿನಲ್ಲಿದ್ದವರಲ್ಲಿ ಕೆಲವರಿಗೆ ಅನಭ್ಯಾಸದಿಂದ ಪಿತ್ತ ರೇಗಿ ತಲೆ ಸುತ್ತುವಂತಾಗಿ ಅವರು ವಾಂತಿ ಮಾಡಿಕೊಳ್ಳಲಾರಂಭಿಸಿದರು. ಇಷ್ಟರಲ್ಲಿ ಪಶ್ಚಿಮಾಚಲದಲ್ಲಿ ಸೂರ್ಯದೇವನು ಅಸ್ತಂಗತನಾದನು. ಗಾಢಾಂಧಕಾರವು ಕವಿದುಕೊಂಡಿತು. ಎಲ್ಲರೂ ಕೆಳಗೆ ಇಳಿದುಬಂದು ಫಲಾಹಾರವನ್ನು ಮಾಡಿದರು. ಬಳಿಕ ಹಡಗಿನ ಯಜಮಾನನು ಶ್ರೀಮನ್ಮಹಾರಾಜರವರನ್ನೂ ರೆಸಿಡೆಂಟರನ್ನೂ ಇನ್ನು ಕೆಲವು ಮಂದಿ ಮುಖ್ಯಾಧಿಕಾರಿಗಳನ್ನೂ ಸಂಗೀತ ಕೇಳುವುದಕ್ಕೆ ತನ್ನ ಸಂಗೀತ ಶಾಲೆಗೆ ಕರೆದುಕೊಂಡು ಹೋದನು. ರಾತ್ರಿ ಹತ್ತು ಗಂಟೆಯವರೆಗೆ ಎಲ್ಲರೂ ಸಂಗೀತಶ್ರವಣದಿಂದ ಕಾಲವನ್ನು ಕಳೆದಬಳಿಕ, ತಮ್ಮತಮ್ಮ ಶಯನಗೃಹಗಳನ್ನು ಸೇರಿ ಪವಡಿಸಿದರು.

ಈ ರೀತಿಯಾಗಿ ಎಲ್ಲರೂ ಹಡಗಿನಲ್ಲಿ ಪ್ರಯಾಣ ಮಾಡುತ್ತ ಒಂದೆರಡು ದಿನಗಳನ್ನು ಕಳೆದ ಬಳಿಕ, ಮೂರನೆಯ ದಿನ ಶ್ರೀಮನ್ಮಹಾರಾಜರವರು ಸಮುದ್ರಯಾನದಿಂದುಂಟಾದ ಅನಾರೋಗ್ಯದಿಂದ ಮಲಗಿದರು. ಒಡನೆಯೇ ಹಡಗಿನಲ್ಲಿ ಗದ್ದಲವೆದ್ದಿತು. ಇದನ್ನು ತಿಳಿದು ರೆಸಿಡೆಂಟರೂ, ದಿವಾನರೂ, ನರಸಿಂಹಯ್ಯಂಗಾರ್ಯರೂ ಮದರಾಸಿನಿಂದ ಕಲ್ಕತ್ತೆಗೆ ಹೋಗಿ, ವೈಸ್ರಾಯಿಯವರ ಸಂದರ್ಶನಾನಂತರದಲ್ಲಿ, ಅಲ್ಲಿಂದ ಮುಂದೆಯೂ ಸಮುದ್ರದ ಮೇಲೆಯೇ ಬರ್ಮಾದೇಶದ ರಂಗೂನ್, ಮಾಂಡಲೇ, ಪೆಗ್ಗೂ ಮುಂತಾದ ಸ್ಥಳಗಳಿಗೆ ಹೋಗಬೇಕೆಂದು ಗೊತ್ತುಮಾಡಿದ್ದ ಮಹಾರಾಜರವರ ಪ್ರಯಾಣಕ್ರಮದ ಪಟ್ಟಿಯನ್ನು ಬದಲಾಯಿಸಿ, ಕಲ್ಕತ್ತೆಯಿಂದ ಉತ್ತರ ಇಂಡಿಯಾದಲ್ಲಿರುವ ಗಯೆ, ಕಾಶಿ, ಅಯೋಧ್ಯೆ ಮುಂತಾದ ಸ್ಥಳಗಳಿಗೆ ಹೊರಡತಕ್ಕದೆಂದು ನಿರ್ಧರಿಸಿದರು. ಆ ದಿನ ಸಾಯಂಕಾಲ ಹಠಾತ್ತಾಗಿ ಜಂಝಾಮಾರುತವೆದ್ದಿತು. ಸಮುದ್ರವು ಉಲ್ಲೋಲಕಲ್ಲೋಲವಾಯಿತು. ಗಾಳಿಯೊಡನೆ ಮಳೆಯೂ ಪ್ರಾರಂಭವಾಯಿತು; ಚಂದ್ರನು ಕಾಣಿಸಲಿಲ್ಲ; ನಕ್ಷತ್ರಗಳು ಮರೆಯಾದುವು. ಸಮುದ್ರಾಕಾಶಗಳ ನಡುವೆ ಗಭೀರವಾದ ಗಾಢಾಂಧಕಾರ ಹೊರತು ಮತ್ತೇನೂ ಕಾಣುತ್ತಿರಲಿಲ್ಲ. ಅಲೆಗಳು, ಜ್ವಲಿಸುವ ಜ್ಯೋತಿರ್ಮಂಡಲವನ್ನು ತಮ್ಮ ತುಂತುರ್ವನಿಗಳಿಂದ ತೋಯಿಸಿದಂತೆ ಕಾಣಿಸುತ್ತಿದ್ದುವು. ಅವುಗಳ ಪರಸ್ಪರ ಸಮ್ಮರ್ದನದಿಂದುಂಟಾದ ಭಯಂಕರವಾದ ಶಬ್ದವು ಫಿರಂಗಿಗಳ ಶಬ್ದವನ್ನೂ ಅಲ್ಪವೆನಿಸಿತು. ಹಡಗಿನ ಧ್ವಜಸ್ತಂಭಗಳ ಬಾವುಟಗಳು ಪಟಪಟನೆ ಶಬ್ದ ಮಾಡುತ್ತ ಬಿರುಗಾಳಿಗೆ ತಡೆಯಲಾರದೆ ಮೊರೆಯಿಡುವಂತೆ ತೋರುತ್ತಿದ್ದುವು. ಇದನ್ನು ನೋಡಿದ

ನೌಕಾರೋಹಿಗಳ ಮನಸ್ಸಿನಲ್ಲಿ ಹಡಗು ಎಲ್ಲಿಗಾದರೂ ಹರಿದು ಹೋದೀತೆಂಬ ಭಯವುಂಟಾಯಿತು. ಆದರೆ ಆಂಗ್ಲೇಯರು ಹಡಗು ನಡೆಯಿಸುವ ವಿದ್ಯೆಯಲ್ಲಿ ಬಹು ಪ್ರವೀಣರೆಂದು ಕೇಳಿರುವುದರಿಂದ, ಮನಸ್ಸಿನಲ್ಲಿ ಒಂದುಕಡೆ ಧೈರ್ಯವುಂಟಾಗುತ್ತಿದ್ದಿತು. ಜಂಝಾಮಾರುತವು ಬೀಸಿದಾಗಲ್ಲೆಲ್ಲ ಒಳಗಿದ್ದವರಿಗೆ ಪುನಃ ಕ್ಷೇಮದಿಂದ ಸ್ವದೇಶವನ್ನು ಸೇರಿ ಪ್ರಿಯರಾದ ಪತ್ನೀಪುತ್ರಾದಿಗಳನ್ನು ನೋಡುತ್ತೇವೆಯೋ ಎಂಬ ಆತಂಕವುಂಟಾಗುತ್ತಿದ್ದಿತು.

ಈ ರೀತಿಯಲ್ಲಿ ಪ್ರಬಲಪ್ರಭಂಜನನು ತಲೆದೋರಿದಾಗ, ನೌಕಾಸಂಚಾರಣ ನಿಪುಣರಾದ ನಾವಿಕರು ಪ್ರಯಾಣಿಕರಿಗೆ ಭಯತಟ್ಟೀತೆಂಬ ಶಂಕೆಯಿಂದ ಮೇರೆದಪ್ಪಿದ ಸಾಗರಮಧ್ಯದಲ್ಲಿ ಸಿಕ್ಕಿದ ಹಡಗನ್ನು ಸಮಾಧಾನಸ್ಥಿತಿಗೆ ತರುವುದಕ್ಕಾಗಿ ಎಷ್ಟೋ ಸಾಹಸಪಡುತ್ತಿದ್ದರು. ಆದರೂ ಗಾಳಿಯು ಕ್ಷಣೇಕ್ಷಣೇ ವೃದ್ಧಿಯಾಗುತ್ತ ಬಂದಿತು. ' ಸೈಕ್ಲೋನ್ ' ಎಂಬ ಪ್ರಚಂಡವಾಯುವೇನಾದರೂ ಸಂಭವಿಸಿರಬೇಕೆಂದು ಭಯ ಪಟ್ಟು ಪ್ರಯಾಣಿಕರೆಲ್ಲರೂ ಆಪದುದ್ಧಾರಕನಾದ ಭಗವಂತನನ್ನು ಧ್ಯಾನಿಸುವುದಕ್ಕೆ ಮೊದಲುಮಾಡಿದರು. ಆಗ ಜನರಿಗುಂಟಾದ ಭಯವೂ ವ್ಯಥೆಯೂ ವರ್ಣಿಸಲಳವಲ್ಲ. ಹಾಗೂ ಹೀಗೂ ಹತ್ತು ಗಂಟೆಯನ್ನು ಕಳೆದರು. ಬಳಿಕ ಮಳೆಯೂ ಗಾಳಿಯೂ ಸ್ವಲ್ಪಸ್ವಲ್ಪವಾಗಿ ಕಡಿಮೆಯಾಗುತ್ತ ಬಂದುವು. ಎಲ್ಲರ ಮನಸ್ಸೂ ಸಮಾಧಾನವಾಗಿ, ಎಲ್ಲರೂ ಎದ್ದು ಫಲಾಹಾರ ಮಾಡಿದರು. ಆದರೆ ಆಕಾಶವು ಮೇಘಪರಿಪೂರ್ಣ ವಾಗಿದ್ದಿತಾದುದರಿಂದ ಪುನಃ ಬಿರುಗಾಳಿಯೂ ಜಡಿ ಮಳೆಯೂ ಬರಬಹುದೆಂಬ ಶಂಕೆಯು ಎಲ್ಲರ ಮನಸ್ಸಿನಲ್ಲಿಯೂ ಇದ್ದೇಯಿದ್ದಿತು. ಈ ಶಂಕೆಯಿಂದ ಆ ರಾತ್ರಿ ಒಬ್ಬರಿಗೂ ನಿದ್ದೆ ಬರಲಿಲ್ಲ. ಅಷ್ಟರೊಳಗೆ ದಿನನಾಥನು ಪೂರ್ವಾಚಲದ ಕೋಡುಗಲ್ಲನ್ನು ಹತ್ತುವಂತೆ ಮೂಡಲಲ್ಲಿ ಪ್ರಭೆಯು ಕಾಣಿಸಿಕೊಂಡು ಉಷಃಕಾಲ ಸೂಚಕವಾದ ಶೀತಲ ಮಂದಮಾರುತವು ಎಲ್ಲ ಕಡೆಯೂ ಬೀಸಿತು. ಜಾಜ್ವಲ್ಯಮಾನ ವಾದ ಬಾಲಭಾನುವಿನ ಭಾಸುರಕಿರಣಗಳು ಅನಂತವಾದ ಸಮುದ್ರದ ವಾರಿರಾಶಿಯ ಮೇಲೆ ಬಿದ್ದು ಮಿನುಗಲಾರಂಭವಾಯಿತು.

ಪ್ರಭಾತವಾಗುತ್ತಲೆ ಮಹಾರಾಜರು ಚೇತರಿಸಿಕೊಂಡು ಉಪ್ಪವಡಿಸಿ, ಸಮೀಪ ದಲ್ಲಿದ್ದವರೊಡನೆ "ನಾವು ಕಲ್ಕತ್ತೆಗೆ ಎಷ್ಟುಹೊತ್ತಿಗೆ ಸೇರುವೆವು" ಎಂದು ಕೇಳಿದರು. ಅವರು ನಾಳಿನ ದಿನ ಸೇರಬಹುದೆಂದು ಹೇಳಿದರು. ಬಳಿಕ ಒಂದೆರಡು ಮುಹೂರ್ತವನ್ನು ಬಿಟ್ಟು ಹಡಗಿನ ಉಪರಿಭಾಗಕ್ಕೆ ದಯೆಮಾಡಿ, ಗಂಭೀರವಾದ ರತ್ನಾಕರದ ಸೊಬಗನ್ನೂ ಬಾಲಸೂರ್ಯನ ಭಾಸ್ವತ್ಕಿರಣಗಳನ್ನೂ ಕಂಡು ಆನಂದಿ ಸಿದರು. ಹಡಗಿನ ಯಜಮಾನನು ಶ್ರೀಮನ್ಮಹಾರಾಜರವರನ್ನು ಕರೆದುಕೊಂಡು ಹೋಗಿ, ಹಡಗನ್ನು ನಡಿಸುವುದಕ್ಕಾಗಿ ಇಟ್ಟಿರುವ ಧೂಮಯಂತ್ರ, ವಿದ್ಯುಚ್ಛಕ್ತಿ ದೀಪ ಮಾಲೆಗಳಯಂತ್ರ, ಧ್ರುವನಕ್ಷತ್ರದ ಸಹಾಯದಿಂದ ಉತ್ತರ ದಕ್ಷಿಣ ದಿಕ್ಕುಗಳನ್ನೂ ಇತರ ನಕ್ಷತ್ರಗಳ ಸಂಚಾರಜ್ಞಾನಬಲದಿಂದ ಪೂರ್ವಪಶ್ಚಿಮ ದಿಕ್ಕುಗಳನ್ನೂ ತಿಳಿದು,

ಅತಿ ಭಯಂಕರವಾಗಿಯೂ ಬಹು ವಿಸ್ತಾರವಾಗಿಯೂ ಇರುವ ಅನೇಕ ಸಾಗರಗಳಲ್ಲಿ, ರಮಣೀಯವಾದ ರಾಜವೀಧಿಗಳಲ್ಲಿ ಹೋಗುವಂತೆ ನಿರ್ಭಯದಿಂದ ಸಂಚಾರಮಾಡಲು ಸಹಾಯಕವಾದ ಉತ್ತರಮುಖಿಯನ್ನೂ, ಆಕಾಶಮಂಡಲದಲ್ಲಿರುವ ಗ್ರಹನಕ್ಷತ್ರಾದಿ ತೇಜೋಮಂಡಲ ಪಙ್ಕ್ತಿಗಳನ್ನೂ ಅವುಗಳ ಗತಿಯನ್ನೂ ತಿಳಿಯಪಡಿಸುವ ದುರ್ಬೀನೆಂಬ ದೂರವಸ್ತು ಪ್ರದರ್ಶಕಯಂತ್ರ ಮುಂತಾದ ದರ್ಶನೀಯಗಳಾದ ವಸ್ತುಗಳನ್ನೆಲ್ಲವನ್ನೂ ತೋರಿಸಿ, ಹಡಗಿನಲ್ಲಿ ಒಂದೊಂದು ವೇಳೆ ಸಂಭವಿಸುವ ವಿಪತ್ಪರಂಪರೆಗಳನ್ನೆಲ್ಲ ವಿವರಿಸಿ ಹೇಳಿದನು. ಆ ರಾತ್ರಿ ನಾವಿಕರೆಲ್ಲರೂ ಸೇರಿ ರಾಗಮಾಲು ಮುಂತಾದುವುಗಳನ್ನು ಬಾಜಿಸಿ ಶ್ರೀಮನ್ಮಹಾರಾಜರವರನ್ನೂ ಅವರ ಪರಿವಾರವನ್ನೂ ಆನಂದಪಡಿಸಿದರು.

ಈ ರೀತಿಯಾಗಿ ಕಠೋರವೂ ಗಂಭೀರವೂ ಆದ ಅಪಾರವಾದ ಸಮುದ್ರದ ಕಲ್ಲೋಲಮಾಲೆಗಳ ಧ್ವನಿಯನ್ನು ಕೇಳುತ್ತ ಕೇಳುತ್ತ ನಾಲ್ಕು ದಿವಸಗಳನ್ನು ಕಳೆದ ಬಳಿಕ, ಐದನೆಯ ದಿನ ಪ್ರಾತಃಕಾಲ ಹಡಗು ಹೂಗ್ಲೀನದಿಯ ಮುಖಭಾಗದಲ್ಲಿರುವ ಸಾಗರದ್ವೀಪಗಳ ಬಳಿಗೆ ಹೋಗಿ ನಿಂತಿತು. ಹಡಗು ಹೂಗ್ಲೀನದಿಯನ್ನು ಪ್ರವೇಶ ಮಾಡುವ ಹೊತ್ತಿಗೆ ವೈಸ್ರಾಯಿಯವರು ಮರ್ಯಾದಾರ್ಥವಾಗಿ ತಮ್ಮ ಶ್ರೇಷ್ಠವಾದ ಹಡಗನ್ನು ಅಲ್ಲಿಗೆ ಕಳುಹಿಸಿದ್ದರು. ಮೊದಲಿನ ಹಡಗಿನ ಯಜಮಾನನಿಗೆ ವಂದನೆಗಳನ್ನು ಸಮರ್ಪಿಸಿ, ಎಲ್ಲರೂ ಆ ಮನೋಹರವಾದ ಹಡಗನ್ನು ಹತ್ತಿ ಕಲ್ಕತ್ತಾನಗರವನ್ನು ತಲಪಿದರು. ವೈಸ್ರಾಯಿಯವರು ಶ್ರೀಮನ್ಮಹಾರಾಜರವರನ್ನು ಇದಿರ್ಗೊಳ್ಳುವುದಕ್ಕಾಗಿ ತಮ್ಮ ಮಿಲಿಟೆರಿ ಸೆಕ್ರೆಟೆರಿ, ಫಾರಿನ್ ಸೆಕ್ರೆಟೆರಿ, ಎಯ್ಡಿಕಾಂಗ್ ಮುಂತಾದ ಅಧಿಕಾರಿಗಳನ್ನು ಕಳುಹಿಸಿದ್ದರು. ಅವರುಗಳು ಮಹಾರಾಜರವರ ಸುಖಾಗಮನವನ್ನೂ ರಾಜಬಂಧುಗಳ ಯೋಗಕ್ಷೇಮವನ್ನೂ ವಿಚಾರಿಸಿ, ಸಂಗಡ ಓಲೈಸುತ್ತ ಬಂದ ಬಂಗಾಳಾ ಅಶ್ವಸೈನ್ಯದೊಡನೆ ಮಹಾರಾಜರವರನ್ನು ಬಿಲಿಘಾಟ್ ರೋಡಿನಲ್ಲಿರುವ ವಿಜಯನಗರ ಮಹಾರಾಜರವರ 'ಷಿಯಾಲ್ದಾ' ಅರಮನೆಗೆ ಬಿಜಯ ಮಾಡಿಸಿದರು. ಅಷ್ಟು ಹೊತ್ತಿಗೆ ಮೈಸೂರು ರಾಜಧಾನಿಯಿಂದ ಯೋಗಕ್ಷೇಮದ ಕಾಗದಪತ್ರಗಳು ಬಂದಿರಲು, ಮಹಾರಾಜರವರು ಅವುಗಳನ್ನೆಲ್ಲ ಓದಿ ರಾಜಧಾನಿಯಲ್ಲಿ ದಿವಾನಗಿರಿಯನ್ನು ನೋಡುತ್ತಿದ್ದ ತಂಬೂಸೆಟ್ಟಿರವರಿಗೆ ಬರೆದ ಲೇಖನದಲ್ಲಿ, ತಾವು ಸಮುದ್ರಯಾನ ಮಾಡಿದಕಾಲದಲ್ಲಿ ನಡೆದ ವಿಷಯವನ್ನು ಓದುವವರಿಗೆ ಸ್ವಲ್ಪವೂ ಭಯೋತ್ಪಾತವುಂಟಾಗದಂತೆ ಕೆಳಗೆ ಹೇಳುವ ರೀತಿಯಲ್ಲಿ ಬಿಕ್ಕಣಿಸಿದರು :—

ಷಿಯಾಲ್ದಾ ಹೌಸ್, ಕಲ್ಕತ್ತಾ,
೨೮ನೆಯ ಡಿಸೆಂಬರ್ ೧೮೯೩.

ನಮ್ಮ ಮಿತ್ರರಾದ ತಂಬೂಸೆಟ್ಟಿರವರೇ,

ತಾವು ಬರೆದ ಲೇಖನಕ್ಕಾಗಿ ವಂದಿಸುವೆನು. ಅಲ್ಲಿ ಸಕಲರೂ ಸುಕ್ಷೇಮಿಗಳಾಗಿರುವರೆಂದು ತಿಳಿದು ಸಂತೋಷವಾಯಿತು. ಸಮುದ್ರಯಾನದಲ್ಲಿ ಮೊದಲನೆಯ ದಿನ ಮಾತ್ರ ನಮ್ಮಲ್ಲಿ ಅನೇಕರು ಯಾನದಲ್ಲುಂಟಾಗುವ ವ್ಯಾಧಿಯಿಂದ ಸ್ವಲ್ಪ ಪೀಡಿತರಾಗಿದ್ದರೂ, ಸಾಧ್ಯವಿಪ್ಪ

ಕೇವಲ ಶಾಂತವಾಗಿದ್ದುದರಿಂದ ಯಾನವು ಆನಂದಕರವಾಗಿದ್ದಿತು. ಇದು ಸಕಾಲವಾದುದರಿಂದ, ಕಲ್ಕತ್ತಾ ನಗರವು ಜನದ ಸಂದಣಿಯುಳ್ಳುದಾಗಿರುವುದು. ಈ ನಗರ ದರ್ಶನದಿಂದುಂಟಾಗುವ ಆನಂದವನ್ನು ನಾನೂ ಅನುಭವಿಸುತ್ತಿದ್ದೇನೆ. ಮುಂದೆ ನಮ್ಮ ಪ್ರಯಾಣ ಕ್ರಮವನ್ನು ತಿಳಿಸುವ ಪಟ್ಟಿಯ ಪ್ರತಿಯೊಂದನ್ನು ಈ ಲೇಖನದಲ್ಲಿ ಗರ್ಭೀಕರಿಸಿರುವೆನು. ತಾವು ಅಡಿಗಡಿಗೆ ಬರೆಯುವ ಲೇಖನಗಳಿಂದ ಆನಂದ ಪಡುವೆನು.

ತಮ್ಮ ಮಿತ್ರ,
ಚಾಮರಾಜೇಂದ್ರ ಒಡೆಯರ್.

ಕಲ್ಕತ್ತಾ ನಗರವು ಹೂಗ್ಲೀ ನದಿಯ ಪೂರ್ವ ತೀರದಲ್ಲಿರುವುದು. ಗಂಗಾ-ಬ್ರಹ್ಮಪುತ್ರ ನದಿಗಳಿಂದಲೂ, ಈಸ್ಟ್ ಇಂಡಿಯನ್ ಮತ್ತು ಈಸ್ಟರ್ನ್ ಬೆಂಗಾಲ್ ರೈಲ್ವೆಗಳಿಂದಲೂ ಸಾಗಿಬರತಕ್ಕ ಸರಕಿನ ವ್ಯಾಪಾರವೆಲ್ಲ ಈ ನಗರದಲ್ಲಿ ನಡೆದು, ಕಲ್ಕತ್ತೆಯು ಇಂಡಿಯಾ ಗವರ್ನ್‌ಮೆಂಟಿಗೆ ಮುಖ್ಯ ರಾಜಧಾನಿಯೆನಿಸಿರುವುದು. ಇಲ್ಲಿ ಅನಾದಿಯಾಗಿ ಮಹಾಕ್ಷೇತ್ರವೆನ್ನಿಸಿಕೊಂಡಿರುವ ಕಾಳಿಕಾ ದೇವಸ್ಥಾನವಿರುವುದರಿಂದ ಇದಕ್ಕೆ ಆ ಹೆಸರು ಬಂದಿದೆ. ಆದರೆ ಪೂರ್ವನಗರ ಸ್ವರೂಪವು ಈಗ ಬಹಳ ವ್ಯತ್ಯಾಸವಾಗಿ ಹೋಗಿರುವುದು. ಚರಿತ್ರೆಯಲ್ಲಿ ಪ್ರಸಿದ್ಧವಾದ 'ಬ್ಲಾಕ್‌ಹೋಲ್' ಎಂಬ ಕತ್ತಲೆಯ ಕೊಂಡವೂ, ಮಹಾರಾಷ್ಟ್ರರ ಕಾಟಕ್ಕಾಗಿ ತೋಡಿದ ಕಂದಕವೂ, ಈಗ ಗುರುತು ಸಿಕ್ಕುವುದೇ ಪ್ರಯಾಸವಾಗಿ, ಅಲ್ಲಲ್ಲಿ ಕಟ್ಟಡಗಳೇಳುತ್ತ ಬಂದಿರುವುವು. ಈಗ ಎಲ್ಲಿ ನೋಡಿದರೂ ದಿವ್ಯವಾದ ರಾಜಮಾರ್ಗಗಳೂ, ಉದ್ಯಾನಮಾಲೆಗಳೂ, ಪಣ್ಯವೀಧಿಗಳೂ, ಕ್ರೈಸ್ತ ದೇವಾಲಯಗಳೂ, ಜ್ಞಾಪನಾರ್ಥವಾದ ಪ್ರತಿಮೆಗಳೂ ಕಂಗೊಳಿಸುತ್ತಿರುವುವು. 'ಫೋರ್ಟ್ ವಿಲಿಯಂ' ಎಂಬ ಕೋಟೆಯನ್ನು ೧೭೫೭ನೆಯ ಇಸವಿಯಲ್ಲಿ ಪ್ಲಾಸೀ ಕದನವಾದಬಳಿಕ, ಕ್ಲೈವ್ ಎಂಬ ಆಗಿನ ಪ್ರಸಿದ್ಧ ಸೇನಾನಾಯಕನು ಹೂಗ್ಲೀ ನದೀತೀರದಲ್ಲಿ ಕಟ್ಟಿಸಿದನು. ಇದನ್ನು ಕಟ್ಟುವಾಗ ಇಂಗ್ಲೆಂಡ್ ದೇಶದಲ್ಲಿ ವಿಲಿಯಂ ಎಂಬ ರಾಜನು ಆಳುತ್ತಿದ್ದುದರಿಂದ ಇದಕ್ಕೆ ಆ ಹೆಸರು ಬಂದಿತು. ವೈಸ್ರಾಯಿಯವರ 'ಗೌರ್ನ್‌ಮೆಂಟ್ ಹೌಸ್' ಎಂಬ ಅರಮನೆಯು ಅತ್ಯಂತ ವಿಸ್ತಾರವಾಗಿಯೂ ಅತಿರಮಣೀಯವಾಗಿಯೂ ಇರುವ ಒಂದು ಪುಷ್ಪೋದ್ಯಾನದಲ್ಲಿರುವುದು. ಆ ಅರಮನೆಗೆ ಸೇರಿದ ಭೋಜನಶಾಲೆಯೂ, ಮಂತ್ರಾಲೋಚನಾ ಶಾಲೆಯೂ, 'ಬಾಲ್ ರೂಂ' ಎಂಬ ವಿನೋದ ನರ್ತನ ಶಾಲೆಯೂ ಬಹು ರಮ್ಯವಾಗಿರುವುವು. ಒಳಗಡೆ, ಹಿಂದೂ ದೇಶದ ಚರಿತ್ರೆಯಲ್ಲಿ ಖ್ಯಾತಿಗೊಂಡ ವೈಸ್ರಾಯಿಗಳನೇಕರ ಛಾಯಾಚಿತ್ರಪಟಗಳು ಕಟ್ಟಿವೆ. ಹೊರಗಡೆ, ಈ ದೇಶದ ರಾಜರಿಂದ ಕಿತ್ತುಕೊಂಡ ಫಿರಂಗಿಗಳು ಇಡಲ್ಪಟ್ಟಿರುವುವು.

ಡಿಸೆಂಬರು ೨೩ನೆಯ ತಾರೀಖಿನ ದಿವಸ ಮಹಾರಾಜರವರು ಮಾರ್ಕ್ವಿಸ್ ಲ್ಯಾನ್ಸ್‌ಡೌನ್ ಅವರ ಸಂದರ್ಶನಕ್ಕೆ ದಯೆಮಾಡಿಸಿದ್ದರು. ಮಾರನೆಯ ದಿನ ವೈಸ್ರಾಯಿಯವರು ಪ್ರೈವೇಟ್ ಸೆಕ್ರೆಟರಿಯವರೇ ಮುಂತಾದ ತಮ್ಮ ಇಷ್ಟ ಸಾಮಾಜಿಕರೊಡನೆ ಶ್ರೀಮನ್ಮಹಾರಾಜರವರ ದರ್ಶನಕ್ಕೆ ದಯೆಮಾಡಿ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋದರು. ಬಳಿಕ ಶ್ರೀಮನ್ಮಹಾರಾಜರವರು, ವೈಸ್ರಾಯಿಯವರ

ಸಂದರ್ಶನಾನಂತರದಲ್ಲಿ ಜಸ್ಟಿಸ್ ಗುರುದಾಸ ಬಾನರ್ಜಿ, ಸುರೇಂದ್ರನಾಥ ಬಾನರ್ಜಿ, ಟಾಗೋರ್ ಮುಂತಾದ ಅಲ್ಲಿಯ ಮುಖ್ಯ ಮಹಾಶಯರುಗಳನ್ನು ಕಂಡು ಮಾತನಾಡಿ, ಅನೇಕ ರಾಜಕೀಯ ವಿಷಯಗಳನ್ನು ತಿಳಿದುಕೊಂಡು, ಕಲ್ಕತ್ತಾ ಪಟ್ಟಣದ ಅಂದಚಂದ



ಕಲ್ಕತ್ತಾ ನಗರದಲ್ಲಿರುವ ಗೌರ್ನಮೆಂಟ್ ಹೌಸ್ ಎಂಬ ವೈಸ್ರಾಯಿಯವರ ಅರಮನೆ.

ಗಳನ್ನು ನೋಡುತ್ತ ಕೆಲವು ದಿವಸಗಳನ್ನು ಕಳೆದು, ಜನವರಿ ೬ ನೆಯ ಪ್ರಾತಃಕಾಲ ಡಾರ್ಜೀಲಿಂಗಿಗೆ ಪ್ರಯಾಣ ಮಾಡಿದರು.

ಈ ರೈಲ್ವೇ ಪ್ರಯಾಣವು ಬಹು ವಿಚಿತ್ರವಾಗಿಯೂ ಆಶ್ಚರ್ಯಕರವಾಗಿಯೂ ಇರುವುದು. ಈ ಕಡಿದಾದ ದಾರಿಯಲ್ಲಿ ರೈಲ್ ಗಾಡಿಯು ಮೇಲಕ್ಕೆ ಹತ್ತಿ ಹೋಗಬೇಕಾಗಿರುವುದರಿಂದ, ಗಾಡಿಗಳ ಸಾಲು ಸರ್ಪಗಮನದಂತೆ ವಕ್ರವಾಗಿ

ಹೋಗುವುದು. ಈ ಪ್ರಯಾಣಕಾಲದಲ್ಲಿ, ಒಂದು ಕಡೆ ಮುಗಿಲು ಮುಟ್ಟುವಂತೆ ಜಟಿಲವಾಗಿ ಬೆಳೆದಿರುವ ನಾನಾವಿಧಗಳಾದ ಅರಣ್ಯವೃಕ್ಷಗಳಿಂದ ಆವೃತವಾದ ಅಡವಿಯ ಜೆಡಗನ್ನೂ, ಇನ್ನೊಂದುಕಡೆ ದೃಷ್ಟಿ ಪ್ರಸರಿಸುವ ವರೆಗೂ ಸೂರ್ಯ ಕಿರಣಗಳಿಂದ ದೇದೀಪ್ಯಮಾನವಾಗಿ ಪರ್ವತಗಳಿಂದಿಳಿದು ಹರಿಯುತ್ತಿರುವ ನದಿಗಳ ರಮಣೀಯತೆಯನ್ನೂ, ಮತ್ತೊಂದುಕಡೆ ಆಕಾಶಮಾರ್ಗದಲ್ಲಿ ಸಂಚರಿಸುತ್ತಿರುವ ಮೇಘಪಙ್ಕ್ತಿಗಳ ಸಂಯೋಗದಿಂದ ಸಾಂದ್ರವಾದ ಹಿಮಾಲಯ ಪರ್ವತ ಪ್ರಾಂತಗಳ ವೈಚಿತ್ರ್ಯವನ್ನೂಕಂಡು ಆನಂದಿಸುತ್ತ, ಪಕ್ಕದಲ್ಲಿದ್ದವರೊಡನೆ ಪರ್ವತ ವನಪಙ್ಕ್ತಿಗಳ ಸೌಂದರ್ಯವನ್ನು ಕೊಂಡಾಡುತ್ತ ಡಾರ್ಜೀಲಿಂಗ್ ಗಿರಿದುರ್ಗವನ್ನು ಸೇರಿ ಕುಚ್ ಬಿಹಾರ್ ಮಹಾರಾಜರವರ 'ಕಾಲಿಕ್‌ಟಕ್ ಹೌಸ್' ಎಂಬ ಅರಮನೆಯಲ್ಲಿ ಇಳಿದರು.

ಡಾರ್ಜೀಲಿಂಗ್ ನಗರವು ಬಂಗಾಳಕ್ಕೆ ಮುಖ್ಯವಾದ ಆರೋಗ್ಯಸ್ಥಾನವೆನಿಸಿಕೊಂಡು, ಹಿಮಾಲಯ ಪರ್ವತಶ್ರೇಣಿಯ ಮಧ್ಯದಲ್ಲಿರುವ ಕಾಂಚನಗಂಗಾ ಶಿಖರದ ಛಾಯೆಯಲ್ಲಿ ೯,೦೦೦ ಅಡಿ ಎತ್ತರವಿರುವ ಸಿಂಚಲ್ ಬೆಟ್ಟದ ಅಂಚಿನಲ್ಲಿದೆ. ಈ ನಗರವಿರುವ ಸ್ಥಾನವೈಭವವನ್ನೂ ತತ್ಪರಿತ ಪ್ರದೇಶಗಳನ್ನೂ ಸರಿಯಾಗಿ ವರ್ಣಿಸಿ ಬರೆಯುವುದು ಯಾರಿಗೂ ಅಳವಲ್ಲ. ಇಲ್ಲಿ ನಿಂತು ಪಡುವಣ ಕಡೆಗೆ ಕಣ್ಣಿಟ್ಟು ನೋಡಿದರೆ ಪಂಡಿಮ್, ನರಸಿಂಗ್, ಕಾಬರ್, ಜೋಮಿಯಾಮೊ, ಯಾಚಮ್, ಮೊದಲಾದ ಹಿಮಶಿಖರಗಳು ಕಾಣಿಸುವುವು. ಈ ಪರ್ವತ ಶ್ರೇಣಿಗಳ ಮಧ್ಯದಲ್ಲಿ ಕಾಂಚನಗಂಗಾ ಶಿಖರವು ಮೇಲಕ್ಕೆ ಎದ್ದು ಬಂಗಾಳದ ಮೈದಾನಕ್ಕೆ ಐದು ಮೈಲುಗಳೆತ್ತರವುಳ್ಳುದೆನ್ನಿಸಿಕೊಂಡು ಹಿಮಾವೃತವಾಗಿರುವುದು. ಆದರೆ ಸೂರ್ಯಾಸ್ತಮಯದಲ್ಲಿ ಅದೇ ಬೆಟ್ಟದ ಮೇಲೆ ನಿಂತು ಕಾಂಚನಗಂಗವನ್ನು ನೋಡಿದರೆ, ಕಾಣುವ ಸೊಬಗು ಎಂದಿಗೂ ಮರೆಯಲಾಗುವುದಿಲ್ಲ.

ಶ್ರೀಮನ್ಮಹಾರಾಜರವರು ಡಾರ್ಜೀಲಿಂಗನ್ನು ಸೇರಿದಕೂಡಲೆ, ಕುಚ್‌ಬಿಹಾರ್ ಮಹಾರಾಜರವರ ಮಿಲಿಟೆರಿ ಸೆಕ್ರೆಟೆರಿಯವರಾದ ಕ್ಯಾಪ್ಟನ್ ಕೇನ್ ಸಾಹೇಬರೂ, ಮ್ಯಾನೇಜರ್ ಹ್ಯಾರಿಸನ್ ಸಾಹೇಬರೂ, ಬಂದವರನ್ನು ಅತ್ಯಾದರದಿಂದ ಉಪಚರಿಸಿದರು. ಮರುದಿನ ಪ್ರಾತಃಕಾಲ ಶ್ರೀಮನ್ಮಹಾರಾಜರವರು ಕೇನ್ ಸಾಹೇಬರೊಡನೆ ಸಂಚಾರಹೊರಟು, ಸ್ವಚ್ಛವಾದ ಆಕಾಶದಲ್ಲಿ ಥಳಥಳಿಸುತ್ತಿರುವ ಕಾಂಚನಗಂಗಾ ಶಿಖರವನ್ನೂ, ಲೋಕದಲ್ಲೆಲ್ಲ ಅತ್ಯುನ್ನತವಾದ ಶಿಖರಶ್ರೇಷ್ಠವೆನ್ನಿಸಿಕೊಂಡಿರುವ ದವಳಗಿರಿಯನ್ನೂ, ಬಜಾರನ್ನೂ, ರಮ್ಯವಾದ ತೇಯಲೆಯ ತೋಟಗಳನ್ನೂ, ಭೂತಿಯಾ ಜನರ ಅಲಂಕಾರಗಳನ್ನೂ ಕಂಡು ಆನಂದಿಸಿ, ಶೀತಬೀತಿಯಿಂದ ಬೇಗ ಬೀಡಾರಕ್ಕೆ ಬಂದು, ಚಳಿಯನ್ನು ಪರಿಹರಿಸಲೋಸುಗ ತಮ್ಮ ಇಷ್ಟಮಿತ್ರರೊಡನೆ ಬೆಂಕಿಯಸುತ್ತಲೂ ಕುಳಿತು, ಮುಂದಣ ವರುಷ ತಾವು ಇಂಗ್ಲೆಂದಿಗೆ ಪ್ರಯಾಣ ಮಾಡಬೇಕೆಂದಿದ್ದ ವಿಷಯವನ್ನು ಎತ್ತಿ ಮಾತನಾಡುತ್ತ, ತಮ್ಮ ಐರೋಪ್ಯಮಿತ್ರರಿಂದ ತಾವು ಕೇಳಿರುವ ಇಂಗ್ಲೆಂಡಿನ ಶೀತೋಷ್ಣ ವಿಷಯವನ್ನೂ, ಲಂಡನ್ ನಗರದ

ವರ್ಣನೆಯನ್ನೂ, ವಿಂಡ್ಸರ್ ಕ್ಯಾಸಲ್ ಮೊದಲಾದ ದರ್ಶನೀಯ ಪ್ರದೇಶಗಳ ವಿಚಿತ್ರತೆಯನ್ನೂ, ಮಹೋನ್ನತವಾದ ಕಟ್ಟಡಗಳಿಂದಲೂ ನಾನಾ ಕೈಗಾರಿಕೆಗಳಿಂದಲೂ ಶಾಸ್ತ್ರಶೋಧನಾ ನೈಪುಣ್ಯದಿಂದಲೂ ದಿನೇ ದಿನೇ ಅಭಿವೃದ್ಧಿಗೆ ಬರುತ್ತಿರುವ ಅಮೆರಿಕಾ ಖಂಡದ ವೈಚಿತ್ರ್ಯಗಳನ್ನೂ ಕುರಿತು ಮಾತನಾಡುತ್ತ ಸ್ವಲ್ಪ ಹೊತ್ತನ್ನು ಕಳೆದರು. ಶ್ರೀಮನ್ಮಹಾರಾಜರವರು ಕ್ಷಿಪ್ರದಲ್ಲಿಯೇ ಇಂಗ್ಲೆಂಡಿಗೆ ಹೊರಡುವವರಾಗಿದ್ದಾರೆಂಬ ವರ್ತಮಾನವು ವೃತ್ತಾಂತಪತ್ರಿಕೆಗಳ ಮೂಲಕ ಇಂಗ್ಲೆಂಡಿನವರಲ್ಲಿ ಪ್ರಚಾರಗೊಂಡು, ಇಂಗ್ಲೆಂಡಿನಲ್ಲಿರುವ ಇಂಡಿಯಾದೇಶದ ಇತರ ಪ್ರಾಂತಗಳ ನಿವಾಸಿಗಳೂ ಮತ್ತು ಮೈಸೂರು ಸಂಸ್ಥಾನದ ಏಳಿಗೆಯಲ್ಲಿ ಅಭಿಮಾನಶಾಲಿಗಳಾಗಿರುವ ಶ್ರೀಮನ್ಮಹಾರಾಜರವರ ಪಾಶ್ಚಾತ್ಯ ಸ್ನೇಹಿತರೂ ಅವರು ಯಾವಾಗ ಬರುವರೋ, ಅವರನ್ನು ನಾವು ಯಾವಾಗ ಸತ್ಕರಿಸುವೆವೋ ಎಂಬುದಾಗಿ ಕೇವಲ ಕೌತೂಹಲ ವಿಶಿಷ್ಟರಾಗಿದ್ದರು.

ಹೀಗೆ ಡಾರ್ಜೀಲಿಂಗ್ ಬೆಟ್ಟದಲ್ಲಿ ಎರಡು ದಿವಸಗಳನ್ನು ಕಳೆದು, ಪುನಃ ಕಲ್ಕತ್ತೆಗೆ ಬಂದು, ಮೈಸೂರಿನ ಖಾಸಬಂಗಲೆಯ ಹಿಂದುಗಡೆಯಲ್ಲಿ ತಾವು ಏರ್ಪಡಿಸಿದ್ದ ಜೀವಜಂತು ಶಾಲೆಗಾಗಿ ಅನೇಕ ಪಶುಪಕ್ಷಿ ಮೃಗಾದಿಗಳನ್ನು ಕೊಂಡುಕೊಂಡು ಅವುಗಳನ್ನು ಮೈಸೂರಿಗೆ ಸಾಗಕಳುಹಿಸಿ, ಕಲ್ಕತ್ತೆಯನ್ನು ಬಿಟ್ಟು ಗಯಾಕ್ಷೇತ್ರವನ್ನು ತಲಪಿದರು. ಗಯಾವಳಿಗಳಾದ ಗಂಗಾವಿಷ್ಣು ಚೋಟಾಲಾಲ್ ಮುಂತಾದವರು ಶ್ರೀಮನ್ಮಹಾರಾಜರನ್ನು ಇದಿರ್ಗೊಂಡರು. ಬಳಿಕ ಮಹಾರಾಜರವರು ತಮ್ಮ ಪರಿವಾರದ ಜನರೆಲ್ಲರೂ ಅವರವರ ಪಿತೃಪಿತಾಮಹರಿಗೆ ಅಕ್ಷಯವಾದ ಪುಣ್ಯಲೋಕ ಪ್ರಾಪ್ತಿಯಾಗುವುದಕ್ಕಾಗಿ ತೀರ್ಥಶ್ರಾದ್ಧಾದಿಗಳನ್ನು ನಡೆಯಿಸುವಂತೆ ಅಪ್ಪಣೆಮಾಡಿ, ಎಲ್ಲರಿಗೂ ಅವರವರ ಯೋಗ್ಯತಾನುಸಾರ ದ್ರವ್ಯವನ್ನು ಕೊಡುವಂತೆ ದರ್ಬಾರ್ ಬಕ್ಷಿಯವರಿಗೆ ಆಜ್ಞೆಯಿತ್ತು, ತಾವೂ ಶ್ರಾದ್ಧಾದಿ ಕರ್ಮಗಳನ್ನು ಮಾಡುವುದಕ್ಕಾಗಿ ಗಂಗಾವಿಷ್ಣು ಚೋಟಾಲಾಲರೊಡನೆ ಫಲ್ಗುನೀ ನದೀತೀರಕ್ಕೆ ತೆರಳಿದರು. ಆಗ ಬ್ರಾಹ್ಮಣರಿಗೆ ಅನೇಕವಾಗಿ ಗೋದಾನ, ಭೂದಾನ, ಹಿರಣ್ಯಾದಿ ದಾನಗಳು ಕೊಡಲ್ಪಟ್ಟುವು. ಹೀಗೆ ಶ್ರೀಮನ್ಮಹಾರಾಜರವರು ಮೂರು ದಿವಸಗಳ ಪರ್ಯಂತ ಕ್ಷೇತ್ರವಾಸವನ್ನು ಮಾಡಿ ಅಲ್ಲಿರುವ ರಾಮಪರ್ವತ, ಪ್ರೇತಪರ್ವತ, ಧರ್ಮಾರಣ್ಯ, ಅಕ್ಷಯವಟ, ಅಷ್ಟಾದಶಪಾದ,

---

* ಈ ವಿಷಯವಾಗಿ 'ಬರ್ಕ್‌ಷೈರಿ' ನಲ್ಲಿ ವಾಸಮಾಡುತ್ತಿದ್ದ ಜಾನ್ ಡಾಸನ್ ಮೇನ್ ಸಾಹೇಬರು ೧೮೯೩ನೆಯ ಇಸವಿ ಮೇ ೧ನೆಯ ತಾರೀಖಿನಲ್ಲಿ ಶ್ರೀಮನ್ಮಹಾರಾಜರವರ ಕೌನ್ಸಿಲರಾಗಿದ್ದ ಮ|| ತಂಬೂಸೆಟ್ಟರವರಿಗೆ ಬರೆದ ಕಾಗದವು ತಿಳಿಸುವುದೇನೆಂದರೆ :--

"MY DEAR THUMBOO CHETTY, ... There was a report some time ago that the Maharaja was going to visit England, and that you were to accompany him. If ever this should happen, I hope you will be able to spare time to pay us a visit here. Both Mrs. Mayne and myself would gladly welcom you to our Home. . . . . ."

ಗಯಾಸುರನ ಶಿರಸ್ಸು, ವೈತರಣಿ ಮುಂತಾದವುಗಳನ್ನೆಲ್ಲ ಪರಾಮರ್ಶಿಸಿ, ಅವಶ್ಯ ಕರ್ತವ್ಯಗಳಾದ ಪಿತೃಕರ್ಮಗಳನ್ನೆಲ್ಲ ನಿರ್ವರ್ತಿಸಿದ ಬಳಿಕ, ಅಲ್ಲಿಂದ ಹೊರಟು ಕಾಶೀಪಟ್ಟಣವನ್ನು ತಲುಪಿದರು. ಕೂಡಲೆ ಕಾಶೀಮಹಾರಾಜರ ಅಂಗರಕ್ಷಕರಾದ ಕ್ಯಾಪ್ಟನ್ ವಿಂದೇಶ್ವರಪ್ರಸಾದರವರು, ವಿಜಯನಗರದ ಮಹಾರಾಜರ ಬಂಗಲೆಯ ಮ್ಯಾನೇಜರೊಡನೆ ಬಂದು, ಮಹಾರಾಜರನ್ನು ಇದಿರ್ಗೊಂಡು 'ವಿಜಯನಗರಂ ಕೋಠಿ' ಎಂಬ ಭವನದಲ್ಲಿ ಇಳಿಸಿದರು.

ಕಾಶಿಯು ಈ ದೇಶದಲ್ಲಿರುವ ಪಟ್ಟಣಗಳಲ್ಲಿ ಬಹಳ ಪುರಾತನವೆನಿಸಿ ಮಹಮ್ಮದೀಯರಿಗೆ ಮಕ್ಕಾ ಪಟ್ಟಣವು ಹೇಗೆಯೋ ಕ್ರೈಸ್ತರಿಗೆ ಜೆರೂಸಲಂ ಪಟ್ಟಣವು ಹೇಗೆಯೋ ಹಾಗೆಯೇ ಭಾರತೀಯರಿಗೆ ಅಗಣ್ಯಪುಣ್ಯಕ್ಷೇತ್ರವೆನಿಸಿಕೊಂಡಿರುವುದು. ಪಟ್ಟಣವು ನೋಡುವುದಕ್ಕೆ ಬಹು ವಿಚಿತ್ರವಾಗಿರುವುದು. ಇದು ಗಂಗಾನದಿಯ ಒಂದು ತಿರುವಿನಲ್ಲಿ ನೀರಿನ ಮಟ್ಟಕ್ಕೆ ೧೦೦ ಅಡಿಗಳ ಎತ್ತರದಲ್ಲಿರುವ ಗುಡ್ಡದ ಶಿಖರಭಾಗದಲ್ಲಿರುವುದು. ನದಿಯ ಕಡೆಯಿಂದ ನೋಡಿದರೆ, ತೀರದಲ್ಲಿ ಮೂರು ಮೈಲಿಗಳುದ್ದಕ್ಕೆ ಸಾಲಾಗಿ ರಾಜಯೋಗ್ಯವಾದ ಅರಮನೆಗಳೂ ದೇವಾಲಯಗಳೂ ಭುವನೇಶ್ವರಿಗಳೂ ಶಿಖರಗಳೂ ಮಸೀದಿಯ ಮಿನಾರತುಗಳೂ ವಿರಾಜಿಸುತ್ತಿರುವುವು. ಇಲ್ಲಿಂದ ನೀರಿನ ಅಂಚಿನವರೆಗೂ ಕಟ್ಟಿರುವ ಶಿಲಾಸೋಪಾನ ಪಙ್ಕ್ತಿಗಳೂ ಸ್ನಾನಘಟ್ಟಗಳೂ ಮಂಟಪ ಪಙ್ಕ್ತಿಗಳೂ ನೋಡುವುದಕ್ಕೆ ರಮ್ಯವಾಗಿರುವುವು. ಪಟ್ಟಣವು ಯಾವಾಗ ನೋಡಿದರೂ ಯಾತ್ರಾರ್ಥಿಗಳು, ಭಿಕ್ಷುಕರು, ವ್ಯಾಪಾರಿಗಳು, ನಾನಾದೇಶಗಳಿಂದ ಬಂದ ನೋಟಕರು—ಇವರುಗಳ ನೆರವಿಯಿಂದ ಗಿಜಗುಟ್ಟುತ್ತಿರುವುದು. ಗಂಗಾನದಿಗೆ ಬಹಳ ಅಂದವಾದ ಕಬ್ಬಿಣದ ಸೇತುವೆಯನ್ನು ಕಟ್ಟಿರುವರು. ಇದರಬಳಿ ದೋಣಿಯಲ್ಲಿ ಕುಳಿತು ಈ ಸೇತುವೆಯಲ್ಲಿ ತೂರಿ ಹೊರಟರೆ, ತ್ರಿಲೋಚನಘಾಟು ಸಿಕ್ಕುವುದು. ಇದೊಂದು ಮಹಾಕ್ಷೇತ್ರವು. ಇದರಾಚೆ ಗೋಘಾಟ್, ಮಹಾದೇವ ಘಾಟ್, ದುರ್ಗಾಘಾಟ್—ಇವುಗಳಿರುವುವು. ಇಲ್ಲಿಂದ ಮುಂದೆ ಪಂಚಗಂಗಾ ಘಾಟಿನಲ್ಲಿಳಿದು, ರಮ್ಯವಾದ ಶಿಲಾ ಸೋಪಾನವನ್ನೇರಿದರೆ, ಡಿಲ್ಲೀ ಚಕ್ರವರ್ತಿಯಾಗಿದ್ದ ಔರಂಗಜೇಬನು ಕಟ್ಟಿಸಿದ ಮಸೀದಿಯನ್ನು ಕಾಣಬಹುದು. ಇದು ಮೊದಲು ಒಂದು ವಿಷ್ಣುದೇವಾಲಯವಾಗಿದ್ದಿತು. ಆಗ ಮತದ್ವೇಷಿಯಾದ ಆ ಚಕ್ರವರ್ತಿಯು ಅದರಲ್ಲಿದ್ದ ದೇವರನ್ನು ಕಿತ್ತೊಗೆದು ಮಸೀದಿಯನ್ನು ಕಟ್ಟಿಸಿದನು. ಇಲ್ಲಿಂದ ಮುಂದೆ, ಮಣಿಕರ್ಣಿಕಾಘಾಟ್ ಸಿಕ್ಕುವುದು. ಇದು ಘಾಟುಗಳಲ್ಲಿ ಅಸದೃಶವಾದ ಪುಣ್ಯಕ್ಷೇತ್ರವೆನ್ನಿಸಿಕೊಂಡಿದೆ. ಇಲ್ಲಿಯೇ ತಾರಕೇಶ್ವರ ದೇವಾಲಯವೂ ಚರಣಪದಕವೂ ಇವೆ. ಇದರ ಮೇಲ್ಗಡೆ ಸುವರ್ಣಮಯವಾದ ಭುವನೇಶ್ವರಿಯಿಂದ ಝಗಝಗಾಯಮಾನವಾಗಿ ಲೋಕಪ್ರಸಿದ್ಧವಾದ ವಿಶ್ವೇಶ್ವರ ದೇವಾಲಯವಿದೆ. ಆ ಬಳಿಯಲ್ಲಿಯೇ ಸ್ಮಶಾನ ಘಾಟಿದೆ. ಇಲ್ಲಿ ಜೊತೆಜೊತೆಯಲ್ಲಿ ನಿಲ್ಲಿಸಿದ ಕಲ್ಲುಗಳನೇಕವಿವೆ. ಇವು ಪೂರ್ವದಲ್ಲಿ ಸಹಗಮನ ನಡೆಯುತ್ತಿದ್ದುದಕ್ಕೆ ಸಾಕ್ಷೀಭೂತಗಳಾಗಿವೆ. ಆ ಪಕ್ಕದಲ್ಲಿಯೇ

ಶೀತಲಾದೇವಿಯ ದೇವಾಲಯವಿದೆ. ಮಾನಮಂದಿರ ಘಾಟಿನಿಂದ ಮೇಲ್ಗಡೆಯಲ್ಲಿ ಗ್ರಹನಕ್ಷತ್ರಾದಿಗಳ ಚಲನಾದಿಗಳನ್ನು ನಿಶ್ಚಯಿಸುವ ಪುರಕ್ಷ್ಯೇಶ್ವರ ಜಯಸಿಂಗ್ ಮಹಾರಾಜರು ಕಟ್ಟಿಸಿದ ಉನ್ನತವಾದ ಪ್ರೇಕ್ಷಾಗಾರವಿರುವುದು. ದಶಮೇಧಘಾಟ್ ಎಂಬುದೂ ಬಹು ಪ್ರಖ್ಯಾತವಾದ ಕ್ಷೇತ್ರ. ಇಲ್ಲಿ ಬ್ರಹ್ಮದೇವನೇ ಹತ್ತು ಅಶ್ವಮೇಧಗಳನ್ನು ಮಾಡಿದನೆಂದು ಪ್ರತೀತಿಯುಂಟು. ಕೇದಾರ ಘಾಟಿನ ಬಳಿಯಲ್ಲಿ ಗೌರೀಪುಷ್ಕರಿಣಿ ಇರುವುದು. ವಿಶ್ವೇಶ್ವರ ದೇವಸ್ಥಾನದ ಸುತ್ತಲೂ ಇನ್ನೂ ಅನೇಕ ದೇವಾಲಯ

ಶ್ರೀಮನ್ಮಹಾರಾಜರವರು ದೇಶೀಯ ಡ್ರೆಸ್ಸಿನಲ್ಲಿರುವುದು.

ಗಳಿವೆ. ಅನ್ನಪೂರ್ಣಾ ದೇವಾಲಯವು ನೋಡತಕ್ಕದಾಗಿದೆ. ಈ ದೇವಸ್ಥಾನವನ್ನು ೧೭೨೧ರಲ್ಲಿ ಪೇಷ್ವೆ ಬಾಜಿರಾಯನು ಕಟ್ಟಿಸಿದನು. ಇದರ ಬಳಿಯಲ್ಲಿಯೇ ಶನೀಶ್ವರ, ಶುಕ್ರೇಶ್ವರ, ಸಾಕ್ಷಿ ವಿನಾಯಕ ದೇವಾಲಯಗಳಿವೆ. ವಾರಾಣಸಿಯು ಕತ್ತನೆಯ ಕೆಲಸದ ಹಿತ್ತಾಳೆಯ ಸಾಮಾನುಗಳಿಗೂ, ಚಿನ್ನ ಬೆಳ್ಳಿ ಸರಿಗೆಗಳಿಂದ

ಚಿತ್ರವರ್ಣಗಳಲ್ಲಿ ಪಶುಪಕ್ಷಿ ರೂಪವಾಗಿ ಕಸೂತಿಹಾಕಿದ ಕಚ್ಕಾಬ್ ವಸ್ತ್ರಗಳಿಗೂ, ರಮಣೀಯವಾದ ರೇಷ್ಮೆಯ ವಸ್ತ್ರಗಳಿಗೂ ಲೋಕದಲ್ಲೆಲ್ಲ ಖ್ಯಾತಿಗೊಂಡಿರುವುದು.

ಶ್ರೀಮನ್ಮಹಾರಾಜರವರು ಪುನಃ ಭಾಗೀರಥಿಯಲ್ಲಿ ಸ್ನಾನಮಾಡಿ, ವಿಶ್ವೇಶ್ವರ, ಅನ್ನಪೂರ್ಣೆ, ಕಾಲಭೈರವ ಮುಂತಾದ ದೇವರುಗಳ ದರ್ಶನವನ್ನು ಮಾಡಿದರು. ಮಧ್ಯಾಹ್ನದಲ್ಲಿ ಕಾಶೀ ಮಹಾರಾಜರವರು ಶ್ರೀಚಾಮರಾಜೇಂದ್ರ ಒಡೆಯರವರ ಸಂದರ್ಶನಾರ್ಥವಾಗಿ ದಯೆಮಾಡಿಸಿದ್ದರು. ಮಾರುದಿನ ಶ್ರೀಚಾಮರಾಜೇಂದ್ರ ಒಡೆಯರವರು ಸೂರ್ಯಾಸ್ತಮಯಕ್ಕೆ ಸ್ವಲ್ಪ ಮುಂಚಿತವಾಗಿ ದೋಣಿಯಲ್ಲಿ ಕುಳಿತು ನದಿಯ ಮೇಲ್ಗಡೆ ನಾಲ್ಕು ಮೈಲಿಯ ದೂರವುಳ್ಳ ಪುರಾತನವಾದ ರಾಮನಗರದ ಕೋಟೆಗೆ ಚಿತ್ತೈಸಿದರು. ಅಲ್ಲಿ ನದೀತೀರದಲ್ಲಿಯೇ ಒಂದು ದಿವ್ಯ ವಿತಾನ ಶೋಭಿತ ವಾಗಿ ಕುಸುಮ ಮಾಲಾಲಂಕೃತವಾದ ಮಂಟಪದಲ್ಲಿ ನಿರೀಕ್ಷಿಸುತ್ತಲಿದ್ದ ಕಾಶೀ ಮಹಾರಾಜರವರು ಶ್ರೀಚಾಮರಾಜೇಂದ್ರ ಒಡೆಯರವರನ್ನು ಬಹುಮರ್ಯಾದೆಯೊಡನೆ ಇದಿರ್ಗೊಂಡರು. ಆ ದಿನ ನಡೆದ ಉತ್ಸವಾತಿಶಯವನ್ನು ವರ್ಣಿಸಲಳವಲ್ಲ. ನದೀ ತೀರವೆಲ್ಲ ಕೋಲಾಹಲಮಯವಾಗಿಯೂ ಅಂತರಿಕ್ಷವು ಪಿರಂಗಿಗಳ ಝಾಂಕಾರಮಯ ವಾಗಿಯೂ ಇದ್ದಿತು. ಕೋಟೆಯ ಅಲಂಗಗಳ ಮೇಲೆಲ್ಲ ದೀಪಜಾಲವು ಪ್ರಜ್ವಲಿಸು ತ್ತಿದ್ದಿತು. ಇವುಗಳ ಪ್ರಕಾಶದಿಂದಲೂ, ಉತ್ಸವದಲ್ಲಿ ಸಾಲುಸಾಲಾಗಿ ಹಿಡಿದಿದ್ದ ಸಾವಿರಾರು ಕೈದೀವಿಟಿಗೆಗಳಿಂದಲೂ, ಬೆಳ್ಳಿಯ ಮಶಾಲುಗಳಿಂದಲೂ, ನದೀತೀರದಲ್ಲಿ ಉರಿಯುತ್ತಿದ್ದ ದೀಪಪಙ್ಕ್ತಿಗಳಿಂದಲೂ, ಮತಾಪುಗಳ ಬೆಳಕಿನಿಂದಲೂ, ಆ ರಾತ್ರಿ ಯಲ್ಲಿ ಹಗಲೆಂಬ ಭ್ರಾಂತಿಯುಂಟಾಗುತ್ತಿದ್ದಿತು. ಉಭಯ ಪಾರ್ಶ್ವಗಳಲ್ಲೂ ಬಂದೂಕು ಗಳನ್ನು ಹೊತ್ತಿರುವ ಸಿಪಾಯಿಗಳೂ ಸವಾರರೂ ನಡೆಯುತ್ತಿರಲು, ಮುಂದೆ ಭರ್ಜಿ ಈಟಿ ಗದೆ ಮುಂತಾದ ಆಯುಧಗಳನ್ನು ಹಿಡಿದಿದ್ದ ಭಟರು ಸಂದಣಿಸುತ್ತಿರಲು, ನಗಾರಿಗಳನ್ನು ಹೊತ್ತಿರುವ ಅನೇಕ ಮತ್ತಗಜಗಳು ಸಾಗಿಬರುತ್ತಿರಲು ಕಾಶೀ ರಾಜರೂ ಶ್ರೀಚಾಮರಾಜೇಂದ್ರ ಒಡೆಯರವರೂ ರಜತಮಯವಾದ ಪಲ್ಲಕ್ಕಿ ಯಲ್ಲಿ ಕುಳಿತು ರಾಜಭವನಕ್ಕೆ ಚಿತ್ತೈಸಿದರು. ಆಗ ದುರ್ಗಮವಾದ ಕೋಟೆಯ ಬಾಗಿಲಲ್ಲಿ ಕಬ್ಬಿಣದ ಕವಚಗಳನ್ನು ತೊಟ್ಟು ಕಾವಲಾಗಿ ನಿಂತಿದ್ದ ಕಾಶೀ ರಾಜ ಭಟರೂ, ಮೈಸೂರು ಮಹಾರಾಜರ ಸಂದರ್ಶನ ಲಾಲಸರಾಗಿ ಕಾದಿದ್ದ ಕಾಶೀ ಮಹಾರಾಜರ ಕೃಪಾಪೋಷಿತರಾದ ಅಧಿಕಾರಿಗಳೂ, ದೊಡ್ಡಮನುಷ್ಯರೂ ಭಯ ಭಕ್ತಿಗಳಿಂದ ವಂದನೆಮಾಡಿದರು. ಅರಮನೆಗೆ ಸೇರಿದಬಳಿಕ, ಉಭಯ ಮಹಾ ರಾಜರೂ ಸುಖಸಲ್ಲಾಪಗಳಿಂದ ಸ್ವಲ್ಪ ಹೊತ್ತನ್ನು ಕಳೆದರು. ಚಾಮರಾಜೇಂದ್ರ ಒಡೆಯರವರು ಆ ರಾಜಗೃಹಕ್ಕೆ ದಯೆಮಾಡುತ್ತಲೇ, ಅದೃಷ್ಟಪೂರ್ವವಾದ ವಿನೋ ದಾತಿಶಯವೊಂದು ದೃಷ್ಟಿಪಥವನ್ನೈದಿತು. ಗಂಗಾಪ್ರವಾಹವೆಲ್ಲವೂ ದೀಪಕಲಿಕಾ ಜಾಲ ಚರಿತವಾಗಿದ್ದಿತು. ಈ ಸಾವಿರಾರು ದೀಪಾಂಕುರಗಳು ವಾರಾಣಸಿಯ ಕಡೆಗೆ ಸಾಗಿಹೋಗುತ್ತ, ಉಭಯ ತಟಗಳಲ್ಲಿಯೂ ಉರಿಯುತ್ತಿರಲು, ಸಾಕ್ಷಾನ್ನ

ಕ್ಷತ್ರಮಂಡಲವೇ ಸುವರ್ಣಮಯಸ್ತಂಭಗಳ ಮಧ್ಯದಲ್ಲಿ ಸಂಚರಿಸುತ್ತಿರುವುದೋ ಎಂಬಂತೆ ಆಶ್ಚರ್ಯವನ್ನುಂಟುಮಾಡುತ್ತಿದ್ದಿತು. ಪ್ರಾಕಾರದ ಗೋಡೆಯಮೇಲೆ ಹಚ್ಚಿಸುತ್ತಿದ್ದ ನಾನಾವರ್ಣದ ಮತಾಪಿನ ಪ್ರಕಾಶವೆಲ್ಲ ಜನಗಳಮೇಲೆ ಪ್ರಸರಿಸುತ್ತಿದ್ದುದರಿಂದ, ಕ್ಷಣೇಕ್ಷಣೇ ಹೆಚ್ಚಿಬರುವ ರಮಣೀಯತೆಯನ್ನು ಕಂಡು ಆನಂದಾಶ್ಚರ್ಯಭರಿತರಾಗಿ, ನೋಟಕರು ನಲಿದಾಡಿ ಕೂಗುವ ಕೋಲಾಹಲವು ಬಹುದೂರ ಕೇಳಬರುತ್ತಿದ್ದಿತು. ಈ ವಿನೋದ ದರ್ಶನಾನಂತರದಲ್ಲಿ ಶ್ರೀಚಾಮರಾಜೇಂದ್ರ ಒಡೆಯರವರು ತಮ್ಮ ಪರಿವಾರದೊಡನೆ ರಾಮನಗರದ ಬಳಿಯಲ್ಲಿ ಪುನಃ ದೋಣಿಯಲ್ಲಿ ಕುಳಿತು ಕಾಶಿಗೆ ದಯಮಾಡಿಸಿದರು.

ಬಳಿಕ ಶ್ರೀಮನ್ಮಹಾರಾಜರವರು ಕಾಶಿಯಿಂದ ಮುಂದಕ್ಕೆ ಪ್ರಯಾಣಮಾಡಿ ದಾರಿಯುದ್ದಕ್ಕೂ ಸಿಕ್ಕಿದ ಸುಂದರವಾದ ತೋಪುಗಳನ್ನೂ ಅಡವಿಗಳನ್ನೂ ನೋಡುತ್ತ, ಸೂರ್ಯವಂಶೀಯರು ಆಳುತ್ತಿದ್ದ ಕೋಸಲದೇಶಕ್ಕೆ ರಾಜಧಾನಿಯಾಗಿ, ನಾರಾಯಣಾಂಶಸಂಭೂತನಾದ ಶ್ರೀರಾಮಚಂದ್ರನ ಜನ್ಮಸ್ಥಾನವೆಂದು ಖ್ಯಾತಿಗೊಂಡ ಅಯೋಧ್ಯಾ ಪಟ್ಟಣವನ್ನು ಸೇರಿದರು. ಅಲ್ಲಿಯ ಮುಖ್ಯಾಧಿಕಾರಿಗಳು ಶ್ರೀಮನ್ಮಹಾರಾಜರವರನ್ನು ಬಹಳ ಗೌರವದಿಂದ ಇದಿರ್ಗೊಂಡು ಅಯೋಧ್ಯಾ ರಾಜರ ಅರಮನೆಯಲ್ಲಿ ಇಳಿಸಿದರು. ಶ್ರೀಮನ್ಮಹಾರಾಜರವರು ಸರಯೂನದಿಯಲ್ಲಿ ಸ್ನಾನಮಾಡಿ, ಶ್ರೀರಾಮಮಂದಿರಕ್ಕೆ ಹೋಗಿ, ಶ್ರೀರಾಮಚಂದ್ರ ಪ್ರತಿಷ್ಠಿತವಾದ ಸುವರ್ಣವಿಗ್ರಹಗಳನ್ನು ದರ್ಶನಮಾಡಿ, ರಾಮಭದ್ರನ ಜನ್ಮಸ್ಥಳವನ್ನೂ, ವಿದ್ಯಾಭ್ಯಾಸಮಾಡಿದ ಸ್ಥಳವನ್ನೂ, ಸೀತಾದೇವಿಯು ಅಗ್ನಿಪ್ರವೇಶಮಾಡಿದ ಸ್ಥಳವನ್ನೂ, ಮಾರುತಿ ದೇವಾಲಯವನ್ನೂ ಪರಾಮರ್ಶಿಸಿ, ಸ್ಥಳೀಯರಿಂದ ಅಲ್ಲಿಯ ಪೂರ್ವಚರಿತ್ರೆ ಮುಂತಾದುವುಗಳನ್ನು ಕೇಳಿ ತಿಳಿದುಕೊಂಡು ಆಗ್ರಾ ಪಟ್ಟಣಕ್ಕೆ ಹೊರಟರು. ಡೋಲ್‌ಪುರದ ಮಹಾರಾಜರಾದ ರಾಣಾ ನಿಹಾಲ್‌ಸಿಂಗರವರು, ಮಹಾರಾಜರನ್ನು ಇದಿರ್ಗೊಳ್ಳುವುದಕ್ಕೆ ಬೇಕಾದ ಏರ್ಪಾಡುಗಳನ್ನೆಲ್ಲ ಮಾಡಿಸಿದ್ದರು. ಮಹಾರಾಜರು ಅವರ ಬಂಗಲೆಯಲ್ಲೇ ಇಳಿದುಕೊಂಡು, ಹಿಂದೆ ನೋಡಿದ್ದ ತಾಜ್‌ಮಹಲಿನ ರಾಮಣೀಯಕವನ್ನು ಮತ್ತೆ ನೋಡಿ ಆನಂದಿಸಿ, ಮುರಳೀಧರನನ್ನಾರಾಧಿಸಲು ಮಥುರೆಗೆ ಪ್ರಯಾಣಮಾಡಿದರು. ಅಲ್ಲಿ ಶ್ರೀಮನ್ಮಹಾರಾಜರವರು ಪರಮಾತ್ಮನ ಲೀಲೆಗೆ ಆಶ್ರಯವಾದ ಸ್ಥಾನವಿಶೇಷಗಳನ್ನೆಲ್ಲ ಪರಾಮರ್ಶಿಸಿ, ಮುಂದಕ್ಕೆ ಪ್ರಯಾಣಮಾಡಿ ಗ್ವಾಲಿಯರನ್ನು ತಲಪಿದರು. ಅಲ್ಲಿಯ ಮಂತ್ರಿವರ್ಯರಾದ ಮಹಾದೇವ ದೀಕ್ಷಿತ ಅಲ್ವಾರ್‌ಕರ್ ಮುಂತಾದವರು ಸಕಲ ಸೇನೆಯೊಡನೆ ಬಂದು, ಶ್ರೀಮನ್ಮಹಾರಾಜರವರನ್ನು ಕೇವಲ ಮರ್ಯಾದೆಯಿಂದ ಇದಿರ್ಗೊಂಡು, ಕರೆದುಕೊಂಡುಹೋಗಿ ಸುಂದರವಾಗಿ ಅಲಂಕರಿಸಿದ್ದ ಒಂದು ಅರಮನೆಯಲ್ಲಿ ಇಳಿಸಿದರು. ಆ ದಿನವೇ ರಾಜಧಾನಿಯಿಂದ ಮಹಾರಾಜರವರ ನಾಲ್ಕನೆಯ ಪುತ್ರರಾದ ದೇವರಾಜ ಒಡೆಯರು ಕಾಲವಾದರೆಂಬ ತಂತೀಸಮಾಚಾರವು ಬಂದು ತಲಪಿತು. ಆಗ ಗ್ವಾಲಿಯರ್ ಮಹಾರಾಜರವರ

ಬಂಧುಮಿತ್ರರನೇಕರು ಮಹಾರಾಜರವರ ಸಂದರ್ಶನಕ್ಕಾಗಿಯೂ ದರ್ಬಾರಿನ ಉತ್ಸವಕ್ಕಾಗಿಯೂ ಬಂದು ಸೇರಿದ್ದರು. ಈ ತಂತೀ ಸಮಾಚಾರದ ವೃತ್ತಾಂತವು ಅವರೆಲ್ಲರಿಗೂ ತಿಳಿಯದೆ ಹೋಗಲಿಲ್ಲ. ಅವರೆಲ್ಲರೂ ಸಂಭ್ರಾಂತರಾಗಿ ಹಾಹಾಕಾರಗಳನ್ನು ಮಾಡತೊಡಗಿದರು. ಆದರೂ ಮಹಾರಾಜರು ಅಸಂತೋಷವನ್ನು ತೋರ್ಪಡಿಸಲಿಲ್ಲ. ಆಗ ಅಲ್ಲಿ ಬಂದಿದ್ದವರೆಲ್ಲರೂ ದರ್ಬಾರನ್ನು ಮುಗಿಸಿಕೊಂಡು ಸಂತಾಪಪಡುತ್ತ ಮಹಾರಾಜರಿಗೆ ಹೇಳಬೇಕಾದ ಮಾತುಗಳನ್ನು ಹೇಳಿ ತಮ್ಮ ತಮ್ಮ ಮನೆಗಳಿಗೆ ಹೊರಟುಹೋದರು.

ಈ ರೀತಿಯಾಗಿ ಬಂದ ಹೃದಯಭೇದಕವಾದ ತಮ್ಮ ಮುದ್ದುಕಂದನ ಮರಣವಾರ್ತೆಯನ್ನು ಓದಿದಕೂಡಲೆ, ಮಹಾರಾಜರ ಹೃದಯವು ಸ್ತಂಭೀಭೂತವಾಯಿತು. ಅವರ ಸುಂದರವಾದ ವಿಶಾಲ ಲೋಚನಗಳಲ್ಲಿ ಕಣ್ಣೀರು ಕಾಣಿಸಿಕೊಂಡಿತು. ಅಪಾರವಾದ ದುಃಖವು ದೇಹೇಂದ್ರಿಯಾದಿಗಳನ್ನೆಲ್ಲ ವ್ಯಾಪಿಸಿತು. ಅಂದಿಗೆ ಎರಡು ವರುಷಗಳ ಹಿಂದೆ ಅವರ ಜೀವರಕ್ಷಪ್ರಾಯವಾಗಿದ್ದ ಒಂದು ಪುತ್ರರತ್ನವನ್ನು ಮೃತ್ಯುವು ಬಾಯಿಯಲ್ಲಿ ಹಾಕಿಕೊಂಡಿದ್ದಿತು. ಅನಂತರದಲ್ಲಿ ಹುಟ್ಟಿದ ಈ ಮಗುವನ್ನು ನೋಡಿ ಮಹಾರಾಜರವರು ಆ ಪುತ್ರಶೋಕವನ್ನು ಸ್ವಲ್ಪ ಮಟ್ಟಿಗೆ ಮರೆತಿದ್ದರು. ಆದರೆ ಅದೂ ದೇವರ ಚಿತ್ತಕ್ಕೆ ಒಪ್ಪಲಿಲ್ಲ. "ದೇವರೇ ! ನಿನ್ನ ವಿಡಂಬನೆ ಎಂತಹುದೋ ಅದನ್ನು ಆಲೋಚಿಸಿ ತಿಳಿಯಲು ಯಾರಿಗೆತಾನೆ ಸಾಧ್ಯ !" ಬಳಿಕ ಮಹಾರಾಜರು ಕಣ್ಣಿನಲ್ಲಿ ಉಕ್ಕುತ್ತಿದ್ದ ನೀರನ್ನು ಕಷ್ಟದಿಂದ ತಡೆದುಕೊಂಡು, ದಿವಾನರನ್ನೂ ದರ್ಬಾರ್ ಬಕ್ಷಿಯವರನ್ನೂ ಕರೆದು, ಆ ದಿನವೇ ಮೈಸೂರಿಗೆ ಹೊರಡಲು ರೈಲ್ ಗಾಡಿಯು ಸಿದ್ಧವಾಗುವಂತೆ ಆಜ್ಞೆಮಾಡಿದರು. ಕ್ಷಣಕಾಲದಲ್ಲಿ ಸಕಲವೂ ಸಿದ್ಧವಾಯಿತು. ಮೈಸೂರಿಗೆ ಹಿಂದಿರುಗುವೆವೆಂಬುದಾಗಿ ತಂತಿಯನ್ನು ಕಳುಹಿಸಿ ಪ್ರಯಾಣ ಮಾಡಿದರು.

ಮಹಾರಾಜರಿಗೆ ಸಂಭವಿಸಿದ ಈ ಪುತ್ರಶೋಕವು ಗ್ವಾಲಿಯರ್ ಮಹಾರಾಜರವರಿಗೆ ತಿಳಿಯದೆ ಹೋಗಲಿಲ್ಲ. ಆಗ ಅವರು ಕಲ್ಕತ್ತೆಯಲ್ಲಿದ್ದರು. ಅವರು ಬಹು ದೂರದಲ್ಲಿದ್ದರೂ, ತಮ್ಮ ಸ್ನೇಹಿತರಿಗುಂಟಾದ ಪುತ್ರಶೋಕವನ್ನು ಕೇಳಿ ಅವರ ದುಃಖದಲ್ಲಿ ಭಾಗಿಗಳಾದರು. ತಾವು ಮಾಡಬೇಕೆಂದಿದ್ದ ಉತ್ಸವಗಳಿಗೆ ದೇವರು ವಿಘ್ನವನ್ನು ತಂದಿಟ್ಟನೆಂದು ತಿಳಿದುಕೊಂಡು, ತಮ್ಮ ಮಂತ್ರಿವರ್ಯರಿಂದ ಮಹಾರಾಜರಿಗೆ ಅನೇಕವಾದ ಅನುತಾಪ ಶಮನೋಕ್ತಿಗಳನ್ನು ಹೇಳುವಂತೆ ತಂತೀವರ್ತಮಾನವನ್ನು ಕಳುಹಿಸಿದರು. ಬಳಿಕ ಶ್ರೀಮನ್ಮಹಾರಾಜರವರು ಆ ರಾತ್ರಿಯೇ ಗ್ವಾಲಿಯರನ್ನು ಬಿಟ್ಟು ಹೊರಟು, ಹಗಲಿರುಳೆನ್ನದೆ ಪ್ರಯಾಣಮಾಡಿ, ಐದನೆಯ ದಿನ ಪ್ರಾತಃಕಾಲ ಮೈಸೂರನ್ನು ತಲಪಿ, ಯಾವ ಮರ್ಯಾದೆಯೂ ಇಲ್ಲದೆ ಸುರಪುರದ್ವಾರವೆಂಬ ಪಶ್ಚಿಮದ ಬಾಗಿಲಿನಿಂದ ಬಂದು ಕರೀಕಲ್ಲು ತೊಟ್ಟಿಯನ್ನು ಸೇರಿದರು.

ಹದಿನಾಲ್ಕನೆಯ ಅಧ್ಯಾಯ

ರಾಜದಂಪತಿಗಳ ಗಂಗಾಯಾತ್ರೆ

ಚತುರ್ಥಪುತ್ರರಾದ ದೇವರಾಜ ಒಡೆಯರವರು ಕಾಲವಾದಮೇಲೆ ಮಹಾರಾಜರವರ ಕೋಮಲಹೃದಯದ ಸೊಂಪು ಕುಂದಿತು. ಇದಾದ ಕೆಲವು ದಿನದೊಳಗಾಗಿ ಮಹಾರಾಜರವರ ಜನನಿಯರೂ ಸದುಪದೇಶಿನಿಯರೂ ಹಿತಚಿಂತಕರೂ ಆಗಿದ್ದ ಸೀತಾವಿಲಾಸದಮ್ಮನವರು ಮುಪ್ಪಿನಿಂದ ತಾರಿ ಬಡವಾಗಿ ಬದುಕುವುದೇ ಅಸಾಧ್ಯವಾಗಿ ತೋರಿಬಂದುದರಿಂದ, ಮಹಾರಾಜರವರು ಆ ವರುಷದ ತಮ್ಮ ಚೈತ್ರಮಾಸದ ನೀಲಗಿರಿಯ ಪ್ರಯಾಣವನ್ನು ನಿಲ್ಲಿಸಿ ಅವರನ್ನು ಉಪಚರಿಸುವುದಕ್ಕೆ ನಿಂತರು. ಇಷ್ಟರೊಳಗೆ ವೃದ್ಧಮಾತೆಯರಿಗೆ ಅವಸಾನಕಾಲವು ಸಮೀಪಿಸಿತು. ಆಗ ಅವರು ಮಹಾರಾಜರನ್ನು ಹತ್ತಿರದಲ್ಲಿ ಕುಳ್ಳಿರಿಸಿಕೊಂಡು, ಅಶ್ರುಪೂರ್ಣಲೋಚನೆಯರಾಗಿ, “ಅಯ್ಯಾಜೀ! ನನಗಿನ್ನು ಬದುಕುವ ಆಶೆಯಿಲ್ಲ. ಪೂಜ್ಯರಾದ ನಿಮ್ಮ ಪಿತೃಗಳು ಸ್ವರ್ಗಸ್ಥರಾದಂದಿನಿಂದ ಬಗೆಬಗೆಯ ಉಪವಾಸವ್ರತಾದಿಗಳನ್ನು ಮಾಡುತ್ತ ಜಗನ್ನಾಯಕನಾದ ಪರಮೇಶ್ವರನ ಸೇವೆಯಲ್ಲಿ ಈ ದೇಹವನ್ನು ದಂಡಿಸಿ ನನ್ನ ಜೀವಿತಕಾಲವನ್ನು ಕಳೆದೆನು. ನೀವೂ ಹಲವುಸಾರಿ ದಿವ್ಯಕ್ಷೇತ್ರಗಳನ್ನೂ ದಿವ್ಯದೇವಾಲಯಗಳನ್ನೂ ಸಂಚರಿಸಿ ತಂದ ಪವಿತ್ರತೀರ್ಥಗಳಿಂದ ನನ್ನ ಅಪವಿತ್ರವಾದ ಈ ಶರೀರವನ್ನು ಪರಿಶುದ್ಧವಾಗಿ ಮಾಡಿದಿರಿ. ಹಿಂದೆ ಕೈತಪ್ಪಿಹೋಗಿದ್ದ ರಾಜ್ಯವು ನಿಮ್ಮ ವಿದ್ಯಾಬುದ್ಧಿಗಾಂಭೀರ್ಯಾದಿ ಸದ್ಗುಣಗಳಿಂದ ಪುನಃ ಕೈಸೇರಿ, ಮೈಸೂರು ರಾಜರ ಹೆಸರೂ ಅವರ ಕೀರ್ತಿಯೂ ಎಲ್ಲೆಲ್ಲೂ ವ್ಯಾಪಿಸುವಂತಾಯಿತು. ಹರಿದ್ರಾ ಕುಂಕುಮ ಶೋಭಿತೆಯರಾದ ನಮ್ಮ ಸೊಸೆಯವರಿಂದ ನಮ್ಮ ವಂಶವು ನಂದಗೋಕುಲದಂತೆ ಅಭಿವೃದ್ಧಿಯಾಗಿ ನಮ್ಮ ಪೂರ್ವಿಕರಿಗೆಲ್ಲ ಅಕ್ಷಯವಾದ ಪುಣ್ಯಲೋಕ ಪ್ರಾಪ್ತಿಯಾಯಿತು. ಈ ವಿಭವಗಳನ್ನೆಲ್ಲ ನಮ್ಮ ಅಕ್ಕಯ್ಯನವರೂ ನಮ್ಮ ಯಜಮಾನರೂ ನೋಡಿ ಆನಂದಿಸುವ ಭಾಗ್ಯವನ್ನು ಪಡೆಯದೆ ಹೋದರು. ಈಗ ಎರಡು ವರುಷಗಳಿಂದೀಚೆಗೆ ನಿಮಗೆ ಸಂಘಟಿಸಿದ ದುಃಖಪರಂಪರೆಗಳು ಸಾಧಾರಣವಾಗಿ ಮರೆಯತಕ್ಕವುಗಳಲ್ಲ. ಆ ಮಕ್ಕಳುಗಳ ಮನೋಹರವಾದ ಮುಖವನ್ನೂ ಸುಂದರವಾದ ಕಣ್ಣುಗಳನ್ನೂ ಜ್ಞಾಪಿಸಿಕೊಂಡರೆ ಯಾರಿಗೆತಾನೇ ದುಃಖಬರುವುದಿಲ್ಲ? ನೀವು ಇಂತಹ ವ್ಯಸನಗಳನ್ನೆಲ್ಲ ಹೆಚ್ಚಾಗಿ ಅಂಟಿಸಿಕೊಳ್ಳಕೂಡದು. ವ್ಯಸನಗಳೇ ಮನುಷ್ಯನಿಗೆ ಶೂಲಗಳೆಂದು ತಿಳಿಯಿರಿ. ನೀವು ನಿಮ್ಮ ವ್ಯಸನಗಳನ್ನೆಲ್ಲ ತೊರೆದು, ಭಗವಂತನ ಮೇಲೆ ಭಾರವಿಟ್ಟು ಧರ್ಮದಿಂದ ರಾಜ್ಯಭಾರ ಮಾಡಿರಿ. ಕ್ಷತ್ರಿಯನಿಗೆ ಪ್ರಜಾಪಾಲನೆ

ಗಿಂತಲೂ ಶ್ರೇಯಸ್ಕರವಾದ ಧರ್ಮವು ಮತ್ತಾವುದಿರುವುದು ? ದುಷ್ಟರನ್ನು ಸಮೀಪದಲ್ಲಿ ಸೇರಿಸಬೇಡಿರಿ. ದುಷ್ಟರಾದ ನೀಚರು ಯಾವ ಕೆಲಸಕ್ಕೂ ಅಂಜರು. ಇಂತಹ ದುರ್ಮಂತ್ರಿಗಳ ದುರಾಗತದಿಂದಲ್ಲವೇ ರಾಜ್ಯಲಕ್ಷ್ಮಿಯು ನಮ್ಮ ಯಜಮಾನರ ಕೈಬಿಟ್ಟು ಕದಲಿದುದು ! ಅಯ್ಯಾಜೀ ! ವೃದ್ಧಳಾದ ನನ್ನ ಮಾತುಗಳನ್ನು ಸಾವಧಾನದಿಂದ ಲಾಲಿಸಿರಿ. ನಿಮ್ಮ ಪ್ರಭುತ್ವದಲ್ಲಿ ಯಾವುದನ್ನಾದರೂ ಪ್ರತ್ಯಕ್ಷಪ್ರಮಾಣದಿಂದ ನೋಡಿರಿ. ವಿಪತ್ತಿನಲ್ಲಿ ಧೈರ್ಯಗುಂದಬೇಡಿರಿ. ದೇವರಲ್ಲೂ ಗುರುಜನರಲ್ಲೂ ಭಕ್ತಿಯಿಡಿರಿ ; ಯಾವಾಗಲೂ ಸತ್ಕಾರ್ಯಗಳನ್ನು ಮಾಡುತ್ತ ಸರ್ವಪ್ರಾಣಿಗಳನ್ನೂ ಪ್ರೀತಿ ವಿಶ್ವಾಸಗಳಿಂದ ನೋಡಿರಿ. ಬಹಳ ಮಾತಿನಿಂದೇನು ? ನಿಮ್ಮ ಉದರದಲ್ಲಿ ಜನಿಸಿದ ಐದುಮಂದಿ ಮಕ್ಕಳನ್ನು ಮಾತ್ರವೇ ನಿಮ್ಮ ಸ್ವಂತಮಕ್ಕಳನ್ನಾಗಿ

ಶ್ರೀಮನ್ಮಹಾರಾಜರವರು ಮತ್ತು ರಾಜಕುಟುಂಬವು.

ಭಾವಿಸದೆ, ಈ ಸಂಸ್ಥಾನದ ಐವತ್ತು ಲಕ್ಷ ಪ್ರಜೆಗಳನ್ನೂ ನಿಮ್ಮ ಸ್ವಂತಮಕ್ಕಳ ಹಾಗೆ ಭಾವಿಸಿ ಕಾಪಾಡುತ್ತ ಬನ್ನಿರಿ. ನೀವು ಪ್ರಯತ್ನಿಸುವ ಸತ್ಕಾರ್ಯಗಳಿಗೆಲ್ಲ ನಮ್ಮ ಕುಲದೇವತೆಯಾದ ಶ್ರೀಚಾಮುಂಡೇಶ್ವರಿಯೂ ಭವರೋಗ ವೈದ್ಯನಾದ ಶ್ರೀಕಂಠೇಶ್ವರನೂ ಸಹಾಯಮಾಡುವರು. ದೇವರು ನಿಮಗೆ ಒಳ್ಳೆಯ ಬುದ್ಧಿಯನ್ನೂ ಆಯುರಾರೋಗ್ಯಭಾಗ್ಯಗಳನ್ನೂ ಕರುಣಿಸಲಿ. ಸಕಲವೂ ತಿಳಿದ ನಿಮಗೆ ನಾನಿನ್ನು ಹೇಳತಕ್ಕುದೇನಿದೆ ? ನಾನಿನ್ನು ಹೆಚ್ಚು ಮಾತನಾಡಲಾರೆ. ಧರ್ಮಮಾರ್ಗವನ್ನು ಬಿಡಬೇಡಿರಿ. ಇಹಲೋಕದಲ್ಲಿ ಸತ್ಕೀರ್ತಿಯನ್ನೂ ಪರಲೋಕದಲ್ಲಿ ಸದ್ಗತಿಯನ್ನೂ ಸಂಪಾದಿಸಿರಿ ''—ಹೀಗೆ ಧರ್ಮವಚನಗಳನ್ನು ಹೇಳಿ ಹರಸಿ, ಸೀತಾವಿಲಾಸದಮ್ಮ

ನವರು ತಮ್ಮ ಎಂಬತ್ತೊಂಬತ್ತನೆಯ ವಯಸ್ಸಿನಲ್ಲಿ, ಶ್ರೀರಾಮನವಮಿಯ ದಿನ, ಪರಮತಾರಕನಾದ ಶ್ರೀರಾಮಚಂದ್ರನ ಧ್ಯಾನಮಾಡುತ್ತ, ಪತಿಲೋಕವನ್ನು ಪಡೆದರು. ಈ ದುಃಖವು ಮಹಾರಾಜರನ್ನು ಸ್ವಲ್ಪಕಾಲ ನಿಶ್ಚೇಷ್ಟಿತರನ್ನಾಗಿ ಮಾಡಿತು. ಏಕೆಂದರೆ: ಆ ಮಹಾರಾಜ್ಞಿಯವರು ಮಹಾರಾಜರಿಗೆ ಆಗಾಗ ಬಾಲ್ಯದಿಂದಲೂ ಒಳ್ಳೆಯ ನೀತಿಗಳನ್ನೂ ಮಹನೀಯರ ಚರಿತ್ರೆಗಳನ್ನೂ ಉಪದೇಶಿಸುತ್ತ, ಕ್ಷಮೆ ದಮೆ ಗಾಂಭೀರ್ಯಾದಿ ಸದ್ಗುಣಗಳು ಅವರಲ್ಲಿ ಅನವರತವೂ ನೆಲೆಗೊಳ್ಳುವಂತೆ ಮಾಡುತ್ತಿದ್ದರು. ಮಾತೃವತ್ಸಲರಾದ ಮಹಾರಾಜರವರು ಸೀತಾವಿಲಾಸ ಸನ್ನಿಧಾನದವರ ಉತ್ತರಕ್ರಿಯಾದಿಗಳನ್ನು ಬಹಳ ಭಕ್ತಿಯಿಂದ ತಮ್ಮ ಪದವಿಗೂ ಅವರ ಗೌರವಕ್ಕೂ ಅನುಗುಣವಾಗಿರುವಂತೆ ನೆರವೇರಿಸಿ, ಬ್ರಾಹ್ಮಣರಿಗೆ ಅಗ್ರಹಾರವನ್ನೂ ಪಥಿಕರಿಗೆ ಧರ್ಮಶಾಲೆಯನ್ನೂ ಕಟ್ಟಿಸಿಕೊಟ್ಟು ಸ್ವಲ್ಪಮಟ್ಟಿಗೆ ಆ ಶೋಕವನ್ನು ಸಮಾಧಾನ ಮಾಡಿಕೊಂಡರು.

ಈ ಮಧ್ಯದಲ್ಲಿ ಶ್ರೀಮನ್ಮಹಾರಾಜರವರ ಜ್ಯೇಷ್ಠ ಕುಮಾರರಾದ ಶ್ರೀಕೃಷ್ಣರಾಜ ಒಡೆಯರವರು ವಿಷಮಶೀತಜ್ವರದಿಂದ ಪೀಡಿತರಾಗಲು, ಪ್ರಜೆಗಳೆಲ್ಲರೂ ಅತ್ಯಂತ ವ್ಯಾಕುಲಚಿತ್ತರಾದರು. ಆದರೆ ಕೂಡಲೆ ಭಗವದನುಗ್ರಹದಿಂದ ಅವರಿಗೆ ಆರೋಗ್ಯಭಾಗ್ಯವುಂಟಾಗಲು, ಮಹಾರಾಜರವರು ಚಾಮುಂಡೇಶ್ವರೀ ದೇವಿಗೆ ಮೊದಲೇ ಹರಿಕೆ ಕಟ್ಟಿಕೊಂಡಿದ್ದಂತೆ, ಚಾಮರಾಜಮುಡಿ ಎಂಬ ನವರತ್ನಖಚಿತವಾದ ಕಿರೀಟವನ್ನು ಮಾಡಿಸಿಕೊಂಡು, ಪರಿವಾರಸಮೇತ ಬೆಟ್ಟಕ್ಕೆ ದಯಮಾಡಿ, ಅಮ್ಮನವರಿಗೆ ಕಿರೀಟಧಾರಣೆಯನ್ನೂ, ಅನೇಕ ಸಹಸ್ರಜನ ಬ್ರಾಹ್ಮಣರಿಗೆ ಸಂತರ್ಪಣೆಯನ್ನೂ ಮಾಡಿಸಿ, ದೇವಸ್ಥಾನದ ಪ್ರಾಕಾರದಲ್ಲಿರುವ ಸಂಪಿಗೆಯ ಮರಕ್ಕೆ ನವರತ್ನ ಖಚಿತವಾದ ತೊಟ್ಟಿಲನ್ನು ಚಿನ್ನದ ಸರಪಳಿಯಿಂದ ತೂಗಹಾಕಿ ಮಕ್ಕಳೈವರನ್ನೂ ಕೂಡಿಸಿ ಡೋಲೋತ್ಸವವನ್ನು ಮಾಡಿಸಿದರು. ಅದನ್ನು ಒಬ್ಬ ರಾಜ ಕವಿಯು ಹೀಗೆಂದು ವರ್ಣಿಸಿರುವನು.—

ಅಂದು ಚಂಪಕವೃಕ್ಷದಡಿಯೊಳು ।
ಕಂದರೈವರ ಸೊಬಗನೀಕ್ಷಿಸು ।
ತಿಂದುಮುಖಿ ತನ್ನರಸಿಸಹಿತವೆ ಚಾಮಭೂಮಿಪನು ॥
ಮಿಂದು ಸಂತೋಷಾಂಬುನಿಧಿಯೊಳು ।
ನಂದಗೋಕುಲವೆಣೆಯೆ ತನ್ನೀ ।
ಮಂದಿರದ ಸೌಭಾಗ್ಯಕೆಂಬುದ ತೋರ್ಪನೆನೆ ಮೆರೆದ ॥ ೧ ॥

ಮಿಸುಪ ರನ್ನದ ತೊಟ್ಟಿಲಲಿ ನಿ ।
ನ್ನೆಸವಮೂರ್ತಿಯ ವಿಜಯಮಾಡಿಸಿ ।
ಕುಸುಮಗಂಧಿಯರಗ್ರಜಾತೆಯ ರೆರಡು ಪಾರ್ಶ್ವದಲಿ ॥
ಮಿಸುನಿ ಗೊಂಬೆಗಳಂತೆ ನಿಲ್ಲುತ ।
ಶಿಶುವನು ನಿನ್ನನು ತೂಗಲೀಕ್ಷಿಸಿ ।
ಪಸನುಮುಖಿಯಾದರಸಿಯೊಳ ಕಂಡುಬ್ಬಿದನು ಭೂಪ ॥ ೨ ॥

ಬಳಿಕ ಶ್ರೀಮನ್ಮಹಾರಾಜರವರು ರಾಜ್ಯಭಾರದ ಶ್ರಮವನ್ನು ಪರಿಹರಿಸಿಕೊಂಡು ಸ್ವಲ್ಪಕಾಲ ವಿರಾಮಸುಖವನ್ನನುಭವಿಸಬೇಕೆಂದು ನಿಶ್ಚಯಿಸಿ, ಬೆಟ್ಟಗುಡ್ಡಗಳಿಂದ ಕೂಡಿ ವಿವಿಧ ತರುಲತಾರಂಜಿತವಾಗಿ ಶಾಂತಿಗೆ ನೆಲೆಯಾಗಿ ಹೆಚ್ಚು ಜನದ ಗದ್ದಲವಿಲ್ಲದಿರುವ ನೀಲಗಿರಿಗೆ ತೆರಳಿದರು.

ಪ್ರಜಾನುರಾಗವೇ ತಮ್ಮ ರಾಜ್ಯಭಾರದ ಮುಖ್ಯೋದ್ದೇಶವೆಂದು ಆಳುತ್ತಿದ್ದ ಚಾಮರಾಜೇಂದ್ರ ಒಡೆಯರವರ ಪ್ರಭುಶಕ್ತಿಗೆ ಶ್ರೀಮದಿಂಡಿಯಾ ಚಕ್ರವರ್ತಿನಿಯವರು ಮೆಚ್ಚಿ ಅವರಿಗೆ ೧೮೯೩ನೆಯ ಇಸವಿ ಆಗಸ್ಟ್ ತಿಂಗಳಲ್ಲಿ, ಮೊದಲಿದ್ದ ಜಿ.ಸಿ.ಎಸ್.ಐ. ಎಂಬ ಬಿರುದಿನ ಜೊತೆಗೆ ಕರ್ನಲ್ ಎಂಬ ಅಮೂಲ್ಯವಾದ ಮತ್ತೊಂದು ಬಿರುದನ್ನು ದಯಪಾಲಿಸಿದರು. ಈ ಬಿರುದನ್ನು ಒಪ್ಪಿಸುವಾಗ, ಬ್ರಿಗೇಡಿಯರ್ ಜನರಲ್ ಗಾಸೆಟ್ ಸಾಹೇಬರು ಮಹಾರಾಜರವರನ್ನು ಕುರಿತು ಹೇಳಿದುದೇನೆಂದರೆ : ''ಮಹಾಸ್ವಾಮಿ, ನೀವು ಪುರಾಣ ಪ್ರಸಿದ್ಧರಾದ ಅರಸುಗಳಂತೆ ಧರ್ಮದಿಂದಲೂ ಐರೋಪ್ಯರಂತೆ ನಾಗರಿಕತೆಯಿಂದಲೂ ವಿವೇಕದಿಂದ ರಾಜ್ಯಭಾರವನ್ನು ನಡೆಯಿಸಿಕೊಂಡು ಬಂದಿರುವುದನ್ನು ನೋಡಿ, ಇಂಡಿಯಾ ಚಕ್ರವರ್ತಿನಿಯವರು ಪೂರ್ಣಸಂತುಷ್ಟರಾಗಿ ಕರ್ನಲ್ ಎಂಬ ಗಣ್ಯವಾದ ಮತ್ತೊಂದು ಬಿರುದನ್ನು ತಮಗೆ ದಯೆಪಾಲಿಸಿದರು. ಇದನ್ನು ತಾವು ಸ್ವೀಕರಿಸಬೇಕು'' ಎಂದು ಹೇಳಿ ಅದನ್ನು ತಕ್ಕ ಮರ್ಯಾದೆಯೊಡನೆ ಒಪ್ಪಿಸಿದರು. ಶ್ರೀಮನ್ಮಹಾರಾಜರವರು ಅದನ್ನು ಪರಮ ವಿಶ್ವಾಸದಿಂದಲೂ ಭಕ್ತಿ ಭಾವನೆಯಿಂದಲೂ ಸ್ವೀಕರಿಸಿ, ಬ್ರಿಟಿಷ್ ಸರಕಾರದ ವಿಷಯದಲ್ಲಿಯೂ ಇಂಡಿಯಾ ಚಕ್ರವರ್ತಿನಿಯವರ ವಿಷಯದಲ್ಲಿಯೂ ತಮಗಿರುವ ಗೌರವವನ್ನೂ ಸ್ವಾಮಿಭಕ್ತಿಯನ್ನೂ ವಿನಯಗಂಭೀರವಾಕ್ಯಗಳಿಂದ ತಿಳಿಯಪಡಿಸಿ, ಬಂದವರಿಗೆಲ್ಲ ಮರ್ಯಾದೆಮಾಡಿ ಕಳುಹಿಸಿಕೊಟ್ಟರು. ಮೇಲ್ಕಂಡ ಬಿರುದು ಭಾರತೀಯ ಮಹಾರಾಜರುಗಳಲ್ಲಿ ಮೊದಲು ಬಂದುದು ಶ್ರೀಚಾಮರಾಜೇಂದ್ರ ಒಡೆಯರವರಿಗೇ. ಈ ಬಿರುದು ಬಂದುದರಿಂದ ಮೊದಲಿನ ಗೌರವವು ಮತ್ತಷ್ಟು ಹೆಚ್ಚಿದುದು ಮಾತ್ರವಲ್ಲದೆ, ಅಲ್ಲಿಂದ ಮುಂದೆ ಶ್ರೀಮನ್ಮಹಾರಾಜರವರಿಗೆ ಇಂಗ್ಲಿಷ್ ಸೈನಿಕರಿಂದಲೂ ಮರ್ಯಾದೆಗಳು ಸಲ್ಲುವುದಕ್ಕೆ ಉಪಕ್ರಮವಾಯಿತು. ಇದಾದ ಬಳಿಕ ಶ್ರೀಮನ್ಮಹಾರಾಜರವರು ವಿದ್ಯಾಭ್ಯಾಸ ಮಾಡುತ್ತಿರುವ ತಮ್ಮ ಪುತ್ರರಿಗೆ ಪ್ರಪಂಚ ಸ್ವರೂಪ ಜ್ಞಾನವನ್ನುಂಟುಮಾಡಬೇಕೆಂಬ ಅಭಿಲಾಷೆಯಿಂದ ಕುಟುಂಬ ಸಮೇತರಾಗಿ ಮುಂಬಯಿಗೆ ತೆರಳಿದರು.

ಆಗ ಮುಂಬಯಿ ಪೊಲಿಟಿಕಲ್ ಡಿಪಾರ್ಟ್‌ಮೆಂಟಿನ ಸೆಕ್ರಿಟೆರಿಯವರೂ ಮುಂಬಯಿ ಗವರ್ನರವರ ಮಿಲಿಟೆರಿ ಸೆಕ್ರಿಟೆರಿಯವರೂ, ಅಂಗರಕ್ಷಕರೂ ಬಂದು ಮಹಾರಾಜರನ್ನು ಸತ್ಕರಿಸಿ ಮಹಾಲಕ್ಷ್ಮೀ ರೋಡಿನಲ್ಲಿರುವ 'ಏಡನ್ ವಾಲ' ಎಂಬ ಬಂಗಲೆಯಲ್ಲಿ ಇಳಿಸಿದರು. ಶ್ರೀಮನ್ಮಹಾರಾಜರವರು ಅಂದುಮೊದಲು ಎರಡು ತಿಂಗಳ ವರೆಗೆ ಮುಂಬಯಿ ನಗರವಾಸಿಗಳಂತೆ ಅಲ್ಲಿಯೇ ಪುತ್ರಕಳತ್ರಾದಿಗಳೊಡನೆ ವಾಸಮಾಡುತ್ತ, ಮಕ್ಕಳ ಪ್ರಪಂಚ ಸ್ವರೂಪಜ್ಞಾನಕ್ಕೆ ಬೇಕಾದ ಸಹಾಯ ಸಂಪತ್ತಿ

ಯನ್ನೊದಗಿಸುತ್ತ, ಅಲ್ಲಲ್ಲಿ ಆಗಾಗ ನಡೆಯುವ ವಿಶೇಷ ವಿಷಯಗಳನ್ನು ಪ್ರತ್ಯಕ್ಷವಾಗಿ ಪರಾಮರ್ಶಿಸುತ್ತ, ಅಲ್ಲಲ್ಲಿ ಪ್ರಜೆಗಳು ಮಾಡುವ ಮರ್ಯಾದೆಗಳನ್ನು ಸ್ವೀಕರಿಸುತ್ತ, ಮನೋವಿಶ್ರಾಂತಿಯನ್ನನುಭವಿಸುತ್ತಿದ್ದರು. ರಾಜರಾದವರಿಗೆ ಸ್ವಭಾವವಾಗಿರುವ ಅಟ್ಟಹಾಸಗಳನ್ನೆಲ್ಲ ದೂರಮಾಡಿ, ಸ್ವಲ್ಪವೂ ಸ್ವಪ್ರತಿಷ್ಠಾಪರರಾಗದೆ ಸಾಮಾನ್ಯರಂತೆ ವರ್ತಿಸುತ್ತಿದ್ದ ಮಹಾರಾಜರವರ ಸರಳಭಾವವನ್ನು ಕಂಡು ಮುಂಬಯಿಯಲಿ ಪ್ರಕಟ

ಶ್ರೀಮನ್ಮಹಾರಾಜರವರ ವರ್ಧಂತೀ ಮಹೋತ್ಸವ.

ವಾಗುವ ‘ ಇಂಡಿಯನ್ ಸ್ಪೆಕ್ಟೇಟರ್ ’ ಎಂಬ ಇಂಗ್ಲಿಷ್ ಪತ್ರಿಕೆಯು ಈ ರೀತಿಯಲ್ಲಿ ತಿಳಿಸಿತು :—

ಶ್ರೀಮನ್ಮಹಾರಾಜರವರು ಇದುವರೆಗೂ ಒಂಟಿಯಾಗಿ ಹಿಂದೂಸ್ಥಾನವನ್ನೆಲ್ಲ ಸಂಚಾರ ಮಾಡುತ್ತಿದ್ದರು. ಈಗ ಸಂಸಾರ ಸಮೇತರಾಗಿ ಕೆಲವು ವಾರಗಳ ವರೆಗೆ ಮುಂಬಯಿಯಲ್ಲಿ ವಾಸಮಾಡಿಕೊಂಡಿದ್ದುದಲ್ಲದೆ, ಉತ್ತರದೇಶಗಳಿಗೂ ಪ್ರಯಾಣ ಬೆಳೆಯಿಸಿದ್ದರು. ಇದು ಶ್ಲಾಘ್ಯವಾದುದೇ ಸರಿ. ಮುಂಬಯಿಯಲ್ಲಿದ್ದಾಗ ರಾಜಕೀಯವಾದ ಅನೇಕ ಹೊಸ ವಿಷಯಗಳನ್ನು ಕಲಿತುಕೊಳ್ಳುತ್ತಲೂ, ಎಲ್ಲ ದೊಡ್ಡ ಮನುಷ್ಯರಲ್ಲಿಯೂ ನಯವಿನಯ ಮೊದಲಾದ ತಮ್ಮ ಶ್ರೇಷ್ಠಗುಣಗಳನ್ನು ಪ್ರಕಾಶಪಡಿಸುತ್ತಲೂ, ಯಾವಾಗಲೂ ಮುಂಬಯಿ ನಿವಾಸಿಗಳೋ ಎಂಬಂತೆ ಜನರಿಗೆ ಭ್ರಾಂತಿಯನ್ನುಂಟುಮಾಡುತ್ತಲೂ ಇದ್ದರು. ಈಚೀಚೆಗೆ ಹಿಂದೂಸ್ಥಾನದ ಕೆಲವು ರಾಜರು ತಮ್ಮ ದೇಹಸೌಖ್ಯಕ್ಕೋಸ್ಕರ ಯೂರೋಪಿಗೆ ಹೋಗಿ ಬರುವ ಪದ್ಧತಿಯನ್ನು ಇಟ್ಟುಕೊಂಡಿರುವರು. ಪೂರ್ವಕಾಲದಲ್ಲಿ ಇಲ್ಲಿಯ ಅರಸುಗಳೆಲ್ಲರೂ ನಮ್ಮ ಸ್ವದೇಶವಾದ ಹಿಂದೂಸ್ಥಾನವನ್ನು ಬಿಟ್ಟು ಯಾವಾಗಲೂ ಹೊರಗೆ ಹೋಗುತ್ತಿರಲಿಲ್ಲ. ಆದರೂ ಅವರು ದೃಢಕಾಯರಾಗಿಯೇ ಇದ್ದರು. ಆದುದರಿಂದ ಇಲ್ಲಿಯ ವಾಯುಗುಣವು ಸರ್ವೋತ್ಕೃಷ್ಟವಾಗಿರಬೇಕಲ್ಲವೆ? ಈ ಸಂಗತಿಯನ್ನು ಮೈಸೂರು ಮಹಾರಾಜರವರು ಚೆನ್ನಾಗಿ ತಿಳಿದಿರುತ್ತಾರೆ. ಆದುದರಿಂದಲೇ ಇವರು ತಮ್ಮ ದೇಹಾರೋಗ್ಯಕ್ಕಾಗಿ ಹಿಂದೂಸ್ಥಾನದಲ್ಲಿ ಉತ್ಕೃಷ್ಟವಾದ ವಾಯುಗುಣವಿರುವ ಭಾಗಗಳಲ್ಲಿ ಆಗಾಗ ಸಂಚರಿಸಿ, ಅಲ್ಲಲ್ಲಿ ಕೆಲಕೆಲವು ಕಾಲ ವಾಸಮಾಡುತ್ತಿದ್ದಾರೆ. ಇದು ಸರ್ವೋತ್ಕೃಷ್ಟವಾದ ತಿಳವಳಿಕೆಯಲ್ಲವೇ? ತಮ್ಮ ರಾಜ್ಯವನ್ನೂ ಪ್ರೀತಿಪಾತ್ರರಾದ ಪ್ರಜೆಗಳನ್ನೂ ಬಹುಕಾಲದ ವರೆಗೆ ಬಿಟ್ಟು ದೇಶಾಂತರಗಳಲ್ಲಿ ವಾಸಮಾಡುವುದರಿಂದ ನಾನಾವಿಧ ನಷ್ಟಗಳುಂಟಾಗುವುವೆಂಬ ಸಂಗತಿಯು ಇವರಿಗೆ ತಿಳಿದಿರುವುದು ಇವ ಪ್ರಜೆಗಳ ಪುಣ್ಯೋದಯವೇ ಸರಿ.

ಹೀಗಿರುವಲ್ಲಿ, ಶ್ರೀಮನ್ಮಹಾರಾಜರವರಿಗೆ ಮುಂದಣ ವೈಸ್ರಾಯಿಯವರಾಗತಕ್ಕ ಲಾರ್ಡ್ ಎಲ್ಗಿನ್ ಸಾಹೇಬರವರ ಭೇಟಿಯು ಸಂಘಟಿಸಿತು. ಲಾರ್ಡ್ ಎಲ್ಗಿನ್ ಅವರು ಮಹಾರಾಜರವರು ಇಳಿದಿದ್ದ ಮಂದಿರಕ್ಕೆ ದಯೆಮಾಡಿ ಮಹಾರಾಜರವರ ಉಪಚಾರಗಳನ್ನು ಕೈಕೊಂಡು ಕಲ್ಕತ್ತೆಗೆ ತೆರಳಿದರು. ಇಷ್ಟರಲ್ಲಿ ಮಹೋದಯ ಪುಣ್ಯಕಾಲವೂ ಸಮೀಪಸ್ಥವಾಯಿತು. ಆ ಕಾಲಕ್ಕೆ ಶ್ರೀಮನ್ಮಹಾರಾಜರವರು ಪುತ್ರ ಮಿತ್ರ ಕಳತ್ರಾದಿಗಳೊಡನೆ ಪ್ರಯಾಗಕ್ಷೇತ್ರದಲ್ಲಿರಬೇಕೆಂಬ ಕುತೂಹಲವುಳ್ಳವರಾಗಿ, ಸಕಲವೂ ಸನ್ನದ್ಧವಾಗಲೆಂದು ದಿವಾನರೊಡನೆ ಅಪ್ಪಣೆಕೊಟ್ಟರು. ಆಗ ಅಲ್ಲಿ ಸಾಮಾನು ಅಪರಿಮಿತವಾಗಿದ್ದುದರಿಂದ, ಮಹಾಸ್ವಾಮಿಯವರು ಎಲ್ಲರನ್ನು ಅಲ್ಲಿಯೇ ಬಿಟ್ಟು ಮಿತಪರಿವಾರದೊಡನೆ ದಯೆಮಾಡುವುದು ಸೂಕ್ತವೆಂಬ ಅಭಿಪ್ರಾಯವನ್ನು ದಿವಾನರವರು ಸೂಚಿಸಿದರು. ಆಶ್ರಿತ ಜನೈಕವತ್ಸಲರೂ ಕರುಣಾರ್ದ್ರ ಹೃದಯರೂ ಆದ ಮಹಾರಾಜರವರು, ''ಗಂಗಾಸ್ನಾನವು ನನಗೆಮಾತ್ರವೇನೋ? ಈ ಬಡವಾಯಿಗಳಿಗೆ ಬೇಡವೊ? ಹಾಗೆ ಕೂಡದು, ಎಲ್ಲರೂ ಹೊರಡಲಿ; ಜವಾಹಿರಿ ಪೆಟ್ಟಿಗೆಗಳನ್ನು ಮೊಹರುಮಾಡಿ ಮುಂಬಯಿ ಬ್ಯಾಂಕಿನಲ್ಲಿ ಇಡಿ; ಒಬ್ಬರು ಹೊರಟು ಒಬ್ಬರು ನಿಲ್ಲುವುದು ಸರಿಯಲ್ಲ, ಅವರಿಗೆಲ್ಲ ಗಂಗಾಸ್ನಾನ ದೊರೆಯುವುದು ಮುಖ್ಯವಾಗ'' ಎಂದು ಅಪ್ಪಣೆ ಕೊಡಿಸಿ ಎಲ್ಲವೂ ಸಿದ್ಧವಾದ ಬಳಿಕ, ಸಕಲರೊಡನೆ ಪ್ರಯಾಗಕ್ಷೇತ್ರಕ್ಕೆ ದಯೆಮಾಡಿ, ತ್ರಿವೇಣೀ

ಸಂಗಮದಲ್ಲಿ ಸ್ನಾನಮಾಡಿ, ಮಹಾರಾಣಿಯವರಿಂದ ವೇಣೀದಾನ, ಸುವಾಸಿನೀಪೂಜೆ ಮುಂತಾದುವುಗಳನ್ನು ಮಾಡಿಸಿ, ಅಲ್ಲಿರುವ ದಿವ್ಯದೇವಾಲಯ ದಿವ್ಯಕ್ಷೇತ್ರಗಳ ದರ್ಶನಾನಂತರ ಗಂಗಾತೀರದಲ್ಲಿ ನೆರೆದಿದ್ದ ಸಹಸ್ರ ಸಂಖ್ಯಾಕರಾದ ಸಾಧು ಸಂನ್ಯಾಸಿಗಳನ್ನು ಸೇವಿಸಿ, ಅಲ್ಲಿಂದ ಕಾಶೀಕ್ಷೇತ್ರಕ್ಕೆ ಬಂದು, ಅಲ್ಲಿ ಮೂರು ದಿವಸ ಕ್ಷೇತ್ರವಾಸವನ್ನೂ ದೇವಪಿತೃಪೂಜಾದಿಗಳನ್ನೂ ಪೂರಯಿಸಿಕೊಂಡು ಹೊರಟು ರಾಜಧಾನಿಯನ್ನು ಸೇರಿದರು. ಈ ರೀತಿಯಾಗಿ ತಾವು ತಿರುಗಿ ತಂದ, ಕಾಶೀ ಪ್ರಯಾಗಾದಿ ದಿವ್ಯಕ್ಷೇತ್ರಗಳ ಪವಿತ್ರೋದಕದಿಂದ ಸಂಸ್ಥಾನದಲ್ಲಿರುವ ಸಕಲ ದೇವಾಲಯಗಳಲ್ಲಿಯೂ ದೇವರಿಗೆ ಅಭಿಷೇಕಮಾಡಿಸಿ ಅಲ್ಲೆಲ್ಲ ಗಂಗಾಸಮಾರಾಧನೆಯನ್ನು ಮಾಡಿಸಿದರು.

ಈ ಮಧ್ಯೇ ಜಗದ್ವಿಖ್ಯಾತರೂ ವಂದನೀಯರೂ ಆದ ಸ್ವಾಮಿ ವಿವೇಕಾನಂದರು ಮೈಸೂರಿಗೆ ದಯಮಾಡಿಸಿ ತಮ್ಮ ಲೋಕೋತ್ತರವಾದ ವೇದಾಂತೋಪನ್ಯಾಸಗಳಿಂದ ಮೈಸೂರು ಪ್ರಜೆಗಳನ್ನು ಆನಂದ ಮಗ್ನರನ್ನಾಗಿ ಮಾಡಿದರು. ಶ್ರೀಮನ್ಮಹಾರಾಜರವರು ಅವರನ್ನು ಪ್ರೀತಿಪೂರ್ವಕವಾಗಿ ಕಂಡು ಆದರಿಸಿ, ಸ್ವಾಮಿಗಳ ವಾಗ್ಝರಿಯನ್ನೂ ಅವರಿಗಿರತಕ್ಕ ವೈರಾಗ್ಯಜ್ಞಾನವನ್ನೂ ಪ್ರತಿಭೆಯನ್ನೂ ಬೋಧನಾಸಾಮರ್ಥ್ಯವನ್ನೂ ಕಂಡು ಸಂತುಷ್ಟಾಂತರಾಗಿ, ಆ ಕಾಲದಲ್ಲಿ ಚಿಕಾಗೋ ಪಟ್ಟಣದಲ್ಲಿ ನಡೆಯುತ್ತಿದ್ದ ಸಕಲಕಲಾ ಪ್ರದರ್ಶನೋತ್ಸವದ ಅಂಗವಾದ ಮತಸಂಬಂಧದ ಪರಿಷತ್ತಿಗೆ ಸ್ವಾಮಿಗಳನ್ನು ಕಳುಹಿಸಿಕೊಟ್ಟರು. ಸ್ವಾಮಿಗಳು ಮಹಾರಾಜರವರ ಸಹಾಯದಿಂದ ಅಮೇರಿಕ ಮುಂತಾದ ಪಾಶ್ಚಾತ್ಯದೇಶಗಳಲ್ಲಿ ಸಂಚರಿಸಿ, ವಿಶಾಲವಾದ ತಮ್ಮ ಜ್ಞಾನಬಲದಿಂದ ಅಲ್ಲಿಯವರನ್ನೆಲ್ಲ ಮೆಚ್ಚಿಸಿ, ಲೋಕೋತ್ತರವಾದ ಕೀರ್ತಿಯನ್ನು ಪಡೆದರು. ಆ ಸ್ವಾಮಿಗಳು ಚಿಕಾಗೋ ಪಟ್ಟಣದಿಂದ ಶ್ರೀಮನ್ಮಹಾರಾಜರವರಿಗೆ ಬರೆದ ಲೇಖನವು ತಿಳಿಸುವುದೇನೆಂದರೆ :—

ಚಿಕಾಗೊ,
೨೩ನೆಯ ಜೂನ್ ೧೮೯೪.

ಮಹಾಸ್ವಾಮಿ,

ಶ್ರೀಮನ್ನಾರಾಯಣನು ತಮ್ಮನ್ನೂ ತಮ್ಮ ಕುಟುಂಬಕ್ಕೆ ಸೇರಿದ ಸಕಲರನ್ನೂ ಪರಿಪಾಲಿಸಲಿ. ಮಹಾಸ್ವಾಮಿಯವರ ಆದರಪೂರ್ವಕವಾದ ಸಹಾಯದಿಂದ ನಾನು ಈ ದೇಶಕ್ಕೆ ಬರಲು ಸಾಧ್ಯವಾಯಿತು. ಇಲ್ಲಿಗೆ ಬಂದಂದಿನಿಂದ ಇಲ್ಲಿ ಎಲ್ಲರೂ ನನ್ನನ್ನು ಚೆನ್ನಾಗಿ ಬಲ್ಲವರಾಗಿರುವರು. ಅತಿಥಿ ಸತ್ಕಾರ ನಿರತರಾದ ಈ ದೇಶಸ್ಥರು ನನಗೆ ಬೇಕಾದ ಸಹಾಯಸಂಪತ್ತಿಯನ್ನೆಲ್ಲ ಒದಗಿಸಿ ಕೊಟ್ಟಿದ್ದಾರೆ. ಇದೊಂದು ಆಶ್ಚರ್ಯಕರವಾದ ದೇಶವು. ಈ ದೇಶದವರು ಅನೇಕ ವಿಚಾರಗಳಲ್ಲಿ ಆಶ್ಚರ್ಯಕರವಾದ ಜನಾಂಗದವರೇ ಸರಿ. ಸಾಮಾನ್ಯ ಕಾರ್ಯಗಳಿಗೆ ಸಹ ಈ ದೇಶದವರು ಉಪಯೋಗಿಸುವಷ್ಟು ಯಂತ್ರಗಳನ್ನು ಜಗತ್ತಿನಲ್ಲಿ ಮತ್ತಾವ ಜನಾಂಗದವರೂ ಉಪಯೋಗಿಸುವುದಿಲ್ಲ. ಇಲ್ಲಿ ಎಲ್ಲವೂ ಯಂತ್ರಮಯವಾಗಿದೆ. ಇದಲ್ಲದೆ, ಇಲ್ಲಿಯ ನಿವಾಸಿಗಳ ಸಂಖ್ಯೆ ಭೂಲೋಕದ ಒಟ್ಟು ಜನಸಂಖ್ಯೆಯಲ್ಲಿ ಇಪ್ಪತ್ತರೊಳಗೆ ಒಂದಂಶದಷ್ಟೇ ಇದ್ದರೂ ಭೂಮಂಡಲದ ಷಷ್ಠಾಂಶವೇ ಸಂಪೂರ್ಣವಾಗಿ ಇವರದಾಗಿದೆ. ಇವರ ಐಶ್ವರ್ಯಕ್ಕೂ ಸುಖೋಪಭೋಗಕ್ಕೂ ಪಾರವೇ ಇಲ್ಲ. ಆದರೂ ಪ್ರತಿಯೊಂದು ಪದಾರ್ಥವೂ ಬಹು ಪ್ರಿಯ

ವಾಗಿದೆ. ಇಲ್ಲಿ ಕೂಲಿಯವರಿಗೆ ಸಲ್ಲುವ ವೇತನವು ಪ್ರಪಂಚದ ಇತರ ಪ್ರದೇಶಗಳಲ್ಲಿರುವುದಕ್ಕಿಂತ ಅತ್ಯಧಿಕವಾಗಿದೆ. ಆದರೆ ಬಂಡವಾಳ ಹಾಕುವ ಯಜಮಾನರಿಗೂ ಕೂಲಿಮಾಡುವ ಆಳುಗಳಿಗೂ ಕೂಲಿಯ ವಿಷಯಕವಾದ ಕಲಹವು ನಿರಂತರವಾಗಿರುತ್ತದೆ. ಹೆಂಗಸರಿಗೆ ಅಮೆರಿಕ ದೇಶದಲ್ಲಿ ಇರುವಷ್ಟು ಸ್ವಾತಂತ್ರ್ಯವು ಪ್ರಪಂಚದಲ್ಲಿ ಮತ್ತೆಲ್ಲಿಯೂ ಇಲ್ಲ. ಅವರು ಕ್ರಮಕ್ರಮವಾಗಿ ಪ್ರತಿಯೊಂದು ವಿಷಯವನ್ನೂ ತಮ್ಮ ಅಧೀನಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಇಲ್ಲಿ ಮತ್ತೊಂದು ಆಶ್ಚರ್ಯವೇನೆಂದರೆ, ವಿದ್ಯಾವಂತರಾದ ಪುರುಷರ ಸಂಖ್ಯೆಗಿಂತಲೂ ವಿದ್ಯಾವತಿಯರಾದ ಸ್ತ್ರೀಯರ ಸಂಖ್ಯೆಯೇ ಅಧಿಕವಾಗಿರುವುದು. ಆದರೂ, ವಿಶೇಷ ಪ್ರತಿಭಾವಂತರೆಲ್ಲರೂ ಪ್ರಾಯಶಃ ಪುರುಷರೇ ಆಗಿರುತ್ತಾರೆ. ಯೂರೋಪಿನವರಂತೆ ಇವರೂ ನಮ್ಮ ಜಾತಿಭೇದಪದ್ಧತಿಯನ್ನು ದೂಷಿಸಿದರೂ ಇವರಲ್ಲಿ ಇದಕ್ಕಿಂತಲೂ ಪ್ರಬಲವಾದ ದೋಷವೊಂದುಂಟು—ಅದು ದ್ರವ್ಯವಿಷಯಕವಾದದ್ದು. ಈ ಅಮೆರಿಕ ದೇಶಸ್ಥರು ಹೇಳುವಂತೆ, ಸರ್ವಶಕ್ತನಾದ ಡಾಲರ್ ದೇವರಿಂದ (ಆ ದೇಶದ ನಾಣ್ಯದಿಂದ) ಇಲ್ಲಿ ಆಗದೆ ಇರುವ ಕೆಲಸವೇ ಇಲ್ಲ.

ಈಗಣ ನವೀನ ಶಾಸ್ತ್ರಗಳಿಗೆ ಪ್ರತಿಬಂಧಿಯಾಗಿದ್ದು, ಅವುಗಳ ಭಯಂಕರವಾದ ಅಭಿಘಾತದಿಂದ ಸ್ವಲ್ಪವೂ ನೋವನ್ನು ಪಡೆಯದೆ ಇರುವ ನಮ್ಮ ಪರಮ ಪಾವನವಾದ ವೇದಗಳಲ್ಲಿ ಹೇಳಿರುವ ಅಮೋಘವಾದ ಅಭಿಪ್ರಾಯಗಳಲ್ಲಿ ಒಂದೊಂದಂಶವನ್ನು ಕೇಳಿದರೂ, ಇವರು ಅದನ್ನು ಎಷ್ಟು ಆಸಕ್ತಿಯಿಂದ ಗ್ರಹಿಸಿಕೊಳ್ಳುತ್ತಿರುವರೋ ಆ ವಿಷಯವನ್ನು ಮಹಾಸ್ವಾಮಿಯವರು ಪ್ರತ್ಯಕ್ಷವಾಗಿ ನೋಡಿದ ಹೊರತು ತಿಳಿಯುವುದು ಕಷ್ಟ. ಪ್ರಕೃತಿ ಎಂಬುದಿಲ್ಲದೆ ಶೂನ್ಯದಿಂದ ಜಗತ್ತನ್ನು ಸೃಷ್ಟಿಸುವುದು, ಆತ್ಮನನ್ನು ಸೃಷ್ಟಿಸುವುದು, ದೇವರು ಎಂಬ ಒಬ್ಬ ದೊಡ್ಡ ಕಠಿನಾತ್ಮನು ಪರಲೋಕದಲ್ಲಿ ಸಿಂಹಾಸನವನ್ನೇರಿ ಕುಳಿತಿರುವುದು, ದುರಂತಗಳಾದ ನರಕದ ಜ್ವಾಲೆಗಳು—ಇಂತಹ ವಿಷಯಗಳನ್ನು ಕೇಳಿ ಇಲ್ಲಿಯ ವಿದ್ಯಾವಂತರೆಲ್ಲರೂ ಅಸಹ್ಯಗೊಂಡು, ಜಗತ್ಸೃಷ್ಟಿಯೂ ಅನಾದಿ, ಆತ್ಮನೂ ಅನಾದಿ, ಆತ್ಮನಲ್ಲಿಯೇ ಪರಮಾತ್ಮನಿರುವನು—ಎಂಬುದಾಗಿ ಉದ್ಘೋಷಿಸುತ್ತಿರುವ ಪಾವನವೆನಿಸಿದ ವೇದೋಕ್ತ ತತ್ತ್ವಗಳನ್ನು ಒಂದು ರೂಪದಲ್ಲಿಲ್ಲದಿದ್ದರೆ ಮತ್ತೊಂದು ರೂಪದಲ್ಲಿ ಗ್ರಹಿಸಿಕೊಳ್ಳಲು ಇವರು ತ್ವರೆಪಡುತ್ತಿರುವರು. ಇನ್ನು ಐವತ್ತು ವರ್ಷಗಳ ಕಾಲದಲ್ಲಿ ಪ್ರಪಂಚದಲ್ಲಿರುವ ವಿದ್ಯಾವಂತರೆಲ್ಲರೂ, ವೇದದಲ್ಲಿ ಹೇಳಿರುವಂತೆ, ಆತ್ಮನೂ ಸೃಷ್ಟಿಯೂ ಎರಡೂ ಅನಾದಿಯೆಂಬಲ್ಲೂ, ನಾವು ನಮ್ಮಲ್ಲಿರುವ ಮಾಯಾಕಲ್ಪಿತ ದೋಷಗಳನ್ನೆಲ್ಲ ಕಳೆದುಕೊಂಡು ಸರ್ವೋತ್ತಮ ಸ್ಥಿತಿಯನ್ನು ಪಡೆದಾಗ ದೇವತ್ವವೆಂಬುದು ನಮ್ಮಲ್ಲಿಯೇ ಕಾಣುವುದೆಂತಲೂ ತಿಳಿದುಕೊಳ್ಳುವುದರಲ್ಲಿ ಸಂದೇಹವೇ ಇಲ್ಲ. ಈಗಲೂ ಕೂಡ, ಇವರಲ್ಲಿ ಪ್ರಜ್ಞಾಶಾಲಿಗಳಾದ ಆಚಾರ್ಯಪುರುಷರೆನಿಸಿಕೊಂಡಿರುವವರು ತಮ್ಮ ಬೈಬಲ್ ವೇದಕ್ಕೆ ಆ ರೀತಿಯಾದ ಅರ್ಥವನ್ನೇ ಕಲ್ಪಿಸಿ ತಿಳಿಸುತ್ತಿರುವರು. ಒಟ್ಟಿನಲ್ಲಿ ನನ್ನ ಅಭಿಪ್ರಾಯವೇನೆಂದರೆ, ಇಲ್ಲಿನವರಲ್ಲಿ ಪಾರಲೌಕಿಕವಾದ ನಾಗರಿಕತೆ ಸಾಲದು, ನಮ್ಮಲ್ಲಿ ಇಹಲೋಕದ ನಾಗರಿಕತೆ ಸಾಲದು.

ಇಂಡಿಯಾ ದೇಶದಲ್ಲಿ ಕಾಣುವ ಅನರ್ಥಗಳಿಗೆಲ್ಲ ದಾರಿದ್ರ್ಯದ ದುರವಸ್ಥೆಯೇ ಮೂಲ ಕಾರಣವಾಗಿರುತ್ತದೆ. ನಮ್ಮ ಕನಿಷ್ಠವರ್ಣದವರಿಗೆ ನಾವು ಮಾಡಬೇಕಾದ ಒಂದೇ ಉಪಕಾರವೇನೆಂದರೆ, ಅವರಿಗೆ ವಿದ್ಯಾಭ್ಯಾಸವನ್ನು ಮಾಡಿಸುವುದು. ಆ ರೀತಿ ಮಾಡಿದರೆ, ಅವರು ಕಳೆದುಕೊಂಡಿರುವ ಮನುಷ್ಯತ್ವವನ್ನು ಅವರಿಗೆ ಪುನಃ ಉಂಟುಮಾಡಿಕೊಟ್ಟಂತಾಗುವುದು. ರಾಜರಾದವರೂ ಪ್ರಜೆಗಳಿಗೆ ಮಾಡಬೇಕಾದುದು ಇದೊಂದು ದೊಡ್ಡ ಕರ್ತವ್ಯ. ಇಂದಿನವರೆಗೆ ಈ ವಿಷಯದಲ್ಲಿ ಏನೂ ನಡೆದಿರುವುದಿಲ್ಲ. ಇವರೂ, ಅನೇಕ ಶತಮಾನಗಳವರೆಗೆ ಸ್ವಾರ್ಥ

ಪರರಾದ ಪ್ರವಚನಕಾರರ ಕೈಗೆ ಸಿಕ್ಕಿ ವಿದೇಶೀಯರಾದ ಶತ್ರುಗಳ ಕಾಟದಿಂದ ನವೆದು ಹೋಗಿರುವರು. ಈ ಕಾರಣದಿಂದ ಇಂಡಿಯಾ ದೇಶೀಯರಾದ ಬಡವರೆಲ್ಲರೂ ತಾವು ಮನುಷ್ಯರೆಂಬುದನ್ನು ಕೂಡ ಮರೆತುಬಿಟ್ಟಿರುತ್ತಾರೆ. ಅವರಿಗೆ ವಿಷಯವಿವೇಚನೆಯೆಂಬುದನ್ನು ಉಂಟುಮಾಡಿಕೊಡಬೇಕಾಗಿದೆ. ಪ್ರಪಂಚದಲ್ಲಿ ನಮ್ಮ ಸುತ್ತಲೂ ಏನು ನಡೆಯುತ್ತಿದೆ ಎಂದು ತಿಳಿದುಕೊಳ್ಳುವುದಕ್ಕೆ ಅವರ ಕಣ್ಣನ್ನು ತೆರೆಯಿಸಬೇಕು. ಇಷ್ಟು ಮಟ್ಟಿಗೆ ಮಾಡಿದ ಪಕ್ಷದಲ್ಲಿ, ಅವರು ತಾವು ಉದ್ಧಾರವಾಗುವ ಮಾರ್ಗವನ್ನು ತಾವೇ ಸಾಧಿಸಿಕೊಳ್ಳುವರು. ಪ್ರತಿ ಜನಾಂಗದವರೂ, ಪ್ರತಿ ಪುರುಷನೂ, ಪ್ರತಿ ಸ್ತ್ರೀಯೂ ತಮ್ಮ ತಮ್ಮ ಶ್ರೇಯಸ್ಸನ್ನು ತಾವೇ ಸಾಧಿಸಿಕೊಳ್ಳಬೇಕು. ಅವರಿಗೆ ವಿಷಯ ವಿವೇಚನೆಯನ್ನು ಕಲ್ಪಿಸಿಕೊಟ್ಟರೆ ಸಾಕು. ಅವರಿಗೆ ಬೇಕಾದ ಸಹಾಯವು ಇಷ್ಟೇ. ಮಿಕ್ಕುದೆಲ್ಲ ಅದರ ಜೊತೆಯಲ್ಲಿಯೇ ಲಭಿಸುವುದು. ರಸದ್ರವ್ಯಗಳನ್ನು ಒಟ್ಟಿಗೆ ಕೂಡಿಸುವುದು ನಮ್ಮ ಕೆಲಸ; ಬಳಿಕ ಅವು ಘನೀಭವಿಸಿ ಸ್ಫಟಿಕಾಕೃತಿಯನ್ನು ಪಡೆಯುವುದು ಸೃಷ್ಟಿಸ್ವಭಾವ ಧರ್ಮಾಧೀನವಾಗಿರುವುದು. ಹೊಸ ಅಭಿಪ್ರಾಯಗಳನ್ನು ಅವರ ತಲೆಯೊಳಕ್ಕೆ ತುಂಬುವುದು ನಮ್ಮ ಕರ್ತವ್ಯವಾಗಿದೆ. ಮಿಕ್ಕುದನ್ನು ಅವರೇ ಮಾಡಿಕೊಳ್ಳುವರು. ಇಂಡಿಯಾ ದೇಶದಲ್ಲಿ ಮಾಡಬೇಕಾದದ್ದು ಇಷ್ಟೇ. ಬಹುಕಾಲದಿಂದಲೂ ನನ್ನ ಮನಸ್ಸಿನಲ್ಲಿದ್ದ ಅಭಿಪ್ರಾಯವೂ ಇದೇ. ಈ ಕೋರಿಕೆಯನ್ನು ಇಂಡಿಯಾದಲ್ಲಿ ನೆರವೇರಿಸಲು ನನ್ನಿಂದಾಗಲಿಲ್ಲ. ಈ ದೇಶಕ್ಕೆ ನಾನು ಬರಲು ಕಾರಣವು ಇದೇ. ಬಡವರಿಗೆ ವಿದ್ಯಾಭ್ಯಾಸ ಮಾಡಿಸುವುದರಲ್ಲಿರತಕ್ಕ ದೊಡ್ಡ ಕಷ್ಟವೇನೆಂದರೆ: ಮಸಲಾ, ಮಹಾಸ್ವಾಮಿಯವರಾದ ತಾವೇ ಪ್ರತಿಗ್ರಾಮದಲ್ಲಿಯೂ ಒಂದು ಧರ್ಮದ ಸ್ಕೂಲನ್ನು ಸ್ಥಾಪಿಸುವಿರೆಂದು ಊಹಿಸೋಣ. ಇದರಿಂದ ಯಾವ ಪ್ರಯೋಜನವೂ ಆಗಲಾರದು. ಏಕೆಂದರೆ, ಇಂಡಿಯಾ ದೇಶದಲ್ಲಿ ದಾರಿದ್ರ್ಯವೆಂಬುದು ಅಷ್ಟು ದಾರುಣವಾಗಿರುವುದರಿಂದ, ಬಡವರ ಮಕ್ಕಳು ಸ್ಕೂಲಿಗೆ ಬರುವುದಕ್ಕೆ ಬದಲಾಗಿ ಹೊಲಕ್ಕೆ ಹೋಗಿ ತಮ್ಮ ತಂದೆತಾಯಿಗಳಿಗೆ ಸಹಾಯಮಾಡುವರು ಅಥವಾ, ಬೇರೆ ಜೀವನೋಪಾಯವನ್ನು ಹುಡುಕುವರು. ಪರ್ವತವು ಮಹಮ್ಮದನ ಬಳಿಗೆ ಬಾರದಿದ್ದರೆ ಮಹಮ್ಮದನಾದರೂ ಪರ್ವತದ ಬಳಿಗೆ ಹೋಗಬೇಕು. ಬಡವರ ಮಕ್ಕಳು ವಿದ್ಯಾದೇವತೆಯ ಬಳಿಗೆ ಹೋಗದಿದ್ದರೆ ವಿದ್ಯಾದೇವತೆಯೇ ಅವರ ಬಳಿಗೆ ಹೋಗಬೇಕು. ಏಕಾಗ್ರಚಿತ್ತರೂ ಸ್ವಾರ್ಥತ್ಯಾಗಿಗಳೂ ಆದ ಸಂನ್ಯಾಸಿಗಳೂ ಸಾವಿರಾರು ಮಂದಿ ನಮ್ಮ ದೇಶದಲ್ಲಿಯೇ ಇರುವರಲ್ಲದೆ, ಅವರೂ ಆತ್ಮವಿಚಾರವನ್ನು ಬೋಧಿಸುತ್ತ ಗ್ರಾಮದಿಂದ ಗ್ರಾಮಕ್ಕೆ ತಿರುಗುತ್ತಿರುವರು. ಅವರಲ್ಲಿ ಕೆಲವರನ್ನು ಲೌಕಿಕ ವಿದ್ಯಾಬೋಧಕರಾಗಿಯೂ ಇರುವಂತೆ ತರಬೇತು ಮಾಡಿದರೆ, ಅವರು ಸ್ಥಲದಿಂದ ಸ್ಥಲಕ್ಕೂ ಮನೆಯಿಂದ ಮನೆಗೂ ಸಂಚರಿಸುತ್ತ ಆತ್ಮವಿಚಾರವನ್ನು ಮಾತ್ರವಲ್ಲದೆ, ಲೌಕಿಕ ವಿಷಯಗಳನ್ನೂ ಬೋಧಿಸುವರು. ಮಸಲಾ, ಇವರಲ್ಲಿಬ್ಬರು ಒಂದು ಮಾಯಾದೀಪದ ಪೆಟ್ಟಿಗೆಯನ್ನೂ ಗೋಳವನ್ನೂ ಭೂಪಟಗಳು ಮೊದಲಾದುವನ್ನೂ ತೆಗೆದುಕೊಂಡು ಸಾಯಂಕಾಲದಲ್ಲಿ ಒಂದು ಗ್ರಾಮಕ್ಕೆ ಹೋಗುತ್ತಾರೆಂದು ಊಹಿಸೋಣ. ಅವರು ಏನೂ ತಿಳಿಯದವರಿಗೆ ಜ್ಯೋತಿಶ್ಶಾಸ್ತ್ರವನ್ನೂ ಭೂಗೋಳಶಾಸ್ತ್ರವನ್ನೂ ಬೇಕಾದಷ್ಟು ಕಲಿಸಬಹುದು. ಬೇರೆಬೇರೆ ಜನಾಂಗಗಳ ವಿಷಯವಾಗಿ ಕಥೆಗಳನ್ನು ಹೇಳುತ್ತ ಬಡವರಾದವರು ಪುಸ್ತಕ ಸಹಾಯದಿಂದ ತಮ್ಮ ಜೀವಿತಕಾಲದಲ್ಲೆಲ್ಲ ಕಲಿಯುವುದಕ್ಕಿಂತ ನೂರುಪಾಲು ಹೆಚ್ಚಾದ ವಿಷಯಗಳನ್ನು ಅವರಿಗೆ ಮಾತಿನರೂಪದಲ್ಲಿ ಬೋಧಿಸಬಹುದು. ಈ ರೀತಿ ಮಾಡಬೇಕಾದರೂ ಒಂದು ಕ್ರಮವಾದ ಏರ್ಪಾಡನ್ನು ಕಲ್ಪಿಸಬೇಕು. ಹಾಗೆ ಮಾಡುವುದಕ್ಕೆ ಹಣವೂ ಬೇಕು. ಒಂದು ಚಕ್ರವನ್ನು ಮೊದಲು ಚಲಿಸುವಂತೆ ಮಾಡುವುದು ಬಹು ಕಷ್ಟ; ಆದರೆ ಒಂದು ಸಾರಿ ಚಲಿಸಿಬಿಟ್ಟರೆ, ಅದು ಕಾಲಕ್ರಮದಿಂದ ವೇಗವಾಗಿ ಚಲಿಸುತ್ತಿರುತ್ತದೆ. ನನ್ನ ಸ್ವದೇಶದಲ್ಲಿ ನನಗೆ ಸಹಾಯ

ಸಿಕ್ಕಿತೇ ಎಂದು ಹಾರೈಸಿ, ಧನವಂತರಿಂದ ಯಾವ ಸಹಾಯವೂ ಸಿಕ್ಕದೆ, ಆಳಿದ ಮಹಾಸ್ವಾಮಿಯವರ್ ಸಹಾಯದಿಂದ ಈ ದೇಶಕ್ಕೆ ಬಂದೆನು. ಇಂಡಿಯಾ ದೇಶದ ಬಡವರು ಸತ್ತರೇನು ಬದುಕಿದ್ದರೇನು ? ಅಮೆರಿಕ ದೇಶದವರಿಗೆ ಆ ವಿಷಯವೇ ಬೇಕಾಗಿಲ್ಲ. ನಮ್ಮ ಸ್ವಜನಗಳೇ ಸ್ವಾರ್ಥವನ್ನು ಬಿಟ್ಟು ಮತ್ತೊಂದನ್ನು ಸ್ಮರಿಸದೆ ಇರುವಾಗ, ಅಮೆರಿಕದವರಿಗೆ ಬೇಕಾದದ್ದು ಏನು ? ಮಹಾಪ್ರಭುಗಳೇ, ಈ ಜೀವಮಾನವು ಶಾಶ್ವತವಲ್ಲ; ಈ ಲೋಕದ ವಿಷಯಸುಖಗಳೆಲ್ಲ ಕ್ಷಣಿಕವಾದವುಗಳು. ಪರೋಪಕಾರಕ್ಕಾಗಿ ಜೀವಿಸಿರುವವರೇ ಜೀವಿಗಳು, ಉಳಿದವರೆಲ್ಲರೂ ಜೀವಚ್ಛವಗಳೇ ಸರಿ. ಮಹಾಸ್ವಾಮಿಯವರಂತಹ ಉತ್ಕೃಷ್ಟಪದ್ಧತಿಯನ್ನೂ ಉದಾರಮನಸ್ಸನ್ನೂ ಪಡೆದ ಇಂಡಿಯಾ ರಾಜಪುತ್ರರು ಕೆಳಕ್ಕೆ ಬಿದ್ದಿರುವ ಭಾರತ ಭೂಮಾತೆಯನ್ನು ಮೇಲಕ್ಕೆ ಎತ್ತಿ ಕುಳ್ಳಿರಿಸಿ, ಮುಂದೆ ತಮ್ಮ ಹೆಸರು ಬಹುಕಾಲ ಪೂಜನೀಯವಾಗಿರುವಂತೆ ಮಾಡಬಹುದು. ಅಜ್ಞಾನಾಂಧಕಾರದಲ್ಲಿ ಮಗ್ನರಾಗಿ ಒದ್ದಾಡುವ ಲಕ್ಷಾಂತರ ಭಾರತೀಯರ ವಿಷಯದಲ್ಲಿ ಮಹಾಸ್ವಾಮಿಯವರಾದ ತಮ್ಮ ಉದಾರ ಚಿತ್ತವು ವಿಶೇಷ ಕನಿಕರದಿಂದ ಕೂಡಿ ವರ್ತಿಸುವಂತೆ ಜಗದೀಶ್ವರನು ಕರುಣಿಸಲಿ ಎಂಬುದೇ ವಿವೇಕಾನಂದನ ಪ್ರಾರ್ಥನೆಯಾಗಿದೆ.

ಪಾಠಕಮಹಾಶಯರೇ ! ಇದುವರೆಗೆ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರ ಜೀವಿತಕಾಲದ ಚರಿತ್ರನಾಟಕದಲ್ಲಿ ಹೇಳಬೇಕಾದ ಪೂರ್ವಾಂಗರೂಪವಾದ ವಿಷಯಗಳೆಲ್ಲವೂ ಮುಗಿದುವು. ಮುಂದೆ ಆ ಮಹಾಪುರುಷರ ಚರಮಾವಸ್ಥೆಯಲ್ಲಿ ನಡೆದ ವಿಷಯಗಳನ್ನು ತಿಳಿಸಬೇಕಾಗಿರುವುದರಿಂದ, ತತ್ಪೂರ್ವದಲ್ಲಿ ರಾಜಕೀಯ ವಿಷಯಗಳಲ್ಲಿ ಅವರು ಪ್ರಜಾಪಾಲನೆಗಾಗಿ ಮಾಡಿದ ಸರ್ವೋತ್ಕೃಷ್ಟವಾದ ಏರ್ಪಾಡುಗಳನ್ನೂ, ಅವರು ಆಯಾ ಕಾಲಗಳಲ್ಲಿ ಪ್ರದರ್ಶನಗೊಳಿಸಿದ ವಿದ್ಯಾಪಕ್ಷಪಾತತೆಯನ್ನೂ, ಸೌಮ್ಯಸ್ವಭಾವವನ್ನೂ, ಸೌಜನ್ಯಗಾಂಭೀರ್ಯೌದಾರ್ಯಾದಿ ಸುಗುಣಗಳನ್ನೂ ತಿಳಿಯಬೇಕಾದುದು ಪರಮಾವಶ್ಯಕವಾಗಿರುವುದು.

ಹದಿನೈದನೆಯ ಅಧ್ಯಾಯ.

ಶ್ರೀ

ಬೇಕಾದ

ಗಳಾಗತಕ್ಕ

ಪ್ರತಿಜ್ಞೆಮಾ

ಪ್ರಜೆಗಳೂ ರಾಜ್ಯವೆಂಬ ಸಂಸಾರಕ್ಕೆ ಒದಗತಕ್ಕ ನಾನಾವಿಧವಾದ ಸಂಕಟಗಳನ್ನಾಗಲಿ, ರಾಜ್ಯವನ್ನು ಅಭಿವೃದ್ಧಿ ಮಾಡತಕ್ಕ ಕಾರ್ಯಗಳ ಭಾರವನ್ನಾಗಲಿ ವಹಿಸಿಕೊಳ್ಳುವೆವೆಂದು ಪರಸ್ಪರ ಪ್ರತಿಜ್ಞೆಮಾಡಿಕೊಳ್ಳುವರು. ವಿವಾಹಕ್ಕೆ ಗುರುತಾಗಿ ಕೆಲವು

ದೇಶಗಳಲ್ಲಿ ಸ್ತ್ರೀಪುರುಷರು ಪರಸ್ಪರ ಪಾಣಿಗ್ರಹಣವನ್ನು ಮಾಡುತ್ತಾರೆ. ವರನು ವಧುವಿಗೆ ಮಂಗಳ ಸೂತ್ರವನ್ನು ಕಟ್ಟುತ್ತಾನೆ. ಮತ್ತೆ ಕೆಲವು ದೇಶಗಳಲ್ಲಿ ವಧೂವರರು ತಮ್ಮ ತಮ್ಮ ಅಂಗುಳೀಯಕಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಅದೇ ಮೇರೆಗೆ ಒಂದು ರಾಜ್ಯದ ಜನರು ತಮ್ಮ ಮೇಲೆ ಪ್ರಭುತ್ವಮಾಡುವುದಕ್ಕೆ ಒಬ್ಬ ಪುರುಷನನ್ನಾಗಲಿ ಸ್ತ್ರೀಯನ್ನಾಗಲಿ ಆಯ್ದುಕೊಂಡು ಪಟ್ಟವನ್ನು ಕಟ್ಟುವಾಗ, ತಲೆಯಮೇಲೆ ಒಂದು ಕಿರೀಟವನ್ನು ಇಡುತ್ತಾರೆ; ಅಥವಾ, ಸಿಂಹಾಸನಾರೋಹಣವನ್ನು ಮಾಡಿಸು



ಮೈಸೂರು ರಾಜ್ಯದ ರತ್ನಸಿಂಹಾಸನವು.

ತ್ತಾರೆ. ಆ ಕಿರೀಟ ಧಾರಣವೂ ಸಿಂಹಾಸನಾರೋಹಣವೂ ಪ್ರಭುವಿಗೂ ಪ್ರಜೆಗಳಿಗೂ ಇರುವ ಸಂಬಂಧವನ್ನು ಸೂಚಿಸುವ ಚಿಹ್ನೆಯಾಗಿರುತ್ತವೆ. ದಂಪತಿಗಳಾದವರು ಪರಸ್ಪರ ಕಲಹಗಳಿಲ್ಲದೆ ಪ್ರೇಮಾನುಬಂಧಕ್ಕೊಳಗಾಗಿ ಸಂಸಾರ ಸೌಖ್ಯವನ್ನು ಕಾಪಾಡಿಕೊಂಡುಬರುವಂತೆ ರಾಜನೂ ಪ್ರಜೆಗಳೂ ವೈಷಮ್ಯವಿಲ್ಲದೆ ಪರಸ್ಪರ ಪ್ರೀತಿ ವಿಶ್ವಾಸಗಳಿಗೆ ಬದ್ಧರಾಗಿ ರಾಜ್ಯದ ಸೌಖ್ಯವನ್ನು ಪಾಲನೆಮಾಡಿಕೊಂಡು ಬರಬೇಕು.

ಲೋಕದಲ್ಲಿ ರೂಢವಾಗಿರುವ ರಾಜ್ಯಭಾರ ಕ್ರಮಗಳಲ್ಲೆಲ್ಲ, ಮುಖ್ಯವಾಗಿ, ಅನೇಕ ಸಂಖ್ಯಾಕರಾದ ಪ್ರಜೆಗಳನ್ನು ಏಕಾಕಿಯಾದ ರಾಜನು ರಾಜ್ಯಸಪ್ತಾಂಗ ಯುಕ್ತನಾಗಿ, ಆರ್ಷೇಯವಾಗಿ ನಡೆದುಬಂದ ಉಚಿತವಾದ ಪದ್ಧತಿಗಳಿಗೂ ರಾಜ ನೀತಿಗೂ ಅಪಾಯಬಾರದಂತೆ ದೇಶ ಕಾಲ ಸ್ಥಿತಿಗಳನ್ನನುಸರಿಸಿ ರಚಿಸಿದ ರಾಜ್ಯನಿಬಂಧನೆಗಳನ್ನು ಆಚರಣೆಗೆ ತಂದು, ಧರ್ಮದಿಂದ ಪಾಲನಮಾಡುವ ರಾಜ್ಯಭಾರ ಕ್ರಮವೇ ಪ್ರಕೃತದಲ್ಲಿ ವಿಚಾರಣೀಯವಾಗಿರುವುದು. ಪೂರ್ವಕಾಲದಲ್ಲಿ, "ನಾವಿಷ್ಣುಃ ಪೃಥಿವೀಪತಿಃ", "ಅಷ್ಟಾಭಿರ್ಲೋಕಪಾಲಾನಾಂ ಮಾತ್ರಾಭಿರ್ನಿರ್ಮಿತೋ ನೃಪಃ" ಎಂಬ ವಾಕ್ಯಗಳನ್ನು ಆಧಾರವಾಗಿಟ್ಟುಕೊಂಡು, ರಾಜನಾದವನು ಎಷ್ಟು ನಿರಂಕುಶನಾಗಿ ಪ್ರವರ್ತಿಸಿದರೂ, ಪ್ರಜೆಗಳು ಪ್ರತಿಘಟಿಸದೆ ನಡೆದುಕೊಳ್ಳುತ್ತಿದ್ದರು. ರಾಜನಾದವನು ಆತ್ಮಸೌಖ್ಯವೊಂದನ್ನೇ ಪ್ರಧಾನವಾಗಿಟ್ಟುಕೊಳ್ಳದೆ ಪ್ರಜಾ ಪರಿಪಾಲನವನ್ನು ಮಾಡುತ್ತಲೂ, ಪ್ರಜೆಗಳಾದವರು ಲೌಕಿಕ ವ್ಯಾಪಾರಗಳನ್ನೂ ತಮ್ಮ ಸುಖಕ್ಕಾಗಿಯೇ ಮಾಡಬೇಕಾದ ಏರ್ಪಾಡುಗಳ ಯುಕ್ತಾಯುಕ್ತತೆಯನ್ನೂ ಸ್ವಲ್ಪವೂ ಅರಿಯದೆ, ಇನ್ನೂ ಮುಗ್ಧಾವಸ್ಥೆಯಲ್ಲಿಯೇ ಇದ್ದುಕೊಂಡು, ಹೇಳಿದುದಕ್ಕೆ "ತಥಾಸ್ತು" ಎಂದು ತಲೆ ಬಗ್ಗಿಸಿಕೊಂಡು ನಡೆಯುತ್ತಿರುವುದಾದರೆ, ನಿರಂಕುಶ ಪ್ರಭುತ್ವವು ಈಗಲೂ ಕೂಡ ಅಪೇಕ್ಷಣೀಯವಾದುದೇ ಸರಿ. ಆದರೆ, ಇದು ಕೃತಯುಗದ ಮಾತಾಯಿತೇ ಹೊರತು, ಈ ವರ್ತಮಾನ ಕಾಲ ದೇಶ ಸ್ಥಿತಿಗಳಿಗೆ ಸಲ್ಲತಕ್ಕುದಲ್ಲ. ಇಂತಹ ಕಾಲದಲ್ಲಿಯೂ ನಿರಂಕುಶಾಧಿಪತ್ಯವನ್ನು ಮಾಡತೊಡಗಿದ ವಿವೇಕ ಹೀನರಾದವರನೇಕರು ದೌರ್ಜನ್ಯಕ್ಕೆ ಗುರಿಯಾಗಿ ಕಡೆಗೆ ದುರ್ಗತಿಗೊಳಗಾದರು. ಈ ಕಾಲದಲ್ಲಿ ರಾಜ್ಯಕ್ಕೆಲ್ಲ ಒಬ್ಬ ಅಧಿಪತಿಯಾಗಬೇಕಾದರೆ, ಆರ್ಷೇಯವಾಗಿ ನಡೆದುಬಂದ ರಾಜವಂಶದಲ್ಲಿ ಸರ್ವಸಮ್ಮತವಾಗಿಯೂ ಜ್ಯೇಷ್ಠಾನುಕ್ರಮವಾಗಿಯೂ ಇರುವ ಪುರುಷನನ್ನು ಪ್ರಜೆಗಳು ಆಯ್ದುಕೊಂಡು, ಧರ್ಮಶಾಸ್ತ್ರಾನುಸಾರವಾಗಿ ಆತನಿಗೆ ಸರ್ವಾಧಿಪತ್ಯವನ್ನು ಕೊಡುವರು. ಆತನು ರಾಜ್ಯಭಾರಕ್ಕೆ ಸಂಬಂಧಪಟ್ಟ ಸಕಲ ಮುಖ್ಯಾಂಶಗಳಲ್ಲಿಯೂ ಪ್ರಜಾಕೋಟಿಯ ಹಿತವನ್ನೂ ಸಮ್ಮತಿಯನ್ನೂ ವ್ಯಕ್ತವಾಗಿ ತಿಳಿಯಪಡಿಸುವ ಪ್ರತಿನಿಧಿಗಳು ವಿಜ್ಞಾಪಿಸುವ ಮಂತ್ರಾಲೋಚನೆಗಳಿಗೂ ಅಭಿಪ್ರಾಯಗಳಿಗೂ ಅನುಸಾರವಾಗಿ ನಡೆಯುತ್ತ, ಸರ್ವಸಮ್ಮತನಾದ ಮಂತ್ರಿವರ್ಯನನ್ನು ಸಹಾಯಕ್ಕಿಟ್ಟುಕೊಂಡು, ದೇಶದ ಆಯವ್ಯಯಗಳನ್ನೂ ಇತರ ರಾಜ್ಯಭಾರ ಕರ್ತವ್ಯಗಳನ್ನೂ ನೆರವೇರಿಸುತ್ತ ಪ್ರಜಾಪಾಲನವನ್ನು ಮಾಡುವನು. ನಿರಂಕುಶ ಪ್ರಭುವಿಗಿಂತಲೂ ಸಾಂಕುಶ ಪ್ರಭುವಿಗೆ ಕರ್ತವ್ಯತಾಭಾರವು ಬಹಳ ಹೆಚ್ಚು. ರಾಜನಾದವನು ರಾಜಕಾರ್ಯಗಳಲ್ಲಿ ಪ್ರವೀಣನೆನಿಸಿ ಕೊಳ್ಳಬೇಕಾದರೆ, ಯುಕ್ತಾಯುಕ್ತ ವಿವೇಚನೆಯುಳ್ಳವನಾಗಿಯೂ, ಪಕ್ಷಪಾತ ರಹಿತನಾಗಿಯೂ ಇರಬೇಕು; ಭೋಗಾಪೇಕ್ಷೆಯನ್ನೇ ಮುಖ್ಯವಾಗಿಟ್ಟುಕೊಳ್ಳದೆ, ರಾಜ್ಯದಲ್ಲಿ ಯಾವ ಪ್ರಾಣಿಗೆ ಬಾಧೆಯುಂಟಾದರೂ ತನ್ನ ದೇಹಕ್ಕೆ ಉಂಟಾದಂತೆ ಭಾವಿಸಿ, "ಆತ್ಮವತ್ಸರ್ವಭೂತಾನಿ" ಎಂಬ ವಾಕ್ಯವನ್ನನುಸರಿಸುತ್ತ,

ಒಂದು ವೇಳೆ ಪ್ರಜಾಪ್ರತಿನಿಧಿಗಳಾದವರು ಹೇಳುವ ಅಭಿಪ್ರಾಯಗಳು ತನಗೆ ಅಸಮಂಜಸವೆಂದು ತೋರಿದರೂ, ಅವರೊಡನೆ ವಿಚಾರಮಾಡಿ ತದನುಸಾರವಾಗಿ ನಡೆಯುತ್ತ, ತನ್ನ ಗೌರವಕ್ಕೆ ಸ್ವಲ್ಪವೂ ಹಾನಿಯಿಲ್ಲದಂತೆ ವರ್ತಿಸುತ್ತ ಬರಬೇಕು. ಈ ವಿಧವಾದ ಸಾಂಕುಶ ಪ್ರಭುತ್ವವೇ ಶ್ರೇಷ್ಠವೆನಿಸಿಕೊಳ್ಳುವುದು.

ನಮ್ಮ ಮೈಸೂರು ಸಂಸ್ಥಾನದ ಪ್ರಭುತ್ವವು ಸಾಂಕುಶ ಪ್ರಭುತ್ವಕ್ಕೆ ಒಂದು ದೃಷ್ಟಾಂತವಾಗಿದೆ. ಲೋಕದಲ್ಲಿ ಒಂದು ಕುಟುಂಬಕ್ಕೆ ಸೇರಿದ ಕೇವಲ ಸಮೀಪ ರಕ್ತಬಂಧುಗಳಾದ ನಾಲ್ವರನ್ನು ಮೆಚ್ಚಿಸಿ ಕಾಪಾಡುವುದೇ ಗೃಹಪತಿಯಾದವನಿಗೆ ಎಷ್ಟೋ ಪ್ರಯಾಸವು. ಹೀಗಿರುವಲ್ಲಿ, ಲಕ್ಷೋಪಲಕ್ಷ ಕುಟುಂಬಗಳುಳ್ಳ ರಾಜ್ಯವನ್ನು ಸ್ವಲ್ಪವೂ ನ್ಯೂನಾತಿರೇಕಗಳಿಲ್ಲದೆ ಪರಿಪಾಲನೆ ಮಾಡುವುದೆಂದರೆ ಸಾಮಾನ್ಯವಲ್ಲ. ಈ ತತ್ತ್ವದ ರಹಸ್ಯವನ್ನರಿತ ಚಾಮರಾಜೇಂದ್ರ ಒಡೆಯರವರು ಯಾವ ರೀತಿಯಲ್ಲಿ ಈ ದುರ್ಘಟವಾದ ಕಾರ್ಯವನ್ನು ಕೈಕೊಂಡು ನೆರವೇರಿಸಿದರೋ ಅವನ್ನು ನಾವು ಸಂಗ್ರಹಿಸಿ ಹೇಳಬೇಕಾದರೆ, ಅವರು ಸ್ವಕುಟುಂಬ ಭರಣದಲ್ಲಿ ಎಷ್ಟು ದಕ್ಷರಾದ ಗೃಹಪತಿಗಳಾಗಿದ್ದರೋ ಇಂಗ್ಲಿಷ್ ಸರಕಾರದವರು ತಮ್ಮ ವಶಕ್ಕೊಪ್ಪಿಸಿದ ರಾಜ್ಯವೆಂಬ ಗೃಹದಲ್ಲಿಯೂ ಅಷ್ಟುಮಟ್ಟಿನ ರಾಜರತ್ನವಾಗಿದ್ದರೆಂದೂ, ಮೈಸೂರು ರಾಜ್ಯಾಧಿಪತ್ಯದ ಧರ್ಮವು ಇವರನ್ನೇ ಆಶ್ರಯಿಸಿಕೊಂಡಿದ್ದಿತೆಂದೂ ನಿಸ್ಸಂದೇಹವಾಗಿ ಹೇಳಬಹುದು. ಪ್ರಜೆಗಳು ಯಾವ ಕಾರ್ಯವನ್ನಾದರೂ ಮಾಡಬೇಕೆಂದುದ್ದೇಶಿಸಿದಾಗ, ಅದು ತಮ್ಮ ಘನವಾದ ಅಭಿಪ್ರಾಯಕ್ಕೆ ಎಷ್ಟು ವಿರುದ್ಧವಾಗಿದ್ದರೂ ಪ್ರಜೆಗಳ ಇಷ್ಟದಂತೆಯೇ ವರ್ತಿಸುತ್ತಿದ್ದರು. ಶ್ರೀಮನ್ಮಹಾರಾಜರವರ ಶ್ಲಾಘ್ಯವಾದ ಅಧಿಕಾರ ವಿಚಕ್ಷಣಾತಿಶಯಗಳನ್ನು ತಿಳಿಸುವುದಕ್ಕೆ ಮುಂಚಿತವಾಗಿ, ಅವರಿಗಿಂತ ಹಿಂದಣ ಕಾಲದಲ್ಲಿದ್ದ ರಾಜ್ಯದ ಸ್ಥಿತಿಗತಿಗಳನ್ನು ಕುರಿತು ಸ್ವಲ್ಪ ವಿಚಾರಮಾಡುವುದು ಅತ್ಯಾವಶ್ಯಕವಾಗಿರುವುದು.

ದುರ್ದಾಂತನಾದ ಟೀಪು ಸುಲ್ತಾನನು ಶ್ರೀರಂಗಪಟ್ಟಣದ ಕದನದಲ್ಲಿ ಮಡಿದ ಬಳಿಕ, ಪುರಾತನ ರಾಜವಂಶೀಯರಾದ ಮುಮ್ಮಡಿ ಕೃಷ್ಣರಾಜ ಒಡೆಯರವರು ಸಿಂಹಾಸನವನ್ನೇರಿದುದು ದೈವಸಂಕಲ್ಪವೆಂದೇ ಹೇಳಬೇಕು. ಏಕೆಂದರೆ, ಆಗಿನ ಸನ್ನಿವೇಶಗಳು ಅಷ್ಟು ದುರ್ಘಟಗಳಾಗಿಯೂ ಸಂಶಯಾಸ್ಪದವಾಗಿಯೂ ಇದ್ದುವು. ಬಳಿಕ, ಆ ಮಹಾರಾಜರವರ ಮಂತ್ರಿವರ್ಯರಾದ ಪೂರ್ಣಯ್ಯನವರು ಸ್ವಬುದ್ಧಿಬಲದಿಂದ ರಾಜ್ಯವನ್ನು ಆಳಿ, ದೇಶವನ್ನು ಸಮಾಧಾನ ಸ್ಥಿತಿಗೆ ತಂದು ರಾಜ್ಯಕೋಶಗಳನ್ನು ಬಲಪಡಿಸಿದ ಬಳಿಕ, ಸಕಲವನ್ನೂ ಮಹಾರಾಜರ ಸ್ವತಂತ್ರಾಧಿಕಾರಕ್ಕೆ ಸಮರ್ಪಣೆ ಮಾಡಿದರು. ಅನಂತರ ಉದ್ಯೋಗಕ್ಕೆ ಬಂದ ಅಧಿಕಾರಿಗಳ ಕುಟಿಲತೆಯಿಂದ ಅನ್ಯಾಯವು ಅಂಕುರಿಸಿ ರಾಜ್ಯವು ಕ್ಷೀಣದಶೆಗೆ ಬಂದಿತು. ೧೮೩೧ನೆಯ ಇಸವಿಯಲ್ಲಿ ಬ್ರಿಟಿಷರೇ ಮೈಸೂರು ದೇಶದ ಸರ್ವಾಧಿಕಾರವನ್ನೂ ವಹಿಸಿಕೊಂಡು, ದೇಶದಲ್ಲಿ ನೆಲೆಗೊಂಡಿದ್ದ ನಾನಾವಿಧವಾದ ನ್ಯೂನತೆಗಳನ್ನು ತಿದ್ದಿ, ರಾಜ್ಯಾಧಿಕಾರವನ್ನು ತಕ್ಕ

ಮಟ್ಟಿಗೆ ಸರಿಯಾದ ಮಾರ್ಗಕ್ಕೆ ತಂದರು. ಹಿಂದೆ ಧಾನ್ಯರೂಪವಾಗಿ ವಸೂಲ್ಮಾಡುತ್ತಿದ್ದ ಕಂದಾಯವನ್ನು ತಪ್ಪಿಸಿ, ಅದನ್ನು ದ್ರವ್ಯರೂಪವಾಗಿಯೇ ಕೊಡಬೇಕೆಂಬುದಾಗಿ ಸರಕಾರದವರು ನಿಗದಿಮಾಡಿ, ಭೂಗುಣಕ್ಕನುಗುಣವಾಗಿ ಕಂದಾಯದ ದರವನ್ನು ನಿಷ್ಕರ್ಷೆಮಾಡಿದರು. ಇದರಿಂದ ಪ್ರಜೆಗಳಿಗಿದ್ದ ತೊಂದರೆಯೂ ಕಿರುಕುಳವೂ ತಪ್ಪಿದುದಲ್ಲದೆ, ಅಲ್ಪಾಧಿಕಾರಿಗಳು ಸರಕಾರಕ್ಕೆ ಮಾಡುತ್ತಿದ್ದ ವಂಚನೆಯೂ ಮೋಸವೂ ಅಡಗಿಹೋದುವು. ವ್ಯಾಪಾರಕ್ಕೆ ಅಡಚಣೆಯಾಗಿದ್ದ ಅನೇಕ ವಿಧವಾದ ಸುಂಕಗಳೂ ವಜಾಮಾಡಲ್ಪಟ್ಟುವು. ರಾಜ್ಯದಲ್ಲುಂಟಾಗುವ ಆದಾಯದ ಮೊತ್ತವನ್ನೂ ಆಯಾ ಇಲಾಖೆಗಳಲ್ಲಿ ವ್ಯಯವಾಗಬೇಕಾದ ಖರ್ಚಿನ ಮೊತ್ತವನ್ನೂ ಗೊತ್ತುಮಾಡುವ ಆದಾಯವ್ಯಯಗಳ ಅಂದಾಜುಪಟ್ಟಿಯನ್ನು ಸಂವತ್ಸರಾದಿಯಲ್ಲಿಯೇ ತಯಾರ್ಮಾಡುವ ಒಳ್ಳೆಯ ಪದ್ಧತಿಯು ಏರ್ಪಟ್ಟಿತು. ಇದರಿಂದ ರಾಜ್ಯದಲ್ಲಿ ನಡೆಯುತ್ತಿದ್ದ ದುಂದುವೆಚ್ಚವು ಸಂಪೂರ್ಣವಾಗಿ ತಪ್ಪಿಹೋಯಿತು. ನ್ಯಾಯವಿಚಾರಣೆಗಾಗಿ ನ್ಯಾಯಸ್ಥಾನಗಳು ಸ್ಥಾಪಿತವಾದುವು. "ಸಿವಿಲ್ ಕೋಡ್" "ಕ್ರಿಮಿನಲ್ ಕೋಡ್" ಎಂಬ ಧರ್ಮಶಾಸ್ತ್ರ ನಿಬಂಧನೆಗಳಿಗನುಸಾರವಾಗಿ ನ್ಯಾಯ ವಿಚಾರಣೆ ಮಾಡುವ ಪದ್ಧತಿಯು ಪ್ರಚಾರಕ್ಕೆ ಬಂದಿತು. ಜನರು ಮೂಢರಾಗಿದ್ದರೆ ದೇಶಕ್ಕೆ ನಷ್ಟವುಂಟಾಗುವುದೆಂದು ತಿಳಿದು ಸರಕಾರದವರು ರಾಜ್ಯಾದಾಯದಲ್ಲಿ ಕೆಲವು ಭಾಗವನ್ನು ಜನರ ವಿದ್ಯಾಭ್ಯಾಸಕ್ಕಾಗಿ ತೆಗೆದಿಟ್ಟು, ಅಲ್ಲಲ್ಲಿ ವಿದ್ಯಾಶಾಲೆಗಳನ್ನು ಸ್ಥಾಪಿಸಿದರು. ಇದರಂತೆಯೇ ವ್ಯಾಧಿಪೀಡಿತರಾದ ಜನರ ಸೌಖ್ಯಕ್ಕಾಗಿ ಅನೇಕ ಸ್ಥಳಗಳಲ್ಲಿ ಧರ್ಮದ ವೈದ್ಯಶಾಲೆಗಳೂ ಏರ್ಪಾಡಾದುವು.

ಬ್ರಿಟಿಷರು ಮೈಸೂರು ರಾಜ್ಯವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡ ಕಾಲದಲ್ಲಿ ರಾಜ್ಯದ ಉತ್ಪತ್ತಿಯು ೫೫ ಲಕ್ಷ ರೂಪಾಯಿ ಮಾತ್ರವಾಗಿದ್ದಿತು ; ರಾಜ್ಯದ ವ್ಯಯವೂ ೫೫ ಲಕ್ಷವೇ ಆಗಿದ್ದಿತು. ಇದಲ್ಲದೆ, ರಾಜ್ಯಕ್ಕೆ ೮೭॥ ಲಕ್ಷ ರೂಪಾಯಿಗಳ ಸಾಲವಿದ್ದಿತು. ಬ್ರಿಟಿಷರು ರಾಜ್ಯಭಾರವನ್ನು ವಹಿಸಿದಮೇಲೆ, ಸಾಲವನ್ನೆಲ್ಲ ತೀರಿಸಿ, ರಾಜ್ಯದ ಉತ್ಪತ್ತಿಯನ್ನು ೫೫ರಿಂದ ೧೧೦ ಲಕ್ಷದವರೆಗೆ ಹೆಚ್ಚಿಸಿ, ಪ್ರತಿ ವರುಷದಲ್ಲಿಯೂ ನಿಲ್ಲುತ್ತಿದ್ದ ಆದಾಯದ ಸಿಲ್ಕಿನಿಂದ ೬೩ ಲಕ್ಷ ರೂಪಾಯಿಗಳನ್ನು ಸಂಚಯಮಾಡಿಟ್ಟರು. ಆದರೂ, ಕಳೆದ ಐವತ್ತು ವರುಷಗಳಿಂದಲೂ ಬ್ರಿಟಿಷರು ತಮ್ಮ ರಾಜ್ಯಭಾರಕ್ರಮವನ್ನೇ ಈ ಸಂಸ್ಥಾನದಲ್ಲಿಯೂ ಆಚರಣೆಯಲ್ಲಿ ತಂದಿದ್ದರಾದುದರಿಂದ, "ಅಜ್ಜಿ ನೂತದ್ದೆಲ್ಲ ಅಜ್ಜನ ಉಡಿದಾರಕ್ಕೇ ಸರಿಹೋಯಿತು" ಎಂಬ ನಾಣ್ನುಡಿಗೆ ಸರಿಯಾಗಿ ಆದ ಉತ್ಪತ್ತಿಯನ್ನೆಲ್ಲ ಪ್ರತಿ ಇಲಾಖೆಯ ವಿಶೇಷವಾದ ಸಿಬ್ಬಂದಿಯೇ ನುಂಗುತ್ತಿದ್ದಿತು. ಇಂಗ್ಲಿಷರ ಆಡಳಿತದ ಅಂತ್ಯಭಾಗದಲ್ಲಿ, ಎಂದರೆ—೧೮೭೬-೭೭ರಲ್ಲಿ, ಮೈಸೂರು ದೇಶಕ್ಕೆ ಪ್ರಾಪ್ತವಾದ ಘೋರಕ್ಷಾಮವು ಬಹು ಹಾನಿಯನ್ನುಂಟುಮಾಡಿತು. ಕ್ಷಾಮಪೀಡಿತವಾದ ದೇಶವನ್ನು ಕಾಪಾಡುವುದಕ್ಕಾಗಿ ಬಂಡಾರವೆಲ್ಲ ಬರಿದಾಗಿ ಹೋದುದಲ್ಲದೆ, ಬ್ರಿಟಿಷ್ ಸರಕಾರದಲ್ಲಿ ಹೊಸದಾಗಿ ಒಂದುಕೋಟಿ ರೂಪಾಯಿಯ ಸಾಲವೂ

ಉಂಟಾಯಿತು. ಈ ಸಾಲಕ್ಕೆ ಪ್ರತಿ ಸಂವತ್ಸರವೂ ದೇಶದ ಭಂಡಾರದಿಂದ ನಾಲ್ಕು ಲಕ್ಷ ರೂಪಾಯಿಯ ಬಡ್ಡಿ ಸಲ್ಲುತ್ತಿದ್ದಿತು. ಕ್ಷಾಮಕಾಲದಲ್ಲಿ ರೋಗಾದ್ಯುಪದ್ರವಗಳಿಂದ ಹತ್ತು ಲಕ್ಷದ ವರೆಗೆ ಪ್ರಜಾ ನಾಶವುಂಟಾಯಿತು. ಸತ್ತವರಲ್ಲನೇಕರು ಕೈಕಾಲು ಗಟ್ಟಿಯಾಗಿ ಕಾಯಪುಷ್ಟಿಯನ್ನು ಪಡೆದು ದೇಹಶ್ರಮದಿಂದ ಕೈಗಾರಿಕೆ ಕೆಲಸಗಳನ್ನು ಮಾಡಿ ಜೀವಿಸುತ್ತಿದ್ದವರಾದುದರಿಂದ, ಅನೇಕ ವರುಷಗಳ ವರೆಗೆ ದೇಶದ ಕೈಗಾರಿಕೆಗಳೆಲ್ಲ ಮೂಲೆಗೆ ಬಿದ್ದುವು. ದವಸ ಧಾನ್ಯಗಳಿಗೂ ದನಕರುಗಳಿಗೂ ಅಭಾವ ಬಂದಿತು. ಪ್ರತಿ ಸಂವತ್ಸರದ ಹುಟ್ಟುವಳಿಯೂ ಅಧಮಸ್ಥಿತಿಗಿಳಿದುದರಿಂದ, ರೆವಿನ್ಯೂ ಬಾಬಿನಲ್ಲಿ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕಾಗಲಿ, ಮತ್ತಾವ ವಿಧವಾದ ತೆರಿಗೆಯನ್ನು ವಸೂಲ್ಮಾಡುವುದಕ್ಕಾಗಲಿ ಅವಕಾಶವಿರಲಿಲ್ಲ. ಈ ಕಾರಣಗಳಿಂದ ಲವಾಜಮೆಯನ್ನು ಆವಶ್ಯಕವಾಗಿ ಕಡಿಮೆಮಾಡಬೇಕಾಗಿ ಬಂದು, ಪ್ರತಿಯೊಂದು ಇಲಾಖೆಯೂ ದುರ್ಬಲಸ್ಥಿತಿಯನ್ನು ಹೊಂದಿತು. ಇದರಮೇಲೆ ಪ್ರತಿ ವರುಷವೂ ೩೫ ಲಕ್ಷ ರೂಪಾಯಿಗಳ ಪೊಗದಿಯು ಬ್ರಿಟಿಷ್ ಸರಕಾರಕ್ಕೆ ಸೇರಬೇಕಾಗಿದ್ದಿತು. ಇಂತಹ ಕಷ್ಟಕಾಲದಲ್ಲಿ ಬ್ರಿಟಿಷರು ಮಹಾರಾಜರವರಿಗೆ ಹದಿನೆಂಟು ವರುಷ ತುಂಬಿದಕೂಡಲೆ ತಮ್ಮ ವಾಗ್ದಾನಪ್ರಕಾರ, ಆರ್ಪಣೀಯವಾದ ರಾಜ್ಯವನ್ನು ಅರ್ಪಿಸಿದರು. ಆಗ ದೇಶವು ಕ್ಷಾಮದಿಂದ ಕ್ಷೀಣವಾಗಿ ಆಯವ್ಯಯಗಳು ಒಂದೇ ಸಮನಾಗಿದ್ದುದರಿಂದ, ಹೆಚ್ಚಾದ ಆದಾಯಕ್ಕೆ ಅವಕಾಶವಿಲ್ಲದೆ ಸಾಲವನ್ನು ತೀರಿಸುವ ಬಗೆಯೇ ತೋರದಂತಿದ್ದಿತು. ಇದಲ್ಲದೆ, ಆಗ ಜನರ ಸಾಮಾನ್ಯ ವಿದ್ಯಾಭ್ಯಾಸವು ಸ್ವಲ್ಪಮಟ್ಟಿಗೆ ಅಭಿವೃದ್ಧಿಗೆ ಬಂದಿದ್ದರೂ ಪ್ರಜೆಗಳಲ್ಲಿ ಇನ್ನೂ ಜ್ಞಾನವೆಂಬ ಬೆಳಕು ಚೆನ್ನಾಗಿ ಆವರಿಸದಿದ್ದುದರಿಂದ, ಅವರು ಕೇವಲ ದರಿದ್ರರಾಗಿಯೂ ಅವರ ಆದಾಯವು ಅತ್ಯಲ್ಪವಾಗಿಯೂ ಅವರ ಸ್ಥಿತಿಗತಿಗಳು ಅತಿ ಶೋಚನೀಯವಾಗಿಯೂ ಇದ್ದುವು. ಇಂತಹ ದುರ್ದಶೆಯಲ್ಲಿದ್ದ ರಾಜ್ಯಕ್ಕೆ ಶ್ರೀ ಚಾಮರಾಜೇಂದ್ರರವರು ಒಡೆಯರಾಗಿ, ಬಂದ ಕಷ್ಟಗಳನ್ನೆಲ್ಲ ಸ್ವಶಕ್ತಿಯಿಂದಲೂ ಅರ್ಥಶಾಸ್ತ್ರಾಭಿಜ್ಞರಾದ ಮಂತ್ರಿಶ್ರೇಷ್ಠರ ಮಂತ್ರಾಲೋಚನಾ ಬಲದಿಂದಲೂ ಪರಿಹರಿಸಿಕೊಂಡು, ಭಾರತೀಯರೊಳಗೆಲ್ಲ ಬಲ್ಲಿದರೆನಿಸಿಕೊಂಡ ವೃತ್ತಾಂತವು ನಮಗೆ ಸದುಪದೇಶಕರವಾಗಿರುವುದು.

ಮಹಾರಾಜರವರು ವ್ಯವಸಾಯ ವ್ಯಾಪಾರಗಳ ವೃದ್ಧಿಯೇ ಪ್ರಜೆಗಳ ಐಶ್ವರ್ಯಾಭ್ಯುದಯಕ್ಕೆ ಆದಿಕಾರಣವೆಂಬುದನ್ನು ನಿರ್ಧರಿಸಿ, ತಾವು ರಾಜ್ಯಾಭಿಷಿಕ್ತರಾದ ಕೂಡಲೆ, ಅವುಗಳ ವೃದ್ಧಿಗಾಗಿ ನಾಲೆಗಳನ್ನೂ ಕೆರೆಗಳನ್ನೂ ರಸ್ತೆಗಳನ್ನೂ ಸೇತುವೆಗಳನ್ನೂ ರೈಲ್ವೆಗಳನ್ನೂ ವೃದ್ಧಿಪಡಿಸಿ, ಕೃಷಿವಾಣಿಜ್ಯಗಳಲ್ಲಿ ಜನರಿಗೆ ವಿಶೇಷಾಸಕ್ತಿಯನ್ನುಂಟುಮಾಡಿದರು. ಮೈಸೂರು-ಬೆಂಗಳೂರು ರೈಲ್ವೆ, ಬೆಂಗಳೂರು-ಹರಿಹರ ರೈಲ್ವೆ, ಮೈಸೂರು-ನಂಜನಗೂಡು ರೈಲ್ವೆ—ಇವುಗಳು ತಯಾರಾದುವು. ಈ ಏರ್ಪಾಡಿನಿಂದ ಪ್ರಯಾಣಿಕರಿಗೆ ಕಾಲವೂ ಹಣವೂ ಕೂಡಿಬರುವಂತಾಯಿತು, ಪ್ರಾಣಭೀತಿಯು ತಪ್ಪಿತು, ವ್ಯಾಪಾರವು ಹೆಚ್ಚಿತು, ಸುಭಿಕ್ಷವು ನೆಲೆಗೊಂಡಿತು,

ರೈಲ್ವೆಯ ಕಾಲನಿಯಮವನ್ನು ನೋಡಿ ಎಲ್ಲರೂ ತಮ್ಮ ಸೋಮಾರಿತನವನ್ನು ಬಿಟ್ಟು ಕಾಲದ ಬೆಲೆಯನ್ನು ತಿಳಿದುಕೊಂಡರು. ಹೀಗೆ ಜಡರಾಗಿದ್ದ ಪ್ರಜೆಗಳೆಲ್ಲರೂ ತಮ್ಮ ತಮ್ಮ ಕರ್ತವ್ಯಗಳನ್ನು ತಿಳಿದು ಕೆಲಸಮಾಡಲಾರಂಭಿಸಿದುದರಿಂದ ಪ್ರಜೆಗಳ ಸುಖಸಂಪತ್ತೂ ಹೆಚ್ಚಲಾರಂಭವಾಯಿತು. ಸಂಸ್ಥಾನದ ಸಂಪಲ್ಲಕ್ಷ್ಮಿಯು ಪುನಃ ತನ್ನ ವೈಭವವನ್ನು ತಾಳಿ ಚೇತರಿಸಿಕೊಳ್ಳಲಾರಂಭಿಸಿದಳು.

ಶ್ರೀಮನ್ಮಹಾರಾಜರವರು ರಾಜ್ಯಸೂತ್ರವನ್ನು ಕೈಕೊಂಡ ಬಳಿಕ, ಮೊದಲ ನಾಲ್ಕು ಸಂವತ್ಸರಗಳು ರಾಜಕಾರ್ಯಗಳನ್ನು ಕ್ರಮಗೊಳಿಸಲು ವಿಶೇಷ ಸಾಹಸ ಪಡಬೇಕಾಯಿತು. ಏಕೆಂದರೆ: ಒಂದು ಕಡೆ ಕ್ಷಾಮಬಾಧೆಯಿಂದ ತಗ್ಗುತ್ತ ಬಂದ ಆದಾಯ, ಮತ್ತೊಂದು ಕಡೆ ಲೋಕೋಪಕಾರ್ಯಕ್ಕಾಗಿ ಹೆಚ್ಚಾಗುತ್ತಲಿರುವ ವ್ಯಯ; ಇವೆರಡನ್ನೂ ಸರಿಮಾಡಿಕೊಳ್ಳುವುದಕ್ಕೋಸ್ಕರ ಕೋಶದ ಆಡಳಿತವನ್ನು ಅತಿ ಜಾಗರೂಕತೆಯೊಡನೆ ನಡೆಯಿಸಿದ ಹೊರತು ಉಪಾಯಾಂತರ ತೋರಲಿಲ್ಲ. ಇಂತಹ ಕಷ್ಟಕಾಲದಲ್ಲೂ ಶ್ರೀಮನ್ಮಹಾರಾಜರವರು ಭಗವಂತನಮೇಲೆ ಭಾರವನ್ನು ಹಾಕಿ, ಮುಂದೆ ದೇಶಕ್ಕೆ ಕ್ಷಾಮಪೀಡೆಯುಂಟಾಗದಂತೆ ಮಾಡುವುದೇ ತಮ್ಮ ಮುಖ್ಯಕರ್ತವ್ಯವೆಂದು ಕೃತಸಂಕಲ್ಪರಾಗಿ, ಆರಂಭದಲ್ಲೇ ರೈಲ್ವೆಯನ್ನು ಹಾಕಿಸುವುದರಲ್ಲಿಯೂ ನಾಲೆಗಳನ್ನು ಹೆಚ್ಚಿಸುವುದರಲ್ಲಿಯೂ ತಮ್ಮ ದೃಷ್ಟಿಯನ್ನಿಟ್ಟರು. ಈ ಕಾರಣದಿಂದ ಸುಮಾರು ಮೂರು ಕೋಟಿ ರೂಪಾಯಿಗಳು ವ್ಯಯವಾಯಿತು. ಆದರೂ, ಬಹುದ್ರವ್ಯವ್ಯಯ ಸಾಧ್ಯವಾದ ಇಂತಹ ಕಾರ್ಯಗಳನ್ನು ಕೈಕೊಳ್ಳುವುದಕ್ಕೆ ಅವರು ಹಿಂಜರಿಯಲಿಲ್ಲ; ಏಕೆಂದರೆ: ಪ್ರಜೆಗಳನ್ನು ಸುಖದಿಂದ ಪರಿಪಾಲಿಸುವುದೇ ತಮ್ಮ ಮುಖ್ಯಧರ್ಮವೆಂದು ಅವರು ಪರಿಭಾವಿಸಿಕೊಂಡಿದ್ದರು.

ಶ್ರೀಮನ್ಮಹಾರಾಜರವರು ತಮ್ಮ ರಾಜ್ಯಭಾರದ ಆದಿಭಾಗದಲ್ಲಿ ರೆವಿನ್ಯೂ, ಫಾರೆಸ್ಟ್, ಅಬ್ಕಾರಿ, ಗಣಿ, ಪೋಲೀಸ್, ವಿದ್ಯಾಭ್ಯಾಸ, ಮುಜರಾಯಿ, ಲೆಜಿಸ್ಲೆಟಿವ್ ಮುಂತಾದ ಇಲಾಖೆಗಳಿಗೆಲ್ಲ ಮುಖ್ಯರಾದ ಅಧಿಕಾರಿಗಳಾರನ್ನೂ ನೇಮಿಸದೆ, ದಿವಾನರೇ ಅವನ್ನು ಖುದ್ದಾಗಿ ನೋಡಿಕೊಳ್ಳುವಂತೆ ಅಪ್ಪಣೆ ಕೊಟ್ಟಿದ್ದರು. ಬಳಿಕ ರಾಜ್ಯಾದಾಯವು ಹೆಚ್ಚುತ್ತ ಬಂದಹಾಗೆಲ್ಲ ಇಲಾಖೆಗಳ ಕೆಲಸವೂ ಹೆಚ್ಚಿದುದರಿಂದ, ೧೮೮೫ನೆಯ ಇಸವಿಯಲ್ಲಿ ಫಾರೆಸ್ಟು, ಪೋಲೀಸ್ ಇಲಾಖೆಗಳಿಗೂ, ೧೮೮೯ರಲ್ಲಿ ಅಬ್ಕಾರಿಗೂ, ೧೮೯೧ರಲ್ಲಿ ಮುಜರಾಯಿ, ಗಣಿ ಮುಂತಾದುವುಗಳಿಗೂ ಬೇರೆಬೇರೆ ಅಧಿಕಾರಿಗಳನ್ನು ನೇಮಿಸಿದರು. ೧೮೯೪ನೆಯ ಇಸವಿಯಲ್ಲಿ ರಾಜ್ಯಾದಾಯದ ವಿಚಾರಣೆಗಾಗಿ ಪ್ರತ್ಯೇಕವಾಗಿ ಒಬ್ಬ ರೆವಿನ್ಯೂ ಕಮಿಷನರನ್ನು ಗೊತ್ತುಮಾಡಿದರು. ಇದಕ್ಕೆ ಪೂರ್ವದಲ್ಲಿ ಈ ಇಲಾಖೆಯ ಕೆಲಸಗಳನ್ನೆಲ್ಲ ಒಬ್ಬ ಕೌನ್ಸಿಲರವರು ನೋಡಿಕೊಳ್ಳುವಂತೆ ನಿಷ್ಕರ್ಷೆಯಾಗಿದ್ದಿತು. ಲ್ಯಾಂಡ್ ರೆವಿನ್ಯೂ ಕೋಡಿನ ಪ್ರಕಾರ ಬರುವ ಜುಡಿಷಿಯಲ್ ವ್ಯವಹಾರಗಳನ್ನು ಗವರ್ನ್ಮೆಂಟಿನವರು ಅಪೀಲ್, ಅಥವಾ ಇತರ ವಿಧವಾದ ವಿಮರ್ಶೆಯಿಂದ ಫೈಸಲ್ಮಾಡಬೇಕಾದ ಸಂದರ್ಭದಲ್ಲಿ, ಅವನ್ನು ಇಬ್ಬರು

ಕೌನ್ಸಿಲ್ ಮೆಂಬರುಗಳು ಒಟ್ಟಾಗಿ ಸೇರಿ ನಡೆಯಿಸಬೇಕೆಂದು ನಿರ್ಣಯವಾಗಿದ್ದಿತು. ಅದರಂತೆಯೇ, ಲೋಕಲ್‌ಫಂಡು ಮ್ಯುನಿಸಿಪಲ್ ಫಂಡುಗಳ ಕಾನೂನುಗಳನ್ನು ನೂತನವಾಗಿ ಏರ್ಪಡಿಸತಕ್ಕ ಇಲಾಖೆಗಳು ಬೇರೆಬೇರೆ ಕೌನ್ಸಿಲಿಗೆ ಸಲ್ಲಿಸಿ ಕೊಡಲ್ಪಟ್ಟಿದ್ದುವು.



ಶ್ರೀಮನ್ಮಹಾರಾಜರವರು, ದಿವಾನರವರು, ಕೌನ್ಸಿಲರುಗಳು, ಛೀಫ್ ಜಡ್ಜರು, ಪ್ರೈವೇಟ್ ಮತ್ತು ಮಿಲಿಟರಿ ಸೆಕ್ರೆಟರಿ ಮುಂತಾದವರುಗಳು.

ವಿದ್ಯಾಭ್ಯಾಸದ ಇಲಾಖೆಯ ಕೆಲಸಗಳನ್ನು ಆ ಇಲಾಖೆಯ ಸೆಕ್ರೆಟರಿಯವರೇ ಬಹಳಮಟ್ಟಿಗೆ ನಿರ್ವಹಿಸುವಂತೆ ಏರ್ಪಾಡಾಯಿತು. ಇವುಗಳಲ್ಲದೆ, ನಾನಾವಿಧವಾದ ಲೋಹಗಳಿಂದ ಪರಿಪೂರ್ಣವಾದ ಈ ದೇಶದ ಖನಿಜ ಸಂಪತ್ತನ್ನು ಕಂಡುಹಿಡಿಯುವುದಕ್ಕಾಗಿ ಜಿಯೊಲಾಜಿಕಲ್ ಇಲಾಖೆಯೆಂಬ ಭೂಶೋಧನ ಶಾಖೆಯೂ, ವಾಯುವೃಷ್ಟಿಗಳ ಹೆಚ್ಚುಕಡಿಮೆಯನ್ನು ತಿಳಿಸತಕ್ಕ ವಾತವೃಷ್ಟಿ

ನಿರ್ಣಯಶಾಖೆಯೂ, ಜನರು ತಮ್ಮ ಪ್ರಾಚೀನರು ಹೊಂದಿದ್ದ ಗುಣದೋಷಗಳನ್ನು ತಿಳಿದು, ದೋಷತ್ಯಾಗಮಾಡಿ ಗುಣಾಭಿವೃದ್ಧಿಯುಳ್ಳವರಾಗಲೆಂದು ಪ್ರಾಚೀನರ ಚರಿತ್ರೆ ಮುಂತಾದುವುಗಳನ್ನು ತಿಳಿಸುವ ಶಾಸನಾದಿಗಳನ್ನು ಕಂಡುಹಿಡಿಯುವುದಕ್ಕಾಗಿ ಲಿಪ್ಯನ್ವೇಷಣಶಾಖೆಯೂ, ರಾಜ್ಯದಲ್ಲಿ ನೌಕರಿಮಾಡಿ ದರಿದ್ರರಾಗಿಯೇ ಇದ್ದುಕೊಂಡು, ಕುಟುಂಬಕ್ಕೆ ಆಸ್ತಿಸ್ವಾಸ್ಥ್ಯಗಳನ್ನು ಸಂಪಾದನೆ ಮಾಡದೆ ಗತಿಸುವ ಸರಕಾರೀ ಸೇವಕರಿಗಾಗಿ, ಲೈಫ್ ಇನ್‌ಷ್ಯೂರೆನ್ಸ್ ಇಲಾಖೆಯೆಂಬ ಆಪದ್ಧನ ಸಹಾಯಕಶಾಖೆಯೂ, ಹೆಚ್ಚಾದ ಬಡ್ಡಿಯನ್ನು ತೆತ್ತು ತೆತ್ತು ಫಲವಿಲ್ಲದೆ ವೃಥಾ ಶ್ರಮಪಡುತ್ತಿರುವ ಬಡರೈತರ ಉಪಯೋಗಕ್ಕಾಗಿ ವ್ಯವಸಾಯದ ಬ್ಯಾಂಕುಗಳೂ ಸ್ಥಾಪಿತವಾದುವು. ಈ ಬ್ಯಾಂಕುಗಳಿಗೆ ಹದಿನಾಲ್ಕು ಲಕ್ಷ ರೂಪಾಯಿಗಳನ್ನು ಸರಕಾರದವರು ಮೂಲಧನವಾಗಿ ಕೊಟ್ಟರು. ಇದಲ್ಲದೆ, ಬಡಬಗ್ಗರಿಗೆ ಬಡ್ಡಿಯಿಲ್ಲದೆ ಸಾಲ ಕೊಡಿಸಿ, ಅವರ ತಲಬಿನ ಕೆಲವಂಶದಿಂದ ಅದನ್ನು ತೀರಿಸಿಕೊಳ್ಳಬೇಕೆಂಬ ಶ್ಲಾಘ್ಯವಾದ ಪದ್ಧತಿಯೊಂದನ್ನು ಆಚರಣೆಗೆ ತಂದರು. ದೇವಾಲಯಗಳಲ್ಲಿ ಶಾಸ್ತ್ರಮರ್ಯಾದೆಯಿಂದ ಪೂಜೆ ಪುರಸ್ಕಾರಗಳು ನಡೆಯುವಂತೆ ನೋಡಿಕೊಳ್ಳುವುದಕ್ಕೆ ಮುಜರಾಯಿ ಇಲಾಖೆಯನ್ನು ಸ್ಥಾಪಿಸಿ, ಶಿಥಿಲವಾಗಿದ್ದ ಅನೇಕ ಸತ್ರ, ಮಠ, ಮಸೀದಿಗಳನ್ನೆಲ್ಲ ಜೀರ್ಣೋದ್ಧಾರ ಮಾಡಿದರು. ಖಿಸ್ತುಬಂದಿಯ ವಿಷಯದಲ್ಲಿ ಮೊದಲು ರೂಢಿಯಲ್ಲಿದ್ದ ವಾಯಿದೆಗಳ ಪ್ರಕಾರ ಕಂದಾಯವನ್ನು ವಸೂಲ್ಮಾಡುವಾಗ, ರೈತರು ತಮ್ಮ ಫಸಲನ್ನು ಅವಸರಾವಸರದಲ್ಲಿ ಮಾರಿ ನಷ್ಟಕ್ಕೆ ಗುರಿಯಾಗುತ್ತಿದ್ದುದನ್ನು ಪರಿಹಾರ ಮಾಡುವುದಕ್ಕೋಸ್ಕರ ಖಿಸ್ತುಗಳ ವಾಯಿದೆಯನ್ನು ಎರಡು ತಿಂಗಳು ಮುಂದಕ್ಕೆ ತಳ್ಳಲು ಅಪ್ಪಣೆಯನ್ನು ಮಾಡಿದರು. ಭೂ ವ್ಯವಸಾಯ ವಿಧಿಗಳನ್ನೆಲ್ಲ ಕ್ರೋಡೀಕರಿಸಿ, ಒಂದು ಕಾನೂನನ್ನು ಏರ್ಪಡಿಸಿ, ಜಮೀನಿನ ಹಿಡುವಳಿಯ ಮತ್ತು ವರ್ಗಾವರ್ಗಿಯ ವಿಷಯದಲ್ಲಿ ರೈತರಿಗಿದ್ದ ಕಿರುಕುಳವನ್ನು ನಿವಾರಣೆ ಮಾಡಿದರು. ಬೆಂಗಳೂರು ಮೈಸೂರು ಮೊದಲಾದ ಅನೇಕ ಸ್ಥಳಗಳಲ್ಲಿ ಕುಡಿಯುವ ನೀರಿನ ದುರ್ಭಿಕ್ಷದಿಂದ ಜನರು ಪಡುತ್ತಿದ್ದ ಕಷ್ಟಗಳನ್ನು ನೋಡಿ ಸಹಿಸಲಾರದೆ, ಪ್ರಸಿದ್ಧರಾದ ಬ್ರಿಟಿಷ್ ಎಂಜನಿಯರುಗಳಿಗೂ ಅಸಾಧ್ಯವಾಗಿ ತೋರುತ್ತಿದ್ದ ಕಾರಂಜೀ ಕೆಲಸಗಳನ್ನು ಮಾಡಿಸಿ, ಜಲನಾಳಗಳ ಮೂಲಕ ನೀರನ್ನು ತಂದು ಕ್ಷೋಭೆಗೊಂಡಿದ್ದ ಪ್ರದೇಶಗಳಿಗೆಲ್ಲ ಜಲಸಮೃದ್ಧಿಯನ್ನು ಕಲ್ಪಿಸಿದರು.

ಸಂಸ್ಕೃತ ವಿದ್ಯಾಭ್ಯಾಸವು ಕ್ಷೀಣದಶೆಯಲ್ಲಿದ್ದುದನ್ನು ತಿಳಿದು, ಆ ಭಾಷೆಯ ಪುನರುಜ್ಜೀವನಾರ್ಥವಾಗಿ ಸರಸ್ವತೀ ಪ್ರಸಾದವೆಂಬ ನಾಮಾಂಕಿತದಿಂದ ಸಂಸ್ಕೃತ ಮಹಾಪಾಠಶಾಲೆಯೊಂದನ್ನು ಸ್ಥಾಪಿಸಿ, ವಿದ್ಯಾರ್ಥಿಗಳಿಗೆಲ್ಲ ಮಾಸಾಶನಗಳನ್ನು ಗೊತ್ತುಮಾಡಿದರು. ಪ್ರತಿವರುಷದ ಭಾದ್ರಪದ ಮಾಸದಲ್ಲಿ ಎಲ್ಲ ಸ್ಥಳದ ವಿದ್ವಾಂಸರೂ ವಿದ್ಯಾರ್ಥಿಗಳೂ ಒಂದು ರಾಜಧಾನಿಯಲ್ಲಿ ಸಭೆ ಸೇರುವಂತೆಯೂ, ವಿದ್ಯಾಪರೀಕ್ಷೆಯಾದನಂತರದಲ್ಲಿ ಅವರವರ ಯೋಗ್ಯತಾನುಸಾರವಾಗಿ ಶರನ್ನವರಾತ್ರಿಯ

ದರ್ಬಾರಿನಲ್ಲಿ ಮಹಾಸ್ವಾಮಿಯವರ ದಿವ್ಯಹಸ್ತದಿಂದಲೇ ಪಾರಿತೋಷಕಗಳನ್ನೂ ಬಿರುದುಗಳನ್ನೂ ಕೊಡುವಂತೆಯೂ ಏರ್ಪಡಿಸಿದರು. ಈಗ ಈ ಪಾಠಶಾಲೆಯು ಶಾಸ್ತ್ರಪಾಠ ಪ್ರವಚನಗಳಿಗೆ ತೌರುಮನೆಯೆನಿಸಿಕೊಂಡು ಸುಶಿಕ್ಷಿತರಾದ ಬಹುಮಂದಿ ವಿದ್ವಾಂಸರುಗಳಿಂದ ಭರತಖಂಡವನ್ನೇ ಬೆಳಗುತ್ತಿರುವುದು. ಇವಲ್ಲದೆ, ಮಹಾರಾಜರು ಕೆಲವರಿಗೆ ವಿದ್ಯಾವ್ಯಾಸಂಗಕ್ಕಾಗಿ ವೇತನಗಳನ್ನು ಕೊಟ್ಟು ಸಂಸ್ಕೃತದಲ್ಲಿ ದಿಗ್ದಂತಿಗಳಾದಪಂಡಿತರಾಗುವಂತೆ ಕಾಶಿಗೂ, ಮತ್ತೆ ಕೆಲವರಿಗೆ ಇಂಗ್ಲಿಷಿನಲ್ಲಿ ವೈದ್ಯಶಾಸ್ತ್ರ, ಶಿಲ್ಪಶಾಸ್ತ್ರ, ನ್ಯಾಯಶಾಸ್ತ್ರ ಮೊದಲಾದುವುಗಳ ಅಭ್ಯಾಸಕ್ಕಾಗಿ ಮುಂಬಯಿ, ಮದರಾಸು, ಪುಣೆ, ರೂರ್ಕಿ, ಡೆಹರಾಡೂನ್ ಮೊದಲಾದ ಸ್ಥಳಗಳಿಗೂ ಪಾಶ್ಚಾತ್ಯ ದೇಶಗಳಿಗೂ ಕಳುಹಿಸಿಕೊಡುತ್ತಿದ್ದರು.

ಕನ್ನಡವು ದಿನೇದಿನೇ ಖಿಲವಾಗುತ್ತಿರುವುದನ್ನು ತಿಳಿದು, ಅದನ್ನಭಿವೃದ್ಧಿಪಡಿಸಲು ಕರ್ಣಾಟಕ ಭಾಷೋಜ್ಜೀವಿನೀ ಪಾಠಶಾಲೆಯನ್ನು ಏರ್ಪಡಿಸಿದರು. ವಿದ್ವಾಂಸರನ್ನೂ ಕವಿಗಳನ್ನೂ ಆದರಿಸುತ್ತ ಕರ್ಣಾಟಕ ಸಂಸ್ಕೃತ ಇಂಗ್ಲಿಷ್ ಹಿಂದೂಸ್ಥಾನಿ ಮೊದಲಾದ ಭಾಷೆಗಳು ಉಚ್ಛ್ರಾಯಸ್ಥಿತಿಯನ್ನೈದುವಂತೆ ಹಲವು ಪ್ರಯತ್ನಗಳನ್ನು ಮಾಡುತ್ತಿದ್ದುದರಿಂದ, ಕವಿಗಳೆಲ್ಲರೂ ಮಹಾರಾಜರನ್ನು ಕಲಿಯುಗದ ಭೋಜನೆಂದು ಕರೆಯುತ್ತಿದ್ದರು. ದೇಶಹಿತೈಷಿಗಳಾದ ಈ ಮಹಾರಾಜರವರ ಆಳಿಕೆಯಲ್ಲಿ ಪ್ರೈಮರಿ ಸ್ಕೂಲುಗಳೆಂಬ ಕರ್ಣಾಟಕ ಪ್ರಾಥಮಿಕ ವಿದ್ಯಾಶಾಲೆಗಳು ಎಂಟುನೂರು, ಇಂಗ್ಲಿಷ್ ಪಾಠಶಾಲೆಗಳು ಐವತ್ತು, ಶಿಲ್ಪವಿದ್ಯಾ ಪಾಠಶಾಲೆಗಳು ಐದು, ಉಪಾಧ್ಯಾಯರನ್ನು ತಯಾರುಮಾಡುವ ನಾರ್ಮಲ್ ಸ್ಕೂಲುಗಳು ಎರಡು, ಸಂಸ್ಕೃತ ಪಾಠಶಾಲೆಗಳು ಮೂವತ್ತು, ಬಿ. ಎ. ಪರೀಕ್ಷೆಯ ವರೆಗೆ ಪಾಠಹೇಳುವ ಫಸ್ಟ್‌ಗ್ರೇಡ್ ಕಾಲೇಜು ಒಂದು, ಸಂಸ್ಕೃತ ಪ್ರೌಢಪಾಠಶಾಲೆಗಳು ಮೂರು—ಇವುಗಳು ಹೊಸದಾಗಿ ಏರ್ಪಾಡಾದುವು. ಪ್ರಜೆಗಳ ವಿದ್ಯಾಭಿವೃದ್ಧಿಗೆ ಪಾಠಶಾಲೆಗಳು ಮಾತ್ರವಲ್ಲದೆ ಪುರಾತನ ನವೀನ ಗ್ರಂಥಗಳ ಪ್ರಾಚುರ್ಯವೂ ಪರಮ ಸಹಾಯಕವೆಂದು ನಿಶ್ಚಯಿಸಿ ರಾಜಧಾನಿಯಲ್ಲಿ ಓರಿಯಂಟಲ್ ಲೈಬ್ರರಿಯೆಂಬ ಪ್ರಾಚೀನ ಪುಸ್ತಕ ಭಂಡಾರವನ್ನು ಸ್ಥಾಪಿಸಿದುದಲ್ಲದೆ, ಸರಕಾರದ ಮುದ್ರಾಶಾಲೆಗಳ ಕೆಲಸವನ್ನು ಹೆಚ್ಚುಮಾಡಿ, ಸಹಸ್ರಸಂಖ್ಯಾಕವಾಗಿ ಸಂಸ್ಕೃತ ಕರ್ಣಾಟಕ ಭಾಷೆಗಳಲ್ಲಿ ಪ್ರೌಢಗ್ರಂಥಗಳನ್ನು ಮುದ್ರಿಸಿ ಪ್ರಕಟಿಸುವಂತೆ ಮಾಡಿದರು.

ಶ್ರೀಚಾಮರಾಜೇಂದ್ರ ಒಡೆಯರವರ ಆಸ್ಥಾನವು ಸರ್ವದಾ ಕವಿಗಳಿಂದಲೂ, ಐತಿಹಾಸಿಕರಿಂದಲೂ, ಗಣಿತ ಶಾಸ್ತ್ರಜ್ಞರಿಂದಲೂ, ತರ್ಕವ್ಯಾಕರಣ ಮೀಮಾಂಸಾದಿ ಚತುಶ್ಶಾಸ್ತ್ರ ಪಂಡಿತರಿಂದಲೂ, ಗಾಯಕ ಶ್ರೇಷ್ಠರಿಂದಲೂ, ವೈಣಿಕ ಶಿಖಾಮಣಿಗಳಿಂದಲೂ ಶೋಭಿಸುತ್ತ ಗೀರ್ವಾಣವಾಣಿಯ ನಾಟ್ಯವೈಭವಕ್ಕೆ ಮನೋಹರವಾದ ರಂಗವೆನಿಸಿದ್ದಿತು. ಆಸ್ಥಾನದಲ್ಲಿ ಬಹು ಕಾಲದಿಂದಲೂ ಶೇಖರಿಸಿಟ್ಟಿದ್ದ ಅಪೂರ್ವ

ಗ್ರಂಥಸಮುದಾಯ ಪೂರಿತವಾದ ಸರಸ್ವತೀ ಭಂಡಾರವು * ಭರತಖಂಡದಲ್ಲೆಲ್ಲಾ ಪ್ರಖ್ಯಾತವಾಗಿದ್ದಿತು.

ಈ ಮಹಾರಾಜರವರ ಕಾಲದಲ್ಲಿ ಆಸ್ಥಾನ ಕರ್ಣಾಟಕ ಕವಿಗಳೊಳಗೆ ಅಭಿನವ ಕಾಳಿದಾಸನೆಂದು ಪ್ರಖ್ಯಾತಿಗೊಂಡ ಬಸವಪ್ಪಶಾಸ್ತ್ರಿಗಳು ಒಬ್ಬರಾಗಿದ್ದರು. ಇವರು ಕಾಳಿದಾಸಾದಿ ಕವಿಶ್ರೇಷ್ಠರಿಂದ ರಚಿತವಾದ ಶಾಕುಂತಲ, ಉತ್ತರರಾಮ ಚರಿತ್ರೆ, ಷೇಕ್ಸ್‌ಪಿಯರ್ ಕವಿಯ ಒಥೆಲೋ (ಶೂರಸೇನ ಚರಿತ್ರೆ) ಮುಂತಾದ ಅನೇಕ ನಾಟಕಗಳನ್ನೂ, ಭರ್ತೃಹರಿ ಸುಭಾಷಿತದ ಶತಕತ್ರಯವನ್ನೂ ಕನ್ನಡಿಸಿ, ಸ್ತ್ರೀಯರಿಗಾಗಿ ದಮಯಂತೀ ಸ್ವಯಂವರ, ಸಾವಿತ್ರೀ ಚರಿತ್ರೆ ಮೊದಲಾದ ಕಾವ್ಯಗಳನ್ನೂ ಬರೆದರು. ಆಸ್ಥಾನದಲ್ಲಿ ಬಸವಪ್ಪಶಾಸ್ತ್ರಿಗಳು ಮಾತ್ರವಲ್ಲದೆ, ತರ್ಕತೀರ್ಥಾಚಾರ್ಯ ಪಂಡಿತರತ್ನಂ ಕಸ್ತೂರಿ ರಂಗಾಚಾರ್ಯರು, ಪಂಡಿತರತ್ನಂ ಸೀತಾರಾಮಶಾಸ್ತ್ರಿಗಳು, ಕುಂಭಕೋಣಂ ಶೇಷಾಚಾರ್ಯರು, ಕಾಶೀ ರಾಮಶೇಷಶಾಸ್ತ್ರಿಗಳು, ಚಾಮರಾಜನಗರದ ರಾಮಶಾಸ್ತ್ರಿಗಳು, ದ್ವಿವೇದಿ ಸುಬ್ರಹ್ಮಣ್ಯಾವಧಾನಿಗಳು, ಪಂಡಿತರತ್ನಂ ಸುಂದರ ಶಾಸ್ತ್ರಿಗಳು—ಇವರೇ ಮೊದಲಾದ ಅನೇಕ ಮಂದಿ ಪಂಡಿತೋತ್ತಮರಿದ್ದರು. ಅವರನ್ನೆಲ್ಲ ಶ್ರೀಮನ್ಮಹಾರಾಜರವರು ಯಥಾಯೋಗ್ಯವಾದ ಮರ್ಯಾದೆಯಿಂದಲೂ ಗೌರವದಿಂದಲೂ ದ್ರವ್ಯಸಹಾಯದಿಂದಲೂ ಪ್ರೋತ್ಸಾಹಗೊಳಿಸುತ್ತಿದ್ದರು. ಇದಲ್ಲದೆ, ಶ್ರೀಮನ್ಮಹಾರಾಜರವರು ಆಗಾಗ್ಗೆ ಶಾಸ್ತ್ರಾರ್ಥವಿಚಾರವನ್ನೂ ವಿದ್ವಾಂಸರುಗಳ ವೈದುಷ್ಯವನ್ನೂ ತಿಳಿಯಬೇಕೆಂಬುದಾಗಿ ಶೃಂಗೇರೀ ನೃಸಿಂಹ ಭಾರತೀ ಸ್ವಾಮಿಗಳನ್ನೂ, ಮೈಸೂರಿನ ಪರಕಾಲಸ್ವಾಮಿಗಳನ್ನೂ, ಉಡುಪಿಯ ಮಧ್ವಸಿದ್ಧಾಂತಿಗಳನ್ನೂ ಆಸ್ಥಾನಕ್ಕೆ ಬರಮಾಡಿಕೊಂಡು, ವಿದ್ವತ್ಸಭೆಗಳನ್ನು ನಡೆಯಿಸಿ ಪಂಡಿತರುಗಳಿಗೆ ವಿಶೇಷವಾಗಿ ಉತ್ತೇಜನವನ್ನು ಕೊಡುತ್ತಿದ್ದರು. ಇದರಿಂದ, ಪ್ರೌಢವಿದ್ವಾಂಸರಿಗೂ ಶಾಸ್ತ್ರಾಧ್ಯಯನಾಸಕ್ತರಾದ ವಿದ್ಯಾರ್ಥಿಗಳಿಗೂ ಎಂತಹ ಸ್ಪರ್ಧೆಯೂ ಉತ್ಸಾಹವೂ ಉಂಟಾಗಿರಬೇಕು !

ಸಂಸ್ಥಾನದ ಅಧಿಕಾರಿಗಳಲ್ಲಾಗಲಿ ಪಂಡಿತ ಮಂಡಲಿಯಲ್ಲಾಗಲಿ ಪ್ರಜಾಹಿತ ಕಾರ್ಯಗಳನ್ನು ಅಪ್ರೇರಿತರಾಗಿ ಮಾಡಿ ಧರ್ಮವನ್ನು ಸಂಪಾದಿಸುವುದರಲ್ಲಿ ಯಾರಾದರೂ ವಿಶೇಷಾಸಕ್ತಿಯನ್ನು ತೋರ್ಪಡಿಸಿದರೆ ಅಂಥವರಿಗೆ ಶ್ರೀಮನ್ಮಹಾರಾಜರವರು ಅವರವರ ಅಧಿಕಾರ, ಪಾಂಡಿತ್ಯ, ಧರ್ಮಕಾರ್ಯಗಳಿಗೆ ಅನುಗುಣವಾಗಿ ಬಿರುದುಗಳನ್ನೂ ವಸ್ತ್ರಭೂಷಣಾದಿ ಮರ್ಯಾದೆಗಳೊಡನೆ ಕೊಡತಕ್ಕದೆಂದು ನಿರ್ಣಯ ಮಾಡಿದರು. ರಾಜ್ಯಕಾರ್ಯ ನಿರ್ವಹಣದಲ್ಲಿ ಸಮರ್ಥರೆನಿಸಿಕೊಂಡವರಿಗೆ ರಾಜ್ಯಧುರಂಧರ, ರಾಜಸಭಾಭೂಷಣ, ರಾಜಧರ್ಮಪ್ರವೀಣ, ರಾಜಮಂತ್ರಪ್ರವೀಣ, ರಾಜಕಾರ್ಯಪ್ರಸಕ್ತ ಮೊದಲಾದ ಬಿರುದುಗಳನ್ನೂ; ಸೈನ್ಯಾಧಿಪತ್ಯದಲ್ಲಿ ಶಕ್ತರಾದವ

* ೧೮೯೭ರಲ್ಲಿ ಅರಮನೆಗೆ ಸಂಭವಿಸಿದ ಅಗ್ನಿಪಾತದಲ್ಲಿ ಅನೇಕ ಗ್ರಂಥಗಳಿದ್ದ ಈ ಅಮೂಲ್ಯ ವಿದ್ಯಾಧನರಾಶಿಯು ನಾಶವಾಯಿತು.

ರಿಗೆ ರಾಜಸೇನಾಭೂಷಣ, ಲಫ್ಟಿನಂಟ್ ಕರ್ನಲ್ ಮೊದಲಾದ ಬಿರುದುಗಳನ್ನೂ; ಧರ್ಮಕಾರ್ಯ ನಿರತರಾದವರಿಗೆ ಧರ್ಮರತ್ನಾಕರ, ಧರ್ಮಪ್ರವೃತ್ತ, ಧರ್ಮನಿರತ ಮೊದಲಾದ ಬಿರುದುಗಳನ್ನೂ; ಅಪಾರ ವಿದ್ಯಾವೈದುಷ್ಯವನ್ನು ಪಡೆದವರಿಗೆ ಪಂಡಿತರತ್ನಂ, ವಿದ್ಯಾನಿಧಿ, ವೇದಾಂತ ವಿಶಾರದ ಮೊದಲಾದ ಬಿರುದುಗಳನ್ನೂ; ಮಹಮ್ಮದೀಯರಲ್ಲಿ ಪ್ರಖ್ಯಾತರಾದವರಿಗೆ ಷೇಕ್-ಉಲ್ ಮಷಾಯಿಖೇನ್, ಸಿರಾಜುಲ್ ಉಲ್ಮಾ, ಜೌಹೀರೆ-ಮಜಲಿಸ್ ಮೊದಲಾದ ಗೌರವಾವಹ ಬಿರುದುಗಳನ್ನೂ ಕೊಟ್ಟು ಮನ್ನಿಸಿದರು. ರಾಜ್ಯದಲ್ಲಿ ವಿದ್ಯಾಪಕ್ಷಪಾತಿಗಳೂ ಧರ್ಮಪ್ರವರ್ತಕರೂ ಆದವರು ಧರ್ಮಕಾರ್ಯಗಳಿಗಾಗಿ ದ್ರವ್ಯಸಂಚಯ ಮಾಡಿದ ಕಾಲದಲ್ಲಿ, ಆ ಸಂಚಿತ ಧನವನ್ನು ಸರಕಾರದ ಭಂಡಾರದಲ್ಲಿಟ್ಟು ಅದಕ್ಕೆ ಸೇಕಡ ಐದರಂತೆ ಬಡ್ಡಿ ಕೊಡತಕ್ಕದೆಂದು ಏರ್ಪಾಡು ಮಾಡಿದರು. ಪ್ರಜಾಹಿತ ಕಾರ್ಯಗಳಿಗೆ ಈ ಏರ್ಪಾಡು ಪರಮ ಪ್ರೋತ್ಸಾಹಕರವಾಗಿದ್ದಿತು.

ಮೈಸೂರು ಸಂಸ್ಥಾನದ ರಾಜಚಿಹ್ನೆ.

ಶ್ರೀಮನ್ಮಹಾರಾಜರವರು ಪಾಳೆಯಗಾರರನ್ನು ಒಳ್ಳೆಯ ಸ್ಥಿತಿಗೆ ತರಬೇಕೆಂಬ ಆಶಯದಿಂದ ಅವರ ಮಾಸಾಶನಗಳನ್ನು ಬಡತಿಮಾಡಿಕೊಟ್ಟುದಲ್ಲದೆ, ಅವರೂ ಮುಸಲ್ಮಾನರೂ ಪಂಚಮರೂ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸದಿರುವುದನ್ನು ತಿಳಿದು, ವಿದ್ಯಾವಂತರಾಗಲೆಂದು ಅವರೆಲ್ಲರಿಗೂ ವೇತನಗಳನು ಕೊಟ್ಟು ಪ್ರೋತ್ಸಾಹಿಸಿದರು. ಅರಸುಮಕ್ಕಳ ವಿದ್ಯಾಭ್ಯಾಸಕ್ಕಾಗಿ ರಾಜಧಾನಿಯಲ್ಲಿ ಒಂದು ಪಾಠಶಾಲೆಯನ್ನು ಸ್ಥಾಪಿಸಿ, ಅವರ ಭೋಜನಾದಿಗಳಿಗೆ ವಸತಿಮಾಡಿ ಕೊಟ್ಟರು. ನೇಯ್ಗೆಯವರು ದಿನೇದಿನೇ ಕ್ಷೀಣಗತಿಯನ್ನು ಹೊಂದುತ್ತಿದ್ದುದರಿಂದ, ಅವರಿಗೆಲ್ಲ ಅನೇಕ ಸೌಕರ್ಯಗಳನ್ನು ಕಲ್ಪಿಸಿ ಸರಕಾರದಿಂದ ದ್ರವ್ಯಸಹಾಯ ಮಾಡಿದುದಲ್ಲದೆ, ರಾಜಧಾನಿಯಲ್ಲಿ ಶಾಲ್ಯ, ಕಂಚಿ, ಮಧುರೆ ಮುಂತಾದ ಸ್ಥಳಗಳಿಂದ ಬುದ್ಧಿಶಾಲಿಗಳಾದ ನೆಯ್ಗೆಯವರನ್ನೂ ಕಾಲೇಗಾರರನ್ನೂ ತಂದಿಟ್ಟರು. ಈ ಭಾಗವು ಈಗಲೂ ರಾಜಧಾನಿಯ ಪಶ್ಚಿಮ ಭಾಗದಲ್ಲಿ 'ವೀವರ್ಸ್ ಲೈನ್ಸ್' ಎಂಬ ಹೆಸರಿನಿಂದ ಮೆರೆಯುತ್ತಿರುವುದ

ಶ್ರೀಮನ್ಮಹಾರಾಜರವರಿಗೆ ಸಂಗೀತ ಶಾಸ್ತ್ರದಲ್ಲಿಯೂ ನಾಟಕಾವಲೋಕನದಲ್ಲಿಯೂ ವಿಶೇಷವಾದ ಅಭಿರುಚಿಯಿದ್ದಿತು. ಈ ಕಾರಣದಿಂದಲೇ ಅರಮನೆಯಲ್ಲಿದ್ದ ರಾಗಮಾಲು ಕೊಟ್ಟಡಿ ಎನ್ನುವ ತೊಟ್ಟಿಯಲ್ಲಿ ಶೇಖರಿಸಿಟ್ಟಿದ್ದ ಅನೇಕ ವಿಧವಾದ ವಾದ್ಯ ವಿಶೇಷಗಳು ಅತ್ಯಾಶ್ಚರ್ಯಕರಗಳಾಗಿರುವಂತೆ ಜೋಡಿಸಲ್ಪಟ್ಟಿದ್ದುವು. ಇವುಗಳನ್ನೂ ಇವುಗಳ ರಚನಾಕ್ರಮವನ್ನೂ ಜೋಡಣೆಯನ್ನೂ ನೋಡಿದರೆ, ಒಂದು ಪ್ರದರ್ಶನ ಶಾಲೆಗೆ ಹೋದಂತೆ ಭ್ರಾಂತಿಯುಂಟಾಗುತ್ತಿದ್ದಿತು. ಕಲ್ಕತ್ತಾ, ಮುಂಬಯಿ ಮೊದಲಾದ ದೊಡ್ಡ ಪಟ್ಟಣಗಳಿಗೆ ಹೋದಾಗಲೆಲ್ಲ ಅಲ್ಲಲ್ಲಿಯ ಪ್ರಖ್ಯಾತವಾದ ನಾಟಕ ಶಾಲೆಗಳಿಗೆ ತಮ್ಮ ಪರಿವಾರದ ಮುಖ್ಯಸ್ಥರೊಡನೆ ಹೋಗುತ್ತಿದ್ದರು. ದೇಶಾಂತರಗಳಿಂದ ಬರುವ ಸಂಗೀತಗಾರರಿಗೂ ಚಿತ್ರಕಾರರಿಗೂ ನಾಟಕದವರಿಗೂ ಆಸ್ಥಾನದಲ್ಲಿ ವಿಶೇಷವಾದ ಬಹುಮಾನವು ದೊರೆಯುತ್ತಿದ್ದಿತು. ಅರಮನೆಯಲ್ಲಿದ್ದ ಇಂಗ್ಲಿಷ್ ಬ್ಯಾಂಡಿನ ವಾದ್ಯಕಾರರು ಭರತಖಂಡದಲ್ಲೆಲ್ಲ ಪ್ರಖ್ಯಾತರಾಗಿದ್ದರು.

ಪೂರ್ವದಲ್ಲಿ ಮೈಸೂರು ದೇಶದಲ್ಲಿ ಈಗಿನಂತೆ ಸಂಗೀತದೊಡನೆಯೂ ಸಂದರ್ಭಕ್ಕೆ ತಕ್ಕ ವಸ್ತುಪ್ರದರ್ಶನಗಳೊಡನೆಯೂ ಆಡತಕ್ಕ ನಾಟಕಗಳಿರಲಿಲ್ಲ. ಈ ದೇಶೀಯರು ಅವುಗಳ ಗಂಧವನ್ನೇ ಅರಿಯರು. ಹೀಗಿರುವಲ್ಲಿ, ಮಹಾರಾಜರು ಒಂದು ಕಾಲದಲ್ಲಿ ಮುಂಬಯಿ ಪಾರ್ಸೀ ನಾಟಕಶಾಲೆಗೆ ಹೋಗಿದ್ದಾಗ, ಅವರು ಆಡಿದ ನಾಟಕವನ್ನು ನೋಡಿ, ತಮ್ಮ ದೇಶೀಯರಿಂದಲೂ ಅಂತಹ ನಾಟಕಗಳನ್ನು ಆಡಿಸಬೇಕೆಂಬ ಆಲೋಚನೆ ಹುಟ್ಟಿ, ರಾಜಧಾನಿಗೆ ಹಿಂದಿರುಗಿ ಬರುವಾಗ, ನಾಟಕಕ್ಕೆ ಉಪಯುಕ್ತಗಳಾದ ವಸ್ತ್ರಾಭರಣಗಳೇ ಮುಂತಾದ ಸಾಮಾನುಗಳನ್ನು ತಂದರು. ಕಾಳಿದಾಸ, ಶ್ರೀಹರ್ಷ, ದಂಡಿ, ಭವಭೂತಿ ಮೊದಲಾದ ಕವಿಕುಲ ಚೂಡಾಮಣಿಗಳಿಂದ ರಚಿತವಾದ ಅನೇಕ ಸಂಸ್ಕೃತ ನಾಟಕಗಳನ್ನೂ ಇಂಗ್ಲಿಷ್ ನಾಟಕಗಳನ್ನೂ ಕನ್ನಡದಲ್ಲಿ ಭಾಷಾಂತರ ಮಾಡಿಸಿದರು. ಸಂಗೀತಗಾರರಿಗೂ ಕವಿಗಳಿಗೂ ಆಸ್ಥಾನದಲ್ಲಿ ಆಶ್ರಯ ಸಿಕ್ಕುವುದಕ್ಕೆ ಇದೇ ಮೊದಲು; ನಾಟಕಕ್ಕೆ ಬೇಕಾದ ಸಕಲೋಪಕರಣಗಳನ್ನೂ ಅಣಿಮಾಡಿಕೊಟ್ಟು, ವಿದ್ಯಾವಂತರುಗಳಿಂದ ಕೂಡಿದ ಒಂದು ನಾಟಕ ಸಂಘವನ್ನು "ಶ್ರೀ ಚಾಮರಾಜೇಂದ್ರ ಕರ್ಣಾಟಕ ನಾಟಕ ಸಭಾ" ಎಂಬ ಅಭಿಧಾನದಿಂದ ಏರ್ಪಡಿಸಿದರು. ಇದರಿಂದ, ನಮ್ಮ ದೇಶೀಯರು ಅನೇಕ ವಿಧವಾದ ನವನಾಗರಿಕತೆಯ ಪ್ರವಾಹದಲ್ಲಿ ಸುತ್ತಾಡಲು ಮೊದಲಾಯಿತು. ನಾಟಕವಲ್ಲದೆ, ತಮ್ಮ ವಿನೋದಕ್ಕೂ ಅತಿಥಿ ಅಭ್ಯಾಗತರ ವಿನೋದಕ್ಕೂ ಒಂದು ಸರ್ಕಸ್ಸನ್ನೂ ಸಹ ಏರ್ಪಡಿಸಿದ್ದರು.

ಶ್ರೀಚಾಮರಾಜೇಂದ್ರ ಒಡೆಯರವರು ಪ್ರಜೆಗಳ ಶ್ರೇಯಸ್ಸಾಧನೆಗೆ ಆವಶ್ಯಕವಾದ ಕಾರ್ಯಗಳನ್ನು ಹಗಲೂ ಇರುಳೂ ಚಿಂತಿಸುತ್ತ, ದೇಶದ ಸ್ಥಿತಿಯನ್ನೂ ಪ್ರಜೆಗಳ ರೀತಿಯನ್ನೂ ತಿಳಿದುಕೊಳ್ಳುವುದಕ್ಕಾಗಿ ಅನೇಕ ವೇಳೆ ದೇಶಾಟನವನ್ನು ಮಾಡಿದರು. ಇತರ ದೇಶೀಯ ಸಂಸ್ಥಾನಗಳಲ್ಲೂ ಇಂಗ್ಲಿಷರ ಆಳಿಕೆಗೆ ಒಳಪಟ್ಟ ದೇಶಗಳಲ್ಲೂ ನಡೆಯುವ ರಾಜ್ಯಭಾರ ಕ್ರಮಗಳನ್ನೂ ಅಲ್ಲಿಯ ಪ್ರಜೆಗಳ ಸ್ಥಿತಿಯನ್ನೂ

ತಿಳಿದುಕೊಂಡು, ಆ ತಿಳಿವಳಿಕೆಯ ಮೂಲಕ ತಮ್ಮ ದೇಶದ ಆಡಳಿತಗಳನ್ನು ತಿದ್ದುಪಾಟು ಮಾಡಬೇಕೆಂಬ ಆಲೋಚನೆಯಿಂದಲೂ, ಅಲ್ಲಿಯ ಪ್ರಜೆಗಳ ಸ್ಥಿತಿಗಿಂತಲೂ ತಮ್ಮ ಪ್ರಜೆಗಳ ಸ್ಥಿತಿಯನ್ನು ಉತ್ತಮರೀತಿಗೆ ತರಬೇಕೆಂಬ ಕುತೂಹಲದಿಂದಲೂ, ಅನೇಕಾವೃತ್ತಿ ಉತ್ತರ ಹಿಂದೂಸ್ಥಾನದಲ್ಲೆಲ್ಲ ಸಂಚರಿಸಿದರು. ಅದಕ್ಕನುಗುಣವಾಗಿ ತಮ್ಮ ಪ್ರಜೆಗಳನ್ನಾಳುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿ, ದಿವಾನಗಿರಿ ಮೊದಲುಗೊಂಡು ಸಕಲ ಅಧಿಕಾರಗಳಿಗೂ ಸಾಧ್ಯವಾದ ಮಟ್ಟಿಗೆ ಸ್ವದೇಶೀಯರನ್ನೇ ನಿಯಮಿಸಿ, ಕ್ಲ್ಪಪ್ತಕಾಲಗಳಲ್ಲಿ ಪ್ರಜೆಗಳ ಕಷ್ಟಸುಖಗಳನ್ನು ವಿಚಾರಿಸುತ್ತ ಬಹಳ ಮಟ್ಟಿಗೆ ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾದರು. ಅವರ ರಾಜ್ಯಭಾರವು ಪ್ರಜೆಗಳಿಗೆ ಹಿತವಾಗಿದ್ದುದಲ್ಲದೆ ಇಂಗ್ಲಿಷರಿಗೂ ಬಹು ಮೆಚ್ಚಾಗಿದ್ದಿತು. ಆದುದರಿಂದಲೇ ಪ್ರಜೆಗಳು ಅವರನ್ನು ಈ ರೀತಿಯಾಗಿ ಕೊಂಡಾಡುತ್ತಿದ್ದರು :—

ಭರತಖಂಡವನೆಲ್ಲ ಬಳಸುತ ।
ಧರಣಿಪಾಲರ ಸ್ನೇಹ ಬೆಳಸುತ ।
ಪರಮಮಂತ್ರದ ರಾಜತಂತ್ರವನೆಲ್ಲ ಸಂಗ್ರಹಿಸಿ ॥
ಮೆರೆವ ನಮ್ಮಾದೇಶವನು ಬಲು ।
ತೆರದ ವೃದ್ಧಿಗೆ ತರ್ಪ ಕಾರ್ಯಾದಿ ।
ನಿರತನಾಗಿಹ ಭೂಪನಿನಗಿನ್ನಂಟೆ ಸರಿನೃಪರು ॥

H. L.

ಶ್ರೀಮನ್ಮಹಾರಾಜರವರು ರಾಜಕಾರ್ಯಗಳಲ್ಲಾಗಲಿ ಗೃಹಕಾರ್ಯಗಳಲ್ಲಾಗಲಿ ನೀತಿಮಾರ್ಗವನ್ನು ಬಿಟ್ಟುಹೋದವರಲ್ಲ. ಪ್ರಜೆಗಳಿಗೆ ಕುಡಿಯುವುದಕ್ಕೆ ನೀರನ್ನೂ, ಜೀವನಕ್ಕೆ ಮಾರ್ಗವಾದ ವಿದ್ಯೆಯನ್ನೂ, ಪ್ರಯಾಣಕ್ಕೆ ರೈಲ್ವೆ ಮೊದಲಾದ ಅನುಕೂಲ್ಯಗಳನ್ನೂ ಕಲ್ಪಿಸಿದರು. ಈಚೆಗೆ, ತಮ್ಮ ಪ್ರಜೆಗಳಲ್ಲಿ ಸಮಸ್ತರೂ ವಿದ್ಯಾಭ್ಯಾಸ ಮಾಡಬೇಕೆಂಬುದಾಗಿ ಎಲ್ಲ ತೆರದ ವಿದ್ಯಾಶಾಲೆಗಳನ್ನೂ ತಮ್ಮ ದೇಶದಲ್ಲೆಲ್ಲ ಸ್ಥಾಪಿಸಿದರು. ಇವುಗಳೆಲ್ಲ ಹಾಗಿರಲಿ; ಶ್ರೀಚಾಮರಾಜೇಂದ್ರ ಮಹಾರಾಜರವರ ಆಳಿಕೆಯಲ್ಲಿ ನಡೆದ ಪ್ರಬಲವಾದ ರಾಜಕಾರ್ಯಗಳೊಳಗೆ ೧೮೮೧ರಲ್ಲಿ ಸ್ಥಾಪಿಸಿದ ಪ್ರಜಾಪ್ರತಿನಿಧಿ ಸಭೆಯೇ ಮುಖ್ಯವಾದುದು. ಈ ಸಭೆಯನ್ನು ಸ್ಥಾಪಿಸಿದಾಗ ಕೆಲವು ಆಂಗ್ಲೋ ಇಂಡಿಯನ್ ಪತ್ರಿಕಾಕರ್ತರು, ಮೈಸೂರು ದೇಶದಲ್ಲಿ ಪ್ರಜಾಪ್ರತಿನಿಧಿ ಸಭೆಯೊಂದು ಸ್ಥಾಪಿತವಾಗಿರಲು, ಏನೂ ತಿಳಿಯದ ಹಳ್ಳಿಯ ಗೌಡರನ್ನು ಕಟ್ಟಿಕೊಂಡು ರಾಜ್ಯಭಾರದ ವಿಷಯಗಳನ್ನು ಹರಟುವ ರಾಜರ ಮತ್ತು ರಾಜಮಂತ್ರಿಗಳ ರಾಜ್ಯಭಾರವು ಎಷ್ಟು ಸಲಕ್ಷಣವಾಗಿರುವುದೋ ಎಂದು ಹಾಸ್ಯಮಾಡಿದರು. ಆ ಸಭೆಯು ಹಳ್ಳಿಯ ಜನಗಳಿಂದ ಪ್ರಾರಂಭವಾದರೂ, ರಾಜ್ಯತಂತ್ರಜ್ಞರೆಂದು ಹೆಸರು ಪಡೆದ ಡಿಳ್ಳಿಯ ಚಕ್ರಾಧಿಪತಿಗಳನ್ನು ಕೂಡ ಈಗ ತಲೆದೂಗಿಸುತ್ತಿರುವುದು. ಇದಲ್ಲದೆ, ಶ್ಲಾಘ್ಯತಮರಾದ ಈ ಮಹಾರಾಜರವರ ಆಳಿಕೆಯಲ್ಲಿ ನಡೆದ ಮುಖ್ಯವಾದ ಇತರ ಕಾರ್ಯಗಳು ಯಾವುವೆಂದರೆ: ಸ್ತ್ರೀ ವಿದ್ಯಾಭ್ಯಾಸಕ್ಕೆ

ಉಂಟುಮಾಡಿದ ಪ್ರೋತ್ಸಾಹ; ಚಿನ್ನದ ಗಣಿಗಳಿಗೂ ಕಾಫಿಯ ವ್ಯವಸಾಯಕ್ಕೂ ಕಲ್ಪಿಸಿದ ಅನುಕೂಲ್ಯಗಳು; ದೊಡ್ಡದೊಡ್ಡ ಸರಕಾರೀ ಕಟ್ಟಡಗಳನ್ನು ಕಟ್ಟಿಸಿ, ವಿಶಾಲವಾದ ರಸ್ತೆಗಳಿಂದಲೂ ಸುಂದರವಾದ ಇತರ ಕಟ್ಟಡಗಳಿಂದಲೂ ಮೈಸೂರು ಪಟ್ಟಣಕ್ಕೆ ಅಲಂಕಾರವನ್ನು ಕಲ್ಪಿಸಿದುದು; ಚಿಕ್ಕತನದಲ್ಲಾಗುವ ವಿವಾಹದಿಂದ ಅನೇಕಮಂದಿ ಸ್ತ್ರೀಯರು ಬಾಲ್ಯದಲ್ಲಿಯೇ ವಿಧವೆಯರಾಗಿ ಯಾವಜ್ಜೀವವೂ ಅನುಭವಿಸುವ ಪರಿತಾಪವನ್ನು ಪರಿಹರಿಸುವುದಕ್ಕಾಗಿ ಬಾಲ್ಯವಿವಾಹವನ್ನು ನಿಷೇಧಿಸುವ ಕಾನೂನನ್ನು ಏರ್ಪಡಿಸಿದುದು. ಈ ಬಾಲ್ಯವಿವಾಹದ ಈ ಕಾನೂನನ್ನು ಏರ್ಪಡಿಸುವಾಗ ಹಿಂದೂ ಧರ್ಮಶಾಸ್ತ್ರಪ್ರಮಾಣಗಳನ್ನನುಸರಿಸಿ ಶಾಸ್ತ್ರವಿರೋಧವಿಲ್ಲದಂತೆಯೂ ಜನಗಳಿಗೆ ಅನುಕೂಲಿಸುವಂತೆಯೂ ಪ್ರಜಾಭಿಪ್ರಾಯವನ್ನೂ ಮಠಾಧಿಪತಿಗಳ ಅಭಿಪ್ರಾಯವನ್ನೂ ಪಡೆದು ಮಾಡತಕ್ಕುದೆಂದು ಅಪ್ಪಣೆಮಾಡಿದರು.


ಚಾಮರಾಜೇಂದ್ರ ಕೈಗಾರಿಕೆ ಪಾಠಶಾಲೆ.


ಮಹಾರಾಜರವರ ಕಾಲೇಜು.

ಈ ಪ್ರಕಾರವಾಗಿ ಶ್ರೀಚಾಮರಾಜೇಂದ್ರ ಒಡೆಯರವರು, ತಮಗೆ ದೊರೆತ ರಾಜ್ಯವು ಕ್ಷೀಣದಶೆಯಲ್ಲಿದ್ದರೂ, ತಮ್ಮ ಪ್ರಜೆಗಳ ಐಶ್ವರ್ಯ ಕ್ಷೇಮ ಸುಖಾಭ್ಯುದಯಗಳಿಗೋಸ್ಕರ ಅಮಿತವಾಗಿ ರಾಜ್ಯದ ಆದಾಯವನ್ನು ವೆಚ್ಚಮಾಡಿ, ರಾಜ್ಯಪ್ರಾಪ್ತಿಯೊಡನೆ ಬಂದಿದ್ದ ಸಾಲವನ್ನು ತೀರಿಸಿ, ಸುಮಾರು ಎರಡು ಕೋಟಿ ರೂಪಾಯಿಗಳನ್ನು ಬೊಕ್ಕಸದಲ್ಲಿ ಕೂಡಿಟ್ಟರು. ೧೮೮೧ ರಲ್ಲಿ ಇವರು ರಾಜಪಟ್ಟವನ್ನು ಕೈಕೊಳ್ಳುವಾಗ, ೧೦೩ ಲಕ್ಷ ಮಾತ್ರವಾಗಿದ್ದ ರಾಜ್ಯದ ಸುವರ್ಣಾದಾಯವು ಇವರ ಆಳಿಕೆಯಲ್ಲಿ ಎಂದರೆ, ೧೮೯೪ರ ವರೆಗೆ ೧೮೦॥ ಲಕ್ಷಕ್ಕೆ ಏರಿತು. ಈ ಸಂಗತಿಯು ಯಾವ ರಾಜತಂತ್ರವಿಶಾರದನಿಗೆ ತಾನೆ ಶ್ಲಾಘನೀಯವಾಗಿಯೂ ಆಶ್ಚರ್ಯಕರವಾಗಿಯೂ ಇರದು! ಹೀಗೆ ಕೈಬಿಟ್ಟುಹೋಗಿದ್ದ ರಾಜ್ಯವನ್ನು ಮತ್ತೆ ಪಡೆದು, ಸಮೃದ್ಧವಾದ ರಾಜ್ಯವನ್ನಾಗಿ ಮಾಡಿ, ಇತರ ದೇಶದ ರಾಜರಿಗೆ ಆದರ್ಶಪ್ರಾಯರಾಗಿ ರಾಜ್ಯಪರಿಪಾಲನೆಯನ್ನು ಮಾಡಿದ ಶ್ರೀಚಾಮರಾಜೇಂದ್ರ ಒಡೆಯರವರ ರಾಜತಂತ್ರ ನೈಪುಣ್ಯವನ್ನೂ ನಿಷ್ಪಕ್ಷಪಾತವಾದ ನ್ಯಾಯಪರಿಪಾಟಿಯನ್ನೂ ಭರತಖಂಡಕೆಲ್ಲ ಪ್ರಭುಗಳಾದ ಲಾರ್ಡ್

ಡಫರಿನ, ಮಾರ್ಕ್ವಿಸ್ ಲ್ಯಾನ್ಸ್‌ಡೌನ್, ಅರ್ಲ್ ಎಲ್ಗಿನ್ ಮೊದಲಾದ ಗವರ್ನರ್ ಜನರಲ್‌ಗಳು ಘಂಟಾಘೋಷವಾಗಿ ಶ್ಲಾಘನೆಮಾಡಿರುವುದನ್ನು ನೋಡಿ, ಮೈಸೂರು ಪ್ರಜೆಗಳಲ್ಲಿ ಯಾರು ತಾನೆ ಸಂತೋಷಾತಿಶಯದಿಂದ ತಲೆದೂಗರು! 'ಲಂಡನ್ ಟೈಮ್ಸ್' ಮೊದಲಾದ ಅನೇಕ ಇಂಗ್ಲಿಷ್ ವರ್ತಮಾನ ಪತ್ರಿಕಾಕರ್ತರು ಕೂಡ ಮಹಾರಾಜರವರ ಪ್ರಜಾಹಿತವಾದ ಅಮೋಘ ರಾಜ್ಯಭಾರವನ್ನು ಮೆಚ್ಚಿ ವರ್ಣಿಸಿರುತ್ತಾರೆ.

ಲಾರ್ಡ್ ಡಫರಿನ್ ಅವರು ಅಪ್ಪಣೆ ಕೊಟ್ಟಿರುವುದೇನೆಂದರೆ :

ಈ ಪುರಾತನ ರಾಜಧಾನಿಗೆ ಬಂದು ತಲಪಿ ನನಗೆ ಪರಮಾನಂದವಾಯಿತು. ಬ್ರಿಟಿಷ್ ಸರಕಾರದವರು ನೆಲೆಗೊಳಿಸಿದ ಮತ್ತು ಬಹು ರಾಜಭಕ್ತಿ ವಿಶ್ವಾಸಗಳಿಂದ ಈಗ ನೀವು ನಿರೂಪಿಸಿದ ಉದಾರವಾದ ಏರ್ಪಾಡು ಅಷ್ಟೊಂದು ಫಲೋನ್ಮುಖವಾಗಿರುವುದೆಂಬುದನ್ನು ನೆನೆಯಿಸಿಕೊಂಡ ಮಾತ್ರದಿಂದಲೇ ನನಗೆ ಪರಮ ಸಂತೋಷವುಂಟಾಗುವುದು. ರಾಜಕಾರ್ಯದಕ್ಷರಾದ ಪ್ರಕೃತ ಮಹಾರಾಜರವರ ಪೋಷಣೆಯಲ್ಲಿರುವ ಮೈಸೂರಿಗಿಂತಲೂ ಉತ್ತಮವಾದ ರಾಜ್ಯಭಾರಕ್ರಮದಿಂದ ಸುಖಿಸುತ್ತಿರುವ ರಾಜ್ಯವು ಭಾರತ ವರ್ಷದಲ್ಲಿ ಮತ್ತೊಂದಿಲ್ಲವೆಂದು ನಾನು ಚೆನ್ನಾಗಿ ಬಲ್ಲೆನು. ಮುಂದೆ ವರುಷ ವರುಷಕ್ಕೆ ಈ ಮಹಾರಾಜರವರ ಶ್ರೇಯಸ್ಸು, ಅವರ ಪ್ರಜೆಗಳ ಸೌಖ್ಯಕ್ಷೇಮಾಭಿವೃದ್ಧಿಗಳೂ ಇತೋಪ್ಯತಿಶಯವಾಗಿ ಹೆಚ್ಚುತ್ತಿರುವುವೆಂದು ದೃಢವಾಗಿ ನಂಬಿರುವೆನು.

ಮಾರ್ಕ್ವಿಸ್ ಲ್ಯಾನ್ಸ್‌ಡೌನ್ ಅವರು ಅಪ್ಪಣೆಕೊಟ್ಟಿರುವುದೇನೆಂದರೆ :--

ಶ್ರೀಮಚ್ಚಕ್ರವರ್ತಿನೀ ಸರಕಾರದವರು ಅರ್ಧಶತಮಾನಕಾಲದಿಂದಲೂ ತಮ್ಮ ಆಡಳಿತದಲ್ಲಿಟ್ಟುಕೊಂಡಿದ್ದು, ಬಹು ಬುದ್ಧಿವ್ಯಯಮಾಡಿ ಶ್ರಮಪಟ್ಟು ಕ್ರಮವಾದ ಸ್ಥಿತಿಗೆ ತಂದ ಈ ಮೈಸೂರು ರಾಜ್ಯವನ್ನು ಹಿಂದೂರಾಜರ ವಶಕ್ಕೆ ಪುನಃ ಒಪ್ಪಿಸಬೇಕೆಂದು ಹನ್ನೊಂದು ವರುಷಗಳ ಹಿಂದೆ ನಿಶ್ಚಯಿಸಿದರು. ಹೀಗೆ ನಿಶ್ಚಯಿಸಿದುದು ಮಹತ್ತಾದ ಕಾರ್ಯ. ಇದನ್ನು ನಿಶ್ಚಯಿಸಿದವರು ವಹಿಸಿದ ಭಾರವು ನಿಜವಾಗಿಯೂ ಮಹತ್ತಾದುದೇ. ಇಂತಹ ಮಹಾಕಾರ್ಯವನ್ನು ೧೮೮೧ನೆಯ ಇಸವಿಯಲ್ಲಿ ಲಾರ್ಡ್ ರಿಪ್ಪನ್ ಅವರು ನೆರವೇರಿಸಿದರು. ಹೀಗೆ ನಡೆಯಿಸಿದುದಕ್ಕಾಗಿ ಬ್ರಿಟಿಷ್ ಗವರ್ನ್‌ಮೆಂಟಿನವರು ಪಶ್ಚಾತ್ತಾಪಪಡಲು ಶ್ರೀಮನ್ಮಹಾರಾಜರವರು ನಮಗೆ ತಿಳಿದಮಟ್ಟಿಗೂ ಸ್ವಲ್ಪವೂ ಅವಕಾಶವನ್ನು ಕೊಡಲಿಲ್ಲ. ಇದನ್ನು ನಮ್ಮ ಸ್ವಾನುಭವದಿಂದ ಹೇಳುವುದಕ್ಕೆ ಸಂತೋಷಪಡುತ್ತೇವೆ. ನಮಗಿರುವ ರಾಜ್ಯವಿಷಯಕವಾದ ವ್ಯಾಕುಲಗಳು ಹೆಚ್ಚುವುದಕ್ಕೆ ಅವಕಾಶವನ್ನುಂಟುಮಾಡದಂತೆ ಮೈಸೂರು ರಾಜ್ಯಭಾರವು ಚೆನ್ನಾಗಿಯೇ ನಡೆಯುತ್ತಿದೆ. ಪ್ರಜೆಗಳು ಸಂತುಷ್ಟರಾಗಿದ್ದಾರೆ. ಬ್ರಿಟಿಷ್ ಗವರ್ನ್‌ಮೆಂಟಿನವರು ತಮ್ಮಲ್ಲಿಟ್ಟಿರುವ ನಂಬಿಕೆಗೆ ತಾವು ಅರ್ಹರೆಂಬುದನ್ನು ಶ್ರೀಮನ್ಮಹಾರಾಜರವರು ತಮ್ಮ ಕಾರ್ಯಗಳಿಂದ ತೋರ್ಪಡಿಸುತ್ತಿದ್ದಾರೆ. ಹೀಗಲ್ಲದೆ, ಪರಿಣಾಮದಲ್ಲಿ ವ್ಯತ್ಯಸ್ತವಾಗಿದ್ದ ಪಕ್ಷದಲ್ಲಿ ಶ್ರೀಮನ್ಮಹಾರಾಜರವರು ಜವಾಬ್ದಾರರಾಗಿರಬೇಕಾಗಿದ್ದಿತು. ಹಾಗೆ ವ್ಯತ್ಯಸ್ತವಾಗದೆ ರಾಜ್ಯಭಾರದ ಸ್ಥಿತಿಯು ಈಗಿರುವ ರೀತಿಯಲ್ಲಿರುವುದರಿಂದ, ಶ್ರೀಮನ್ಮಹಾರಾಜರವರು ನಮ್ಮ ವಿಶೇಷವಾದ ಶ್ಲಾಘನೆಗೆ ಅರ್ಹರಾಗಿರುತ್ತಾರೆ. ಶ್ರೀಮನ್ಮಹಾರಾಜರವರು ತಾವು ಆಳುವುದಕ್ಕೆ ಆರಂಭಿಸಿದಂದಿನಿಂದಲೂ ರಾಜಧರ್ಮದಲ್ಲಿ ಜಾಗರೂಕರಾಗಿದ್ದುಕೊಂಡು ತಮ್ಮ

ಸ್ವದೇಶದಲ್ಲಿ ಗೌರವ, ವಿದೇಶದಲ್ಲಿ ಸತ್ಕೀರ್ತಿ, ಅಮೋಘವಾದ ತಾಳ್ಮೆ, ಲೋಕೋಪಕಾರಬುದ್ಧಿ, ಅಚಲವಾದ ಗಾಂಭೀರ್ಯ, ವಿದ್ವತ್ಪಕ್ಷಪಾತ ಮೊದಲಾದ ಸುಗುಣಗಳು ಶ್ರೀಮನ್ಮಹಾರಾಜರವರಲ್ಲಿ ನೆಲೆಗೊಂಡು ಅವರನ್ನು ಅನವರತವೂ ಒಲೈಸುತ್ತಿದ್ದುವು.

ಶ್ರೀಚಾಮರಾಜೇಂದ್ರ ಒಡೆಯರವರಲ್ಲಿ ನೆಲೆಗೊಂಡಿದ್ದ ಸುಗುಣಾತಿಶಯಗಳೂ ಅವರ ಆಕಾರಕ್ಕೆ ಸದೃಶಗಳಾಗಿಯೇ ಇದ್ದುವು. ಅವರ ಔದಾರ್ಯ ಗಾಂಭೀರ್ಯ ಸತ್ಯ

ಶ್ರೀಚಾಮರಾಜೇಂದ್ರ ಒಡೆಯರವರು.

ಧೃತಿ ಕ್ಷಮಾದಿ ಸದ್ಗುಣಗಳು, ಸಾವಧಾನವಾಗಿ ವೀಕ್ಷಿಸುವ ನೋಟಕರಿಗೆ ಸಾಗರಗರ್ಭಗತವಾದ ಮಣಿರಾಶಿಯಂತೆ ತೇಜೋಮಯವಾಗಿ ಪ್ರಜ್ವಲಿಸುತ್ತಿದ್ದುವು. ಅವರ ಉದಾರವಾದ ಮನಸ್ಸು ಅನರ್ಘ ರತ್ನಖನಿಯಂತೆ ಗುಣಯುತವಾಗಿಯೂ, ಅವರ ದೇಹವು ತಾರುಣ್ಯ ಲಾವಣ್ಯಗಳಿಗೆ ನಿಕೇತನವಾಗಿಯೂ ಇದ್ದುದರಿಂದ ಪುರುಷೋತ್ತಮನೆಂಬ ಶಬ್ದವು ಅವರಲ್ಲಿ ಅನ್ವರ್ಥವನ್ನು ಪಡೆದಿದ್ದಿತೆಂಬುದಕ್ಕೆ ಸಂದೇಹವಿಲ್ಲ. ಒಂದೆಡೆಯಲ್ಲಿಯೇ ಅಷ್ಟು ರೂಪಾತಿಶಯವನ್ನೂ ಗುಣಾತಿಶಯವನ್ನೂ ಬ್ರಹ್ಮನು ಜೊತೆಗೊಳಿಸುವುದು ಅಪೂರ್ವವು.

ಸಾಮಾನ್ಯವಾಗಿ ನಮ್ಮ ದೇಶದ ಕವಿಗಳು ಮಾಡುವ ವರ್ಣನೆಯಲ್ಲಿ ಉತ್ಕೃಷ್ಟತೆಯನ್ನು ಅಧಿಕರಿಸಿ ತಿಳಿಸುವ ಉತ್ಪ್ರೇಕ್ಷಾಗರ್ಭಿತವಾಕ್ಯಗಳೇ ವಿಶೇಷವಾಗಿರುವುವು. ಆದರೆ ಚಾಮರಾಜೇಂದ್ರ ಮಹಾರಾಜರವರ ಆಸ್ಥಾನ ಕರ್ಣಾಟಕ ಕವಿಗಳೊಳಗೆ ಅಗ್ರಗಣ್ಯರೆನಿಸಿಕೊಂಡಿದ್ದ ಬಸವಪ್ಪಶಾಸ್ತ್ರಿಗಳು ರಚಿಸಿದ ದಮಯಂತೀಸ್ವಯಂವರವೆಂಬ ಚಂಪೂಗ್ರಂಥದ ಉಪೋದ್ಘಾತದಲ್ಲಿ ಶ್ರೀಚಾಮರಾಜೇಂದ್ರ ಒಡೆಯರವರ ಗುಣಾತಿಶಯಗಳನ್ನು ವರ್ಣನೆಮಾಡಿರುವುದರಲ್ಲಿ ಒಂದಾದರೂ ಮೃಷಾಸ್ತುತಿಯಿಲ್ಲ. ಅಲ್ಲಿ ಹೇಳಿರುವುದೆಲ್ಲ ಮಹಾರಾಜರವರಲ್ಲಿ ಸ್ವಲ್ಪವೂ ನ್ಯೂನಾತಿರಿಕ್ತಗಳಿಲ್ಲದೆ ಸ್ವಭಾವವಾಗಿದ್ದ ಗುಣಗಳೆಂದು ಅವರನ್ನರಿತ ವಾಚಕಮಹಾಶಯರಿಗೆ ಸ್ಪಷ್ಟವಾಗಿ ತಿಳಿಯಬರುವುದು. ಆ ವರ್ಣನಾಭಾಗವೇನೆಂದರೆ :—

ಕಂದ ॥ ಆ ಕೃಷ್ಣನೃಪತಿ ತಿಲಕ । ಶ್ರೀಕರ ಪುತ್ರಂ ಕ್ಷಮಾಕರಂ ಚಾಮನೃಪಂ ॥
ಶ್ರೀಕಾಂತಂ ಸುಚರಿತ್ರಂ । ಲೋಕಸ್ತುತನೇಕವಾಕ್ಯನೇಕ ಕಳತ್ರಂ ॥ ೧ ॥

ವೃತ್ತ ॥ ಯದುವಂಶಾಂಬುಧಿ ಚಂದ್ರಮಂ ನಿಖಿಲ ವಿದ್ಯಾಬಾರ್ಧಿ ಸಂವರ್ಧಕಂ ।
ಸದಯಂ ಸನ್ನಯಶಾಲಿ ಸಾಧುಹೃದಯಂ ಶ್ರೀಕಂಠ ಚಾಮುಂಡಿಕಾ ॥
ಪದಸದ್ಭಕ್ತಿವಿಶೇಷ ಕಲ್ಪಲತಿಕಾ ಸಂಲಬ್ಧ ಸತ್ಪುತ್ರ ನಂ ।
ವದನಿರ್ಪಂ ಸುಕವಿ ಪ್ರಿಯಂ ಶುಭಯುತಂ ಶ್ರೀಚಾಮಭೂಮೀಧವಂ ॥ ೨ ॥

ಮತ್ತೊಬ್ಬ ಕವಿಯು ತನ್ನ ಸೀತಾಚರಿತ್ರೆಯ ಉಪೋದ್ಘಾತದಲ್ಲಿ ಮಹಾರಾಜರವರ ಸೌಂದರ್ಯವನ್ನು ಹೀಗೆಂದು ವರ್ಣಿಸಿರುವನು :—

ಹರನ ವೈರದೆ ಮುನ್ನಿನ ಕಳೇ ।
ಬರವು ಪ್ರೇಮದ ಸನಗೆ ನಾಂ ನುಂ ।
ದರ ತನುವನೊಂದುವೆನೆನುತ್ತಿ ಭಕ್ತಿ ಬಾವದಲಿ ॥
ಹರನ ಪೂಜಿಸಿ ತನುವ ಪಡೆದಾ ।
ಸ್ಮರನೊ ಎನೆ ನೋಟಕರಿಗೇಂ ಗೋ ।
ಚರಿಸಿ ಮೆರೆವನೊ ಚಾಮಭೂಮಿಪ ಮಂಜುತರ ರೂಪ ॥

ಕವಿಗಳು ಮಾತ್ರವಲ್ಲದೆ, ಇಂಡಿಯಾ ದೇಶದ ವೈಸ್ರಾಯಿಯವರಾದ ಲಾರ್ಡ್ ಡವರಿನ್ ಅವರ ಪತ್ನಿಯವರು "ಅವರ್ ವೈಸ್‌ರೀಗಲ್ ಲೈಫ್ ಇನ್ ಇಂಡಿಯಾ" ಎಂಬ ತಮ್ಮ ಪುಸ್ತಕದಲ್ಲಿ ಈ ರೀತಿ ಬರೆದಿರುವರು :—

"The Maharaja, who is a very nice looking young man, and who is one of the most enlightened of our princes"

ಶ್ರೀಚಾಮರಾಜೇಂದ್ರ ಒಡೆಯರವರು ಪ್ರತಿದಿನವೂ ಪ್ರಾತಃಕಾಲದಲ್ಲಿ ಕ್ಲುಪ್ತವಾಗಿ ಐದು ಗಂಟೆಗೆ ದಿವ್ಯತಲ್ಪದಿಂದ ಉಪ್ಪವಡಿಸಿ ಮುಖ ಪ್ರಕ್ಷಾಳನಾನಂತರ ಪ್ರಾತಃಕಾಲದ ಫಲಾಹಾರವನ್ನು ತೀರಿಸಿಕೊಂಡು, ಹೊರಕ್ಕೆ ದಯಮಾಡಿಸಿ ಅಷ್ಟು ಹೊತ್ತಿಗೆ ಅಲ್ಲಿಗೆ ಬಂದು ನಿರೀಕ್ಷಿಸಿಕೊಂಡಿರುತ್ತಿದ್ದ ಕಂಟ್ರೋಲರಿಗೂ ದರ್ಬಾರ್ ಬಕ್ಷಿಯವರಿಗೂ ಆ ಪ್ರಾತಃಕಾಲದಲ್ಲಿ ನೆರವೇರಿಸಬೇಕಾದ ಕಾರ್ಯಗೌರವವನ್ನು ತಿಳಿಯ

ಸಡಿಸಿ, ಅರಮನೆಯಿಂದ ಅಶ್ವಾರೋಹಕರಾಗಿ ಕರಿಯಕಲ್ಲು ತೊಟ್ಟಿಯಿಂದ ಬಹಿಸ್ಸಂಚಾರಾರ್ಥವಾಗಿ ಹೊರಡುತ್ತಿದ್ದರು. ದಾರಿಯಲ್ಲಿ ಅಲ್ಲಲ್ಲಿ ನೆರೆದು ಪ್ರಾರ್ಥನಾ ಪತ್ರಿಕೆಗಳನ್ನು ಒಪ್ಪಿಸುತ್ತಿದ್ದವರಿಗೂ ತಮ್ಮ ಕಷ್ಟಗಳನ್ನು ವಾಚಾ ಅರಿಕೆಮಾಡಿಕೊಳ್ಳುತ್ತಿದ್ದವರಿಗೂ ಮಹಾರಾಜರವರು ತತ್ಕಾಲದಲ್ಲಿ ಹೇಳಬಹುದಾದುವುಗಳಿಗೆ ತಕ್ಕ ಸಮಾಧಾನಗಳನ್ನು ಹೇಳುತ್ತಿದ್ದರು. ಮತ್ತೆ ಕೆಲವಂಶಗಳು ರಾಜಕೀಯಗಳಾಗಿದ್ದರೆ ಇಂತಿಂತಹ ಅಧಿಕಾರಿಗಳ ಮುಖಾಂತರವಾಗಿ ನಿಮ್ಮ ಸಂಗತಿಗಳನ್ನು ತಿಳಿಯಪಡಿಸಬೇಕೆಂದು ಅವರಿಗೆ ಅಪ್ಪಣೆ ಕೊಡಿಸುತ್ತಿದ್ದರು. ಬಡವರಾದವರ ದಾರಿದ್ರ್ಯನಿವೃತ್ತಿಗಾಗಿ ತಕ್ಕ ಸಮುತ್ತರಗಳನ್ನು ಅಪ್ಪಣೆಕೊಡಿಸಿ ಅವರ ಪ್ರಾರ್ಥನೆಯನ್ನು ಸಾಫಲ್ಯಗೊಳಿಸುತ್ತಿದ್ದರು. ಮುಖ್ಯವಾಗಿ, ತಮ್ಮನ್ನು ಕಾಣಬೇಕೆಂದು ಎಲ್ಲಿ ಪ್ರಜೆಗಳು ನೆರೆದಿದ್ದರೆ ಅಲ್ಲಿಗೆ ಬರುತ್ತಲೆ ಕುದುರೆಯನ್ನು ಮಂದಗಮನದಿಂದ ಬಿಡುತ್ತ, ಹೇಳಿಕೊಂಡವರ ಪ್ರಾರ್ಥನೆಗಳನ್ನು ಸಾವಧಾನರಾಗಿ ಕೇಳುತ್ತಿದ್ದರು. ಮಂಗಳವಾರ ಶುಕ್ರವಾರಗಳಲ್ಲಿ ಮಹಾರಾಜರವರು, ತಾವು ರಾಜಧಾನಿಯಲ್ಲಿರುವ ಕಾಲದಲ್ಲೆಲ್ಲ, ತಪ್ಪದೆ ಪ್ರಾತಃಕಾಲದಲ್ಲಿ ಮೊದಲು ಕರೆಯುವ ಹಟ್ಟಿಗೆ ಎಂದರೆ, ಗೋಶಾಲೆಗೆ ದಯೆಮಾಡಿ ಗೋದರ್ಶನವನ್ನೂ ಗೋಪಾಲಕೃಷ್ಣಸ್ವಾಮಿ ದರ್ಶನವನ್ನೂ ಮಾಡಿಕೊಂಡು, ದೊಡ್ಡಕೆರೆಯೇರಿಯ ಮೇಲೆ ಹೊರಟು, ಜನಗಳು ಹೇಳಿಕೊಂಡ ವಿಜ್ಞಾಪನೆಗಳನ್ನು ವಿಚಾರಿಸುತ್ತ ಚಾಮುಂಡೀ ಬೆಟ್ಟದ ಪಾದದ ಬಳಿಗೆ ದಯೆಮಾಡಿ, ಅಲ್ಲಿ ಕುಲದೇವತೆಯಾದ ಶ್ರೀ ಚಾಮುಂಡಾಂಬಿಕೆಯ ಪಾದದರ್ಶನವನ್ನು ಮಾಡಿ, ಫಲಾರ್ಪಣಾನಂತರದಲ್ಲಿ ಪ್ರಸಾದವನ್ನು ಸ್ವೀಕರಿಸಿ, ಅಲ್ಲಿಂದ ಹಿಂದಿರುಗಿ ಅಶ್ವಶಾಲೆಗೆ ದಯೆಮಾಡುತ್ತಿದ್ದರು. ಉಳಿದ ದಿವಸಗಳಲ್ಲಿ ಕುದುರೆಯ ಸವಾರಿ ಮಾಡಿಕೊಂಡು ರಾಜವೀಧಿಗಳಲ್ಲಿ ಸಂಚಾರ ಹೊರಟು ಅಶ್ವಶಾಲೆಗೆ ದಯೆಮಾಡುತ್ತಿದ್ದರು. ಅಶ್ವಶಾಲೆಗೆ ದಯೆಮಾಡಿದನಂತರ ಕುದುರೆಗಳಿಗೆ ' ಲೂಸರ್ನ್ ' ಎಂಬ ಮಸಾಲೆಯ ಸೊಪ್ಪನ್ನು ತಮ್ಮ ಸ್ವಹಸ್ತದಿಂದಲೇ ತಿನ್ನಿಸಿ, ಬಳಿಕ ಯಾರಾದರೂ ದೊಡ್ಡಮನುಷ್ಯರು ತಮ್ಮ ದರ್ಶನವನ್ನು ಬಯಸಿ ಬಂದಿದ್ದರೆ ಅವರನ್ನು ಕಂಡು ಯಥಾಯೋಗ್ಯವಾಗಿ ಮಾತನಾಡಿಸಿ ಕಳುಹಿಸಿಕೊಟ್ಟು, ಅಲ್ಲಿಂದ ನಾಲ್ಕು ಅಥವಾ ಐದು ದಿವ್ಯಾಶ್ವಗಳನ್ನು ಕಟ್ಟಿದ ರಥದಲ್ಲಿ ತಮ್ಮ ಆಪ್ತಸಖರೊಡನೆ ಕುಳಿತು ದೊಡ್ಡದೊಡ್ಡ ರಾಜಪಥಗಳಲ್ಲಿ ಸಂಚಾರಮಾಡಿಕೊಂಡು, ಮತ್ತೆ ಅಶ್ವಶಾಲೆಗೆ ಹಿಂದಿರುಗಿ ಬಂದು ಅಲ್ಲಿ ಆ ರಥವನ್ನು ಬಿಟ್ಟುಬಿಟ್ಟು, ಎರಡಶ್ವಗಳನ್ನು ಕಟ್ಟಿದ ಮತ್ತೊಂದು ರಥದಲ್ಲಿ ಕುಳಿತು ಹತ್ತೂವರೆ ಗಂಟೆಯ ಹೊತ್ತಿಗೆ ಅರಮನೆಗೆ ಬಂದು ಸೇರುತ್ತಿದ್ದರು. ಬಳಿಕ ಒಂದು ಗಂಟೆಯ ಹೊತ್ತು ಸಂಗೀತಶಾಲೆಯಲ್ಲಿ ರಾಗಮಾಲೆ ಮುಂತಾದುವುಗಳನ್ನು ನುಡಿಸುತ್ತ ವಿನೋದಿಸಿದ ಬಳಿಕ, ಮದನವಿಲಾಸ ತೊಟ್ಟಿಯ ಚೊಕ್ಕನದಲ್ಲಿ ಪ್ರಾತಃಕಾಲದ ಪೋಷಾಕನ್ನು ತೆಗೆದು, ರಾಜಯೋಗ್ಯವಾದ ದೇಶೀಯ ವಸ್ತ್ರಾಭರಣಗಳನ್ನು ತೊಟ್ಟು ಸಂಗಡ ಓಲೈಸುತ್ತ ಬಂದ ಆಸ್ಥಾನದ ಸಾಮಾನ್ಯಾಧಿಕಾರಿಗಳು. ಸಂಗೀತಗಾರರು. ಹಾಸ್ಯಗಾರರು. ರಸಜ್ಞರಾದ ವಿದ್ವಾಂಸರು— ಇವರ ನೆರವಿಯಿಂದ

ನುತ್ತುವರಿಯಲ್ಪಟ್ಟು ವಿನೋದವಾಗಿ ಮಾತುಕಥೆಗಳನ್ನಾಡುತ್ತ ನಾಮತೀರ್ಥದ ತೊಟ್ಟಿಗೆ ಸ್ನಾನಕ್ಕೆ ತೆರಳುತ್ತಿದ್ದರು. ಸ್ನಾನಾನಂತರದಲ್ಲಿ ದಿವ್ಯ ದುಕೂಲಗಳನ್ನೂ ಊರ್ಧ್ವಪುಂಡ್ರವನ್ನೂ ಧರಿಸಿ, ಸಂಧ್ಯಾವಂದನೆಯನ್ನೂ ನಿತ್ಯದಾನಗಳನ್ನೂ ನಿರ್ವರ್ತಿಸಿ, ಶ್ರೀ ಮಹಾಗಣಪತಿ ಶ್ರೀಕಂಠೇಶ್ವರ ಶ್ರೀಚಾಮುಂಡಾಂಬಿಕಾ ಶ್ರೀಕೃಷ್ಣಾದಿ ದೇವಸನ್ನಿಧಿಗೆ ದಯಮಾಡಿ, ಪೂಜಾನಂತರದಲ್ಲಿ ಪ್ರಸಾದವನ್ನು ಸ್ವೀಕರಿಸಿ, ವಾಣೀವಿಲಾಸ ಸನ್ನಿಧಾನಕ್ಕೆ ಆರೋಗಣೆಗೆ ಬಿಜಯಮಾಡುತ್ತಿದ್ದರು. ಬಳಿಕ ಕರಿಯಕಲ್ಲು ತೊಟ್ಟಿಯಲ್ಲಿ ವರ್ತಮಾನಪತ್ರಿಕೆಗಳನ್ನು ಒದುತ್ತ ಎರಡೂವರೆ ಗಂಟೆಯ ವರೆಗೆ ವಿಶ್ರಾಂತಿ ಪಡೆಯುತ್ತಿದ್ದರು.

ಮಧ್ಯಾಹ್ನಾನಂತರ ಆಫೀಸ್ ರೂಮಿಗೆ ಚಿತ್ತೈಸಿ, ಅಲ್ಲಿ ಕಾದಿದ್ದ ಪ್ರೈವೇಟ್ ಸೆಕ್ರಿಟರಿ, ದಿವಾನರು, ಕೌನ್ಸಿಲರು, ಕಂಟ್ರೋಲರು ಮೊದಲಾದವರಿಗೆ ದರ್ಶನ ಕೊಟ್ಟು, ಎರಡು ಗಂಟೆಗಳ ಕಾಲ ಸಂಸ್ಥಾನದ ರಾಜ್ಯಭಾರಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನೂ ಏರ್ಪಾಡುಗಳನ್ನೂ ಚರ್ಚಿಸಿ ವ್ಯವಸ್ಥೆ ಮಾಡುವುದೇ ಶ್ರೀಮನ್ಮಹಾರಾಜರವರ ಮುಖ್ಯಕರ್ತವ್ಯವಾಗಿದ್ದಿತು. ಮೂರುಜಾವದ ಆರೋಗಣೆ ಪೆಳೆದ ಬಳಿಕ ಸ್ವಲ್ಪ ಸಂಗೀತವನ್ನು ಕೇಳುತ್ತಿದ್ದು, ಸಾಯಂಕಾಲ ಐದು ಗಂಟೆಯ ವೇಳೆಯಲ್ಲಿ ಪುನಃ ಅರಮನೆಯಿಂದ ರಥಾರೂಢರಾಗಿ ಹೊರಟು ಯೂರೋಪಿಯನ್ ಅಧಿಕಾರಿಗಳೊಡನೆ ಕ್ರೀಡಾಭೂಮಿಯಲ್ಲಿ ಟೆನ್ನಿಸ್, ಪೋಲೋ ಮುಂತಾದ ಆಟಗಳನ್ನು ಆಡಿಕೊಂಡು ಖಾಸಬಂಗಲೆಗೆ ದಯಮಾಡಿ ಅಲ್ಲಿ ಕಾದಿದ್ದ ದರ್ಬಾರ್ ಬಕ್ಷಿಯವರಿಗೆ ಮಾರನೆಯ ದಿನ ಅಶ್ವಶಾಲೆಯಲ್ಲಿ ನಡೆಯತಕ್ಕ ಕೃತ್ಯಗಳನ್ನೂ ಇನ್ನೂ ಇತರ ವಿಷಯಗಳನ್ನೂ ನಿರವಿಸಿ, ರಾತ್ರಿ ಎಂಟು ಗಂಟೆಯ ವೇಳೆಗೆ ಅರಮನೆಗೆ ದಯಮಾಡಿಸಿ, ಎಂದಿನಂತೆ ಮದನ ವಿಲಾಸ ತೊಟ್ಟಿಯ ಬೊಕ್ಕಸದಲ್ಲಿ ವಸ್ತ್ರಾದಿಗಳನ್ನು ಕಳೆದು, ಕಾಲೋಚಿತ ವಸ್ತ್ರಗಳನ್ನು ಧರಿಸಿ ಮತ್ತೆ ನಾಮತೀರ್ಥದ ತೊಟ್ಟಿಗೆ ಬಿಜಯಮಾಡಿ ಧೌತಾಂಬರ ಕೌಶೇಯಾಂಬರ ಧಾರಿಗಳಾಗಿ ಸಾಯಂ ಸಂಧ್ಯಾಕೃತ್ಯವನ್ನಾಚರಿಸಿ, ಪುನಃ ಗೃಹದೇವತೆಗಳ ದರ್ಶನಾನಂತರ ಅಂಬಾವಿಲಾಸದಲ್ಲಿ ದೀವಟಿಗೆ ಸಲಾಂ ಮೊದಲಾದ ರಾಜೋಪಚಾರಗಳನ್ನು ಕೈಕೊಂಡು, ದೇವಭಜಕರು ಮಾಡುತ್ತಿದ್ದ ದೇವನಾಮ ಸಂಕೀರ್ತನವನ್ನು ಆಲೈಸುತ್ತ, ಆರೋಗಣೆಗಾಗಿ ವಾಣೀವಿಲಾಸ ಸನ್ನಿಧಾನಕ್ಕೆ ಬಿಜಯಮಾಡುತ್ತಿದ್ದರು. ಆರೋಗಣೆ ಪೆಳೆದ ಬಳಿಕ, ಮದನ ವಿಲಾಸದ ತೊಟ್ಟಿಯಲ್ಲಿ ಅಂಚೆಯ ಮೂಲಕವಾಗಿ ಬಂದ ಸ್ನೇಹಪತ್ರಗಳಿಗೂ ವಿಜ್ಞಾಪನಾ ಪತ್ರಿಕೆಗಳಿಗೂ ಪ್ರತ್ಯುತ್ತರಗಳನ್ನೀಯುವುದಕ್ಕೆ ಕುಳಿತುಕೊಳ್ಳುತ್ತಿದ್ದರು. ಸ್ನೇಹಿತರಿಗೆ ಬರೆಯಬೇಕಾದ ಲೇಖನಗಳನ್ನು ಆದ್ಯಂತವಾಗಿ



ಸ್ವಹಸ್ತದಿಂದಲೇ ಬರೆಯುತ್ತಿದ್ದರು. ಮಿಕ್ಕವುಗಳಿಗೆ ತಕ್ಕ ಉತ್ತರಗಳನ್ನು ಬಾಯಿಯಲ್ಲಿ ಹೇಳಿ ಬರೆಯಿಸಿ ಸ್ವಹಸ್ತಾಕ್ಷರ ಚಿಹ್ನೆಗಳನ್ನು ಮಾಡುತ್ತಿದ್ದರು. ಅದು ಪೂರೈ

ಸಿದ ಬಳಿಕ, ಲಕ್ಷ್ಮೀವಿಲಾಸಕ್ಕೆ ದಯೆಮಾಡಿ, ತಮ್ಮ ಚಿತ್ತಕ್ಕೆ ತೋರಿದ ರಾಗಮಾಲೆ ಮುಂತಾದ ವಾದ್ಯಗಳಲ್ಲಿ ತಮಗೆ ಇಷ್ಟಬಂದ ರಾಗವನ್ನು ನುಡಿಸುತ್ತ ಸ್ವಲ್ಪ ಹೊತ್ತನ್ನು ವಿನೋದವಾಗಿ ಕಳೆದು, ಜಗದೀಶ್ವರನ ಧ್ಯಾನಮಾಡುತ್ತ ದಿವ್ಯತಲ್ಪದಲ್ಲಿ ಪವಡಿಸಿ ಸುಖನಿದ್ರಾಂಗನಾಶ್ಲಿಷ್ಟರಾಗಿರುತ್ತಿದ್ದರು.

ಶ್ರೀಮನ್ಮಹಾರಾಜರವರ ಖಾಸಾ ವರ್ಧಂತಿಯ ದಿವಸವೂ, ರಾಜಕುಟುಂಬದಲ್ಲಿ ಯಾರಾದರೊಬ್ಬರ ವರ್ಧಂತಿಯ ದಿವಸವೂ, ಆಶ್ವಯುಜ ಮಾಸದ ನವರಾತ್ರಿ ಮೊದಲಾದ ಉತ್ಸವದಿನಗಳಲ್ಲಿಯೂ ರಾಜಸಂಬಂಧಿಗಳನ್ನೆಲ್ಲ ಊಟಕ್ಕೂ ಉತ್ಸವಗಳಿಗೂ ಅರಮನೆಗೆ ಕರೆಯುವ ಪದ್ಧತಿಯುಂಟು. ಮಹಾರಾಜರವರು ಕೇವಲ ಸಮೀಪ ರಕ್ತಸಂಬಂಧಿಗಳ ಸಹಪಙ್ಕ್ತಿಯಲ್ಲಿ ಭೋಜನ ಮಾಡುತ್ತಿದ್ದರು. ಶ್ರೀಮನ್ಮಹಾರಾಜರವರು ಸಕಲರಿಗೂ ಸುಖಭೋಜನ ಗಂಧಮಾಲ್ಯ ತಾಂಬೂಲಾದ್ಯುಪಚಾರಗಳೆಲ್ಲ ಸಂದಬಳಿಕ, ಸಕಲರಿಗೂ ಯಥೋಚಿತವಾಗಿ ಉಪಚಾರೋಕ್ತಿಗಳನ್ನು ಹೇಳಿ ಸಂಗೀತಾನಂದದಿಂದ ಎಲ್ಲರನ್ನೂ ತೃಪ್ತಿಗೊಳಿಸಿ ಕಳುಹಿಸಿಕೊಡುತ್ತಿದ್ದರು. ಖಾಸಾ ವರ್ಧಂತಿಯ ದಿನ ರಾಜವಂಶೀಯರಿಗೆ ಮಾತ್ರವಲ್ಲದೆ, ಇತರ ವರ್ಣದ ದೊಡ್ಡದೊಡ್ಡ ಅಧಿಕಾರಿಗಳಿಗೂ ಅರಮನೆಯಲ್ಲಿಯೇ ಆಯಾ ವರ್ಣದ ಸೂಪವಿದ್ಯಾ ವಿಶಾರದರಿಂದ ನಾನಾ ಭಕ್ಷ್ಯಭೋಜ್ಯಗಳನ್ನು ಮಾಡಿಸಿ ಔತಣಮಾಡಿಸುವ ಪದ್ಧತಿಯನ್ನು ಶ್ರೀಚಾಮರಾಜೇಂದ್ರ ಒಡೆಯರವರೇ ಉಪಕ್ರಮಮಾಡಿದರು. ಈ ಪದ್ಧತಿಯು ಈಗಲೂ ನಡೆದು ಬರುತ್ತಿದೆ. ಖಾಸಾ ವರ್ಧಂತಿಯ ದಿನ ಮಧ್ಯಾಹ್ನೋತ್ತರದಲ್ಲಿ ನವರಾತ್ರಿಯ ಜಂಬೂಸವಾರಿಯಂತೆ ಚತುರಂಗಬಲ ಯುಕ್ತರಾಗಿ ಸಕಲ ಪರಿವಾರದೊಡನೆ ಕುದುರೆಯ ಮೇಲೆ ಉತ್ಸವಹೊರಟು, ಲೋವರ್ ರೆಸಿಡೆನ್ಸಿ ಬಂಗಲೆಯ ಮೈದಾನದಲ್ಲಿ ಸೇನಾವ್ಯೂಹ ರಚನಾದಿ ಸಂರಂಭಗಳನ್ನು ಅವಲೋಕಿಸಿ, ಪುನಃ ಉತ್ಸವದೊಡನೆ ಅರಮನೆಗೆ ದಯೆಮಾಡುತ್ತಿದ್ದರು. ಈ ಉತ್ಸವಸಮಯಗಳಲ್ಲೆಲ್ಲ ತಮ್ಮ ಬಂಧುವರ್ಗದೊಡನೆಯೂ ಆಪ್ತಸ್ನೇಹಿತರೊಡನೆಯೂ ಆಪ್ತಾಧಿಕಾರಿಗಳೊಡನೆಯೂ ಆನಂದಾನುಭವವನ್ನು ಮಾಡಬೇಕೆಂಬುದೇ ಶ್ರೀಚಾಮರಾಜೇಂದ್ರ ಒಡೆಯರವರ ಮುಖ್ಯೋದ್ದೇಶವಾಗಿದ್ದಿತು.

ಮಹಾರಾಜ ಪದವಿಯು ಸಂಸ್ಥಾನದಲ್ಲಿ ಸರ್ವಶಕ್ತಿಯುಳ್ಳುದಾಗಿಯೂ ಅಪ್ರತಿಹತವಾದುದಾಗಿಯೂ ಇದ್ದರೂ ಶ್ರೀಚಾಮರಾಜೇಂದ್ರ ಒಡೆಯರವರು ಯಾರಾದರೂ ತಮಗೆ ಅರ್ಜಿಯನ್ನು ಬರೆದುಕೊಂಡರೂ, ಪ್ರತ್ಯಕ್ಷವಾಗಿ ವಿಜ್ಞಾಪನೆ ಮಾಡಿಕೊಂಡರೂ, ಆ ವಿಷಯಗಳು ರಾಜಕೀಯಗಳಾಗಿದ್ದರೆ ತಾವೇ ಅದರ ತೀರ್ಮಾನವನ್ನು ಮಾಡುತ್ತಿರಲಿಲ್ಲ. ಹಾಗೊಂದು ವೇಳೆ ಮಾಡಿದರೆ, ಆಯಾ ಇಲಾಖೆಯ ಅಧಿಕಾರಿಗಳ ಅಧಿಕಾರ ಗೌರವಕ್ಕೆ ಹಾನಿಬಂದು ರಾಜಕಾರ್ಯ ಗೌರವವೇ ಕೆಡುವುದೆಂದು ಭಾವಿಸಿಕೊಂಡಿದ್ದರು. ಒಂದು ವೇಳೆ ಇಂತಹ ವಿಷಯವನ್ನು ಇದೇ ರೀತಿಯಲ್ಲಿ ತೀರ್ಮಾನಮಾಡುವುದು ಉತ್ತಮವೆಂದು ತಮ್ಮ ದಿವ್ಯಚಿತ್ತಕ್ಕೆ ವೇದ್ಯವಾದರೆ, ಅರ್ಜಿಗೆ ತಕ್ಕ ಉತ್ತರ

ವನ್ನು ಬರೆಯಿಸಿದ ಬಳಿಕ, ಸಂಬಂಧಪಟ್ಟ ಆಯಾ ಇಲಾಖೆಯ ಮೂಲಕವಾಗಿಯೇ ಇಂಡಾರಸುಗಳನ್ನು ಕಳುಹಿಸುತ್ತಿದ್ದರು. ವಿಜ್ಞಾಪಿಸಿಕೊಂಡ ವಿಷಯಗಳು ರಾಜಕೀಯಗಳಲ್ಲದೆ ಸಾಮಾನ್ಯಗಳಾಗಿದ್ದರೆ, ಅವಕ್ಕೆ ಬರೆಹದ ಮೂಲಕ ತಾವೇ ತೀರ್ಮಾನವನ್ನು ಅಪ್ಪಣೆ ಕೊಡುತ್ತಿದ್ದರು. ಅರಮನೆಗೆ ಸಂಬಂಧವಾದ ಅನೇಕ ವಿಷಯಗಳಲ್ಲಿ ಮಾತ್ರ ವಿಶೇಷವಾಗಿ ಬಾಯಿಮಾತಿನಿಂದಲೇ ತೀರ್ಮಾನಗಳನ್ನು ಅಪ್ಪಣೆಕೊಡುತ್ತಿದ್ದರು. ಜ್ಞಾಪಕಶಕ್ತಿಯು ಪ್ರಬಲವಾಗಿದ್ದುದರಿಂದ ಎಷ್ಟು ದಿನಗಳಾದರೂ ತಾವು ಹಿಂದೆ ಹೇಳಿದುದನ್ನು ಮರೆಯುತ್ತಿರಲಿಲ್ಲ. ತಮ್ಮ ದರ್ಶನಕ್ಕೆ ಬಂದ ಸ್ವದೇಶೀಯ ಅನ್ಯದೇಶೀಯ ಮಹನೀಯರೊಡನೆ ಉಚಿತ ರೀತಿಯಿಂದ ಮಾತನಾಡಿ ಉಭಯ ಪಕ್ಷೀಯರ ಮರ್ಯಾದೆಗೂ ಗೌರವಕ್ಕೂ ಯಥಾಯೋಗ್ಯವಾಗಿ ನಡೆದುಕೊಳ್ಳುವ ಪರೇಂಗಿತ ಜ್ಞಾನವನ್ನು ದೇವರು ಚಾಮರಾಜೇಂದ್ರ ಮಹಾರಾಜರವರಿಗೆ ಅಪರಿಮಿತವಾಗಿ ಕರುಣಿಸಿದ್ದನು. ಮುಖ್ಯವಾಗಿ, ಯೂರೋಪಿಯನ್ ಅಧಿಕಾರಿಗಳೂ, ಅವರೊಳಗೂ ಯೂರೋಪಿಯನ್ ಮಹಿಳೆಯರೂ, ಶ್ರೀಮನ್ಮಹಾರಾಜರವರ ಗಾಂಭೀರ್ಯವನ್ನೂ ಮರ್ಯಾದಾ ಪರಿಪಾಲನ ಶಕ್ತಿಯನ್ನೂ ಆದರ ವಿಶ್ವಾಸ ಪೂರಿತವಾದ ಹೃದಯವನ್ನೂ ವಾಕ್ಚಟುತೆಯನ್ನೂ ಕಂಡು ಆಶ್ಚರ್ಯಪಡುತ್ತಿದ್ದರು.

ಪಾಶ್ಚಾತ್ಯರು ತಮ್ಮನ್ನು ನೋಡುವುದಕ್ಕೆ ಬರತಕ್ಕವರನ್ನು ಸನ್ಮಾನಮಾಡಿ ಕುಳ್ಳಿರಿಸಿಕೊಂಡು ಸಲ್ಲಾಪ ಮಾಡುವುದಕ್ಕೂ ಗೃಹಕ್ಕೆ ಅಲಂಕಾರ ಪ್ರಾಯವಾಗಿರುವುದಕ್ಕೂ ಮನೆಯಲ್ಲೊಂದು ಭಾಗವನ್ನು ಚಿತ್ರವಿಚಿತ್ರವಸ್ತುಗಳಿಂದಲೂ ನಾನಾವಿಧ ಪೀಠಗಳಿಂದಲೂ ಅಲಂಕಾರಮಾಡಿ ಸಿದ್ಧವಾಗಿಟ್ಟಿರುವುದುಂಟು. ಇದನ್ನು ಅವರು 'ಡ್ರಾಯಿಂಗ್ ರೂಂ' ಅಥವಾ, ಸಂದರ್ಶನಾಗಾರವೆಂದು ಕರೆಯುವರು. ಈ ಸಂದರ್ಶನಾಗಾರದ ಏರ್ಪಾಡನ್ನೆಲ್ಲ ಪಾಶ್ಚಾತ್ಯ ಮಹಿಳೆಯರು ಬಹು ಜಾಗರೂಕತೆಯಿಂದ ನೋಡಿಕೊಳ್ಳುವರು. ಶ್ರೀಚಾಮರಾಜೇಂದ್ರ ಒಡೆಯರವರೂ ತಮ್ಮ ಪಾಶ್ಚಾತ್ಯ ಮಿತ್ರವರ್ಗಕ್ಕೆ ಸಂದರ್ಶನಕೊಟ್ಟು ಮರ್ಯಾದೆಮಾಡುವುದಕ್ಕೆ ಆ ವಿಧವಾದ ಏರ್ಪಾಡನ್ನು ಅರಮನೆಯ ಒಂದೆರಡು ಭಾಗದಲ್ಲಿ ಕಲ್ಪಿಸಿದ್ದುದು ಮಾತ್ರವಲ್ಲದೆ, ನಾನಾದೇಶಗಳಲ್ಲಿ ದೊರೆಯುವ ಅಪೂರ್ವ ವಸ್ತುಗಳನ್ನು ತರಿಸಿ ಅವುಗಳನ್ನು ತಾವೇ ತಮ್ಮಿಷ್ಟಬಂದ ಕ್ರಮದಲ್ಲಿಯೂ ಇಷ್ಟಬಂದೆಡೆಯಲ್ಲಿಯೂ ಬಹು ರಮ್ಯವಾಗಿ ರಚನೆಗೈದಿಡುತ್ತಿದ್ದರು. ಇದನ್ನು ಕಂಡು ಪಾಶ್ಚಾತ್ಯ ಮಹಿಳೆಯರೂ ಸಹ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುತ್ತಿದ್ದರು. ಇಷ್ಟು ಮಾತ್ರವಲ್ಲದೆ, ವೈಸ್ರಾಯಿಗಳು ಗವರ್ನರುಗಳು ಮುಂತಾದ ಆಂಗ್ಲೇಯ ರಾಷ್ಟ್ರಾಧಿಕಾರಿಗಳು ರಾಜಧಾನಿಗೆ ಬಂದ ಕಾಲದಲ್ಲಿ, ಅರಮನೆಯೊಳಗೆ ಅವರನ್ನು ಭೇಟಿಮಾಡಿಕೊಳ್ಳುವುದಕ್ಕೂ ಎಂದವರಿಗೆ ಮರ್ಯಾದೆ ಮಾಡುವುದಕ್ಕೂ ತಕ್ಕ ಸನ್ನಾಹಕ್ರಮಗಳನ್ನೆಲ್ಲ ಶ್ರೀಮನ್ಮಹಾರಾಜರವರೇ ಪೂರ್ವಭಾವಿಯಾಗಿ ನಿಂತು ಮಾಡಿಸುತ್ತಿದ್ದರು.

ಶ್ರೀಮನ್ಮಹಾರಾಜರವರು ಪರೇಂಗಿತ ಜ್ಞಾನಮಾತ್ರವನ್ನಲ್ಲದೆ, ಕಾಲದೇಶಗಳಿಗನುಗುಣವಾಗಿ ವರ್ತಿಸುವ ಕ್ರಮವನ್ನೂ, ಗುರುಹಿರಿಯರ ವಿಷಯದಲ್ಲಿ ಯಾವ ರೀತಿಯಲ್ಲಿ ನಡೆದುಕೊಳ್ಳಬೇಕೆಂಬ ತಾರತಮ್ಯ ಜ್ಞಾನವನ್ನೂ ಬಾಲ್ಯದಿಂದಲೂ ಅನ್ಯೂನವಾಗಿ ಪಡೆದಿದ್ದರು. ೧೮೮೩ನೆಯ ಇಸವಿಯಲ್ಲಿ ಮೈಸೂರಿನಲ್ಲಿರುವ ಸರಸ್ವತೀ ಪ್ರಾಸಾದ ಸಂಸ್ಕೃತ ಪಾಠಶಾಲೆಯ ಪ್ರಥಮ ವಾರ್ಷಿಕೋತ್ಸವವು ನಡೆಯಿತು. ಆ ಕಾಲದಲ್ಲಿ, ಭರತಖಂಡದ ನಾನಾಭಾಗಗಳಿಂದ ವಿದ್ಯಾರ್ಥಿಗಳು ಬಂದು, ಸಾಹಿತ್ಯ ತರ್ಕ ವ್ಯಾಕರಣ ವೇದಾಂತಾದಿ ನಾನಾ ಶಾಸ್ತ್ರ ಪರೀಕ್ಷೆಗಳನ್ನು ಕೊಟ್ಟು ಬಹುಮಾನಗಳನ್ನು ಪಡೆಯುವುದಕ್ಕೆ ಸಭೆಯಲ್ಲಿ ನೆರೆದಿದ್ದರು. ಆಗ ಶ್ರೀಮನ್ಮಹಾರಾಜರವರ ಕುಲಗುರುಗಳಾದ ಬ್ರಹ್ಮತಂತ್ರ ಪರಕಾಲಸ್ವಾಮಿಗಳೂ, ಸನ್ಮಾನಾರ್ಹರಾದ ರಾಜಾಸ್ಥಾನದ ಚತುಶ್ಶಾಸ್ತ್ರ ಪಂಡಿತರೂ, ವೃದ್ಧಮಹಾಶಯರೂ, ಅಧಿಕಾರಿಗಳೂ ಉತ್ಸವಕ್ಕೆ ಆಹೂತರಾಗಿ ದಯೆಮಾಡಿಸಿದ್ದರು. ಆ ದಿನ ನಡೆಯಬೇಕಾದ ಪಾಠಶಾಲಾ ವಿದ್ಯಾಭಿವೃದ್ಧಿಕಥನ ಪಠನಾದಿಗಳು ಮುಗಿದ ಬಳಿಕ, ತೇರ್ಗಡೆಯಾದವರಿಗೆಲ್ಲ ಬಹುಮಾನಗಳನ್ನು ಶ್ರೀಮನ್ಮಹಾರಾಜರವರೇ ತಮ್ಮ ದಿವ್ಯಹಸ್ತದಿಂದ ಕೊಡಬೇಕೆಂದು ಸಭೆಯವರೆಲ್ಲರೂ ಪ್ರಾರ್ಥಿಸಿದರು. ಅದಕ್ಕೆ ಯುಕ್ತಾಯುಕ್ತ ಪರಿಜ್ಞಾನಶೀಲರಾದ ಶ್ರೀಚಾಮರಾಜೇಂದ್ರ ಒಡೆಯರವರು ಸಕಲ ಮಠಗಳೂ ಸರಸ್ವತೀ ಪೀಠಗಳಾದುದರಿಂದಲೂ, ಇದು ವೇದಶಾಸ್ತ್ರ ಪಾರೀಣರಾದವರಿಗೆ ಬಹುಮಾನಕೊಡುವುದಕ್ಕೆ ಸೇರಿದ ಮಹಾಸಭೆಯಾದುದರಿಂದಲೂ, ಇಂತಹ ಸಮಯದಲ್ಲಿ ಶ್ರೀಸ್ವಾಮಿಗಳೇ ಬಹುಮಾನಗಳನ್ನು ವಿನಿಯೋಗಮಾಡತಕ್ಕದು ಉಚಿತವೆಂದು ಅಪ್ಪಣೆಕೊಡಿಸಿ, ಆ ರೀತಿ ಮಾಡುವಂತೆ ಶ್ರೀಸ್ವಾಮಿಗಳನ್ನು ಪ್ರಾರ್ಥಿಸಿದರು. ಈ ಮಾತುಗಳನ್ನು ಕೇಳಿ ಅಲ್ಲಿ ನೆರೆದಿದ್ದ ವಿದ್ವಾಂಸರೂ ಅಧಿಕಾರಿಗಳೂ ಶ್ರೀಮನ್ಮಹಾರಾಜರವರ ವಿವೇಚನೆಯನ್ನು ಕೊಂಡಾಡಿದರು. ಶ್ರೀಸ್ವಾಮಿಗಳೂ ಬೇರೆಮಾತನ್ನಾಡಲೆಡೆಯಿಲ್ಲದೆ ಶ್ರೀಮನ್ಮಹಾರಾಜರವರ ಇಷ್ಟದಂತೆ ವರ್ತಿಸಿದರು.

ಶ್ರೀಚಾಮರಾಜೇಂದ್ರ ಒಡೆಯರವರು ಮಹಾರಾಜ ಪದವಿಯನ್ನು ಪಡೆದವರಾಗಿದ್ದರೂ, ತಾವು ಅಧಿಕರು ಮತ್ತೊಬ್ಬರು ಅಲ್ಪರು ಎಂಬ ದುರಭಿಮಾನವನ್ನು ದೂರಮಾಡಿದ್ದರು. ಅವರು ಆಡುವ ಮಾತುಗಳಲ್ಲಾಗಲಿ, ಮಾಡುವ ಕೃತ್ಯಗಳಲ್ಲಾಗಲಿ ಅಹಂಭಾವವೆಂಬುದು ಅರಸಿ ನೋಡಿದರೂ ಕಾಣುತ್ತಿರಲಿಲ್ಲ. ಸಿಂಹಾಸನಾರೋಹಣಾದಿ ಮಹೋತ್ಸವಗಳ ಕಾಲದಲ್ಲಿ ತತ್ತತ್ಕಾಲೋಚಿತ ವೇಷದೊಡನೆಯೂ ಯಥೋಚಿತ ಮರ್ಯಾದೆಗಳೊಡನೆಯೂ ಇರುತ್ತಿದ್ದರೇ ಹೊರತು, ಅಹರ್ನಿಶವೂ ಆಗಲಿ, ಅಪ್ರಕೃತ ಪ್ರದೇಶ ಸಮಯಗಳಲ್ಲಾಗಲಿ, ರಾಜೋಪಚಾರವೇ ಆಗಬೇಕೆಂದು ಬಯಸುತ್ತಿರಲಿಲ್ಲ ; ಸಾಮಾನ್ಯಕಾಲ ದೇಶಗಳಲ್ಲಿ ಸಾಮಾನ್ಯ ಮನುಷ್ಯರಂತೆ ವರ್ತಿಸುತ್ತಿದ್ದರು. ಅವರ ವಾಕ್ಕಿನಲ್ಲಿ ಸೌಮ್ಯತೆಯೇ ಹೊರತು ಗರ್ವವೆಂಬುದು ಇರಲೇ ಇಲ್ಲ. ಹಿಂದೆ ಅವರು ಪೂನಾ ಪಟ್ಟಣಕ್ಕೆ ದಯೆಮಾಡಿದ್ದ ಕಾಲದಲ್ಲಿ ಒಂದು ವಿಶೇಷವು

ನಡೆಯಿತು. "ಮೈಸೂರು ಸರಕಾರದಿಂದ ವೇತನವನ್ನು ಪಡೆದು ಶಿಲ್ಪಶಾಸ್ತ್ರ, ವೈದ್ಯ ಶಾಸ್ತ್ರಗಳ ವ್ಯಾಸಂಗಕ್ಕಾಗಿ ಆ ಪಟ್ಟಣಕ್ಕೆ ಹೋಗಿದ್ದ ಮೈಸೂರು ವಿದ್ಯಾರ್ಥಿಗಳು ಒಂದು ದಿನ ಒಂದು ದೊಡ್ಡ ಅಂಗಡಿಗೆ ವ್ಯಾಪಾರಕ್ಕಾಗಿ ಹೋಗಿದ್ದರು. ಆ ದಿನ ಮಹಾರಾಜರೂ ಅಲ್ಲಿಗೆ ಅಕಸ್ಮಾತ್ತಾಗಿ ಹೋದರು. ಹೋಗುವಾಗ, ಗಾಡಿಯನ್ನೂ ಗಾಡಿಯಲ್ಲಿ ಕುಳಿತಿದ್ದ ತಮ್ಮ ಭಾವಂದಿರನ್ನೂ ಅಂಗರಕ್ಷಕ ಸೈನ್ಯದವರನ್ನೂ ಸ್ವಲ್ಪ ದೂರದಲ್ಲಿ ಬಿಟ್ಟು ಹೋದರು. ಅವರು ಧರಿಸಿದ್ದ ವಸ್ತ್ರಗಳು ವೈಖರಿಯಿಲ್ಲದೆ ಸರ್ವಸಾಧಾರಣವಾಗಿದ್ದುದರಿಂದ ಅವರನ್ನು ರಾಜರೆಂಬುದಾಗಿ ಯಾರೂ ಗುರುತು ಹಿಡಿಯಲಾರದೆಹೋದರು. ಮಹಾರಾಜರು ಒಂದು ಕಡೆಯಿಂದ ಆ ಅಂಗಡಿಯಲ್ಲಿದ್ದ ಸಾಮಾನುಗಳನ್ನು ನೋಡುತ್ತ, ತಮಗೆ ಬೇಕಾದ ಪದಾರ್ಥಗಳನ್ನು ಪ್ರತ್ಯೇಕವಾಗಿ ತೆಗೆದಿಡುವಂತೆ ಅಂಗಡಿಯವನಿಗೆ ತೋರಿಸುತ್ತ, ಮುಂದೆಮುಂದೆ ಹೋಗುತ್ತಿರುವಾಗ, ಅವರ ದೃಷ್ಟಿಯು ಮುಂದುಗಡೆ ಸಾಮಾನುಗಳನ್ನು ನೋಡುತ್ತಿದ್ದ ಮೈಸೂರು ವಿದ್ಯಾರ್ಥಿಗಳ ಮೇಲೆ ಬಿದ್ದಿತು. ಅವರನ್ನು ನೋಡಿದ ಕೂಡಲೆ ಅವರಿಗೆ ಮುಂಚೆ ತಾವೇ "ಗುಡ್ ಮಾರ್ನಿಂಗ್" ಎಂಬುದಾಗಿ ವಂದನೆ ಮಾಡಿದರು. ಅವರು ಯಾರೂ ಇವರ ಕಡೆ ಅಷ್ಟು ಗಮನಕೊಡದಿದ್ದರೂ ಇದರಿಂದ ಮಹಾರಾಜರಿಗೆ ಕೋಪಬರಲಿಲ್ಲ. ಅಷ್ಟರಲ್ಲಿ ಮೊದಲು ಅಂಗಡಿಗೆ ಬಂದಿದ್ದ ವಿದ್ಯಾರ್ಥಿಗಳ ಕೆಲಸ ಮುಗಿಯಲು, ಅವರು ಮನೆಗೆ ಹೋಗುತ್ತ ತಮ್ಮನ್ನು ಅಂಗಡಿಯಲ್ಲಿ ನೋಡಿ ವಂದಿಸಿದವರು ಯಾರೆಂಬುದಾಗಿ ತಮ್ಮೊಳಗೆ ತಾವು ಮಾತನಾಡಿಕೊಳ್ಳುತ್ತ ಹೋಗುತ್ತಿರುವಾಗ, ದಾರಿಯಲ್ಲಿ ನಿಂತಿದ್ದ ಮಹಾರಾಜರವರ ಗಾಡಿಯನ್ನೂ ಅವರ ಭಾವಂದಿರಾದ ಬಕ್ಷಿಯವರನ್ನೂ ಬಾಡೀ ಗಾರ್ಡಿನವರನ್ನೂ ನೋಡಿ ಎಲ್ಲರೂ ವಿಸ್ಮಿತರಾದರು. ಅಷ್ಟರಲ್ಲೇ ಮಹಾರಾಜರೂ ಬಂದು ಗಾಡಿಯನ್ನು ಹತ್ತಿದರು. ಆಗ ಆ ವಿದ್ಯಾರ್ಥಿಗಳ ಹೃದಯದಲ್ಲಿ ತೋರಿದ ಮನೋಭಾವವನ್ನು ಪಾಠಕಮಹಾಶಯರೇ ಸುಲಭವಾಗಿ ಊಹಿಸಬಹುದು."

ಈ ರೀತಿಯಾಗಿ ಶ್ರೀಚಾಮರಾಜೇಂದ್ರ ಒಡೆಯರವರು ಪರಸ್ಥಳಗಳಲ್ಲಿ ಹೊರಗೆ ಹೊರಟರೆ ಬಾಹ್ಯಾಡಂಬರವನ್ನು ತೋರಿಸದೆ ಸಾಮಾನ್ಯ ಗೃಹಸ್ಥರಂತೆ ವರ್ತಿಸುತ್ತಿದ್ದರು. ಕೆಲವು ಸಂದರ್ಭಗಳಲ್ಲಿ, ಸಾಧಾರಣ ಜನರಿಗೆ ಸುಲಭವಾಗಿದ್ದರೂ ರಾಜರಿಗೆ ದುರ್ಲಭವಾಗಿರುವ ವಿನೋದಗಳನ್ನು ಪರಾಮರ್ಶಿಸಲು ಅದಕ್ಕೆ ತಕ್ಕಸಮಕಟ್ಟಿನೊಡನೆ ಹೊರಗೆ ದಯಮಾಡುತ್ತಿದ್ದರು. ಅವರು ಡಂಭವಿಲ್ಲದವರು ಮಾತ್ರವೇ ಅಲ್ಲದೆ ಬಹು ವಿನೋದಪರರೂ ಆಗಿದ್ದರೆಂಬುದಕ್ಕೆ ದೃಷ್ಟಾಂತಗಳನೇಕವುಂಟು. ೧೮೮೫ನೆಯ ಇಸವಿಯಲ್ಲಿ ಅವರು ಶಿವಮೊಗ್ಗಾ ಪ್ರಾಂತ ಸವಾರಿ ಹೋಗಿದ್ದ ಕಾಲದಲ್ಲಿ, ಒಂದುದಿನ ಬೇಟೆಗೆ ತಕ್ಕ ವಸ್ತ್ರಗಳನ್ನು ಧರಿಸಿ ಯೂರೋಪಿಯನ್ ಸಾಮಾಜಿಕರೊಡನೆ ಬೇಟೆಗೆ ಹೋಗುತ್ತಿರುವಾಗ, ಮಹಾರಾಜರು ಬಂದಿದ್ದಾರೆಂಬ ವರ್ತಮಾನವನ್ನು ಕೇಳಿದ ಸುತ್ತಮುತ್ತಣ ಗ್ರಾಮಾಂತರದ ಜನಗಳು ಅವರನ್ನು ನೋಡಬೇಕೆಂಬ

ತವಕದಿಂದ ಹಳ್ಳಕೊಳ್ಳಗಳನ್ನು ದಾಟಿ ಬೀಳುವುದೇಳುವುದನ್ನು ಕೂಡ ಕಾಣದೆ ಓಡಿಬರುತ್ತಿರುವುದನ್ನು ಕಂಡು ಅವರನ್ನು ಕುರಿತು "ಗೌಡರೇ, ಇಷ್ಟು ತ್ವರೆಯಾಗಿ ಎಲ್ಲಿಗೆ ಹೋಗುತ್ತೀರಿ?" ಎಂದು ಕೇಳಿದರು. ಗೌಡರು, "ಸ್ವಾಮಿ, ನಮ್ಮ ದೊರೆಗಳು ಬಂದಿರುವರಂತೆ; ಅವರ ದರ್ಶನಮಾಡಲು ಹೋಗುತ್ತೇವೆ" ಎಂದು ಹೇಳಲು, ಮಹಾರಾಜರು ಅವರನ್ನು ನೋಡಿ, "ನಿಮ್ಮ ದೊರೆಗಳು ಈಗ ಬೇರೆ ಕೆಲಸಕ್ಕೆ ಹೋಗುತ್ತಾರೆ; ಈಗ ಸಮಯವಿಲ್ಲ; ಮಧ್ಯಾಹ್ನ ಬಂದು ಅವರನ್ನು ಕಾಣಬಹುದು" ಎಂದು ಹೇಳಿದರು. ಅದಕ್ಕಾ ರೈತರು ತಮ್ಮೊಳಗೆ ತಾವೇ, "ನಮ್ಮ ದೊರೆಗಳಿಗೆ ಕೆಲಸವೆಂದರೇನು?" ಎಂದು ಗೊಣಗುಟ್ಟಿಕೊಂಡು, "ಈಗ ಅವರೆಲ್ಲಿರುವರೋ ತಿಳಿಸಿರಿ, ನಾವೇ ಕಾಣುತ್ತೇವೆ" ಎಂದು ಹೇಳಿದರು. ಮಹಾರಾಜರು ಡೇರೆಯ ಸಮೀಪದಲ್ಲಿ ದಿಟ್ಟವಾಗಿ ಉಡಿಗೆ ತೊಡಿಗೆಗಳನ್ನು ಹಾಕಿಕೊಂಡು ನಿಂತಿದ್ದ ಒಬ್ಬ ಅಧಿಕಾರಿಯನ್ನು ತೋರಿಸಿ, "ಅವರೇ ನಿಮ್ಮ ದೊರೆಗಳು" ಎಂದು ಅಪ್ಪಣೆ ಕೊಟ್ಟು ಸಮೀಪದಲ್ಲಿದ್ದ ಒಂದು ದಿಣ್ಣೆಯಮೇಲೆ ನಿಂತುಕೊಂಡರು. ಏನೂ ತಿಳಿಯದ ಆ ಬಡರೈತರು ಆ ದೊಡ್ಡಮನುಷ್ಯನ ಹತ್ತಿರ ಹೋಗಿ ಕಂಬಳಿಗಳನ್ನು ಹಾಸಿಕೊಂಡು ಅಡ್ಡಬೀಳಲಾರಂಭಿಸಿದರು. ಮಹಾರಾಜರು ಮಾಡಿದ ಈ ವಿಚಿತ್ರ ವಿನೋದವನ್ನು ನೋಡಿ ಸಂಗಡ ಇದ್ದ ಯೂರೋಪಿಯನರೆಲ್ಲರೂ ಘೊಳ್ಳೆಂದು ನಕ್ಕರು.

ಶ್ರೀಮನ್ಮಹಾರಾಜರು ದೇಶಾಟನೆಗಾಗಿ ಹೊರಟಾಗಲೆಲ್ಲ ಅವರ ಕೀರ್ತಿ ಕಲಾಪವನ್ನು ಕೇಳಿರತಕ್ಕ ದೇಶ ವಿದೇಶಗಳ ಪ್ರಜೆಗಳು ತಮ್ಮ ರಾಜಭಕ್ತಿಯನ್ನು ಸೂಚಿಸಲೋಸುಗ ಮಹಾರಾಜರ ದರ್ಶನವನ್ನು ಬಯಸಿ ಫಲಪುಷ್ಪಾದಿಗಳೊಡನೆ ಸ್ಟೇಷನ್ನುಗಳಲ್ಲಿ ಕಾದಿರುತ್ತಿದ್ದರು. ಮಹಾರಾಜರು ತಮ್ಮ ಉಡಿಗೆ ತೊಡಿಗೆಗಳನ್ನು ಬದಲಾಯಿಸಿಕೊಂಡು, ಗಾಡಿಯನ್ನು ಸ್ಟೇಷನ್ನುಗಳಲ್ಲಿ ನಿಲ್ಲಿಸಿದ ಕೂಡಲೆ ತಟ್ಟನೆ ಗಾಡಿಯಿಂದಿಳಿದು, ಅಲ್ಲಿ ಕಾದಿದ್ದವರಿಗೆ ತಿಳಿಯದಂತೆ ಸ್ಟೇಷನ್ ಅಂಗಳದಲ್ಲೆಲ್ಲ ತಿರುಗಾಡಿ, ಅಲ್ಲಿರತಕ್ಕ ವಿಶೇಷಗಳನ್ನೆಲ್ಲ ಪರಾಮರ್ಶಿಸಿ, ಅಲ್ಲಿ ಯಾರಾದರೂ ಬಡವನಾಗಿಯೂ ಯೋಗ್ಯನಾಗಿಯೂ ಇರುವವನನ್ನು ನೋಡಿ ಅವನ ಮುಖದಿಂದ ಅಲ್ಲಿ ಕಾದಿರತಕ್ಕವರ ಪೂರ್ವೋತ್ತರಗಳನ್ನೆಲ್ಲ ತಿಳಿದುಕೊಂಡು, ಅತನಿಗೇನಾದರೂ ಬಹುಮಾನಕೊಟ್ಟು ಕಳುಹಿಸಿ, ಗಾಡಿ ಹೊರಡುವುದಕ್ಕೆ ಮುಂಚೆ ಸ್ವಲ್ಪ ಹೊತ್ತಿನೊಳಗಾಗಿ ಆಗುಪ್ತ ವೇಷವನ್ನು ತೆಗೆದು ಎಲ್ಲರ ಮುಂದೂ ಗಾಡಿಯಿಳಿದು ಸ್ಟೇಷನ್ನಿಗೆ ಬರುತ್ತಿದ್ದರು. ದರ್ಶನಕ್ಕೆ ಬಂದು ಕಾದುಕೊಂಡಿರುವವರು, ಮಹಾರಾಜರು ಬಂದರೆಂದು ತಿಳಿದು, ಫಲಪುಷ್ಪಗಳನ್ನೊಪ್ಪಿಸಿ ತಮ್ಮ ಅಭೀಷ್ಟಗಳನ್ನು ಅರಿಕೆಮಾಡಿಕೊಳ್ಳುತ್ತಿದ್ದರು. ಶ್ರೀಮನ್ಮಹಾರಾಜರು ಅವರು ಮಾಡಿದ ರಾಜೋಪಚಾರಗಳಿಗಾಗಿ ಅವರಿಗೆ ತಮ್ಮ ಕೃತಜ್ಞತೆಯನ್ನು ವ್ಯಕ್ತಗೊಳಿಸಿ, ಅಲ್ಲಿರುವ ಸಾಮಾನ್ಯಾಧಿಕಾರಿಗಳನ್ನೂ ದನಿಕರು ಮುಂತಾದವರುಗಳನ್ನೂ ವಿನಯವಾಕ್ಯಗಳಿಂದ ಕುಶಲಪ್ರಶ್ನೆಮಾಡಿ ಅವರು ಮಾಡಿದ ವಂದನೆಗಳನ್ನು ಸ್ವೀಕರಿಸಿ ಪುನಃ ಸ್ವಸ್ಥಾನವನ್ನು ಸೇರುತ್ತಿದ್ದರು.

ಮಹಾರಾಜರು ಮಧುರ ಸಂಭಾಷಣೆಯಲ್ಲಿ ಬಹು ಪ್ರವೀಣರು. ಅವರಾಡುತ್ತಿದ್ದ ಹೃದಯಂಗಮವಾದ ವಾಕ್ಯಗಳಿಂದ ಅಹಿತರೂ ಹಿತರಾಗುತ್ತಿದ್ದರು. ಪ್ರಜೆಗಳು ರಾಜ್ಯಭಾರ ವಿಷಯದಲ್ಲಿ ಪರಿಜ್ಞಾನವನ್ನು ಪಡೆದಹಾಗೆಲ್ಲ ರಾಜಕಾರ್ಯಗಳನ್ನು ಅವರಿಗೊಪ್ಪಿಸಿ ನಡೆಯಿಸುವುದು ಪರಿಪಾಲಕರಿಗೆ ಅವಶ್ಯವೆಂಬುದು ಅನುಭವವೇದ್ಯವಾಗಿರುವುದು. ಈ ತತ್ತ್ವವನ್ನರಿಯದ ಅಧಿಕಾರಿಗಳು ತಮ್ಮ ಅಧಿಕಾರ ದರ್ಪವೊಂದನ್ನೇ ಬಲಪಡಿಸಿಕೊಂಡು ಯದೃಚ್ಛೆಯಾಗಿ ನಡೆಯತೊಡಗಿದರೆ ಪ್ರಜೆಗಳು ತಮ್ಮ ಅತೃಪ್ತಿಯನ್ನು ಪ್ರತ್ಯಕ್ಷವಾಗಿ ತೋರಿಸದೆ ಬಿಡರು. ೧೮೮೭ನೆಯ ಇಸವಿಯ ನವರಾತ್ರಿಯಲ್ಲಿ ಪೌರಕಾರ್ಯನಿರ್ವಾಹಕ ಸಂಘದ ಅಧಿಕಾರಿಗಳ ಅತ್ಯಾಚಾರದಿಂದ ರಾಜಧಾನಿಯ ವರ್ತಕರೆಲ್ಲರೂ ತಿರುಗಿಬಿದ್ದು, ಅಂಗಡಿಗಳ ಬಾಗಿಲುಗಳನ್ನು ಮೂರು ನಾಲ್ಕು ದಿನದ ಪರ್ಯಂತರವೂ ತೆಗೆಯದೆ, ಕ್ರಯವಿಕ್ರಯಗಳನ್ನು ಮಾಡದೆ ತಡೆದುಬಿಟ್ಟರು. ಉತ್ಸವ ದರ್ಶನಾರ್ಥವಾಗಿ ಬಂದಿದ್ದ ಪರಸ್ಥಳದವರಿಗೂ ಊರಲ್ಲಿ ಅನೇಕರಿಗೂ ಬಹು ಶ್ರಮವಾಯಿತು. ಆಗ ಕೆಲವು ಮಂದಿ ಅಧಿಕಾರಿಗಳು ಅಂಗಡಿಯ ಬೀದಿಗಳಲ್ಲಿ, ತಿರುಗಿ ವರ್ತಕರನ್ನು ಹೆದರಿಸಿನೋಡಿದರು. ಆ ಪ್ರಯತ್ನಗಳಿಂದ ಏನೂ ಪ್ರಯೋಜನವಿಲ್ಲವಾಯಿತು. ಈ ವರ್ತಮಾನವು ಶ್ರೀಮನ್ಮಹಾರಾಜರವರ ಶ್ರುತಿಪಥವನ್ನೈದಿದ ಕೂಡಲೆ, ಸಾಹಸಕ್ಕಿಂತಲೂ ಸಹನವೇ ಮೇಲೆಂದು ತಿಳಿದು ಮಹಾಸ್ವಾಮಿಯವರು ಮುಖಂಡರಾದ ವರ್ತಕರನ್ನು ಕರೆಯಿಸಿ, ತಮ್ಮ ಪ್ರಶಸ್ತವಾಕ್ಯಗಳಿಂದ ಅವರನ್ನು ಸಮಾಧಾನಪಡಿಸಿದರು. ಒಡನೆಯೇ ವರ್ತಕರೆಲ್ಲರೂ ಮನಸ್ಸು ಕರಗಿದವರಾಗಿ ತಮ್ಮಿಂದಾದ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಂಡು ನಿಮಿಷಮಾತ್ರದಲ್ಲಿ ಅಂಗಡಿಗಳನ್ನು ತೆಗೆದು ಎಂದಿನಂತೆ ಸ್ವಸ್ವಕಾರ್ಯನಿರತರಾದರು. ಮಾತನಾಡುವುದಕ್ಕೆ ಎಲ್ಲರಿಗೂ ಬರುವುದು; ಆದರೆ ಸಮಯವರಿತು ಮಾತನಾಡಿ ಕಾರ್ಯವನ್ನು ಜಯಿಸುವುದು ಎಲ್ಲರಿಂದಲೂ ನಡೆಯದು.

ಸಹನ ಗುಣಕ್ಕೆ ಶ್ರೀಚಾಮರಾಜೇಂದ್ರ ಒಡೆಯರವರು ಜನ್ಮಭೂಮಿಯಾಗಿದ್ದರೆಂದು ಹೇಳಬೇಕು. ಅಪರಾಧ ಮಾಡಿದವರನ್ನು ಶಿಕ್ಷಿಸುವ ವಿಷಯದಲ್ಲಿ ಮುಂದಾದರೂ ಅಪರಾಧಿಯು ಉತ್ತಮಸ್ಥಿತಿಯನ್ನೈದಬೇಕೆಂಬುದೇ ಮುಖ್ಯೋದ್ದೇಶವು. ಈ ರಹಸ್ಯವನ್ನರಿತ ಶ್ರೀಮನ್ಮಹಾರಾಜರವರು ಚೌರ್ಯಾದ್ಯಪರಾಧಗಳನ್ನು ಮಾಡಿ ತಮ್ಮ ಕೈಗೆ ಸಿಕ್ಕಿದವರನ್ನು ಒಡನೆಯೇ ಕೆಲಸದಿಂದ ತೆಗೆದುಹಾಕದೆ ಅವರಲ್ಲಿ ಹೆದರಿಕೆಯನ್ನು ಹುಟ್ಟಿಸಿ, ಬುದ್ಧಿವಾದವನ್ನು ಹೇಳಿ ಮುಂದೆ ಆ ರೀತಿ ನಡೆಯಬೇಡವೆಂದು ಎಚ್ಚರಿಸಿ ಅವರನ್ನು ಬಿಟ್ಟುಬಿಡುತ್ತಿದ್ದರು. ಒಂದು ದಿನ ಅವರ ಸಮೀಪದಲ್ಲಿದ್ದ ಒಬ್ಬ ಸೇವಕನು ಅವರ ಕೆಲವು ಉಡುಪುಗಳನ್ನು ಕಳ್ಳತನ ಮಾಡಲು, ಮಹಾರಾಜರು ಅದನ್ನು ತಿಳಿದು; ಅವನನ್ನು ಪ್ರತ್ಯೇಕವಾಗಿ ಕರೆದು, "ನನ್ನ ಸಮೀಪದಲ್ಲಿಯೇ ನೀನು ಈ ಕೆಲಸವನ್ನು ಮಾಡಿರುವೆ. ಇಂತಹ ನೀಚಕೃತ್ಯವನ್ನು ಬಿಟ್ಟುಬಿಡು, ಇನ್ನು ಮೇಲೆ ಮಾಡಬೇಡ; ಇದಕ್ಕಾಗಿ ನಾನು ನಿನ್ನನ್ನು ಇನ್ನೆಲ್ಲಾದರೂ ಕಳುಹಿಸಿಬಿಟ್ಟರೆ, ಅಲ್ಲಿಯು

ಅಧಿಕಾರಿಗಳು ನಿನ್ನನ್ನು ಕ್ರೂರವಾಗಿ ದಂಡಿಸುವರು ; ಇದರ ಮೇಲೆ ನೀನು ಮಕ್ಕಳಂದಿಗನಾಗಿಯೂ ವೃದ್ಧನಾಗಿಯೂ ಇರುವೆ. ಈ ಸಾರಿ ಕ್ಷಮಿಸಿದ್ದೇನೆ ; ಇನ್ನು ಮೇಲೆ ಹೀಗೆ ಮಾಡಬೇಡ '' ಎಂದು ಹೇಳಿ ಕಳುಹಿಸಿಬಿಟ್ಟರು.

ಪರಸ್ಥಳದಲ್ಲಿದ್ದಾಗ ಶ್ರೀಮನ್ಮಹಾರಾಜರವರ ಮೂರು ಜಾವದ ಫಲಾಹಾರ ಕಾಲದಲ್ಲಿ ಪ್ರಿನ್ಸ್ ಸುಬ್ರಹ್ಮಣ್ಯರಾಜ ಅರಸಿನವರು, ಮಿಲಿಟರಿ ಬಕ್ಷಿ ಬಸಪ್ಪಾಜಿ ಅರಸಿನವರು, ದರ್ಬಾರ್ ಬಕ್ಷಿ ನರಸಿಂಹಯ್ಯಂಗಾರ್ಯರು ಮತ್ತು ಸಂಗಡಬಂದಿರತಕ್ಕ ಒಬ್ಬಿಬ್ಬರು ರಾಜಸಂಬಂಧಿಗಳು—ಇವರಿಗೆಲ್ಲ ಮಹಾಸ್ವಾಮಿಯವರ ಸಂಗಡಲೇ ಫಲಾಹಾರ ನಡೆಯುತ್ತಿದ್ದಿತು. ಫಲಾಹಾರಕ್ಕೆ ನಿತ್ಯವೂ ಮೂರು ನಾಲ್ಕು ವಿಧವಾದ ರವೆಯ ಭಕ್ಷ್ಯಗಳನ್ನೂ ಮೂರು ನಾಲ್ಕು ತರದ ಖಾರದ ಪದಾರ್ಥಗಳನ್ನೂ ಹಣ್ಣು ಹಂಪಲುಗಳನ್ನೂ ಬಾದಾಮಿ ಹಾಕಿದ ಹಾಲನ್ನೂ ಸಿದ್ಧಮಾಡಿಡುತ್ತಿದ್ದರು. ಆದರೆ ಮಹಾಸ್ವಾಮಿಯವರಿಗೆ ಇವಕ್ಕಿಂತಲೂ ಹೆಪ್ಪುಹಾಕಿದ ಗಟ್ಟಿಮೊಸರಿನ ಅನ್ನ, ಮಾವಿನಕಾಯಿ ಎಣ್ಣೆಗಾಯಿಯ ಉಪ್ಪಿನಕಾಯಿ—ಈ ಸಾಮಾನ್ಯಾಹಾರದಲ್ಲಿ ಪ್ರೀತಿ ಹೆಚ್ಚು. ಇದಕ್ಕಾಗಿ ಫಲಾಹಾರದ ಮನೆಯವರು ಬೆಳಗಿನ ಹತ್ತು ಗಂಟೆಯ ಹೊತ್ತಿಗೇ ಹೊಸದಾಗಿ ಮೊಸರನ್ನು ಹೆಪ್ಪುಹಾಕಿ ಇಡುತ್ತಿದ್ದರು. ಹೀಗಿರುವಾಗ, ಬಿಡದಿಯವರಲ್ಲಿ ಒಬ್ಬ ಧೂರ್ತನು ನಿತ್ಯವೂ ಕಾಲಕ್ಕೆ ಸರಿಯಾಗಿ ಭೋಜನಕ್ಕೆ ಬಾರದೆ ಮನಸ್ಸಿಗೆ ಬಂದಾಗ ಬಂದು ಆಗ ಅನ್ನಹಾಕಿರೆಂದು ಅಡಿಗೆಯವರಿಗೆ ತೊಂದರೆಕೊಟ್ಟು ನಿಷ್ಠುರವಾಗಿ ಮಾತನಾಡುತ್ತಿದ್ದನು. ಇದರಿಂದ ಬೇಸರ ಹೊಂದಿದ ಅಡಿಗೆಯವರು ಅವನಿಗೆ ತಕ್ಕಂತೆ ಬುದ್ಧಿಗಲಿಸಬೇಕೆಂದು ಎಲ್ಲರೂ ಮಾತನಾಡಿಕೊಂಡು, ಒಂದು ದಿನ ಬೆಂಗಳೂರು ಕ್ಯಾಂಪಿನಲ್ಲಿದ್ದಾಗ, ಎಲ್ಲರಿಗೂ ಭೋಜನವಾದ ಬಳಿಕ, ಮಿಕ್ಕಿದ್ದುದನ್ನೆಲ್ಲ ಪಾತ್ರೆ ಬೆಳಗುವವರಿಗೆ ಹಾಕಿ ಪಾತ್ರೆಗಳನ್ನೆಲ್ಲ ತೊಳೆದಿಟ್ಟು ತಾವೆಲ್ಲರೂ ಒಂದೆಡೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಎಲ್ಲಿಯೋ ಹೋಗಿದ್ದ ಆ ಧೂರ್ತನು ಒಂದು ಗಂಟೆಯ ಹೊತ್ತಿಗೆ ಬಂದು ನೋಡುವಲ್ಲಿ ತನಗಾಗಿ ಏನೂ ಇಡದೆ ಆಗಲೇ ಸಂಜೆಯ ಅಡಿಗೆಗೆ ಪಾತ್ರೆಗಳನ್ನು ಕೂಡ ಬೆಳಗಿ ಇಟ್ಟಿದ್ದುದನ್ನು ಕಂಡು, ತನಗೆ ಭೋಜನಕ್ಕೆ ಏನೂ ದೊರೆಯದುದರಿಂದ, ಆಕಡೆ ಈಕಡೆ ನೋಡಿ ಯಾರೂ ಇಲ್ಲದಿರಲು, ಮಹಾಸ್ವಾಮಿಯವರ ಮೂರು ಜಾವದ ಆರೋಗಣೆಗಾಗಿ ಇಟ್ಟಿದ್ದ ಅನ್ನವನ್ನೂ ಬೆಳ್ಳಿಯ ಬಟ್ಟಲಲ್ಲಿ ಹೆಪ್ಪು ಹಾಕಿಟ್ಟಿದ್ದ ಮೊಸರನ್ನೂ ಬಡಿಸಿಕೊಂಡು ಭೋಜನಮಾಡಿ ಸದ್ದುಮಾಡದೆ ಎಲ್ಲೋ ಹೋಗಿ ಮಲಗಿಕೊಂಡುಬಿಟ್ಟನು. ಆರೋಗಣೆಯ ಕಾಲ ಬಂದಿತು. ಫಲಾಹಾರದ ಮನೆಯವರು ಭಕ್ಷ್ಯಗಳನ್ನೆಲ್ಲ ತಯಾರ್ಮಾಡಿ ತಟ್ಟೆಗಳಲ್ಲಿ ತುಂಬಿ ಎಲ್ಲರಿಗೂ ಫಲಾಹಾರಕ್ಕೆ ಇರಿಸಿ ಮಹಾಸ್ವಾಮಿಯವರಿಗೆ ಅನ್ನವನ್ನೂ ಮೊಸರನ್ನೂ ಬಡಿಸುವುದಕ್ಕೆ ನೋಡುವಲ್ಲಿ, ಅನ್ನವೂ ಮೊಸರೂ ಇಲ್ಲದೆ ಬರಿ ಪಾತ್ರೆಗಳು ಮಾತ್ರ ಇರಲು, ಎಲ್ಲರೂ ದಿಗಿಲು ಬಿದ್ದು ಇಂತಹ ಅಚಾತುರ್ಯವಾದ ಕೆಲಸವು ಹೇಗೆ ನಡೆದುಹೋಯಿತೆಂದು ತಲ್ಲಣಿಸಿದರು. ಎಲ್ಲರಿಗೂ ಬಡಿಸಿ ಮಹಾರಾಜರಿಗೆ ಮಾತ್ರ ಏನನ್ನೂ ಬಡಿಸದೆ

ಒಂದೆರಡು ನಿಮಿಷ ಸಾವಕಾಶವಾಯಿತು. ಒಳಗಿನಿಂದ ಏನೂ ಬಾರದುದರಿಂದ ಮಹಾಸ್ವಾಮಿಯವರು ಬಾಗಿಲ ಕಡೆ ನೋಡಿದರು. ಅಡಿಗೆಯ ಮನೆಯ ದಫೇದಾರನ ಮುಖಕೆಟ್ಟು ವಿವರ್ಣವಾಗಿ ಹೋಗಿರುವುದನ್ನು ಇಂಗಿತಜ್ಞರಾದ ಮಹಾಸ್ವಾಮಿಯವರು ನೋಡಿ ಏನೋ ಅಚಾತುರ್ಯವು ನಡೆದುಹೋಗಿದೆಯೆಂದೂ, ಆದುದರಿಂದಲೇ ತಮಗೆ ಮೊಸರನ್ನವನ್ನು ಬಡಿಸಲಿಲ್ಲವೆಂದೂ ತಿಳಿದು ಅವನನ್ನು ಕುರಿತು, "ಈ ದಿನ ನನಗೆ ಮೊಸರನ್ನ ಬೇಡ; ಇತರರಿಗಿಟ್ಟಿರುವಂತೆ ನನಗೂ ಫಲಾಹಾರಕ್ಕೆ ತಂದಿಡು" ಎಂಬುದಾಗಿ ಅಪ್ಪಣೆಕೊಟ್ಟರು. ಅವನು ಬದುಕಿದೆನೆಂದು ತಿಳಿದುಕೊಂಡು, ಎಲ್ಲರಂತೆ ಮಹಾರಾಜರವರಿಗೂ ಫಲಾಹಾರಕ್ಕೆ ತಂದಿರಿಸಿದನು. ಫಲಾಹಾರವಾದ ಮೇಲೆ. ತಾವೊಬ್ಬರೇ ಇರುವಾಗ ಆ ದಫೇದಾರನನ್ನು ಕರೆಯಿಸಿ, "ಏನೊ! ಈ ದಿನ ನನಗೇ ಸೊನ್ನೆ ಹಾಕಿಬಿಟ್ಟೆ" ಎಂದು ಕೇಳಲು, ಅವನು ನಡೆದ ಸಂಗತಿಯನ್ನೆಲ್ಲ ವಿಜ್ಞಾಪಿಸಿ, ಎಲ್ಲವೂ ಸರಿಯಾಗಿದೆಯೆಂದು ತಿಳಿದು ಮೊದಲೇ ನೋಡಿಕೊಳ್ಳದೆ ಇದ್ದುದು ತನ್ನ ಅಪರಾಧವೆಂದು ನಿಜಸ್ಥಿತಿಯನ್ನು ಬಿನ್ನಯಿಸಿದನು. ಅದಕ್ಕೆ ಮಹಾಸ್ವಾಮಿಯವರು ಸ್ವಲ್ಪವೂ ಕೋಪಿಸಿಕೊಳ್ಳದೆ. "ನೀವೆಲ್ಲರೂ ಅವನಿಗೆ ಸೊನ್ನೆ ಹಾಕಿದಿರಿ; ಅವನು ನನಗೇ ಸೊನ್ನೆ ಹಾಕಿದನು; ಇನ್ನು ಮೇಲೆ ಹಾಗೆ ಮಾಡಬೇಡಿರಿ. ಅವನು ಎಷ್ಟು ಹೊತ್ತಿಗೆ ಬರುತ್ತಾನೆಯೋ ಅಷ್ಟು ಹೊತ್ತಿಗೇ ಅವನಿಗೆ ಅನ್ನಹಾಕಿರಿ. ಯಾರಿಗೂ ಅನ್ನಕ್ಕೆ ತೊಂದರೆ ಮಾಡಬೇಡಿರಿ. ಎಲ್ಲರೂ ಸರಿಯಾಗಿದ್ದರೆ ಆಗ ನಾವೇ ದೇವತೆಗಳಾಗುವೆವು" ಎಂದು ಅಪ್ಪಣೆ ಕೊಡಿಸಿದರು. ಇದೆಂತಹ ಸಹನೆ! ಯಾರಲ್ಲಿ ತಾನೆ ಬಂದೀತು!



ಶ್ರೀಚಾಮರಾಜೇಂದ್ರ ಒಡೆಯರವರು ಸ್ಥಾಪಿಸಿದ ಜೂಗಾರ್ಡನ್ಸ್ ಎಂಬ ಮೃಗಾಲಯ.

ಇನ್ನೊಂದು ದಿನ ಇನ್ನೊಬ್ಬ ಸೇವಕನು ರಾಜಕುಮಾರ ರಾಜಕುಮಾರಿಯರನ್ನು ಆಡಿಸುತ್ತಿರುವಲ್ಲಿ, ರಾಜಕುಮಾರರನ್ನು ಸೋಫಾದ ಮೇಲೆ ಕುಳ್ಳಿರಿಸಿ ತಾನು ಅಜಾಗರೂಕನಾಗಿದ್ದುದರಿಂದ, ಆ ಕುಮಾರರು (ಈಗಣ ಮಹಾರಾಜರು) ಸೋಫಾದ ಮೇಲಿನಿಂದ ಬಿದ್ದುದರಿಂದ ಹಲ್ಲು ಸಂಧಿಸಿ ರಕ್ತ ಸುರಿಯಿತು. ಹತ್ತಿರಿದ್ದವರೆಲ್ಲರೂ ಅದನ್ನು ನೋಡಿ ತಲ್ಲಣಿಸಿದರು. ಈ ಸಮಾಚಾರವು ಮಹಾರಾಣಿಗೆ ತಿಳಿದು ಆ

ಸೇವಕನನ್ನು ಕರೆದು, "ಮಗು ಬೀಳುವ ತನಕ ನೀನು ಏನುಮಾಡುತ್ತಿದ್ದೆ ?" ಎಂದು ಕೇಳಿದರು. ಅವನು ನಡುಗುತ್ತ ಏನೂ ಉತ್ತರಕೊಡದೆ ಸುಮ್ಮನಿದ್ದನು. ಎಷ್ಟೋ ವಿಧವಾಗಿ ಕೇಳಿದರೂ ಅವನು ಭಯಪಟ್ಟು ನಿಜಸ್ಥಿತಿಯನ್ನು ಹೇಳಲಿಲ್ಲ. ಹತ್ತಿರವಿದ್ದ ತಮ್ಮ ಇತರ ಮಕ್ಕಳನ್ನು ಕೇಳಿದಮೇಲೆ ನಿಜಸ್ಥಿತಿಯು ಹೊರಬಿದ್ದಿತು. ಆಗ ತಮ್ಮ ಕೈಯಲ್ಲಿದ್ದ ಬಡಿಯಿಂದ ಆ ಸೇವಕನಿಗೆ ಒಂದು ಪೆಟ್ಟನ್ನು ಹೊಡೆದು ಅವನನ್ನು ಕಳುಹಿಸಿಬಿಟ್ಟರು. ಇಷ್ಟೇ ಹೊರತು ಅವನಿಗೆ ಮತ್ತೇನು ಬಾಧೆಯನ್ನೂ ಉಂಟುಮಾಡಲಿಲ್ಲ. ಆದರೆ, ಕ್ಷಣಕಾಲವಾದಮೇಲೆ ಅವನಿಗೆ ಒಂದು ಪೆಟ್ಟನ್ನು ಹೊಡೆದುದಕ್ಕಾಗಿ ತಾವೇ ಪಶ್ಚಾತ್ತಾಪಪಟ್ಟು ಅವನನ್ನು ಪುನಃ ಕರೆಯಿಸಿಕೊಂಡರು. ಇಂತಹ ಸಹನವಿದ್ದುದರಿಂದಲೇ ಎಲ್ಲರೂ ಅವರನ್ನು ಶಾಂತಮೂರ್ತಿಯೆಂದು ಕರೆಯುತ್ತಿದ್ದರು. ಸಹನಗುಣವೇ ಸತ್ಪುರುಷ ಲಕ್ಷಣವು.

ಕಂದ ॥ ಕೊಲೆಗೆಳಸುವ ಮನುಜಂಗಂ । ನಲವಿಂದಂ ಹಿತವನೆಣಿಸುವಂ ಸತ್ಪುರುಷಂ ॥
ನೆಲದೊಳ್ ತರುಕಡಿವಂಗಂ । ಸಲೆ ತಣ್ಣೆಳಲಿತ್ತು ತೋಷಪಡಿಸುವುದಲ್ತೇ ॥

ಪರರಿಗೆ ಕೇಡನ್ನು ಮಾಡುವುದೆಂದರೆ ಶ್ರೀಚಾಮರಾಜೇಂದ್ರ ಒಡೆಯರವರಿಗೆ ಬಾಲ್ಯದಿಂದಲೂ ಮನವೊಡಂಬಡದು. ಮತ್ತೊಬ್ಬರಿಗೆ ಬಾಧೆಯುಂಟಾದರೆ ತಮಗಾದಂತೆಯೇ ಭಾವಿಸುತ್ತಿದ್ದರು. "ಆತ್ಮವತ್ ಸರ್ವಭೂತಾನಿ" ಎಂಬ ವಾಕ್ಯವು ಮಹಾರಾಜರಲ್ಲಿ ಸಾರ್ಥಕ್ಯವನ್ನು ಪಡೆದಿದ್ದಿತು. "ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್" ಎಂಬ ವೇದವ್ಯಾಸೋಕ್ತವಾದ ಧರ್ಮರಹಸ್ಯದ ಅರ್ಥವನ್ನು ಆಜನ್ಮವಾಗಿಯೇ ಪೂರ್ವಜನ್ಮ ಕರ್ಮ ಪರಿಪಾಕದಿಂದ ತಿಳಿದಿದ್ದರೆಂದು ಅವರ ನಡತೆಯಿಂದ ಕಂಡುಬರುತ್ತಿದ್ದಿತು. ಒಂದು ವೇಳೆ ಅಜ್ಞಾನಕೃತವಾಗಿ ತಮ್ಮಿಂದ ಮತ್ತೊಬ್ಬರಿಗೆ ಸ್ವಲ್ಪ ಬಾಧೆಯುಂಟಾದಂತೆ ತಿಳಿದರೆ, ತಮ್ಮೊಳಗೇ ಬಹು ಸಂಕಟಪಡುತ್ತಿದ್ದರು. ಇದಕ್ಕೆ ದೃಷ್ಟಾಂತವಾಗಿ, ಶ್ರೀಮನ್ಮಹಾರಾಜರಿಗೆ ಚಿಕ್ಕಂದಿನಲ್ಲಿ ಪೋಲೋ ಆಟವನ್ನು ಕಲಿಸುವುದಕ್ಕೆ ನಿಯಮಿತರಾಗಿ ಅಂಗರಕ್ಷಕೋದ್ಯೋಗದಲ್ಲಿದ್ದ ಖಾನ್ ಬಹದ್ದೂರ್ ಬದ್ರೊದೀನ್ ಎಂಬವರು ಹೇಳಿರುವುದೇನೆಂದರೆ: "ನಾನು ಮಹಾರಾಜರಿಗೆ ಬಾಲ್ಯದಲ್ಲಿ ಕುದುರೆಯ ಸವಾರಿಯನ್ನೂ ಪೋಲೋ ಆಟವನ್ನೂ ಕಲಿಸುತ್ತಿದ್ದೆನು. ಒಂದು ದಿನ ನಾವೆಲ್ಲರೂ ಪೋಲೋ ಆಡುತ್ತಿರುವಾಗ, ಮಹಾರಾಜರು ಚೆಂಡನ್ನು ಹೊಡೆಯಲು ಬ್ಯಾಟನ್ನು ಬೀಸಿದರು. ಆ ಪೆಟ್ಟು ಚೆಂಡಿಗೆ ಬೀಳದೆ ಸಮೀಪದಲ್ಲಿದ್ದ ನನ್ನ ತಲೆಗೆ ತಗುಲಿ ಗಾಯವಾಗಿ ರಕ್ತವು ಸುರಿಯಲಾರಂಭಿಸಿತು. ಇದನ್ನು ಮಹಾರಾಜರಿಗೆ ತೋರಿಸಿ, ಕೋಪದಿಂದ ಬ್ಯಾಟನ್ನು ಬಿಸುಟು, ಕುದುರೆಯಿಂದಿಳಿದು ಮನೆಗೆ ಹೊರಟುಹೋದೆನು. ಆಗ ನನ್ನ ಮನೆ ಇದ್ದುದು ವೀರನಗೆರೆಯಲ್ಲಿ. ಸಾಯಂಕಾಲವಾದ ಕೂಡಲೆ ಮಹಾರಾಜರು ಎಲ್ಲರನ್ನೂ ಕಳುಹಿಸಿ, ತಾವೊಬ್ಬರೇ ಆ ಕತ್ತಲೆಯಲ್ಲಿ ನನ್ನ ಮನೆಯನ್ನು ವಿಚಾರಿಸಿಕೊಂಡು ನನ್ನ ಮನೆಯ ಬಾಗಿಲಿಗೆ ಬಂದರು. ಯಾರೋ ನನ್ನನ್ನು ಕೇಳಿಕೊಂಡು ಬಂದಿರುವರೆಂದು ಕಾವಲುಗಾರನು

ನನಗೆ ತಿಳಿಸಿದನು. ನಾನು ಆತನನ್ನು ಒಳಕ್ಕೆ ಬರಹೇಳಿ ಕಳುಹಿಸಿದೆನು. ಮಹಾರಾಜರವರು ಕುದರೆಯನ್ನಿಳಿದು ಅದನ್ನು ತಾವೇ ಕಂಬಕ್ಕೆ ಕಟ್ಟಿ ಒಳಕ್ಕೆ ಬರಲು, ಅವರು ನನ್ನನ್ನು ಗಾಯಪಡಿಸಿದಂತಹ ನನ್ನ ಸ್ವಾಮಿಯವರೇ ಆಗಿದ್ದುದನ್ನು ಕಂಡು ನನ್ನ ನೋವೆಲ್ಲವೂ ಮಾಯವಾಗಿ ಹೋಯಿತು. ಅವರು ನನ್ನ ಗುಡಿಸಿಲಿಗೆ ದಯಮಾಡಿದುದಕ್ಕಾಗಿ ನನಗೆ ಬಹಳ ವ್ಯಸನವಾಯಿತು. ಮಹಾರಾಜರು ನನಗೆ ಅನೇಕ ಉಪಚಾರಗಳನ್ನು ಹೇಳಿ ಸ್ವಲ್ಪಹೊತ್ತು ಮಾತನಾಡುತ್ತಿದ್ದು, ತಾವು ಬಂದಿದ್ದ ಸಂಗತಿಯನ್ನು ಯಾರಿಗೂ ತಿಳಿಸಬೇಡಿರೆಂದು ಹೇಳಿ ಹೊರಟುಹೋದರು. ಮಾರನೆಯ ದಿನದಿಂದ ಊಳಿಗದವರನ್ನು ಕಳುಹಿಸಿ, ನನ್ನ ಆರೋಗ್ಯವನ್ನು ವಿಚಾರಿಸುತ್ತಿದ್ದರು. ಪ್ರಾಣಿಮಾತ್ರದಲ್ಲಿ ಕರುಣೆಯುಳ್ಳ ಇಂತಹ ಪ್ರಭುಗಳು ಎಷ್ಟು ಮಂದಿ ಇದ್ದಾರು!"

ಶ್ರೀಮನ್ಮಹಾರಾಜರವರಿಗಿದ್ದ ಮಾತೃಭಕ್ತಿಯು ಅತಿಶಯವಾದುದೆಂಬುದಕ್ಕೆ ಕೆಳಗಿನ ವಿಷಯವು ನಿದರ್ಶನವಾಗಿದೆ. ಅರಸುಮನೆತನದಲ್ಲಿ ಮಹಾರಾಜರ ರಕ್ತ ಸಂಬಂಧಿಗಳು ಯಾರಾದರೂ ಕಾಲವಾದರೆ ಅವರ ಉತ್ತರ ಕ್ರಿಯಾದಿಗಳನ್ನು ಇದಕ್ಕಾಗಿ ನಿಯಮಿತರಾಗಿದ್ದ ಬೇರೊಬ್ಬರ ಕೈಯಲ್ಲಿ ಮಹಾರಾಜರ ಕರ್ತೃತ್ವದ ಮೇಲೆ ನಡೆಯಿಸುವುದು ಆರ್ಷೇಯವಾದ ಪದ್ಧತಿ. ಈ ವಂಶಜರಿಗೆ ಕರ್ಮಾಂತರದವರೆಂದು ಹೆಸರು. ಇವರಿಗೆ ಅರಮನೆಯಿಂದ ಉಂಬಳಿಯೂ ಮಾಸಾಶನಗಳೂ ಸಲ್ಲುತ್ತಿರುವುವು. ಹೀಗಿದ್ದರೂ, ೧೮೯೩ರಲ್ಲಿ ಶ್ರೀಮನ್ಮಹಾರಾಜರವರ ಸ್ವೀಕೃತ ಜನನಿಯೂ, ಮುಮ್ಮಡಿ ಕೃಷ್ಣರಾಜ ಒಡೆಯರವರ ಧರ್ಮಪತ್ನಿಯೂ ಆದ ಸೀತಾವಿಲಾಸ ಸನ್ನಿಧಾನದ ಮಹಾರಾಜ್ಞಿಯವರು ಪರಂಧಾಮವನ್ನೈದಿದಾಗ ಅವರ ಸಂಸ್ಕಾರಾರ್ಥವಾಗಿ ಶ್ರೀಚಾಮರಾಜ ಒಡೆಯರವರೇ ಸ್ವಹಸ್ತದಿಂದ ದಹನ ಸಂಚಯನಕ್ಕೆ ಬೇಕಾದ ಅಗ್ನಿಯನ್ನು ಹಿಡಿದುಕೊಂಡು ಹೋಗಿ ದಹನಾದಿ ಕೃತ್ಯಗಳನ್ನು ನಡೆಯಿಸಿ, ಮರುದಿನದಿಂದ ದ್ವಾದಶ ದಿನದ ಪರ್ಯಂತ ಅಪರಕರ್ಮಗಳು ನಡೆಯುವ ಸ್ಥಳಕ್ಕೆ ಪಾದಚಾರಿಗಳಾಗಿ ನಡೆದುಕೊಂಡು ಹೋಗಿ ಭಕ್ತಿಭಾವದಿಂದ ಸಕಲ ಕರ್ಮಗಳನ್ನೂ ನೆರವೇರಿಸಿದರು. ಇದನ್ನು ಕಂಡು ಆಗಿನ ದಿವಾನ್ ಶೇಷಾದ್ರಯ್ಯರವರು, ಅಂಬಲ್ ನರಸಿಂಹಯ್ಯಂಗಾರ್ಯರು ಮುಂತಾದ ಮಂತ್ರಿಗಳೂ, ಬಸವ್ವಾಜಿ ಅರಸಿನವರು ಮುಂತಾದ ರಾಜಬಂಧುಗಳೂ ಹೀಗೆ ಬಿನ್ನವಿಸಿಕೊಂಡರು ;—"ಮಹಾಸ್ವಾಮಿಯವರು ದಿನಕ್ಕೆ ಮೂರು ನಾಲ್ಕು ಸಾರಿ ತಣ್ಣೀರು ಸ್ನಾನಮಾಡಬೇಕಾಗಿರುವುದರಿಂದ ಮಹಾಸ್ವಾಮಿಯವರ ಶರೀರಕ್ಕೆ ಆಲಸ್ಯವಾಗುವುದು. ಪದ್ಧತಿಯ ಮೇರೆಗೆ ಮಹಾಸ್ವಾಮಿಯವರ ಕರ್ತೃತ್ವದ ಮೇಲೆ ಇತರರು ಯಾರಾದರೂ ಕರ್ಮಾಂತರಗಳನ್ನು ಮಾಡಬಹುದಲ್ಲವೆ? ಕರ್ಮಭೂಮಿಗೆ ಹೋಗಿಬರುವುದಕ್ಕೆ ಗಾಡಿಯನ್ನಾದರೂ ಉಪಯೋಗಮಾಡಿಕೊಳ್ಳಬೇಕು" ಎಂದು ಎಷ್ಟೋ ಪ್ರಾರ್ಥಿಸಿದರು. ಮಹಾರಾಜರು, "ನಮ್ಮ ತಾಯಿಗೆ ನಾನು ಕರ್ಮಮಾಡಬೇಕಾದರೆ ಇಷ್ಟು ವೈಭವವೇ?" ಎಂದು ಹೇಳಿ ಯಾವುದಕ್ಕೂ ಒಪ್ಪದೆ, ಕರ್ಮಾದಿಗಳೆಲ್ಲ ಪೂರಯಿಸುವವರೆಗೂ ನಿತ್ಯವೂ ಕರ್ಮಭೂಮಿಗೆ ಪಾದಚಾರಿಗಳಾ

ಗಿಯೇ ಸೋಗಿ ಸಕಲ ಕರ್ಮಗಳನ್ನೂ ಭಕ್ತಿಭಾವದಿಂದಲೂ ಕೇವಲ ಗಣ್ಯತೆಯಿಂದಲೂ ನಡೆಯಿಸಿದರು.

ಚಾಮರಾಜೇಂದ್ರ ಒಡೆಯರವರು ದಾಕ್ಷಿಣ್ಯಬದ್ಧರಾಗದೆ ನ್ಯಾಯಪರರಾಗಿದ್ದರು. ಅವರು ಮುಂಬಯಿಯಲ್ಲಿದ್ದಾಗ, ಅಲ್ಲಿಯ ಗವರ್ನರವರಾದ ಲಾರ್ಡ್ ರೇ ಸಾಹೇಬರು ಮಹಾರಾಜರವರನ್ನು ಕಂಡು, “ ನಿಮ್ಮಲ್ಲಿರುವ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಅವರು ಬರುವ ತಿಂಗಳಲ್ಲಿ ರಿಟೈರ್ ಆಗುತ್ತಾರೆಂದು ಕೇಳುತ್ತೇವೆ. ನಮ್ಮಲ್ಲಿರುವ ಒಬ್ಬ ದೊಡ್ಡಮನುಷ್ಯನಿಗೆ ಆ ಕೆಲಸವನ್ನು ದಯವಿಟ್ಟು ಕೊಡಬೇಕು ” ಎಂದು ಹೇಳಿದರು. ಆಗ ಮಹಾರಾಜರು ಅವರಿಗೆ ಯಾವ ಉತ್ತರವನ್ನು ಕೊಟ್ಟರೊ ತಿಳಿಯಲಿಲ್ಲ. ಇದಾದ ಹದಿನೈದು ದಿವಸಗಳನಂತರ ಪುನಃ ಗವರ್ನರ್ ಸಾಹೇಬರು, “ ನಾನು ಹೇಳಿದ್ದ ವಿಷಯವನ್ನು ಏನು ಮಾಡಿದಿರಿ ” ಎಂದು ಕಾಗದವನ್ನು ಬರೆದರು. ಅದಕ್ಕೆ ಮಹಾರಾಜರು, “ ನಮ್ಮ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಅವರು ಕೆಲಸದಿಂದ ನಿವೃತ್ತರಾಗುವುದೇನೊ ನಿಜ ; ಆದರೆ ಅವರ ಕೆಳಗಿರುವವರು ತಮಗೆ ಬಡತಿ ಸಿಕ್ಕೀತೇ ಎಂದು ನಿರೀಕ್ಷಿಸಿಕೊಂಡಿರುತ್ತಾರೆ. ಹೀಗಿರುವಲ್ಲಿ, ಹೊರಗಿನವರನ್ನು ಆ ಸ್ಥಳಕ್ಕೆ ತಂದರೆ ಅವರ ಮನಸ್ಸು ಕೆಟ್ಟು ಇಲಾಖೆಯ ಬಿಗಿಯು ಸಡಿಲುವುದು. ಆದುದರಿಂದ, ತಮ್ಮ ಅಪ್ಪಣೆಯಮೇರೆ ಕೆಲಸ ನಡೆಯಲಾರದೆಂಬುದನ್ನು ತಿಳಿಸಲು ವಿಷಾದಿಸುತ್ತೇನೆ ” ಎಂದು ಬರೆದುಕಳುಹಿಸಿದರು.

ಮಹಾಸ್ವಾಮಿಯವರು ತಮ್ಮ ಭೃತ್ಯವರ್ಗಕ್ಕೆ ಸೇರಿದವರನ್ನು ಪುತ್ರ ವಾತ್ಸಲ್ಯದಿಂದ ಕಾಪಾಡುತ್ತ ಅವರ ಕಷ್ಟನಿಷ್ಠುರಗಳಲ್ಲೆಲ್ಲ ಅವರಿಗೆ ಬೇಕಾದ ಸಹಾಯವನ್ನು ಮಾಡುತ್ತಿದ್ದರು. ಅರಮನೆಗೆ ಸೇರಿದ ಸಮಸ್ತ ಪಂಡಿತಾಮಾತ್ಯ ಭೃತ್ಯಾದಿಗಳ ಮನೆಯಲ್ಲಿ ಶುಭಾಶುಭ ಕರ್ಮಗಳು ನಡೆಯಬೇಕಾದರೆ ಅರಮನೆಯಿಂದ ದ್ರವ್ಯರೂಪವಾಗಿಯೂ ಪದಾರ್ಥರೂಪವಾಗಿಯೂ ಆವಶ್ಯಕವಾದ ಸಹಾಯವನ್ನು ಮಾಡುವ ಪದ್ಧತಿಯನ್ನು ಶ್ರೀಚಾಮರಾಜೇಂದ್ರ ಒಡೆಯರವರೇ ಆಚರಣೆಗೆ ತಂದರು. ತಮ್ಮ ಆಶ್ರಿತವರ್ಗಕ್ಕೆ ಸೇರಿದವರಲ್ಲಿ ಯಾರಿಗೆ ದೇಹಾಲಸ್ಯವುಂಟಾದರೂ ಔಷಧಗಳನ್ನು ಕೊಟ್ಟು ಆರೋಗ್ಯಮಾಡುವುದಕ್ಕೆ ಅರಮನೆಯ ವೈದ್ಯರನ್ನೇ ಕಳುಹಿಸಿ ನಿತ್ಯವೂ ಅವರ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತಿದ್ದರು. ಅರಮನೆಗೆ ಸೇರಿದ ಸಮಸ್ತ ಭೃತ್ಯರಿಗೂ ನವರಾತ್ರಿಯ ಕಾಲದಲ್ಲಿ ನೂತನ ವಸ್ತ್ರಗಳನ್ನು ಕೊಟ್ಟು ಕಾಪಾಡುವ ಪದ್ಧತಿಯನ್ನು ಮಹಾಸ್ವಾಮಿಯವರೇ ಮೊದಲುಮಾಡಿದರು. ಯಾವ ಭೃತ್ಯನಾಗಲಿ ಅವನಿಗೆ ನಿಯಮಿತವಾಗಿರುವ ಕೃತ್ಯವನ್ನು ಮಾಡಬೇಕೇ ಹೊರತು ಅನವಶ್ಯಕವಾಗಿ ಅತಿ ವಿನಯವನ್ನು ತೋರಿಸಿದರೆ ಜುಗುಪ್ಸೆ ಪಡುತ್ತಿದ್ದರು. ರಾತ್ರಿಯ ಹೊತ್ತು ಮಹಾರಾಜರು ಅರಮನೆಯಲ್ಲಿ ಸಂಚರಿಸುವಾಗ, ಒಂದೊಂದು ವೇಳೆ ಕಾವಲುಗಾರರು, ಹೊರಗಿನವರು ಯಾರೂ ಬಾರದಂತೆ ದಾರಿಗಡ್ಡಲಾಗಿ ಮಲಗಿ ನಿದ್ರೆಹೋಗುತ್ತಿರಲು

ದೇಶಾಟನಾರ್ಥವಾಗಿಯಾಗಲಿ ರಾಜಕಾರ್ಯಾರ್ಥವಾಗಿಯಾಗಲಿ ಶ್ರೀಮನ್ಮಹಾರಾಜರವರು ಪರಸ್ಥಳಕ್ಕೆ ಹೊರಟರೆ ಜೊತೆಯಲ್ಲಿ ಬರತಕ್ಕ ಭೃತ್ಯರಿಗೆಲ್ಲ ಚಳಿಗಾಳಿಗಳ ಬಾಧೆಯಾಗದಂತೆ ಉಣ್ಣೆಯ ಬಟ್ಟೆಗಳನ್ನು ಹೊಲಿಸಿಕೊಡುತ್ತಿದ್ದರು. ಪರಸ್ಥಳದಲ್ಲಿ ತಮಗೆ ಭೋಜನವಾದನಂತರದಲ್ಲಿ ಯಾರಾದರೂ ಒಬ್ಬರಿಬ್ಬರು ಭೃತ್ಯರನ್ನು ಕರೆದು, "ನಿಮಗೆಲ್ಲ ಊಟವಾಯಿತೆ? ಏನೇನು ಅಡಿಗೆ ಮಾಡಿದ್ದರು?" ಎಂದು ಪ್ರಶ್ನೆಮಾಡಿ, ತಮ್ಮಂತೆಯೇ ಭೃತ್ಯರಿಗೂ ಸುಖಭೋಜನವಾಯಿತೋ ಇಲ್ಲವೋ ಎಂಬ ನಿಜಸ್ಥಿತಿಯನ್ನು ಗೊತ್ತುಮಾಡಿಕೊಳ್ಳುತ್ತಿದ್ದರು. ಪರಸ್ಥಳದಲ್ಲಿ ದರ್ಶನೀಯವಾದ ವಸ್ತುಗಳನ್ನು ತಾವು ನೋಡಿಬಂದ ಬಳಿಕ, ಭೃತ್ಯರನ್ನು ಕರೆದು, "ನೀವೇನು ನೋಡಿದಿರಿ?" ಎಂಬುದೇ ಮುಂತಾದ ಪ್ರಶ್ನೆಗಳನ್ನು ಹಾಕಿ ತಮ್ಮಂತೆ ಅವರೂ ನೋಡಿ ತೃಪ್ತರಾದರೋ ಇಲ್ಲವೋ ಎಂಬ ಅಂಶವನ್ನು ತಿಳಿದುಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ, ಮಹಾರಾಜರವರು ಉತ್ತರ ದೇಶದ ಸಂಚಾರಮಾಡುವಾಗ, ಅಮೃತಸರದ ಬಳಿಯಲ್ಲಿ ನಡೆದ ಒಂದು ಸಂಗತಿಯು ಪ್ರಸ್ತಾವಾರ್ಹವಾಗಿರುವುದು.

ಒಂದು ದಿನ ಶ್ರೀಮನ್ಮಹಾರಾಜರವರು ಅಮೃತಸರವನ್ನು ನೋಡುವುದಕ್ಕೆ ದಯಮಾಡಿಸಿದರು. ಶ್ರೀಮನ್ಮಹಾರಾಜರವರು ಧರಿಸತಕ್ಕ ವಸ್ತ್ರಾಭರಣಗಳನ್ನು ನೋಡಿಕೊಳ್ಳುವುದಕ್ಕೆ ಬೀಡಾರದಲ್ಲಿ ಒಬ್ಬಿಬ್ಬರು ಸೇವಕರು ಇರುವುದೂ, ಉಳಿದವರು ಹೊರಗೆ ಹೋಗಿ ನೋಡಿಕೊಂಡು ಬಂದು ಬೀಡಾರದಲ್ಲಿದ್ದವರನ್ನು ಕಳುಹಿಸಿಕೊಡುವುದೂ ಪದ್ಧತಿಯಾಗಿದ್ದಿತು. ಹೀಗಿರುವಲ್ಲಿ, ಆ ದಿನ ಶ್ರೀಮನ್ಮಹಾರಾಜರವರು ಸುವರ್ಣ ದೇವಾಲಯ, ಗೋವಿಂದ ಪುರದ ಕೋಟೆ, ಸಿಕ್ಜನರ ಆಯುಧಶಾಲೆ ಮುಂತಾದುವನ್ನು ನೋಡಿಕೊಂಡು ಬೀಡಾರಕ್ಕೆ ಬಂದಮೇಲೆ ಅಲ್ಲಿ ಸಾಮಾನಿನ ಉಸ್ತುವಾರಿಗಾಗಿ ಇದ್ದ ಸೇವಕನನ್ನು ನೋಡಿ, ಅಮೃತ ಸರಸ್ಸಿನ ರಮಣೀಯತೆ ಮುಂತಾದುವುಗಳನ್ನು ಅವನಿಗೆ ತಿಳಿಸಿ, "ನೀನು ನೋಡುವುದಕ್ಕೆ ಹೋಗಿದ್ದೆಯಾ? ಹೋಗದಿಷ್ಟ ಪಕ್ಷದಲ್ಲಿ ಜಾಗ್ರತೆಯಾಗಿ ಹೋಗಿ ನೋಡಿಕೊಂಡು ಬಾ; ನೀನು ಬರುವ ವರೆಗೂ ನಾನು ಇಲ್ಲಿ ಇರುತ್ತೇನೆ" ಎಂದು ಅಪ್ಪಣೆಮಾಡಿ ವಸ್ತ್ರಾಭರಣಗಳಿದ್ದ ಬಳಿ ಒಂದು ಕುರ್ಚಿಯನ್ನು ಹಾಕಿಕೊಂಡು ವರ್ತಮಾನ ಪತ್ರಿಕೆಗಳನ್ನು ಓದುತ್ತ ಕುಳಿತುಕೊಂಡರು. ಆ ಭೃತ್ಯನು ನೋಡಿಕೊಂಡು ಬಂದ ಬಳಿಕ, "ನಿನ್ನ ಪದಾರ್ಥಗಳನ್ನು ನೋಡಿಕೋ" ಎಂದು ಹೇಳಿ ಪರಿಹಾಸಮಾಡಿ ಅವನನ್ನು ಸಂತೋಷಗೊಳಿಸಿದರು. ತಮ್ಮ ಸಂಗಡ ಬಂದಿದ್ದ ಸೇವಕನು ಆ ನೋಟವನ್ನು ನೋಡದೆ ಹೋದಾನೆಂಬ ಶಂಕೆಯಿಂದ ಕರುಣಗೊಂಡು ಅವನಿದ್ದ ಸ್ಥಳದಲ್ಲಿ ತಾವು ಕುಳಿತು ಅವನನ್ನು ನೋಡುವುದಕ್ಕೆ ಕಳುಹಿಸಿಕೊಟ್ಟ ಅಸಮಾನವಾದ ಭೃತ್ಯವಾತ್ಸಲ್ಯವನ್ನು ಅನೇಕರು ಈಗಲೂ ನೆನೆನೆನೆದು ದಯಾನಿಧಿಯಾದ ಆ ಪ್ರಭುವನ್ನು ಕೊಂಡಾಡುತ್ತಿರುವರು.

ಭೃತ್ಯರಲ್ಲಿ ಮಹಾರಾಜರವರಿಗಿದ್ದ ಅಪಾರವಾದ ದಯಾಳುತ್ವಕ್ಕೆ ಮತ್ತೊಂದ ನಿದರ್ಶನವೇನೆಂದರೆ: ೧೮೮೩ನೆಯ ಇಸವಿಯಲ್ಲಿ ವೈಸ್ರಾಯಿ ಲಾರ್ಡ್ ರಿಪ್ಪನ್

ಅವರ ಸಂದರ್ಶನಾರ್ಥವಾಗಿ ಶ್ರೀಮನ್ಮಹಾರಾಜರವರು ಮದರಾಸಿಗೆ ದಯೆಮಾಡಿಸಿ ಅಲ್ಲಿ ವಿಜಯನಗರದ ಮಹಾರಾಜರ ಅಪೇಕ್ಷೆಯಂತೆ ಅವರ ಬಂಗಲೆಯಲ್ಲಿ ಇಳಿದುಕೊಂಡಿದ್ದರು. ಒಂದು ದಿನ ರಾತ್ರಿ ಭೋಜನವಾದ ಬಳಿಕ ಮಲಗಿಕೊಳ್ಳುವಾಗ ಗೋಪಾಲರಾಜ ಅರಸಿನವರು, ಸುಬ್ರಹ್ಮಣ್ಯರಾಜ ಅರಸಿನವರು, ಬಕ್ಷಿಯವರು ಮುಂತಾದವರುಗಳೊಡನೆ ವಿನೋದವಾಗಿ ಮಾತನಾಡುತ್ತಿರುವಲ್ಲಿ, ಮಹಾರಾಜರು ಅಲ್ಲಿದ್ದವರೊಬ್ಬರನ್ನು ಕುರಿತು, "ಒಂದು ಕಥೆ ಹೇಳು" ಎಂದು ಅಪ್ಪಣೆಕೊಟ್ಟರು. ಬಕ್ಷಿಯವರು ಅಡಿಗಡಿಗೆ ಹುಂ ಎಂದು ಹೂಗುಟ್ಟುತ್ತಿರುವುದಕ್ಕೆ ಒಪ್ಪಿಕೊಂಡರು. ಕಥೆಗೆ ಪ್ರಾರಂಭವಾಯಿತು. ಆಗ ಸುಮಾರು ರಾತ್ರಿ ಹತ್ತು ಗಂಟೆಯ ಸಮಯ. ದೀಪದ ಪ್ರಕಾಶವನ್ನು ಸ್ವಲ್ಪ ಕಡಿಮೆ ಮಾಡಿದ್ದರು. ಕಥೆಯನ್ನು ಕೇಳುತ್ತ ಕೇಳುತ್ತ ಮಹಾರಾಜರಿಗೆ ನಿದ್ದೆಯ ಝೋಂಪು ಹತ್ತುತ್ತ ಬಂದಿತು. ಗೋಪಾಲರಾಜ ಅರಸಿನವರೂ ಸುಬ್ರಹ್ಮಣ್ಯರಾಜ ಅರಸಿನವರೂ, ಹೂಗುಟ್ಟುತ್ತಿದ್ದ ಬಕ್ಷಿಯವರೂ ನಿದ್ದೆಹೋದರು. ಹೂಗುಟ್ಟುವವರಿಲ್ಲದೆ ಹೋದುದರಿಂದ ಎಲ್ಲರೂ ನಿದ್ದೆಹೋದರೆಂದು ತಿಳಿದು, ಕಥೆ ಹೇಳುತ್ತಿದ್ದವರು ಕಥೆಯನ್ನು ನಿಲ್ಲಿಸಿ ತಾವೂ ನಿದ್ರಾವಶರಾದರು. ಇಷ್ಟರಲ್ಲಿ, ಏಳೆಂಟು ಮಾರು ದೂರದಲ್ಲಿ ಮಲಗಿದ್ದ ಮಹಾರಾಜರ ಹತ್ತಿರವಿರತಕ್ಕ ಸೇವಕರಲ್ಲೊಬ್ಬನು ಕನವರಿಸುತ್ತ, "ಅಯ್ಯಯ್ಯೋ!" ಎಂದು ದೀನಧ್ವನಿಯಿಂದ ಅರಚಿಕೊಂಡನು. ಇವನ ದೀನಧ್ವನಿಯನ್ನು ಕೇಳಿ ಮಹಾರಾಜರು, "ಯಾರು! ಯಾರು!" ಎಂದು ತಮ್ಮ ಮಂಚದಿಂದೆದ್ದು, ದೀಪವನ್ನು ಚೆನ್ನಾಗಿ ಉರಿಯುವಂತೆ ಮಾಡಿ, ಆ ಸೇವಕನು ಮಲಗಿದ್ದ ಸ್ಥಳಕ್ಕೆ ಹೋಗಿ ಅವನನ್ನು ಕೂಗಿ ಎಚ್ಚರಿಸಿದರು. ಆದರೂ ಉಳಿದವರೆಲ್ಲರೂ ನಿದ್ರಾಪರವಶರಾಗಿಯೇ ಇದ್ದರು. ಕನವರಿಸಿದವನು ಎಚ್ಚತ್ತು ಮಹಾರಾಜರು ತನ್ನನ್ನು ಮುಟ್ಟಿ ಎಚ್ಚರಿಸಿದುದಕ್ಕೆ ಭೀತನಾಗಿ ಎದ್ದು ನಿಂತುಕೊಂಡನು. ಮಹಾರಾಜರು ಅವನನ್ನು ಕುರಿತು, "ಹೆದರಬೇಡ, ಏತಕ್ಕೆ ಅಯ್ಯಯ್ಯೋ ಎಂದು ಕೂಗಿಕೊಂಡೆ? ಇಲ್ಲೇನೂ ಅಂತಹ ಭಯವಿಲ್ಲವಲ್ಲಾ!" ಎಂದು ಕೇಳಿದರು. ಅವನು "ಮಹಾಸ್ವಾಮಿ, ಯಾರೋ ನನ್ನ ಕತ್ತನ್ನು ಹಿಡಿದು ಸಮುದ್ರಕ್ಕೆ ತಳ್ಳುವಂತೆ ಕನಸು ಆಯಿತು, ಕೂಗಿಕೊಂಡೆನು" ಎಂದನು. "ನಾವೆಲ್ಲರೂ ಇಲ್ಲವೆ? ಹೆದರಬೇಡ; ನಿನಗೆ ಭಯವಾದರೆ ಸಮುದ್ರದ ಕಡೆ ಇರುವ ಕಿಟಕಿಯ ಬಾಗಿಲುಗಳನ್ನೆಲ್ಲ ಮುಚ್ಚಿ ಈ ಕಡೆ ಬಂದು ಮಲಗಿಕೊ" ಎಂದು ಹೇಳಿ ಅವನನ್ನು ತಮಗೆ ಸ್ವಲ್ಪ ದೂರದಲ್ಲಿ ಬಲಗಡೆ ಮಲಗಿಸಿಕೊಂಡರು.

೧೮೮೨ನೆಯ ಇಸವಿಯಲ್ಲಿ, ಕೆಲವು ಕಾಲ ಮಳೆಯಿಲ್ಲದೆ ಇದ್ದುದರಿಂದ, ಪ್ರಜೆಗಳು ಧಾತು ಈಶ್ವರ ಸಂವತ್ಸರಗಳಲ್ಲಿ ಬಂದಿದ್ದ ಘೋರಕ್ಷಾಮವು ಮತ್ತೆಲ್ಲಿ ಬರುವುದೋ ಎಂದು ಭೀತರಾಗಿದ್ದರು. ಇಷ್ಟರಲ್ಲಿ ನವರಾತ್ರಿಯು ಪ್ರಾರಂಭವಾಯಿತು. ವಿಜಯದಶಮಿಯ ದಿವಸ ಶ್ರೀಮನ್ಮಹಾರಾಜರವರು ಪದ್ಧತಿಯ ಪ್ರಕಾರ ಮಹಾನವಮಿ ಮಂಟಪಕ್ಕೆ ವಿಜಯಯಾತ್ರೆ ಹೊರಟು ಹಿಂದಿರುಗಿ ಬರುವಾಗ ಬಲವಾದ ಮಳೆ

ಬಂದಿತು. ಮಹಾರಾಜರು ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತಿದ್ದುದರಿಂದ ನೆನೆಯಬೇಕಾಗಿ ಬಂದಿತು. ಆಗ ದಿವಾನರು ಮುಂತಾದ ಕೆಲವರು ಮುಂದರು ಮಹಾರಾಜರವರ ಸವಾರಿಯು ಗಾಡಿಯಲ್ಲಿ ಚಿತ್ತೈಸಬೇಕೆಂಬುದಾಗಿ ಅವರನ್ನು ಬೇಡಿಕೊಂಡರು. ಅದಕ್ಕೆ ಮಹಾರಾಜರವರು, "ನನ್ನ ಇಷ್ಟು ಜನ ಪ್ರಜೆಗಳು ನೆನೆಯಬಹುದು! ನಾನು ನೆನೆಯಬಾರದೊ? ಅವರಿಗಿಂತ ನಾನು ಹೆಚ್ಚೆ?" ಎಂದು ಹೇಳಿ ಅಂಬಾರಿಯಲ್ಲಿಯೇ ಕುಳಿತುಕೊಂಡು ಬಂದರು.

ಮನುಷ್ಯರಲ್ಲಿಯೇ ಅಲ್ಲ, ತಿರ್ಯಗ್ಜಂತುಗಳಲ್ಲಿಯೂ ಮಹಾರಾಜರವರು ಪರಮ ಪ್ರೇಮಾತಿಶಯವನ್ನು ತೋರ್ಪಡಿಸುತ್ತಿದ್ದರು. ಅವರು ನಿರ್ಮಿಸಿದ 'ಜೂಆಜಿಕಲ್

ಶ್ರೀಮನ್ಮಹಾರಾಜರವರು ಐದು ಕುದುರೆಯ ಗಾಡಿಯಲ್ಲಿ ಸವಾರಿ ಮಾಡುವುದು.

ಗಾರ್ಡನ್' ಎಂಬ ಜೀವಜಂತು ಶಾಲೆಯೇ ಇದಕ್ಕೆ ನಿದರ್ಶನವಾಗಿದೆ. ಒಂದೊಂದು ವೇಳೆ ಅಲ್ಲಿಯ ಜೀವಜಂತುಗಳಿಗೆ ಮೇವನ್ನು ತಮ್ಮ ದಿವ್ಯ ಹಸ್ತದಿಂದಲೇ ತಿನ್ನಿಸುವ ಪದ್ಧತಿಯನ್ನಿಟ್ಟುಕೊಂಡಿದ್ದರಾದುದರಿಂದ, ಅವು ಮಹಾರಾಜರ ಮುಖದರ್ಶನವಾಗುತ್ತಲೇ ನಲಿದಾಡುತ್ತಿದ್ದುವು; ಎಷ್ಟು ದುಂಡತನವುಳ್ಳವುಗಳಾಗಿದ್ದರೂ ಅವು ಮಹಾರಾಜರನ್ನು ಕಾಣುತ್ತಲೇ ಮೃದುಸ್ವಭಾವವುಳ್ಳವುಗಳಂತೆ ನಮ್ರತೆಯಿಂದಿರುತ್ತಿದ್ದುವು. ಅಶ್ವಗಳ ಶೀಲಸ್ವಭಾವಗಳನ್ನು ಶ್ರೀ ಚಾಮರಾಜೇಂದ್ರ ಒಡೆಯರವರು ಬಹಳ ಚೆನ್ನಾಗಿ ತಿಳಿದುಕೊಂಡಿದ್ದುದರಿಂದ ಅವರು ತುರಗ ಹೃದಯಾಭಿಜ್ಞನಾದ ನಳ

ಚಕ್ರವರ್ತಿಯಂತಿದ್ದರೆಂದು ಹೇಳಿದರೆ ಸ್ವಲ್ಪವೂ ಮೃಷಾಸ್ತುತಿಯಾಗಲಾರದು. ಅವರ ಅಶ್ವಚಾಲನ ಶಕ್ತಿಯನ್ನು ನೋಡಿದ್ದ ಒಬ್ಬ ಕವಿಯು ತನ್ನ ಒಂದಾನೊಂದು ಗ್ರಂಥದಲ್ಲಿ ಹೀಗೆಂದು ವರ್ಣಿಸಿರುವನು :—

ಘೋಟಕಂಗಳ ಮನವನರಿಯುತ ।
ಘಾಟಿಯಲಿ ಸಂಚರಿಸುವೀತಗೆ ।
ಸಾಟಿವರ್ಪರೆ ನಳಮಹಾರಾಜಾದಿ ಭೂಮಿಪರು ॥
ಕೋಟಿದೇಶಾಧೀಶಮೌಳಿ ಕಿ ।
ರೀಟಪತಿಸುತನಾಗಿ ಸದ್ಗುಣ ।
ಪೇಟಿಕಾಯಿತನೆನಿಸಿ ಪೊಳೆವನು ಚಾಮಭೂಮಿಪನು ॥ N. S.

ಹಿಂದೆ ಒಂದು ದಿನ ಸಾಯಂಕಾಲ ಅಶ್ವಶಾಲೆಯಲ್ಲಿ ಮಹಾರಾಜರವರ ಜೂಜಿನ ಕುದುರೆಗಳನ್ನೆಲ್ಲ ತಿರುಗಾಡಿಸುತ್ತಿದ್ದಾಗ, ಸಮೀಪದಲ್ಲಿ ಕಾಳುಗಳನ್ನು ಮೇಯುತ್ತ ಹೂಂಕಾರ ಮಾಡುತ್ತಿದ್ದ ಪಾರಿವಾಳದ ಹಕ್ಕಿಗಳು ಗಿಡುಗನನ್ನು ನೋಡಿ ಭೋರೆಂದು ಒಂದೇ ಕಾಲದಲ್ಲಿ ಹಾರಿಹೋದುವು. ಇವುಗಳ ರಭಸಕ್ಕೆ 'ಚೈಲ್ಡ್' ಎಂಬ ಕುದುರೆಯು ಬೆದರಿ ಅದಕ್ಕೆ ಹಾಕಿದ್ದ ಕಡಿವಾಣದ ಹಗ್ಗವನ್ನು ಕಿತ್ತುಕೊಂಡಿತು. ಅಲ್ಲಿದ್ದವರೆಲ್ಲರೂ ಈ ಸಂಗತಿಯನ್ನು ತಿಳಿದು ಹೆದರಿ, ತಮ್ಮ ತಮ್ಮ ಕುದುರೆಗಳನ್ನು ಸಿಕ್ಕಿದ ಠಾಣಗಳಿಗೆ ತೆಗೆದುಕೊಂಡು ಹೋದರು. ಚೈಲ್ಡ್ ಎಂಬ ಕುದುರೆಯು ಪಟ್ಟಿಯನ್ನು ಹಾರುವುದರಲ್ಲಿ ಹಿಂದೂಸ್ಥಾನದಲ್ಲೆಲ್ಲ ಪ್ರಖ್ಯಾತವಾಗಿದ್ದು ತನ್ನೊಡೆಯನಿಗೆ ಒಳ್ಳೆಯ ಕೀರ್ತಿಯನ್ನು ತಂದಿದ್ದರೂ ತನ್ನ ನಡತೆಯಲ್ಲಿ ಮಾತ್ರ ಗೋಮುಖವ್ಯಾಘ್ರದಂತೆ ವರ್ತಿಸುತ್ತ ಸಿಕ್ಕಿದವರನ್ನು ಕಚ್ಚುತ್ತಿದ್ದಿತು. ಇದರ ಹೆಸರನ್ನು ಕೇಳಿದರೆ ಒಬ್ಬರೂ ಇದರ ಹತ್ತಿರ ಸೇರರು. ಆಗ ಅದು ವಿಶ್ರುಂಖಲವಾಗಿ ಬೈಲಿನಲ್ಲಿ ತಾನೇತಾನಾಗಿ ತಿರುಗುತ್ತ ಇತರರಿಗೆ ಅಸಾಧ್ಯವಾಗಿ ಪಕ್ಷಿಯಂತೆ ನೆಗೆಯುತ್ತಿರಲು, ಸಾಯಂಕಾಲದ ಗಾಳಿಯ ಸವಾರಿಗೆ ದಯಮಾಡಿಸಿದ್ದ ಶ್ರೀಮನ್ಮಹಾರಾಜರವರು ಅಕಸ್ಮಾತ್ತಾಗಿ ಆ ಕಡೆ ಬಂದು, ಕುದುರೆಯ ಸಮಾಚಾರವನ್ನು ಕೇಳಿ, ಗಾಡಿಯಿಂದಿಳಿದು ಒಳಗೆ ಹೋಗಿ ಒಂದು ಹಿಡಿ ಕುದುರೆಯ ಮಸಾಲೆಯ ಸೊಪ್ಪನ್ನು ಹಿಡಿದುಕೊಂಡು ಬಾಗಿಲನ್ನು ತೆಗೆಯಿಸಿ ಕುದುರೆಗೆ ತೋರಿಸುತ್ತ, "ಚೈಲ್ಡ್, ಚೈಲ್ಡ್, ಮೈಬಾಯ್, ಕಮ್ ಹಿಯರ್" ಎಂದು ಇಂಗ್ಲಿಷಿನಲ್ಲಿ ಕೂಗಿದರು. ಅಲ್ಲಿದ್ದ ಗಿಡಗಳ ಮಧ್ಯದಲ್ಲಿ ಸ್ವೇಚ್ಛೆಯಾಗಿ ಹಾರಿಕೊಂಡು ಓಡಾಡುತ್ತಿದ್ದ ಕುದುರೆಯು ಮಹಾರಾಜರವರ ಮಾತುಗಳನ್ನು ಕೇಳಿದ ಕೂಡಲೆ, ತನ್ನ ಅಪರಾಧವನ್ನು ತಿಳಿದುಕೊಂಡಿತೋ ಎಂಬಂತೆ, ತನ್ನ ಸ್ವಾಮಿಯನ್ನು ಕಂಡು ಹೆದರಿ, ತನ್ನ ಅಪರಾದವನ್ನು ಕ್ಷಮಿಸಬೇಕೆಂಬ ಅಭಿಪ್ರಾಯವನ್ನು ತೋರಿಸುವಂತೆ ಕತ್ತನ್ನಲ್ಲಾಡಿಸುತ್ತ ತನ್ನೊಡೆಯನ ಸಮೀಪಕ್ಕೆ ಬಂದು ನಿಂತುಕೊಂಡಿತು. ಕೂಡಲೆ ಮಹಾರಾಜರು ತಮ್ಮ ತೋಳಿನಿಂದ ಅದರ ಕೊರಳನ್ನು ತಬ್ಬಿ ಹಿಡಿದುಕೊಂಡು ಮೈದಡವಿ ಸಮಾಧಾನಮಾಡಿ ಹಗ್ಗವನ್ನು ತರಿಸಿ ಕಟ್ಟಿ, ತೆಗೆದುಕೊಂಡು ಹೋಗಿ ಠಾಣದಲ್ಲಿ ಕಟ್ಟುವಂತೆ ಅಪ್ಪಣೆಮಾಡಿದರು.

ಇನ್ನೊಂದು ದಿನ ಹೊಸದಾಗಿ ಹಿಡಿದಿದ್ದ ಆನೆಗಳನ್ನು ನೋಡುವುದಕ್ಕೆ ಶ್ರೀಮನ್ಮಹಾರಾಜರವರು, ನಂಜನಗೂಡಿಗೆ ಹೋಗಿದ್ದರು. ಹೊಸ ಆನೆಗಳನ್ನೆಲ್ಲ ಪರಾಮರ್ಶಿಸಿದ ಬಳಿಕ, ಖೆಡ್ಡಾ ಸೂಪರಿಂಟೆಂಡೆಂಟರಾದ ಸಾಂಡರ್‌ಸನ್ ಸಾಹೇಬರು ಒಂದು ಹಳೆಯ ಆನೆಯು ಸೊಂಡಿಲಿನಿಂದ ಮಹಾರಾಜರ ಕೊರಳಿಗೆ ಹಾರವನ್ನು ಹಾಕಿಸಿ ತುಲಾಯಿಯನ್ನು ಒಪ್ಪಿಸಿ, ಹಿಂದಿನಿಂದ ಹೊರಗೆ ಬಹು ದೂರದಲ್ಲಿ ಕಟ್ಟಿದ್ದ ಒಂದು ಹಳೆಯ ಆನೆಯ ಬಳಿಗೆ ಮಹಾರಾಜರನ್ನು ಕರೆದುಕೊಂಡು ಹೋಗಿ, “ಇದು ಬಹಳ ತುಂಟ ಆನೆ; ಇದುವರೆಗೂ ಮೂರು ನಾಲ್ಕು ಜನರನ್ನು ಕೊಂದಿದೆ; ಇದನ್ನು ಹೊಡೆದುಹಾಕಲು ಅಪ್ಪಣೆಯಾಗಬೇಕು” ಎಂದು ಕೇಳಿದರು. ಮಹಾರಾಜರು ಅದರ ಸಮೀಪಕ್ಕೆ ಹೋಗಿ ನಿಂತುಕೊಳ್ಳಲು, ಆ ಆನೆಯು ಬಹು ನಮ್ರತೆಯಿಂದಲೂ ದೀನತೆಯಿಂದಲೂ ಸೊಂಡಿಲನ್ನೆತ್ತಿ ಸಲಾಂಮಾಡಿ ದೀನಧ್ವನಿಯಿಂದ ಮೊರೆಯಿಟ್ಟಿತು. ಇದನ್ನು ಹೊಡೆದುಹಾಕಬೇಕೆಂದಿದ್ದ ಆ ಖೆಡ್ಡಾ ಅಧ್ಯಕ್ಷರೂ ಇದನ್ನು ನೋಡುವುದಕ್ಕಾಗಿ ಬಂದು ನಿಂತಿದ್ದ ಜನರೂ ಇದನ್ನು ಕಂಡು ಬಹಳ ಆಶ್ಚರ್ಯಪಟ್ಟರು. ಮಹಾರಾಜರು ಅದಕ್ಕೆ ವಿಧಿಸಿದ್ದ ಮರಣದಂಡನೆಯನ್ನು ತಪ್ಪಿಸಿ ಅದರ ಸಮೀಪದಲ್ಲಿ ನಿಂತು, “ಇನ್ನು ಯಾರನ್ನೂ ಹಿಂಸೆಪಡಿಸಬೇಡ; ಯಾರನ್ನಾದರೂ ನೀನು ಹಿಂಸಿಸಿದರೆ ನಿನಗೆ ಹಿಂಸೆಯು ತಪ್ಪುವುದಿಲ್ಲ” ಎಂದು ಅಪ್ಪಣೆಕೊಟ್ಟರು. ಅಂದುಮೊದಲು ಆ ಆನೆ ಸೌಮ್ಯತೆಯಿಂದ ನಡೆದುಕೊಂಡಿತು.

ಒಂದು ದಿನ ಶ್ರೀಮನ್ಮಹಾರಾಜರವರು ತಮ್ಮ ಸ್ಟೀಮ್ ಕಾರ್ಟಿನಲ್ಲಿ (ಆವಿಯ ಬಂಡಿಯಲ್ಲಿ) ಕುಳಿತುಕೊಂಡು ಬೆಂಗಳೂರು ಹಲಸೂರು ಕೆರೆಯ ಏರಿಯ ಮೇಲೆ ಗಾಳಿ ಸವಾರಿ ಹೋಗುತ್ತಿರುವಾಗ, ಇದಿರಿಗೆ ಒಬ್ಬ ಯೂರೋಪಿಯನ್ ದೊಡ್ಡಮನುಷ್ಯನು ಎರಡು ಅಶ್ವಗಳನ್ನು ಕಟ್ಟಿದ್ದ ರಥದಲ್ಲಿ ಕುಳಿತುಕೊಂಡು ಬಂದನು. ಮಹಾರಾಜರ ಗಾಡಿಯನ್ನು ನೋಡಿ ಅವನ ಗಾಡಿಯ ಕುದುರೆಗಳು ಬೆದರಿ ಗಾಡಿಯೊಡನೆ ಹಾರಿ ಕೆರೆಯೊಳಕ್ಕೆ ಬಿದ್ದುಹೋಗುತ್ತಿದ್ದುವು. ಆಗ ಮಹಾರಾಜರು ತಟ್ಟನೆ ತಮ್ಮ ಗಾಡಿಯಿಂದ ದುಮಿಕಿ ಆ ಕುದುರೆಗಳನ್ನು ಹಿಡಿದು ನಿಲ್ಲಿಸಿ ಹೆಗಲು ತಟ್ಟಿ ಸಮಾಧಾನ ಮಾಡುತ್ತಲೆ ಅವು ನಿಶ್ಚಲವಾಗಿ ನಿಂತುವು. ಬಳಿಕ ತಾವು ತಮ್ಮ ಗಾಡಿಯಲ್ಲಿ ಕುಳಿತುಕೊಂಡು ಮುಂದಕ್ಕೆ ಹೊರಟರು.

ಗುಣಶಾಲಿಗಳು ಯಾವ ವರ್ಣಾಶ್ರಮಕ್ಕೆ ಸೇರಿದವರಾದರೂ ಅವರಲ್ಲಿ ಮಹಾರಾಜರವರಿಗೆ ಸರ್ವತ್ರ ಸಮಭಾವವಿದ್ದಿತು. ಸಂಗೀತ ಸಾಹಿತ್ಯಾದಿ ವಿದ್ಯೆಗಳಲ್ಲಿ ಪಾರೀಣರಾದವರು ರಾಜಧಾನಿಗೆ ಬಂದಾಗ ರಾಜಸಾನ್ನಿಧ್ಯವನ್ನೈದಿ ಮಹಾರಾಜರನ್ನು ತಮ್ಮ ವಿದ್ಯಾಸಾಮರ್ಥ್ಯದಿಂದ ಸಂತೋಷಪಡಿಸಿ, ತಾವೂ ಕೃತಾರ್ಥರಾಗಿ ತಂತಮ್ಮ ನಿವಾಸಗಳಿಗೆ ತೆರಳುತ್ತಿದ್ದರು. ಮಹಾರಾಜರವರು ಸ್ವದೇಶೀಯಾನ್ಯದೇಶೀಯ ವಿದ್ವಾಂಸರಲ್ಲಿ ಯಾರು ತಮ್ಮ ಬಳಿಯನ್ನೈದಿದರೂ ಭೇದಬುದ್ಧಿಯಿಲ್ಲದೆ ಸಕಲರಿಗೂ ಯಥೋಚಿತ ದ್ರವ್ಯ ವಸ್ತ್ರ ಭೂಷಣಾದಿ ರೂಪವಾಗಿ ಬಹುಮಾನಮಾಡಿ ಕಳುಹಿಸಿ

ಕೊಡುತ್ತಿದ್ದರು. ಆದರೆ ಇಷ್ಟು ವಿತರಣ ಗುಣಶಾಲಿಗಳಾಗಿದ್ದರೂ ಅಪಾತ್ರದಲ್ಲಿ ದಾನ ಮಾಡುವುದಕ್ಕೆ ಒಡಂಬಡುತ್ತಿರಲಿಲ್ಲ. ಅರಸುಗಳಲ್ಲಾಗಲಿ ಅರಮನೆಯ ಸೇವಕರಲ್ಲಾಗಲಿ ಯಾರಾದರೂ ದೊಡ್ಡ ಸಂಸಾರಿಗಳಾಗಿ ಸಾಲಸೋಲಕ್ಕೆ ಗುರಿಯಾಗಿದ್ದರೆ ಅವರಿಗೆ ಬಡ್ಡಿಯಿಲ್ಲದೆ ಅರಮನೆಯ ಬೊಕ್ಕಸದಿಂದ ಸಾಲ ಕೊಡಿಸಿ, ಸ್ವಲ್ಪಸ್ವಲ್ಪವಾಗಿ ಅವರ ಸಂಬಳದಲ್ಲಿ ಹಿಡಿದುಕೊಳ್ಳುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ಲಕ್ಷಾಂತರ ರೂಪಾಯಿಗಳಷ್ಟು ಸಾಲಗಳನ್ನು ಬಿಟ್ಟಿರುವುದೂ ಉಂಟು. ಮಹಾರಾಜರಿಂದ ಸಹಾಯ ಪಡೆದ ಮೇಲೂ, ಕೆಲವರು ಅವಿಚಾರತೆಯಿಂದ ಅಮಿತವ್ಯಯಮಾಡಿ ಪುನಃ ಮಹಾರಾಜರ ಸನ್ನಿಧಿಯನ್ನೈದಿ ಪದೇ ಪದೇ ದಾರಿದ್ರ್ಯದೋಷವನ್ನು ಹೇಳಿಕೊಂಡರೆ, ಅದರ ನಿಜಸ್ಥಿತಿಯನ್ನು ತಿಳಿದು ಅವರನ್ನಾಕ್ಷೇಪಿಸಿ ಅವರಿಗೆ ಬುದ್ಧಿ ಕಲಿಸಿ ಮಿತವ್ಯಯದ ಮಾರ್ಗವನ್ನು ಬೋಧಿಸುತ್ತಿದ್ದರು.

ಈ ರೀತಿಯಲ್ಲಿ ಶ್ರೀಮನ್ಮಹಾರಾಜ ಶ್ರೀ ಚಾಮರಾಜೇಂದ್ರ ಒಡೆಯರವರ ಸದ್ಗುಣಗಳನ್ನು ಯಾವ ಅಂಶದಲ್ಲಿಯೇ ಆಗಲಿ ಎಷ್ಟು ಹೇಳಿದರೂ ತೀರದು. ಆದರೆ ಪಾಠಕಮಹಾಶಯರು ಈ ಗುಣಕಥನದಲ್ಲಿ ಒಂದು ಮುಖ್ಯಾಂಶವನ್ನು ಅವಗಾಹನೆಗೆ ತಂದುಕೊಳ್ಳಬೇಕು. ಯಾವನಾದರೊಬ್ಬ ಮನುಷ್ಯನ ಶೀಲಸ್ವಭಾವಗಳನ್ನು ಪರಿಶೀಲಿಸುವುದರಲ್ಲಿ ಮುಖ್ಯವಾಗಿ ಸ್ಮರಣೆಯಲ್ಲಿಟ್ಟಿರಬೇಕಾದ ತತ್ತ್ವವೇನೆಂದರೆ :— ಲೋಕದಲ್ಲಿ ಸರ್ವಸಮ್ಮತವಾದ ಪದಾರ್ಥವು ಒಂದೂ ಇರಲಾರದು. ತಮಗೆ ಬೇಕಾದ ವಸ್ತುವು ದೋಷಭರಿತವಾಗಿದ್ದರೂ ಅದರಲ್ಲಿ ವಿಶೇಷ ಪ್ರೀತಿಯನ್ನಿಡುವುದೂ, ಬೇಡವಾದ ವಸ್ತುವು ಗುಣಭರಿತವಾಗಿದ್ದರೂ ಇರತಕ್ಕ ಗುಣಗಳಲ್ಲಿಯೇ ಏನಾದರೊಂದು ದೋಷಾರೋಪಣವನ್ನು ಮಾಡಿ ದೂಷಿಸುವುದೂ ಪ್ರಪಂಚದ ಜನರಿಗೆ ಸಾಮಾನ್ಯ ಧರ್ಮವಾಗಿರುವುದು. ಕೂಲಂಕಷವಾಗಿ ವಿಚಾರಮಾಡಿ ನೋಡಿದರೆ, ಬ್ರಹ್ಮಸೃಷ್ಟಿಯಲ್ಲಿ ಸಕಲ ಗುಣ ಸಂಪನ್ನವಾದುದಾಗಲಿ ಸಕಲ ದೋಷಪೂರಿತವಾದುದಾಗಲಿ ಇರುವ ವಸ್ತುವೇ ಇಲ್ಲ. ಆದುದರಿಂದ, ಈ ಮಾನುಷ ಪ್ರಪಂಚದಲ್ಲಿ, ಅನೇಕ ಸುಗುಣಗಳಿಂದ ಕೂಡಿ ಇತರರಿಗೆ ಬಾಧಕವಲ್ಲದ ಯತ್ಕಿಂಚಿದ್ದೋಷವುಳ್ಳವನೇ ಸುಗುಣಿಯೆನ್ನಿಸಿಕೊಳ್ಳುವನು. ಆರ್ಯ ಕವಿಶ್ರೇಷ್ಠನಾದ ಕಾಳಿದಾಸನು, “ಏಕೋಹಿ ದೋಷೋ ಗುಣಸನ್ನಿಪಾತೇ ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ” ಎಂದರೆ, ಗುಣಸಮೂಹದಲ್ಲಿ ಒಂದು ದೋಷವು ಚಂದ್ರನ ಕಿರಣಗಳಲ್ಲಿ ಕಳಂಕದಂತೆ ಮುಳುಗಿಹೋಗುವುದಲ್ಲವೆ? ಎಂದು ಹೇಳಿರುವನು. ಅದೇ ರೀತಿಯಾಗಿ ಒಬ್ಬ ಮನುಷ್ಯನಲ್ಲಿರುವ ಸುಗುಣರಾಶಿಯಲ್ಲಿ ಒಂದು ದೋಷವಿದ್ದರೂ ಗೋಚರವಾಗದೆ ಅಡಗಿಹೋಗುವುದು. ಮತ್ತೊಬ್ಬ ಕವಿಯು, “ಗುಣದೋಷೌ ಬುಧೋಗೃಹ್ಣನ್ನಿಂದುಕ್ಷ್ವೇಳಾವಿವೇಶ್ವರಃ । ಶಿರಸಾ ಶ್ಲಾಘತೇ ಪೂರ್ವಂ ಪರಂ ಕಂಠೇ ನಿಯಚ್ಛತಿ”—ಎಂದರೆ, ಈಶ್ವರನು ಚಂದ್ರನನ್ನೂ ವಿಷವನ್ನೂ ಪರಿಗ್ರಹಿಸಿದಂತೆ ವಿದ್ವಾಂಸನಾದವನು ಗುಣದೋಷಗಳೆರಡನ್ನೂ ಪರಿಗ್ರಹಮಾಡಿ, ಮೊದಲನೆಯದನ್ನು ತಲೆಯಲ್ಲಿ ಹೊತ್ತು ಶ್ಲಾಘಿಸುವನು; ಎರಡನೆಯದನ್ನು ಕಂಠದಲ್ಲಿಯೇ ತಡೆದಿಡು

ವನು ಎಂದು ಹೇಳಿರುವನು ; ಎಂದರೆ, ಗುಣಶಾಲಿಗಳು ಮತ್ತೊಬ್ಬರ ಗುಣಗ್ರಹಣ ವನ್ನು ಮಾಡಿ ದೋಷವನ್ನು ತ್ಯಜಿಸುವರೆಂದು ತಾತ್ಪರ್ಯವು. ಒಬ್ಬ ಮನುಷ್ಯನಲ್ಲಿ ಇತರರಿಗೆ ಹಾನಿಕರವಾದ ಅನೇಕ ದುರ್ಗುಣಗಳಿದ್ದರೂ, ಅವುಗಳೊಡನೆ ಬೆರೆತಿರುವ ಒಂದು ಸುಗುಣವನ್ನು ಶ್ಲಾಘಿಸುವುದಾದರೆ ಆ ಶ್ಲಾಘನೆಯು ವರ್ಣಿಸುವವನ ದುರಭಿ ಮಾನವನ್ನು ಹೊರಪಡಿಸುವುದೇ ಹೊರತು ಸುಗುಣ ನಿರೂಪಣವನ್ನು ಮಾಡಿದಂತಾಗುವು ದಿಲ್ಲ. ಸುಗುಣಗಳು ಅನೇಕವಾಗಿದ್ದರೂ ಅವುಗಳ ವಿಷಯದಲ್ಲಿ ಅಂಧತ್ವವನು ತೋರ್ಪಡಿಸುತ್ತ, ಯಾವುದೋ ಒಂದು ದೋಷವಿದ್ದರೆ ಅದನ್ನು ಪ್ರಕಾಶಪಡಿಸುವುದಕ್ಕೆ ಯತ್ನಿಸುವವನ ಸಾಮರ್ಥ್ಯವು ಅಸೂಯೆಯೆನಿಸಿಕೊಳ್ಳುವುದು. ಮುಖ್ಯ ತತ್ತ್ವವೇ ನೆಂದರೆ : ಶ್ರೀಚಾಮರಾಜೇಂದ್ರ ಒಡೆಯರವರು ಜನ್ಮದಲ್ಲಿ ಮನುಷ್ಯಮಾತ್ರರೇ ಆದುದರಿಂದಲೂ, ಬ್ರಹ್ಮಸೃಷ್ಟವಾದ ಪ್ರಪಂಚದಲ್ಲಿ ಸಂಪೂರ್ಣ ನಿರ್ದುಷ್ಟವಸ್ತುವಿಲ್ಲವಾ ದುದರಿಂದಲೂ, ಅವರಲ್ಲಿಯೂ ನಮಗೆ ಗೋಚರಕ್ಕೆ ಬಾರದಂತಹ ಅಲ್ಪದೋಷವಿದ್ದರೂ ಇರಬಹುದು. ಆದರೆ, ಅದು ನಮ್ಮಗಳ ದೃಷ್ಟಿಪಥದಲ್ಲಿ ಬೀಳಲೂ ಇಲ್ಲ, ಅದರಿಂದ ಯಾವ ಪ್ರಾಣಿಗಾಗಲಿ ಯಾವ ವಿಧವಾದ ಹಾನಿಯೂ ಉಂಟಾಗಲಿಲ್ಲ. ಮಹಾ ಪ್ರಭುಗಳು ಆಡುತ್ತಿದ್ದ ಮಾತುಗಳಲ್ಲಾಗಲಿ, ಮಾಡುತ್ತಿದ್ದ ಕಾರ್ಯಗಳಲ್ಲಾಗಲಿ, ಯಾವ ಭಾಗದಲ್ಲಾದರೂ ಎಷ್ಟು ದೂರ ಪರೀಕ್ಷಿಸಿ ನೋಡಿದರೂ ಭೂತದಯಾ ಪಶ್ಚಾತ್ತಾಪ ದಾಕ್ಷಿಣ್ಯ ಧೈರ್ಯ ಸ್ಥೈರ್ಯ ಚಾತುರ್ಯ ಗಾಂಭೀರ್ಯಾದಿ ಸುಗುಣಗಳೇ ಗೋಚರಿಸುತ್ತಿದ್ದುವು.

ಹದಿನೇಳನೆಯ ಅಧ್ಯಾಯ

ಶ್ರೀಚಾಮರಾಜೇಂದ್ರ ಒಡೆಯರವರ ಚರಮಾವಸ್ಥೆ.

ಮುಂದೆ ಬರುವ ದೌರ್ಭಾಗ್ಯವು ಮೊದಲೇ ತನ್ನ ಛಾಯೆಯನ್ನು ಸೂಚಿಸುವು ದೆಂದು ಪ್ರಾಪಂಚಿಕ ವ್ಯಾಪಾರಗಳಲ್ಲಿ ಅನುಭವಶಾಲಿಗಳಾದವರು ಹೇಳುತ್ತಾರೆ. ಆದರೆ, ದೌರ್ಭಾಗ್ಯವೆಂಬುದು ನಾನಾ ರೂಪವಾಗಿ ಬರುವುದು. ಅದು ಪ್ರಾಯಿಕವಾಗಿ ಮಾನುಷೇಂದ್ರಿಯ ಗೋಚರವಾದ ಕಾರ್ಯಾಕಾರ್ಯ ಜನಿತ ಸುಫಲ ದುಷ್ಫಲ ರೂಪ ವಾಗಿ ಕಾಣಿಸಿಕೊಳ್ಳುವುದಾದರೂ, ಕೆಲವು ಸಂದರ್ಭಗಳಲ್ಲಿ ಮನುಷ್ಯಮಾತ್ರನಿಗೆ ಗೋಚರವಿಲ್ಲದೆ ಅಕಸ್ಮಾತ್ತಾಗಿ ಸಂಭವಿಸುವುದೂ ಉಂಟು. ಇದನ್ನು ಕೆಲವರು ಆಧಿದೈವಿಕವೆಂದು ಹೇಳುವರು. ಕಾರ್ಯ ಕಾರಣ ಸಂಬಂಧವನ್ನನುಸರಿಸಿಯೇ ಸಂಭ ವಿಸುವ ಐಹಿಕ ಪ್ರತ್ಯಕ್ಷ ಪ್ರಮಾಣಗಳನ್ನು ಕಂಡು ಕೆಲವರು ಅವುಗಳನ್ನು ತತ್ತತ್ಫಲ ಸೂಚಕ ಗಳಾದ ದುಶ್ಶಕುನ ಸುಶಕುನಗಳೆಂದು ಕರೆಯುವರು. ಈ ಶಕುನಗಳಲ್ಲಿ ಆಯಾ ದೇಶೀ ಯರ ಪ್ರತ್ಯೇಕ ಪ್ರತ್ಯೇಕಾನುಭವವಿದ್ದಂತೆ ಒಬ್ಬರಿಗೆ ಶುಭ ಸೂಚಕಗಳಾದುವು ಮತ್ತೊ

ಟ್ಟರಿಗೆ ಅಶುಭ ಸೂಚಕಗಳೆನ್ನಿಸಿಕೊಳ್ಳುವುದೂ ಉಂಟು. ಆದುದರಿಂದ ಆಯಾ ದೇಶೀಯರು ಆಯಾ ಕಾಲದೇಶಗಳನ್ನೂ ಅನುಭವವನ್ನೂ ಅನುಸರಿಸಿ ಶಕುನ ಸಿದ್ಧಾಂತಗಳನ್ನು ನಿರ್ಣಯಿಸಿಕೊಂಡಿರುವರು. ಅವುಗಳಲ್ಲಿ ನಂಬುಗೆಯನ್ನಿಟ್ಟಿರತಕ್ಕವರು ದುಶ್ಶಕುನಗಳನ್ನು ಕಂಡರೆ, ಮುಂದೆ ತಮಗೆ ಅನರ್ಥವುಂಟಾದೀತೆಂಬ ಭೀತಿಯಿಂದ ತತ್ಪರಿಹಾರಾರ್ಥವಾಗಿ ಭಗವದಾರಾಧನಾದಿ ಶಾಂತಿಕರ್ಮಗಳನ್ನು ಆಚರಿಸುವರು. ಇಂತಹವರನ್ನು ಕಂಡು ನವನಾಗರಿಕ ಶಾಸ್ತ್ರಧುರೀಣರಾದವರು ಆ ರೀತಿಯಲ್ಲಿ ನಡೆವುದು ಮೂಢ ಪ್ರಪಂಚವ್ಯಾಪಾರವೆಂದು ಅವರನ್ನು ಹೇಳನಮಾಡುವರು. ಶಕುನಗಳು ವಿಶ್ವಾಸಾರ್ಹಗಳಲ್ಲವೆಂಬುದೇ ಇವರ ಅಭಿಪ್ರಾಯವು. ಆದರೆ ಅವು ವಿಶ್ವಾಸಾರ್ಹಗಳೇ ಆದರೂ, ಅಲ್ಲದಿದ್ದರೂ ಪ್ರಪಂಚದಲ್ಲಿ ದೈವೇಚ್ಛೆಯಿಂದ ನಡೆಯಬೇಕಾದ ವ್ಯಾಪಾರಗಳು ತಡೆಯಿಲ್ಲದೆ ನಡೆಯುತ್ತಲಿರುವುವು.

ಶ್ರೀಚಾಮರಾಜೇಂದ್ರ ಒಡೆಯರವರ ಚರಮ ಕಾಲದಲ್ಲಿ ಕೆಲವು ವಿಶೇಷ ವಿಷಯಗಳು ನಡೆದುವು. ಅವುಗಳನ್ನು ಕಂಡು ಜನಗಳು ದುಶ್ಶಕುನಗಳೆಂದು ಬಹು ಭೀತರಾದರು. ಅವುಗಳು ಆ ರೀತಿಯಲ್ಲಿ ಭಾವಿಸಲ್ಪಡುವುದಕ್ಕೆ ಅರ್ಹಗಳೋ ಅನರ್ಹಗಳೋ ಎಂಬ ವಿಚಾರಗಳು ಹಾಗಿರಲಿ ; ನಡೆದ ವಿಷಯಗಳನ್ನು ನಡೆದಂತೆಯೇ ವಿವರಿಸಬೇಕಾದುದು ಪರಮಾವಶ್ಯಕವಾಗಿರುವುದು. ಹದಿನಾಲ್ಕನೆಯ ಅಧ್ಯಾಯದಲ್ಲಿ ಹೇಳಿರುವಂತೆ, ಶ್ರೀಮನ್ಮಹಾರಾಜರವರು ೧೮೯೪ನೆಯ ಇಸವಿ ಮಾರ್ಚಿ ತಿಂಗಳಲ್ಲಿ ಮಹಾಯಾತ್ರೆಯನ್ನು ಪೂರಯಿಸಿಕೊಂಡು ಬಂದ ಬಳಿಕ, ಕೆಲವು ದಿನಗಳ ಮೇಲೆ ರಾಜಧಾನಿಯಲ್ಲಿ ಉತ್ಪಾತಗಳು ಕಾಣಬಂದುವು. ಇದ್ದಕ್ಕಿದ್ದ ಹಾಗೆ ಅರಮನೆಯ ಮೇಲಿದ್ದ ಪಂಚಕಲಶ ಸಹಿತವಾದ ಶಿರೋಗೃಹವು ಮುರಿದು ಬಿದ್ದಿತು. ಗಜಶಾಲೆಯಲ್ಲಿ ಆನೆಗಳೂ, ಅಶ್ವಶಾಲೆಯಲ್ಲಿ ಕುದುರೆಗಳೂ, ಕರೆಯುವ ಹಟ್ಟಿಯಲ್ಲಿ ಹಸುಗಳೂ ಸಾಯಲಾರಂಭವಾಯಿತು. ಪ್ರತಿ ರಾತ್ರಿಯಲ್ಲಿಯೂ ಅರಮನೆಯ ಮುಂದೆ ನಾಯಿಗಳು ರೋದನಮಾಡುತ್ತಿದ್ದುವು. ಇವುಗಳನ್ನೆಲ್ಲ ನೋಡಿದ ಕಾಲಜ್ಞಾನಿಗಳು ಬೀದಿಬೀದಿಗಳಲ್ಲಿ ಕಾಲಮೃತ್ಯುವಿನ ಮಾತನ್ನೇ ಆಡತೊಡಗಿದರು. ಇದನ್ನು ಕೇಳಿದ ಪ್ರಜೆಗಳೆಲ್ಲರೂ ಪರಿಪರಿಯಾಗಿ ಪರಿತಾಪ ಪಡುತ್ತಿದ್ದರು.

ಹೀಗಿರುವಲ್ಲಿ, ಜಯ ಸಂವತ್ಸರದ ನವರಾತ್ರಿಯು ಪ್ರಾಪ್ತವಾಗಿ ಎಂದಿನಂತೆ ಶ್ರೀಮನ್ಮಹಾರಾಜರವರು ಪಾಡ್ಯದ ದಿನ ಸಿಂಹಾಸನಾರೋಹಣವನ್ನು ಮಾಡಿದರು. ಆ ದಿವಸ ರಾತ್ರಿ ಪೂರ್ವಭಾಗದ ಕೋಟೆಯ ಬಳಿಯಲ್ಲಿದ್ದ ಒಂದು ಮರದ ಕಾರ್ಖಾನೆಯು ಹತ್ತಿಕೊಂಡಿತು. ಸಭೆಯಲ್ಲಿ ಉತ್ತುಂಗವಾದ ಸಿಂಹಾಸನದಮೇಲೆ ಕುಳಿತಿದ್ದ ಮಹಾರಾಜರವರಿಗೆ ಇದು ಮೊದಲು ಕಂಡುಬಂದುದರಿಂದ ಅವರು ಆ ದರ್ಬಾರಿನಲ್ಲಿದ್ದ ಕೆಲವರನ್ನು ಕರೆದು ಆ ಉರಿಯನ್ನು ಆರಿಸುವಂತೆ ಅಪ್ಪಣೆಕೊಟ್ಟು ಕಳುಹಿಸಿದರು. ಒಂಬತ್ತು ದಿನಗಳ ವರೆಗೆ ಉತ್ಸವವು ಯಥಾವಿಧಿಯಾಗಿ ವಿಜೃಂಭಣೆಯಿಂದ ನಡೆದನಂತರ ದಶಮಿಯ ದಿನ ಮಹಾರಾಜರು ಸರ್ವಾಭರಣ ಭೂಷಿತರಾಗಿ

ಮಹೋನ್ನತವಾದ ಪಟ್ಟದ ಗಜವನ್ನು ಆರೋಹಣಮಾಡಿ, ಚತುರಂಗ ಬಲದೊಡನೆ ವಿಜಯಯಾತ್ರೆಗೆ ಹೊರಟು, ಶಮೀವೃಕ್ಷದ ಮಂಟಪದೆಡೆಗೆ ದಯಮಾಡುತ್ತ ಬೀರನ ಗೆರೆಯ ಬಾಗಿಲಿಗೆ ಬರುವಷ್ಟರಲ್ಲಿ, ಮಹಾರಾಜರವರು ಆರೋಹಣ ಮಾಡಿದ್ದ ಆನೆಯು ತಟ್ಟನೆ ಊರ ಕಡೆಗೆ ಹಿಂದಿರುಗಿತು. ಇದನ್ನು ಕಂಡು ಜನರೆಲ್ಲರೂ ಇದೇನು ಬಿಪ್ಪವೋ ಎಂದು ಹೆದರಿದರು; ಮಹಾರಾಜರವರ ಮನಸ್ಸೂ ಮಹಾಚಿಂತೆಗೊಳಗಾಯಿತು.

ಬಳಿಕ ಅದೇ ಸಂವತ್ಸರದ ಡಿಸೆಂಬರ್ ೯ನೆಯ ದಿನ ಶ್ರೀಮನ್ಮಹಾರಾಜರವರು ದೇಶಾಟನಕ್ಕೆ ಹೊರಟರು. ಆದರೆ ಈಗ ಒದಗಿದ ಪಯಣವು ಅವರಿಗೆ ಮತ್ತೆ ರಾಜಧಾನಿಯನ್ನು ನೋಡಲವಕಾಶವೀಯದೆ ಅವರ ಜೀವಮಾನದ ಕಡೆಯ ಪಯಣವಾಯಿತು. ಪ್ರಯಾಣಕ್ಕೆ ಪೂರ್ವದಲ್ಲಿ ಮಹಾರಾಜರವರು ಬಂಧು ಮಿತ್ರಾದಿಗಳೊಡನೆ ಚಾಮುಂಡೀಬೆಟ್ಟಕ್ಕೆ ದಯಮಾಡಿ ಕುಲದೇವತೆಯೂ ಜಗಜ್ಜನನಿಯೂ ಆದ ಶ್ರೀ ಚಾಮುಂಡಾಂಬಿಕೆಗೆ ಸಿಂಹವಾಹನೋತ್ಸವವನ್ನೂ ಮಹಾಬಲೇಶ್ವರನಿಗೆ ರುದ್ರಾಭಿಷೇಕವನ್ನೂ ಮಾಡಿಸಿದರು. ಪ್ರಯಾಣದ ದಿನ ಪ್ರಾತಃಕಾಲ ಎಂದಿನಂತೆ ಖಾಸ ಬಂಗಲೆಗೆ ಹೋಗಿ, ಅಲ್ಲಿ ಕೆಲವರಿಗೆ ಭೇಟಿಯನ್ನು ಕೊಟ್ಟು, ತಮ್ಮ ಪ್ರಾಣಕ್ಕೆ ಸಮಾನವಾಗಿ ತಿಳಿದುಕೊಂಡಿದ್ದ ಅಶ್ವಗಳಿಗೆ ಲೂಸರ್ನ್ ಸೊಪ್ಪನ್ನು ಕೈಯಿಂದ ತಿನ್ನಿಸಿ ಮುದ್ದಿಡಿಸಿ ಬಂದು, ಹೊಸದಾಗಿ ಕಟ್ಟುತ್ತಿದ್ದ ಅಂಬಾವಿಲಾಸದ ದರ್ಬಾರ್ ಹಾಲಿನ ಕಾಮಗಾರಿಯನ್ನೆಲ್ಲ ಪರಾಮರ್ಶಿಸಿ, ಅದರ ಮೇಲ್ವಿಚಾರಣ ಕರ್ತರಾಗಿದ್ದ ಕಂಟ್ರೋಲರಿಗೆ ಕಟ್ಟಡವನ್ನು ಜಾಗ್ರತೆಯಾಗಿ ಪೂರಯಿಸುವಂತೆ ಅಪ್ಪಣೆಮಾಡಿ, ನಾಮತೀರ್ಥದ ತೊಟ್ಟಿಯಲ್ಲಿರುವ ಗೃಹದೇವತೆಗಳನ್ನು ಅರ್ಚಿಸಿ, ಭೋಜನಾನಂತರ ಪುತ್ರ ಮಿತ್ರ ಕಳತ್ರ ಪರಿವಾರದೊಡನೆ ರಾಜಧಾನಿಯಿಂದ ತೆರಳಿದರು. ಒಂದೆಡೆಯಲ್ಲಿಯೂ ತಂಗದೆ ಹಗಲೂ ರಾತ್ರಿಯೂ ಪ್ರಯಾಣಮಾಡಿ ೧೧ನೆಯ ತಾರೀಖಿನ ದಿನ ಪೂನಾ ಪಟ್ಟಣವನ್ನು ಸೇರಿ ಅಲ್ಲಿ ಮೂರು ದಿನಗಳಿದ್ದು, ಪಾರ್ವತೀ ಬೆಟ್ಟಕ್ಕೆ ದಯಮಾಡಿ ಅಮ್ಮನವರ ಸೇವೆಯನ್ನು ಮಾಡಿಕೊಂಡು, ಅಲ್ಲಿಯ ವಿಶೇಷಗಳನ್ನೆಲ್ಲ ಪರಾಮರ್ಶಿಸಿ, ಅಲಹಾಬಾದನ್ನು ಕುರಿತು ತೆರಳುತ್ತಿರುವಾಗ ದಾರಿಯಲ್ಲಿ ಹರ್ದಾ ಸ್ಟೇಷನ್ನಿನ ಬಳಿಯಲ್ಲಿ ಮಹಾರಾಜ್ಞಿಯವರು ಕುಳಿತಿದ್ದ ಸೆಲೂನ್ ಗಾಡಿಯ ದೂರಿಯು ಮುರಿದುಹೋಯಿತು. ಈ ಅಪಾಯವನ್ನು ಮುಂಚಿತವಾಗಿಯೇ ಕಂಡುಹಿಡಿದ ಒಬ್ಬಾನೊಬ್ಬ ಯೂರೋಪಿಯನ್ ರೈಲ್ವೆ ನೌಕರನಿಗೆ ಮಹಾರಾಜರವರು ಉಚಿತವಾದ ಬಹುಮಾನವನ್ನು ದಯಪಾಲಿಸಿ, ಭಾನುವಾರ ಪ್ರಾತಃಕಾಲ ರಾಜಾ ಗೋಕುಲದಾಸರವರ ಇಷ್ಟಾನುಸಾರ ಮಿರ್‌ಗಂಜ್ ಸ್ಟೇಷನ್ನಿನಲ್ಲಿ ಇಳಿದರು. ಗೋಕುಲದಾಸರವರು ಶ್ರೀಮನ್ಮಹಾರಾಜರವರ ಸವಾರಿ ಬರುವುದೆಂದಾನಂದಿಸಿ, ಅವರು ಬರುವ ಮಾರ್ಗವನ್ನು ತೋರಣಾದಿಗಳಿಂದಲಂಕರಿಸಿ, ರಥಗಳನ್ನು ಸಿದ್ಧಮಾಡಿಕೊಂಡು ಮಿರ್‌ಗಂಜ್ ಸ್ಟೇಷನ್ನಿನಲ್ಲಿ ಕಾದುನಿಂತಿದ್ದು, ಪರಿವಾರಸಮೇತರಾದ ಮಹಾರಾಜರನ್ನು ಕಂಡೊಡನೆಯೇ ಆನಂದಿತರಾಗಿ ಇದಿರ್ಗೊಂಡು ಅತ್ಯಂತ ವಿಜೃಂಭಣೆಯೊಡನೆ ಸ್ಟೇಷನ್ನಿಗೆ ನಾಲ್ಕು ಮೈಲುಗಳ ದೂರದಲ್ಲಿ ನರ್ಮದಾ

ನದಿಯ ಉಪಕೂಲದಲ್ಲಿ ಹಾಕಿದ್ದ ಗೂಡಾರಕ್ಕೆ ಕರೆದುಕೊಂಡು ಹೋಗಿ ಇಳಿಸಿ ಬಹಳ ವಾಗಿ ಸತ್ಕರಿಸಿದರು.

ಮಹಾರಾಜರಿಗೆ ಇನ್ನೊಂದುಸಾರಿ 'ಮಾರ್ಬಲ್ ರಾಕ್ಸ್' ಎಂಬ ದೋಣಿ ಯನ್ನು ನೋಡಬೇಕೆಂಬ ಆಸೆ ಬಹಳವಾಗಿದ್ದಿತು. ಆದರೆ ದೇಹದಲ್ಲುಂಟಾದ ಅಸೌಖ್ಯ ದಿಂದ ಹೊರಡುವುದಕ್ಕೆ ಅಡ್ಡಿಯಾಯಿತು. ಆದರೂ ಮಹಾರಾಜರವರು ತಮ್ಮ ಪರಿವಾರದ ಜನರನ್ನು ಕುರಿತು, "ನಾನು ಹೊರಡುವುದಕ್ಕೆ ಅನುಕೂಲವಿಲ್ಲದೆ ಹೋದರೂ ನೀವೆಲ್ಲರೂ ಹೋಗಿ ನೋಡಿಕೊಂಡು ಬನ್ನಿರಿ; ಮಾಡಿರುವ ಏರ್ಪಾಡುಗಳು ವ್ಯರ್ಥವಾಗಬಾರದು" ಎಂದು ಅಪ್ಪಣೆಕೊಡಿಸಿ, ದಿವಾನರೇ ಮೊದಲಾದ ಅಧಿಕಾರಿ ಗಳನ್ನೂ ಇನ್ನೂ ಕೆಲವರನ್ನೂ ಕಳುಹಿಸಿದರು. ಶೀತಬೀತಿಯಿಂದ ಸಾಯಂಕಾಲಕ್ಕೆ ಮೊದಲೇ ಹೊರಡಬೇಕೆಂದು ಎಲ್ಲರಿಗೂ ಅಪ್ಪಣೆಯಾಗಿದ್ದಿತು, ಭೋಜನಾನಂತರದಲ್ಲಿ ಎಲ್ಲರನ್ನೂ ತ್ವರೆಪಡಿಸಿಕೊಂಡು ರೈಲಿಗೆ ಹೊರಟುಬರುವಾಗ, ಯುವರಾಜರು ಕುಳಿತಿದ್ದ ಗಾಡಿಯ ಕುದುರೆಗಳು ಬೆದರಿ ಗಾಡಿಯು ಒಂದು ಹಳ್ಳಕ್ಕೆ ಮಗುಚಿಕೊಳ್ಳು ತ್ತಿದ್ದಿತು. ಸಮೀಪದಲ್ಲಿಯೇ ನದಿ ಹರಿಯುತ್ತಿದ್ದುದರಿಂದ, ಈ ಸಂದರ್ಭವನ್ನು ಕೇಳಿ ಮಹಾರಾಜರು ಬಹಳವಾಗಿ ವ್ಯಸನಪಟ್ಟರು. ಇಂತಹ ತೊಂದರೆಗಳನ್ನು ದಾಟಿ ಸಕಲರೂ ಪ್ರಯಾಗಕ್ಷೇತ್ರವನ್ನು ಸೇರಿದರು.

ಮಾರನೆಯ ದಿನ ಪ್ರಾತಃಕಾಲ ಮಹಾರಾಜ್ಞಿಯವರು ಸ್ನಾನಾರ್ಥವಾಗಿ ತ್ರಿವೇಣೀ ಸಂಗಮಕ್ಕೆ ಹೋಗುತ್ತಿರುವಾಗ ಅವರು ಕುಳಿತಿದ್ದ ಗಾಡಿಯು ಮುರಿದು ಹೋಯಿತು. ಈ ರಥಭಂಗವೇ ಮನೋರಥ ಭಂಗಕ್ಕೆ ಸೂಚನೆಯಾಗಿ ಕಂಡು ಬಂದಿತು. ಕೂಡಲೆ ಮಹಾರಾಜ್ಞಿಯವರು ಒಂದು ಅಂದಳವನ್ನು ತರಿಸಿ ಅದರಲ್ಲಿ ಕುಳಿತುಕೊಂಡು ಸ್ವಲ್ಪದೂರ ಹೋಗುವಷ್ಟರಲ್ಲಿಯೇ ಅದೂ ಮುರಿದುಹೋಯಿತು. ಬಳಿಕ ಬೇರೊಂದು ಗಾಡಿಯನ್ನೇರಿ ಹೋಗಿ ಸ್ನಾನಮಾಡಿಕೊಂಡು ಬಂದರು. ಈ ರೀತಿ ಯಾಗಿ ಮೈಸೂರಿಂದ ಹೊರಟದು ಮೊದಲ್ಗೊಂಡು ದುಃಖಸೂಚಕವಾದ ಅಪಶಕುನಗಳೇ ಒಂದರ ಹಿಂದೊಂದು ಗೋಚರವಾಗುತ್ತ ಬಂದುವು. ಪ್ರಯಾಗದಿಂದ ಹೊರಟು ಎಲ್ಲರೂ ಕಲ್ಕತ್ತೆಯನ್ನು ಸೇರಿದರು. ಸ್ಟೇಷನ್ ಕಟ್ಟಡದಲ್ಲಿ ಇದಿರುನೋಡುತ್ತಿದ್ದ ಇಂಗ್ಲಿಷ್ ಅಧಿಕಾರಿಗಳೂ, ವಿಜಯನಗರ ಮಹಾರಾಜರ ಬಂಗಲೆಯ ಮುಖ್ಯಾಧಿಕಾರಿಗಳೂ ಮಹಾರಾಜರನ್ನು ಇದಿರ್ಗೊಂಡು ಪಿಯಾರ್ಬಾಗ್ ಎಂಬ ವಿಜಯನಗರದ ಮಹಾರಾಜ ರವರ ಬಂಗಲೆಗೆ ಕರೆದುಕೊಂಡು ಹೋಗಿ ಇಳಿಸಿದರು. ೨ನೆಯ ತಾರೀಖಿನ ದಿನ ಮಹಾರಾಜರವರಿಗೂ ಲಾರ್ಡ್ ಎಲ್ಗಿನ್ ಅವರಿಗೂ ಸಂದರ್ಶನೋತ್ಸವವು ನಡೆಯಿತು.

ಶ್ರೀಮನ್ಮಹಾರಾಜರವರು ಕಲ್ಕತ್ತಾ ನಗರದ ವಿಚಿತ್ರತೆಯನ್ನು ನೋಡುತ್ತ ಅಲ್ಲಿ ಒಂದೆರಡು ದಿನಗಳನ್ನು ಕಳೆದ ಬಳಿಕ, ಒಂದು ದಿನ ಪ್ರಾತಃಕಾಲ ರಥಾರೂಢರಾಗಿ ಸಂಚಾರ ಹೊರಟು, ಒಂದು ಅಶ್ವಶಾಲೆಯನ್ನು ಹೊಕ್ಕು ಕೆಲವು ಉತ್ತಮಾಶ್ವಗಳನ್ನು ಕೊಂಡುಕೊಳ್ಳಬೇಕೆಂಬ ಅಭಿಲಾಷೆಯಿಂದ ಅಶ್ವಪರೀಕ್ಷೆ ಮಾಡುತ್ತಿರುವಲ್ಲಿಯೇ ಅವರಿಗೆ

ಜ್ವರವು ಕಾಣಿಸಿಕೊಂಡಿತು, ಉತ್ತರ ಕ್ಷಣದಲ್ಲೇ ಅಲ್ಲಿಂದ ಹೊರಟು ಬೀಡಾರವನ್ನು ಸೇರಿದರು. ಕೂಡಲೆ, ತಮ್ಮ ಉಂಗುರವನ್ನು ತೆಗೆಯೆಂದು ಹತ್ತಿರಿದ್ದ ಸೇವಕನ ಬಳಿಗೆ ಕೈಚಾಚಿದರು. ಯಾವಾಗಲೂ ಬೆರಳಿನಲ್ಲಿ ಬಿಗಿಯಾಗಿದ್ದ ಆ ಉಂಗುರವು ತೆಗೆಯುವುದಕ್ಕೆ ಮೊದಲೇ ತನಗೆ ತಾನೇ ಕಳಚಿ ಭೂಮಿಯ ಮೇಲೆ ಬಿದ್ದಿತು. ಪ್ರಭುಗಳ ಮನಸ್ಸಿಗೆ ಏನೋ ಹೊಳೆದು, ಉಂಗುರವನ್ನು ಧರಿಸುವುದಕ್ಕೆ ಇದೇ ಕೊನೆಯೆಂದು ಖೇದದೊಡನೆ ಹೇಳಿ, ಕಿಟಕಿಯ ಬಾಗಿಲುಗಳನ್ನೆಲ್ಲ ಹಾಕಿಸಿ ಕತ್ತಲೆಮಾಡಿಕೊಂಡು ಮಲಗಿದರು. ಆ ದಿನ ಬಂಗಲೆಯಲ್ಲಿ ಮೂರನೆಯ ಪುತ್ರಿಯರಾದ ಚೆಲುವಾಜಮ್ಮಣ್ಣಿಯವರ ವರ್ಧಂತೀ ಮಹೋತ್ಸವವು; ಅನೇಕ ಮಂದಿ ಸುದತಿಯರ ಸಂಗೀತ, ಮಂಗಳವಾದ್ಯ, ಬ್ರಾಹ್ಮಣರ ಸ್ವಸ್ತಿವಾಚನೆ—ಇವೇ ಮುಂತಾದ ಸಂಭ್ರಮಗಳಿಂದ ನಡೆಯುತ್ತಿದ್ದರೂ, ಮಹಾರಾಜರು ಮಾತ್ರ ವಿಷಣ್ಣವದನರಾಗಿ ದಾರುಣವಾದ ಯಾತನೆಯನ್ನನುಭವಿಸುತ್ತ ಮಲಗಿದರು.

ಮರುದಿನ ಪ್ರಾತಃಕಾಲದಲ್ಲಿ ಮಹಾರಾಜರಿಗೆ ಗುಣವಾದಂತೆ ಕಂಡುಬರಲು, ಅವರ ಪರಿವಾರದ ಜನರಿಗುಂಟಾದ ಸಂತೋಷಕ್ಕೆ ಪಾರವಿಲ್ಲದೆ ಹೋಯಿತು. ಇಷ್ಟರಲ್ಲೇ ಮಹಾರಾಜರ ಸಂದರ್ಶನಾರ್ಥವಾಗಿ ದಿವಾನರು ಬರಲು, ಅವರೊಡನೆ ಮಹಾರಾಜರವರು ತಮ್ಮ ಪ್ರೋಗ್ರಾಮನ್ನು ಬದಲಾಯಿಸಿ ನೆಟ್ಟಗೆ ಎಲ್ಲರೂ ಮುಂಬಯಿಗೆ ಪ್ರಯಾಣಮಾಡುವ ಏರ್ಪಾಡನ್ನು ಮಾಡಬೇಕೆಂದು ಅಪ್ಪಣೆ ಕೊಟ್ಟರು. ರಾಜ್ಯದ ಆಡಳಿತದ ವಿಷಯದಲ್ಲಿ ಇಬ್ಬರಿಗೂ ಅನೇಕ ಪ್ರಸ್ತಾಪಗಳು ನಡೆದುವು. ದಿವಾನರು ಹುಜೂರು ಅಪ್ಪಣೆಯನ್ನು ಪಡೆದು ತಮ್ಮ ಬಂಗಲೆಗೆ ಹೊರಟುಹೋದರು.

ಆ ಮರುದಿನ ಜ್ವರವು ಕಡಿಮೆಯಾದಂತೆ ತೋರಿತು. ಆಗಲೂ ತಾತ್ಕಾಲಿಕವಾದ ಕಾಗದ ಪತ್ರಗಳನ್ನು ಓದಿಸಿ ಅವಶ್ಯಕವಾದ ರಾಜ್ಯದಾಡಳಿತದ ವಿಷಯದಲ್ಲಿ ತಕ್ಕ ಏರ್ಪಾಡುಗಳನ್ನು ಅಪ್ಪಣೆ ಕೊಡಿಸಿದರು. ಮಹಾರಾಜರ ಅಸ್ವಸ್ಥತೆಯ ವರ್ತಮಾನವು ಮಹಾರಾಜ್ಞಿಯವರಿಗೆ ತಿಳಿದುಬಂದುದರಿಂದ, ತಾವು ಮಕ್ಕಳೊಡನೆ ದರ್ಶನಕ್ಕೆ ಬರುತ್ತೇವೆಂದು ಹೇಳಿಕಳುಹಿಸಿ ಅಪ್ಪಣೆಯನ್ನು ಪಡೆದು ಒಳಗೆ ಪ್ರವೇಶ ಮಾಡಿದರು. ಮಹಾರಾಜರು ಒಂದು ಮಗ್ಗುಲಲ್ಲಿಯೇ ಮಲಗಿ ತಮ್ಮ ಪ್ರಿಯ ಪತ್ನೀಪುತ್ರಾದಿಗಳನ್ನು ನೋಡಿದಾಗ ಅವರ ಮುಖದಲ್ಲಿ ಮಧುರವಾದ ಮುಗುಳ್ನಗೆಯು ಮೊಳೆದೋರಿ ಅವರು ಪಡುತ್ತಿದ್ದ ಅಷ್ಟು ಯಾತನೆಯೂ ಅಷ್ಟು ಕ್ಲೇಶವೂ ಅದೃಶ್ಯವಾಗಿ ಹೋದುವು. ಮಹಾರಾಜ್ಞಿಯವರು ಸರ್ವ ಸುಖಾಸ್ಪದ ಮೂರ್ತಿಯಾದ ಪತಿಯ ಹಾಸಿಗೆಯ ಪಾರ್ಶ್ವದಲ್ಲಿ ಮೆಲ್ಲಗೆ ಕುಳಿತುಕೊಂಡು ನೋಡುವಲ್ಲಿ, ತಮ್ಮ ಪ್ರಾಣೇಶರು ಮೂರು ದಿನದ ಜ್ವರದುಪಟಳಕ್ಕೆ ಅತ್ಯಂತ ಕೃಶರಾಗಿ ಹೋಗಿದ್ದುದು ಗೊತ್ತಾಯಿತು. ಮುಖದ ವರ್ಣವು ಬಿಳುಪೇರಿದ್ದಿತು; ಕಣ್ಣುಗಳು ಗುಳಿಬಿದ್ದಿದ್ದುವು. ಯಾವ ಮಹಾನುಭಾವನ ನಿರತಿಶಯವಾದ ಅನುರಾಗದಿಂದ ಕೂಡಿದ ದೃಷ್ಟಿಯು ಬಿದ್ದರೆ ಮಹಾರಾಜ್ಞಿಯವರ ಹೃದಯವು ಅತ್ಯಂತ ಉತ್ಸಾಹದಿಂದ ವಿಕಾಸವನ್ನು ಹೊಂದು

ತ್ತಿದ್ದಿತೋ, ಅಂತಹ ಪ್ರಭುವಿನ ದೃಷ್ಟಿಯು ಈಗ ಶೋಚನೀಯವಾದ ಯಾತನೆಯ ನ್ನುಂಟುಮಾಡಿತು. ಮಹಾರಾಜ್ಞಿಯವರ ಹೃದಯವು ದುಃಖಸಮಾಕುಲವಾಯಿತು. ಆದರೂ ಅತಿ ಕಷ್ಟದಿಂದ ಮನಸ್ಸಿನ ಭಾವವನ್ನು ಮರೆಮಾಚಿ ಹಾಲನ್ನುತರಿಸಿ, ಅದನ್ನು ತೆಗೆದುಕೊಳ್ಳಬೇಕೆಂದು ಬಲವಂತಮಾಡಿ ಕೊಟ್ಟರು. ಆ ಹಾಲು ಒಳಕ್ಕಿಳಿಯುವುದು ಅತಿ ಪ್ರಯಾಸವಾಯಿತು. ಇದನ್ನು ನೋಡಿ ಮಹಾರಾಜ್ಞಿಯವರ ಮನಸ್ಸು ದುಃಖ ವನ್ನಡಗಿಸಿಕೊಳ್ಳಲಾರದೆ ಹೋಯಿತು. ಹೃದಯೇಶನು ಸಂಕಟಪಡುತ್ತಿರುವುದನ್ನು ನೋಡಿ ಪತಿಪರಾಯಣೆಯಾದ ಯಾವ ನಾರಿಗೆ ತಾನೆ ದುಃಖವು ಹೊರಹೊಮ್ಮದು ? ಮಹಾರಾಜ್ಞಿಯವರು ಕಣ್ತುಂಬ ನೀರು ತುಂಬಿಕೊಂಡು ಗಟ್ಟಿಯಾಗಿ ರೋದನ ಮಾಡತೊಡಗಿದರು. ಮಹಾರಾಜರವರು ಸಮಾಧಾನೋಕ್ತಿಗಳನ್ನು ಹೇಳಿ ಸಂತೈಸಿ ಅವರನ್ನು ಕಳುಹಿಸಿಕೊಟ್ಟರು. ಆ ದಿವಸವೇ ಮಹಾರಾಜ್ಞಿಯವರು ಪತಿಯೊಡನೆ ಮಾತನಾಡಿದ ಕೊನೆಯ ದಿವಸವಾಗಿ ಪರಿಣಮಿಸಿತು.

ಮಹಾರಾಜರಿಗೆ ಜ್ವರವು ನಿಶ್ಶೇಷವಾಗಿ ನಿಂತಿರಲಿಲ್ಲ ; ಬೂದಿಮುಚ್ಚಿದ ಕೆಂಡ ದಂತೆ ದೇಹದೊಳಗೆ ಮರೆಯಾಗಿದ್ದಿತು ; ಇನ್ನೂ ಹೆಚ್ಚಾಗಿ ಹೊರಹೊಮ್ಮಿರಲಿಲ್ಲ. ಆದರೆ ಆ ದಿನ ಮಧ್ಯಾಹ್ನ ಜ್ವರವು ತನ್ನ ಕ್ರೌರ್ಯವನ್ನು ತೋರಲಾರಂಭಿಸಿತು. ಮಹಾ ರಾಜರ ಶರೀರವೆಂಬ ವನದಲ್ಲಿ ಜ್ವರವೆಂಬ ದಾರುಣವಾದ ದಾವಾಗ್ನಿಯು ಭುಗಿಲಿಟ್ಟಿತು. ಅದನ್ನು ಅಡಗಿಸುವುದಕ್ಕೆ ಜೊತೆಯಲ್ಲಿ ಬಂದಿದ್ದ ರಾಜವೈದ್ಯರು ನಾನಾವಿಧವಾದ ಚಿಕಿತ್ಸೆಗಳೆಂಬ ನೀರನ್ನು ಎರಚಿದರೂ ಅದರ ಉರಿಯು ಶಾಂತವಾಗಲಿಲ್ಲ. ಮಹಾ ರಾಜರವರಿಗೆ ಆರೋಗ್ಯ ಕೆಟ್ಟು ಅಂದಿಗೆ ಹದಿನಾಲ್ಕು ದಿವಸವಾಗಿದ್ದಿತು. ಈ ಹದಿ ನಾಲ್ಕು ದಿವಸಗಳಿಂದಲೂ ರೋಗವು ಹುತ್ತದಲ್ಲಿಯ ಹಾವಿನಂತೆ ಶರೀರದಲ್ಲಿ ಪ್ರಬಲ ವಾಗುತ್ತ ಬಂದಿತು.

ಡಿಸೆಂಬರ್ ೨೬ನೆಯ ಬುಧವಾರ ಮಧ್ಯಾಹ್ನದ ಮೇಲೆ ಮಹಾರಾಜರವರ ದೇಹಸ್ಥಿತಿಯು ಹೆಚ್ಚುಹೆಚ್ಚಾಗಿ ಕೆಡುತ್ತಬಂದಿತು ; ಕಿವಿಯು ಕೇಳಿಸದಹಾಗಾಯಿತು ; ಧ್ವನಿಯು ಭಾರವಾಯಿತು ; ಏನಾದರೂ ತಿಳಿಸಬೇಕಾದರೆ ಗಟ್ಟಿಯಾಗಿ ಕೂಗಿ ಹೇಳ ಬೇಕಾಗಿ ಬಂದಿತು. ಇಂತಹ ಸೂಕ್ಷ್ಮಮತಿಯುಳ್ಳ ರಾಜಶಿರೋಮಣಿಗೆ ಎಂತಹ ದಶೆ ಪ್ರಾಪ್ತವಾಯಿತು ! ಜಗದ್ವ್ಯಾಪಾರದ ಸ್ಥಿತಿಯೇ ಹೀಗೆ ; ಉತ್ತರ ಕ್ಷಣದಲ್ಲಿ ಏನಾಗು ವುದೊ ಯಾರೂ ಹೇಳಲಾರರು. ಎಲ್ಲವೂ ದೇವರ ಇಚ್ಛೆ, ಎಲ್ಲವೂ ಆತನ ಸಂಕಲ್ಪ. ಶ್ರೀಮನ್ಮಹಾರಾಜರವರು ಆ ರಾತ್ರಿ ನಿದ್ದೆ ಮಾಡದೆ ರೋಗದ ವೇದನೆಯಿಂದ ಬಹಳ ಸಂಕಟಪಟ್ಟರು.

ಗುರುವಾರ ಪ್ರಾತಃಕಾಲದಲ್ಲಿಯೂ ಏನೂ ಗುಣತೋರಲಿಲ್ಲ. ವಿಜಯನಗರದ ಮಹಾರಾಜರ ಬಂಗಲೆಯ ಏಜಂಟರಾದ ಬಾಬು ರಾಧಾನಾಥ್ ಬಿಷ್ವಾಸರವರು ಶ್ರೀಮನ್ಮಹಾರಾಜರವರಿಗೆ ವ್ಯಾಧಿಯು ಹೆಚ್ಚಾಗುತ್ತ ಬರುತ್ತಿರುವುದನ್ನು ತಿಳಿದು, ಬೇರೊಬ್ಬ ವೈದ್ಯನಿಗೆ ತೋರಿಸುವುದು ಯುಕ್ತವಲ್ಲವೇ ಎಂದು ದಿವಾನರಿಗೂ ನರಸಿಂ

ಹಯ್ಯಂಗಾರ್ಯರಿಗೂ ಸಲಹೆ ಹೇಳಿದರು. ಅದರಮೇಲೆ ಎಲ್ಲರೂ ಒಪ್ಪಿ ಕಲ್ಕತ್ತೆಯಲ್ಲಿ ಪ್ರಸಿದ್ಧ ವೈದ್ಯರಾಗಿದ್ದ ಡಾಕ್ಟರ್ ಮೆಕ್ಯಾನಲ್ ಸಾಹೇಬರನ್ನು ಕರೆಯಿಸಿ ತೋರಿಸಿದರು. ಅವರು ತಮ್ಮ ಹಣೆಗೆ ಒಂದು ವಿಧವಾದ ಕನ್ನಡಿಯನ್ನು ಕಟ್ಟಿಕೊಂಡು ಮಹಾರಾಜರನ್ನು ಒಂದು ಕುರ್ಚಿಯಮೇಲೆ ಕುಳ್ಳಿರಿಸಿ, ಮಹಾರಾಜರವರ ವೈದ್ಯರಾದ ಬೆನ್ಸನ್ ಸಾಹೇಬರನ್ನು ಕುರ್ಚಿಯ ಹಿಂದುಗಡೆ ನಿಲ್ಲಿಸಿ ಮಹಾರಾಜರ ಬಾಯಿತೆರೆಯಿಸಿ ನೋಡುವಲ್ಲಿ, ಗಂಟಲೊಳಗಾಗಿರುವ ವಿಕಾರವೆಲ್ಲ ಸ್ಪಷ್ಟವಾಗಿ ಕಾಣಿಸಿತು. ಆಗ ಅದು ಡಿಫ್ತೀರಿಯಾ (ಕಂಠನಾಳ) ರೋಗವೆಂದು ಗೊತ್ತುಮಾಡಿದರು. ರೋಗವು ಪ್ರಬಲವಾದುದೇ ಆದರೂ, ಮಹಾರಾಜರವರು ಇನ್ನೂ ಮಧ್ಯ ಯೌವನವೂ ಕಾಯಬಲವೂ ಉಳ್ಳವರಾಗಿರುವುದರಿಂದ. ವ್ಯಾಧಿಯು ವಾಸಿಯಾದರೂ ಆಗಬಹುದೆಂದು ದಿವಾನರಿಗೆ ತಿಳಿಸಿ, ಮಹಾರಾಜರವರು ಮಲಗಿರುವ ಕೊಟ್ಟಡಿಗೆ ಒಂದು ವಿಧವಾದ ಹೊಗೆಯನ್ನು ಹಾಕಿ ಹೊರಟುಹೋದರು. ಸಾಯಂಕಾಲದ ಮೇಲೆ ರೋಗವು ಮಿತಿಮೀರುತ್ತ ಬಂದಿತು. ಮಹಾರಾಜರು ಬದುಕುವ ವಿಷಯದಲ್ಲಿ ವೈದ್ಯರೆಲ್ಲರೂ ಹತಾಶರಾದರು. ಈ ದಾರುಣವಾದ ಸಮಾಚಾರವು ಮಹಾರಾಜರ ಪ್ರಿಯ ಜನರ ಕಿವಿಗೆಲ್ಲ ಬಿದ್ದು ಎಲ್ಲರೂ ವಿಷಣ್ಣ ಹೃದಯರಾದರು.

ಮಹಾರಾಜರಿಗೆ ಮೃತ್ಯುವು ಡಿಫ್ತೀರಿಯಾ ಎಂಬ ಗಂಟಲನೋವಿನ ರೂಪದಲ್ಲಿ ಬಂದಿತು. ಈ ರೋಗವು ಬಹಳ ಕೆಟ್ಟುದು. ಗಂಟಲ ಒಳಗಡೆಯಲ್ಲಿ ಹುಣ್ಣಾದಂತೆ ಆಗಿ ಹೊಸ ಚರ್ಮವೊಂದು ಹುಟ್ಟಿ ಗಂಟಲಿನಲ್ಲಿ ಬೆಳ್ಳಗೆ ಕಾಣಿಸಿಕೊಳ್ಳುವುದು, ಕ್ರಮೇಣ ಪಕ್ಕದಿಂದ ಮೇಲ್ಗಡೆಗೂ ಕೆಳಗಡೆಗೂ ಹರಡಿಕೊಂಡು ಶ್ವಾಸಕೋಶದ ನಾಳದವರೆಗೂ ವ್ಯಾಪಿಸಿ ಉಸಿರುಕಟ್ಟಿಕೊಂಡು ಬಹಳ ಕಠಿನವಾದ ಜ್ವರವೂ ಕಾಣಿಸಿಕೊಳ್ಳುವುದು. ಈ ವ್ಯಾಧಿ ಬಂದರೆ ಆಹಾರ ಸೇವನೆಯು ಬಹಳ ಕಷ್ಟವಾಗುವುದು ; ಕೊಂಚವೂ ತ್ರಾಣವಿರುವುದಿಲ್ಲ. ರೋಗವು ಅಷ್ಟು ಪ್ರಬಲವಾದುದಲ್ಲವೆಂದು ಅಲಕ್ಷ್ಯಮಾಡಕೂಡದು ; ಹಾಗೆ ಮಾಡಿದರೆ ಕೇಡು ತಪ್ಪುವುದಿಲ್ಲ. ಮೂವತ್ತಾರು ತಾಸುಗಳೊಳಗಾಗಿ ಈ ರೋಗವು ಮನುಷ್ಯನನ್ನು ಕೊಲ್ಲಬಲ್ಲುದು ; ಆದರೆ ಅನೇಕರಿಗೆ ಮೂರು ದಿನದ ಮೇಲೆ ಹನ್ನೆರಡು ದಿನಗಳೊಳಗಾಗಿ ಪ್ರಾಣತೆಗೆಯುವುದೆಂದು ೧೨೦ ವರುಷಗಳ ಕೆಳಗೆ ಪ್ರಖ್ಯಾತನಾಗಿದ್ದ ಒಬ್ಬ ಫ್ರೆಂಚ್ ಡಾಕ್ಟರು ಹೇಳಿರುವನು.

ಈ ಮಧ್ಯೆ ಮಹಾರಾಜರವರು ವೈದ್ಯರನ್ನು ಕುರಿತು, "ಡಾಕ್ಟರ್, ಹೇಗಿದೆ? ನಿಮಗೆ ಹೇಗೆ ತೋರುತ್ತದೆ? ಕೇಳಿದರೆ ವಾಸಿಯೆಂದೂ ಗುಣವಾಗುತ್ತದೆಂದೂ ನಿತ್ಯವೂ ಹೇಳುತ್ತೀರಿ. ಸಾಯುವುದಕ್ಕೆ ನಾನು ಅಂಜುವುದಿಲ್ಲ. ಲೋಕದಲ್ಲಿ ಕಷ್ಟಕ್ಕೆ ಭಾಗಿಗಳಾಗದೆ ಇರತಕ್ಕವರು ಯಾರು ತಾನೇ ಇರುವರು? ಯಾರಾಗಲಿ ಹುಟ್ಟುವುದು ಸಾಯುವುದಕ್ಕೇ. ನಿಶ್ಚಯವಾದ ಸಂಗತಿಯನ್ನು ನನ್ನೊಡನೆ ಹೇಳಕೂಡದೇ?" ಎಂಬುದಾಗಿ ಅಪ್ಪಣೆ ಕೊಡಿಸಿದರು. ವೈದ್ಯರು ಕಾಲಕ್ಕೆ ತಕ್ಕ ಸಮಾಧಾನೋಕ್ತಿಗಳೊಡನೆ ಚಿಕಿತ್ಸೆಯನ್ನು ಮಾಡಿದರು.

ಮಹಾರಾಜರಿಗೆ ಗುರುವಾರದ ದಿನ ಸ್ನಾನವಿಲ್ಲ, ಸಂಧ್ಯಾವಂದನೆ ಇಲ್ಲ. ದೇವತಾರ್ಚನೆ ಇಲ್ಲ, ಸ್ನಾನ ಮಾಡುವುದಕ್ಕೆ ಶಕ್ತಿ ಸಾಲದೆ ಹೋಯಿತು. ದೇವರ ಮನೆಯ ವರೆಗೆ ನಡೆಯುವುದಕ್ಕೂ ಕೈಕಾಲು ಬಾರದೆ ಹೋಯಿತು. ಜ್ವರದ ತಾಪವಂತೂ ತಡೆಯಲಶಕ್ಯವಾಯಿತು. ಆ ದಿನ ಅವರು ದೈವಪ್ರೀತಿಯಿಂದ ಮುಕ್ತರಾಗಿ ನಾನಾ ವಿಧವಾದ ಸಂಕಟಕ್ಕೊಳಗಾದರು. ಎಂತಹ ದಾರುಣವಾದ ಸಂಕಟದಲ್ಲಿದ್ದರೂ ಚಾಮರಾಜೇಂದ್ರ ಒಡೆಯರವರು ಸ್ವಲ್ಪ ಚೇತರಿಸಿಕೊಂಡು, ದೇವರ ಮನೆಗೆ ಹೋಗಿ ಅಚಲವಾದ ಭಕ್ತಿಯಿಂದ ದೇವತಾರ್ಚನೆಮಾಡಿ, ಕುಲದೇವತೆಯನ್ನು ಸ್ತೋತ್ರಮಾಡಿ ಕೈಯೆತ್ತಿ ಮುಗಿಯುತ್ತಿದ್ದುದು ಪೂರ್ವದಿವಕ್ಕೇ ಕೊನೆಯಾಯಿತು. ಇಂತಹ ದುಸ್ಸಹವಾದ ಯಾತನೆಯಲ್ಲಿದ್ದರೂ ಪ್ರಜ್ಞೆತಂದುಕೊಂಡು, ಇಷ್ಟಲ್ಲಿಯೇ ಮುಖವನ್ನೂ ಕೈಕಾಲುಗಳನ್ನೂ ತೊಳೆದುಕೊಂಡು, ಪೀತಾಂಬರವನ್ನು ಹೊದ್ದು, ಚಾಮುಂಡೇಶ್ವರಿಯ ಒಂದು ಸಣ್ಣಯಂತ್ರವನ್ನು ತರಿಸಿ ಅಂಗೈಯಲ್ಲಿಟ್ಟುಕೊಂಡು, ಫಲಪುಷ್ಪಗಳನ್ನು ಸಮರ್ಪಿಸಿ, “ತಾಯಿ! ಆದಿಶಕ್ತಿ! ಭಕ್ತವತ್ಸಲೇ! ನನ್ನ ಈ ದಿನದ ಅತ್ಯಲ್ಪವಾದ ಪೂಜೆಯನ್ನು ಸಾಂಗವಾದ ಪೂಜೆಯಂತೆ ಕೈಕೊಂಡು ಅನುಗ್ರಹಿಸು” ಎಂದು ಬೇಡಿಕೊಂಡರು.

ವ್ಯಾಧಿ ಬಂದಾಗ ಸ್ನಾನ ದೇವತಾರ್ಚನೆ ಮುಂತಾದ ಕರ್ಮಾನುಷ್ಠಾನಕ್ಕೆ ವಿಘ್ನವಾಗುವುದೇನೋ ನಿಜ. ಆದರೆ ಯಾರು ದುರಂತವಾದ ಯಾತನೆಯಲ್ಲಿ ಮುಳುಗಿದ್ದರೂ ಭಗವತ್ಪ್ರಾದಾರವಿಂದವನ್ನು ಮರೆಯದಿರುವರೋ ಅವರೇ ತಪಸ್ವಿಗಳು, ಅವರೇ ಧಾರ್ಮಿಕರು, ಅವರೇ ಸಂಸಾರ ರೂಪವಾದ ಸಮರಾಂಗಣದಲ್ಲಿ ವಿಜಯಿಗಳಾದ ವೀರರು. ಮಹಾರಾಜರು ಇಂತಹ ದಾರುಣವಾದ ಸಂಕಟದಲ್ಲಿದ್ದರೂ ಸನಾತನವಾದ ಆರ್ಯಧರ್ಮಾನುಷ್ಠಾನಕ್ಕೆ ಲೋಪವನ್ನು ತರಲಿಲ್ಲ. ಇಂತಹ ಕಲಿಕಾಲದಲ್ಲಿ ತಮ್ಮ ವರ್ಣಾಶ್ರಮ ಧರ್ಮಗಳಿಗೆ ತಿಲೋದಕವನ್ನು ಕೊಡದೆ ಇರುವವರೇ ಅತಿವಿರಳ. ಆದರೆ ಶ್ರೀಚಾಮರಾಜೇಂದ್ರ ಒಡೆಯರವರು ಮಾತ್ರ ಇಂತಹ ಕಾರ್ಯಕ್ಕೆ ಪ್ರಾಣಾಂತದಲ್ಲಿಯೂ ಮನಗೊಡಲಿಲ್ಲ.

ಗುರುವಾರ ಮಧ್ಯಾಹ್ನ ಅನೇಕ ಅಶುಭ ಸೂಚನೆಗಳು ಕಂಡುಬಂದುವು. ಮಹಾರಾಜರು ಮಲಗಿದ್ದ ಕೊಟ್ಟಡಿಯಮೇಲೆ ಸಾವಿರಾರು ಕಾಗೆಗಳು ಬಂದು ಕುಳಿತುಕೊಂಡು ಆರ್ತಧ್ವನಿ ಮಾಡಿದುವು ; ಬಂಗಲೆಯ ದಕ್ಷಿಣದಿಕ್ಕಿನಲ್ಲಿ ನರಿಗಳು ಬಂದು ಕೂಗಲಾರಂಭಿಸಿದುವು ; ಬಂಗಲೆಯ ಸುತ್ತಲೂ ಇದ್ದ ವೃಕ್ಷಗಳೊಳಗೆ ಫಲಪುಷ್ಪದಿಂದ ತುಂಬಿ ತುಳುಕಾಡುತ್ತಿದ್ದ ಒಂದು ಅಡಕೆಯ ಮರವು ಆಕಸ್ಮಿಕವಾಗಿ ಪಟಪಟ ಶಬ್ದ ಮಾಡಿಕೊಂಡು ಮಹಾರಾಜರು ಮಲಗಿದ್ದ ಕೊಟ್ಟಡಿಯ ಸಮೀಪದಲ್ಲಿ ಬಿದ್ದಿತು, ಇದನ್ನು ಎಲ್ಲರೂ ನೋಡಿದರು.

ಹಗಲೂ ಕಳೆದುಹೋಯಿತು. ಚಾಮರಾಜೇಂದ್ರ ಒಡೆಯರವರಿಗೆ ಮಾತನಾಡಲು ಕಷ್ಟವಾಗುತ್ತ ಬಂದಿತು. ಮೃತ್ಯುವಿನ ಆಗಮನದ ಚಿಹ್ನೆಗಳೆಲ್ಲ ಕಂಡುವು.

ಪದೇಪದೇ ಉಸಿರು ಸಿಕ್ಕಿಕೊಂಡು ಜ್ಞಾನವು ಪಲ್ಲಟವಾಗುತ್ತಿದ್ದಿತು. ಮಲಗಿದ್ದರೂ ಮರಣಸಂಕಟವು ಅವರನ್ನು ಮಲಗಗೊಡಿಸದೆ ಎಬ್ಬಿಸಿತು. ಅವರ ಇಷ್ಟಾನುವರ್ತಿಗಳಾದ ಸೇವಕರು ಅವರನ್ನು ಬೇರೊಂದು ಸುಖಾಸನದ ಮೇಲೆ ಕುಳ್ಳಿರಿಸಿದರು. ಏನುಮಾಡಿದರೂ ಜ್ವರದ ತಾಪವೂ ಸಂಕಟವೂ ಕಡಿಮೆಯಾಗಲಿಲ್ಲ. ಪುನಃ ಹಾಸಿಗೆಗೆ ಹೋಗಿ ಶಯನಮಾಡಿದರು. ಆದರೆ ಅವರ ಕಣ್ಣಿಗೆ ನಿದ್ರೆ ಹತ್ತಲಿಲ್ಲ. ಅದುವರೆಗೆ ಶರೀರದ ತ್ರಾಣವೆಲ್ಲ ಬಹಳಮಟ್ಟಿಗೆ ಕುಂದಿಹೋಗಿದ್ದಿತು ಚಾಮುಂಡೇಶ್ವರಿ ಅಮ್ಮನವರ ಪ್ರಸಾದ ಕುಂಕುಮವನ್ನು ತರಿಸಿ ಹಣೆಗೆ ಇಡಿಸಿಕೊಂಡು, ಆ ಲೋಕಮಾತೆಯಾದ ಕುಲದೇವತೆಯ ಚರಣಕಮಲವನ್ನು ಚಿತ್ತದಲ್ಲಿ ನೆಲೆಗೊಳಿಸಿ ಭಜನೆ ಮಾಡಿದರು. ಆಗ ತಮ್ಮ ಜನ್ಮಭೂಮಿಯನ್ನೂ, ತಮ್ಮ ರಾಜಧಾನಿಯನ್ನೂ, ತಾವು ಸ್ವದೇಶಹಿತಕ್ಕಾಗಿ ಮಾಡಬೇಕೆಂದಿದ್ದ ಕೆಲಸಗಳನ್ನೂ, ಬಹುಕಾಲಕ್ಕೆ ಮುಂಚೆ ತೀರಿಹೋದ ತಂದೆತಾಯಿಗಳನ್ನೂ, ಸಹೋದರ ಪುತ್ರಾದಿಗಳನ್ನೂ, ಮಿತ್ರಮಂಡಲ ಸ್ವದೇಶ ಬಂಧುಬಾಂಧವರು—ಇವರನ್ನೆಲ್ಲ ಬಿಟ್ಟು ಬಹುಯೋಜನ ದೂರವುಳ್ಳ ವಿದೇಶದಲ್ಲಿ ಮರಣವುಂಟಾಗುವ ಸಂಭವವನ್ನೂ ಕನವರಿಸುತ್ತ, ಕೈಹಿಡಿದ ಪ್ರಾಣೇಶ್ವರಿಯನ್ನು ನೆನೆದು ವಿಶಾಲ ಲೋಚನಗಳಿಂದ ಸುರಿಸಿದ ಒಂದೆರಡು ಬೊಟ್ಟು ಕಣ್ಣೀರು ಹಾಸಿಗೆಯಮೇಲೆ ಬಿದ್ದಿತು. ಕಳೆದ ಇಪ್ಪತ್ತು ಸಂವತ್ಸರಗಳಿಂದ ತಾವು ನೋಡಿದ ದಿವ್ಯ ದೇಶಗಳೂ, ನೋಟಗಳೂ, ಆಟಪಾಟಗಳೂ, ವಿಚಿತ್ರವಸ್ತುಗಳೂ, ಉತ್ಸವಪರಂಪರೆಗಳೂ, ಪತ್ನೀಪುತ್ರಾದಿಗಳೊಡನೆ ಅನುಭವಿಸಿದ ಕಷ್ಟಸುಖಗಳೂ, ಸರಸ ಸಲ್ಲಾಪಗಳೂ ಅವರ ಜ್ಞಾನಚಕ್ಷುಸ್ಸಿನೆದಿರಿಗೆ ಕ್ಷಣಕಾಲದಲ್ಲಿ ಇಂದ್ರಜಾಲದ ಚಿತ್ರಪಟದಂತೆ ಹಾಯ್ದು ಹೋದುವು. ಬಳಿಕ ಉತ್ತರ ಕ್ಷಣದಲ್ಲೇ ಇಹಲೋಕದ ವಸ್ತುಗಳೆಲ್ಲವೂ ಈ ರೀತಿಯಲ್ಲಿಯೇ ಕ್ಷಣಿಕಗಳೆಂಬ ಮನೋನಿಶ್ಚಯವುಂಟಾಗಿ, ಶ್ರೀಚಾಮರಾಜೇಂದ್ರ ಒಡೆಯರವರು ಎಲ್ಲ ಚಿಂತೆಗಳನ್ನೂ ಬಿಟ್ಟುಬಿಟ್ಟು, ಹಾಗೆಯೇ ಸ್ವಲ್ಪ ಮತ್ತಿನಿಂದ ಕಣ್ಣು ಮುಚ್ಚಿಕೊಂಡರು.

ಆಗ ರಾತ್ರಿ ಮೂರು ಗಂಟೆಯ ಸಮಯವಾಗಿದ್ದಿತು. ಎಲ್ಲಿ ನೋಡಿದರೂ ಘೋರಾಂಧಕಾರವು ತುಂಬಿಕೊಂಡು ಲೋಕವೆಲ್ಲ ನಿಶ್ಶಬ್ದವಾಗಿದ್ದಿತು. ಬಂಗಲೆಯ ಸುತ್ತಲೂ ಇದ್ದ ದೊಡ್ಡದೊಡ್ಡ ಮರಗಳು ಸ್ಥೂಲ ಶಿರಗಳಾದ ಭೂತಗಳಂತೆ ನಿಂತು, ವಾತಘಾತದಿಂದ ಮರ್ಮರ ಶಬ್ದಮಾಡಿಕೊಂಡು ಪೈಶಾಚ ಭಾಷೆಯಲ್ಲಿ ಒಂದರೊಡನೊಂದು ಮಾತನಾಡಿಕೊಳ್ಳುವಂತೆ ಕಾಣಿಸುತ್ತಿದ್ದುವು. ಗವಾಕ್ಷದಿಂದ ಹೊರಗೆ ನೋಡಿದರೆ, ಘೋರಾಂಧಕಾರದಲ್ಲಿ ರೋಗ ಶೋಕ ಮರಣಾಭಿಮಾನ ದುಷ್ಟದೇವತೆಗಳು ನಾನಾವಿಧವಾದ ಘೋರಾಕಾರಗಳನ್ನು ತಾಳಿ ತಿರುಗಾಡುತ್ತಿರುವಂತೆ ತೋರುತ್ತಿದ್ದಿತು. ಬಂಗಲೆಯ ಮುಂದಿರುವ ಪುಷ್ಕರಿಣಿಯ ಜಲರಾಶಿಯು ನಿಶ್ಚಲತೆಯಿಂದ ಕಪ್ಪಾಗಿದ್ದು ಭಯವನ್ನುಂಟುಮಾಡುತ್ತಿದ್ದಿತು. ಗೂಬೆಗಳೇ ಮುಂತಾದ ನಿಶಾಚರ ಪಕ್ಷಿಗಳು ಭಯಂಕರವಾದ ಧ್ವನಿಗೈಯುತ್ತ ರಾತ್ರಿಯ ಗಭೀರವಾದ ನಿಶ್ಶಬ್ದತೆಯನ್ನು

ಬಂಗಮಾಡುತ್ತಿದ್ದುವು. ಆಕಾಶವು ಕಾಂತಿ ಹೀನವಾದ ನಕ್ಷತ್ರಮಾಲೆಗಳಿಂದ ಪರಿವೃತವಾಗಿ ಒಂದು ನಕ್ಷತ್ರವಾದರೂ ಕಣ್ಣಿಗೆ ಸುಂದರವಾಗಿ ಕಾಣಿಸುತ್ತಿರಲಿಲ್ಲ. ದಿಕ್ಕುಗಳೆಲ್ಲ ಶೂನ್ಯವಾಗಿಯೆ ತೋರುತ್ತಿದ್ದುವು. ಇಂತಹ ಶೋಭಾಹೀನವಾದ ಆಕಾಶದ ಉತ್ತರ ದಿಕ್ಕಿನಲ್ಲಿ ಇದ್ದಕ್ಕಿದ್ದಹಾಗೆ ಒಂದು ನಕ್ಷತ್ರಜ್ಯೋತಿಯು ಹೆಚ್ಚಾಗಿ ಬೆಳಗಲು, ಕ್ಷಣಕಾಲಮಾತ್ರ ನಭೋಮಂಡಲವೆಲ್ಲ ಜಾಜ್ವಲ್ಯಮಾನವಾಯಿತು. ಉತ್ತರ ಕ್ಷಣದಲ್ಲೇ ಅದು ದಿಙ್ಮಂಡಲವನ್ನು ಬಿಟ್ಟು ದಕ್ಷಿಣ ದಿಕ್ಕಿಗೆ ಹೋಗಿ ಬಿದ್ದಿತು. ನಕ್ಷತ್ರವು ಬಿದ್ದ ಉತ್ತರಕ್ಷಣದಲ್ಲಿ ಪ್ರಪಂಚವೆಲ್ಲ ಮೊದಲಿಗಿಂತಲೂ ಅತಿಶಯವಾದ ಅಂಧಕಾರಮಯ ವಾಗಿರುವಂತೆ ತೋರಿತು.

ಹಾಗೂಹೀಗೂ ಐದು ಗಂಟೆಯ ಹೊತ್ತಾಯಿತು. ಬೆಳಗಾಗುವುದಕ್ಕೆ ಇನ್ನೂ ಒಂದೆರಡು ಗಳಿಗೆ ಇರುವಷ್ಟರಲ್ಲಿ, ಮಹಾರಾಜರಿಗೆ ನಾಡೀಚಲನವು ಅಕ್ರಮಗತಿಗುಪ ಕ್ರಮಿಸಿತು. ವೈದ್ಯರು ಸ್ಟಿಮುಲೆಂಟ್ಸ್ ಎಂಬ ಉತ್ತೇಜಕ ಔಷಧಗಳನ್ನು ಕೊಡುವು ದಕ್ಕೆ ಪ್ರಯತ್ನಿಸಿದರು. ಆಗ ಮಹಾರಾಜರು ಮಲಗಿದ್ದಹಾಗೆಯೇ, “ನನಗೇಕೆ ಔಷದವು ? ಮೃತ್ಯು ಸನ್ನಿಹಿತವಾಯಿತು. ಇನ್ನು ಒಂದೆರಡು ನಿಮಿಷಗಳಲ್ಲಿ ನಾನು ಸತ್ತುಹೋಗಬಹುದೆಂದು ನನಗೆ ತೋರುತ್ತದೆ” ಎಂದು ಹೇಳಿದರು. ದರ್ಬಾರ್ ಬಕ್ಷಿಯವರು ಬಹಳವಾಗಿ ಕೇಳಿಕೊಂಡಮೇಲೆ, ಅತಿಪ್ರಯತ್ನದಿಂದ ಒಂದೆರಡುತೊಟ್ಟು ಔಷಧವನ್ನು ತೆಗೆದುಕೊಂಡರು. ಅಷ್ಟರಲ್ಲಿ ಮಹಾರಾಜರಿಗೆ ಮರಣವೇದನೆ ಹೆಚ್ಚುತ್ತ ಬಂದಿತು, ಮಾತನಾಡಲು ಪ್ರಯಾಸವಾಯಿತು, ಜೀವಾಂತ್ಯದ ಲಕ್ಷಣಗಳೆಲ್ಲ ಆವರಿಸಿ ಕೊಂಡುವು. ಇಷ್ಟಾದರೂ ಅವರ ಅಸದೃಶವಾದ ಸೌಂದರ್ಯವು ಕಿಂಚಿನ್ಮಾತ್ರವೂ ಕುಂದಿರಲಿಲ್ಲ. ಕಡೆಯಲ್ಲಿ ಮೂಗನ್ನು ಭದ್ರವಾಗಿ ಹಿಡಿದುಕೊಂಡರು. ಅದರ ಅರ್ಥ ವನ್ನು ಯಾರು ಹೇಳಬಲ್ಲರು ? ತೊದಲುತೊದಲಾಗಿ—ತಾಯಿ ಚಾಮುಂಡಾಂಬಿಕೆ— ಎಂದರು. ಕಣ್ಣನ್ನು ಮೂರುಬಾರಿ ಮುಚ್ಚಿಮುಚ್ಚಿ ತೆರೆದರು. ಒಡನೆಯೇ ಪ್ರಾಣ ಪತತ್ರಿಯು ದೇಹಪಂಜರವನ್ನು ಬಿಟ್ಟು ಹಾರಿಹೋಯಿತು. ಈ ರೀತಿಯಲ್ಲಿ ೧೮೯೪ನೆಯ ಇಸವಿ ಡಿಸೆಂಬರ್ ತಾರೀಖು ೨೮ನೆಯ ಶುಕ್ರವಾರ ಪ್ರಾತಃಕಾಲ ಶ್ರೀಚಾಮರಾಜೇಂದ್ರ ಒಡೆಯರವರ ಪವಿತ್ರ ಜೀವನ ನಾಟಕದ ಚರಮಾಂಕವು ಪೂರೈಸಿತು. ಕುಲದೇವತಾ ಕೀರ್ತನೆಯೇ ಅವರ ಜೀವಮಾನದ ಕಡೆಯ ಮಾತಾಯಿತು. ಹಿಂದೆ ವಿಜಯದಶಮಿಾ ಉತ್ಸವದಲ್ಲಿ ಮಹಾರಾಜರವರು ಏರಿದ್ದ ವಾರಣವು ಹಿಂದಿರುಗಿದ ಶಕುನವು ಮೂರು ತಿಂಗಳೊಳಗಾಗಿ ನಿದರ್ಶನಕ್ಕೆ ಬಂದಿತು.

ಬಳಿಕ ದರ್ಬಾರ್‌ಬಕ್ಷಿ ನರಸಿಂಹಯ್ಯಂಗಾರ್ಯರು, ಮಹಾರಾಜ್ಞೀ ವಾಣೀವಿಲಾಸ ಸನ್ನಿಧಾನಕ್ಕೆ ಶ್ರೀಮನ್ಮಹಾರಾಜರವರು ಪರಲೋಕಯಾತ್ರೆಯನ್ನು ಮಾಡಿದ ವಿಗಡ ವರ್ತಮಾನವನ್ನು ಅರಿಕೆಮಾಡಿಸಿದರು. ಈ ಸಂಕಟಕರವಾದ ವರ್ತಮಾನವು ಮಹಾ ರಾಜ್ಞಿಯವರ ಶ್ರೋತ್ರೇಂದ್ರಿಯದಲ್ಲಿ ಬಿದ್ದಕೂಡಲೆ, ತೀಕ್ಷ್ಣವಾದ ಅಲಗು ನಟ್ಟಂತಾ ಯಿತು ; ಹೊಟ್ಟೆಯಲ್ಲಿ ತೀವ್ರವಾದ ಕಿಚ್ಚೆದ್ದಿತು ; ಶರೀರವು ದುಃಖಾನಲಜ್ವಾಲೆ

ಯನ್ನು ಹೆಚ್ಚಿಸುವ ಮಹಾಘಯವೆಂಬ ಪ್ರಚಂಡ ಮಾರುತದಿಂದ ನಡುಗಲಾರಂಭಿಸಿತು; ಕಂಪನದೊಡನೆ ಹಾಗೆಯೇ ಪ್ರಜ್ಞೆ ತಪ್ಪಿತು. ಬಳಿಕ ದಾಸಿಯರ ಶೈತ್ಯೋಪಚಾರದಿಂದ ಎಚ್ಚೆತ್ತು, ಮಕ್ಕಳೊಡನೆ ಪತಿಯು ಮೃತದೇಹವಿದ್ದ ಸ್ಥಳಕ್ಕೆ ಬಂದರು. ಮೃತನಾದ ಪ್ರಾಣೇಶನನ್ನು ಕಾಣುತ್ತಲೇ ಮಹಾರಾಣಿಯವರು ದೊಪ್ಪನೆ ನೆಲಕ್ಕುರುಳಿ, ಸ್ವಲ್ಪ ಹೊತ್ತಿನಮೇಲೆ ಹಾಗೆಯೇ ಚೇತರಿಸಿಕೊಂಡೆದ್ದು, ಸ್ತಬ್ಧರಾಗಿ ನಿಂತು ಎತ್ತ ನೋಡಿದರೂ ಶೂನ್ಯವಾಗಿರುವ ಭಾವವನ್ನು ಕಂಡು, ರೋದನಮಾಡತೊಡಗಿದರು. ಹಾಗೆಯೇ ಪತಿಯು ಹಾಸಿಗೆಯಲ್ಲಿ ಕುಳಿತು ತಮ್ಮ ಜೀವಮಾನದ ಸುಖದುಃಖಗಳನ್ನೆಲ್ಲ ಸ್ಮರಿಸಿಕೊಂಡು ಬಹಳವಾಗಿ ಪ್ರಲಾಪಿಸಿದರು. "ಹಾ! ಸ್ವಾಮಿಯೇ, ನಿಮಗಿಂತ ಮೊದಲು ನಾನು ಹೋಗಿದ್ದರೆ, ನನ್ನನ್ನು ಸುಮಂಗಲಿಯೆಂದು ಹೇಳುತ್ತಿದ್ದರು. ಈಗ ಹೃದಯೇಶರಾದ ನಿಮ್ಮನ್ನಗಲಿ ಈ ವೈಧವ್ಯವನ್ನು ಹೇಗೆ ಕಳೆಯಲಿ? ಹಾ! ದೇವರೇ, ಪ್ರಜಾಪಾಲಕನಾದ ನನ್ನ ಪತಿಯನ್ನುಳಿಸಿ ನನಗೆ ಮರಣವನ್ನು ದಯಪಾಲಿಸಿದ್ದರೆ ನಾನು ಧನ್ಯಳಾಗುತ್ತಿದ್ದೆನಲ್ಲಾ! ಅಯ್ಯೋ! ದುರ್ದೈವವೇ, ನಿರ್ದಯನಾದ ನೀನು ಇಷ್ಟು ವಿಸ್ತಾರವಾಗಿರುವ ಈ ಪ್ರಪಂಚದಲ್ಲಿ ನನ್ನ ಪತಿಯನ್ನೇ ಅಕಾಲದಲ್ಲಿ ಸೆಳೆದುಕೊಂಡೆಯಾ! ಹಾ! ಪತಿಯೇ, ಅನನ್ಯಶರಣೆಯಾಗಿದ್ದ ನನ್ನನ್ನು ಅನಾಥೆಯನ್ನು ಮಾಡಿಬಿಟ್ಟು ಹೋಗುವುದು ಯುಕ್ತವೆ? ನನ್ನನ್ನು ಈ ರೀತಿಯಾಗಿ ಉಪೇಕ್ಷೆ ಮಾಡುವುದಕ್ಕೆ ನಾನೇನಪರಾಧಮಾಡಿದೆ? ನಿಮ್ಮನ್ನು ಪಾಣಿಗ್ರಹಣ ಮಾಡಿಕೊಂಡು ಪಟ್ಟಮಹಿಷಿಯೆನಿಸಿಕೊಂಡೆನು. ಈಗ ನಿಮ್ಮನ್ನಗಲಿದ ನಾನು ಪರಿಮಳವಿಲ್ಲದ ಪುಷ್ಪದಂತೆಯೂ, ದೀಪವಿಲ್ಲದ ಸೌಧದಂತೆಯೂ ಶೂನ್ಯಳಾದೆನು. ಹಾ! ಸ್ವಾಮಿಯೇ, ಮನೋಹರವಾದ ಈ ನಿಮ್ಮ ಸಿರಿಮೊಗವನ್ನು ನೋಡದೆ ಹೇಗೆ ತಾನೆ ಜೀವಿಸಲಿ? ಅಯ್ಯೋ! ನಿರ್ಭಾಗ್ಯಳಾದ ನಾನು ಹೇಗೂ ಕೆಟ್ಟೆನು. ಭಗವಂತನೇ! ಲೋಕದಲ್ಲಿ ಸ್ತ್ರೀಯರೆಲ್ಲ ಹೀಗೆ ದುಃಖಿಸಬೇಕೆಂಬುದು ನಿನ್ನ ನಿಯಾಮಕವೆ? ಗಿಡವನ್ನು ಬೆಳೆಯಿಸಿ ಫಲಬಿಡುವ ಕಾಲದಲ್ಲಿ ಅದನ್ನು ಕಡಿದುಬಿಡುವುದು ನಿನ್ನ ಇಷ್ಟವೆ? ದೀನರಕ್ಷಕನೆಂಬ ನಿನ್ನ ಬಿರುದು ಎಲ್ಲಿ ಹೋಯಿತು? ದಯಾಸಮುದ್ರನೆಂಬ ನಿನ್ನ ಕೀರ್ತಿಯು ಎಲ್ಲಿ ಮಾಯವಾಯಿತು? ದೇವಾ! ಇದೆಲ್ಲ ಯಾರ ದೋಷವೆಂದು ಹೇಳಲಿ! ಸಕಲವೂ ನನ್ನ ದುರದೃಷ್ಟದೋಷವೇ ಸರಿ, ಇಂತಹ ದುಃಖವನ್ನನುಭವಿಸುವ ನಿಮಿತ್ತವಾಗಿಯೇ ನಾನು ಸ್ತ್ರೀಜನ್ಮವನ್ನು ಎತ್ತಿದಹಾಗಾಯಿತು. ಇಂತಹ ಕೇಡು ಸಂಭವಿಸುವುದೆಂದು ನಾನು ಸ್ವಪ್ನದಲ್ಲಿಯೂ ತಿಳಿದಿರಲಿಲ್ಲ. ದೇವರೇ! ನನ್ನ ಪತಿಗೆ ಈ ವಿದೇಶದಲ್ಲಿ ಮರಣವನ್ನಿತ್ತು, ನನ್ನನ್ನು ಅನಾಥೆಯನ್ನು ಮಾಡಬೇಕೆಂದು ನಿನಗೆ ಕೋರಿಕೆಯಿದ್ದಿತೇ? ನಿನಗೆ ನಾನು ಮಾಡಿದ ಅಪರಾಧವೇನು?" ಎಂದು ನಾನಾ ವಿಧವಾಗಿ ರೋದನಮಾಡಿ, ದುಃಖಪಾರವಶ್ಯದಿಂದ ಸ್ವಲ್ಪಹೊತ್ತು ಸುಮ್ಮನಿದ್ದು, ತಿರುಗಿ ಎಚ್ಚೆತ್ತು ನಿಟ್ಟುಸಿರುಬಿಟ್ಟು, "ಹಾ! ವಿಧಿಯೇ, ಅಬಲೆಯಾದ ನನ್ನಮೇಲೆ ನೀನಿಷ್ಟು ಕ್ರೌರ್ಯವನ್ನು ತೋರಿಸಬಹುದೆ? ಅಯ್ಯೋ! ಇದರಲ್ಲಿ ನಿನ್ನ ಅಪರಾಧವೇನು? ಸಕಲರೂ ಅವರವರು ಮಾಡಿದ ಶುಭಾ

ಶುಭ ಕರ್ಮಫಲವನ್ನು ಅನುಭವಿಸಿಯೇ ತೀರಬೇಕು. ನಾನು ಜನ್ಮಾಂತರದಲ್ಲಿ ಎಂತಹ ದುಷ್ಕರ್ಮ ಮಾಡಿದ್ದೆನೋ ಈ ಜನ್ಮದಲ್ಲಿ ಅಂತಹ ಫಲವನ್ನನುಭವಿಸುತ್ತೇನೆ" ಎಂದು ಆರ್ತಸ್ವರದಿಂದ ಗಟ್ಟಿಯಾಗಿ ಅಳುತ್ತ, ದಿಕ್ಕುಗೆಟ್ಟವರಂತೆ ಹಂಬಲಿಸುತ್ತ ಅಲ್ಲಿಯೇ ಕುಳಿತಿದ್ದರು.

ಇಷ್ಟರಲ್ಲಿ ದರ್ಬಾರ್ ಬಕ್ಷಿಯವರು ದಿವಾನರಿಗೆ ಬೇಗ ಬರುವಂತೆ ವರ್ತಮಾನ ಕೊಟ್ಟು ಗಾಡಿಯನ್ನು ಕಳುಹಿಸಿದರು. ದಿವಾನರ ಬಂಗಲೆಗೂ ಮಹಾರಾಜರ ಸದ ನಕ್ಕೂ ಸುಮಾರು ಐದು ಮೈಲಿಯ ದೂರ. ಈ ದಾರುಣವಾದ ವರ್ತಮಾನವು ದಿವಾ ನರಿಗೆ ತಲಪಿದ ಕೂಡಲೆ, ಅವರ ಶರೀರವು ಜರ್ಝರಿತವಾಯಿತು, ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು; ಅವರು ದೀರ್ಘವಾದ ನಿಟ್ಟುಸಿರನ್ನು ಬಿಟ್ಟು, "ಹಾ! ಈಶ್ವರಾ, ನಮ್ಮ ಪ್ರಭುವಿನ ಆಯುಃಪರಿಮಿತಿಯು ಇಷ್ಟೇ ಇದ್ದಿತೇ?" ಎಂದು ದುಃಖಪಟ್ಟರು. ಕೂಡಲೆ ಈ ವಿಷಯವನ್ನು ಫಾರಿನ್ ಸೆಕ್ರಿಟೆರಿಯವರಿಗೆ ತಿಳಿಸಲು ಅವರ ಬಂಗಲೆಗೆ ಹೋದರು. ಆಗ ಫಾರಿನ್ ಸೆಕ್ರಿಟೆರಿಯಾಗಿದ್ದವರು ಸರ್ ವಿಲಿಯಂ ಕನ್ನಿಂಗ್‌ಹ್ಯಾಂ ಸಾಹೇಬರು, ಇವರು ಮೊದಲು ಮೈಸೂರಿನಲ್ಲಿ ಸೆಕ್ರಿಟೆರಿಗಳಾಗಿದ್ದರು. ಇವರು ಚಾಮರಾಜೇಂದ್ರ ಒಡೆಯರವರ ವಿದ್ಯಾಭಿವೃದ್ಧಿ ರಾಜ್ಯಾಭಿವೃದ್ಧಿಗಳಲ್ಲಿ ಹಿತಚಿಂತಕರು. ಪ್ರಿಯಮಿತ್ರರ ಮರಣವಾರ್ತೆಯು ಅವರ ಕಿವಿಗೆ ಬಿದ್ದ ಕೂಡಲೆ ಅವರ ತಲೆಯಮೇಲೆ ಸಿಡಿಲು ಬಿಡಿದಂತಾಯಿತು. ಬಳಿಕ ಅವರು ವಿಷಾದದೊಡನೆ ಈ ಕಠೋರವಾದ ವರ್ತಮಾನವನ್ನು ವೈಸ್ರಾಯಿಯವರಿಗೆ ತಿಳಿಸಿದರು. ಅವರೂ ಅತ್ಯಂತ ವ್ಯಸನಾ ಕ್ರಾಂತರಾಗಿ, ಭಾರತವರ್ಷದಲ್ಲಿ ಜನಿಸಿ ಸುಪ್ರಸಿದ್ಧವಾಗಿದ್ದ ರಾಜಕುಸುಮವು ಇಂದು ಕಳಚಿಬಿದ್ದಿತೆಂದು ವ್ಯಸನಪಟ್ಟು, ತಮಗುಂಟಾಗಿದ್ದ ಮಹತ್ತರವಾದ ಸಂಕಟವನ್ನು ಶ್ರೀಮನ್ಮಹಾರಾಜ್ಞಿಯವರಿಗೂ ಯುವರಾಜರೇ ಮೊದಲಾದ ಮಕ್ಕಳಿಗೂ ಸೂಚಿಸಿ ಅವರನ್ನು ಸಂತೈಸುವುದಕ್ಕಾಗಿ ತಮ್ಮ ಅಂಗರಕ್ಷಕರಾದ ಕ್ಯಾಪ್ಟನ್ ಪೋಲಾನ್ ಅವ ರನ್ನೂ ಫಾರಿನ್ ಸೆಕ್ರಿಟೆರಿಯವರಾದ ಸರ್ ವಿಲಿಯಂ ಕನ್ನಿಂಗ್‌ಹ್ಯಾಂ ಸಾಹೇಬರನ್ನೂ ಕಳುಹಿಸಿದರು. ಆ ದಿನ ವೈಸ್ರಾಯಿಯವರಿಗೂ ಕಪುರ್ಥಲಾ ಮಹಾರಾಜರಿಗೂ ಪರಸ್ಪರ ಸಂದರ್ಶನೋತ್ಸವವು ನಡೆಯತಕ್ಕದಾಗಿದ್ದಿತು; ಇದಕ್ಕಾಗಿ ರಸ್ತೆಗಳೆಲ್ಲವೂ ಬಹು ಸಂಭ್ರಮ ಮಯವಾಗಿದ್ದುವು. ಒಂದು ಕಡೆ ಸೈನ್ಯವು ಸಿದ್ಧವಾಗಿ ನಿಂತಿದ್ದಿತು; ಒಂದು ಕಡೆ ಗೋಲಂದಾಜರು ಫಿರಂಗಿಗಳ ಮುಂದೆ ಮದ್ದುಗುಂಡುಗಳನ್ನು ರಾಶಿಹಾಕಿ ಕೊಂಡು ಆಜ್ಞೆಯನ್ನು ಇದಿರುನೋಡುತ್ತಿದ್ದರು. ಉತ್ಸವ ಬರುವ ರಾಜವೀಧಿಗಳ ಲ್ಲೆಲ್ಲ ಅಶ್ವಾರೋಹಕರಾದ ಪೋಲೀಸಿನವರು ಉತ್ಸವಕ್ಕೆ ಆತಂಕವಿಲ್ಲದಂತೆ ಜನಗಳ ಗುಂ ಪನ್ನು ತಡೆದು ಓಡಾಡುತ್ತಿದ್ದರು. ಚಾಮರಾಜೇಂದ್ರ ಒಡೆಯರ ಮರಣ ವಾರ್ತೆಯು ವೈಸ್ರಾಯಿಯವರಿಗೆ ತಲಪಿದ ಕೂಡಲೆ, ಕಪುರ್ಥಲಾ ಮಹಾರಾಜರ ಸಂದರ್ಶನೋ ತ್ಸವವು ಆ ದಿನ ನಡೆಯತಕ್ಕದಿಲ್ಲವೆಂದು ನಿಲ್ಲಿಸಿಬಿಟ್ಟರು. ಉತ್ಸವ ಸಂತೋಷ ಸೂಚನಾರ್ಥವಾಗಿ ಗುಂಡುಗಳನ್ನು ಹಾರಿಸುವಂತೆ ನೇಮಿಸಿದ್ದ ಆ ಫಿರಂಗಿಯು ಸೈನ್ಯ

ದವರಿಗೆ, ಚಾಮರಾಜೇಂದ್ರ ಒಡೆಯರ ಮರಣದುಃಖ ಸೂಚನಾರ್ಥವಾಗಿಯೂ ಗೌರವಾರ್ಥವಾಗಿಯೂ ಅವರ ವಯಸ್ಸಂಖ್ಯಾನುಗುಣವಾದ ಮೂವತ್ತೆರಡು ತೋಪು ಗಳನ್ನು ಹಾರಿಸುವಂತೆ ಅಪ್ಪಣೆಯಾಯಿತು. ಇದರಲ್ಲಿಯೇ ಕಾಲಗತಿಯ ವೈಪರೀತ್ಯವು! ಇದರಲ್ಲಿಯೇ ದೈವವ್ಯಾಪಾರದ ವಿಚಿತ್ರತೆಯು! ಇದರಲ್ಲಿಯೇ ಪ್ರಪಂಚ ವ್ಯವಹಾರದ ಅನಿತ್ಯತೆಯು!

ಆರ್ಯಾ ॥ ನಿಯತಿರ್ವಿಧಾಯ ಪುಂಸಾಂ । ಪ್ರಥಮಂ ಸುಖಮುಪರಿ ದಾರುಣಂ ದುಃಖಂ ॥
ಕೃತ್ವಾ ಲೋಕಂ ತರಳಾ । ತಟದಿವ ವಜ್ರಂ ನಿಪಾತಯತಿ ॥

ಇತ್ತ ದರ್ಬಾರ್ ಬಕ್ಷಿಯವರು ಇನ್ನೂ ದಿವಾನರು ಬರಲಿಲ್ಲವಲ್ಲಾ ಎಂದು ತವಕ ಪಡುತ್ತಿದ್ದರು. ಹೊತ್ತಾದರೋ ಹಗಲು ಹನ್ನೆರಡು ಗಂಟೆಯಾಗುತ್ತ ಬಂದಿತು. ಮೃತದೇಹದ ಸಂಸ್ಕಾರಾರ್ಥವಾಗಿ ಯಾವ ಏರ್ಪಾಡೂ ನಡೆಯಲಿಲ್ಲ. ಒಳಗಡೆ ಕೊಟ್ಟಡಿಯಲ್ಲಿ ಮಹಾರಾಜ್ಞಿಯವರ ರೋದನವು ನಿಲ್ಲಲಿಲ್ಲ, ಮಕ್ಕಳ ಗೋಳಾಟವು ತಪ್ಪಲಿಲ್ಲ. ಈಚೆ ಹಾಲಿನಲ್ಲಿ ಡಾಕ್ಟರ್ ಬೆನ್ಸನ್ ಸಾಹೇಬರೂ, ಮಹಾರಾಜರವರ ಪ್ರೈವೇಟ್ ಸೆಕ್ರೆಟೆರಿಯವರಾದ ಕರ್ನಲ್ ಕ್ಯಾಂಪೆಲ್ ಸಾಹೇಬರೂ, ಯುವರಾಜರ ಉಪಾಧ್ಯಾಯರಾದ ವೈಟ್ಲೀ ಸಾಹೇಬರೇ ಮೊದಲಾದ ಯೂರೋಪಿಯನರೂ ತಮ್ಮ ತಮ್ಮ ಕರವಸ್ತ್ರಗಳಿಂದ ಮುಖಗಳನ್ನು ಮುಚ್ಚಿಕೊಂಡು ಅಧೋಮುಖರಾಗಿ ಸ್ತಬ್ಧರಾಗಿ ಕುಳಿತವರು ಏಳಲೇ ಇಲ್ಲ. ಇನ್ನೊಂದು ಕಡೆ ಸೇವಕರೆಲ್ಲರೂ ತಮ್ಮ ಜೀವ ನಾಧಾರವು ಕಣ್ಮರೆಯಾಯಿತಲ್ಲಾ! ತಮ್ಮ ಸರ್ವ ಚೈತನ್ಯವೂ ಅಸ್ತಮಿತವಾಯಿ ತಲ್ಲಾ! ನಿರ್ದಯವಾದ ವಿಧಿಯಿಂದ ಎಲ್ಲರೂ ವಂಚಿತರಾದೆವಲ್ಲಾ! ಇನ್ನು ತಮ್ಮ ಬಾಳು ಮಳೆಯಿಲ್ಲದ ಬೆಳೆಯಂತಾಯಿತಲ್ಲಾ! ಇನ್ನು ತಮಗೆ ಅಂತಹ ಒಡೆಯನನ್ನು ಸೇವಿಸುವ ಅದೃಷ್ಟವು ತೀರಿತಲ್ಲಾ! ಎಂದು ಹಂಬಲಿಸುತ್ತಲೇ ಇದ್ದರು.

ಇಷ್ಟರಲ್ಲಿ ದಿವಾನರೂ ಬಂದರು. ಬಂದಕೂಡಲೆ ಮಹಾರಾಜರ ಮೃತದೇಹ ವಿದ್ದ ಕೊಟ್ಟಡಿಗೆ ಹೋದರು. ಅಲ್ಲಿ ಮಹಾರಾಜ್ಞಿಯವರು ತಮ್ಮ ಪತಿಯ ಹಾಸಿಗೆ ಯಲ್ಲಿ ಕುಳಿತು ಗೋಳಾಡುತ್ತಿರುವುದನ್ನು ನೋಡಿದಕೂಡಲೆ ದಿವಾನರು ಗದ್ಗದ ಕಂಠರಾಗಿ ಮಾತನಾಡಲಾರದೆ ಹೋದರು. ಅವರ ನೇತ್ರಗಳಲ್ಲಿ ಏಕಪ್ರಕಾರವಾಗಿ ಅಶ್ರುಧಾರೆಯು ಪ್ರವಹಿಸಿತು. ಸ್ಮೃತಿತಪ್ಪಿ ತಮ್ಮೊಡೆಯನ ಮೃತದೇಹದಮೇಲೆ ಬಿದ್ದು ಅತ್ಯಂತ ಶೋಕಪಾರವಶ್ಯದಿಂದ ಕೂಗಿಕೊಳ್ಳುತ್ತಲಿರುವ ಮಹಾರಾಜ್ಞಿಯವರನ್ನು ಕಂಡು, ದಿವಾನರಿಗೆ ಮನಸ್ಸಿನಲ್ಲಿ ದುರಂತವಾದ ದುಃಖಾಗ್ನಿಯು ಪ್ರಜ್ವಲಿಸಿತು. ...ದನ್ನು ನಿರೋಧಿಸಿಕೊಂಡು ಅವರು ಮಹಾರಾಜ್ಞಿಯವರನ್ನು ಕುರಿತು, “ ತಾಯೇ, ...ಸ್ಥಿರಿಸಿರಿ, ಸೈರಿಸಿರಿ, ರೋದನಮಾಡಕೂಡದೆಂದು ಬೇಡಿಕೊಳ್ಳುತ್ತೇನೆ: ಶಾಂತರಾಗ ...ಕು. ತಾವೇ ಹೀಗೆ ವ್ಯಸನಕ್ಕೆ ಮನಗೊಟ್ಟರೆ, ಮಕ್ಕಳೆಲ್ಲರೂ ಗಾಬರಿಪಡುತ್ತಾರೆ. ...ಗ ನಮಗೆ ಭಗವದಾಜ್ಞಾಪ್ರೇರಿತವಾದ ಸಂಕಟಕಾಲವು ಪ್ರಾಪ್ತವಾಗಿದೆ. ತಾವು ...ರ್ತವ್ಯಾಂಶದಲ್ಲಿ ದೃಷ್ಟಿಯಿಟ್ಟು ಧೈರ್ಯವನ್ನು ತಾಳಬೇಕು. ಇನ್ನು ಸ್ವಲ್ಪ ಹೊತ್ತಿನಲ್ಲೇ

ಫಾರಿನ್ ಸೆಕ್ರಿಟೆರಿಯವರು ಬರುತ್ತಾರೆ '' ಎಂದು ಹೇಳುವಷ್ಟರಲ್ಲೇ, ಫಾರಿನ್ ಸೆಕ್ರಿಟೆರಿಯವರೂ ವೈಸ್ರಾಯಿಯವರ ಅಂಗರಕ್ಷಕರೂ ಬಂದರು. ಆಗ ಮಹಾರಾಜ್ಞಿಯವರು ತಮ್ಮ ಮಕ್ಕಳನ್ನು ಅವರಿಗೊಪ್ಪಿಸಿ, '' ಈ ಮಕ್ಕಳು ಇಲ್ಲಿಯವರೆಗೂ ಚಾಮರಾಜೇಂದ್ರ ಒಡೆಯರವರ ಮಕ್ಕಳಾಗಿದ್ದರು; ಇನ್ನು ಮುಂದೆ ಇಂಡಿಯಾ ಚಕ್ರವರ್ತಿನಿಯವರ ಮಕ್ಕಳು. ಇವರನ್ನು ಈಗ ತಮ್ಮ ವಶಕ್ಕೆ ಒಪ್ಪಿಸಿ, ನಾನೂ ನನ್ನ ಪತಿಯೊಡನೆ ಹೋಗುತ್ತೇನೆ. ಧರ್ಮಜ್ಞರಾದ ಶ್ರೀಮನ್ಮಹಾರಾಜ್ಞೀ ಚಕ್ರವರ್ತಿನಿಯವರು, ಇವರ ಕೈಹಿಡಿದು ಸದ್ವಿದ್ಯಾಭ್ಯಾಸವನ್ನು ಮಾಡಿಸಿ, ಪ್ರವರ್ಧಮಾನರನ್ನಾಗಿಮಾಡಿ ರಾಜ್ಯಭರಣದಕ್ಷರಾಗುವಂತೆ ಮಾಡಬೇಕು. ಈ ವಿಷಯವನ್ನು ಈಗಲೇ ಚಕ್ರವರ್ತಿನಿಯವರಿಗೆ ತಿಳಿಸುವಂತೆ ನಾನು ಬಹಳವಾಗಿ ಬೇಡಿಕೊಳ್ಳುತ್ತೇನೆಂಬುದಾಗಿ ವೈಸ್ರಾಯಿಯವರಿಗೆ ತಿಳಿಸಿರಿ '' ಎಂದು ಪರಮ ದೈನ್ಯದಿಂದ ಹೇಳಿದರು. ಇದನ್ನು ಕೇಳಿ ಫಾರಿನ್ ಸೆಕ್ರಿಟೆರಿಯವರೂ ಅಂಗರಕ್ಷಕರೂ ಬಹಳವಾಗಿ ಪಶ್ಚಾತ್ತಾಪಪಟ್ಟು, ಅಭಯವಾಕ್ಯಗಳಿಂದ ಮಹಾರಾಜ್ಞಿಯವರನ್ನೂ ಮಕ್ಕಳನ್ನೂ ನಾನಾರೀತಿಯಾಗಿ ಸಂತೈಸಿದರು.

ಬಳಿಕ, ಮೃತದೇಹವನ್ನು ವಾರಾಣಸೀ ಪಟ್ಟಣದಲ್ಲಿ ದಹನಮಾಡಬೇಕೆಂಬುದಾಗಿ ಮಹಾರಾಜ್ಞಿಯವರೂ ದಿವಾನರೂ ಅಪ್ಪಣೆ ಮಾಡಿದರು. ಕ್ಷಣಕಾಲದಲ್ಲಿ ಹೊರಡುವುದಕ್ಕೆ ಸಕಲವೂ ಸಿದ್ಧವಾಯಿತು. ಆಗ ದಿವಾನರು ದರ್ಬಾರ್ ಬಕ್ಷಿಯವರನ್ನೂ ಒಸ್ತಿ ಬಸಪ್ಪಾಜಿ ಅರಸಿನವರನ್ನೂ ಜೋಯಿಸರನ್ನೂ ಕರೆಯಿಸಿ, ಅವರುಗಳೊಡನೆ ಈ ವಿಷಯವನ್ನು ಕುರಿತು ಆಲೋಚಿಸಿದರು. ಅದಕ್ಕೆ ಅವರು, '' ಮೃತದೇಹವನ್ನು ಕಾಶಿಗೆ ತೆಗೆದುಕೊಂಡುಹೋಗುವುದು ಚೆನ್ನಾಗಿಲ್ಲ. ಕಾಶಿಯಲ್ಲಿ ದೇಹವನ್ನು ಬಿಟ್ಟರೆ ಮೋಕ್ಷವೇ ಹೊರತು, ಇಲ್ಲಿ ಮೃತವಾದ ದೇಹವನ್ನು ಕಾಶಿಗೆ ತೆಗೆದುಕೊಂಡು ಹೋದರೆ ಏನು ಫಲ? ಇನ್ನೂ ಒಬ್ಬರಿಗೂ ಊಟವಿಲ್ಲ, ಮಧ್ಯಾಹ್ನವು ಅತಿಕ್ರಮಿಸುತ್ತ ಬಂದಿತು. ಸಣ್ಣಸಣ್ಣ ಮಕ್ಕಳು; ದುಃಖವನ್ನರಿಯದವರು. ಇದಲ್ಲದೆ, ಇಲ್ಲಿ ಸರ್ವಪಾಪನಿವಾರಣಿಯಾದ ಗಂಗೆಯು ಇದ್ದಾಳೆ. ಇಲ್ಲಿಯೇ ಮಹಿಷಮರ್ದಿನಿಯಾದ ಚಾಮುಂಡೇಶ್ವರಿಯು ಕಾಳಿಯೆಂಬ ನಾಮಧೇಯದಿಂದ ಅವತರಿಸಿರುವಳು. ಇಂತಹ ಕಾಳೀಘಾಟು ದಹನಕರ್ಮಕ್ಕೆ ಅನುಕೂಲವಾಗಿದೆ. ರೈಲ್ವೆಯ ಬಂಡಿಯು ಮಧ್ಯಾಹ್ನ ಎರಡುಗಂಟೆಗಳ ಕಾಲಕ್ಕಿಂತ ಮುಂಚೆ ಸಿಕ್ಕಲಾರದು '' ಎಂಬುದಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಬಳಿಕ ದಿವಾನರು ಇದಕ್ಕೆ ಸಮ್ಮತಿಸಿ ಶವವನ್ನು ಕಾಳೀಘಾಟಿನಲ್ಲಿ ದಹನಮಾಡತಕ್ಕುದು ಸೂಕ್ತವೋ ಅಥವಾ ಕಾಶೀಕ್ಷೇತ್ರಕ್ಕೆ ತೆಗೆದುಕೊಂಡು ಹೋಗತಕ್ಕುದು ಸೂಕ್ತವೋ ಎಂಬಂಶವನ್ನು ತಿಳಿಸುವುದಕ್ಕಾಗಿಯೂ ಮಹಾರಾಜ್ಞಿಯವರನ್ನು ಸಂತೈಸುವುದಕ್ಕಾಗಿಯೂ ದಯೆಮಾಡಿಸಬೇಕೆಂದು ಪ್ರಖ್ಯಾತರಾದ ಗುರುದಾಸ ಬಾನರ್ಜಿಯವರಿಗೆ ನರಸಿಂಹಯ್ಯಂಗಾರ್ಯರಿಂದ ಒಂದು ಲೇಖನವನ್ನು ಬರೆಯಿಸಿ, ಗಾಡಿಯನ್ನು ಕೊಟ್ಟು ರಕಾಲ್ ಚಂದ್ ಬಾಬುಯವರನ್ನು ಅವರಬಳಿಗೆ ಕಳಹಿ

ವರು. ಅವರು ಆ ಸಮಯದಲ್ಲಿ ದೇವರಪೂಜೆಯಲ್ಲಿದ್ದುದರಿಂದ, ಈ ವಿಷಯವನ್ನು ಳಿದೊಡನೆಯೇ, ತಮಗೆ ಬಹಳ ವ್ಯಸನವಾಗಿರುತ್ತದೆಂತಲೂ, ಶವವನ್ನು ಕಾಶಿಗೆ ಗೆದುಕೊಂಡುಹೋಗುವುದು ಸರಿಯಲ್ಲವೆಂತಲೂ, ಮಹಾರಾಜರ ಶವವನ್ನು ಮೃತ ಐದ ಸ್ಥಳದಲ್ಲೇ ದಹನಮಾಡುವುದು ವಿಧಿವಿಹಿತವಾದುದೆಂತಲೂ ಹೇಳಿಕಳುಹಿಸಿದರು. ವರಮೇಲೆ, ಶವವನ್ನು ಕಾಳೀಘಾಟಿನಲ್ಲಿ ದಹನಮಾಡಬೇಕೆಂಬುವೇ ಸಿದ್ಧಾಂತ ಾಯಿತು.

ಬಳಿಕ ಶವವನ್ನು ತೆಗೆದುಕೊಂಡು ಹೋಗುವುದಕ್ಕೆ ಪಲ್ಲಕ್ಕಿಯನ್ನು ಹುಡುಕಿ ವರು. ಅದು ವಿದೇಶವಾದುದರಿಂದ, ಅಲ್ಲಿ ನಮ್ಮ ದೇಶದಂತಹ ಪಲ್ಲಕ್ಕಿ ಸಿಕ್ಕಲಿಲ್ಲ. ಕ್ಕಿದ ಒಂದು ಪಲ್ಲಕ್ಕಿಯು ಒಂದಾಳು ಕುಳಿತುಕೊಳ್ಳತಕ್ಕ ಕುರ್ಚಿಯಹಾಗಿದ್ದುದರಿಂದ ಬೇಳಲಿಲ್ಲ. ಕಡೆಗೆ, ಮಹಾರಾಜರು ಮಲಗಿದ್ದ ಹೊಂಗೆಲಸದಿಂದ ಪರಿಶೋಭಿತ ಾಗಿದ್ದ ಮಂಚಕ್ಕೇ ಅಲಂಕಾರ ಮಾಡಿದರು. ನಿರಂತರದಲ್ಲಿಯೂ ಸಮೀಪದಲ್ಲಿದ್ದು ಂಡು ಸ್ವಾಮಿಸೇವೈಕಪರಾಯಣರಾಗಿ ಉಪಚರಿಸುತ್ತಿದ್ದ ಸೇವಕರು ಮಹಾರಾಜ ಗೆ ವಿಶೇಷ ಪ್ರೀತಿಭಾಜನವಾದ ವಸ್ತ್ರಾಭರಣಗಳನ್ನು ಅವರ ದೇಹಕ್ಕೆ ಧರಿಸಿದರು. ಗೆ ಅವರಿಗುಂಟಾದ ದುಃಖವನ್ನು ವಿವರಿಸಲಸಾಧ್ಯವು. ಅವರು ಮಹಾರಾಜರ ದಿವ್ಯ ಕುಮಾರ ಶರೀರವನ್ನು ಮುಟ್ಟಿ ಅಲಂಕರಿಸುವುದಕ್ಕೆ ಅದೇ ಕೊನೆಯ ದಿನ. ಅವರ ರ್ಶನದ ಋಣವು ಅವರಿಗೆ ಅಂದಿಗೆ ತೀರಿತು. ಯಾರನ್ನು ಮನಸ್ಸಿನಲ್ಲಿ ಜ್ಞಾಪಿಸಿ ಂಡ ಮಾತ್ರದಿಂದಲೇ ಮನಸ್ಸಿಗೆ ಅನಿರ್ವಚನೀಯವಾದ ಒಂದು ಎದವಾದ ಹ್ಲಾದವುಂಟಾಗುತ್ತಿದ್ದಿತೋ ಅಂತಹವರನ್ನು ಅವರು ಮರೆಯುವ ಬಗೆ ಹೇಗೆ? ... ತ್ತ ಹೋಗುವ ವರೆಗೂ ಈ ಸ್ವಾಮಿಭಕ್ತಿಯು ಅವರ ಮನಸ್ಸಿನ ಹಾರಾಜ... ುವ ...

... ರು ಕರ್ನಲ್ ಎಂಬ ಬಿರುದುಳ್ಳವರಾಗಿದ್ದರೂ ...ನ್ಯಸಂಬಂಧವಾದ ...ೋ ಇಲ್ಲವಲ್ಲಾ ಎಂಬ ಚಿಂತೆಯು ಎಲ್ಲರ ಮನಸ್ಸಿನಲ್ಲಿಯೂ ...ಲ್ಲ ... ತು. ಇದನ್ನು ತಿಳಿದು, ಫಾರಿನ್ ಸೆಕ್ರೆಟರಿ... ವೈಸ್ರಾಯಿ ...ರವನ್ನು ತಿಳಿಸುವಲ್ಲಿ, ಅವರು ತಮ್ಮ ... ಮರ್ಯಾದೆಗಳನ್ನೆಲ್ಲ ನಂಗಡ ...ಮಹಾತ್ಮ ಕಳುಹಿಸಿಕೊಟ್ಟ... ...ಳಗೆ ಇಂಡಿಯಾ ಕಮ್ಯಾಂಡರ್–ಇನ್– ...ಫ್ ಮ್ಯಸ್ಸಾ... ...ವರ ಅಪ್ಪಣೆಯ ಮೇರೆ ಕಳುಹಿಸಿಕೊಟ್ಟ ಬಂಗಾಳಾ ... ಮಾರ್ಗದಲ್ಲಿ ಬಂದು ಉತ್ಸವವನ್ನು ಸೇರಿತು. ಮಹಾರಾಜರ ಶವೋ ... ಉತ್ಸವವು ಬರುವ ರಸ್ತೆಗಳಲ್ಲೆಲ್ಲ ಅಶ್ವಾರೋಹಕರಾದ ಪೋಲೀಸಿನವರು ...ವಂತೆ ನೇಮಿಸಲ್ಪಟ್ಟರು. ಇಷ್ಟೆಲ್ಲ ಆಗುವ ಹೊತ್ತಿಗೆ ಮಧ್ಯಾಹ್ನೋತ್ತರ ಎರಡು ...ಯಾಯಿತು. ಜೊತೆಯಲ್ಲಿದ್ದ ಸೇವಕರು ತಮ್ಮೊಡೆಯನ ಕೊನೆಯ ಸೇವೆಗೆ ...ಕೊಟ್ಟರು. ಅನಂತರ ಶವದ ಉತ್ಸವವು ಗೃಹವನ್ನು ಬಿಟ್ಟು 'ಲೋವರ್ ಸರ್ ರೋಡ್,' 'ರಸಾ ರೋಡ್' ಎಂಬ ರಸ್ತೆಗಳಲ್ಲಿ ಹೊರಟಿತು. ...ಂಗಡ

Sir Asutosh Mukherjee

ಹೋಗಿದ್ದ ಮಹಾರಾಜರ ಬಂಧುಗಳೂ ಅಧಿಕಾರಿಗಳೂ ಯೂರೋಪಿಯನ್ ಅಧಿಕಾರಿಗಳೂ ಗುಂಪು ಗುಂಪಾಗಿ ಹೊರಟರು. ಫಾರಿನ್ ಸೆಕ್ರಿಟರಿಯವರೂ ವೈಸ್ರಾಯಿಯವರ ಅಂಗರಕ್ಷಕರೂ ಸಹ, ತಮ್ಮ ತಮ್ಮ ಅಶುಭ ಸೂಚಕವಾದ ನೀಲವಸ್ತ್ರಗಳನ್ನು ಧರಿಸಿ, ವೈಸ್ರಾಯಿಯವರ ರಥದೊಡನೆ ಉತ್ಸವದ ಜೊತೆಯಲ್ಲಿಯೇ ಹೊರಟರು. ಕಪುರ್ಥಲಾ ಮಹಾರಾಜರವರಿಂದ ಕಳುಹಿಸಲ್ಪಟ್ಟಿದ್ದ ದಿವಾನ್ ದೌಲತ್‌ರಾಂ ಅವರೂ, ಕ್ಯಾಪ್ಟನ್ ಸುಂದರಸಿಂಗರವರೂ ಉತ್ಸವದೊಡನೆ ಇದ್ದರು.

ಕಲ್ಕತ್ತೆಯು ಬಹು ದೊಡ್ಡ ಪಟ್ಟಣ. ಅದು ವೈಸ್ರಾಯಿಯವರ ವಾಸಸ್ಥಳ. ಅಲ್ಲಿರತಕ್ಕವರೆಲ್ಲರೂ ಪ್ರಾಯಶಃ ಸರಸ್ವತೀ ಲಕ್ಷ್ಮಿಯರ ವರಪುತ್ರರು. ವೈಸ್ರಾಯಿಯವರ ಸಂದರ್ಶನಾರ್ಥವಾಗಿ ಭರತಖಂಡದ ಎಷ್ಟೋ ಮಂದಿ ರಾಜರು ಅಲ್ಲಿಗೆ ಬರುವರು. ಆ ರಾಜರನ್ನೆಲ್ಲ ಪ್ರಯತ್ನಪೂರ್ವಕವಾಗಿ ಯಾರೂ ನೋಡುವುದಿಲ್ಲ. ಇಂತಹ ಕಲ್ಕತ್ತೆಯಲ್ಲೂ ಕೂಡ ಮೈಸೂರು ಮಹಾರಾಜರವರ ಹೆಸರನ್ನು ಹೇಳಿದರೆ, ಆ ಪಟ್ಟಣದ ಜನಗಳು ವಿಸ್ಫಾರಿತ ಲೋಚನರಾಗಿ ಆನಂದದಿಂದ ಕಿವಿಗೊಟ್ಟು ಕೇಳುತ್ತಿದ್ದರು. ತಮ್ಮ ಪಟ್ಟಣದ ರಾಜವೀಧಿಗಳಲ್ಲಿ ಚತುರಶ್ವದ ರಥದಲ್ಲಿ ಕುಳಿತು ಎರಡನೆಯ ನಳರಾಜನಂತೆ ವಿರಾಜಮಾನರಾಗಿ ಬರುತ್ತಿದ್ದ ಶ್ರೀಚಾಮರಾಜೇಂದ್ರ ಒಡೆಯರವರನ್ನು ತಲೆಯೆತ್ತಿ ಕಣ್ಣುತುಂಬ ನೋಡಿ ಆನಂದಪಡುತ್ತಿದ್ದರು. ಈ ದಿವಸ ಅವರು ಮೃತರಾದರೆಂಬ ಸುದ್ದಿಯನ್ನು ಕೇಳಿದ ಆ ಜನರ ವ್ಯಸನವನ್ನು ಹೇಳತಕ್ಕದ್ದೇನು? ಅವರೆಲ್ಲರೂ ಕಣ್ಣೀರು ಸುರಿಸುತ್ತ ಉರಸ್ತಾಡನವನ್ನು ಮಾಡುತ್ತ ತಮ್ಮ ತಮ್ಮ ಮನೆಯ ಬಾಗಿಲಮುಂದೆ ಬಂದು ನೋಡುತ್ತ ನಿಂತರು.

ಬಳಿಕ, ಯಾವ ಸ್ಥಳದಲ್ಲಿ ಭೂಭಾರವನ್ನು ಪರಿಹರಿಸಲು ಮಹೋಗ್ರ ಕಾಳಿ[illegible] ನಾಮಧೇಯದಿಂದ ನೆಲೆಗೊಂಡಿರುವಳೋ, ಎಲ್ಲಿ ಸಾಧುಗಳು ಗುಂಪುಗುಂಪಾಗಿ ಇಳಿದುಕೊಂಡು ಮಂಗಳಮಯನಾದ ಪರಮಾತ್ಮನ ಸ್ತೋತ್ರಗಳನ್ನು ಸದಾ ಕಿವಿಗಿಂಪಾಗಿ ಮಾಡುತ್ತಿರುವರೋ, ಎಲ್ಲಿ ಸರ್ವಪಾಪ ನಿವಾರಕಳಾದ [illegible]ಗಂಗೆಯು ರಂಗತ್ತರಂಗಮಾಲೆಗಳಿಂದ ಪ್ರವಹಿಸುತ್ತಿರುವಳೋ ಆ ಕಾಳೀಘಾಟಿಗೆ ಸಾಯಂ[illegible] ಆರು ಗಂಟೆಗೆ ಶ್ರೀಮನ್ಮಹಾರಾಜರ ಕಳೇಬರವನ್ನು ತೆಗೆದುಕೊಂಡು ಹೋದರು. ಅಲ್ಲಿ [illegible] ಸಿದ್ಧವಾಗಿದ್ದಿತು. ಬಳಿಕ [illegible] ರಾಜರಿಗೆ ತೊಡಿಸಿದ್ದ ರತ್ನಮಯಾಲಂಕಾರವನ್ನೆಲ್ಲ ತೆಗೆದು, ಸುಕುಮಾರವಾದ ದೇಹವನ್ನು ಚಿತೆಯಮೇಲಿಟ್ಟರು. ಚಿತೆಯು ಪವಿತ್ರವಾದ ಗಂ[illegible]ಧಿಯ [illegible] ಕೂಲವನ್ನು ಬೆಳಗುತ್ತ ಜ್ವಲಿಸಲಾರಂಭವಾಯಿತು. ಆ ಕಾಲದಲ್ಲಿ ಜನರ ಮ[illegible]ನಲ್ಲುಂಟಾದ ಅವಸ್ಥೆಯನ್ನು ವರ್ಣಿಸಲು ಯಾರಿಗೂ ಅಳವಲ್ಲ. ಯಾರು ಎಷ್ಟೋ ತಮ್ಮೊಡೆಯನ ಸಾನ್ನಿಧ್ಯದಲ್ಲಿದ್ದುಕೊಂಡು, ಭಯಭಕ್ತಿಗಳೊಡನೆ ಸೇವೆಮಾಡ್ತ [illegible]ಬಂಧುರಕಾಯನಾದ ತಮ್ಮ ಸ್ವಾಮಿಯ ಸುಂದರವಾದ ಮುಖಮಂಡಲವ[illegible] [illegible]ನೋಡಿ ಆನಂದಪಡುತ್ತಿದ್ದರೋ, ಅವರು ಈ ದಿನ ತಮ್ಮ ಪ್ರಾಣ[illegible]

ಗಾ ಸುನ್ನು ಚಿತೆಯಲ್ಲಿ ಮಲಗಿಸಿ ದುಃಖಾನ್ವಿತರಾಗಿ ಕಣ್ಣೀರು ಸುರಿಸುತ್ತ ...ದವನ್ನು ಮಾಡುತ್ತಿದ್ದರು. ಅವರು ಪಟ್ಟ ದುಃಖಾತಿಶಯಕ್ಕೆ ಪಾರವನ್ನು ...ದು ಹೇಳಲು ಯಾರಿಗೆ ತಾನೆ ಸಾಧ್ಯ! ಲೋಕದಲ್ಲಿ ಮನುಷ್ಯನು ಸ್ವಾಮಿ, ...ತಾಯಿ ಮೊದಲಾದ ಬಂಧುವರ್ಗವು ಮೃತ್ಯುವಶವಾಗುವುದನ್ನು ಕಣ್ಣಾರ ...ಯೂ, ತನಗೂ ಅದೇ ಗತಿಯೆಂಬುದನ್ನು ತಿಳಿಯದೆ, ಜಗತ್ತು ಸ್ಥಿರವೆಂದೇ ...ರುವನು; ಸತ್ತವರ ದೇಹವನ್ನು ಅತ್ತಲಾಗಿ ದಹನಮಾಡಿ ಬಂದ ಕೂಡಲೆ, ...ಳಿರಾಗಿ ಸುಖಶಾಂತಿಯನ್ನು ಹುಟ್ಟಿಸತಕ್ಕ ವಿಷಯಗಳಿಗೆ ಒಳಗಾಗುವನು. ...ಯ್ಯೋ ಪಾಪ! ದೇವಾ! ಸಾಮಾನ್ಯ ಜನರ ಸಂಗತಿಯು ಹಾಗಿರಲಿ; ವೇದಾಂತ ...ಗ್ಳು ಓದಿ ತಿಳಿದು, ಆತ್ಮೋಪಾಸನೆಯಲ್ಲಿ ಅನುಭವವುಳ್ಳವರೂ ಕೂಡ ಈ ಪ್ರಪಂಚವೆಲ್ಲವೂ ...ಲ್ಲಿಗವೆಂದು ಹೇಳುತ್ತಿರುವುದು ಮಾತ್ರವೇ ಹೊರತು, ಅವರೂ ನಿನ್ನ ಮಾಯೆಯಿಂದ ...ಮೋಹಿತರಾಗಿ ಜನನಮರಣ ರೂಪವಾದ ಸಂಸಾರಚಕ್ರದಲ್ಲಿ ಸಿಕ್ಕಿ ಅದರಿಂದ ...ದೂರಾಗುವುದಕ್ಕೆ ದಾರಿಯನ್ನು ಕಾಣದೆ ತತ್ತಳಿಸುವರು. ಜಗದೀಶಾ! ಈ ನಿನ್ನ ...ತ್ರಪಾರವು ಮಹಾಶ್ಚರ್ಯಕರವಾಗಿರುವುದು.

...ಷ್ಣ ಶ್ರೀಕೃಷ್ಣರಾಜ ಒಡೆಯರವರು ಇನ್ನೂ ಕೇವಲ ಬಾಲ್ಯದಲ್ಲಿದ್ದುದರಿಂದ, ...ಚಾಮರಾಜೇಂದ್ರ ಒಡೆಯರವರ ಮರಣದ ದಿನ ನಡೆಯಬೇಕಾದ ಅಪರ ಕರ್ಮ ...ಗಳನ್ನೆಲ್ಲ ಲೋಕೆರಿ ಬಕ್ಷಿ ಬಸವಪ್ಪಾಜಿ ಅರಸಿನವರಿಂದ ನಡೆಯಿಸಿದರು. ...ನ ...ದಯನಾ ...ರ್ಮಗಳು ಎರಡು ದಿನಗಳ ವರೆಗೂ ವಿಧಿವತ್ತಾಗಿ ನಡೆದನಂತ ...ಯನ್ನು ...ಗೆ ತೆಗೆದುಕೊಂಡು ಹೋಗುವುದಕ್ಕೆ ತಕ್ಕ ಏರ್ಪಾಡುಗಳು ನಡೆದವು ...ವರ್ಷ ... ದಿನ ಪ್ರಾತಃಕಾಲದಲ್ಲಿ ಇಂಡಿಯಾ ಗವರ್ನಮೆಂಟಿನವರು ...ಮ ...ಹಾರಾಣಿಯವರಿಗೆ ತಮ್ಮ ಅನುತಾಪೋಕ್ತಿ ಗರ್ಭಿತವಾದ ಲೇಖನದೊಡನೆಯಿಂದೆ ...ರುವ ...ನೂಪವನ್ನು ಕಳುಹಿಸಿ ಸಂತೈಸಿದರು:—" ಶ್ರೀಮನ್ಮಹಾರಾಜ ...ಮ ...ಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ. ಅವರ ಜ್ಯೇಷ್ಠ ಪುತ್ರ... ...ರ್ಮಾ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೈಸೂರು ರಾಜ್ಯಾಧಿಕಾರವನ್ನು ...ಸತ್ತಿನ್ನು ಇಂಡಿಯಾ ಗವರ್ನಮೆಂಟಿನವರು ಮಂಜೂರಾಗಿರುತ್ತಾರೆ ...ಮನ್ಮಹಾರಾಜ ಕೃಷ್ಣರಾಜ ಒಡೆಯರವರ ಬಾಲ್ಯದಶೆಯಲ್ಲಿ ಸಂಸ್ಥಾನದ ಆಡಳಿತ ...ಕ್ರಮದಲ್ಲಿ ನಡೆಯಿಸತಕ್ಕದು ಉತ್ತಮವೋ ಆ ವಿಷಯಕವಾದ ಏರ್ಪಾಡು ...ಮಹಾರಾ... ವರೆಗೆ ದಿವಾನ್ ಸರ್ ಕೆ. ಶೇಷಾದ್ರಿಯ್ಯರ್, ಕೆ.ಸಿ.ಎಸ್.ಐ. ...ನ ಆಡಳಿತವನ್ನು ಇದುವರೆಗೆ ನಡೆಯಿಸುತ್ತಿದ್ದಂತೆಯೇ ...ಯಿಸತಕ್ಕದು. ಮುಖ್ಯವಾದ ಎಲ್ಲ ವಿಷಯಗಳಲ್ಲಿಯೂ ದಿವಾನ ...ಸಲಹೆಗಳನ್ನು ಕೇಳಿ ಅನುವರ್ತಿಸತಕ್ಕದು. ಅಲ್ಲದೆ, ಎಲ್ಲ

...ನ್ನೇ ತಂತಿಯ ಮುಖಾಂತರ ರಾಜಧಾನಿಗೆ ಕಳುಹಿಸಿ ... ದಿವಾನ್ ...ಲ್ಲಿ ಮೈಸೂರು ಗೆಜೆಟ್ ವಿಶೇಷ ಪತ್ರಿಕೆಯನ್ನಾಗಿ ಪ್ರಕಟಿಸಿದರು.

ವಾಗಿಯೂ ಉಚಿತವಾಗಿಯೂ ಇರುವ ಮಟ್ಟಿಗೆ ... ಮಹಾರಾಜ್ಞೀ ವಾಣೀ ಸನ್ನಿಧಾನ, ಸಿ.ಐ. ಅವರ ಅಭಿಮತವನ್ನು ತಿಳಿದು ಆಚರಿಸತಕ್ಕದ್ದು.

೩ನೆಯ ತಾರೀಖು ಬುಧವಾರ ಪ್ರಾತಃಕಾಲ ... ಕರ್ಮಗಳೆಲ್ಲ ನಡೆದ ಬಳಿಕ, ಶ್ರೀಮನ್ಮಹಾರಾಜ್ಞಿಯವರು ಕಲ್ಕತ್ತಾ ನಗರವನ್ನು ಬಿಟ್ಟು ಮೈಸೂರಿಗೆ ಪ್ರಯಾಣವನ್ನು ಬೆಳೆಯಿಸಿದರು. ಆ ಕಾಲದಲ್ಲಿ ಫಾರಿನ್ ಸೆಕ್ರೆಟರಿಯಾದ ಸರ್ ವಿಲಿಯಂ ಕನ್ನಿಂಗ್‌ಹ್ಯಾಂ ಸಾಹೇಬರವರು ಮಹಾರಾಜರವರ ಪುತ್ರರನ್ನೂ ಗಾಡಿಯಲ್ಲಿ ಕುಳ್ಳಿರಿಸಿಕೊಂಡು, ಇಷ್ಟು ಚಿಕ್ಕವಯಸ್ಸಿನಲ್ಲಿ ಆ ... ಪಿತೃವಿಯೋಗವಾದುದಕ್ಕೆ ವ್ಯಥೆಪಡುತ್ತ, ಅವರಿಗೆ ಅನೇಕ ನೀತಿಗಳನ್ನು ... ಬೆಂಗಾಲ್ ಕೇವಲ್ರಿ ಮೊದಲಾದ ಸೇನೆಗಳೊಡನೆ ಸ್ಟೇಷನ್ನಿಗೆ ಕರೆದು ... ಬಂದು ಬಿಟ್ಟು ಗಾಡಿಯನ್ನು ಹತ್ತಿಸಿ, ಮಹಾರಾಜ್ಞಿಯವರ ಅಪ್ಪಣೆಯನ್ನು ಪಡೆದು ಮರಳಿ ತಮ್ಮ ಬಂಗಲೆಗೆ ಹೋದರು. ಮಹಾರಾಜ್ಞಿಯವರು ಮೈಸೂರನ್ನು ತೆರಳಿದರು.

ಹದಿನೆಂಟನೆಯ ಅಧ್ಯಾಯ

ಉಪಸಂಹಾರ.

ಅವರು ಮ... ದೇನು?

ತಮ್ಮ ತಂದೆ ... ಶ್ರೀಚಾಮರಾಜೇಂದ್ರ ಒಡೆಯರವರು ಇಹಲೋಕವನ್ನು ... ಮಟ್ಟಿಗೆ ... ಇತ್ತಲಾಗಿ ಮೈಸೂರು ರೆಸಿಡೆಂಟರಾದ ಕರ್ನಲ್ ಹೆಂಡರ್ಸನ್ ಸಾಹೇಬರು ರಾಜಧಾನಿಯ ಅರಮನೆಯ ಕಂಟ್ರೋಲರಾದ ಸೀತಾರಾಮರಾಯರು ... ಮುಖ್ಯಮುಖ್ಯವಾದ ಸಾಮಾನುಗಳಿರುವ ಕೊಟ್ಟಡಿಗಳ ಬಾಗಿಲನ್ನು ... ಮಾಡುವಂತೆ ಬೆಂಗಳೂರಿನಿಂದ ಒಂದು ತಂತೀವರ್ತಮಾನ ಕಳುಹಿಸಿದರು. ಕಂಟ್ರೋಲರವರು ಆ ಪ್ರಕಾರ ಅರಮನೆಯ ಮುಖ್ಯ ಕೊಟ್ಟಡಿಗಳ ಬಾಗಿಲುಗಳನ್ನೆಲ್ಲ ಮೊಹರು ಮಾಡಿ ಮರುದಿನ ಪ್ರಾತಃಕಾಲ ರೆಸಿಡೆಂಟ್ ಸಾಹೇಬರು ಅರಮನೆಗೆ ಬರುವುದರಿಂದ, ಅರಮನೆಗೆ ಸಂಬಂಧಪಟ್ಟ ರಾಜವಂಶೀಯರೂ ಮುಖ್ಯಮುಖ್ಯರಾದ ಅಧಿಕಾರಿಗಳೂ ಆ ಹೊತ್ತಿಗೆ ... ಇರಬೇಕೆಂದು ಎಲ್ಲರಿಗೂ ತಾಕೀತು ಮಾಡಿಸಿದರು. ... ಜನರ ...

ಇಷ್ಟರಲ್ಲಿ ಆ ರಾತ್ರಿ—ಶ್ರೀಮನ್ಮಹಾರಾಜರವರು ... ನಡೆದಿರು ಎಡೆಬಿಡದೆ ... ಕಾಂತರವನ್ನೈದಿದರೆಂಬ ದಾರುಣವಾದ ಸಮಾಚಾರವು ... ಕ್ಷೇಮವಾರ್ತೆ ... ನಾಯನ್ನು ಸೇರಲು, ಪ್ರಜೆಗಳೆಲ್ಲರೂ ಪರಿತಾಪಪಡುತ್ತ, ... ಮಾರ್ಗದಲ್ಲಿ ... ಕೇಳಿತು? ಯಾವಾಗ ನಿಜವಾದ ವರ್ತಮಾನ ತಿಳಿದೀತು? ...

ಮೈಸೂರುಸಂಸ್ಥಾನದ ಶ್ರೀಮನ್ಮಹಾರಾಜರವರು
ಸರ್ ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್,
ಜಿ. ಸಿ. ಎಸ್. ಐ., ಜಿ. ಬಿ. ಇ.,
ಮಹಾಸ್ವಾಮಿಯವರು

ಶ್ರೀ

|| ಶುಭಮಸ್ತು ||

ಶ್ರೀಮನ್ಮಹೀಶೂರಪುರವರಾಧೀಶ್ವರ ಶ್ರೀಮನ್ಮಹಾರಾಜ

ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್

ಜಿ. ಸಿ. ಎಸ್. ಐ., ಜಿ. ಬಿ. ಇ., ಮಹಾಪ್ರಭುವರೇಣ್ಯರವರ

ಮಾನಸಸರೋವರ ಮತ್ತು ಕೈಲಾಸಕ್ಷೇತ್ರ

ಯಾತ್ರಾಪ್ರಕರಣವು.

ಶ್ರೀ ಪ್ರಜೋತ್ಪತ್ತಿನಾಮ ಸಂವತ್ಸರದಲ್ಲಿ ಗ್ರೀಷ್ಮರಾಜನಿಗೆ ಅಧಿಪತ್ಯದ ಅವಧಿಯು ಮೂರು ತಿಂಗಳು. ಇದರಲ್ಲಿ ಮಧ್ಯಮ ಮಾಸ ಆಷಾಢ. ಇದೇ ಅಧಿಕ. ಬೀಸುವ ಗಾಳಿಯೂ ಅಧಿಕ. ಅಂತರಿಕ್ಷದಲ್ಲಿ ನೀಲಿಮವರ್ಣದ ಮೇಘಗಳು ನಿಂದೆಡೆಯಲ್ಲಿ ನಿಲ್ಲದೇ ಓಡ್ಯಾಡುತ್ತಿರುವವು. ಪುನಃಪುನಃ ವಸುಸಮೃದ್ಧಿಯನ್ನು ಸೂಚಿಸುವಂತೆ ಅಭಿವೃದ್ಧಿಸ್ಥಿತಿಯಲ್ಲಿರುವ ಬಿದಿಗೆಯಚಂದ್ರನು ಪುನರ್ವಸುವಿನಲ್ಲಿರುವನು. ರಾಜಧಾನಿಯ ಪ್ರಜೆಗಳಿಗೆ; ತೀರ್ಥಯಾತ್ರಾಪರರಾಗಿ ವಿಜಯ ಯಾತ್ರೆಯನ್ನು ಬೆಳೆಯಿಸುವ ಪ್ರಭುವರ್ಯರ ದರ್ಶನೋತ್ಸವದ ಅಪೇಕ್ಷೆಯು ಗುರುತರವಾಗಿರುವುದು. ವಾರವೂ ಗುರುವಾರ. ಇಷ್ಟು ಬಳಸಿ ಬರೆಯುವುದಕ್ಕಿಂತಲೂ ಹೂಣದೇಶೀಯ ಗಣನೆಯ ಪ್ರಕಾರ ತಾರೀಖು ೧೮-೬-೧೯೩೧ ಎಂದರೆ ಅತ್ಯಂತ ಸುಲಭವಾಗಿ ಗೊತ್ತಾಗುವುದು. ಈ ದಿವಸ ಮೈಸೂರು ರಾಜಧಾನಿಯ ಹೊಗೆಯಬಂಡಿಯ ನಿಲ್ದಾಣದಲ್ಲಿ ಜನರು ತಂಡತಂಡವಾಗಿ ನಿಂತು, ಧರ್ಮಾವತಾರರಾದ ಶ್ರೀಮನ್ಮಹಾರಾಜರವರ, ಆಸೇತುಹಿಮಾಚಲತೀರ್ಥಯಾತ್ರಾತತ್ಪರತೆ, ಸತ್ಯಸಂಧತೆ, ದೃಢಸಂಕಲ್ಪ, ದೈವಭಕ್ತಿ, ಕ್ಷಾತ್ರತೇಜಸ್ಸು, ನಿಷ್ಪಕ್ಷಪಾತಧರ್ಮಾನುಸರಣೆ, ಪ್ರಜಾನುರಾಗ ಮೊದಲಾದ ಸದ್ಗುಣ ಸಮೂಹಗಳನ್ನು ಕೊಂಡಾಡುತ್ತಾ ಪ್ರಭುದರ್ಶನಾಕಾಂಕ್ಷಿಗಳಾಗಿ ಕಾದಿದ್ದರು.

ತೀರ್ಥಯಾತ್ರಾಪರರಾಗಿ ಚಿತ್ತೈಸುವ ಪ್ರಭುವರರನ್ನು ಅನುಸರಿಸಿ ಪ್ರಯಾಣಮಾಡಲು ಆಜ್ಞಾಬದ್ಧರಾಗಿದ್ದ ಪುಣ್ಯಶಾಲಿಗಳಾದ ಅಧಿಕಾರಿಗಳೂ ಪರಿಜನರೂ ಸಿದ್ಧರಾಗಿದ್ದರು. ವಾಯುವೇಗವನ್ನತಿಕ್ರಮಿಸುವ ಮೋಟಾರ್ ಬಂಡಿಯಲ್ಲಿ ಶ್ರೀಮನ್ಮಹಾರಾಜರವರು, ಹೊಗೆಯಬಂಡಿಯ ನಿಲ್ದಾಣಕ್ಕೆ ದಯಮಾಡಿಸಿದರು. ಪ್ರಭುವರಸಂದರ್ಶನದಿಂದ ಸಂತೋಷಭರಿತರಾದ ಜನರ ಮನಸ್ಸಿನಲ್ಲಿ ಪ್ರಭುವನ್ನು ಕೆಲವುಕಾಲ ಅಗಲಿರಬೇಕೆಂಬ ಚಿಂತಾರೂಪವಾದ ಕಳಂಕವಿದ್ದಿತು. ದ್ವಾಪರಯುಗದಲ್ಲಿ ಕೈಲಾಸ ಯಾತ್ರಾರ್ಥಿಯಾಗಿ ಪರಿವಾರದೊಡನೆ ಬಿಜಯಂಗೈದ ಶ್ರೀಕೃಷ್ಣನಂತೆ ಶ್ರೀಕೃಷ್ಣಭೂಪಾಲರು ಜನಸಮೂಹದ ಅಭಿವಂದನೆಗಳನ್ನು ಪರಿಗ್ರಹಿಸಿ, ಸಂತೋಷಭರಿತವಾದ ಮುಖೇಂದುದರ್ಶನದಿಂದ ಜನಮನಾನಂದಮಂ ವೃದ್ಧಿಮಾಡಿ, ಅಲಂಕೃತವಾದ ತೇಜಿಗಳಿಲ್ಲದೇ, ತೇಜಸ್ಸಿನ ಶಕ್ತಿಯಿಂದ ಚರಿಸುವ ರಥದಲ್ಲಿ ಮುಹೂರ್ತಮಾಡಿದರು. ಅಧಿಕಾರಿಗಳೂ ಪರಿಜನರೂಸಹ ತಮ್ಮತಮ್ಮ ಮಿತ್ರಬಾಂಧವರನ್ನು ಬೀಳ್ಕೊಂಡು ರಥಾರೂಢರಾದರು. ಸಂಧ್ಯಾಕಾಲ ೫-೩ ಘಂಟೆಯಲ್ಲಿ ಅಗಲೇ ಕೈಲಾಸಾಧಿಪತಿಯಾದ ಪರಮೇಶ್ವರನ ಆರಾಧನೆಗೆ ಪ್ರಾರಂಭವಾದಂತೆ ಘಂಟಾನಾದವಾಯಿತು. ಹೊಗೆಯ ಬಂಡಿಯು ಚಲನೆಯಾಯಿತು. ಮಂದಗಮನದಲ್ಲಿ ಉಪಕ್ರಮವಾಗಿ ಕ್ರಮದಿಂದ ಶೀಘ್ರಗಮನಮಂ ತಾಳಿ ಭೂಪಾಲಚೂಡಾಮಣಿಯ ಕೀರ್ತಿಯ ಉತ್ತರೋತ್ತರಾಭಿವೃದ್ಧಿಯಂ ಸೂಚಿಸುವಂತೆ ರಥವು ಉತ್ತರಾಭಿಮುಖವಾಗಿ ಹೊರಟು ಮರೆಯಾಯಿತು. ನಿಲ್ದಾಣದಲ್ಲಿದ್ದ ರಾಜಭಕ್ತಿಯುಕ್ತರಾದ ಪ್ರಜೆಗಳೆಲ್ಲರೂ ಮಹಾಪ್ರಭುಗಳ ಪುಣ್ಯೋದಯವನ್ನು ಯಥಾಮತಿಯಾಗಿ ಕೊಂಡಾಡುತ್ತ ತಮ್ಮತಮ್ಮ ಮನೆಗಳಂ ಸೇರಿದರು. ಅತ್ತ ಹೊಗೆಯಬಂಡಿಯ ಪ್ರಯಾಣವು ಸಪರಿವಾರನಾದ ಶ್ರೀಕೃಷ್ಣನಂ ವಹಿಸಿದ ವೈನತೇಯನ ಪ್ರಯಾಣದಂತೆ ಶೀಘ್ರವಾಗಿ ಜರಿಗಿತು. ಮಾರ್ಗದಲ್ಲಿ ಅನೇಕ ಅರಣ್ಯ, ಗಿರಿ ಮತ್ತು ನದೀಪ್ರಾಂತ್ಯಗಳು ಕಳೆದು ಹೋದವು. ಹಾಗೆಯೇ ಆ ದಿವಸದ ರಾತ್ರಿಯೂ ಕಳೆದೇ ಹೋಯಿತು. ಹಿಂದೆ ಕಳೆದ ದೇಶಗಳು ಪುನಃ ದೃಶ್ಯವೂ, ಲಭ್ಯವೂ ಆಗಿದ್ದವು. ಆದರೆ ಹಿಂದೆ ಕಳೆದ ಕಾಲವು ಮಾತ್ರ ಅದೃಶ್ಯವೂ, ಅಲಭ್ಯವೂ ಆಯಿತು.

ಇನ್ನು ಬೆಳಗಿನ ದಿನವೆಂದರೆ ಯಥಾಪ್ರಕಾರ ಈ ದಿವಸದ ಪಂಚಾಂಗವನ್ನು ಬಳಸಿ ಬರೆದರೆ ವಾಚಕ ಮಹಾಶಯರಿಗೆ ಜಿಗುಪ್ಸೆಯಾಗಬಹುದು.

ಅಲ್ಲದೆ ಅನೇಕರಿಗೆ ಪಂಚಾಂಗದ ಪರಿಚಯವೇ ದುರ್ಲಭವಾಗಿರುವುದರಿಂದ ಜೇಬಿನ ಲಘುಪಂಚಾಂಗವನ್ನು (Pocket Diary) ತೆಗೆಯಬೇಕಾಗುವುದು. ಇದು ಅನ್ರ್ರಹಕ್ಕೂ ಕಾರಣವಾಗಬಹುದು. ಇದರಿಂದ ಭಯಗೊಂಡು ನಮ್ಮ ಶ್ರೇಣಿಯು ತನಗೂ ಸೌಲಭ್ಯವನ್ನು ಕಲ್ಪಿಸಿಕೊಳ್ಳುವುದಾಗಿ, ದೇಶೀಯ ಪಂಚಾಂಗಸಂಖ್ಯೆಯನ್ನು ಹೂಣದೇಶೀಯತ್ವಾಂಗಕ್ಕೆ ಇಳಿಸಿ ಮುಂಬರಿಯುವುದು. ಆದ್ದರಿಂದ ಬೆಳಗಿನ ದಿನವೆಂದರೆ ತಾರೀಖು ೧೯-೬-೧೯೩೧ ಈ ದಿವಸ ಬೆಳಗ್ಗೆ ೬-೫೫ ಘಂಟೆಗೆ ಹೊಗೆಯ ಬಂಡಿಯು ಗುಂತಕಲ್ಲನ್ನು (Guntakal) ಸೇರಿತು. ಆ ವೇಳೆಗೆ ಅಲ್ಲಿಗೆ ಮದ್ರಾಸ್‌ಪಟ್ಟಣದಿಂದ ಹೊರಟ ಮೇಲ್ ಬಂಡಿಯು ಸಿದ್ಧವಾಗಿ ಬರಲು, ಮಹಾಸ್ವಾಮಿಯವರು ಪರಿವಾರಸಮನ್ವಿತರಾಗಿ ಈ ಬಂಡಿಯಲ್ಲಿ ಮುಹೂರ್ತಮಾಡಿ ಪ್ರಯಾಣವನ್ನು ಬೆಳೆಯಿಸಿ, ಜೂನ್ ೨೦ನೆಯ ಪ್ರಾತಃಕಾಲ ೬-೧೫ ಘಂಟೆಗೆ ಬೊಂಬಾಯಿ ಪಟ್ಟಣಕ್ಕೆ ಚಿತ್ತೈಸಿದರು. ಭರತಖಂಡದಲ್ಲಿ ಬೊಂಬಾಯಿ-ಪಟ್ಟಣವು ವಿಶೇಷ ಸಂಪತ್ತಿನಿಂದೊಡಗೂಡಿರುವುದೆಂದು ಪ್ರಖ್ಯಾತಿಗೊಂಡಿರುವುದು. ಸಂಪತ್ತಿಗೆ ಆಧಾರಭೂತವಾದುದು ಬಂಗಾರವು. ಬಂಗಾರವು ಅಗ್ನಿಯಲ್ಲಿ ಉತ್ಪನ್ನವಾದುದು. ಆದುದರಿಂದ ಸಂಪತ್ತಿರುವ ಪ್ರದೇಶವು ಅಗ್ನಿ ಸಂಬಂಧವಾದುದು ಎಂಬುವುದನ್ನು ಸಿದ್ಧಾಂತಗೊಳಿಸುವಂತೆ ಪಟ್ಟಣವು ಅತ್ಯಂತ ಸೆಖೆಯನ್ನುಂಟುಮಾಡುತ್ತಲಿದ್ದಿತು. ರಾಜಕುಲಶೇಖರರು ಆ ದಿನ ರಾತ್ರಿಯೇ ಬೊಂಬಾಯಿಯನ್ನು ಬಿಟ್ಟು (B. B. & C. I. Frontier Mail) ಬಂಡಿಯಲ್ಲಿ ಪ್ರಯಾಣವನ್ನು ಬೆಳೆಯಿಸಿ ಜೂನ್ ೨೧ ನೆಯ ಭಾನುವಾರ ಸಾಯಂಕಾಲ ೫-೪೫ ಘಂಟೆಯವೇಳೆಗೆ ಸಪರಿವಾರರಾಗಿ ಮಧುರಾಪುರಕ್ಕೆ (Muttra) ಚಿತ್ತೈಸಿದರು.

ಮಧುರಾಪುರವು ಭೋಜಕುಲೋತ್ತಂಸರಾದ ರಾಜರುಗಳಿಂದ ಆಳಲ್ಪಡುತ್ತಲಿದ್ದು ಮಧುರಾಪುರವೆಂಬ ಹೆಸರನ್ನು ಅನ್ವರ್ಥವನ್ನಾಗಿ ಹೊಂದಿದ್ದಿತು. ಆದರೆ ಯಾದವದ್ವೇಷಿಯೂ, ಸುಜನಹಿಂಸಕನೂ, ಧರ್ಮಮಾರ್ಗಧ್ವಂಸಕನೂ ಆಗಿದ್ದ ಕಂಸನ ಆಳ್ವಿಕೆಗೆ ಸಿಕ್ಕಿ ನಾಮ ಮಾತ್ರ ಮಧುರವಾಗಿದ್ದಾಗ್ಯೂ ನಡವಳಿಕೆಯಲ್ಲಿ ತದ್ವಿರೋಧವಾಗಿದ್ದಿತು. ಆದುದರಿಂದಲೇ, ಯದುಕುಲತಿಲಕನಾದ ಶ್ರೀಕೃಷ್ಣನು ಮಧುರೆಯಲ್ಲಿ ಜನಿಸಿದಾಗ್ಯೂ ಜನಿಯಿಸಿದ ಸ್ವಲ್ಪ ಹೊತ್ತಿನಲ್ಲಿಯೇ ಅದಂ ತ್ಯಜಿಸಿ ಗೋಕುಲಕ್ಕೆ ಹೊರಟು ಹೋದನು.

೨

ತೀರ್ಥಯಾತ್ರಾಪರರಾಗಿ ಚಿತ್ತೈಸುವ ಪ್ರಭುವರರನ್ನು ಅನುಸರಿಸಿ ಪ್ರಯಾಣಮಾಡಲು ಆಜ್ಞಾಬದ್ಧರಾಗಿದ್ದ ಪುಣ್ಯಶಾಲಿಗಳಾದ ಅಧಿಕಾರಿಗಳೂ ಪರಿಜನರೂ ಸಿದ್ಧರಾಗಿದ್ದರು. ವಾಯುವೇಗವನ್ನತಿಕ್ರಮಿಸುವ ಮೋಟಾರ್ ಬಂಡಿಯಲ್ಲಿ ಶ್ರೀಮನ್ಮಹಾರಾಜರವರು, ಹೊಗೆಯಬಂಡಿಯ ನಿಲ್ದಾಣಕ್ಕೆ ದಯಮಾಡಿಸಿದರು. ಪ್ರಭುವರಸಂದರ್ಶನದಿಂದ ಸಂತೋಷಭರಿತರಾದ ಜನರ ಮನಶ್ಚಂದ್ರನಲ್ಲಿ ಪ್ರಭುವನ್ನು ಕೆಲವುಕಾಲ ಅಗಲಿರಬೇಕೆಂಬ ಚಿಂತಾರೂಪವಾದ ಕಳಂಕವಿದ್ದಿತು. ದ್ವಾಪರಯುಗದಲ್ಲಿ ಕೈಲಾಸ ಯಾತ್ರಾರ್ಥಿಯಾಗಿ ಪರಿವಾರದೊಡನೆ ಬಿಜಯಂಗೈದ ಶ್ರೀಕೃಷ್ಣನಂತೆ ಶ್ರೀಕೃಷ್ಣಭೂಪಾಲರು ಜನಸಮೂಹದ ಅಭಿನಂದನೆಗಳನ್ನು ಪರಿಗ್ರಹಿಸಿ, ಸಂತೋಷಭರಿತವಾದ ಮುಖೇಂದುದರ್ಶನದಿಂದ ಜನಮನಾನಂದವಂ ವೃದ್ಧಿಮಾಡಿ, ಅಲಂಕೃತವಾದ ತೇಜಿಗಳಿಲ್ಲದೇ, ತೇಜಸ್ಸಿನ ಶಕ್ತಿಯಿಂದ ಚರಿಸುವ ರಥದಲ್ಲಿ ಮುಹೂರ್ತಮಾಡಿದರು. ಅಧಿಕಾರಿಗಳೂ ಪರಿಜನರೂ ಸಹ ತಮ್ಮತಮ್ಮ ಮಿತ್ರಬಾಂಧವರನ್ನು ಬೀಳ್ಕೊಂಡು ರಥಾರೂಢರಾದರು. ಸಂಧ್ಯಾಕಾಲ ೫-೩೦ ಘಂಟೆಯಲ್ಲಿ ಆಗಲೇ ಕೈಲಾಸಾಧಿಪತಿಯಾದ ಪರಮೇಶ್ವರನ ಆರಾಧನೆಗೆ ಪ್ರಾರಂಭವಾದಂತೆ ಘಂಟಾನಾದವಾಯಿತು. ಹೊಗೆಯ ಬಂಡಿಯ ಚಲನೆಯಾಯಿತು. ಮಂದಗಮನದಲ್ಲಿ ಉಪಕ್ರಮವಾಗಿ ಕ್ರಮದಿಂದ ಶೀಘ್ರಗಮನವಂ ತಾಳಿ ಭೂಪಾಲಚೂಡಾಮಣಿಯ ಕೀರ್ತಿಯ ಉತ್ತರೋತ್ತರಾಭಿವೃದ್ಧಿಯಂ ಸೂಚಿಸುವಂತೆ ರಥವು ಉತ್ತರಾಭಿಮುಖವಾಗಿ ಹೊರಟು ಮರೆಯಾಯಿತು. ನಿಲ್ದಾಣದಲ್ಲಿದ್ದ ರಾಜಭಕ್ತಿಯುಕ್ತರಾದ ಪ್ರಜೆಗಳೆಲ್ಲರೂ ಮಹಾಪ್ರಭುಗಳ ಪುಣ್ಯೋದಯವನ್ನು ಯಥಾಮತಿಯಾಗಿ ಕೊಂಡಾಡುತ್ತ ತಮ್ಮತಮ್ಮ ಮನೆಗಳಂ ಸೇರಿದರು. ಅತ್ತ ಹೊಗೆಯಬಂಡಿಯ ಪ್ರಯಾಣವು ಸಪರಿವಾರನಾದ ಶ್ರೀಕೃಷ್ಣನಂ ವಹಿಸಿದ ವೈನತೇಯನ ಪ್ರಯಾಣದಂತೆ ಶೀಘ್ರವಾಗಿ ಜರಿಗಿತು. ಮಾರ್ಗದಲ್ಲಿ ಅನೇಕ ಅರಣ್ಯ, ಗಿರಿ ಮತ್ತು ನದೀಪ್ರಾಂತ್ಯಗಳು ಕಳೆದು ಹೋದವು. ಹಾಗೆಯೇ ಆ ದಿವಸದ ರಾತ್ರಿಯೂ ಕಳೆದೇ ಹೋಯಿತು. ಹಿಂದೆ ಕಳೆದ ದೇಶಗಳು ಪುನಃ ದೃಶ್ಯವೂ, ಲಭ್ಯವೂ ಆಗಿದ್ದವು. ಆದರೆ ಹಿಂದೆ ಕಳೆದ ಕಾಲವು ಮಾತ್ರ ಅದೃಶ್ಯವೂ, ಅಲಭ್ಯವೂ ಆಯಿತು.

ಇನ್ನು ಬೆಳಗಿನ ದಿನವೆಂದರೆ ಯಥಾಪ್ರಕಾರ ಈ ದಿವಸದ ಪಂಚಾಂಗವನ್ನು ಬಳಸಿ ಬರೆದರೆ ವಾಚಕ ಮಹಾಶಯರಿಗೆ ಜಿಗುಪ್ಸೆಯಾಗಬಹುದು.

ಅಲ್ಲದೆ ಅನೇಕರಿಗೆ ಪಂಚಾಂಗದ ಪರಿಚಯವೇ ದುರ್ಲಭವಾಗಿರುವುದರಿಂದ
ಜೇಬಿನ ಲಘುಪಂಚಾಂಗವನ್ನು (Pocket Diary) ತೆಗೆಯಬೇಕಾಗುವುದು.
ಇದು ಆಗ್ರಹಕ್ಕೂ ಕಾರಣವಾಗಬಹುದು. ಇದರಿಂದ ಭಯಗೊಂಡು ನಮ್ಮ
ಲೇಖಿನಿಯು ತನಗೂ ಸೌಲಭ್ಯವನ್ನು ಕಲ್ಪಿಸಿಕೊಳ್ಳುವುದಾಗಿ, ದೇಶೀಯ
ಪಂಚಾಂಗಸಂಖ್ಯೆಯನ್ನು ಹೂಣದೇಶೀಯತ್ವಂಗಕ್ಕೆ ಇಳಿಸಿ ಮುಂಬರಿ
ಯುವುದು. ಆದ್ದರಿಂದ ಬೆಳಗಿನ ದಿನವೆಂದರೆ ತಾರೀಖು ೧೯-೬-೧೯೩೧
ಈ ದಿವಸ ಬೆಳಗ್ಗೆ ೬-೫೫ ಘಂಟೆಗೆ ಹೊಗೆಯ ಬಂಡಿಯು ಗುಂತಕಲ್ಲನ್ನು
(Guntakal) ಸೇರಿತು. ಆ ವೇಳೆಗೆ ಅಲ್ಲಿಗೆ ಮದ್ರಾಸಪಟ್ಟಣದಿಂದ ಹೊ
ರಟ ಮೇಲ್ ಬಂಡಿಯು ಸಿದ್ಧವಾಗಿ ಬರಲು, ಮಹಾಸ್ವಾಮಿಯವರು ಪರಿ
ವಾರಸಮನ್ವಿತರಾಗಿ ಈ ಬಂಡಿಯಲ್ಲಿ ಮುಹೂರ್ತಮಾಡಿ ಪ್ರಯಾಣವನ್ನು
ಬೆಳೆಯಿಸಿ, ಜೂನ್ ೨೦ನೆಯ ಪ್ರಾತಃಕಾಲ ೬-೧೫ ಘಂಟೆಗೆ ಬೊಂಬಾಯಿ
ಪಟ್ಟಣಕ್ಕೆ ಚಿತ್ತೈಸಿದರು. ಭರತಖಂಡದಲ್ಲಿ ಬೊಂಬಾಯಿಪಟ್ಟಣವು ವಿಶೇಷ
ಸಂಪತ್ತಿನಿಂದೊಡಗೂಡಿರುವುದೆಂದು ಪ್ರಖ್ಯಾತಿಗೊಂಡಿರುವುದು. ಸಂಪ
ತ್ತಿಗೆ ಆಧಾರಭೂತವಾದುದು ಬಂಗಾರವು. ಬಂಗಾರವು ಅಗ್ನಿಯಲ್ಲಿ ಉತ್ಪನ್ನ
ವಾದುದು. ಆದುದರಿಂದ ಸಂಪತ್ತಿರುವ ಪ್ರದೇಶವು ಅಗ್ನಿ ಸಂಬಂಧವಾ
ದುದು ಎಂಬುವುದನ್ನು ಸಿದ್ಧಾಂತಗೊಳಿಸುವಂತೆ ಪಟ್ಟಣವು ಅತ್ಯಂತ ಬಿಸಿ
ಯನ್ನುಂಟುಮಾಡುತ್ತಲಿದ್ದಿತು. ರಾಜಕುಲಶೇಖರರು ಆ ದಿನ ರಾತ್ರಿಯೇ
ಬೊಂಬಾಯಿಯನ್ನು ಬಿಟ್ಟು (B. B. & C. I. Frontier Mail) ಬಂಡಿ
ಯಲ್ಲಿ ಪ್ರಯಾಣವನ್ನು ಬೆಳೆಯಿಸಿ ಜೂನ್ ೨೧ನೆಯ ಭಾನುವಾರ ಸಾಯಂ
ಕಾಲ ೫-೪೫ ಘಂಟೆಯವೇಳೆಗೆ ಸಪರಿವಾರರಾಗಿ ಮಧುರಾಪುರಕ್ಕೆ (Muttra)
ಚಿತ್ತೈಸಿದರು.

ಮಧುರಾಪುರವು ಭೋಜಕುಲೋತ್ತಂಸರಾದ ರಾಜರುಗಳಿಂದ ಆಳ
ಲ್ಪಡುತ್ತಲಿದ್ದು ಮಧುರಾಪುರವೆಂಬ ಹೆಸರನ್ನು ಅನ್ವರ್ಥವನ್ನಾಗಿ ಹೊಂದಿ
ದ್ದಿತು. ಆದರೆ ಯಾದವದ್ವೇಷಿಯೂ, ಸುಜನಹಿಂಸಕನೂ, ಧರ್ಮಮಾರ್ಗ
ಧ್ವಂಸಕನೂ ಆಗಿದ್ದ ಕಂಸನ ಕಳ್ಳಿಕೆಗೆ ಸಿಕ್ಕಿ ನಾಮ ಮಾತ್ರ ಮಧುರವಾಗಿ
ದ್ದಾಗ್ಯೂ ನಡವಳಿಕೆಯಲ್ಲಿ ತದ್ವಿರೋಧವಾಗಿದ್ದಿತು. ಆದುದರಿಂದಲೇ, ಯದು
ಕುಲತಿಲಕನಾದ ಶ್ರೀಕೃಷ್ಣನು ಮಧುರೆಯಲ್ಲಿ ಜನಿಸಿದಾಗ್ಯೂ ಜನಿಯಿಸಿದ
ಸ್ವಲ್ಪ ಹೊತ್ತಿನಲ್ಲಿಯೇ ಅದಂ ತ್ಯಜಿಸಿ ಗೋಕುಲಕ್ಕೆ ಹೊರಟು ಹೋದನು.

ಮತ್ತು, ಬಾಂಧವದ್ವೇಷಿಯಾದ ಕಂಸನನ್ನು ಸಂಹರಿಸಿದನಂತರವೂ ದೀರ್ಘಕಾಲ ಮಧುರೆಯಲ್ಲಿ ನಿಲ್ಲದೇ ದ್ವಾರಕಾಪಟ್ಟಣಕ್ಕೆ ಹೊರಟು ಹೋಗಿದ್ದನು. ಈ ಕಾರಣಗಳಿಂದ ಶ್ರೀಕೃಷ್ಣನ ವಿಯೋಗದಿಂದ ಪರಿತಪಿಸುತ್ತಲಿರುವ ಮಥುರಾಪುರವು ಹೃದಯದಲ್ಲಿ ತುಂಬಿದ ದುಃಖಾಗ್ನಿಯಿಂದ ನಿಟ್ಟುಸಿರಂ ಬಿಡಲು ಆ ಉಷ್ಣಾಂಶವು ಊರಿನಲ್ಲಿ ವ್ಯಾಪಿಸಿಕೊಂಡಿರುವುದೋ ಎಂಬಂತೆ ಈ ದಿವಸ ಬಹುಶಖೆಯಾಗಿದ್ದಿತು. ಮಥುರಾಪುರವು ಈಗ ಮತ್ತೆ ತನ್ನಲ್ಲಿಗೆ ದಯಮಾಡಿರುವ ಯಾದವಕುಲಾಭ್ಯುದಯಕರಂ ಶ್ರೀ ಕೃಷ್ಣಭೂಪಾಲರಂ ಕಂಡು, ದಯಾಸಾಂದ್ರರಾದ ರಾಜರನ್ನು ಹೊರಕ್ಕೆ ಹೋಗಗೊಡೆನೆಂದು ಆಲೋಚಿಸಿ, ಹೊರಗಣ ಪ್ರದೇಶವೇ ಕಾಣದಂತೆ ಮಬ್ಬನ್ನು ಕವಿಸಿತೋ ಎಂಬಂತೆ ಗಾಳಿಯ ಬೀಸೆಯಿಂದ ವಿಶೇಷವಾದ ಧೂಳು ಎದ್ದು ಸಹಿಸಲಶಕ್ಯವಾಯಿತು. ಭೂಪಾಲರು ತಮ್ಮ ಯಶಶ್ಚಂದ್ರಸಾಂದ್ರಕಿರಣದಿಂದ ಆ ಮುಸುಕನ್ನು ನಿವಾರಿಸಿಕೊಂಡು, ಒಂದೆ ಬಹುವಾಗಿ ಯಾದವರಂ ಪೀಡಿಸಿದ್ದ ಮಧುರೆಯಲ್ಲಿ ದೀರ್ಘಕಾಲ ನಿಲ್ಲದೆ ಆ ರಾತ್ರಿಯೇ ಅಲ್ಲಿಂದ ಪ್ರಯಾಣವಂ ಜರಿಗಿಸಿ ತಾ|| ೨೭-೬-೧೯೩೧ರ ದಿವಿ ೧೦-೨೫ ಘಂಟೆಗೆ ಕಾತ್‌ಗೋದಾಮ್ (Kathgodam) ಎಂಬ ಪ್ರದೇಶಕ್ಕೆ ದಯಮಾಡಿ ಅಲ್ಲಿ ದಿನಚರ್ಯೆಗಳನ್ನು ಸುಖದಿಂದ ನೆರವೇರಿಸಿದರು. ಇಲ್ಲಿಂದ ಮುಂದಕ್ಕೆ ಹೊಗೆಯಬಂಡಿಯು ಹೋಗುವ ಮಾರ್ಗವಿಲ್ಲ, ಈ ದಿವಸ ಮಧ್ಯಾಹ್ನ ೧ ಘಂಟೆಗೆ ಮಹಾಸ್ವಾಮಿಯವರು ಪರಿವಾರಸಮನ್ವಿತರಾಗಿ ಮೋಟಾರ್ ಬಂಡಿಯಲ್ಲಿ ೫೦ ಮೈಲಿಗಳ ದೂರ ಪ್ರಯಾಣವನ್ನು ಜರಿಗಿಸಿ ಸಂಧ್ಯಾಕಾಲ ೫ ಘಂಟೆಗೆ ರಾಣೀಖೇಟ್ (Ranikhet) ಎಂಬ ಪ್ರದೇಶಕ್ಕೆ ದಯಮಾಡಿಸಿದರು. ಈ ದಿವಸವೂ ಮತ್ತು ಮರುದಿವಸವೂ ಸಹ ನೃಪಕುಲಚೂಡಾರತ್ನರು ಇಲ್ಲಿಯೇ ವಿಶ್ರಾಂತಿಸುಖದಲ್ಲಿದ್ದು ಜೂನ್ ೨೯ ನೆಯ ತಾರೀಖಿನ ದಿನ ಮತ್ತೆ ಮೋಟಾರ್‌ಬಂಡಿಯಲ್ಲಿ ೩೬ ಮೈಲಿಗಳದೂರ ಪ್ರಯಾಣಬೆಳೆಸಿ ಸಪರಿವಾರರಾಗಿ ಅಲ್ಮೋರ (Almora) ಎಂಬ ಪಟ್ಟಣಕ್ಕೆ ಚಿತ್ತೈಸಿದರು ಅಲ್ಮೋರಾ ಪಟ್ಟಣವು, ಸಂಯುಕ್ತ ಸಂಸ್ಥಾನಕ್ಕೆ ಸೇರಿದ ಒಂದು ಜಿಲ್ಲೆಯ ಪ್ರಧಾನಪುರವು. (District Head Quarter) ಇಲ್ಲಿ ಪೂರ್ವ ಒಂದಾನೊಂದು ಕಾಲದಲ್ಲಿ ಸಂಯುಕ್ತಸಂಸ್ಥಾನದ ಕಮಿಷನರ್ ಎಂಬ ಮುಖ್ಯಾಧಿಕಾರಿಯಾಗಿದ್ದ ಜನರಲ್ ರಾಂಸೆ (General Ramsay) ಎಂಬುವರು ವಾಸಿಸುತ್ತಲಿದ್ದ ಮಂದಿರವು ಶ್ರೀಮನ್ಮಹಾ

ರಾಜರವರಿಗೂ ಪರಿಜನರಿಗೂ ಸಹ ಬಿಡಾರವಾಗಿದ್ದಿತು. ಇಲ್ಲಿ, ಜೂನ್ ೨೬ ಮತ್ತು ೨೭ ಈ ಎರಡು ದಿನಗಳಲ್ಲಿಯೂ ಪ್ರಭುವರ್ಯರು ಮುಂದೆ ಚಿತ್ತೈಸಬೇಕಾದ ಶುಭತರಪ್ರಯಾಣದ ಸಲಕರಣೆಗಳನ್ನು ಪ್ರಭುಸೇವಾನಿರತರಾದ ಅಧಿಕಾರಿಗಳು ಶ್ರದ್ಧಾಸಮನ್ವಿತರಾಗಿ ಸಿದ್ಧಗೊಳಿಸಿಕೊಳ್ಳುವವರಾದರು.

ಕೈಲಾಸಮಹಾಕ್ಷೇತ್ರವು, ಅತ್ಯಂತ ಶೀತಲಪ್ರದೇಶವಾದ ಹಿಮಾಲಯಪರ್ವತಪ್ರಾಂತ್ಯದಲ್ಲಿರುವುದು. ಶಿರಃಪ್ರದೇಶದಲ್ಲಿ ಗಂಗೆಯನ್ನೂ ಶೀತಕಿರಣನಾದ ಚಂದ್ರನನ್ನೂ ಧರಿಸಿ ಶೀತವನ್ನು ಸಹಿಸುವ ಅಭ್ಯಾಸಿಯಾದ ಪರಶಿವನೂ ಸಹ ಹಿಮಾಚಲದಲ್ಲಿನ ಶೀತನಿವಾರಣೆಗಾಗಿ ತನ್ನ ಫಾಲನೇತ್ರಾಗ್ನಿಯನ್ನು ಪಟುಗೊಳಿಸಿ ಆನೆಯ ಚರ್ಮವನ್ನು ಹೊದೆದನು. ಹೀಗಿರುವಲ್ಲಿ ಇಂತಹ ಕೈಲಾಸಕ್ಷೇತ್ರವಂ ಕುರಿತು ಪ್ರಯಾಣಮಾಡುವವರು ಶೀತಪರಿಹಾರಕ್ಕಾಗಿ ತಕ್ಕ ಭೈಷಜ್ಯವನ್ನು ಕಲ್ಪಿಸಿಕೊಳ್ಳುವುದು ಅವಶ್ಯಕವೆಂದು ಹೇಳಬೇಕಾದುದಿಲ್ಲ, ದಯಾಸಮುದ್ರರಾದ ಆಳುವ ಮಹಾಸ್ವಾಮಿಯವರು ಆಸೇತುಹಿಮಾಚಲಪ್ರದೇಶಗಳನ್ನೆಲ್ಲವನ್ನೂ ಸಂಚರಿಸಿ ಆಯಾಯ ದೇಶಸ್ಥಿತಿಗಳನ್ನು ಅರಿತವರಾದ ಪ್ರಯುಕ್ತ ಪ್ರಯಾಣಕ್ಕೆ ಮೊದಲೇ, ತಮ್ಮ ಪರಿವಾರಕ್ಕೆ ಶೀತನಿವಾರಣೆಗೆ ತಕ್ಕ ಅನೇಕ ಉಡುಪುಗಳನ್ನು ಸಿದ್ಧಪಡಿಸುವಂತೆ ಆಜ್ಞೆಮಾಡಿದ್ದರು. ಮಹಾಪ್ರಭುಗಳ ಆಜ್ಞಾಪ್ರಕಾರ ಮಹಾಸ್ವಾಮಿಯವರ ಚರಣಸೇವಾಧುರೀಣರಾಗಿಯೂ, ಕಷ್ಟಸಹಿಷ್ಣುವಾಗಿ ಪ್ರಭುಕಾರ್ಯವನ್ನು ಶ್ರದ್ಧೆಯಿಂದ ನಿರ್ವಹಿಸೋಣದರಿಂದ ಮಹಾಪ್ರಭುಗಳ ಮಹಾಸನ್ನಿಧಾನದ ಪೂರ್ಣಕೃಪೆಯನ್ನು ಪಡೆದವರಾಗಿಯೂ ಇರುವ, ಪದಾತಿಸೇನಾಧ್ಯಕ್ಷರಾದ ಕರ್ನಲ್ ಪದವಿಯಿಂದ ವಿರಾಜಿಸುವ ಶ್ರೀಮಾನ್ ಆರ್ಕೇಪುರದ ವೀರಸುಬ್ರಹ್ಮಣ್ಯರಾಜ ಅರಸಿನವರು, ಕೈಲಾಸಕ್ಷೇತ್ರಯಾತ್ರೆಗಾಗಿ ಮಹಾಸ್ವಾಮಿಯವರ ಜೊತೆಯಲ್ಲಿ ಹೊರಡುವ ಅಧಿಕಾರಿಗಳಿಗೂ, ಪರಿವಾರವರ್ಗಕ್ಕೂ ಸಹ ಅವರವರಿಗೆ ತಕ್ಕಂತೆ ಉಡುಪುಗಳನ್ನು ಅಂದರೆ, ಶಿರೋರಕ್ಷೆಗಳು (Kullavics) ರುಮಾಲುಗಳು (Khaki Petas) ಉಣ್ಣೆಬಟ್ಟೆಯ ಅಂಗರೇಖ ಪಾಜಾಮೆಗಳು, (Saxony Long Coat Suits) ಮೇಲ್ಗವಚಗಳು (Over Coats) ನೀರುಕೆಂಡದ ಕವಚಗಳು, (Waterproof Coats) ಉಣ್ಣೆಬಟ್ಟೆಯ ಒಳಕವಚಗಳು. (Woollen Shirts) ಕೊರಳುಪಟ್ಟಿಗಳು (Mufflers) ಬೆರಳುಮುಚ್ಚುವ ಕೈಚೀಲಗಳು (Gloves with Fingers) ಬೆರಳುಮುಚ್ಚದ ಕೈಚೀಲಗಳು

(Gloves without Fingers) ಕಣಕಾಲು ಪಟ್ಟಿಗಳು (Bandages ಕಾಲುಚೀಲಗಳು, (Socks) ಉಣ್ಣೆಯ ಕಾಲುಚೀಲಗಳು, (Woolle Socks) ಚರ್ಮದ ಕಾಲುಚೀಲಗಳು, (Leather Socks) ಮೋಜಾಗಳ (Boots) ಇತ್ಯಾದಿಗಳನ್ನೂ, ಇವಲ್ಲದೆ ಶಾಖದ ಪಾಜಾಮ (Woolle Pants) ಶಾಖದ ಒಳಗವಚ, (Woollen Bunians) ಕಂಬಳಿ, (Jersy ಒೂರ್ನಿಷ್‌ಗಳು (Blankets) ಇವುಗಳನ್ನೂ, ಅವರವರ ಉಡುಪುಗಳನು ಪ್ರತ್ಯೇಕವಾಗಿ ಇಟ್ಟುಕೊಳ್ಳುವುದಕ್ಕೆ ತಕ್ಕ ಚೀಲಗಳು (Kit bags ಮುಂತಾದುವುಗಳನ್ನು ಸಿದ್ಧಪಡಿಸಿಕೊಂಡು ಜೊತೆಯಲ್ಲಿ ತೆಗೆಸಿಕೊಂಡ ಬಂದಿದ್ದರು.

ಮಹಾಸ್ವಾಮಿಯವರ ಜೊತೆಯಲ್ಲಿ ಮಹಾಸನ್ನಿಧಾನಸೇವಾಸಕ್ತರಾದ

ಡಾಕ್ಟರ್. ಎಕ್. ರಂಗಾಚಾರ್, ಎಲ್. ಎಂ. ಎಸ್., ರವರು
ಅಸಿಸ್ಟೆಂಟ್ ಸೆಕ್ರೆಟರಿ ಮ|| ಸಡಗ್ ಸಡ್ ಷಾರವರು
ಕಿಲ್ಲೆ ಕಚೇರಿ ಬಕ್ಷಿರವರು ಲೆಫ್ಟಿನೆಂಟ್ ಕರ್ನಲ್
ಎ. ವಿ. ಸುಬ್ರಹ್ಮಣ್ಯರಾಜ ಅರಸಿನವರು
ಮೇಜರ್ ಎಸ್. ಗೋಪಾಲರಾಯರವರು
ಕ್ಯಾಪ್ಟನ್ ಎಂ. ನಬೀ ಖಾನರವರು
ಲೆಫ್ಟಿನೆಂಟ್ ಡಿ. ಸಿ. ನಂಜರಾಜ ಬಹದ್ದೂರ್‌ರವರು
ಶ್ರೀಯುತ ಸಿ. ವಿ. ಸುಬ್ರಹ್ಮಣ್ಯರಾಜ ಅರಸಿನವರು
,, ಎ. ವೆಂಕಟಸುಬ್ಬಯ್ಯನವರು
,, ಸಿ. ಕೃಷ್ಣಪ್ಪನವರು

ಖಾಸಾ ಪುರೋಹಿತರು, ಗುಮಾಸ್ತರುಗಳು ಮುಂತಾದವರು, ಇತರ ಪರಿವಾರದವರು, ಒಟ್ಟಾಗಿ ೫೦ ಜನರು ಬಂದಿದ್ದರು, ಮದ್ದು ಗುಂಡುಗಳ ಸಹಿತವಾದ ಆಯುಧಗಳು ಜೊತೆಯಲ್ಲಿದ್ದವು. ಯೋಗ್ಯವಾದ ಆಹಾರವಸ್ತುಗಳೂ, ಇತರ ಸಂಭಾರಗಳೂ ಹೇರಳವಾಗಿದ್ದವು. ಸೈನ್ಯದಲ್ಲಿ ಸುಶಿಕ್ಷಿತರಾಗಿ ಘೋರಸಂಗ್ರಾಮಗಳಲ್ಲಿ ಕೆಲಸಮಾಡಿ, ವಿಶ್ರಾಂತಿಯನ್ನು ಹೊಂದಿಯಿದ್ದ (Retired) ಆರುಜನ ಶಿಪಾಯಿಗಳು ಪರಿವಾರದ ಜತೆಯಲ್ಲಿ ಬರಲು ನೇಮಿಸಲ್ಪಟ್ಟಿದ್ದರು.

ಪೂರ್ವದಲ್ಲಿ ಶ್ರೀಮನ್ಮಹಾರಾಜರವರು ಬದರೀನಾರಾಯಣಕ್ಷೇತ್ರಕ್ಕೆ ಯಾತ್ರಾರ್ಥಿಗಳಾಗಿ ದಯಮಾಡಿಸಿದ್ದ ವೇಳೆಯಲ್ಲಿ ಅಲ್ಲಿಗೆ ಬಂದು ಮಹಾಸ್ವಾಮಿಯವರ ಸೇವಾಸಕ್ತರಾಗಿದ್ದ ಅಲ್ಮೋರ ತಹಶೀಲ್‌ದಾರ್ ಶ್ರೀಯುತ ಪ್ರತಾಪ್‌ಸಿಂಗ್ ಎಂಬುವರನ್ನು, ಘನವನ್ನು ಹೊಂದಿದ ಸಂಯುಕ್ತ ಸಂಸ್ಥಾನದ ಸರ್ಕಾರದವರು, ಈಗಲೂ ಪ್ರಭುಕಾರ್ಯಾರ್ಥವಾಗಿ ನೇಮಿಸಿ ಕಳುಹಿಸಿ ಕೊಟ್ಟಿದ್ದರು. ಇವರು ಮಹಾಪ್ರಭುಗಳ ಪರಿವಾರದ ಜೊತೆಯಲ್ಲಿದ್ದು, ಪ್ರಯಾಣಸಲಕರಣೆಗಳನ್ನೂ, ಶಿಬ್ಬಂದಿಯನ್ನೂ, ಉಪಯುಕ್ತವಾದ ಸಾಮಗ್ರಿಗಳನ್ನೂ ಒದಗಿಸುವ ಕಾರ್ಯವನ್ನು ದಕ್ಷತೆಯಿಂದ ವಹಿಸಿದ್ದರು. ಪರಿಜನಗಳನ್ನು, ಮುಂಗುಡಿಯ ಸನ್ನಾಹದಳ, ಮಹಾಸ್ವಾಮಿಯವರ ಜೊತೆಯಲ್ಲಿರುವ ಸೇವಾದಳ, ಮತ್ತು ಹಿನ್ನೆಲೆಯದಳ, ಎಂಬುದಾಗಿ ಮೂರುಭಾಗಗಳಾಗಿ ವಿಂಗಡಿಸಿ, ಸನ್ನಾಹದಳದವರು ಒಂದುದಿನ ಮುಂಚಿತವಾಗಿ ಸಲಕರಣೆಗಳೊಂದೊಡಗೂಡಿ ಹೊರಟು, ಮುಂದಲ ಶಿಬಿರವನ್ನು ಸೇರಿ, ಸೇವಾದಳವು ಬರುವವೇಳೆಗೆ ಎಲ್ಲವನ್ನೂ ಸಿದ್ಧಪಡಿಸಿಕೊಂಡು ಇದ್ದು, ಸೇವಾದಳವು ಆ ಶಿಬಿರಕ್ಕೆ ಬಂದನಂತರ ಮತ್ತೆ ಮುಂದಲ ಶಿಬಿರಕ್ಕೆ ಹೊರಡುವುದೆಂತಲೂ, ಸೇವಾದಳವು ಬಿಟ್ಟುಬಂದ ಶಿಬಿರದಲ್ಲಿನ ಸಾಮಗ್ರಿಗಳನ್ನು ಸಾಗಿಸಿಕೊಂಡು ಹಿನ್ನೆಲೆಯ ದಳದವರು ಮುಂದಿಲ ಶಿಬಿರಕ್ಕೆ ಬಂದನಂತರ ಸೇವಾದಳದವರು ಅವರು ತಂದ ಸಾಮಗ್ರಿಗಳೊಡನೆ ಮುಂದಕ್ಕೆ ಹೊರಡುವುದೆಂತಲೂ, ತರುವಾಯ ಅಲ್ಲಿನ ಸಾಮಗ್ರಿಗಳನ್ನು ಯಥಾಪ್ರಕಾರ ಹಿನ್ನೆಲೆಯದಳದವರು ಸಾಗಿಸಿಕೊಂಡು ಮುಂದಲ ಶಿಬಿರಕ್ಕೆ ಬರುವುದೆಂತಲೂ ಸಹ ಪ್ರಯಾಣಾನುಕೂಲಗಳು ನೇಮಿಸಲ್ಪಟ್ಟವು. ಸಕಲಸನ್ನಾಹಗಳೂ ಜೂನ್ ೨೬ ನೆಯ ರಾತ್ರಿಯೇ ಸಿದ್ಧವಾದವು.

ಜೂನ್ ೨೭ನೆಯ ಉಷಃಕಾಲದ ವೇಳೆಗೆ, ಪ್ರಯಾಣಕ್ಕೆ ಅನುಕೂಲವಾದ ಕುದುರೆಗಳೊಡನೆ, ಮಾರ್ಗ ಸೂಚನೆಗಾಗಿ ನೇಮಿಸಲ್ಪಟ್ಟಿದ್ದ ಅಲ್ಮೋರಾ ತಹಶೀಲಿನ ಛಪ್ರಾಸಿಗಳೇ ಮುಂತಾದವರು ಸಿದ್ಧರಾಗಿದ್ದರು. ಹೇಳಯುವ ಸಂಭಾರಗಳೆಲ್ಲವೂ ಆ ದೇಶಪದ್ಧತಿಯ ಪ್ರಕಾರ ಹೇಸರಕತ್ತೆಗಳ ಮೇಲೆ ಸಾಗಿದವು.

ಶ್ರೀಮನ್ಮಹಾರಾಜರವರು ಅಶ್ವಾರೂಢರಾಗಿ, ಸೇವಾದಳವು ಕುದುರೆ ಕೆನ್ನೇರಿ ಜೊತೆಯಲ್ಲಿ ನೇವಿಸುತ್ತ ಬರುತ್ತಲಿರಲು, ಪ್ರಾತಃಕಾಲ ೫-೩೦

ಸಂಟೆಗೆ ಆಲ್ಮೋರದಿಂದ ಪ್ರಯಾಣವನ್ನು ಬೆಳೆಯಿಸಿ ಅಲ್ಲಿಂದ ಕಿಂಚಿದಧಿಕವಾಗಿ ೮ ಮೈಲಿಗಳ ದೂರದಲ್ಲಿರುವ ಬಾರೀಚೀನ(Barechina)ಎಂಬಪ್ರದೇಶಕ್ಕೆ ಪ್ರಾತಃಕಾಲ ೮ ಘಂಟೆಗೆ ಬಿಜಮಾಡಿಸಿದರು. ಅಲ್ಲಿನ ಮೋಡು ಪ್ರದೇಶದಲ್ಲಿದ್ದ ಒಂದು ಮಂದಿರದಲ್ಲಿ ಪ್ರಭುವರೇಣ್ಯರು ಸಪರಿವಾರರಾಗಿ ಪಾಳೆಯವಂ ಬಿಟ್ಟು ಆನಂದತುಂದಿಲರಾಗಿ ಆಪ್ತಪರಿವಾರದ ಸೇವೆಯಂ ಸ್ವೀಕರಿಸುತ್ತಲಿದ್ದರು. ಬಾರೀಚೀನಾಪ್ರದೇಶವು, ವಿಶೇಷವಾಗಿ ಬೆಳೆದ, ಕರ್ಪೂರದ ಎಣ್ಣೆಯು (Turpentine) ದೊರೆಯುವ ಸಾರ್ವೆಮರಗಳಿಂದ (Pine Trees) ತುಂಬಿರುವುದು. ಅಲ್ಲಲ್ಲಿ ಗುಡ್ಡಗಳ ಇಳಿಜಾರು ಪ್ರದೇಶಗಳೂ ಕಣಿವೆಗಳೂ ಸಹ ಕಟ್ಟೆಗಳನ್ನು ಕಟ್ಟಿ ವ್ಯವಸಾಯಮಾಡಿದ ತುಂಡುಭೂಮಿಗಳಿಂದ ಶೋಭಿಸುತ್ತಲಿರುವವು. ಈ ಬಾರೀಚೀನಾಪ್ರಾಂತ್ಯವು ಸುತ್ತಲೂ ಉನ್ನತ ಪ್ರದೇಶಗಳಿಂದೊಡಗೂಡಿರುವುದಾಗಿ, ಇಲ್ಲಿ ಆಲ್ಮೋರಾಕ್ಕಿಂತಲೂ ಚಳಿಯು ಬಹಳವಾಗಿರುವುದು. ಇಲ್ಲಿ ಅಶ್ವಾರೋಹಕರ ಸಂಚಾರಕ್ಕಾಗಿ ಕಲ್ಪಿಸಿರುವ ದಾರಿಯು ಇಕ್ಕಟ್ಟಾಗಿಯೂ, ವಕ್ರವಾಗಿಯೂ, ಗುಡ್ಡಗಳ ಸಾಲುಗಳನ್ನೇ ಅನುಸರಿಸುವುದಾಗಿಯೂ ಇರುವುದು. ಇಲ್ಲಿಗೆ ಅನತಿದೂರದಲ್ಲಿ ಎದುರುಗುಡ್ಡದಮೇಲೆ ಬಿನ್ಸಾರ್ ಭೂಸ್ಥಿತಿಯು (Binsar Estate) ಇರುವುದು. ಇದರಲ್ಲಿ ಒಂದಾನೊಂದು ಕಾಲದಲ್ಲಿ ಜನರಲ್ ರಾಂಸೇಯವರು ವಾಸಿಸುತ್ತಲಿದ್ದ ಒಂದು ಮಂದಿರವೂ ಮತ್ತು ಹಣ್ಣಿನ ತೋಟವೂ ಸಹ ತಗ್ಗಿನಲ್ಲಿನ ವಕ್ರವಾದ ದಾರಿಯಲ್ಲಿ ಸಂಚರಿಸುವ ಅಶ್ವಾರೋಹಕರನು ನೋಡಿ ನಗುತ್ತಲಿರುವಂತೆ ಶೋಭಿಸುತ್ತಲಿರುವವು.

ಬಾರೀಚೀನಾನಿವಾಸಿಗಳು, ಶಿಬಿರಕ್ಕೆಬಂದು, ಧರ್ಮಾವತಾರರಾ ಶ್ರೀಮನ್ಮಹಾರಾಜರವರ ಮಹಾ ಸನ್ನಿಧಾನಂಗಳಿಗೆ, ದಪ್ಪದಾದ ಎಲೆಕಾಯಿಗಳನ್ನು ಪಾದಕಾಣಿಕೆಯಾಗಿ ಸಮರ್ಪಿಸಿ ಮಹಾಪ್ರಭುಗಳ ಸಂದರ್ಶನವನ್ನು ಪಡೆದು ಸಂತೋಷಭರಿತರಾಗಿ ಸನ್ಮಾನಿತರಾದರು. ರಾತ್ರಿ ಕಲಾಧರನು (ಚಂದ್ರನು) ಸಕಲಕಲಾಧರರಾದ (ಸಕಲವಿದ್ಯಾಪ್ರವೀಣರಾದ ಶ್ರೀಮನ್ಮಹಾರಾಜರವರ ಸಂದರ್ಶನವನ್ನು ಪಡೆದು ತನಗೆ ಉಂಟಾದ ನಂದದಲ್ಲಿ ತನ್ನ ಆ ದಿವಸದ ಮೂರುಕಲೆಗಳ ಕೊರತೆಯನ್ನು (ಶುಕ್ಲಪಕ್ಷದ್ವಾದಶೀಯಾದ್ದರಿಂದ ಚಂದ್ರನ ೧೬ ಕಲೆಗಳಲ್ಲಿ ೧೩ ಕಲೆಗಳು ಮಾತ್ರವಿರುವವು) ಭಾವಿಸದೇ ಪ್ರಕಾಶಿಸುತ್ತಲಿದ್ದನು. ಉದಾರಸಾರಭೂಪಾ



ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್,
ಜಿ. ಸಿ. ಎಸ್. ಐ., ಜಿ. ಬಿ. ಇ.,
ಮಹಾಪ್ರಭುಗಳು ಆಲ್ಮೋರಾದಿಂದ ಪ್ರಯಾಣವನ್ನು ಬೆಳೆಸಿದುದು.

ಮಹಾಪ್ರಭುಗಳ ಯಶಸ್ಸು ಹಿಮಾಚಲದಲ್ಲಿ ಪಸರಿಸಿದಂತೆ ಬೆಳ್ದಿಂಗಳು ಶೋಭಿಸುತ್ತಲಿದ್ದಿತು. ಕಣಿವೆಗಳಲ್ಲಿ ಸಣ್ಣ ಪ್ರವಾಹಗಳು ಹರಿಯುತ್ತ ಲಿದ್ದವು. ಓಮಧಾಮವು ತುಂಬುತ್ತಲಿದ್ದಿತು. ರಾತ್ರಿಯು ಸುಶೀತಲವಾಗಿ ಯೂ ಶಾಂತವಾಗಿಯೂ ಇದ್ದಿತು.

ಜುಲೈ ೨೮ ನೆಯ ದಿವಸ ಪ್ರಾತಃಕಾಲ ೪ ಘಂಟೆಗೆ ಶ್ರೀಮನ್ಮಹಾ ರಾಜರವರ ಪಾಳೆಯವು ಬಾರೀಚೀನಾವನ್ನು ಬೀಳ್ಕೊಂಡು ಅಲ್ಲಿಂದ ೧೦ ಅಥವ ೧೧ ಮೈಲಿಗಳ ದೂರದಲ್ಲಿರುವ ಕನೇರೀಚೀನಾ (Kaneri China) ಎಂಬ ಪ್ರದೇಶವನ್ನು ಕುರಿತು ತೆರಳಿತು. ಪ್ರಯಾಣದ ಆದಿಯಲ್ಲಿ ಸಾಧಾರಣವಾಗಿ ೩ ಅಥವ ೪ ಮೈಲಿಗಳಷ್ಟು ದೂರದಲ್ಲಿನ ಒಂದು ಶೀತಲಪ್ರದೇಶವಾದ ದಿಣ್ಣೆ ಯನ್ನು ದಾಟುವವರಿಗೂ, ಮಾರ್ಗವು ಕಿಟ್ಟನ್ನು ಹತ್ತುವ ಸ್ಥಿತಿಯಲ್ಲಿದ್ದುದಾ ದರೂ, ಅಂತ್ಯಭಾಗವೆಲ್ಲವೂ ಇಳಿಜಾರಿನ ಸ್ಥಿತಿಯಲ್ಲಿದ್ದಿತು. ಮಾರ್ಗದಲ್ಲಿ ಎಲ್ಲಾ ಕಡೆಯಲ್ಲಿಯೂ ಸಾರ್ವೇಮರಗಳು ನಿಬಿಡವಾಗಿದ್ದವು. ಬಾರೀಚೀನಾ ದಲ್ಲಿದ್ದಂತೆಯೇ ಇಲ್ಲಿಯೂ ಇದ್ದ ಒಂದು ಮಂದಿರ(Forest Bungalow) ದಲ್ಲಿ ಶ್ರೀಮನ್ಮಹಾರಾಜರ ಪಾಳೆಯವು ಇಳಿದು ವಿಶ್ರಾಂತಿಯನ್ನು ಹೊಂದು ತ್ತಲಿದ್ದಿತು. ಈ ಪ್ರಾಂತ್ಯವು ನಿಮ್ನಪ್ರದೇಶವಾಗಿ ಕಣಿವೆಯಲ್ಲಿರುವುದ ರಿಂದ ಈ ದಿವಸದ ಹಗಲೆಲ್ಲಾ ಸಹಿಸಲಶಕ್ಯವಾದಷ್ಟು ಶಖೆಯಾಗಿದ್ದಿತು. ಭೂದೇವಿಯು ತನ್ನ ನೀಳವಾದ ತೋಳುಗಳಮೇಲೆ ಅಲಂಕಾರಾರ್ಥವಾಗಿ ಹಚ್ಚೆಯನ್ನು ಚುಚ್ಚಿಸಿಕೊಂಡಿರುವ ರೀತಿಯಲ್ಲಿ, ಸಣ್ಣದೊಂದು ದೊಣೆಯು ಹರಿಯುತ್ತಲಿರುವ ಇಲ್ಲಿನ ಕಣಿವೆಯನ್ನು ಅಲ್ಲಲ್ಲಿ ಬತ್ತವು ಬೆಳೆದಿರುವ ಸಣ್ಣ ಸಣ್ಣ ಗದ್ದೆಗಳು ಅಲಂಕರಿಸಿದ್ದವು.

ಜುಲೈ ೨೯ ನೆಯ ದಿನ ಬೆಳಿಗ್ಗೆ ೪ ಘಂಟೆಗೆ ಮಹಾಪ್ರಭುಗಳು ಸಪರಿ ವಾರರಾಗಿ ಕನೇರೀಚೀನಾವನ್ನು ಬಿಟ್ಟು ಗನಾಯಿಗೆ (Ganai) ಪ್ರಯಾಣ ವನ್ನು ಬೆಳೆಸಿದರು. ಆ ವೇಳೆಗೆ ಇನ್ನೂ ಕತ್ತಲೆಯಾಗಿದ್ದಿತು. ಗಗನದಲ್ಲಿ ರುವ ತಾರಾಮಂಡಲವು, ಹಿಮಾಲಯದ ಕಣಿವೆಗಳಲ್ಲಿ ಹರಿಯುವ ಪ್ರವಾಹ ಜಲದಲ್ಲಿ ತನ್ನ ಪ್ರತಿಬಿಂಬವನ್ನು ಕಂಡು ಭ್ರಮಿಸಿ, ಜಾತಿವಾತ್ಸಲ್ಯ ದಿಂದ ಇಳಿದುಬಂದು, ದೊಣೆಯ ಸಮೀಪವಂ ಸೇರಿ, ಮತ್ತೆ ಪ್ರತಿಬಿಂಬವು ಕಾಣದಿರಲು ಹುಡಿಕಿಕೊಂಡು ಅಲ್ಲಲ್ಲಿ ಅಲೆಯುತ್ತಲಿರುವುದೋ ಎಂಬಂತೆ, ಪಾಳೆಯದ ಮುಂಗುಡಿಯಲ್ಲಿ ಕಾಂತಿಯುಕ್ತವಾದ ದೀಪಗಳು ಕತ್ತಲೆಯನ್ನು

ಹೀಗೆ ೯ ಮೈಲಿಗಳ ಪ್ರಯಾಣಬೆಳೆದು ಪ್ರಾತಃಕಾಲ ೮ ಘಂಟೆ ಸಮಯಕ್ಕೆ ಆಸ್ಕೋಟ್ (Askot) ಎಂಬ ಗ್ರಾಮವನ್ನು ಸೇರಿದುದಾಯಿತು. ಇಲ್ಲಿ ಭಾರಿಯ ಜಮೀನ್ದಾರರೆಂದು ಪ್ರಸಿದ್ಧರಾದ ರಾಜವಾರ್ ವಿಕ್ರಮ ಬಹದ್ದೂರ್ ಪಾಲ್ (Rajwar Vikram Bahadur Pal) ಎಂಬುವರು ಮತ್ತು ಇವರ ಚಿಕ್ಕಪ್ಪಂದಿರು ಡೆಪ್ಯುಟಿ ಕಲೆಕ್ಟರಾಗಿದ್ದು ವಿಶ್ರಾಂತರಾ ಕುಮಾರ್ ಖಡ್ಗಸಿಂಗ್‌ಪಾಲ್ (Kumar Khadga Singh Pal) ರವರು ಸಹ ಶ್ರೀಮನ್ಮಹಾರಾಜರವರಿಗೆ ಸುಸ್ವಾಗತವನ್ನು ಬಯಸಿ ಸತ್ಕರಿಸಿದರು.

ಈ ದಿನ ಪೂರ್ತಿಯಾಗಿ ಮಳೆ ಹುಯ್ಯುತ್ತಲಿದ್ದಿತು. ಇಲ್ಲಿನ ಕಣಗಳಲ್ಲಿ ನಿರಂತರ ನೀರಿನ ಆಸರೆಯನ್ನು ಅಪೇಕ್ಷಿಸಿದ ಒಂದು ಬಗೆಯ ಬತ್ತವನ್ನು ಬೆಳೆಯುವರು. ಇಲ್ಲಿ ಹೇರಳವಾಗಿ ಮಾವಿನ ಮರಗಳಿವೆ, ಮಳೆ ದೆಸೆಯಿಂದ ಗಾಳಿಯು ಬಹುತಂಪಾಗಿ ಬೀಸುತ್ತಲಿದ್ದಿತು. ಈ ಶಿಬಿರದ ನಮ್ಮ ಡಾಕ್ಟರ್ ರಂಗಾಚಾರ್ಯರ ಒಂದೊಂದು ಕಾಲನ್ನು ಒಂದೊಂದು ಜಿಗಯು ಕಚ್ಚಿತು. ಆಸ್ಕೋಟ್ ಗ್ರಾಮವು ಸಮುದ್ರಮಟ್ಟಕ್ಕಿಂತ ೫೦೦೦ ಅ ಎತ್ತರದಲ್ಲಿರುವುದೆಂದು ಎಣಿಸಲ್ಪಟ್ಟಿರುವುದು.

ಜುಲೈ ೪ ನೆಯ ತಾರೀಖು ಬೆಳಗ್ಗೆ ೩-೩೦ ಘಂಟೆಗೆ ಆಸ್ಕೋಟನ್ನು ಬಿಟ್ಟು ಮುಂದಣ ಪ್ರಯಾಣವು ಜರಗಿತು. ಕಡಿದಾದ ಕಣಿವೆಯನ್ನು ೩ ಮೈಲಿಗಳ ದೂರ ಇಳಿದು, ಅಲ್ಲಿ ಆರ್ಭಟೆಯಿಂದ ಪ್ರವಹಿಸುತ್ತಲಿರು "ಗೌರೀಗಂಗಾ" ಎಂಬ ನದಿಯನ್ನು ಒಂದು ಸಣ್ಣ ಸೇತುವೆಯ ಮುಖೇ ದಾಟಿದ್ದಾಯಿತು. ಇಲ್ಲಿಂದ ಒಂದು ಮೈಲಿ ಅಥವ ಸ್ವಲ್ಪ ಹೆಚ್ಚು ದೂವಲ್ಲಿ ಈ ನದಿಯು ಕಾಳೀಗಂಗಾನದಿಗೆ ಸೇರುವುದು. ಗೌರೀಗಂಗಾನಯನ್ನು ದಾಟಿದಮೇಲೆ ಮುಂದಕ್ಕೆ ಕಾಳೀನದಿಯ ಬಲಗಡೆಯಲ್ಲಿ ಪ್ರವಾಹ ಎದಿರು ಮುಖವಾಗಿ ಪ್ರಯಾಣವು ಜರಗಿತು. ದಾರಿಯು ಕೆಲವೆಡೆಯಲ್ಲ ವಿಶೇಷ ಇಕ್ಕಟ್ಟಾಗಿದ್ದುದಲ್ಲದೇ ಹಿಂದಲದಿವಸದ ಮಳೆಯ ದೆಸೆಯಿಂ ಬಹಳ ಕೆಸರಾಗಿಯೂ ಇದ್ದಿತು. ಕೆಲವು ಪ್ರದೇಶದಲ್ಲಿ ದಾರಿಯು ನದಿಯ ದಡಕ್ಕಿಂತಲೂ ನೂರಾರು ಅಡಿಗಳಷ್ಟು ಎತ್ತರದಲ್ಲಿರುವುದು. ಕಣಿವೆಯ ಏಣುಗಳು ಬಹಳ ನೇರವಾಗಿದ್ದುದರಿಂದ(ಇಳಿಜಾರಿಲ್ಲದೆ) ಸವಾರಿಯ ಕುದುಗಳು ಸ್ವಲ್ಪ ಕಾಲುಜಾರಿದರೂ ಪರಿಣಾಮವು ವಿಪತ್ಕರವಾಗುವ ರೀತಿಯಲ್ಲಿ ರುವುದು. ಮೇಲೆ ಹೇಳಿದ ಗೌರೀಗಂಗಾ ಮತ್ತು ಕಾಳೀಗಂಗಾನದಿಗಳ

ಆನ್ಸ್ರೋಟಿನ ನೃತ್ಯವು.

ಶ್ರೀಮನ್ಮಹಾರಾಜರವರು ಮತ್ತು ಆಸ್ಕೋಟಿನ ರಾಜವಾರ್ ಮನೆತನದವರು.

ಘಾಟ್‌ನಿಂದ ಸಾಂಡೇಓಗೆ ಹೋಗುವದಾರಿಯಲ್ಲಿನ ತೂಗುಸೇತುವೆ.

17.

ಘಾಚೊರ್ಲಬಳಿ ಕಾಳೀನದಿಯನ್ನು ದಾಟುವುದು.

18.



ಧಾರ್ಚುಲಬಳಿ ಕಾಳೀನದಿಯನ್ನು ದಾಟುವುದು.

ಸೇರುವ ಸಂಗಮಪ್ರದೇಶವು ಜಾಲ್‌ಜೀವ್‌ಯೆಂದು ಕರೆಯಲ್ಪಟ್ಟಿರುವುದು. ಇಲ್ಲಿ ಪ್ರತಿವರ್ಷವೂ ಆಕ್ಟೋಬರ್ ಮಾಹೆಯಲ್ಲಿ ನಡೆಯುವ ಜಾತ್ರೆಗೆ ಸಾವಿರಾರು ಜನರು ಕೂಡುವರು. ಈ ಜಾತ್ರೆಗೆ ಸೇರುವ ಜನಗಳೊಡನೆ ಭೋಟಿಯಾಗಳು (ಈದೇಶದಲ್ಲಿ ವ್ಯಾಪಾರ ಮತ್ತು ಬೇಸಾಯ್ಯ ಕಸಬು ಮಾಡುವ ಜಾತಿಯ ಜನರನ್ನು ಭೋಟಿಯಾಗಳೆಂದು ಕರೆಯುವರು) ಟಿಬೆಟ್‌ದೇಶದ ಸಾಮಾನುಗಳನ್ನು ಕೊಟ್ಟು ಇದಕ್ಕೆ ಪರಿವರ್ತನೆಯಾಗಿ ಇತರ ಸಾಮಾನುಗಳನ್ನು ತೆಗೆದುಕೊಳ್ಳುವ ವ್ಯಾಪಾರವನ್ನು ಬಹು ಚತುರತೆಯಿಂದ ನಡೆಯಿಸುವರು. ಮೇಲೆ ಹೇಳಿದ ಕಷ್ಟತರವಾದ ದಾರಿಯಲ್ಲಿ ಪ್ರಯಾಣವು ೧೨ ಮೈಲಿಗಳದೂರ ಜರಗಿ, ಬೆಳಗ್ಯೆ ೮-೩೦ ಘಂಟೆಗೆ ಶ್ರೀಮನ್ಮಹಾರಾಜರವರ ಪಾಳೆಯವು ಬಲವಾಕೋಟ್ (Balava Kot) ಎಂಬ ಪ್ರದೇಶವನ್ನು ಸೇರಿತು. ಕಾಳೀನದಿಯ ದಡದಲ್ಲಿ ಹುಲ್ಲುಗರಿಕೆಯು ಬೆಳೆದ ಇಳಿಜಾರಿನ ಭೂಪ್ರಾಂತ್ಯದಲ್ಲಿ ಡೇರಾಗಳು ಹಾಕಲ್ಪಟ್ಟಿದ್ದವು. ಮಧ್ಯಾಹ್ನವೇಳೆಯಲ್ಲಿ ತಡೆಯಲಶಕ್ಯವಾದಷ್ಟು ಶಖೆಯಾಗಿದ್ದಿತು. ಕಾಳೀನದಿಯ ನೀರು ಇಲ್ಲಿ ಬಹು ರಾಡಾಗಿ ಇರುವುದು. ಈ ಪ್ರದೇಶದಲ್ಲಿ ವಾಸಮಾಡದೇ ಬಿಟ್ಟಿರುವ ಮನೆಗಳು ಅನೇಕವಾಗಿರುವವು, ಚಳಿಗಾಲದಲ್ಲಿ ಭೋಟಿಯಾ ಜನರು ಎತ್ತರ ಪ್ರಾಂತ್ಯದಲ್ಲಿನ ಗರ್ಬಯಾಂಗ್ (Garbayang) ಪ್ರದೇಶದ ತಮ್ಮ ವಾಸಸ್ಥಳವನ್ನು ಬಿಟ್ಟು ಬಂದು ಈ ಮನೆಗಳಲ್ಲಿ ವಾಸಮಾಡುವರು.

ಜುಲೈ ೫ ನೆಯ ಪ್ರಾತಃಕಾಲ ೩-೪೫ ಘಂಟೆಗೆ ಶ್ರೀಮನ್ಮಹಾರಾಜರವರು ಮತ್ತು ಪರಿಜನಗಳೂ ಸಹ ಬಲವಾಕೋಟನ್ನು ಬಿಟ್ಟು ೧೧ ಮೈಲಿಗಳದೂರ ಪ್ರಯಾಣವನ್ನು ಬೆಳೆಸಿ ೭-೩೦ ಘಂಟೆಗೆ ಧಾರ್ಚೂಲಾ (Dhar Chula) ವನ್ನು ಸೇರಿದರು. ದಾರಿಯು ಸಾಮಾನ್ಯ ನಿಮ್ನೋನ್ನತಗಳಿಂದಲೂ ಕಿಂದವಾದ ಮಟ್ಟಸ ಪ್ರದೇಶಗಳಿಂದಲೂ ಒಡಗೂಡಿ ಒಟ್ಟಿನಲ್ಲಿ ಚನ್ನಾಗಿದ್ದಿತು. ಆದರೆ ದಾರಿಯು ಕೆಲವೆಡೆಯಲ್ಲಿ ಚಿಕ್ಕದಾಗಿಯೂ, ಕೆಲವೆಡೆಯಲ್ಲಿ ವಿಸ್ತಾರವಾಗಿಯೂ, ನಿರಂತರ ಘರ್ಜನೆಯನ್ನು ಮಾಡುತ್ತ ತರಂಗಮಾಲೆಗಳಿಂದೊಡಗೂಡಿ, ಕಾಳೀ ಎಂಬ ಹೆಸರನ್ನು ಅನ್ವರ್ಥವನ್ನಾಗಿ ಹೊಂದಿ ಭಯಂಕರಾಕಾರವಾಗಿ ಹರಿಯುತ್ತಲಿರುವ ಕಾಳೀನದಿಯ ದಡವನ್ನೇ ಅನುಸರಿಸಿ ಹೋಗುವುದಾಗಿದ್ದಿತು. ಮುಂದೆ ಕೆಲವು ಮಜಲುಗಳ ನಂತರದೊರೆಯುವ ಗರ್ಬಯಾಂಗ್ ಪ್ರದೇಶದವರಿವಿಗೂ ಈ ಕಾಳೀನದಿಯ ತೀರದಲ್ಲಿನ

ಪ್ರಯಾಣವು ತಪ್ಪುವುದಿಲ್ಲವೆಂಬದಾಗಿ ತೋರುತ್ತದೆ. ಮಾರ್ಗದಲ್ಲಿ ಬೇವಾಗ್ಯ ಕಣಿವೆಗಳನ್ನು ಬಳಿಯುವ ಎಡೆಗಳಲ್ಲಿ ನದಿಯು ಕೇವಲ ಸಮೀಪದಲ್ಲಿರುವುದು. ದಿಣ್ಣೆಗಳನ್ನು ಹತ್ತಿಕೊಂಡು ಹೋಗುವಾಗ್ಯ ನದಿಯು ನೂರಾರು ಅಡಿಗಳ ಕೆಳಭಾಗದಲ್ಲಿ ಕಾಣುವುದು. ಈ ಕಾಳೀನದಿಯು ನೇಪಾಳ ಸಂಸ್ಥಾನವನ್ನು ಮತ್ತು ಭರತಖಂಡದಲ್ಲಿನ ಸಾರ್ವಭೌಮಸರ್ಕಾರಪ್ರಾಂತ್ಯವನ್ನೂ ವಿಂಗಡಿಸುವ ಎಲ್ಲೆಯು ಗೆರೆಯಂತಿರುವುದು. ನದಿಯ ಆಚೆಯ ಕೋವು ನೇಪಾಳಸಂಸ್ಥಾನಕ್ಕೆ ಸೇರಿದುದು. ಧಾರ್ಚೂಲಾದಲ್ಲಿಯೇ ಕಣಿವೆಯು ಅಗಲವಾಗಿರುವುದು. ಮತ್ತು ಈಚೆಯ ಭಾಗವು ಇಳಿಜಾರಾಗಿಯೂ ಫಲವತ್ತಾಗಿಯೂ ಇರುವುದು. ಇಲ್ಲಿನ ಜನರು ಬತ್ತವನ್ನೂ, ಅತ್ಯಂತ ಹೇರಳವಾದ ಬೆಳೆಯನ್ನು ಕೊಡುವ ಮುಸುಕಿನಜೋಳವನ್ನೂ ಬಾಳೆ, ಮಾವು, ಲಿಂಬೆ ಮತ್ತು ಕಿತ್ತಲೆಯಗಿಡಗಳನ್ನೂ ಬೆಳೆಯುವರು. ನೇಪಾಳದ ಕಡೆಗೆ ಕಣಿವೆಯು ಪೂರ್ತಿ ಕಿರಿದಾಗಿರುವುದು. ಧಾರ್ಚೂಲಾದಲ್ಲಿನ ಸ್ಥಳೀಯ ಪಾಠಶಾಲೆಯ ಕಟ್ಟಡವು ಶ್ರೀಮನ್ಮಹಾರಾಜರವರ ಸನ್ನಿಧಾನದ ಶಿಬಿರವಾಗಿದ್ದಿತು. ಪರಿಜನಗಳಿಗೆ ಪ್ರತ್ಯೇಕವಾದ ಡೇರಾಗಳನ್ನು ಹಾಕಲಾಗಿತ್ತು. ಪಾಳೆಯದ ಸಮೀಪದಲ್ಲಿ, ಕಾಳೀ ನದಿಯಮೇಲೆ ಈಚೆಯ ದಡದಿಂದ ನೇಪಾಳದಕಡೆಯ ದಡದವರೆವಿಗೂ ಅನೇಕವಾದ ಕದಬೆಯ ಹಗ್ಗಗಳನ್ನು ಕಟ್ಟಿದ್ದರು. ಹಗ್ಗದಮೇಲೆ, ಕವೆಯಂತಿರುವ ಒಂದು ಮರದ ತುಂಡನ್ನು ತಲೆಕೆಳಗಾಗಿ ಅಂದರೆ ಕವೆಯ ತೋಳುಗಳೆರಡೂ ಕೆಳಮುಖವಾಗಿರುವಂತೆ ಇಟ್ಟಿರುವರು. ಈ ತೋಳುಗಳೆರಡಕ್ಕೂ ಸೇರಿಸಿ ಚತುರಸ್ರಾಕಾರವಾದ ಅಂದರೆ ಅಳತೆಯಲ್ಲಿ ಒಂದನ್ನೊಂದು ಹೋಲಿದ ಪಟ್ಟಿಗಳಿಂದ ಮಾಡಲ್ಪಟ್ಟ ಚೌಕಟ್ಟಿನಂತಹ ಒಂದು ವಸ್ತುವು ತೂಗುಹಾಕಲ್ಪಟ್ಟಿರುವುದು. ಕಪಿಗಳು ತಮ್ಮ ಕೈ ಬೆರಳುಗಳಿಂದಲೂ ಕಾಲುಬೆರಳುಗಳಿಂದಲೂ ಹಗ್ಗಕ್ಕೆ ತೂಗುಹಾಕಿಕೊಂಡರೆ ಹೇಗೋ ಹಾಗೆ ಜನರು ಹಗ್ಗಕ್ಕೆ ತೂಗುಹಾಕಿಕೊಂಡು ನದಿಯನ್ನು ದಾಟುವರು. ಇಲ್ಲದಿದ್ದರೆ ಮೇಲೆಹೇಳಿದ ಚೌಕಟ್ಟಿನಮೇಲೆ ಪಿರ್ರಿಯನ್ನು ಊರಿಕೊಂಡು ಕುಳಿತು ಹಗ್ಗದಮೇಲಿನ ಕವೆಯನ್ನು ಜಾರಿಸಿಕೊಂಡು ಹೋಗುತ್ತ ನದಿಯನ್ನು ದಾಟುವರು. ಹೆಂಗಸರು, ಅಶಕ್ತರು ಮತ್ತು ಹೆದರಿಕೆಯ ಸ್ವಭಾವದವರು, ಇವರುಗಳನ್ನು ಮೇಲ್ಕಂಡ ಪಟ್ಟಿಯಮೇಲೆ ಕ್ರಮವಾಗಿ ಕೂರಿಸಿ ಅಳ್ಳಾಡದಂತೆ ಒಟ್ಟಿಯಿಂದ ಬಿಗಿದು, ಹಗ್ಗದಿಂದ ಆಚೆಯ ದಡಕ್ಕೆ

ಕೆಳೆದುಕೊಂಡು ನದಿಯನ್ನು ದಾಟಿಸುವರು. ಇದು ಕೇವಲ ಅಪಾಯಕರವಾದ ಪ್ರಾಚೀನಪದ್ಧತಿಯು. ಇದಕ್ಕಿಂತಲೂ ಇವರು ಹಗ್ಗಗಳಿಂದಲೇ ಸರಿಯಾದ ಸೇತುವೆಯನ್ನು ಕಟ್ಟಿಕೊಂಡರೆ ಉತ್ತಮವು. ಧಾರ್ಚೂಲಾದಲ್ಲಿ ಈ ದಿನ ಪ್ರಾತಃಕಾಲ ಶೀತಲವಾಗಿದ್ದಿತು, ಮತ್ತು ಮೋಡವು ತೂಗಾಡುತ್ತಲಿದ್ದಿತು. ಮಧ್ಯಾಹ್ನದಲ್ಲಿ ಸಾಮಾನ್ಯವಾಗಿ ಬಲಸಾಕೋಟ್‌ನಲ್ಲಿದ್ದಂತೆಯೇ ಝಳವಾಗಿದ್ದಿತು. ಇಲ್ಲಿನ ಔನ್ನತ್ಯವು ಸಮುದ್ರ ಮಟ್ಟಕ್ಕಿಂತ ೩೦೦೦ ಅಡಿಗಳು ಮಾತ್ರ. ಎಲ್ಲಾ ದಿಕ್ಕಿನಲ್ಲಿಯೂ ಗುಡ್ಡಗಳು ಆವರಿಸಿಕೊಂಡಿರುವವು. ನದಿಯ ಆಚೆ ನೇಪಾಳದ ಕಡೆಯಲ್ಲಿ ಒಬ್ಬ ನೇಪಾಳದೇಶೀಯ ನ್ಯಾಯಾಧಿಕಾರಿಯು ಇರುವನು. ಒಂದು ನ್ಯಾಯಾಸ್ಥಾನದ ಕಟ್ಟಡವಿರುವುದು. ಧಾರ್ಚೂಲಾ ಪ್ರಾಂತ್ಯವು ನೋಡುವವರಿಗೆ ಕಾಶ್ಮೀರದೇಶದ ಕೆಲವು ಭಾಗಗಳನ್ನು ಜ್ಞಾಪಕಕ್ಕೆ ತರುವುದು. ಇಲ್ಲಿನ ಜನರು ಬೆಟ್ಟಗಳ ಝರಿಯ ನೀರನ್ನು ಗದ್ದೆಗಳಿಗೆ ತಿರುಗಿಸಿಕೊಂಡು ಬತ್ತವನ್ನು ಬೆಳೆಯುವರು. ಇಲ್ಲಿಂದ ಖೇಲ ಎಂಬ ಊರಿಗೆ ಹೋಗುವ ದಾರಿಯ ೨ ಮೈಲಿಗಳ ದೂರದಲ್ಲಿರುವ ರಾಮಕೃಷ್ಣತಪೋವನವೆಂಬ ಆಶ್ರಮದ ಸ್ವಾಮಿ ಅನುಭವಾನಂದರವರಿಗೆ ಈದಿನ ಸಂಧ್ಯಾಕಾಲದಲ್ಲಿ ಶ್ರೀಮನ್ಮಹಾರಾಜರವರು ಭೇಟಿಯನ್ನು ದಯಪಾಲಿಸಿದರು.

ಮುಂದಿನ ಮಜಲಾದ ಖೇಲಾ (Khela) ಎಂಬ ಪ್ರದೇಶಕ್ಕೆ ಮಾಡಬೇಕಾದ ಪ್ರಯಾಣಸ್ಥಿತಿಯು ಹೇಸರಕತ್ತೆಗಳ ಮೇಲೆ ಸಾಮಾನುಗಳನ್ನು ಸಾಗಿಸುವಂತಿರಲಿಲ್ಲ. ಸಾಮಾನುಗಳನ್ನೆಲ್ಲಾ ಕೂಲಿಯ ಜನಗಳಿಂದಲೇ ಸಾಗಿಸಿದ್ದಾಯಿತು. ಜುಲೈ ೭ ನೆಯ ಪ್ರಾತಃಕಾಲ ೫ ಘಂಟೆಗೆ ಶ್ರೀಮನ್ಮಹಾರಾಜರವರು ಪರಿಜನಗಳೊಡಗೂಡಿ ಧಾರ್ಚೂಲಾವನ್ನು ಬೀಳ್ಕೊಂಡು ಪ್ರಯಾಣವನ್ನು ಬೆಳೆಸಿದರು. ದಾರಿಯು ಯಥಾಪ್ರಕಾರ ಕಾಳೀನದಿಯನ್ನನುಸರಿಸಿದ್ದಿತು ಮಾರ್ಗವು ಬಹು ಇಕ್ಕಟ್ಟು, ಕೆಲವೆಡೆಯಲ್ಲಿ ೩ ಅಡಿ ಅಗಲ ಮಾತ್ರ, ಮತ್ತೆ ಕೆಲವೆಡೆಗಳಲ್ಲಿ ಇನ್ನೂ ಚಿಕ್ಕದು. ೪ ಮೈಲಿಗಳ ದಾರಿಯು ಸಾಮಾನ್ಯವಾಗಿದ್ದಿತು. ಕೊನೆಯ ೪ ಮೈಲಿಗಳ ದಾರಿಯು ಕೇವಲ ಕಡಿದು, ಕುಟಿಲ ಮತ್ತು ದಿಣ್ಣೆ. ನೆಲವೆಲ್ಲವೂ ಇಡಕುಮುಡುಕು ಕಲ್ಲುಗಳು, ಇಷ್ಟಲ್ಲದೆ ಜಾರಿಕೆ. ದಾರಿಯಲ್ಲಿ ಬರುತ್ತ ಕಣಿವೆಯ ಕೆಳಕ್ಕೆ ನೋಡಿದರೆ ಎಂತಹರಿಗಾದರೂ ತಲೆ ತಿರುಗುವಂತಿರುವುದು. ಹೀಗೆ ೧೦ ಮೈಲಿಗಳ ದಾರಿಯನ್ನು ಸಾಗಿಸಿ ಪ್ರಾತಃಕಾಲ ೯-೩೦ ಘಂಟೆಗೆ ಖೇಲಾಕ್ಕೆ

ಬರುವುದರಲ್ಲಿ ಬಿಸಿಲು ವಿಪರೀತ ಚುರುಕಾಗಿದ್ದಿತು. ಖೇಲಾ ಗ್ರಾಮವು ಬೆಟ್ಟಗಳ ಮಧ್ಯದಲ್ಲಿರುವುದರಿಂದ ಅಲ್ಲಿ ಡೇರೆಗಳನ್ನು ಹೊಡೆಯುವುದಕ್ಕೂ ಸ್ಥಳವಿರಲಿಲ್ಲ. ಸ್ಥಳೀಯ ಪಟ್ವಾರಿಗೆ (Patel) ಸೇರಿದ ಮನೆಗಳಲ್ಲಿ ಬಿಡಾರವು ಏರ್ಪಟ್ಟಿತ್ತು. ಸ್ವಜಸ್ಥಿತಿಯಲ್ಲಿ ಇಲ್ಲಿಯವರೆಗಿನ ಪ್ರಯಾಣಗಳಲ್ಲಿ ಈ ದಿವಸದ ಪ್ರಯಾಣವು ಅತ್ಯಂತ ಕಷ್ಟತರವಾಗಿದ್ದಿತು. ಶಿಬಿರದ ಎದಿರಾಗಿ ಮುಂದಿನ ಮಜಲಿಗೆ ಪ್ರಯಾಣಮಾಡಬೇಕಾದ ಕಡಿದಾದ ಬೆಟ್ಟಗಳ ಒತ್ತಿನ ವಕ್ರವಾದ ತಿರುವುಗಳುಳ್ಳ ದಾರಿಯು ಗೋಚರಿಸುತ್ತಲಿದ್ದು ನಡೆದು ಹೋಗಬೇಕಾದ ಪ್ರಯಾಣಿಕರುಗಳನ್ನು ಚೆನ್ನಾಗಿ ನಿರುತ್ಸಾಹಿಗಳನ್ನಾಗಿ ಮಾಡುತ್ತಲಿದ್ದಿತು. ಈ ಸ್ಥಳವು ಸಮುದ್ರಮಟ್ಟಕ್ಕೆ ೫೫೦೦ ಅಡಿ ಎತ್ತರದಲ್ಲಿರುವುದು. ಇಲ್ಲಿ ತಂಪಾದ ಹವ.

ಮುಂದಲ ಪ್ರಯಾಣಕ್ಕೆ ಆವಶ್ಯಕವಾದ ಹೊಸ ಕುದುರೆಗಳನ್ನೂ, ಸಾಮಾನುಗಳನ್ನು ಸಾಗಿಸಲು ಕೂಲಿಗಳನ್ನೂ ನೇಮಿಸಿಕೊಳ್ಳುವುದಕ್ಕಾಗಿ ಜುಲೈ ೭ ನೆಯ ತಾರೀಖಿನ ದಿನವೂ ಖೇಲಾದಲ್ಲಿಯೇ ನಿಂತದ್ದಾಯಿತು. ಈ ದಿನ ಪ್ರಾತಃಕಾಲ ಪೂರ್ತಿಯಾಗಿ ಮಂಜು ಕವಿಚಿಕೊಂಡಿದ್ದು ೧೦ ಘಂಟೆಯ ಮೇಲೆ ಸ್ವಲ್ಪಮಟ್ಟಿಗೆ ಬಿಸಿಲು ತೋರಿತು. ಮುಂಗುಡಿಯ ಸನ್ನಾಹದವರು (Advance Party) ಈ ದಿನ ಬೆಳಗ್ಗೆ ಥಿಥ್ಲಾಕ್ಕೆ ಪ್ರಯಾಣಮಾಡಿದರು. ಮಧ್ಯಾಹ್ನವೆಲ್ಲ ಆಕಾಶವು ಮೋಡದಿಂದ ಕವಿಚಲ್ಪಟ್ಟು ಬಹು ಚಳಿಯಾಗಿದ್ದಿತು.

ಜುಲೈ ೮ ನೆಯ ಪ್ರಾತಃಕಾಲ ೫ ಘಂಟೆಗೆ ಶ್ರೀಮನ್ಮಹಾರಾಜರವರ ಪಾಳೆಯವು ಖೇಲಾವನ್ನು ಬಿಟ್ಟು ೯ ಮೈಲಿಗಳು ಪ್ರಯಾಣಮಾಡಿ ೯-೩೦ ಘಂಟೆಗೆ ಥಿಥ್ಲಾ (Thithla) ಪ್ರಾಂತ್ಯವನ್ನು ಸೇರಿತು. ಖೇಲಾ ಬಿಟ್ಟ ಮೇಲೆ ಒಂದು ಮೈಲಿಯಷ್ಟು ದೂರ ಕಣಿವೆಯನ್ನು ಇಳಿಯುವ ದಾರಿ. ಮುಂದೆ ಕಾಳೀನದಿಯನ್ನು ಸೇರಿಕೊಳ್ಳುವ ಒಂದು ತೊರೆ. ಇದನ್ನು ಸೇತುವೆಯ ಮುಖೇನ ದಾಟಿದುದಾಯಿತು. ಅಲ್ಲಿಂದಾಚೆಗೆ ಖೇಲಾದಲ್ಲಿನ ಶಿಬಿರದ ಎದುರಾಗಿ ಭಯವನ್ನುಂಟುಮಾಡುವಂತೆ ಕಾಣುತ್ತಲಿದ್ದಿತೆಂದು ಮೊದಲೆ ಹೇಳಿಯಿದ್ದ ಘನವಾದ ದಿಣ್ಣೆಯ ದಾರಿ. ಈ ದಿಣ್ಣೆಯನ್ನು ಸ್ಥಳೀಯರು ಖಡಿಚಡಾಯ್ (Khadi Chadai) (ಕಡಿದಾದ ದಿಣ್ಣೆ) ಎಂದು ಕರೆಯುವರು. ಅಲ್ಲಿನ ಜನರು ಅಭ್ಯಾಸಿಗಳಾಗಿರುವುದರಿಂದ ಈ ದಿಣ್ಣೆಯನ್ನು

ಬಹು ಸುಲಭವಾಗಿ ಹತ್ತುವರು. ಈ ದಿಣ್ಣೆಯು ಬುಡದಿಂದ ನೆತ್ತಿಯವರೆಗೆ ೩ ಮೈಲಿಗಳ ದೂರ. ಇದನ್ನು ಹತ್ತುವಾಗ್ಯೆ ಜನರನ್ನು ವಹಿಸಿದ್ದ ಗಟ್ಟಿಯಾದ ಗೊರಸುಗಳುಳ್ಳ ಕುದುರೆಗಳೂ ಮತ್ತು ಸಾಮಾನುಗಳನ್ನು ವಹಿಸಿ ಬರುತ್ತಲಿದ್ದ ಹೇಸರಕತ್ತೆಗಳೂ ಸಹ ಉಸುರುಸುರಾಗಿ ಹೋಗಿ, ಆಗಿಂದಾಗ್ಯೆ ಅಲ್ಲಲ್ಲಿ ನಿಂತು, ಬುಸುಬುಸನೆ ಉಸಿರುಬಿಡುತ್ತ, ಹಾಗೂ ಹೀಗೂ ಸ್ಥಳವನ್ನು ಮುಟ್ಟಿಸಿದವು. ಈ ಕಡೆಗಳಲ್ಲಿ ಕುದುರೆಗಳಿಗಾಗಲೀ ಹೇಸರಕತ್ತೆಗಳಿಗಾಗಲೀ ಲಾಳ ಕಟ್ಟಿಸುವುದಿಲ್ಲ. ತರುವಾಯ ಇನ್ನೂ ಕೆಲವು ದಿಣ್ಣೆಗಳನ್ನು ಹತ್ತಿ ಇಳಿದು, ಮಾರ್ಗದಲ್ಲಿ ಅಂದವಾಗಿ ಕಂಗೊಳಿಸುತ್ತಲಿದ್ದ ಎರಡು ಹಳ್ಳಿಗಳನ್ನೂ, ಗುಡ್ಡಗಳಿಂದ ಇಳಿದು ಬರುವ ಅನೇಕ ತೊರೆಗಳನ್ನೂ ನೋಡಿಕೊಂಡು ಪಾಳೆಯವು ಥಿಘ್ಲಾವನ್ನು ಸೇರಿತು. ಹಿಂದಲ ರಾತ್ರಿ ವಿಶೇಷ ಮಳೆಯಾಗಿದ್ದ ಪ್ರಯುಕ್ತ ನೆಲವೆಲ್ಲವೂ ತೇವವಾಗಿತ್ತು. ಇಳಿಜಾರಾದ ಒಂದು ಸಣ್ಣ ಮೈದಾನದಲ್ಲಿ ಡೇರೆಗಳು ಹಾಕಲ್ಪಟ್ಟಿದ್ದವು. ಪರಿಜನಗಳು, ಶಿಬಿರದಲ್ಲಿ ಚಳಿಯಾಗಿದ್ದುದರಿಂದ, ಮಹಾಪ್ರಭುಗಳು ಅನುಗ್ರಹಿಸಿದ್ದ ಖಾಖಿದ ಉಡುಪುಗಳನ್ನು ಧರಿಸಿ ಚಳಿಯನ್ನು ಪರಿಹರಿಸಿಕೊಂಡು ಸಂತೋಷದಿಂದಿದ್ದರು. ಈ ದಿನ ಸಾಯಂಕಾಲ ಸುತ್ತಣ ಹಳ್ಳಿಯ ಬಹು ಜನರು ಬಂದು ಪ್ರಭುವರರ ಸಂದರ್ಶನವನ್ನು ಪಡೆದು ಕೆಲವು ಔಷಧಿಗಳನ್ನು ಅಪೇಕ್ಷಿಸಿ ಯಥೋಚಿತವಾಗಿ ಅವುಗಳಂ ಪಡೆದುಕೊಂಡು ಹೋದರು. ಗುಡ್ಡಗಳ ಪ್ರದೇಶದಲ್ಲಿ ವಾಸಮಾಡುವ ಈ ಜನರಿಗೆ ತಕ್ಕಷ್ಟು ಔಷಧೋಪಚಾರಗಳಿಗೆ ಅವಕಾಶವಿಲ್ಲದೇ ಬಹು ಕೊರತೆಯಾಗಿರುವುದು. ಶಿಬಿರಕ್ಕೆ ಎದಿರಾಗಿರುವ ಒಂದು ಬೆಟ್ಟದಮೇಲಿನಾನಾ ಜಾತಿಯ ಭದ್ರದಾರು (Fir trees) ಮರಗಳು ಹೇರಳವಾಗಿ ಬೆಳೆದಿರುವವು. ಥಿಘ್ಲಾವು ಸಮುದ್ರ ಮಟ್ಟಕ್ಕಿಂತ ೯೦೦೦ ಅಡಿ ಎತ್ತರದಲ್ಲಿರುವುದು.

ಜುಲೈ ೯ನೆಯ ತಾರೀಖು ಬೆಳಗ್ಯೆ ೬-೩೦ ಘಂಟೆಗೆ ಅರಸು ಮಹಾಸ್ವಾಮಿಯವರು ಪರಿಜನ ಸಮನ್ವಿತರಾಗಿ ಥಿಘ್ಲಾವನ್ನು ಬಿಟ್ಟು ಮುಂದಿ ಮಜಲಾದ ಗೆಲಾಗರ್ (Gelagar) ಅನ್ನು ಕುರಿತು ಬಿಜಯಂಗೈದರು. ಮಾರ್ಗದಲ್ಲಿ ಬಹುಕೊರೆತ. ಅದರಲ್ಲಿಯೂ ಹಿಂದಿನ ದಿನ ಮಳೆಯಾಗಿದ್ದುದರಿಂದ ಮತ್ತಷ್ಟು ಚಳಿ, ಪ್ರಯಾಣ ಪ್ರಾರಂಭದಲ್ಲಿ ೪ ಮೈಲಿಗಳ ದೂರವೆಲ್ಲ ತಗ್ಗು ನೆಲ. ಮಾರ್ಗದಲ್ಲಿ ಕೆಲವು ಸೊಗಸಾದ ಹಳ್ಳಿಗಳೂ, ಆ ಹಳ್ಳಿಗಳಿಗೆ ನೀರನ್ನು ಒದಗಿಸುವ ಅನೇಕವಾದ ಗಿರಿಯ ತೊರೆಗಳೂ ರಮಣೀಯವಾಗಿದ್ದವು. ಈ

ಮೇಲ್ಕಂಡ ಕಷ್ಟದ ದಾರಿಯಲ್ಲಿಯೇ ನಿರ್ಬಂಧವಾಗಿ ಜನರು ಸಂಚರಿಸಬೇಕಾಗುವುದು. ಮಹಾಪ್ರಭುಗಳ ಪಾಳೆಯವು ಒರಟು ಕಲ್ಲುಗಳ ಮೇಲೂ, ಕಲ್ಗುಂಡುಗಳ ಮೇಲೂ, ತಪ್ಪದೆ ನದಿಯದಡದ ಮೇಲೆ, ಒಂದಾವರ್ತಿ ಎಡಕ್ಕೆ ತಿರುಗುತ್ತಲೂ, ಒಂದಾವರ್ತಿ ಬಲಕ್ಕೆ ತಿರುಗುತ್ತಲೂ, ಹತ್ತುತ್ತಲೂ, ಇಳಿಯುತ್ತಲೂ, ಯದ್ವಾತದ್ವಾ ಆತುರತೆಯಿಂದ ಬರುತ್ತಲಿದ್ದಿತು. ಮತ್ತೆ ಕಾಳೀ ನದಿಯನ್ನು ಅತ್ಯಂತ ಕಿರಗಲವಾದ ಪ್ರದೇಶದಲ್ಲಿ ದಾಟಿ, ಕೇವಲ ಪ್ರಪಾತದ ಅಂಚು ಅಥವ ಪಾರ್ಶ್ವವನ್ನು ಅಬಂಧದೆಯಾಗಿ ಸದಾ ಅನುಸರಿಸಿಕೊಂಡು ಬರುವುದಾಗಿಯೂ, ಕೊರಕಲುಗಳಿಂದೊಡಗೂಡಿದುದಾಗಿಯೂ, ಇಕ್ಕಟ್ಟಾಗಿಯೂ ಇರುವ ಹಾದಿಯಲ್ಲಿ ಹತ್ತುತ್ತಲೂ, ಇಳಿಯುತ್ತಲೂ, ನಡೆಯುವುದಕ್ಕೆ ಪ್ರಾರಂಭವಾಯಿತು. ಇದು ಅತ್ಯಂತ ಅಪಾಯಕರವಾದ ದಾರಿಯಾದ್ದರಿಂದ ಎಲ್ಲರಿಗೂ ಬಹಳ ಆಯಾಸವನ್ನುಂಟುಮಾಡಿತು. ಅಂಜಿಕೆಯ ಸ್ವಭಾವದವರು ಈ ದಾರಿಯ ವಿಷಯವನ್ನು ಮಾತನಾಡುವುದೂ ಅಸಾಧ್ಯವೇ. ಕೊನೆಗೆ ಪಾಳೆಯವು ೧೦ ಮೈಲಿಗಳ ಪ್ರಯಾಣವನ್ನು ನಾಗಿಸಿ ೯-೩೦ ಘಂಟೆಗೆ ಮಾಲ್ಪಾವನ್ನು ಸೇರಿತು. ನೇಪಾಳದ ಕಡೆಯ ಪರ್ವತಶ್ರೇಣಿಯಿಂದ ಇಳಿದುಬರುವದೊಂದು, ಮಾಲ್ಪಾ ಕಡೆಯ ಪರ್ವತಶ್ರೇಣಿಯಿಂದ ಇಳಿದುಬರುವ ದೊಡ್ಡದಾದ ಮತ್ತೊಂದು. ಈ ಪ್ರಕಾರ ಎರಡು ಪ್ರವಾಹಗಳು ಜಲಪಾತದಂತೆ ಬಂದು, ಈ ದಾರಿಯಲ್ಲಿ ಕಾಳೀನದಿಯಲ್ಲಿ ನುಗ್ಗುವುವು. ನದಿಯ ದಡದಮೇಲೆ ಘೋರತರಶಬ್ದಗರ್ಭಿತವಾಗಿ, ಅಲ್ಲೋಲಕಲ್ಲೋಲಗಳಿಂದ ಒಡಗೂಡಿದ ನೀರಿನ ಎದುರಾಗಿಯೇ ಡೇರೆಗಳು ಹಾಕಲ್ಪಟ್ಟಿದ್ದುವು. ಪರ್ವತದಿಂದಿಳಿದುಬರುವ ಮತ್ತೊಂದು ಪ್ರವಾಹವು ಡೇರೆಗಳಿಂದ ಒಂದು ಕಲ್ಲೆಸೆದರೆ ಹೋಗುವಷ್ಟು ದೂರದಲ್ಲಿ ಬಲಭಾಗದಿಂದ ಕಾಳೀನದಿಯನ್ನು ಸೇರುವುದು. ಪಾಳೆಯಕ್ಕೆ ಬಂದಿದ್ದ ತಟ್ಟುಗಳಲ್ಲಿ ಒಂದು ತಟ್ಟುವು ಕೆಳಗೆ ಹಳ್ಳದಲ್ಲಿ ಬಿದ್ದು ಬಹಳ ಘಾಸಿಯನ್ನು ಹೊಂದಿತು. ಗರ್ಬಯಾಂಗಿನಿಂದ ಪಾಳೆಯದ ಉಪಯೋಗಕ್ಕಾಗಿ ತರಿಸಿದ್ದ ಮತ್ತೊಂದು ತಟ್ಟುವು ದಾರಿಯಲ್ಲಿಯೇ ಕಾಲುಜಾರಿ ಹೊಳೆಯಲ್ಲಿ ಬಿದ್ದು ಕ್ಷಿಪ್ರದಲ್ಲಿಯೇ ಪರಲೋಕವನ್ನೈದಿತು. ಇಲ್ಲಿ ಸಾಮಾನ್ಯವಾಗಿ ಹೆಚ್ಚು ಬೆಟ್ಟಗಳೆಲ್ಲವೂ ಬರಿಯ ಬೆಟ್ಟಗಳು, ಮರಗಳು ಕೇವಲವಿರಳ. ಮಾಲ್ಪಾ ಪ್ರಾಂತ್ಯವು ಸಮುದ್ರಮಟ್ಟಕ್ಕೆ ೭೨೦೦ ಅಡಿಗಳ ಎತ್ತರದಲ್ಲಿರುವುದು.

M.29/6/32 23



ಮಾಲ್ಪಾ ದಾರಿಯಲ್ಲಿ ನೇಪಾಳಕ್ಕೆ ಹೋಗುವಾಗ್ಗೆ
ದಾಟಬೇಕಾದ ಸೇತುವೆ.

ಬರುಬರುತ ಸಮಾಚಾರ ಹತ್ತಿರಾದುದು ಪರಲೋಕ.

ಈ ದಿವಸದ ಪ್ರಯಾಣದಲ್ಲಿನ ಕಷ್ಟಪರಂಪರೆಗಳನ್ನು ಕುರಿತು, ಕ್ಯಾಪ್ಟನ್ ನಬೀಖಾನರವರು ಆಂಗ್ಲೇಯಭಾಷೆಯಲ್ಲಿ ಪದ್ಯಗಳನ್ನು (Poetry) ರಚಿಸಿರುವುದು ಬಹು ಸಂತೋಷಕರವಾಗಿರುವುದು. ಆ ಪದ್ಯಗಳ ರಸವನ್ನು ಬೇರೆ ಭಾಷೆಯಲ್ಲಿ ಬರೆದು ಆಂಗ್ಲೇಯ ಭಾಷೆಯ ರಸವನ್ನು ತರುವುದು ದುರ್ಲಭವೆಂದು ತಿಳಿದಾಗ್ಯೂ, ಆಶೆಯು ಬಿಡದೆ ಆ ಪದ್ಯಗಳ ಅಭಿಪ್ರಾಯವನ್ನು ಪದ್ಯರೂಪದಿಂದಲೇ ನಮ್ಮ ಲೇಖಿಣಿಯು ಈ ಪ್ರಕಾರವಾಗಿ ಪಕ್ಷಣಿಸುವುದು.

ಭಾಮಿನೀ ಷಟ್ಪದೀ

ಪರಿಪರಿಯ ರೂಪಗಳ ನಾಂತಿರು |
ಪರೆಗಳನು ಮೆಟ್ಟುತ್ತ ತೆವಳುವ |
ಪರಿಯಲ್ಲಿತರೆ ಗರ್ಭಯಾಂಗಕೆ ಗಲಗರನನುಳಿದು ||
ಇರುವೆಂಟುಮೈಲಿ ದಾರಿಯು |
ನರಕ ಪಥವೆಂದುಲಿವರದು ಪುಸಿ |
ಬರುಬರುತ ನಸುಜಾರೆ ಹತ್ತಿರವಿಹುದು ಪರಲೋಕ ||
ಪೇಳಲೇನಹುದಮ್ಮ ವೈದ್ಯರ |
ಘಾಲಿಲಿಪಿಯನು ಕೆಲವು ಹೆಜ್ಜೆಯ |
ಕಾಲಿನಿಂ ಸಾಗಿಸುತ ನಿಲ್ವರು ಸುಯ್ದು ಬಹುಕಾಲ ||
ಮೈಲಿಯೊಂದನು ಕಳೆದು ಬರೆ ನೇ |
ಪಾಳದೇಶದೊಳಿನಿತು ಕಷ್ಟವ |
ಮೇಳವಿಸಿ ಕುಡುತಿರ್ಪ ದಿನವಿದ ಮರೆಯಬಾರದಲೆ ||
ನರಪತಿಯು ಪರಿಜನಗಳೆಲ್ಲರ |
ಪೊರೆಯುತಾಮಾರ್ಗದಲಿ ನಡೆಸಿದ |
ಕರುಣವನು ಧರ್ಮವನು ವಿವರಿಸೆ ನುಡಿಗಳತಿವಿರಳ ||
ವರರಜತಗಿರಿಯೊಡೆಯ ನಿನ್ನನು |
ಶರಣುಪೊಗುತಲೆ ಬೇಡುತಿರ್ಪೆವು |
ನರಪತಿಯನನವರತ ಪಾಲಿಸು ಪರಮಕರುಣದಲಿ ||

ಜುಲೈ ೧೧ನೆಯ ಪ್ರಾತಃಕಾಲ ೫ ಘಂಟೆಗೆ ಮಹಾಸ್ವಾಮಿಯವರು ಸಪರಿವಾರರಾಗಿ ಮಾಲ್ಪಾವನ್ನು ಬಿಟ್ಟು ೭ ಮೈಲಿಗಳ ದೂರ ಚಿತ್ತೈಸಿ ೯ ಘಂಟೆಗೆ ಬೂದಿ (Budi) ಎಂಬ ಮಜಲಿಗೆ ದಯಮಾಡಿಸಿದರು. ಈ ೭ ಮೈಲಿಗಳ ಪ್ರಯಾಣವು ಎಲ್ಲಾ ವಿಧದಲ್ಲಿಯೂ ನಿನ್ನೆಯ ಪ್ರಯಾಣಕ್ಕೆ

ಸಮಾನವಾಗಿದ್ದಿತು. ಮಾಲ್ಪಾದಿಂದ ಒಂದು ಮೈಲಿಯ ಪ್ರಯಾಣ ಮಾತ್ರ ಕುದುರೆಗಳ ಮೇಲೆ ಜರಿಗಿತು. ಅಲ್ಲಿಂದ ಮುಂದೆ ದಾರಿಯು ಅಶ್ವಾರೋಹರಿಗೆ ಅನುಕೂಲವಿರಲಿಲ್ಲ. ಎಲ್ಲರೂ ಪಾದಚಾರಿಗಳಾಗಿ ಹೊರಟರು. ದಾರಿಯು ಅತ್ಯಂತ ಇಕ್ಕಟ್ಟು, ಮತ್ತು ದೊಡ್ಡ ಹಳ್ಳಗಳ ಅಂಚಿನ ಸಂಚಾರ ಮಧ್ಯೆ ಮಧ್ಯೆ ಕೊರಕಲುಗಳು. ಕೊರಕಲುಗಳನ್ನು ದಾಟಿ ಹೋಗುವುದಕ್ಕೆ ಅವುಗಳ ಮೇಲೆ ದೊಡ್ಡ ತೊಲೆಗಳನ್ನು ಅಡ್ಡಲಾಗಿ ಹಾಕಿರುವುದು. ತೊಲೆಗಳ ಮೇಲೆ ಅಡ್ಡಅಡ್ಡಲಾಗಿ ಒಂಟಾದ ಮರದ ತುಂಡುಗಳು. ಇದರ ಮೇಲೆ ಮಣ್ಣು ಮುಚ್ಚಿರುವುದು. ಮಣ್ಣಿನ ಮೇಲೆ ಸಂಚಾರ. ಇಂತಹ ಮ ಉದ್ದಿಗಳು ಅನೇಕ. ಇವುಗಳಲ್ಲಿ ಕೆಲವು ಹೊಸದಾಗಿ ಹಾಕಲ್ಪಟ್ಟವುಗಳು. ಈ ವಿಧವಾದ ಮಾರ್ಗದಲ್ಲಿ ಒದುತ್ತಲಿದ್ದಾಗ್ಯೆ ಒಂದೆಡೆಯಲ್ಲಿ ಎಲ್ಲರೂ ಮುಂದಕ್ಕೆ ಬಂದೊಡನೆಯೇ, ಹಿಂಪಾರ್ಶ್ವದಲ್ಲಿ ಭಾರಿಯ ಬಂಡೆಯೊಂದು ಮೇಲಿಂದುರುಳಿ ಕಣಿವೆಯೊಳಕ್ಕೆ ದಢಾರನೆ ಬಿದ್ದ ಶಬ್ದವು ಕೇಳಿ ಬಂದಿತು. ಈ ಭಯಜನಕವಾದ ಸ್ಥಿತಿಯ ಜೊತೆಗೆ ದಾರಿಯಲ್ಲಿ ವಿಶೇಷ ಮಳೆ. ಯಥಾಪ್ರಕಾರ ಕಣಿವೆಯ ತಳದಲ್ಲಿ ಹರಿಯುತ್ತಲಿದ್ದ ಕಾಳೀ ನದಿಯ ಸರಣಿಯಲ್ಲಿಯೇ ಪ್ರಯಾಣ. ದಿಣ್ಣೆಗಳನ್ನು ಮೇಲುಮೇಲಕ್ಕೆ ಹತ್ತಿ ಬರುತ್ತಲಿದ್ದಂತೆಯಲ್ಲಾ, ಕಣಿವೆಯಲ್ಲಿನ ನೀರಿನ ಎರಡು ಪಾರ್ಶ್ವಗಳಲ್ಲಿಯೂ ದೊಡ್ಡ ದೊಡ್ಡ ಮಂಜಿನ ಮುದ್ದೆಯು ಕವಿಚಿಕೊಳ್ಳುತ್ತಲಿದ್ದುದು ಕಾಣ ಬರುತ್ತಲಿದ್ದಿತು. ದಾರಿಯಲ್ಲಿ ಮರಗಳು ಅತಿವಿರಳ. ಈ ಪ್ರಯಾಣದ ಕೊನೆಯ ಭಾಗದಲ್ಲಿ ೩ ಮೈಲಿಗಳ ದೂರ ಕುದುರೆಯಮೇಲೆ ಬಂದದ್ದಾಯಿತು. ದಾರಿಯಲ್ಲಿ ಒಂದು ಕಣಿವೆಯನ್ನಿಳಿದು, ಅಲ್ಲಿಂದ ಮುಂದೆ ಒಂದು ದೊಡ್ಡ ಪ್ರವಾಹವನ್ನು (ಬೆಟ್ಟದ ಝರಿ) ಮೇಲೆ ಹೇಳಿದ ಮರದ ಉದ್ದಿಯಂತಹ ಸೇತುವೆಯ ಮೇಲಿನಿಂದ ದಾಟಿ, ಅಲ್ಲಿಂದಾಚೆಗೆ ಅರ್ಧಮೈಲಿಯಷ್ಟು ದೂರ ಒಂದು ದಿಣ್ಣೆಯನ್ನು ಹತ್ತಿ ಶಿಬಿರವನ್ನು ಸೇರಿದುದಾಯಿತು. ಸಾಧಾರಣವಾಗಿ ಎರಡು ಎಕರೆಯಷ್ಟು ವಿಸ್ತಾರವುಳ್ಳ ಸಮಭೂಮಿಯ ಮೇಲೆ ಡೇರೆಗಳು ಹಾಕಲ್ಪಟ್ಟಿದ್ದವು. ಶಿಬಿರಕ್ಕೆ ಹತ್ತಿರದಲ್ಲಿಯೇ ಇರುವ ಬೂದಿ ಗ್ರಾಮವು, ಗುಡ್ಡದ ಇಳಿಜಾರು ಪ್ರದೇಶದಲ್ಲಿ ಸೊಗಸಾಗಿರುತ್ತ, ದೂರದಲ್ಲಿ ನಿಂತು ನೋಡುವವರಿಗೆ, ಕೃಷಿಯಿಂದ ಬೆಳೆದ ಬೆಳೆಯ ಸೊಗಸಂಬೀರುತ್ತ ಅತ್ಯಂತ ರಮಣೀಯವಾಗಿ ಕಾಣುವುದು. ಡೇರೆಗಳನ್ನು ಹಾಕಿದ್ದ ಪ್ರದೇಶದ

ಸುತ್ತಲೂ, ಒರಟು ಕಲ್ಲುಗಳನ್ನು ಒಂದರಮೇಲೆ ಒಂದನ್ನು ಪೇರಿಸಿ, ಗೋಡೆಯಂತೆ ೪ ಅಡಿಗಳ ಎತ್ತರ ಕಟ್ಟಲ್ಪಟ್ಟಿರುವ ಪೌಳಿ (Compound wall) ಇದ್ದಿತು. ಇದರ ಹೊರಗಡೆ ಸಣ್ಣದೊಂದು ತೊರೆ, ಈ ತೊರೆಯ ನೀರನ್ನೇ ಶಿಬಿರದಲ್ಲಿ ಉಪಯೋಗಿಸಿದುದು. ಈ ಬಿಡಾರದಲ್ಲಿ ಹೀಗೆ ನೀರಿನ ಅನುಕೂಲ ಇದ್ದಿತು. ಹಿಂದೆ ಕೆಲವೆಡೆಯಲ್ಲಿ ಒಂದು ಮೈಲಿಗೆ ಸ್ವಲ್ಪ ಹೆಚ್ಚು ಕಡಮೆಯಾದಷ್ಟು ದೂರದಿಂದ ನೀರನ್ನು ಹೊತ್ತುತರಬೇಕಾಗಿದ್ದಿತು. ಪೇರಾಗಳ ಪ್ರಾಂತ್ಯದಲ್ಲಿ ನಿಂತು ನೇಪಾಳದ ಕಡೆಗೆ ನೋಡಿದರೆ ಬೆಟ್ಟದಮೇಲೆ ಮಂಜಿನ ಮುದ್ದೆಗಳು ಸುರಿದುಬಿದ್ದಂತೆ ಕಾಣುತ್ತಲಿದ್ದವು, ಕೆಲವು ಸಣ್ಣಪುಟ್ಟ ಮರಗಳೂ ಕಾಣುತ್ತಿದ್ದವು. ಬಿಡಾರದ ಸುತ್ತಲೂ ಹೂವುಗಳಿಂದ ಒಡಗೂಡಿದ ಬೇಕಾದಷ್ಟು ಕಾಡುಗಿಡಗಳಿದ್ದವು, ಈ ಗಿಡಗಳ ಹೆಸರುಗಳು ಅಲ್ಲಿನ ಸ್ಥಳೀಯರಿಗೆ ತಿಳಿದಿದ್ದಿತೋ ಏನೋ, ನಮಗೆ ತಿಳಿಯದು, ಸೃಷ್ಟಿಕರ್ತನಿಗೆ ಮಾತ್ರ ಗೊತ್ತು. ಈ ದಿನ ಮಧ್ಯಾಹ್ನ ೪ ಘಂಟೆಯವರೆವಿಗೂ ಬಿಸಿಲು ಒಳ್ಳೆಯ ಪ್ರಖರವಾಗಿತ್ತು. ತರುವಾಯ ಮೋಡವು ಕವಿದುಕೊಂಡು ತಂಡಿ ಹವಾ ಪ್ರಾರಂಭವಾಯಿತು. ಮುಸ್ಸಂಜೆಯ ವೇಳೆಗೆ ಮೋಡವೆಲ್ಲಾ ಕಳೆದು ನೇಪಾಳದಕಡೆಯಿಂದ ಮಂಜುಕವಿದುಕೊಂಡಿರುವ ಕೆಲವುಗಿರಿಶಿಖರಗಳು ರಮ್ಯವಾಗಿ ಕಾಣಲು ಅವಕಾಶವಾಯಿತು. ಬೂದಿಗ್ರಾಮವು ಸಮುದ್ರಮಟ್ಟಕ್ಕಿಂತಲು ೯,೬೦೦ ಅಡಿಯ ಎತ್ತರದಲ್ಲಿರುವುದು.

ಜುಲೈ ೧೨ ನೆಯ ದಿನ ಪ್ರಾತಃಕಾಲ ೫ ಘಂಟೆಗೆ ಮಹಾಸ್ವಾಮಿಯವರ ಪಾಳೆಯವು ಬೂದಿಗ್ರಾಮ ಪ್ರದೇಶವನ್ನು ಬಿಟ್ಟು ಗರ್ಬಯಾಂಗ್ (Garbayang) ಕಡೆಗೆ ಪ್ರಯಾಣವನ್ನು ಬೆಳೆಯಿಸಿತು. ಪ್ರಯಾಣವು ಒಂದು ಮೈಲಿಯದೂರ ಜರಿಗಿದನಂತರ ಬಹು ಕಡಿದಾಗಿರುವ ತಿರುವುಗಳಲ್ಲಿ ಸುಮಾರು ೨ ಮೈಲಿಗಳದೂರ ಕುದುರೆಗಳಮೇಲೆ ಬಂದು, ಅಲ್ಲಿಂದ ಮಟ್ಟಸ ಪ್ರದೇಶವನ್ನು ಸೇರಿ, ಸಾಧಾರಣವಾದ ನಿಮ್ನ ಪ್ರಾಂತ್ಯಕ್ಕೆ ೨ ಮೈಲಿಗಳಷ್ಟು ದೂರ ಇಳಿದು ಒಟ್ಟು ೫ ಮೈಲಿಗಳ ಪ್ರಯಾಣವನ್ನು ಮಾಡಿ ೭-೩೦ ಘಂಟೆಗೆ ಗರ್ಬಯಾಂಗನ್ನು ಸೇರಿದ್ದಾಯಿತು. ದಾರಿಯಲ್ಲಿ ಪದೇ ಪದೇ, ಹಳ್ಳಗಳಲ್ಲಿ ಮಂಜು ಕಾಣಿಸುತ್ತಲಿದ್ದಿತು, ಮತ್ತು ಸಾಮಾನ್ಯವಾದಷ್ಟು ಉದ್ದವಾಗಿ ಬೆಳೆದ ದೇವದಾರುಭೇದಜಾತಿಯ ವೃಕ್ಷಗಳು (Fir trees) ದಾರಿಯುದ್ದಕ್ಕೂ ಇದ್ದವು. ಗರ್ಬಯಾಂಗಿನಲ್ಲಿ ವ್ಯಾಪಾರಕ್ಕೆ ಅರ್ಹವಾದ ಮಟ್ಟಸ

ವಾದ ಭೂಮಿಯು ದೇವರದಾಗಿರುವುದು. ಸುತ್ತಮುತ್ತಣ ಪ್ರಾಂತ್ಯದ ಗ್ರಾಮಗಳೆಲ್ಲಕ್ಕಿಂತ ಇದು ದೊಡ್ಡ ಊರು. ಆದರೆ ಊರು ಬಹಳ ಮಲಿನ ಮತ್ತು ಕಶ್ಮಲ. ಜನಸಮುದಾಯವು ಭೋಟಿಯಾ ಮತ್ತು ಸ್ವಲ್ಪ ಜನ ಟಿಬೆಟ ಜನಗಳ ಸಮ್ಮಿಶ್ರ. ಹೆಚ್ಚು ಭಾಗ ಜನಗಳು ಕುರೂಪಿಗಳು ಮತ್ತು ಕೊಳಕರು. ಇಲ್ಲಿ ಒಂದು ಬೌದ್ಧ ಮಠವಿರುವುದು. ಇಲ್ಲಿ ೩೦ ಜನ ಹೆಂಗಸರು ಇರುವರು. ಇವರೆಲ್ಲರೂ ಕರಿಯಾದ ಶಾಲಿನೆಯಿಲ್ಲದೇ ತ್ಯಾಗಿಂಗರಾಗಿರುವರು. ಇವರುಗಳು ಹಾಡುಗಳನ್ನು ಹೇಳುತ್ತ ಮಹಾಸ್ವಾಮಿಯವರಿಗೆ ಸುಸ್ವಾಗತವನ್ನು ಬಯಸಿದರು. ಸುತ್ತಲೂ ವ್ಯವಸಾಯಮಾಡಿದ ಭೂಮಿಯಿರುವ ಮಧ್ಯೆ ಮಟ್ಟಸವಾದ ಪ್ರದೇಶದಲ್ಲಿ ಡೇರಾಗಳನ್ನು ಹಾಕಿತ್ತು, ಕಣಿವೆ ಬುಡದಲ್ಲಿ ಹರಿಯುತ್ತಲಿರುವ ಕಾಳೀನದಿಯು ಡೇರಾಪ್ರದೇಶಕ್ಕೆ ಚನ್ನಾಗಿ ಕಾಣುತ್ತಿತ್ತು. ಪ್ರಾತಃಕಾಲಗಳಲ್ಲಿ ಇಲ್ಲಿನ ಹವಾ ಪ್ರಕೃತಿಯು 50°F ಇರುವುದರಿಂದ ಇಲ್ಲಿ ಬಹಳ ಚಳಿ. ಇಲ್ಲಿನ ಔನ್ನತ್ಯವು ಸಮುದ್ರಮಟ್ಟಕ್ಕಿಂತ ೧೨,೬೦೦ ಅಡಿ. ಈ ದಿವಸ ಸಂಧ್ಯಾಕಾಲ ಟಿಬೆಟಿಜನರು ಕೆಲವು ಸ್ಥಳದಲ್ಲಿ ತಯಾರಿಸುತ್ತಿದ್ದ ಉಣ್ಣೆಯ ರತ್ನಕಂಬಳಿಗಳನ್ನೂ, ಮೋಜಾಗಳನ್ನೂ, ಮಾರುವುದಕ್ಕೆ ತಂದಿದ್ದರು. ಮೋಜಾಗಳ ಅಟ್ಟೆಯು ದಪ್ಪವಾದ ತುಪ್ಪದ ಹುರಿಗಳಿಂದ ಮಾಡಲ್ಪಟ್ಟು ೧| ಅಂಗುಲ ದಪ್ಪವಾಗಿರುವುದು. ಮೋಜಾಗಳ ಮೇಲ್ಭಾಗವು ನಾನಾ ಬಣ್ಣದ ಬನಾತು, ಮೊಕಮಲ್ ಮುಂತಾದ ತುಂಡುಗಳಿಂದ ಮಾಡಲ್ಪಟ್ಟು ಮಂಡಿಯವರಿಗೆ ಬರುವಂತಿದ್ದವು. ಕೆಲವು ಮೋಜಾಗಳ ಅಟ್ಟೆಯ ಕೆಳಗಡೆಗೆ ತೆಳುವಾದ ಚರ್ಮವನ್ನೂ ಹಾಕಿರುವರು. ಇಲ್ಲಿನ ಭೋಟಿಯಾ ಜನರು ಮೃತರಾದವರ ಮೂರನೆಯ ದಿವಸ ಕರ್ಮಾಂತರವನ್ನು ಮಾಡುತ್ತಿದ್ದುದು ಕಂಡುಬಂದಿತು. ಸಾಮೆಯನ್ನು ಮೇಲಿಂಕೆಯನ್ನು ಹೊತ್ತಿಸಿ, ಗಂಡಸರು, ಹೆಂಗಸರು ಮತ್ತು ಮಕ್ಕಳೂ ಸ ಉರಿಯ ಸುತ್ತಲೂ ಚಕ್ರಾಕಾರವಾಗಿ ನಿಂತು, ತಮ್ಮ ತಾಳಗಳನ್ನು ಬಾರಿಸುತ್ತ ಲಯಕ್ಕೆ ಸರಿಯಾಗಿ ಕುಣಿಯುವರು ಕುಣಿಯುವವರಿಗೆ ಎಡಗೈಯಲ್ಲಿ ಒಂದು ಗುರಾಣಿ, ಬಲಗೈಯಲ್ಲಿ ಒರೆಯಿಲ್ಲದ ಕತ್ತಿ, ಮಧ್ಯೆ ಮಧ್ಯೆ ಮರದಪಾತ್ರೆಯಿಂದ ಸಣ್ಣ ಬಟ್ಟಲಿಗೆ ಸುರಿದುಕೊಂಡು ಮದ್ಯಪಾನ. ಮದ್ಯವನ್ನು ಬತ್ತ, ಗೋಧಿ, ಜೆಲ್ಲಿ ಅವುಗಳಿಂದ ಇವರೇ ಮಾಡಿಕೊಳ್ಳುವರು. ಇದನ್ನು ಮಾಡಿಕೊಳ್ಳಲು ಸರ್ಕಾರದಿಂದ ಹುಕುಂ ಪಡೆಯಬೇಕಾದ ಅವಶ್ಯಕವಿಲ್ಲ. ಈ ರಾತ್ರಿ ಬಹು ಚಳಿಯಾಗಿತ್ತು.

27

ಶಾಖದ ಉಡುಪುಗಳನ್ನು ಧರಿಸಿರುವ ಆಫೀಸರುಗಳು.

೨೮.

ಶಾಖದ ಉಡುಪುಗಳನ್ನು ಧರಿಸಿರುವ ಸೇವಕರ ಸಮೂಹವು.

ಮುಂದಕ್ಕೆ ಪ್ರಯಾಣಮಾಡಬೇಕಾದ ದಾರಿಯಲ್ಲಿನ ಒಂದು ಸೇತುವೆಯು ದುರಸ್ತಾಗಬೇಕಾಗಿದ್ದ ಪ್ರಯುಕ್ತ, ಜುಲೈ ೧೭ ಮತ್ತು ೧೮ ಈ ಎರಡು ದಿನಗಳಲ್ಲಿಯೂ ಗರ್ಬಿಯಾಂಗಿನಲ್ಲಿಯೇ ನಿಲ್ಲಬೇಕಾಯಿತು. ೧೭ನೆಯ ತಾರೀಖು ಬೆಳಿಗ್ಗೆ ೮ ಘಂಟೆಯಿಂದ ಮಧ್ಯಾಹ್ನ ೩ ವರೆವಿಗೂ ಪ್ರಕಾಶವಾದ ಬಿಸಿಲು, ಅಲ್ಲಿಂದಾಚೆಗೆ ಸ್ವಲ್ಪಹೊತ್ತು ಬಿಸಿಲು ಮತ್ತು ಸ್ವಲ್ಪಹೊತ್ತು ಮಳೆಯುಸೋನೆ. ಈ ದಿನ ತಕ್ಲಾಕೋಟ್ (Taklakot) ನಿಂದ ಕೆಲವುಜನ ಟಿಬೆಟ್‌ದೇಶೀಯರು ಮಹಾಸ್ವಾಮಿಯವರ ಮತ್ತು ಪರಿಜನಗಳ ಪ್ರಯಾಣಕ್ಕಾಗಿ ಕೆಲವು ಕುದುರೆಗಳನ್ನು ತಂದಿದ್ದರು. ಈ ಜನಗಳು ತಲೆಯಕೂದಲನ್ನು ಕತ್ತರಿಸುವುದಿಲ್ಲ. ಮುಂದಲೆಯ ಮಧ್ಯೆ ಕೂದಲನ್ನು ಎರಡುಭಾಗಮಾಡಿ, ದಕ್ಷಿಣದೇಶದ ಹೆಂಗಸರು ಬೈತಲೆಯನ್ನು ತೆಗೆದು ಹೆರಳುಹಾಕಿಕೊಳ್ಳುವಂತೆ, ಹಿಂಭಾಗದಲ್ಲಿ ಜಡೆಕಟ್ಟಿಕೊಳ್ಳುವರು. ಈ ಟಿಬೆಟ್ ದೇಶೀಯರುಗಳಿಗೆ ಮೀಸೆಯಮೇಲೆ ಬಹು ಸ್ವಲ್ಪಕೂದಲು. ಗಡ್ಡದಲ್ಲಿ ಕೂದಲೇ ಇಲ್ಲ. ಇವರುಗಳು ಬಲಗಾಲಿಗಳು ಮತ್ತು ಒಕ್ಕೆ ಪಟ್ಟುಕಟ್ಟಿಕೊಳ್ಳುವರು. ಇವರಲ್ಲದೆ ಮತ್ತೊಬ್ಬ ಟಿಬೆಟ್ ದೇಶೀಯನು ತಕ್ಲಾಕೋಟಿನಿಂದ ಬಂದಿದ್ದನು. ಇವನು ಒಂದು ಗ್ರಾಮದ ಮುಖಂಡ, ಇವನನ್ನು ಸೈನ್ಯದ ಮುಖ್ಯಾಧಿಕಾರಿಯೆಂತಲೂ ಹೇಳುವರು. ಸರ್ಕಾರದವರು ಅಪೇಕ್ಷಿಸಿದಾಗ ಇವನು ಸಾವಿರಜನ ಯುದ್ಧಭಟರನ್ನು ಸಿದ್ಧಪಡಿಸಿಕೊಡಬೇಕು. ಇವನ ಜೊತೆಯಲ್ಲಿ ಮತ್ತೊಬ್ಬ ಟಿಬೆಟ್‌ದೇಶೀಯನು ಬಂದಿದ್ದನು ಈತನು ಐಶ್ವರ್ಯವಂತನೆಂದು ಭಾವಿಸಲ್ಪಟ್ಟಿರುವನಾದಾಗ್ಯೂ ಮೈಮೇಲೆ ಧರಿಸಿದ್ದುದು ಹರಕುಬಟ್ಟೆಗಳು. ಇವರಿಬ್ಬರೂ ಮಹಾಸ್ವಾಮಿಯವರಿಗೆ ಮುಜರೆಮಾಡಿ ಶಿಬಿರದಲ್ಲಿದ್ದ ಜನಸಂಖ್ಯೆ, ಪರಿಜನಗಳಲ್ಲಿದ್ದ ಆಯುಧಗಳ ವಿವರ, ಪ್ರಯಾಣದ ಉದ್ದೇಶ ಇವುಗಳನ್ನು ಕೇಳಿ ತಿಳಿದುಕೊಂಡು ಹೋದರು. ಕೈಲಾಸಕ್ಷೇತ್ರ ಯಾತ್ರೆಗಾಗಿ ಬರುತ್ತಲಿದ್ದ ಕೇವಲ ಶಕ್ತಿಸ್ವತರಾಗಿರುವ ವೃದ್ಧಸ್ತ್ರೀಯಾದ ಸಂಯುಕ್ತಸಂಸ್ಥಾನದ ಸಂಘಾಯ್ (Sanghai U.P.) ರಾಣಿಯವರು ಸಾಯಂಕಾಲ ೬ ಘಂಟೆಯ ಸಮಯದಲ್ಲಿ ಮಹಾಸ್ವಾಮಿಯವರ ಭೇಟಿಯನ್ನು ಪಡೆದರು. ರಾಣಿಯವರ ಪ್ರಯಾಣದ ಅನುಕೂಲತೆಗಳನ್ನು ಒದಗಿಸಿಕೊಡುವವರಾಗಿ ಕುಮಾರ್ ಖಡ್ಗಸಿಂಗ್ ಪಾಲ್‌ದವರೂ ಸಹ ಜೊತೆಯಲ್ಲಿದ್ದರು. ಸೂರ್ಯಾಸ್ತಮಯಕಾಲದಲ್ಲಿ

ಆಕಾಶವು ಸ್ವಚ್ಛವಾಗಿತ್ತು. ಕಣಿವೆಗಳಲ್ಲಿ ನೆಳಲುಬಿದ್ದಿರಲು ಶಿಬಿರದ ಎದ ರಾಗಿ ನೇಪಾಳಸಂಸ್ಥಾನದ ಕಡೆಯಲ್ಲಿರುವ ಕೆಲವು ಹಿಮದಿಂದ ಮುಚ್ಚಲ್ಪಟ್ಟ ಕೋಡುಗಲ್ಲುಗಳು ಪ್ರಜ್ವಲಿಸುತ್ತ ಅದ್ಭುತವಾಗಿ ಕಾಣಿಸಿಕೊಂಡು ಪ್ರಕೃತಿಯ ಸೌಂದರ್ಯದ ಘನತೆಗೆ ದೃಷ್ಟಾಂತರಗಳಾಗಿದ್ದುವು. ಈ ರಾತ್ರಿ ಛಾರಿಯಮ್ಮೇ

ಜುಲೈ ೧೪ನೆಯ ದಿನ ಬೆಳಗ್ಗೆ ವಿಪರೀತ ಚಳಿ. ಪ್ರಾತಃಕಾಲವೆಲ್ಲಾ ಪೂರ್ತಿಯಾಗಿ ಸೋನೆಯಮಳೆ. ಮಹಾಸ್ವಾಮಿಯವರು ಕೆಲವು ಪರಿಜನಗಳೊ ಡನೆ ಕಣಿವೆಗೆ ಇಳಿದು, ನದಿಯದಡದವರೆಗೂ ದಯಮಾಡಿ, ನದಿಯನ್ನು ಪರ ಮರ್ಶಿಸಿ ಚಿತ್ತೈಸಿದರು. ಮಧ್ಯಾಹ್ನ ೧೨ ಘಂಟೆಗೆ ಸ್ನಾನಾಹ್ನಿಕವಾದವು. ಮುಂದಲ ಮಜಲಿಗೆ ಪ್ರಯಾಣಮಾಡಿದರು ಮಧ್ಯಾಹ್ನವೆಲ್ಲ ಬಿಸಿಲಾಗಿದ್ದಿತು

ಜುಲೈ ೧೫ನೆಯ ದಿನ ಪ್ರಾತಃಕಾಲ ೬ ಘಂಟೆಗೆ ಮಹಾಸ್ವಾಮಿಯ ವರ ಪ್ರಯಾಣವು ಗರ್ಬಯಾಂಗಿನಿಂದ ಬೆಳೆದು, ಬೆಳಗ್ಗೆ ೧೦-೧೫ ಘಂಟೆಗೆ ಕಾಲ್‌ಪಾಣಿಗೆ ಎಲ್ಲರೂ ತಲುಪಿದರು. ದಾರಿಯು ೯ ಮೈಲಿಗಳಿರುವುದೆಂದು ಹೇಳ ಲ್ಪಟ್ಟಿರುವುದಾದರೂ ಒಂದೆರಡು ಮೈಲಿಗಳು ಹೆಚ್ಚಾಗಿಯೇ ಇದೆ. ಮೊದಲು ಕಾಳೀನದಿಯದಡಕ್ಕೆ ಅರ್ಧಮೈಲಿಯಷ್ಟು ದೂರ ಇಳಿದುಹೋಗಬೇಕಾಯಿತು. ಈ ದಾರಿಯು ಬಹು ಜಾರಿಕೆ. ಇಲ್ಲಿ ನಡೆದುಕೊಂಡು ಬರುವಾಗ್ಗೆ ಕಾಲಿನಲ್ಲಿದ್ದ ಗುಂಡುತಲೆಯ ಮೊಳೆಗಳನ್ನು ಹೊಡೆದಿದ್ದ ಬೋಡಾಗಳ ಅಟ್ಟೆಗೆ ೨ ಅಂಗು ಲದ ದಪ್ಪಕ್ಕಿಂತಲೂ ಹೆಚ್ಚಾಗಿ ಜಿಗಟುಮಣ್ಣು ಮೆತ್ತಿಕೊಂಡಿದ್ದಿತು ಇಲ್ಲಿಂದ ಮುಂದಕ್ಕೆ ಕಾಳೀನದಿಯದಡದಲ್ಲಿ ಒಂದು ಮೈಲಿಯಷ್ಟು ದಾರಿ ಮುಂದಲದಾರಿಯು ಇಕ್ಕಟ್ಟಾಗಿಯೂ ಅಪಾಯಕರವಾಗಿಯೂ ಇದ್ದುದ ರಿಂದ ನದಿಯನ್ನು ದಾಟಿ ನೇಪಾಳದಕಡೆಗೆ ಹೋಗಬೇಕಾಯಿತು. ಇಲ್ಲಿ ವಿಶೇಷ ಕಡಿದಾದ ದಿಣ್ಣೆಗಳಾಗಲೀ ಹಳ್ಳಗಳಾಗಲೀ ಇಲ್ಲದೇ ಮಟ್ಟಸವಾದ ದಾರಿ ಯೇ ಹೆಚ್ಚಾಗಿದ್ದು ಸುಖವಾಗಿದ್ದಿತು. ಈ ಪ್ರಾಂತ್ಯದಲ್ಲಿ ಕಲ್ಲುಮಿಶ್ರವಾದ ದಾರಿಯು ಇರುವುದಾಗಿದ್ದರೆ ಇದು ವಿನಹ ಬೇರೆಯಿಲ್ಲ. ಅನೇಕ ಸ್ಥಳಗಳಲ್ಲಿ ತಟ್ಟುಗಳನ್ನು ಹತ್ತಿಹೋಗುವುದಕ್ಕಾಗಲೀ, ಡೋಲಿಯಿಂದ ಹೋಗುವುದ ಕ್ಕಾಗಲೀ ಅವಕಾಶವಿರಲಿಲ್ಲ. ಗಾಳಿಯು ವಿರಳವಾದ್ದರಿಂದ ಹೆಚ್ಚು ನಡೆಯು ವುದೂ ಆಯಾಸವನ್ನುಂಟುಮಾಡುತ್ತಲಿದ್ದಿತು. ನೇಪಾಳಪ್ರಾಂತ್ಯದಲ್ಲಿ ಕಾಳೀ ನದಿಯ ಬಲಭಾಗದಲ್ಲಿ ಸುಮಾರು ಎರಡು ಫರ್ಲಾಂಗ್ ಅಗಲವುಳ್ಳ ಒಂದು [illegible]

ದಾರಿಯ ಉಭಯಪಾರ್ಶ್ವಗಳಲ್ಲಿಯೂ ಹೇರಳವಾಗಿ ನಾನಾಜಾತಿಯ ಮರಗಳಿದ್ದುವು. ಇವುಗಳು ಹಿಂದೆ ರಾಣೀಖೇತಿನಲ್ಲಿದ್ದ ಮರಗಳಷ್ಟು ಉನ್ನತವಾಗಿ ಬೆಳೆದಿರಲಿಲ್ಲ. ಈ ಮರಗಳಲ್ಲದೆ ಕಾಡುಗುಲಾಬಿಯ ಗಿಡಗಳೂ ಕೂಡ ಇದ್ದುವು. ಇವೆಲ್ಲ ಬಿಳಿಯ ಹೂವುಗಳುಳ್ಳವುಗಳು, ಇನ್ನೂ ಇತರ ಸಣ್ಣ ಗಿಡಗಳು ಬೇಕಾದಷ್ಟು ಇದ್ದುವು ಕೆಲವು ಬಿಳಿಯ ಹೂವು, ಕೆಲವು ಹಳದಿ, ಕೆಲವು ಕೆಂಪು ಮತ್ತೆ ಕೆಲವು ನೀಲಿ. ಹೀಗೆ ಪುಷ್ಪಗಳು ರಮ್ಯವಾಗಿದ್ದುವು. ಕುರೀತ್ಯಾ ೫ ಮೈಲಿಗಳ ದೂರ ಹೋಗಿ ನೇಪಾಳಸಂಸ್ಥಾನವನ್ನು ಬಿಟ್ಟು ಕಾಳೀನದಿಯನ್ನು ಪುನಃ ದಾಟಿ ಈ ಕಡೆಗೆ ಬರುವಲ್ಲಿ ಎಲ್ಲರೂ ಬಳಲಿಹೋಗಿದ್ದರು. ಕಾಳ್‌ಪಾಣಿ ಬಳಿಯಲ್ಲಿ ಮತ್ತೆ ಕಾಳೀನದಿಯನ್ನು ದಾಟಿದೆವು.

ಕಾಳೀನದಿಯ ದಡದಮೇಲೆ ಸುಮಾರು ೫೦ ಅಡಿ ಎತ್ತರದಲ್ಲಿ ಸಮನಾದ ನೆಲದಮೇಲೆ ಡೇರಾಗಳು ಸಿದ್ಧವಾಗಿದ್ದುವು. ಡೇರಾಗಳ ಹಿಂಭಾಗದಲ್ಲಿ ಒಂದು ಚಿಲುಮೆ (Spring) ಯಿಂದ ಹೊರಟ ಸಣ್ಣ ಕಾಲುವೆಯು ಡೇರಾಗಳ ಮುಂಭಾಗಕ್ಕೆ ತಿರುಗಿ ಹರಿಯುತ್ತಲಿದ್ದಿತು. ಇದು ಕಾಳೀನದಿಯ ಮೂಲವೆಂದು ಭಾವಿಸಲ್ಪಟ್ಟಿರುವುದು. ಈ ಕಾಲುವೆಯು ಹರಿಯುತ್ತಲಿದ್ದುದರಿಂದ ಪರಿವಾರದ ಜನಗಳಿಗೆ ಸುಲಭವಾಗಿ ನೀರು ದೊರೆಯುವ ಅವಕಾಶವಾಯಿತು. ಈ ಮಜಲಿಗೆ ಬರುವ ದಾರಿಯಲ್ಲಿ ನಮ್ಮ ಡಾಕ್ಟರ್ ರಂಗಾಚಾರ್ಯರವರು ಏರಿ ಬರುತ್ತಲಿದ್ದ ಕುದುರೆಯು ಜಾರಿ ಮೊಣಕಾಲೂರಿ ಬಿದ್ದಿತು. ತಡಿಯು ಎಡಕ್ಕೆ ಜಾರಿತು. ರಿಕಾಬಿನಲ್ಲಿದ್ದಂತೆಯೇ ಡಾಕ್ಟರರವರ ಕಾಲು ಜಾರಿತು. ಪುಣ್ಯವಶಾತ್ ಸೇವಕರು ಬಂದು ಸಹಾಯಮಾಡಿದರು. ಕಾಲು ಸಿಕ್ಕಿಕೊಂಡಿದ್ದ ತೊಡಕನ್ನು ಡಾಕ್ಟರವರೇ ಬಿಡಿಸಿಕೊಂಡು ಎದ್ದರು. ದೈವಾನುಗ್ರಹದಿಂದ ಅಪಾಯವೇನೂ ಆಗಲಿಲ್ಲ. ಡೇರಾಗಳ ಪ್ರದೇಶದಲ್ಲಿ ಮಧ್ಯಾಹ್ನವೆಲ್ಲ ಬಿಸಿಲು ಪ್ರಜ್ವಲಿಸುತ್ತಲಿದ್ದಿತು. ಹಿಂದಲ ಶಿಬಿರದಲ್ಲಿದ್ದಷ್ಟು ಚಳಿಯು ಇಲ್ಲಿ ತೋರಲಿಲ್ಲ. ಬೆಟ್ಟಗಳ ಮೇಲ್ಭಾಗದ ಕೊಳ್ಳಗಳಲ್ಲೆಲ್ಲಾ ನೀರು ಧೂಳಿ (Snow) ತುಂಬಿಕೊಂಡಿದ್ದಿತು. ಬರುವಾಗ ದಾರಿಯಲ್ಲಿಯೂ ಕೆಲವೆಡೆಗಳಲ್ಲಿ ದಪ್ಪ ದಪ್ಪ ಮಂಜಿನಗಡ್ಡೆಗಳ ಮೇಲೆಯೇ ನಡೆದುಕೊಂಡು ಬರಬೇಕಾಯಿತು. ಡೇರಾಗಳ ಒತ್ತಿನ ಕಣಿವೆಯ ಬುಡದಲ್ಲಿ ಹರಿಯುತ್ತಲಿದ್ದ ತೊರೆಯು ಕಾಳೀನದಿಯ ಉಪನದಿಗಳಲ್ಲೊಂದೆಂದು ಹೇಳುವ. ಕಾಳ್‌ಪಾಣಿಯು ಸಮುದ್ರಮಟ್ಟಕ್ಕಿಂತ ೧೩,೦೦೦ ಅಡಿ ಎತ್ತರದಲ್ಲಿ

ರುವುದು. ಇಲ್ಲಿ ಪರಿಜನಗಳು ಕೆಲವರಿಗೆ ಸ್ವಲ್ಪಸ್ವಲ್ಪ ಗೇರಿ ಬರುತ್ತಲಿದ್ದಿತ್ತ ಇವತ್ತಿಗೆ ಅಧಿಕ ಆಷಾಢಮಾಸವು ಮುಗಿಯಿತು.

ಜುಲೈ ೧೬ನೆಯ ತಾರೀಖು ಬೆಳಗ್ಗೆ ೩ ಘಂಟೆಗೆ ಸಕಲರೂ ಎದ. ಪ್ರಯಾಣಕ್ಕೆ ಸಿದ್ಧರಾದರು. ೪-೩೦ ಘಂಟೆಗೆ ಸಾಮಾನುಗಳನ್ನು ಹೊತ ಹೇಸರಕತ್ತೆಗಳು ಮುಂದಲ ಮಜಲಿಗೆ ಹೊರಟವು. ಮಹಾಸ್ವಾಮಿಯವ ಪರಿಜನಗಳೊಡನೆ ೫ ಘಂಟೆಗೆ ಪ್ರಯಾಣಬೆಳಸಿ ೮ ಅಥವ ೬ ಮೈಲಿಗ ದೂರದಲ್ಲಿರುವುದೆಂದು ಭಾವಿಸಲ್ಪಟ್ಟಿರುವ ಸಿಯಾಂಗ್‌ಛಂ (Siang chun ಎಂಬ ಪ್ರದೇಶಕ್ಕೆ ೭-೪೫ ಘಂಟೆಗೆ ಚಿತ್ತೈಸಿದರು. ಅರ್ಧದಾರಿಯವ ತಕ್ಕಷ್ಟು ಮಟ್ಟಸವಾಗಿತ್ತು. ಆದರೆ ದಾರಿಯಲ್ಲಿ ಬರಿಯ ಹುಡಿಗಲ್ಲುಗ ಗಜ್ಜುಗದ ಗಾತ್ರದಿಂದ ಸೋಟ್ಟೆಯ ತೆಂಗಿನಕಾಯಿ ದಪ್ಪದವರೆಗೂ ತುಂ ಷ್ಟವು. ಇದರಿಂದಲೇ ಪ್ರಯಾಣವು ಸಾಗದೇ ನಿಧಾನಕ್ಕೆ ಅವಕಾಶವಾಯಿ

ದಾರಿಯಲ್ಲಿ ಅನೇಕವಾದ ಗುಡ್ಡದತೊರೆಗಳನ್ನು ದಾಟಿದುದಾಯಿತ ಮರಗಳು ಇಲ್ಲವೇ ಇಲ್ಲ. ಆದರೆ ಗಿಡಗಳ ಪೊದರುಗಳಿದ್ದವು. ಗುಡ್ಡಗಳೆಲ ಬರಿಯದು. ಅಲ್ಲಲ್ಲಿ ಸ್ವಲ್ಪ ಸ್ವಲ್ಪ ಹಸರುಹುಲ್ಲು ಬೆಳೆದ ತುಂಡುನೆಲಗ ಕಾಣುತ್ತಲಿದ್ದವು. ಮಂಜಿನ ಕಣಗಳಂತು (Snow) ಸಿದ್ಧ. ಪ್ರತ್ಯಕ್ಷ ವ ಹೊಂದಿರಲಿಲ್ಲ. ದಾರಿಯ ಕೊನೆಯಭಾಗ ೨|| ಮೈಲಿಯಷ್ಟುದೂರ ಬೆಟ್ಟದಿಂದ ಇಳಿದುಬರುವ ತೊರೆಯನ್ನು ಎಡೆಬಿಡದೇ ಅನುಸರಿಸಿ ಬರ ದಾಗಿದ್ದಿತು. ಕೊನೆಗೆ ೧೦ ಎಕರೆಗಳಷ್ಟು ವಿಸ್ತೀರ್ಣವುಳ್ಳ ಒಂದು ಇಳಿಜಾ ಪ್ರದೇಶವನ್ನು ಸೇರುವವರೆವಿಗೂ ಇದೇ ದಾರಿಯೇ, ಇಲ್ಲಿಯೇ ಮಜಲುಮಾ ಮ್ಮದು. ಸಿಯಾಂಗ್‌ಛಂ ಎಂಬುವುದು ಮಜಲುಮಾಡುವುದಕ್ಕೆ ಪ್ರದೇಶ ವಿನಹ ಇಲ್ಲಿ ಮನೆಗಳೂ ಇಲ್ಲ, ಕೃಷಿಮಾಡಿದ ಭೂಮಿಯೂ ಇಲ್ಲ. ಇ ಬರುವಾಗ್ಯೆ ದಾರಿಯ ಒಂದೆಡೆಯಲ್ಲಿ ಭೋಟಿಯಾಜನರು, ಹೋರಿಮ ಹೇಸರಕತ್ತೆಗಳ ಗುಂಪು, ಕುರಿಯ ಮತ್ತು ಆಡಿನ ಮಂದೆ, ಕತ್ತೆಗಳ ಮ ಇವುಗಳೊಡನೆ ಇಳಿದುಕೊಂಡಿದ್ದವು. ಈ ಪ್ರದೇಶವು (ಸಿಯಾಂಗ್‌ಛ ಸಮುದ್ರಮಟ್ಟಕ್ಕಿಂತ ೧೫,೦೦೦ ಅಡಿ ಎತ್ತರ. ವಿಪರೀತ ಚಳಿ, ಹೇರ ಸ್ವಲ್ಪ ಆಚೆಯಲ್ಲಿಯೇ ಮಂಜುಕವಿದವನೆಲ. ಪರಿಜನಗಳಲ್ಲಿ ಒಬ್ಬರಾದ ಕ ರಂಗಯ್ಯನೆಂಬುವರಿಗೆ ಇಲ್ಲಿನ ಔನ್ನತ್ಯದ (Elevation) ದೆಸೆಯಿ ಬಾಧಿತರಾದಂತವರಾಗಿ ಇವರು ಧೈರ್ಯಗುಂದಿದರು. ಇವರನ್ನು ಮುಂದಲ

ಲಿಗೆ ಕರೆದುಕೊಂಡು ಹೋಗುವುದು ಅಪಾಯಕರವಾಗಿ ತೋರಿಬಂದುದರಿಂದ ಇವರನ್ನು ಧಾರ್ಚೂಲಾಪ್ರದೇಶದ ರಾಮಕೃಷ್ಣತಪೋವನದಲ್ಲಿನ ವೈದ್ಯಶಾಲೆಗೆ ಹಿಂದಕ್ಕೆ ಕಳುಹಿಸಿಕೊಟ್ಟದ್ದಾಯಿತು. ಈ ದಿನ ರಾತ್ರಿಯೆಲ್ಲಾ ವಿಪರೀತ ಚಳಿಯ ಬಾಧೆ. ಶಾಖದ ಉಡುಪುಗಳನ್ನು ಧರಿಸಿದ್ದಾಗ್ಯೂ ಸಹಿಸಲಾರದಷ್ಟು ಚಳಿ. ಪರಿಜನಗಳಲ್ಲಿ ಅನೇಕರಿಗೆ ತಲೆಯು ಭಾರವಾಗಿದ್ದಿತು. ರಾತ್ರಿಯೆಲ್ಲಾ ನಿದ್ರೆಗೆ ಅವಮಾನ ವಿನಹ ಪುರಸ್ಕಾರವಿಲ್ಲ, ಇದರ ಜೊತೆಗೆ ರಾತ್ರಿ ಪೂರಾ ಸೋನೆಯ ಮಳೆ, ಬೆಳಗಾದನಂತರವೂ ಮಳೆಯೇ.

ಜುಲೈ ೧೭ನೆಯ ಪ್ರಾತಃಕಾಲ ಮುಂದಲ ಮಜಲನ್ನು ಕುರಿತು ಪ್ರಯಾಣಮಾಡಲು ೪ ಘಂಟೆಗೆ ಎದ್ದದ್ದಾಯಿತು. ಚಳಿಯಿಂದ ಪ್ರಾತರೋಚಿತಕಾರ್ಯಗಳನ್ನು ನೆರವೇರಿಸುವುದೂ ಕೂಡ ಬಹುಕಷ್ಟವಾಗಿ ತೋರಿತು. ಸರ್ವರೂ ೫-೩೦ ಘಂಟೆಗೆ ಸಿಯಾಂಗ್‌ಘಂ ಪ್ರಾಂತ್ಯವನ್ನು ಬೀಳ್ಕೊಂಡು ಅಶ್ವಾರೂಢರಾಗಿ ಮುಂದಕ್ಕೆ ಪ್ರಯಾಣವನ್ನು ಬೆಳೆಯಿಸಿದರು. ದಾರಿಯು ಏರಿಕೆ, ಗಾಳಿಯ ಹೊಡೆತ, ಮಂಜುತುಂಬಿಕೊಂಡಿರುವ ಪ್ರದೇಶಗಳೇ ಹೆಚ್ಚು. ನೆಲದಮೇಲಣ ಮಂಜಿನಕಣಗಳಲ್ಲಿ ಕುದುರೆಗಳ ಗೊರಸುಗಳು ಮದಳುಗಳಲ್ಲಿ ಹೂತುಕೊಳ್ಳುವಂತೆ ಒಂದು ಅಡಿಗಿಂತಲೂ ಹೆಚ್ಚಾಗಿ ಹೂಳಿ ಹೋಗುತ್ತಲಿದ್ದುವೆಂದರೆ ಅತಿಶಯೋಕ್ತಿಯಲ್ಲ. ಈ ವಿಧವಾದ ದಾರಿಯಲ್ಲಿ ಮಳೆಯು ಸುರಿಯುತ್ತಲಿರಲು ಪ್ರಯಾಣವು ಜರಿಗಿ "ಲಿಪುಲೇಕ್‌ಪಾಸ್" (Lipulekh Pass) ಎಂಬ ದಿಣ್ಣೆಯ ಪ್ರದೇಶವನ್ನು ಸೇರಿದುದಾಯಿತು. ಇದರ ಔನ್ನತ್ಯವು ಸಮುದ್ರಮಟ್ಟಕ್ಕಿಂತ ೧೬,೭೫೦ ಅಡಿ. ಇಷ್ಟು ಔನ್ನತ್ಯ ಪ್ರಾಂತ್ಯವಾದ್ದರಿಂದ ಎಲ್ಲರಿಗೂ ಏನೋ ಒಂದು ವಿಧವಾದ ವಿಲಕ್ಷಣಭಾವವಾಗಿದ್ದಿತು. ನಿರುಚ್ಛ್ವಾಸವಾಗಿ, ಎಲ್ಲರಿಗೂ ಇನ್ನು ಸ್ವಲ್ಪ ಶ್ರಮವನ್ನಾದರೂ ಸಹಿಸಲು ಶಕ್ತಿಯಿಲ್ಲದಂತಾಯಿತು. ಮೇಲ್ಕಂಡ ದಿಣ್ಣೆಯು ನೋಡುವವರ ಮನಸ್ಸಿಗೆ ಅಪೂರ್ವವಾದ ಭಯದಿಂದೊಡಗೂಡಿದ ದೈವಭಕ್ತಿಯನ್ನುಂಟು ಮಾಡುವುದಲ್ಲದೆ ಸರ್ವಶಕ್ತನಾದ ಜಗದೀಶ್ವರನ ಅದ್ಭುತವಾದ ಮಹಿಮೆಯನ್ನು ಸ್ಮರಣೆಗೆ ತರುತ್ತಲಿದ್ದಿತು.

ಈ ದಿಣ್ಣೆಯ ಮೇಲ್ಭಾಗವನ್ನೇರಿದಾಗ್ಯೂ, ಪ್ರಯಾಣಿಕರುಗಳಿಗೆ ಪೂರ್ತಿಯಾಗಿ ಗಾಂಭೀರ್ಯವಾದ ನಿಶ್ಶಬ್ದವಿನಹ ಬೇರೆಯೇನೂ ಇಲ್ಲದಂತಿದ್ದಿತು. ಆದರೆ ಅಲ್ಲಿನ ಸ್ಥಳೀಯರಿಗೆ ಇದನ್ನು ದಾಟುವುದು ಲಕ್ಷ್ಯವೇ ಇರಲಿಲ್ಲ

ದಿನ್ನೆಯ ನೆತ್ತಿಯನ್ನು ದಾಟಿದಮೇಲೆ ಒಂದುಮೈಲಿಯಷ್ಟು ದೂರ ಕಡಿದಾದ ದಾರಿಯಲ್ಲಿ ಇಳಿದುಬಂದು, ಒಂದು ಹೆಚ್ಚು ಅಗಲವಿಲ್ಲದ ಕಣಿವೆಯನ್ನು ತಲಪಿದ್ದಾಯಿತು. ಈ ಕಣಿವೆಯಲ್ಲಿ ಎರಡು ಪಾರ್ಶ್ವದ ಬೆಟ್ಟಗಳಮೇಲ ಪ್ರಾಂತ್ಯದಿಂದ ಮಂಜಿನಗಡ್ಡೆಗಳು ಕರಗಿ ಹರಿದುಬರುವ ಝರಿಗಳನೇಕಗಳಿಂದ ಕೂಡಿ ಹರಿಯುತ್ತಲಿರುವ ಒಂದು ತೊರೆಯು ಕಾಣುತ್ತಲಿರುವುದು.

ದಾರಿಯು ಮೇಲ್ಕಂಡ ತೊರೆಯನ್ನು ಅನುಸರಿಸಿ ಬರುವುದಾಗಿದ್ದಿತು ಕಣಿವೆಯು ಅಗಲವಾಗಿರುವುದಾಗಿ ಪ್ರಯಾಣಿಕರ ಮನಸ್ಸಿಗೆ, ತಾವು ಮತ್ತೆ ಮೈದಾನಕ್ಕೆ ಬಂದಿರುವಂತೆ ಭಾಸವಾಗುತ್ತಲಿದ್ದಿತು. ಇಲ್ಲಿನ ಬೆಟ್ಟಗಳೆಲ್ಲಾ ಮರಗಳಿಲ್ಲದ ಬರಿಯಬೆಟ್ಟಗಳು. ಆಕಾರದಲ್ಲಿ ನಮ್ಮ ನೀಲಗಿರಿಯ (Ooty) ಸೀಮೆ ಭಾಗವನ್ನು ಹೋಲುತ್ತಲಿದ್ದಾಗ್ಯೂ ಇವುಗಳಮೇಲೆ ಹುಲ್ಲು ಕೂಡ ಬೆಳೆದಿರಲಿಲ್ಲ. ಮಾರ್ಗದಲ್ಲಿ ಬಿಸಿಲು ಜೋರು. ೧೨ ಮೈಲಿಗಳ ಪ್ರಯಾಣವು ಆಗಿ ಬೆಳಗ್ಗೆ ೧೦-೩೦ ಘಂಟೆಗೆ ತಾಕ್ಲಾಕೋಟ್ (Taklakot ಎಂಬ ಮಜಲನ್ನು ಸೇರಿದುದಾಯಿತು. ಮೇಲೆಹೇಳಿದ ಲಿಪುಲೇಕ್ ಪಾಸ್ ಎಂಬ ದಿನ್ನೆಯು ಸಾರ್ವಭೌಮಸರ್ಕಾರದ ಆಳ್ವಿಕೆಗೆ ಸೇರಿದ ಭರತಭೂಮಿಯನ್ನೂ ಟಿಬೆಟ್‌ದೇಶವನ್ನೂ ವಿಂಗಡಿಸುವ ಎಲ್ಲೆಯಾಗಿರುವುದು. ಮೊದಲು ಹೇಳಿದ ತೊರೆಯಿಂದ ದಿವ್ಯವಾದ ಒಂದು ಕಾಲುವೆಯನ್ನು ತೆಗೆದಿರುವರು. ಈ ಕಾಲುವೆಯ ಕೆಳಗೆ ಅನೇಕ ಎಕರೆಗಳ ಭೂಮಿಯು ನೀರಾವರಿಯಿಂದ ಬೆಳೆಯನ್ನು ಕೊಡುವವು. ತಾಕ್ಲಾಕೋಟ್ ಗ್ರಾಮವು ತಕ್ಕಷ್ಟು ದೊಡ್ಡದು. ಇಲ್ಲಿನ ಮನೆಗಳನ್ನು ಮಣ್ಣು ಮತ್ತು ಕಲ್ಲುಗಳಿಂದ ಕಟ್ಟಿ, ಮೇಲ್ಭಾವಣಿಗೆ ಮರದ ಜಂತಿಗಳನ್ನೂ ಸರಗಳನ್ನೂ ಹೊದಿಸಿ, ಅದರಮೇಲೆ ಮಣ್ಣು ಹೊದಿಸಿರುವರು. (ಅಂದರೆ ಮಣ್ಣುಮಾಳಿಗೆಯ ಮನೆಗಳು) ಟಿಬೆಟ್‌ದೇಶದ ಹಳ್ಳಿಯವರು ಅತ್ಯಂತ ಕುರೂಪಿಗಳು ಮತ್ತು ಕೊಳಕರು, ಇವರುಗಳ ಮೈಬಣ್ಣವು ಸಾಮಾನ್ಯ ಕಾಮವರ್ಣದಿಂದ ಅಷ್ಟೇ ಕಪ್ಪು ಬಣ್ಣದವರಿಗೂ ನಾನಾಬಗೆಯಾಗಿರುವುದು. ಇವರ ವಿಶೇಷಾಲಂಕಾರವು ಎಡಗಿವಿಯಲ್ಲಿ ಒಂದು ದೊಡ್ಡ ಕುಂಡಲಿ. ತಾಕ್ಲಾಕೋಟ್ ಗ್ರಾಮವು ಕರ್ನಾಲಿ (Karnali river) ಎಂಬ ನದಿಯ ಬಲಭಾಗದ ದಡದಮೇಲೆ ಕಟ್ಟಲ್ಪಟ್ಟಿರುವುದು. ನದಿಯ ಎಡದ ದಡದಲ್ಲಿ ವಿಸ್ತಾರವಾದ ಮಟ್ಟಭೂಮಿಯಮೇಲೆ ಶ್ರೀಮನ್ಮಹಾರಾಜರವರ ಬಿಡಾರಕ್ಕಾಗಿ ಡೇರಾಗಳು ಹೊಡೆಯಲ್ಪಟ್ಟಿದ್ದವು. ಬಿಡಾರದ ಒಂದುಭಾಗ

ತಾಕ್ಲಾ ಕೋಟಿನ ಬೌದ್ಧಮಠ.



ಸಿಯಾಂಗ್ ಛಂನಲ್ಲಿನ ಶಿಬಿರ.

ಜಿಂಕಲ್ಲಿ ಗಾಂಟಿಯ ದೃಶ್ಯವು.

ಟಿಬೆಟ್‌ದೇಶದ ಸೈನ್ಯಾಧಿಕಾರಿ ಮತ್ತು
ಆತನ ಸ್ನೇಹಿತ

ಜಂಗ್‌ಪೋರವರು ಮತ್ತು ಅವರ ಮಗಳು

ಶ್ರೀಮನ್ಮಹಾರಾಜರವರು, ಜಂಗ್‌ಬಹಾದೂರರವರು ಮತ್ತು ಪರಿಜನಗಳೊ ಸಹ

೧ ಜಂಗ್‌ಬಹಾದೂರರವರ ಸೇವಕ
೨ ಸೇಠ್ ಎಸ್. ಗೋಪಾಲರಾಜು
೩. ತಾಶೀಲ್ದಾರ್ ಶ್ರೀ ಪ್ರತಾಪಸಿಂಗ್ ರವರು
೪ ಶ್ರೀ ... ನಂಜರಾಜ ಬಹದ್ದೂರ್ ರವರು
೫ ಕರ್ನಲ್ ... ರವರ
೬ ಶ್ರೀ ... ಬಹದ್ದೂರ್ ರವರು
೭ ರಾ|| ಎಸ್. ರಂಗಾಚಾರ್ಯರವರು
೮. ಟಿಬೆಟ್ ದೇಶದ ಸೇವಕ
೯ ಶ್ರೀಮನ್ಮಹಾರಾಜರವರು
೧೦. ಟಿಬೆಟ್ ದೇಶದ ಅಧಿಕಾರಿ
೧೧ ಜಂಗ್‌ಬಹಾದೂರರ ಮಗಳು
೧೨ ಜಂಗ್‌ಬಹಾದೂರರವರು

57

೧ ೨ ೩ ೪ ೫ ೬ ೭ ೮ ೯ ೧೦

ಶ್ರೀಮನ್ಮಹಾರಾಜರವರು, ಜಂಗ್‌ಪಾರ್ರವರು ಮತ್ತು ಪರಿವಾರ.

೧. ಜಂಗ್‌ಪಾರ್ರವರ ಸೇವಕ
೨. ಶ್ರೀಯುತ ಪ್ರತಾಪ್‌ಸಿಂಗ್‌ರವರು
೩. ಮೇಜರ್ ಎಸ್. ಗೋಪಾಲರಾಯರು
೪. ಡಾಕ್ಟರ್ ಎ. ರಂಗಾಚಾರ್ಯರವರು
೫. ಟಿಬೆಟ್ ದೇಶದ ಅಧಿಕಾರಿ
೬. ಶ್ರೀಯುತ ನಂದಾರಾಮ್ ಸಿಂಗ್‌ರವರು (ಗಬರ್ಯಾಂಗಿನ ವ್ಯಾಪಾರಿ)
೭. ಶ್ರೀಮನ್ಮಹಾರಾಜರವರು
೮. ಜಂಗ್‌ಪಾರ್ರವರ ಮಗಳು
೯. ಜಂಗ್‌ಪಾರ್ರವರು
೧೦. ಕುಮಾರ್ ಬಿಕ್ರಮ್‌ಸಿಂಗ್‌ಪಾಲ್‌ರವರು

೨೪.

ತಾಕ್ಲಕೋಟೆಯ ಬಾದ್ಶಮಠ ಮತ್ತು
ಜಂಗ್‌ಪಾರ್ಲರದ ಶಾಸನ

ಒತ್ತಿನಲ್ಲಿಯೇ ಸುಮಾರು ೩೦೦ ಅಡಿ ಎತ್ತರದ ಒಂದು ದಿಣ್ಣೆ. ಈ ದಿಣ್ಣೆಯ ಮೇಲೆ "ಜಂಗ್‌ಪಾನ್" ರವರ (ಟಿಬೆಟ್ ದೇಶದಲ್ಲಿನ ಜಿಲ್ಲಾಧಿಕಾರಿಗೆ ಜಂಗ್‌ಪಾಕ್ ಎಂದು ಹೆಸರು.) ವಾಸಸ್ಥಳ. ಇದು ಒಳ್ಳೆಯ ಗಿರಿದುರ್ಗದಂತೆ ಕಾಣುವುದು. ಇದಕ್ಕೆ ಸೇರಿದಂತೆಯೇ ೧ ಬೌದ್ಧಸನ್ಯಾಸಿಗಳ ಮಠವು ಇರುವದು.

ಈ ದಿನ ಸಾಯಂಕಾಲ ಜಂಗ್‌ಪಾಕ್‌ರವರು ಬಿಡಾರಕ್ಕೆ ಬಂದು, ಮಹಾಪ್ರಭುಗಳ ಸಂದರ್ಶನವನ್ನು ಪಡೆದು, ಟಿಬೆಟ್ ದೇಶದ ಕೆಲವು ರತ್ನಗಂಬಳಿಗಳನ್ನು ಕಾಣಿಕೆಯಾಗಿ ಕೊಟ್ಟರು ಭೋಟಿಯಾ ದ್ವಿಭಾಷಿಗನ ಸಹಾಯದಿಂದ ಮಹಾಸ್ವಾಮಿಯವರಿಗೂ, ಜಂಗ್‌ಪಾಕ್‌ರವರಿಗೂ ಸಂಭಾಷಣೆ ನಡೆಯಿತು. ಆಗ್ಯೆ ಈ ಗುಂಪಿನ ಬಿಂಬಚಿತ್ರವು (Group Photo) ತೆಗೆಯಲ್ಪಟ್ಟಿತು. ಈತನು ಬರುವಾಗ್ಯೆ ಜೊತೆಯಲ್ಲಿ ಈತನ ೧೪-೧೫ ವರ್ಷ ವಯಸ್ಸಿನ, ಮಗಳು ಬಂದಿದ್ದಳು. ಇವರುಗಳಿಗೆ ಬಿಡಾರದಲ್ಲಿನ ಪರಿಜನಗಳಲ್ಲಿದ್ದ ದುರ್ಬೀನುಗಳು (Binoculars) ಮತ್ತು ಛಾಯಾಕರ್ಷಕಯಂತ್ರಗಳು (Cameras) ಬಹಳ ಆಸಕ್ತಿಯನ್ನುಂಟುಮಾಡಿದವು. ಈತನ ಶರೀರವು ಉದ್ದವಾಗಿಯೂ, ಒಳ್ಳೆಯ ಮೈಗಟ್ಟುಳ್ಳದ್ದಾಗಿಯೂ, ಮತ್ತು ಈತನ ಅಧಿಕಾರ ದರ್ಪಸೂಚಕವಾದ ಗಾಂಭೀರ್ಯವುಳ್ಳದ್ದಾಗಿಯೂ ಇರುವುದು. ಬಿಡಾರದ ಸುತ್ತಣ ಬೆಟ್ಟಗಳಮೇಲೆ ಹಿಮವು ಸ್ಪಷ್ಟವಾಗಿ ಕಾಣುತ್ತಲಿದ್ದಿತು. ಈ ಪ್ರಾಂತ್ಯಗಳಲ್ಲಿ ಮರಗಳೂ ಇಲ್ಲ, ಹುಲ್ಲುಕೂಡ ಇಲ್ಲ. ಇಲ್ಲಿನ ಜನರು ಜವೆಗೋಧಿ, ಬಟಾಣಿ ಮತ್ತು ಇನ್ನು ಕೆಲವು ಧಾನ್ಯಗಳನ್ನು ಬೆಳೆಯುವರು. ಬಹುಜನ ಟಿಬೆಟ್ ದೇಶೀಯರು ತಮ್ಮ ತಮ್ಮ ಜಪಚಕ್ರಗಳನ್ನು ತಿರುಗಿಸುತ್ತಿದ್ದರು. (ಇವರೆಲ್ಲರೂ ಬೌದ್ಧಮತೀಯರು, ಇವರು ಮಾಡುವ ದೇವತಾಪ್ರಾರ್ಥನೆಯ ಜಪಗಳಿಗೆ ಮಂತ್ರ ಪುನಶ್ಚರಣೆಯಿಲ್ಲ. ಬುಗುರಿಯತರದ ಒಂದು ತಿರುಗುವ ಚಕ್ರ. ಇದರೊಳಗೆ ಜಪದಮಂತ್ರ ಮತ್ತು ಸಂಖ್ಯೆ ಸಹ ಬರೆದಿರುವುದು. ಈ ಚಕ್ರವನ್ನು ದಾರದಿಂದ ಎಳೆದರೆ ಗರಗರನೆ ತಿರುಗುವುದು ಅದು ಎಷ್ಟು ಸುತ್ತು ತಿರುಗಿದರೆ ಒಳಗೆ ಬರೆದಿರುವ ಸಂಖ್ಯೆಗಳಲ್ಲಿ ಅಷ್ಟಾವರ್ತಿ ಜಪಮಾಡಿದಂತೆ ಭಾವನೆ. ಕೆಲವು ಮನೆಗಳಮೇಲೆ ಈ ವಿಧವಾದ ಚಕ್ರಗಳನ್ನು ಕಟ್ಟಿರುವರು. ಗಾಳಿಯಿಂದ ಈ ಚಕ್ರಗಳು ತಿರುಗಿದರೂ, ಮನೆಯ ಯಜಮಾನನು ಜಪಮಾಡಿದಂತಾಗುವುದೆಂದು ಭಾವಿಸುವರು.) ಅಲ್ಲಲ್ಲಿ ಕೆಮ್ಮಣ್ಣು ಬಳಿದ ಕಲ್ಲುಗಳನ್ನು ಒಂದರಮೇಲೆ ಒಂದನ್ನು ಪೇರಿಸಿರುವರು. ಈ ವೇದಿಕೆಯ

ಮಧ್ಯೆ ಮಧ್ಯೆ ಕೆಲವು ಕಡ್ಡಿಗಳನ್ನು ಸಿಕ್ಕಿಸಿರುವರು. ಈ ಕಡ್ಡಿಗಳಿಗೆ ವಿವಿ ವರ್ಣದ ಚಿಂದಿಯಬಟ್ಟೆಗಳನ್ನು ಸುತ್ತಿರುವರು. ಕೆಲವುಕಲ್ಲುಗಳಮೇಲೆ ಬೌ ಮತೀಯವಾದ ದೇವಪ್ರಾರ್ಥನಾ ಮಂತ್ರಗಳನ್ನು ಕೆತ್ತಿರುವರು. (ಇದ ಭೂತಪ್ರೇತಪಿಶಾಚಾದಿಗಳ ಬಾಧೆಯುಂಟಾಗದಂತೆ ಮಾಡಿಕೊಂಡಿರು ದಿಗ್ಬಂಧನ) ತಾಕ್ಲಾಕೋಟಿನ ಔನ್ನತ್ಯವು ಸಮುದ್ರಮಟ್ಟಕ್ಕಿಂತ ೧೩,೧೦ ಅಡಿಗಳಾಗಿದ್ದಾಗ್ಯೂ, ಹಿಂದಿನ ಮಜಲಿನಲ್ಲಿದ್ದ ಚಳಿಯಲ್ಲಿ ಅರ್ಧಪಾ ಚಳಿಯೂ ಇಲ್ಲಿ ಇಲ್ಲ, ರಾತ್ರಿಮಾತ್ರ ಸಾಧಾರಣವಾಗಿ ಚಳಿ.

ಜುಲೈ ೧೮ ನೆಯ ತಾರೀಖು ಬೆಳಗ್ಗೆ, ಬಿಸಿಲು ಪ್ರಕಾಶವಾಗಿಯೂ ಚುರುಕಾಗಿಯೂ ಇತ್ತು. ಸಕಲರೂ ಹೆಚ್ಚು ಶಾಖದ ಉಡುಪುಗಳನ್ನು ತೆಗೆ ಕಿಟ್‌ಬ್ಯಾಗಿಗೆ ಸೇರಿಸಿದರು. ಪ್ರಾತಃಕಾಲ ೮ ಘಂಟೆಗೆ ಜಂಗ್‌ಪಾನ್‌ರ ಮನೆಗೆ ಪ್ರಯಾಣ. ೩೦೦ ಅಡಿಯ ಎತ್ತರದ ಗುಡ್ಡ ಹತ್ತುವುದಕ್ಕೆ ಪ್ರಾರಂ ವಾಯಿತು. ಉದ್ದಕ್ಕೂ ಕಾಲುದಾರಿ, ದಾರಿಯಲ್ಲವೂ ತಿರುವುಮುರಿವುಗಳ ಜಾರಿಕೆ, ಕಲ್ಲುಮಿಶ್ರವಾದ ಹುಡಿಮಣ್ಣುನೆಲ. ಮಣ್ಣು ಜಾರಿ ಜಾರಿ, ಗುಡ್ಡ ಕೊನೆಗಳಲ್ಲೆಲ್ಲಾ ಪೊಳ್ಳುನೆಲ, ಅಲ್ಲಲ್ಲಿ ಗುಹೆಯಂತೆ ವಾಸಸ್ಥಳಗಳು, ಇ ಗಳಿಗೆ ಚಿಕ್ಕಚಿಕ್ಕ ಇಕ್ಕಟ್ಟಾದ ಬಾಗಿಲುಗಳು. ಈ ಬಾಗಿಲುಗಳು ಗಿಳಿದುಗ ಕೊತ್ತಳಗಳಂತೆ ಕಾಣುವವು ಹೀಗಿರುವ ದಾರಿಯಿಂದ, ಗುಡ್ಡದ ತುದಿ ರಲು ಜಂಗ್‌ಪಾನ್‌ರವರು ಮಹಾಸ್ವಾಮಿಯವರನ್ನು ಎದುಗೊಂಡು, ಮಹ ಸ್ವಾಮಿಯವರನ್ನೂ, ಪರಿಜನಗಳನ್ನೂ ಒಂದು ಸಣ್ಣದಾರಿಯಿಂದ ತಮ ಮಂದಿರಕ್ಕೆ ಕರೆದೊಯ್ದರು. ಹೆಬ್ಬಾಗಿಲು ಒಂದನ್ನು ಪ್ರವೇಶಮಾಡಿದ ಒಡ ಯೇ, ಕೆಲವು ಮೆಟ್ಟಿಲುಗಳನ್ನು ಹತ್ತಿ, ಒಂದು ವಿಜಾತೀಯವಾದ ಹಜಾರ ಪ್ರವೇಶ. ಅಲ್ಲಿ ಜಂಗ್‌ಪಾನ್‌ರವರ ತಟ್ಟುಗಳನ್ನು ಕಟ್ಟಿದ್ದರು. ಒಂದು ಸಣ್ಣ ಕಟ್ಟೆಯಮೇಲೆ ಕ್ರೂರಸ್ವಭಾವವುಳ್ಳ ಟಿಬೆಟ್‌ದೇಶದ ನಾಯಿಯೊಂದನ್ನು ಕಟ್ಟಿತ್ತು. ಹೊಸಜನಗಳನ್ನು ಕಂಡೊಡನೆಯೇ, ತಾನು, ಅನ್ಯ ಮೃಗವಾ ದೇಶಭೇದವಾದಾಗ್ಯೂ, ಜಾತಿಭೇದವಿಲ್ಲ, ನಾಯಿಯೇನಿಜವೆಂದು ಕೂಗಿಕೂ ಹೇಳುತ್ತ ಹೊಸ ಅತಿಥಿಗಳ ಪರಿಚಯವನ್ನು ಮಾಡಿಕೊಳ್ಳಲು ಸಮೀಪ ಬರುವುದಕ್ಕೆ ಪ್ರಯತ್ನಿಸುತ್ತ, ತನ್ನನ್ನು ಅಡ್ಡಿಮಾಡುತ್ತಲಿದ್ದ ಹ ದೊಡನೆ ಜಗಳವಾಡುತ್ತಲಿದ್ದಿತು. ನಾಯಿಯೇನೋ ಬಲವಾದದ್ದೇ, ಕ ಕಪ್ಪುಬಣ್ಣ, ಟಾಸಿಗಾಲು, ಜೊಂತೆಕೂದಲು, ದಪ್ಪದಾದ ತಲೆ, ವಿಶಾಲ

ಹೆಗ್ಗೆವು ನಾಯಿಗೆ ಸೋಲಲಿಲ್ಲ. ಅತಿಥಿಗಳೆಲ್ಲರೂ ಅಲ್ಲಿಂದ ಮುಂದೆ, ಇನ್ನೊಂದು ಸಾಲಾಗಿರುವ ಮೆಟ್ಟಿಲುಗಳನ್ನು ಹತ್ತಿ, ಗೇರೆಯೊಂದು ಹಜಾರವನ್ನು ಪ್ರವೇಶಿಸಿದರು. ಇದು ಕೆಸ್ತ್ರಿಲದ ಸಾತ್ಯಮಂದಿರ, ಇಲ್ಲಿ ಕೆಲವುಜನ ಕಮ್ಮಾರರೂ ಮತ್ತು ಬೆಳ್ಳಿಯ ಕೆಲಸದವರೂ ಸಹ ಮರದಜೋಡಿಸಿದ ಕೆಲಸವನ್ನು ಮಾಡುತ್ತಲಿದ್ದರು. ಇವರೆಲ್ಲರೂ ಸಂಪೂರ್ಣವಾಗಿ ಕೊಳಕರು. ಇವರಲ್ಲೊಬ್ಬನು ಬಹು ಭಯಂಕರಾಕಾರನಾಗಿ, ಮಹಾಭಾರತವನ್ನು ಓದಿದವರಿಗೆ ಹಿಡಿಂಬನನ್ನೂ, ರಾಮಾಯಣವನ್ನು ಓದಿದವರಿಗೆ ಮಹೋದರನನ್ನೂ ಸ್ಮೃತಿಪಥಕ್ಕೆ ತರುತ್ತಲಿದ್ದನು. ಅಲ್ಲಿಂದ ಮುಂದಕ್ಕೆ ಜಂಗ್‌ಪಾನರವರು ಅತಿಥಿಗಳನ್ನು ತಮ್ಮ ಸ್ವಂತಕೊಠಡಿಗೆ ಕರೆದೊಯ್ದರು. ಅಲ್ಲಿ ಎಲ್ಲರನ್ನೂ ಕೂರಿಸಿ ಉಪಚರಿಸಿದರು. ಕೊಠಡಿಗೆ ಸೂರ್ಯನು ತನ್ನ ಬೆಳಕನ್ನು ಬಿಡಲು ಅಪ್ಪಣೆಯಿಲ್ಲ. ಸರ್ವವ್ಯಾಪಕನಾದ ವಾಯುದೇವನು ಎಲ್ಲಿಂದ ಒಳಹೊಗುವನೋ ಅಲ್ಲಿಂದಲೇ ಹಿಂದಕ್ಕೆ ಬರುವುದಕ್ಕಾಗಿ ಒಂದೇ ಒಂದು ಗವಾಕ್ಷವಿರುವುದು. ಕೊಠಡಿಯ ಒಂದು ಭಾಗದಲ್ಲಿ ಬುದ್ಧದೇವನ ಒಂದು ವಿಗ್ರಹವು ಮತ್ತೂ ಕೆಲವು ಇತರ ವಿಗ್ರಹಗಳೂ ಇರುವವು. ಒತ್ತಿನಲ್ಲಿ ಮರದ ಹಂತಗಳು. ಹಂತದಮೇಲೆ ಕೆಲವು ಬೆಳ್ಳಿಯ ಬಟ್ಟಲುಗಳು ಮತ್ತು ಕಂಚಿನಪಾತ್ರೆಗಳು. ಇವುಗಳಲ್ಲಿ ನೀರುತುಂಬಿರುವುದು. ಘಂಟೆಗಳೇ ಮೊದಲಾದ ಪೂಜಾದ್ರವ್ಯಗಳು ಇರುವವು. ಇವುಗಳನ್ನೆಲ್ಲಾ ಅಂದವಾಗಿ ಜೋಡಿಸಿಟ್ಟಿದ್ದರು. ಕೊಠಡಿಯ ಗೋಡೆ ಹಸರುಬಣ್ಣ, ಗೋಡೆಯಮೇಲೆ ಹಾವು, ಗಿಣಿ, ಜಿಂಕೆ, ಮುಂತಾದ ಆಕಾರಗಳನ್ನು ಚಿತ್ರಿಸಿದ್ದರು. ಈ ಪ್ರದೇಶವೆಲ್ಲ ಹಳಸಿದ ಬೆಣ್ಣೆಯ ಮತ್ತು ಹಳೆಯ ತುಪ್ಪದವಾಸನೆ. ಕೊಠಡಿಯಲ್ಲಿ ಒಂದು ವೇದಿಕೆಯಮೇಲೆ ಟಿಬೆಟ್‌ದೇಶದ ರತ್ನಗಂಬಳಿಯನ್ನು ಹಾಸಿ, ಮೆತ್ತೆಯನ್ನಿಟ್ಟು ಕಲ್ಪಿಸಿರುವ ಹಿತಕರವಾದ ಉನ್ನತಾಸನವು ಜಂಗ್‌ಪಾನರಿಗೋಸ್ಕರ ಸಿದ್ಧವಾಗಿದ್ದಿತು. ಜಂಗ್‌ಪಾನರು ಕುಳಿತುಕೊಂಡಿದ್ದ ಪ್ರದೇಶದ ಹಿಂಭಾಗದ ಗೋಡೆಯಮೇಲೆ ಬೇಟಾದೇಶದಲ್ಲಿ ತಯಾರ್ಮಾಡಿದ ತುಪಾಕಿ ಮುಂತಾದ ಆಯುಧಗಳನ್ನು ತಗಲುಹಾಕಿದ್ದಿತು. ಅಲ್ಲಿ ಒಂದು ಸಣ್ಣದಾದ ತಂತ್ರಿಯ ವಾದ್ಯವಿಶೇಷವಿದ್ದಿತು. ಜಂಗ್‌ಪಾನರು ಇದನ್ನು ತೆಗೆದುಕೊಂಡು ಟಿಬೆಟದೇಶೀಯವಾದ ಕೆಲವು ರಾಗಗಳನ್ನು ಬಾರಿಸಿದರು. ಮಹಾಸ್ವಾಮಿಗಳವರು, ಒಂದು ಶಬ್ದಪ್ರತಿಧ್ವನಿಯಂತ್ರವನ್ನು, (His Master's Voice

Model 101, Gramaphone with automatic Stop) ಶ್ರೀ ಇಂದುಬಾಲಾದವರ ಮೂರು ರಿಕಾರ್ಡುಗಳನ್ನೂ, ಒಂದು ಡುಬ್ಬಿನನ್ನೂ ಜಂಗ್ ಬಹದ್ದೂರನಿಗೆ ಪಾರಿತೋಷಕವಾಗಿ ದಯಪಾಲಿಸಿದರು. ಶ್ರೀಮನ್ಮ ರಾಜರವರ ಹಸ್ತದಲ್ಲಿದ್ದ ಒಂದು ಮಲಕ್ಕಾದೊಣ್ಣೆ, ಬಗ್ಗಿದಹಿಡಿ ಯುಂಡಕೆತ್ತಿದ ಮೊಹರಾದವುಳ್ಳ ನಾಯಿಯ ತಲೆಯಂತಹ ಕೈಹಿಡಿ ಳ್ಳದ್ದು, ಇದರ ವಿಷಯದಲ್ಲಿ ಜಂಗ್ ಬಹದ್ದೂರರು ತಮ್ಮ ವಿಶೇಷ ಆಸ ಯನ್ನು ತೋರಿಸಿ ಮಾತನಾಡಿ, ಕೊನೆಗೆ ಮಹಾಸ್ವಾಮಿಯವರ ಕ ದಿಂದ ದೊಣ್ಣೆಯನ್ನು ತೆಗೆದುಕೊಂಡು ತಾವು ಪಡೆದನಂತರ ಬಹು ಸಂತೋ ಭರಿತರಾದರು. ಈ ಮನೆಯಲ್ಲಿ ಬರುವಾಗ್ಯೆ ಮಧ್ಯೆ ಒಂದುಕಡೆ ದಾರಿಯ ಕತ್ತಲೆಯುಮಯವಾದ ಒಂದು ಕೋರಣಿಯು ಇದ್ದಿತು. ಇದನ್ನು ಅಪರಾ ಗಳನ್ನು ನಿರ್ಬಂಧದಲ್ಲಿಡುವ ಸ್ಥಳವನ್ನಾಗಿ (Lock-up) ಉಪಯೋಗಿ ತ್ತಿದ್ದರು. ಇದನ್ನು ಯಾರು ನೋಡಿದಾಗ್ಯೂ, ರಕ್ತವು ನೀರಾಗಿಹೋಗು ವಂತೆ ಭಯಾನಕವಾಗಿದ್ದಿತು. ತರುವಾಯ ಜಂಗ್ ಬಹದ್ದೂರರು ಅತಿಥಿಗಳನ ತಮ್ಮಮನೆಯ ಒತ್ತಿನಲ್ಲಿರುವ ದೊಡ್ಡದಾದ ಬೌದ್ಧಯತಿಗಳ ಮಠಕ್ಕೆ ಕರೆ ಕೊಂಡು ಹೋದರು. ಮಠವು ಅನೇಕ ಅಂತಸ್ತಿನಿಂದೊಡಗೂಡಿ ಎತ್ತ ವಾಗಿದ್ದಿತು. ಎಲ್ಲವೂ ಮಣ್ಣಿನಭಾವಣಿಯವೇ, ಗಾಳಿಯಾಡುವುದಕ್ಕೂ ಹೊ ಹೋಗುವುದಕ್ಕೂ ಅನುಕೂಲಿಸುವಂತೆ ರಂಧ್ರಗಳು, ಹೊಗೆ ಮತ್ತು ಗಾಳಿ ಚಲನೆಗೆ ಅವಕಾಶಕೊಟ್ಟು ರಂಧ್ರಗಳಮೇಲೆ ಮುಚ್ಚಳಗಳು. ಜಲ್ಲಿ ಮತ್ತು ಜೇಡಿಯಮಣ್ಣು ಸೇರಿಸಿ ತಟ್ಟಿದನೆಲ. ಈ ಮಠದಲ್ಲಿ ಒರಟು ಕೆತ್ತನೆಯಕೆಲ ಮಾಡಿದ ಕಂಭಗಳಿಂದೊಡಗೂಡಿದ ಒಂದು ಒಳ್ಳೆಯ ವಿಸ್ತಾರವಾದ ಹಜಾ (Hall)ಇಲ್ಲಿ ಬೌದ್ಧಗುರುಗಳು (Lamas) ಕುಳಿತುಕೊಳ್ಳುವುದಕ್ಕಾಗಿ ಪ ಗೆಯಿಂದ ಮಾಡಲ್ಪಟ್ಟ ಆಸನಗಳು. ಬಾಲಸನ್ಯಾಸಿಗಳು ಕುಳಿತುಕೊಳ್ಳುವು ಕ್ಕೂ ಅಥವ ಊಟಮಾಡುವುದಕ್ಕೂ ಅನುಕೂಲಿಸುವಂತೆ ಉದ್ದವಾಗಿಯು ಕಿರಿಗೆಲವಾಗಿಯೂ ಇರುವ ಮೆತ್ತೆಗಳನ್ನು ಸಾಲುಸಾಲಾಗಿ ಹರಡಿಸಿದ್ದರು

ಅಲ್ಲಿ ಒಂದು ಎತ್ತರವಾದ ಪ್ರದೇಶದಲ್ಲಿನ ಪವಿತ್ರಸ್ಥಾನದಲ್ಲಿ, ಕುಳಿ ಕೊಂಡಿರುವ ಭಾವದ, ಬುದ್ಧದೇವನ ಮೃಣ್ಮಯವಿಗ್ರಹ. ಇದು ಬಂಗಾ ಬಣ್ಣಚಿತ್ರದಿಂದೊಡಗೂಡಿ, ಅತಿಮನೋಹರವಾದ ಮುಖಭಾವವುಳ್ಳದ್ದು ಮತ್ತೊಂದು ಬೌದ್ಧರ ದೊಡ್ಡಗುರುವಿನ ವಿಗ್ರಹ. ಮುಂಭಾಗದಲ್ಲಿ ಸಿಕ್ಕಿ

ತಾಕ್ಲಾ ಕೋಟಿನ ಬೌದ್ಧಮಠದಲ್ಲಿ ಮುಖ್ಯ ಯತಿಯು ಪೂಜೆಮಾಡುತ್ತಿರುವುದು.



ತಾಕ್ಲಾ ಕೋಟಿನ ಮಠದಲ್ಲಿ ಸನ್ಯಾಸಿಗಳು ದೇವತಾಪ್ರಾರ್ಥನೆ ಮಾಡುತ್ತಿರುವುದು.

ತಾಕ್ಲಾ ಕೋಟಿನಲ್ಲಿ ಟಿಬೆಟ್‌ದೇಶೀಯರ ನರ್ತನ.

ಮತ್ತು ಚಿತ್ರಾಳಿಯ ಬಟ್ಟಲುಗಳು ಮುಂತಾದ ಅನೇಕ ಪೂಜೋಪಕರಣ ಗಳು, ತುಂಬಿದ ಎಣ್ಣೆ ಮತ್ತು ಬತ್ತಿಗಳಿಂದ ಉರಿಯುತ್ತಲಿರುವ ದೀಪಗಳು, ತಮಟೆಗಳು, ತಾಳಗಳು, ಇವೇ ಮುಂತಾದ ಪರಿಗಣಿಸಲಸಾಧ್ಯವಾದಷ್ಟು, ಅಸಂಖ್ಯಾತವಾದ ವಸ್ತುಗಳಿರುವವು. ಇವಲ್ಲದೆ ಮನುಷ್ಯನ ತಲೆಯ ಬುರುಡೆ ಯ ಮೇಲಣಚಿಪ್ಪಿನಿಂದ ಮಾಡಿದ ಒಂದು ಬಟ್ಟಲಿರುವುದು. ಇದರ ಒಳಭಾ ಗಕ್ಕೆ ಬೆಳ್ಳಿಯ ತಗಡನ್ನು ಬಡಾಯಿಸಿರುವುದು. ಇದರಲ್ಲಿ ನೀರು ತುಂಬಿರು ವುದು, ಇದನ್ನು ಉದ್ಧರಣೆಯಿಂದ ತುಂಬಿ ಭಕ್ತಾದಿಗಳಿಗೆ ತೀರ್ಥವೆಂದು ಕೊಡುವರು. ಹಜಾರದ ಸುತ್ತಲೂ, ಬೆಸಿಗೆಗಳಮೇಲೆ ಅವುಗಳ ಪುಸ್ತಕ ಭಂಡಾರಗಳಿರುವವು ಎಲ್ಲಾ ಕಡೆಯೂ ಕತ್ತಲೆ, ಬೆಣ್ಣೆಯ ಗುಮ್ಮುವಾಸನೆ. ಬೌದ್ಧಯತಿಗಳೂ ಮತ್ತು ಅವರ ಅನುಯಾಯಿಗಳೂ ಸಹ ಸಹಜವಾಗಿ ಬಹು ಕೊಳಕರು ಅಂದರೆ, ಸ್ವಭಾವವನ್ನು ಹೇಳಿದಂತೆಯೇ ವಿನಹ ಅವರನ್ನು ಆಕ್ಷೇಪಿಸಿದಂತಲ್ಲ. ಇವರ ಉಡುಪು ಮಾಸಲು ಬಣ್ಣ ಅಥವ ಹುಣಸೆಯ ಬೀಜ ದಬಣ್ಣದ ನಿಲುವಂಗಿ (ಕಪನಿ) ಮತ್ತು ಒಂದು ನಡುಕಟ್ಟು, ತಲೆಯು ನುಣ್ಣ ನೆಯಬೋಳು. ಯತಿಗಳು (Lamas) ಕಾಲಿಗೆ ಮೋಜಾಗಳನ್ನು ಹಾಕಿ ಕೊಂಡು ದೇವರಮನೆಗೂ ಪ್ರವೇಶಿಸುವರು. ನಾಯಿಗಳು ಅಡ್ಡಿಯಿಲ್ಲದೆ ಎಲ್ಲಾ ಕಡೆಗಳಲ್ಲಿಯೂ ಸ್ವತಂತ್ರವಾಗಿ ಸಂಚರಿಸುವವು. ಅತಿಥಿಗಳೆಲ್ಲರೂ ಮಠಕ್ಕೆಹೋಗಿ, ಬೌದ್ಧರ ಮುಖ್ಯಯತಿಯ ಬಿಡಾರವನ್ನು ಸೇರಿದರು. ಆತನು ಬಹಳ ವಯೋವೃದ್ಧನು. ಬಹುಪ್ರೀತಿಯಿಂದ ಎಲ್ಲರನ್ನೂ ಕುಶಲಪ್ರಶ್ನೆ ಮಾಡಿದನು. ಬೌದ್ಧರನ್ನಾಳುವ ಟಿಬೆಟ್ಟಿನ ಜಗದ್ಗುರುವಿನಿಂದ (Dalay Lama) ಆಶೀರ್ವದಿಸಿ ಬಂದಿದ್ದ, ಒಣಗಿದ ಪಾಚಿಯಂತಹ ಪದಾರ್ಥ ಮತ್ತು ಸಾಂಬ್ರಾಣಿಯ ಧೂಪ ಮತ್ತು ಒಂದು ತುಂಡು ತೆಳುವಾದ ಮಸ ಲಿನ್ ಬಟ್ಟೆ ಇವುಗಳನ್ನು ಪ್ರಸಾದವಾಗಿ ಕೊಟ್ಟನು. ಮಠದಲ್ಲಿನ ಪ್ರತಿ ಯೊಂದು ಕತ್ತಲೆಯ ದಾರಿಯಲ್ಲಿಯೂ, ಅನಿರ್ವಚನೀಯವಾಗಿ ಪ್ರಾರ್ಥನಾ ಚಕ್ರಗಳು ಮತ್ತು ತಮಟೆಗಳು. ಸಂಚರಿಸುವ ಭಕ್ತರುಗಳೆಲ್ಲರೂ ಚಕ್ರಗ ಳನ್ನು ತಿರುಗಿಸುವುದು, ಮತ್ತು ತಮಟೆಗಳನ್ನು ತಟ್ಟುವುದು. ಒಟ್ಟು ಪ್ರದೇ ಶವೆಲ್ಲವೂ, ಗಾಳಿಯ ಚಲನೆ ರಹಿತವಾಗಿ ಕೊಳಕಿನ ಮಯ. ಇಂತಹ ನಾತವಕ್ಕೆ ಕೆಯಲ್ಲಿ ಪಾರಮಾರ್ಥಿಕತೆಯು ಎಲ್ಲಿ ಹುದುಗಿಕೊಂಡಿರುವುದೋ ಊಹಿಸು ವುದಕ್ಕೆ ಬಾರದು. ಈ ಕಟ್ಟಡಗಳೆಲ್ಲವೂ ಮುಗಿದನಂತರ, ಸಕಲರೂ ಜಂಗಾ

ಪಾರ್ಕರವರನ್ನು ಬೀಳ್ಕೊಂಡು, ಮಠದಿಂದ ೧೧ ಘಂಟೆಗೆ ಹೊರಟು ಪಾ
ಸನ್ನು ಕಳೆದಿಳಿದು, ಜ್ವಲಿಸುವ ಬಿಸಿಲಿನಲ್ಲಿ ಶಿಬಿರವನ್ನು ಸೇರಿದರು. ಈ ದಿ
ಸಾಯಂಕಾಲ ೫ ಘಂಟೆಯ ವೇಳೆಗೆ ಜಂಗ್ಪಾರ್ಕರವರಿಂದ ಕಳುಹಿಸಲ್ಪ
ಟಿಬೆಟ್‌ದೇಶದ ನರ್ತಕರು ಬಂದರು. ಇವರಲ್ಲಿ ಇಬ್ಬರು ಹೆಂಗಸರು, ಉ
ವರು ಗಂಡಸರು. ಇವರ ಉಡುಪು ಆಶ್ಚರ್ಯಕರವಾದುದು. ಗಂಡಸರು ಪ
ವಾಡಹಾಕಿಕೊಂಡು, ಚೀಲದಂತಿರುವ ಷರಾಯಿಗಳನ್ನು ಧರಿಸಿರುವರು. ಸ
ತದಲ್ಲಿ ಸುತ್ತುವಾಗ್ಯೆ ಈ ಷರಾಯಿಗಳು ಉಬ್ಬಿಕೊಂಡು ಕಾಣುವವು. ಹೆ
ಸರು ನಡುವಿಗೆ ಗೊಂಡೆಗಳನ್ನು ಕಟ್ಟಿಕೊಂಡಿರುವರು. ಇವರು ಕುಣಿ
ಸುತ್ತುತಿರುಗಿದರೆ, ಈ ಗೊಂಡೆಗಳೂ ಮತ್ತು ಇವರ ನೆರಿಸೆರಗುಗಳೂ ಕೆ
ಯಂತೆ ಕಾಣುವವು. ಈ ನರ್ತನದ ಜೊತೆಗೆ ತಮಟೆಯ ಶಬ್ದ ಮತ್ತು ಓ
ಹೆಂಗಸು ಬಡಿಯುತ್ತಲಿರುವ ತಾಳ. (ಚಿತ್ರ್ತಾಳೆಯಿದು) ನರ್ತನವು ಹೊ
ನಪ್ರ ಮಹಾಸ್ವಾಮಿಯವರ ಇದಿರಿಗೆ ಅರ್ಧ ಘಂಟೆಯಕಾಲ ವಿಜೃಂಭಿಸಿ
ನರ್ತನದಲ್ಲಿ ಶೃಂಗಾರರಸವು ಅದೃಶ್ಯ, ಶಾಂತಿರಸಪ್ರವೇಶಕ್ಕೆ ಅವ್ಪಕಾಶ
ಹಾಸ್ಯರಸವು ಮಾತ್ರ ಮಿತಿಮೀರಿ ಕಡಿಯಾಗಿ ಹೋಗಿರುವುದು. ರೌದ್ರ
ವು ತೋರಿಬಾರುತ್ತಲಿರುವುದು, ನವರಸಗಳಲ್ಲಿ ಉಳಿದವುಗಳು ನರ್ತನ
ಷಡ್ರಸಗಳಾಗಿ ಹೋಗಿದ್ದವು. ನಾಟಕಗಳಿಗೆ ನವರಸಗಳಜೊತೆಗೆ ವಾತ್ಸ
ರಸವೆಂಬುವುದು ಹತ್ತನೆಯರಸ. ಈ ನರ್ತನಕ್ಕೆ ನೀರಸದ ಜೊತೆಗೆ
ರವು ಹತ್ತುವರಸ. ಒಟ್ಟಿನಲ್ಲಿ ಟಿಬೆಟ್‌ದೇಶೀಯರ ಎಲ್ಲಾ ವಿಚಾರವೂ
ವಾಗಿಯೂ, ನಮ್ಮ ಪುರಾಣಗಳಲ್ಲಿ ವಿವರಿಸಲ್ಪಟ್ಟಿರುವ ಮತ್ತು ಈಗ
ನಮ್ಮ ದೇಶದ ನಾಟಕಗಳಲ್ಲಿ ಸ್ವೇಚ್ಛೆಯಾಗಿ ಕುಣಿದು ತೋರಿಸುವ ಬ
ಸರ ಭಾವವನ್ನು ಹೋಲುವುದೆಂದು, ಟಿಬೆಟ್‌ದೇಶೀಯರು ಯಾರೂ, ನ
ಈ ಪುಸ್ತಕವನ್ನು ಓದುವಸಂಭವವೇ ಇಲ್ಲವಾದುದರಿಂದ, ನಮ್ಮ ಲೇಖಣಿ
ಭಯವಿಲ್ಲದೇ ಒಕ್ಕಣಿಸುವುದು. ಕುಣಿತವು ಮುಗಿದಮೇಲೆ ಟಿಬೆಟ್‌ದೇ
ಕೆತ್ತನೆಯ ಮತ್ತು ಬಣ್ಣದಕೆಲಸದ, ಮೇಜಗಳು, ಕಾಲುಮಣೆಗಳು, ಕ
ಘಂಟೆಗಳು, ಬೆಳ್ಳಿ ಜಲತಾರಿ ಕೆಲಸದ ಸಾಮಾನುಗಳು, ಪಾತ್ರೆಗಳು ಮು
ದವುಗಳು ಮಾರಾಟಕ್ಕಾಗಿ ಬಿಡಾರಕ್ಕೆ ಬಂದವು. ಇವುಗಳ ವಿವರಣೆ
ಅನವಶ್ಯ ಮತ್ತು ಅಸಾಧ್ಯ. ವಿವರಣೆಗೆ ಚಿತ್ರಕರ ಗೆರೆಗಳು ಹಿತವೇ
ಲೇಖಕರ ಅಕ್ಷರಗಳು ಹಿತವಲ್ಲ. ಆದುದರಿಂದ ಲೇಖಣಿಯು ಅವರ ಗ

ಹೋಗುವಂತಿಲ್ಲ. ಈ ದಿವಸವೆಲ್ಲ ಪ್ರಚಂಡವಾದ ಗಾಳಿಯು ಬೀಸುತ್ತಲಿದ್ದಿತು, ಸಾಯಂಕಾಲದಲ್ಲಿ ಕೊನೆತ. ಸಂಧ್ಯಾಕಾಲದಲ್ಲಿ, ಉನ್ನತನಿಗೆಯ ಚಂದ್ರನ ಕಾಂತಿಯು ನೀಲಾಕಾಶದಲ್ಲಿ ಸಂಕೋಚವಾಗಿ ಹರಡಿಕೊಂಡಿತು. ದೂರದಲ್ಲಿದ್ದ ಮಂಜನ್ನು ಹೊದೆದ ಪರ್ವತಶ್ರೇಣಿಯು ಕಂಗೊಳಿಸುವಂತೆ ಮಾಡಿದ್ದಿತು ಪರ್ವತಶ್ರೇಣಿಯ ಹಿಂಭಾಗದ ದಿಗಂತದಲ್ಲಿ ಆವರಿಸಿದ ಮೇಘಮಾಲೆಯಿಂದ, ಮತ್ತಷ್ಟು ಪ್ರಕಾಶವಾಗಿ ಕಾಣಲಿಕ್ಕೆ ಅವಕಾಶವಾಯಿತು. ಗಾಂಭೀರ್ಯವಾದ ಮೌನಸ್ಥಿತಿ ಇದ್ದುದರಿಂದ ಸಕಲರ ಮನಸ್ಸಿಗೂ ಶಾಂತಿಯಾಗಿದ್ದಿತು. ಟಿಬೆಟ್ ದೇಶದಲ್ಲಿ ಕಟ್ಟಿಗೆಗೆ ದುರ್ಭಿಕ್ಷ. ಜಂಗಾಪಾಕರವರ ಮನೆಯಲ್ಲಿ, ಸೌದೆಗೆ ಬದಲಾಗಿ, ಚಮರೀಮೃಗದ ಸಗಣಿಯಿಂದ ಮಾಡಿ ಒಣಗಿಸಿದ ಬೆರಣಿ, ಒಣಗಿದ ಬೇರುಗಳು ಮತ್ತು ಕಡ್ಡಿಗಳು, ಇವುಗಳನ್ನು ಶೇಖರಿಸಿದ್ದರು. ಈಚೆಗೆ ಗೋಮಾರಿಯ ರೋಗದಿಂದ ಅನೇಕ ಚಮರೀಮೃಗಗಳು ಗತಿಸಿಹೋಗಿದ್ದ ಪ್ರಯುಕ್ತ, ಈ ಪ್ರಾಂತ್ಯದಲ್ಲಿ ಒಂದು ಚಮರೀಮೃಗವೂ ಕಾಣಬರಲಿಲ್ಲ. ಜಂಗಾಪಾಕರವರ ಮನೆಯಿರುವ ದಿಣ್ಣೆಯಲ್ಲಿ ಒಂದು ತೊಟ್ಟು ನೀರೂ ದೊರೆಯುವಂತಿಲ್ಲ, ದೂರದಿಂದ ಹೊಳೆಯ ನೀರನ್ನು ಕಬ್ಬಿಣದ ಪೀಪಾಯಿಗಳಲ್ಲಿ ತುಂಬಿಕೊಂಡು ಹೆಂಗಸರು ಹೊತ್ತುತರುವರು. ಟಿಬೆಟ್ಟಿನ ಸ್ತ್ರೀ ಪುರುಷರೆಲ್ಲರೂ ಬಲಶಾಲಿಗಳು ಮತ್ತು ಒಳ್ಳೆಯ ಮೈಕಟ್ಟಿನವರು. ಇವರುಗಳು ಇತರರಿಗೆ ಮರ್ಯಾದೆಯನ್ನು ತೋರಿಸುವುದಕ್ಕೆ ಪದೇ ಪದೇ ತಮ್ಮ ನಾಲಿಗೆಯನ್ನು ನೀಡಿ ನೀಡಿ ತೋರಿಸುವರು. ಇವರ ಆಹಾರ, ಹಸಿಯ ಅಥವ ಒಣಗಿದ ಮಾಂಸ, ಗೋಧಿಯ ಹುರಿದ ಹಿಟ್ಟು (ಸತ್) ಮತ್ತು ಅಪರೂಪವಾಗಿ ಒಂದು ಬಗೆಯ ರೊಟ್ಟಿ. ಅಂತು ಜಂಗಾಪಾಕರವರ ಆಹ್ವಾನ, ಬೌದ್ಧಮತ ಪ್ರವೇಶ, ಇತ್ಯಾದಿಗಳಿಂದ ಜುಲೈ ೧೭ನೆಯ ದಿನವು ಶಾಕ್ಯಾಕೋಟೆಯಲ್ಲಿಯೇ ಕಳೆಯಿತು. ರಾತ್ರಿಯೆಲ್ಲಾ ಬಲುಚಳಿ.

ಜುಲೈ ೧೮ನೆಯ ತಾರೀಖಿನ ದಿನ ಹಗಲೆಲ್ಲ ಬಿಸಿಲು ಬಲುರಭಸವಾಗಿದ್ದಿತು. ಪ್ರಬಲವಾದ ತಂಪಿನಗಾಳಿಯೂ ಬೀಸುತ್ತಲಿದ್ದಿತು. ಸರಕುಗಳನ್ನು ಮುಂದಕ್ಕೆ ಸಾಗಿಸುವ ಏರ್ಪಾಡು ಮಾಡಬೇಕಾಗಿತ್ತು. ಬೌದ್ಧಮತದಲ್ಲಿ ಈ ದಿನ ವಿಶೇಷದಿನವಾಗಿತ್ತು. ಈ ಪ್ರಯುಕ್ತ ಮುಂದಿನ ಪ್ರಯಾಣಕ್ಕೆ ಸಾಮಾನುವಾಹಕರನ್ನು ಕೊಡಲಿಲ್ಲ, ಈ ದಿವಸ ಶಾಕ್ಯಾಕೋಟೆಯಲ್ಲಿಯೇ ಮಜಲು ಮಾಡಬೇಕಾಯಿತು. ಸನ್ನಾಹದಿಂದನು ಸುನ್ಯಾನ್ಸ್ ೧೨ ಸಾಂಗ

ಮುಂಡಲಿಗಾಜಲಿಗೆ ಪ್ರಯಾಣಮಾಡಿದರು. ಶ್ರೀಮನ್ಮಹಾರಾಜರವರ ಸವಾರಿಯು ಮತ್ತೆ ಬೌದ್ಧಮತಕ್ಕೆ ಚಿತ್ತೈಸಿ ಅಲ್ಲಿ ಮುಖ್ಯಗುರುವು ಮತಸಂಬಂಧವಾದ ಆಸ್ಥಾನದಲ್ಲಿನ ಪ್ರಾಮುಖ್ಯವಾದ ಗುರುಪೀಠದಲ್ಲಿ ಕುಳಿತಿರುವಾಗ, ವಿಲ್ಲತ್ತುಗಳನ್ನು ಅರ್ಪಣೆ ಕೊಡಿಸಿದರು. ಅಲ್ಲಿ ಮುಖ್ಯಗುರುವಿಗೆ ಮೊದಲು ತೀರ್ಥವೂ, ಟೀಪಾನೀಯವೂ, ಆಯಿತು ತರುವಾಯ ಇತರ ಗುರುಗಳಿಗೆಲ್ಲಾ ತೀರ್ಥ ಮುಂತಾದವುಗಳಾದವು. ಮಧ್ಯೆ ಮಧ್ಯೆ ಮಂತ್ರಪಠನವಾಗುತ್ತಲಿದ್ದನ್ನಲ್ಲಿ ಗುರುಗಳೆಲ್ಲರೂ, ಮಸ್ಕಮಾಂಸ, ಗೋಧಿಹುರಿದ ಹಿಟ್ಟು (ಸತ್ತು ಮತ್ತು ಪೋಸೆ ಇತ್ಯಾದಿಗಳನ್ನು ಶಿಷ್ಯರುಗಳ ಇದಿರಾಗಿ ಸ್ವೀಕರಿಸುತ್ತಿದ್ದರು ಭಕ್ತಾದಿಗಳೆಲ್ಲರೂ ಮುಖ್ಯಗುರುವಿಗೆ ಕಾಣಿಕೆಗಳನ್ನರ್ಪಿಸಿ ಅವರ ಆಶೀರ್ವಾದವನ್ನೂ, ಪ್ರಸಾದವನ್ನೂ, ಪ್ರತಿಫಲವಾಗಿ ಪಡೆಯುತ್ತಲಿದ್ದರು ಇಲ್ಲಿನ ಆಸ್ಥಾನದ ಛಾಯಾಚಿತ್ರವು ತೆಗೆದುಕೊಳ್ಳಲ್ಪಟ್ಟಿತು. ವಿಲ್ಲತ್ತನ್ನು ದಯಪಾಲಿಸಿದನಂತರ ಸವಾರಿಯು ಶಿಬಿರಕ್ಕೆ ಚಿತ್ತೈಸಿತು. ಈ ದಿವ ಮಾನಸಸರೋವರದ ಬಳಿಯಿಂದ ಕೆಲವು ಬಾತುಗಳ (Ducks) ಮೊಟ್ಟೆಗಳು ಬಂದಿದ್ದವು. ಇವು ಕೋಳಿಯಮೊಟ್ಟೆಗೆ ನಾಲ್ಕರಷ್ಟು ದಪ್ಪವಾಗಿದ್ದವು. ಇವುಗಳು ಅಸಿಸ್ಟೆಂಟ ಸೆಕ್ರಟರಿಯವರಿಗೆ ಕೊಡಲ್ಪಟ್ಟವು.

ಜುಲೈ ೨೦ ನೆಯ ತಾರೀಖು ಬೆಳಗ್ಗೆ ೮ ಘಂಟೆಗೆ ತಾಕ್ಲಾಕೋಟೆಯನ್ನು ಬಿಟ್ಟು, ಶ್ರೀಮನ್ಮಹಾರಾಜರವರ ಪಾಳೆಯವು ರಂಗುಂಗ್‌ಗೆ (Rungung ಪ್ರಯಾಣವನ್ನು ಬೆಳೆಸಿತು. ಸಕಲರೂ ಹೊರಟುಕೊಂಡು ಒಂದು ಪ್ರವಾಹ ತೀರಕ್ಕೆ ಇಳಿದುಬಂದು, ಆ ನದಿಯನ್ನು ಮರದಸೇತುವೆಯಿಂದ ದಾಟಿದರು. ಈ ದಿವಸದ ಪ್ರಯಾಣವು ಈ ವರಿಗಿನ ಪ್ರಯಾಣದಲ್ಲೆಲ್ಲ ಅತ್ಯಂತ ಸುಲಭವಾದದ್ದು. ಪ್ರವಾಹವನ್ನು ದಾಟಿದ ತರುವಾಯ ದಾರಿಯಲ್ಲಿ ಅನೇಕ ಹಳ್ಳಿಗಳು ಸಿಕ್ಕಿದವು. ಹಳ್ಳಿಗಳ ಸಮೀಪದಲ್ಲಿ ಜವೇಗೋಧಿ, ಬಟಾಣಿ ಮತ್ತು ತೋಕೇಗೋಧಿ, ಈ ಬೆಳೆಗಳಿಂದ ಒಡಗೂಡಿದ ಭೂಮಿಯು, ಕುರಿಗಳ ಹಿಂಡು ಆಡಿನಮಂದೆ, ಕೆಲವು ದನಗಳು, ಇವುಗಳು ಸಿಕ್ಕುತ್ತಿದ್ದವು. ದಾರಿಯ ಎರಡು ಕಡೆಯ ಬೆಟ್ಟಗಳೂ ಸಹ ಆಕಾರದಲ್ಲಿ ನೀಲಗಿರಿಯ ದಿಣ್ಣೆಗಳನ್ನು ಹೋಲುತ್ತಲಿದ್ದಾಗ್ಯೂ ಇಲ್ಲಿ ಎಲ್ಲಿಯೂ ಯಾವಸಸ್ಯಗಳೂ ಪುಷ್ಟಾಂಗವಾಗಿ ಇಲ್ಲ ಎಲ್ಲಿ ನೀರಿನತೊರೆ ಕಾಣುವುದೋ ಅಲ್ಲಿಯಲ್ಲಾ ಒಂದೊಂದು ಹಳ್ಳಿಯಿವುದು. ನುಟ್ಟಸವಾದ ಭೂಪ್ರದೇಶದಲ್ಲಿ ಒಂದುವಿಧವಾದ ಹಂಗೆರುಗಿಡ

ಜಾತಿಯ ಮುಳ್ಳು ಪೊದರುಗಳಿರುವವು. ಈ ಮುಳ್ಳುಗಳನ್ನು ಬೇರುಸಹಿತ ವಾಗಿ ಕಿತ್ತು ಒಣಗಿಸಿ ಇಟ್ಟುಕೊಂಡಿರುವರು, ಮತ್ತು ಚಮರೀಮೃಗದ ಸಗಣಿಯನ್ನು ಒಣಗಿಸಿದ ಬೆರಣಿಯೂ, ಇವು ಈ ಕಡೆಯ ಜನರು ಉಪಯೋಗಿಸುವ ಒಲೆಮೇವು (Fuel) ದಾರಿಯಲ್ಲಿ ಎಲ್ಲಿಯೂ ಹುಲ್ಲು ಬೆಳೆದಿರಲಿಲ್ಲ, ಒಂದು ಕಡೆಯಲ್ಲಿ ಮಾತ್ರ ೩-೪ ಮರಗಳಿದ್ದುವು. ಇವುಗಳು ಬಹುಮಟ್ಟಿಗೆ ನೀರಂಜಿಯಮರ (Willow) ಗಳಂತಿದ್ದುವು. ಈ ರೀತಿಯ ದಾರಿಯಲ್ಲಿ ೮ ಮೈಲಿಗಳ ಪ್ರಯಾಣವು ಜರಿಗಿ, ಒಳ್ಳೆಯ ವಿಸ್ತಾರವಾದ ಹುಲ್ಲು ಬೆಳೆದ ಮೈದಾನವೊಂದನ್ನು ಸೇರಿದ್ದಾಯಿತು, ಇದರ ಒತ್ತಿನಲ್ಲಿ ಒಂದು ನೀರು ಹರಿಯುವ ಹಳ್ಳ, ಇದು ರಗಾರಗಿಗೆ ೩ ಮೈಲಿಗಳು ಕಡಿಮೆಯೇ ಇದ್ದಿತು, ರಗಾಗಂಗಿನಲ್ಲಿ ನೀರಿಗೆ ಅನುಕೂಲವಿಲ್ಲವೆಂದು ತಿಳಿದದ್ದರಿಂದ ಇಲ್ಲಿಯೇ ಬಿಡಾರವು ಹೂಡಲ್ಪಟ್ಟಿತು ಈ ದಿನ ಪೂರಾ ಬಿಸಿಲಾಗಿತ್ತಲ್ಲದೇ ಬಲವಾಗಿ ತಣ್ಣನೆಯ ಗಾಳಿ ಬೀಸುತ್ತಲಿದ್ದಿತು. ಇಲ್ಲಿನ ಔನ್ನತ್ಯವು ಸಮುದ್ರ ಮಟ್ಟಕ್ಕಿಂತ ೧೪,೪೦೦ ಅಡಿಗಳು. ಈ ದಿವಸದ ದಾರಿಯೂ ಕೂಡ ಕಲ್ಲುಪ್ರಾಯವಾದುದೇ. ದಾರಿಯಲ್ಲಿ, ಕುದುರೆಗಳ ಕೊರಳಿಗೆ ಕಟ್ಟಿದ ಗೆಜ್ಜೆಗಳ ಝಣಝಣ ಶಬ್ದ, ಮತ್ತು ಹಳ್ಳಿಯ ನಾಯಿಗಳು ಜನಗಳನ್ನು ಕಂಡು ಬೊಗಳುವ ಶಬ್ದ ವಿನಹ, ಪೂರಾ ನಿಶ್ಶಬ್ದವೆ. ಮಾರ್ಗದಲ್ಲಿ ಯಾವದೊಂದು ಪಕ್ಷಿಯೂ ಇಲ್ಲ. ಹೆಚ್ಚು ಔನ್ನತ್ಯಪ್ರದೇಶವನ್ನು ಪ್ರವೇಶಿಸಿದ ಆರಭ್ಯ, ಹೊಸದಾದ ಕಾಯಿಪಲ್ಯಗಳಾಗಲೀ, ಹಣ್ಣುಗಳಾಗಲೀ ಬಿಡಾರಕ್ಕೆ ಒದಗುತ್ತಲಿರಲಿಲ್ಲ. ಅಲ್ಮೋರಾದಿಂದ ಹೊರಟಾಗಲೇ, ಸಾಕಾಗುವಷ್ಟು ಆಲೂಗೆಡ್ಡೆ, ಈರುಳ್ಳಿ, ಹೊಸದಾದ ಸೇಬಿನ ಹಣ್ಣುಗಳು, ಒಣಗಿದ ಹಣ್ಣುಗಳು, ಕಾಯಿಪಲ್ಯ ಮತ್ತು ಕೆಡದಂತೆ ಭದ್ರಪಡಿಸಿದ ಹಾಲು (Preserved milk) ಇವುಗಳನ್ನು ಒದಗಿಸಿಕೊಂಡಿತ್ತು. ಈ ಉನ್ನತ ಪ್ರಾಂತ್ಯಗಳಲ್ಲೆಲ್ಲಾ ಅಕ್ಕಿಯು ಸರಿಯಾಗಿ ಪಕ್ವವಾಗುತ್ತಲಿರಲಿಲ್ಲ. ಚಳಿಯ ದೆಸೆಯಿಂದ ಎಲ್ಲರಿಗೂ, ತುಟಿಗಳು, ಮೂಗು ಇವುಗಳು ಬಿರಿದು ಮುಲಾಮುಗಳ ಉಪಯೋಗವು ಅವಶ್ಯಕವಾಗಿತ್ತು. ಟಿಬೆಟ್ ಗುಡ್ಡಪ್ರದೇಶ ಪೂರ್ತಾ, ಸಮುದ್ರ ಮಟ್ಟಕ್ಕಿಂತ ೧೪,೦೦೦ ಅಡಿ ಎತ್ತರದಲ್ಲಿರುವ ಪ್ರಯುಕ್ತ, ಎತ್ತರ ಪ್ರದೇಶಗಳಿಗೆ, ದೂರದಿಂದ ಕಾಣುತ್ತಿದ್ದ ತಗ್ಗಿನ ಗುಡ್ಡಗಳಲ್ಲಿ ಅಲ್ಲಲ್ಲಿ ಶ್ವೇತ ಸೀರೆಯಂತೆ ಮಂಜು ಕಾಣುತ್ತಿದ್ದಿತು.

ಜುಲೈ ೨೧ನೆಯ ತಾರೀಖು ಬೆಳಗ್ಗೆ ೮ ಘಂಟೆಗೆ ಲಕಗಾಂಗ್ ನಮ್ಮ ಮಜಲನ್ನು ಬಿಟ್ಟು ಪ್ರಯಾಣವು ಪ್ರಾರಂಭವಾಯಿತು. ಸಾಧಾರಣವಾ ಒಂದು ಮೈಲಿಗೆ ಒಳಪಟ್ಟಷ್ಟು ಅಗಲದ ಮೈದಾನದ ಮೂಲಕ ದಾರಿ. ಮೈದಾನದ ಬಲ ಭಾಗಕ್ಕೆ ಮರಗಳು ಮುಂತಾದವುಗಳೇನೂ ಇಲ್ಲದ ಬರಿಯ ಬೆಟ್ಟಗ ಸಾಲು. ಎಡಗಡೆಗೆ, ಒಂದು ಪ್ರವಾಹ, ಮತ್ತೊಂದು ಪರ್ವತಶ್ರೇಣಿ. ಸಾಲುಬೆಟ್ಟಗಳಮೇಲೆ ಬೆಳ್ಳಿಯಂತೆ ಥಳಥಳಿಸುವ ಹಿಮದಪಟ್ಟಿಗಳು, ಮೈದಾನವು ಪೂರಾ ಕೆಲವೆಡೆ ಮರಳು. ಕೆಲವೆಡೆ ಗುಂಡುಗಲ್ಲು. ಅಲ್ಲಲ್ಲಿ ಮುಳ್ಳು ಪೊ ಗಳು ವಿನಹ ಒಂದು ವೃಕ್ಷವೂ ಇಲ್ಲ. ಅನುಭವದಲ್ಲಿ ಒಂದು ಗಿರಿಮಯವಾ ಮರುಭೂಮಿಯಲ್ಲಿ ಸಂಚರಿಸುತ್ತಲಿದ್ದಂತಿದ್ದಿತು. ಮಧ್ಯಮಧ್ಯೆ ಮರುಭೂ ಗಳನ್ನು ವಿಂಗಡಿಸುತ್ತಲಿರುವಂತೆ ಗಿರಿಯ ಝರಿಗಳು, ದಾರಿಯಲ್ಲಿ ಹರಿಯು ಹೊಳೆಗಳ ಜಳಜಳ ಮತ್ತು ಕುದುರೆಗಳ ಖುರದ ಪಟಪಟ ಶಬ್ದಗಳು ವಿನ ಮತ್ತಾವ ಶಬ್ದವೂ ಇಲ್ಲದೆ ಗಂಭೀರಭಾವ. ಪ್ರಾತಃಕಾಲದಲ್ಲೆಲ್ಲಾ ವ್ಯಾಪಿ ಕೊಂಡಿದ್ದ ದಟ್ಟವಾದ ಮಂಜು, ಜನಗಳಿಗೆ ನಿರುತ್ಸಾಹವನ್ನುಂಟುಮಾಡು ತ್ತಿತ್ತು. ಕ್ರಮೇಣ ಸ್ವಲ್ಪಸ್ವಲ್ಪ ದಿಣ್ಣೆಯನ್ನು ಹತ್ತಿಕೊಂಡು ಹೋಗುವ ೧ ಮೈಲಿಗಳ ದಾರಿಯನ್ನು ಕಳೆದು ದಿವಿ ೮-೩೦ ಘಂಟೆಗೆ ಮುಂದಲ ಮಜಲಾ ಗೋರಿ ಓಡಿಯಾಲ್ (Gori Odial) ಎಂಬ ಪ್ರದೇಶವನ್ನು ಸೇರಿದ್ದಾಯಿತು ನದಿಗಳ ಕೆಲವು ಕೆಳಪ್ರದೇಶದಲ್ಲಿ ವಿರಳವಾಗಿ, ಮೋಟಾದ ಹುಲ್ಲು ಬೆ ದಿದ್ದಿತು. ಇಂತಹ ಒಂದು ಹುಲ್ಲು ಮೈದಾನ, ಬಹು ಮಟ್ಟನ ಕೆಸ ಭೂಮಿ. ಮಧ್ಯದಲ್ಲಿ ನೀರು ಹರಿಯುವ ಹಳ್ಳ. ಇಲ್ಲಿ ಡೇರಾಗಳನ್ನು ಹಾ ಶಿಬಿರಗಳನ್ನು ನಿರ್ಮಿಸಿತ್ತು. ಮಧ್ಯಾಹ್ನ ೪ ಘಂಟೆಯವರಿವಿಗೂ, ಕಷ್ಟ ವಾದ ಚಳಿ, ಗಾಳಿ ಮತ್ತು ಮೋಡ. ಇದರಿಂದ ಸುತ್ತಣ ಯಾವ ನೋಟ ಕಾಣುವಂತಿರಲಿಲ್ಲ. ಈ ಪ್ರದೇಶದಲ್ಲಿ, ಬಿಗಿದ ಮೂಟೆಗಳನ್ನು ಹೊತ್ತು ಕೊಂಡು ಹೋಗುತ್ತಲಿದ್ದ ಕೆಲವು ಚಮರೀಮೃಗಗಳನ್ನು ನೋಡಿದ ಯಿತು ಇಲ್ಲಿನ ಔನ್ನತ್ಯವು ಸಮುದ್ರ ಮಟ್ಟಕ್ಕಿಂತ ೧೩,೦೦೦ ಅಡಿ. ಒಂ ಪಕ್ಷಿಯೂ ಕಂಡುಬರಲಿಲ್ಲ. ಸಾಯಂಕಾಲಸಮಯದಲ್ಲಿ ಪ್ರಕಾಶವ ಬಿಸಿಲು ಬಂತು. ಅಂತರಿಕ್ಷವು ನಿರ್ಮಲವಾಗಿದ್ದಿತು ಬಿತ್ತಾರದ ಹಿಂಭಾ ದಿಂದ ಗುರ್ಲ ಮಾಂಧಾತವೆಂಬ (Gurla Mandhata Peaks) ಶಿಖರ ಒಂದು ಭಾಗವು ಸಕಪಸೆ ಶೋಭಾಯಮಾನವಾಗಿ ಕಾಣುತ್ತಿದ್ದು ಇದು, ಒ

ಶೃಂಗದ ಮೇಲ್ಭಾಗದಂತೆ ಗುಂಡಾಗಿಯೂ, ನಿರಭ್ರವಾದ ನೀಲಾಕಾಶದ ಆವರಿಸಲ್ಪಟ್ಟುದಾಗಿಯೂ, ಸೂರ್ಯ ರಶ್ಮಿಯಿಂದ ಪ್ರಜ್ವಲಿಸುವುದಾಗಿಯೂ ಇದ್ದಿತು. ಸಾಯಂಕಾಲದನಂತರ ರಾತ್ರಿ ಬಹು ಹೊತ್ತಿನವರಿಗೂ ಬಿಡಾರದಲ್ಲಿ, ಸಹಿಸಲಸಾಧ್ಯವಾದಷ್ಟು ಚಳಿಯು ಸಕಲರನ್ನೂ ನಡುಗಿಸುತ್ತಲಿದ್ದಿತು.

ಜುಲೈ ೨೭ನೆಯ ಪ್ರಾತಃಕಾಲ ೬-೩೦ ಘಂಟೆಗೆ, ಚಳಿಯನ್ನೂ ಮತ್ತು ಹಿಮವನ್ನೂ ಲಕ್ಷಿಸದೇ, ಮಹಾಪ್ರಭುಗಳವರು ಸಪರಿವಾರರಾಗಿ, ಗೌರಿ ಓಡಿಯಾಲ್ ಪ್ರಾಂತ್ಯವನ್ನು ಬಿಟ್ಟು, ಮುಂದಿನ ಮಜಲನ್ನು ಕುರಿತು ಚಿತ್ತೈಸಿದರು. ವಿಸ್ತಾರವಾಗಿಯೂ, ಬಂಜರಾಗಿಯೂ, ಕಲ್ಲು ಮಿಶ್ರವಾಗಿಯೂ ಇರುವ ಮಟ್ಟವಾದ ನೆಲದಮೇಲೆ ದಾರಿ. ಈ ಬಂಜರುನೆಲದ ಉಭಯ ಪಾರ್ಶ್ವಗಳಲ್ಲಿಯೂ ಯಾವ ಸಸ್ಯಗಳೂ ಇಲ್ಲದ ಬೆಟ್ಟದ ಸಾಲುಗಳು. ಈ ದಾರಿಯಲ್ಲಿ ೩ ಮೈಲಿಗಳಷ್ಟು ದೂರ ಪ್ರಯಾಣ ಬೆಳೆಸು ಮುಂದೆ ವಿಸ್ತಾರವಾದೊಂದು ನದಿಯ ದಡ. ನದಿಯಲ್ಲಿ ವಿಶೇಷ ನುಣುಪಾಗಿಯೂ, ಗುಂಡಾಗಿಯೂ ಇರುವ ಕಲ್ಲುಗಳು. ಮಧ್ಯದಲ್ಲಿ ತೆಳುವಾದ ಪ್ರವಾಹ. ನದಿಯ ದಡವನ್ನು ದಾಟಿ ಮುಂದಕ್ಕೆ ಹೋಗಲು, ೫೦೦ ಅಡಿಗಳ ಎತ್ತರಕ್ಕೆ ಕ್ರಮೇಣ ಹತ್ತಿಹೋಗುವ ದಾರಿ. ಅಲ್ಲಿ ಗುರ್ಲಾ ಎಂಬ ಘಾಟಿಯಿರುವುದು. ಇದರ ಔನ್ನತ್ಯವು ಸಮುದ್ರ ಮಟ್ಟದಮೇಲೆ ೧೬,೨೦೦ ಅಡಿಗಳು. ಇದು ಗುರ್ಲಾಮಾಂಧಾತಪರ್ವತಶ್ರೇಣಿಯ ಹಿಮದ ರಾಶಿಗೆ ಅತ್ಯಂತ ಸಮೀಪಕ್ಕೆ ಹೋಗುವ ಈ ದಾರಿಯಲ್ಲಿ, ಎರಡು ಕಡೆಗಳಲ್ಲಿಯೂ, ನೀಲಗಿರಿಯಲ್ಲಿನ ಗಿರಿಸಾಲುಗಳನ್ನು ಹೋಲುವ ಗುಡ್ಡಗಳ ಸಾಲು. ಗುರ್ಲಾಘಾಟಿಯ ತುದಿಯನ್ನು ಸೇರಿದಮೇಲೆ ಯಾತ್ರಿಕರ ಎಡಭಾಗದಲ್ಲಿ; ಅಷ್ಟು ಹೊತ್ತಿನವರಿಗೆ ಸೇರಿಕೊಂಡಿದ್ದ ಹಿಮಧಾಮವನ್ನು ಭೇದಿಸಿಕೊಂಡು, ಸೂರ್ಯನು ಒಂದು ಗುಡ್ಡದ ತುದಿಗೆ ಏರುತ್ತಿರುವಂತೆ ಕಂಡುಬರುತ್ತಲಿದ್ದಿತು. ಪೂರ್ಣ ಕೃಪಾವರನಾದ ಕೈಲಾಸಾಧಿಪತಿಯು, ಯಾತ್ರಿಕರಿಗೆ ರಮ್ಯವಾದ ಮಾನಸ ಸರೋವರವು ಗೋಚರಿಸುವಂತೆಯೂ, ಬಾಧೆಗೊಳಿಸುತ್ತಲಿರುವ ಹಿಮದ ಶಾಂತನೆಯಾಗುವಂತೆಯೂ ಸಹ, ಪರ್ವತಾಗ್ರದಲ್ಲಿ ಪ್ರಜ್ವಲಿಸುವ ಜ್ವಲನನನ್ನು ಇಟ್ಟನೋ ಎಂಬಂತೆ ಗೋಚರಿಸುವ ಸೂರ್ಯ ಪ್ರಭೆಯಿಂದ ಮಾನಸ ಸರೋವರವು ಸ್ಪಷ್ಟವಾಗಿ ದೂರದಲ್ಲಿ ಕಾಣುತ್ತಲಿದ್ದಿತು. ಸರೋವರದ

ಮಾನಸಜಲವು ಇಂದ್ರನೀಲದಂತೆ ಪ್ರಕಾಶಿಸುತ್ತಲಿದ್ದಿತು. ಮಾನಸಸರೋವರವು, ತನ್ನ ಒತ್ತಿನಲ್ಲಿರುವ ಅಸುರ ಸಂಬಂಧವಾದ ರಾಕ್ಷಸಸರೋವರವನ್ನು (Lake Rakastal) ಸಂಪರ್ಕ ಮಾಡಿಕೊಳ್ಳಕೂಡದೆಂದು ಮನ್ನ ಗೆರೆಯನ್ನು ಬರೆದಿಟ್ಟಂತೆ, ಉಭಯ ಸರೋವರಗಳ ಮಧ್ಯೆ ನಸು ಯೆತ್ತರ ಒಂದು ಗಿರಿನಾಲು ಇರುವುದು. ಈ ಗುರ್ಲಾ ಘಾಟಿಯಿಂದ ಶ್ರೀ ಕೈಲಾ ಶಿಖರವನ್ನು ದೃಷ್ಟಿಸಬಹುದು. ಕೈಲಾಸಾಧಿಪತಿಯು ಸರ್ವತೋರೂಪ ಗಿದ್ದಾಗ್ಯೂ, ಜನಗಳಿಗೆ ಗೋಚರಿಸದಂತೆ ಬಸ ದೃಷ್ಟಿಗೆ ಮಾಯೆಯು ಮು ಮಾಡಿರುವ ರೀತಿಯಲ್ಲಿ, ಕೈಲಾಸ ಶಿಖರವು ಯಾತ್ರಿಕರ ದೃಷ್ಟಿಗೆ ಗೋಚ ವಾಗದಂತೆ ಮೇಘ ಮಂಡಲವು ಮರೆ ಮಾಡಿರುವುದು. ಮಾಯಾ ನಿವಾ ಣೆಗೆ ಸದ್ಗುರುಕಟಾಕ್ಷವು ಸಾಧನವಾದುದು. ಮೇಘಮಾಲಾನಿವಾರಣೆ ಭುವನಪ್ರಾಣಾಧಾರನಾದ ವಾಯುದೇವನ ಕಟಾಕ್ಷವು ಸಾಧನವಾದುದು ಘಾಟ್ಟಿನಿಂದ ಸಕಲರೂ ಒಂದು ಮೈಲಿಯಷ್ಟು ದೂರ, ಸರೋವರದ ಕಡೆ ಇಳಿದು ಬಂದು, ವಿಸ್ತಾರವಾದ ತೀರದಲ್ಲಿಯೇ ೩ ಮೈಲಿಗಳಷ್ಟು ದೂ ಮಾರ್ಗವನ್ನು ಕಳೆದು. ಗೋರಿ ಓಡಿಯಾಲ್‌ನಿಂದ ಒಟ್ಟು ೧೦ ಘಂಟಾ ೧೧ ಮೈಲಿಗಳ ಪ್ರಯಾಣವು ಜರಿಗಿ, ಬೆಳಿಗ್ಗೆ ೯ ಘಂಟೆಗೆ ಹೊಸ ಶಿಬಿರಕ್ಕೆ ಸವಾರಿಯು ಚಿತ್ತೈಸಿತು. ಸರೋವರವಾದ್ಯಂತವೂ ರಮ್ಯವಾಗಿ ಗೋಚ ವಾಗುವಂತೆ ನೀರಿನ ದಡಕ್ಕೆ ೩೦ ಅಡಿಗಳಷ್ಟು ದೂರದಲ್ಲಿ ಡೇರಾಗಳನ್ನು ಹಾಕಿದ್ದಿತು. ಸುತ್ತಲೂ ಉನ್ನತವಾದ ಗುಡ್ಡಗಳು. ಮಧ್ಯದಲ್ಲಿ ವಿಸ್ತಾ ವಾದ ಬ್ರಹ್ಮಮಾನಸಸರೋವರ. ದೂರದಿಂದ ನೋಡಿದರೆ ಸರೋವ ಜಲವು ನೀಲಿಮವರ್ಣ. ಸಮೀಪಕ್ಕೆ ಬಂದು ನೋಡಿದರೆ ಪರಮಪಾವ ಜಲವು ನಿರ್ಮಲ ಸ್ಫಟಿಕವರ್ಣ, ಬಹು ಶೀತಲ, ಅತ್ಯಂತ ರುಚಿಕರ ಮತ್ತು ಭವರೋಗಕ್ಕೆ ದಿವ್ಯವಾದ ಔಷಧ. ಟಿಬೆಟ್ ದೇಶದಲ್ಲಿ ಮಳೆಯು ಅತ್ಯಂ ವಿರಳವೆಂದು ಪ್ರಸಿದ್ಧಿಯಾಗಿರುವುದು. ಹಿಮಾಚಲದ ಹಿಮರಾಶಿಯು ಭಕ್ತಿ ಭಾವದಿಂದ ಕರಗಿ ನೀರಾಗಿ ಹರಿದು ಬಂದು, ಮಾನಸ ಸರೋವರವನ್ನು ನೆ ಧನ್ಯತೆಯನ್ನು ವೃದ್ಧಿ ಮಾಡಿಕೊಳ್ಳುತ್ತಿರುವುದು. ಉನ್ನತಪ್ರದೇಶದಿ ನಿಂತು ನೋಡಿದರೆ ಸರೋವರವು ಅಂಡಾಕಾರವಾಗಿ ತೋರಿ ಬರುವುದು ಮಿ|| ಷೆರಿಂಗ್ (Scherring) ಮತ್ತು ಇನ್ನೂ ಕೆಲವರು ಈ ಸರೋವರ ಸುತ್ತಳತೆಯು ೬೦ ಮೈಲಿಗಳೆಂದು ಅಭಿಪ್ರಾಯಪಟ್ಟಿರುವರು. ಇವರುಗ

ಬ್ರಹ್ಮಮಾನಸಸರೋವರವು.

ಶ್ಲೋಕ.

ಉತ್ತರೇಮಾನಸೇಸ್ನಾನಂ ಕುರ್ಯಾದಾತ್ಮವಿಶುದ್ಧಯೇ ।
ಸೂರ್ಯಲೋಕಾದಿಸಂಸಿದ್ಧಿಸಿದ್ಧಯೇ ಪಿತೃಮುಕ್ತಯೇ ॥
ಸ್ನಾತ್ವಾದತರ್ಪಣಂ ಕುರ್ಯಾದ್ದೇವಾದೀನಾಂಯಥಾವಿಧಿ ।
ಆಬ್ರಹ್ಮಸ್ತಂಭಪರ್ಯಂತಂ ದೇವರ್ಷಿಪಿತೃಮಾನವಾಃ ॥
ತೃಪ್ಯಂತುಪಿತರಸ್ಸರ್ವೇ ಮಾತೃಮಾತಾಮಹಾದಯಃ ।
ಶ್ರಾದ್ಧಂಸಪಿಂಡಕಂ ಕುರ್ಯಾತ್ಸ್ವಸೂತ್ರೋಕ್ತವಿಧಾನತಃ ॥

ಮನಸ್ಸು ಬಹು ಸಂತೋಷಭಕ್ತಿಯುಳ್ಳದ್ದಾಗುವುದು. ಏಕಾಯಿ-ಕಾವಾಗೂಚಿ (Ekai-Kavaguchi) ಎಂಬ ಒಬ್ಬ ಜಪಾನ್ ದೇಶಸ್ಥನಾದ ಬೌದ್ಧಸನ್ಯಾಸಿಯು ಟಿಬೆಟ್ ಪ್ರಾಂತ್ಯದಲ್ಲಿ ಸುಮಾರು ವರ್ಷಗಳ ಕಾಲ ಸಂಚರಿಸುತ್ತಲಿದ್ದು, ಇಲ್ಲಿನ ವಿಷಯಗಳನ್ನು ಪ್ರಕಟಿಸಿ ರಚಿಸಿರುವ ಪುಸ್ತಕದಲ್ಲಿ, ಮಾನಸ ಸರೋವರದ ಸುತ್ತಳತೆಯು ೨೦೦ ಮೈಲಿಗಳೆಂತಲೂ, ಇದರ ಆಕಾರವು ಸ್ವಲ್ಪ ವ್ಯತ್ಯಾಸವಾಗಿ ಅಷ್ಟಕೋಣವೆಂತಲೂ ಹೇಳಿರುವನು. ಸ್ವಭಾವವಾಗಿ ಉನ್ನತ ಪ್ರಾಂತ್ಯಗಳಲ್ಲಿ ನಿಂತು ನೋಡುವವರಿಗೆ ದೂರದಲ್ಲಿರುವ ವಸ್ತುಗಳು ನೇತ್ರ ಭ್ರಮಣೆಯಿಂದ ಹತ್ತಿರದಲ್ಲಿರುವಂತೆ ಕಾಣುವವು. ಎತ್ತರಕ್ಕೆ ಹೋಗುತ್ತ ಹೋಗುತ್ತ ಆಕಾಶಮಂಡಲದ ವಾಯುಕಣಗಳು ವಿರಳವಾಗುತ್ತಿರುವುದೇ ಈ ನೇತ್ರಭ್ರಮಣೆಗೆ ಕಾರಣವು. ಸರೋವರದ ವಿಷಯದಲ್ಲಿ ಬೌದ್ಧಸನ್ಯಾಸಿಯ ಅಭಿಪ್ರಾಯವೇ ಸೂಕ್ತವಾಗಿ ತೋರುವುದು. ಆಕೃತಿಯು ವಿಸ್ತಾರವು ಎಂತಾದರೂ ಇರಲಿ. ಮಾನಸಸರೋವರದ ಮಹಿಮಾವಿಸ್ತಾರವು ತಿಳಿಯಲಸಾಧ್ಯವಾಗಿರುವುದು. *ಮಾನಸ ಸರೋವರ

---

* ಸೃಷ್ಟಿಕರ್ತನಾದ ಬ್ರಹ್ಮನು, ಪೂರ್ವಕಾಲದಲ್ಲಿ ಹಿಮಾಚಲದಲ್ಲಿ ತಪಸ್ಸನ್ನು ಆಚರಿಸುತ್ತಲಿದ್ದು, ತನ್ನ ಸ್ವಂತ ನಿತ್ಯಕರ್ಮಾಚರಣೆಗಾಗಿ ಮನಸ್ಸಂಕಲ್ಪಮಾತ್ರದಿಂದ ನಿರ್ಮಿಸಿದ ಸರೋವರವಿದು. ಆದುದರಿಂದಲೇ ಇದಕ್ಕೆ ಬ್ರಹ್ಮ ಮಾನಸ ಸರೋವರವೆಂದು ಹೆಸರು ಬಂದಿರುವುದು. ಪ್ರಪಂಚದ ಎಲ್ಲಾ ಸರೋವರಗಳಿಗಿಂತಲೂ ಈ ಸರೋವರವನ್ನು ಅತ್ಯಂತ ರಮಣೀಯವಾಗಿರುವಂತೆ ನಿರ್ಮಿಸಿರುವುದು ಬ್ರಹ್ಮನ ಸಾಮರ್ಥ್ಯವನ್ನು ಪ್ರದರ್ಶಿಸುವುದು. ಒಂದು ಕಡೆ, ಮತ್ತೊಂದು ಕಡೆಯಲ್ಲಿ ಆತನ "ಚತುರಾನನಃ" (ಚಾತುರ್ಯವಾದ ಮುಖವುಳ್ಳವನು) ಎಂಬ ಹೆಸರನ್ನು ಸಾರ್ಥಕಪಡಿಸುವುದು. ಈ ಮಾನಸಸರೋವರದಲ್ಲಿ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಜಲಚರಗಳು, ತಮಗೆ ಆಹಾರವೇನೆಂದು ಬ್ರಹ್ಮನನ್ನು ಕೇಳಲು, ಸರೋವರದ ಜಲವನ್ನೇ ಪಾನ ಮಾಡಿರೆಂದು ಆತನು ಹೇಳಿದಾಗ್ಯೂ, ಕೆಲವು ಜಲಚರಗಳು, ತಮಗೆ ಜನ್ಮಸ್ಥಳವೂ ಮತ್ತು ಆವಾಸಸ್ಥಳವೂ ಆದ ಜಲವನ್ನು ಪಾನ ಮಾಡುವುದು ಯೋಗ್ಯವಲ್ಲವೆಂದು ಪ್ರಾಶನ ಮಾಡಲಿಲ್ಲವೆಂತಲೂ, ಉಳಿದವುಗಳು ಬ್ರಹ್ಮನ ಆಜ್ಞೆ ಪ್ರಕಾರ ಪಾನ ಮಾಡಿದವೆಂತಲೂ, ಜಲವನ್ನು ಕುಡಿದ ಪ್ರಾಣಿಗಳು ಪಕ್ಷಿಗಳಾಗಿಯೂ, ಕುಡಿಯದ ಪ್ರಾಣಿಗಳು ಮತ್ಸ್ಯಗಳಾಗಿಯೂ, ಪರಿಣಮಿಸಿದುವೆಂದು ಪುರಾಣಪ್ರಸಿದ್ಧವು. ಮಾನಸಸರೋವರದಲ್ಲಿ ಕಾಗೆಗಳು ಮುಳುಗಿದರೆ ಹಂಸಗಳಾಗುವವೆಂದು ಲೋಕವಾರ್ತೆಯಿರುವುದು, ಇದರ ಅರ್ಥವು ಚೆನ್ನಾಗಿ ಸ್ಫುಟವಾಗಿಲ್ಲ.

ಬಳ್ಳಿ ಮೀನುಗಳನ್ನು ಹಿಡಿಯಕೂಡದೆಂದು ನಿರ್ಬಂಧವಿರುವುದು. ಈ
ಸರೋವರದ ಪಕ್ಕದಲ್ಲಿರುವುದೆಂದು ಮೊದಲು ಹೇಳಿದ ರಾಕ್ಷಸಸರೋವರವ
ಆಕಾರದಲ್ಲಿ ಅಡ್ಡಾದಿಡ್ಡಿಯಾಗಿರುವುದು. ಇದರ ಮಧ್ಯದಲ್ಲಿ ಸಸ್ಯ ಬೆ
ಯದೇ ಬರಿದಾಗಿರುವ ದ್ವೀಪಗಳಂತಹ ಗುತ್ತಿಗಳು ಅನೇಕವಿರುವುವು
ಮಾನಸಸರೋವರದಲ್ಲಿ ಮಾತ್ರ ಅಂತಹ ಗುತ್ತಿಗಳು ಇಲ್ಲ. ಈ ವಿಧ
ಮಾನಸಸರೋವರವನ್ನು ನೋಡಿದ ಮೇಲೂ, ಕಾಶ್ಮೀರದಲ್ಲಿರುವ ವಿಸ್ತಾರ
ಊಲಾರ್ ಸರೋವರ, (Wular Lake) ನಮ್ಮ ಕೃಷ್ಣರಾಜಸಾಗ
ಮತ್ತು ವಾಣೀವಿಲಾಸ ಸರಸ್ಸು, ಇವುಗಳನ್ನು ಉಪೇಕ್ಷಿಸುವುದಕ್ಕೆ ಕಾರ
ವಿಲ್ಲ. ಬಹುಕಷ್ಟತರವಾದ ಪ್ರದೇಶಗಳಲ್ಲಿ ಸಂಚರಿಸಿ; ಮಾನಸ ಸರೋವ
ಶ್ರೀ ಕೈಲಾಸ ಮುಂತಾದ ಪರಮ ಪುಣ್ಯಸ್ಥಾನಗಳನ್ನೊಳಗೊಂಡಿರುವ ಹಿಮ
ಚಲದಲ್ಲಿದ್ದು, ಇಲ್ಲಿನ ಮಹಿಮೆಗಳನ್ನೆಲ್ಲವನ್ನೂ ಸಾಕ್ಷಾತ್ತಾಗಿ ನೋ
ಅವುಗಳ ವಿವರಣೆಯನ್ನು ವಿಶದವಾಗಿ ಅನೇಕ ಪುರಾಣಗಳಲ್ಲಿ ಪ್ರಕಟಿ
ಲೋಕೋಪಕಾರವಂ ಮಾಡಿರುವ ನಮ್ಮ ಮಹನೀಯರಾದ ಋಷಿವ
ಮಹಿಮೆಗಳನ್ನು ಕೊಂಡಾಡಲು ಸಾವಿರಾರು ಸಂಪುಟಗಳನ್ನು ಬರೆದರು
ಸಾಲದು. ಮಾನಸ ಸರೋವರವು ಪರಮ ಪುಣ್ಯತೀರ್ಥವೆಂದು ವೇದಮತ
ನುಯಾಯಿಗಳು ಉದ್ಘೋಷಿಸುವುದಲ್ಲದೆ ಟಿಬೆಟ್ ದೇಶೀಯರಾದ ಬೌದ್ಧ
ರಿಂದಲೂ ಅದೇ ಪ್ರಕಾರ ಭಾವಿಸಲ್ಪಟ್ಟಿರುವುದು.

ಪರ್ವತಶ್ರೇಷ್ಠನಾದ ಹಿಮವಂತನ ಹೃದಯಪ್ರದೇಶದಲ್ಲಿ ತುಂ
ರುವ ನಿರ್ಮಲವಾದ ಪರಮಶಿವಭಕ್ತಿರಸದ ನಿಲ್ದಾಣದಂತಿರುವ, ಈ ಮಹ
ಮಾನಸಸರಸ್ಸಿನಲ್ಲಿ ಶ್ರೀಮನ್ಮಹಾರಾಜರವರೂ, ಅವರ ಪರಿಜನಗಳಲ್ಲಿ ವೇ
ಮಾರ್ಗತತ್ಪರರಾದ ಪುಣ್ಯಶಾಲಿಗಳೂ ಸಹ ವಿಧಿಪ್ರಕಾರ ಸ್ನಾನವನ್ನಾಚ
ಸಿದರು. ಪರಿಜನರೆಲ್ಲರೂ ಸ್ನಾನಾಂಗವಾಗಿ ಸಂಕಲ್ಪ ಮಾಡುವಾಗ
"ಅಸ್ಮಾಕಂ ಸಹ ಕುಟುಂಬಾನಾಂ.......ಸಮಸ್ತ ಮಂಗಳಾ ವಾಪ್ತ್ಯರ್ಥ

ಈ ಪುಣ್ಯಜಲದಲ್ಲಿ ಸ್ನಾನ ಮಾಡಿದವರು ಪಾಪಮುಕ್ತರಾಗಿ ಪರಿಶುದ್ಧರಾಗು
ರೆಂತಲೂ, ಕೇವಲ ತಮೋಗುಣಯುಕ್ತರಾಗಿದ್ದವರೂ ಕೂಡ ಇಲ್ಲಿ ಸ್ನಾನ ಮಾ
ಡಿದರೆ ಅವರ ತಮೋಗುಣವನ್ನು ಪರಿಹಾರ ಮಾಡಿಕೊಳ್ಳುವವರಾಗಿ ಸತ್ವಗುಣ
ಸಂಪನ್ನರಾಗುವರೆಂತಲೂ, ಮೇಲೆ ಹೇಳಿದ ಲೋಕವಾರ್ತೆಯ ಸೂಕ್ಷ್ಮ
ಗೂಢಾರ್ಥವು.

……ಸ್ನಾನಂ ಕರಿಷ್ಯೇ" ಹೀಗೆಂದು ಹೇಳಿಕೊಂಡು ಸ್ನಾನವನ್ನಾಚರಿಸಿದರು. ಪರಿವಾರಸಹಿತರೂ, ರಾಜರ್ಷಿಶ್ರೇಷ್ಠರೂ ಆದ, ಆಳುವ ಮಹಾಸ್ವಾಮಿಯವರು, ಮಾನಸಸರೋವರತಟದಲ್ಲಿ ಸೂರ್ಯಾರ್ಘ್ಯಸಮುಖರಾಗಿ ಮುಹೂರ್ತ ನೋಡಿ, ಆಶ್ರಿತರ ಇಷ್ಟಾರ್ಥವನ್ನು ಕೊಡುವ ಕಲ್ಪತರುವಿನ ಚಿಗುರಿನಂತಿರುವ ಕರಾಬ್ಜದಿಂದ, ಬ್ರಹ್ಮಮಾನಸಸರೋವರಪುಣ್ಯತೀರ್ಥವನ್ನು ; ರಾಜ್ಯಾಭಿಷೇಕ ಮಹೋತ್ಸವಕಾಲದಲ್ಲಿ, ಪುಣ್ಯಾಹಮಂತ್ರದಿಂದ ಪಾವನತೆಯಂ ಹೊಂದಿ ಇದ್ದ ಪುಣ್ಯ ಜಲಾಭಿಷಿಕ್ತವಾದ ಉತ್ತಮಾಂಗಕ್ಕೆ ಪ್ರೋಕ್ಷಿಸಿಕೊಳ್ಳುವವರಾಗಿ ; ತಮ್ಮ ಹೃದಯಾಂತರಾಳದಲ್ಲಿ ತುಂಬಿರುವ, ಪರಮೇಶ್ವರ ಪಾದಸರೋರುಹಭಕ್ತಿಸುಧಾರಸಕ್ಕೆ, ಮಾನಸಸರೋವರಪಾವನೋದಕವನ್ನು ಸಂಪರ್ಕ ಮಾಡುವಂತೆ ಬ್ರಹ್ಮಾಚಮನವಂ ಮಾಡಿ, ಸೇವಕಜನ ಪ್ರಾಣಾಧಾರ ಸ್ವರೂಪವು ಪ್ರಾಣಾಯಾಮವಂ ಮಾಡಿ. ತರುವಾಯ ತಮ್ಮ ಧಾರ್ಮಿಕವಾದ ಆಳ್ವಿಕೆಗೆ ಒಳಪಟ್ಟಿರುವ ರಾಜ್ಯದಲ್ಲಿನ ಅಸಂಖ್ಯಾಕ ಪ್ರಜೆಗಳಲ್ಲಿ ಪ್ರತಿಯೊಬ್ಬನಿಗೂ ಮಂಗಳವಾಗಲೆಂದೂ, ಅಶೇಷ ಪ್ರಜೆಗಳಲ್ಲಿ ಸರ್ವರಿಗೂ ಬ್ರಹ್ಮಮಾನಸಸರೋವರಸ್ನಾನಮಹಾಪುಣ್ಯಫಲಭಾಗವು ದೊರೆಯಲೆಂದೂ, ಸಮಸ್ತ ಪ್ರಜೆಗಳೂ ಸುಕ್ಷೇಮಿಗಳಾಗಲೆಂದೂ, ಔದಾರ್ಯದಿಂದ ಸಂಕಲ್ಪಮಾಡಿ ; ಮನಸಾ ಕುಲದೇವತೆಯ ಪಾದಾರವಿಂದವನ್ನು ಧ್ಯಾನಿಸಿ, ಸದ್ಗುರು ಶಿರೋಮಣಿಯರಾಗಿರುವ ಶ್ರೀಮನ್ಮಹಾಮಾತೃಶ್ರೀ ಶ್ರೀ ವಾಣೀವಿಲಾಸಮಹಾಸನ್ನಿಧಾನದ ಚರಣಸರಸೀರುಹಗಳಂ ನೆನೆದು, ತಮ್ಮ ನಿಷ್ಕಲ್ಮಷವಾದ ಮತ್ತು ಪುಣ್ಯತಮವಾದ ದೇಹ ಸಂಪರ್ಕವನ್ನು ಸರಸ್ಸಿನಪುಣ್ಯತೀರ್ಥಕ್ಕೆ ಕೊಟ್ಟು ಸ್ನಾನವನ್ನಾಚರಿಸಿದರು. ತರುವಾಯ ಸಂಪ್ರದಾಯಪ್ರಕಾರ ತರ್ಪಣಾಚರಣೆಯಾಯಿತು. ಸ್ನಾನವನ್ನಾಚರಿಸಿದ ಪರಿಜನಗಳೆಲ್ಲರೂ ತರ್ಪಣಾಚರಣೆಯನ್ನು ಮಾಡಿ ತಮ್ಮ ಪಿತೃ ದೇವತಾ ಸಂತುಷ್ಟಿಯಂ ಮಾಡಿದರು. ದ್ವಾಪರಯುಗದಲ್ಲಿ ಶ್ರೀ ಕೃಷ್ಣನು ಸಬಾಂಧವನಾಗಿ ಪ್ರಭಾಸಕ್ಷೇತ್ರದಲ್ಲಿ ವಿರಾಜಿಸುತ್ತಿದ್ದಂತೆ, ಆಳುವ ಮಹಾಸ್ವಾಮಿಯವರು, ಮಾನಸಸರೋವರತೀರ್ಥಪ್ರದೇಶದಲ್ಲಿ ನಿತ್ಯಕರ್ಮಗಳನ್ನಾಚರಿಸಿ ದಿವ್ಯತೇಜೋಭರಿತರಾಗಿ ಪರಿಜನಗಳಂ ಕೂಡಿಕೊಂಡು ವಿರಾಜಿಸುತ್ತಿದ್ದರು. ಸ್ನಾನಾಂತರ ಅರ್ಘ್ಯ ಸಂಕಲ್ಪ ಕಾಲದವರಿಗೂ ಸರ್ವರಿಗೂ ಹಿಮದ ಜಲವಾಗುತ್ತಲಿರಲು, ತೇಜೋಮಯನಾದ ಭಾಸ್ಕರನು ……

ಈ ಪ್ರಾಂತ್ಯದಲ್ಲೆಲ್ಲಾ ಒಂದು ಬಗೆಯ ಮುಳ್ಳು ಪೊದೆಗಳು (ಪಂಗರು) ಗುಂಪು ಗುಂಪಾಗಿ ಅನೇಕವಿರುವುವು. ಇವು ವಿನಹ ಮತ್ಯಾವ ಸಸ್ಯವೂ ಇಲ್ಲಿ ಇಲ್ಲ. ಇವು ಹಸಿಯಾಗಿದ್ದರೂ ಚೆನ್ನಾಗಿ ಉರಿಯುವವು. ಟಿಬೆಟ್ಟಿನ ಕೂಲೀ ಜನರು ಇದನ್ನೇ ಸೌದೆಯಾಗಿ ಉಪಯೋಗಿಸುವರು. ಇದನ್ನು ಇಲ್ಲಿನ ಜನರು "ಡಾಮಾ" ಎಂದು ಹೇಳುವರು. ಟಿಬೆಟ್ ದೇಶೀಯರ ಸ್ವಭಾವಜನ್ಯವಾದ ಕೊಳಕತನಕ್ಕೆ, ಸೌದೆಯ ದುರ್ಭಿಕ್ಷವೂ, ಬೇಸಿಗೆಯಲ್ಲಿಯೂ ಸಹ ತಡೆಯಲಾರದಷ್ಟು ಚಳಿಯಾಗುವಿಕೆಯೂ, ಮತ್ತು ಇವರುಗಳ ಆಗರ್ಭದಾರಿದ್ರ್ಯವೂ ಕಾರಣಗಳೆಂದು ಆರೋಪಿಸಬಹುದು. ಮಾನಸ ಸರೋವರದ ಒತ್ತಿನಲ್ಲಿನ ಮೈದಾನದಲ್ಲಿ ವಿರಳವಾಗಿ ಹುಲ್ಲು ಬೆಳೆದಿದ್ದು ಪಾಳೆಯದ ಕುದುರೆಗಳ ಉಪಯೋಗಕ್ಕೆ ಬಂದಿತು. ಮಾನಸಸರೋವರದಲ್ಲಿದ್ದ ಹಂಸೆಗಳು, ರಾಜಹಂಸರು ಸಪರಿವಾರರಾಗಿ ದಯಮಾಡಿದುದರ ಕಂಡು ಲಜ್ಜೆಯಿಂದ ಅದೃಶ್ಯವಾಗಿದ್ದವು. ಪರಸ್ಪರ ಸಂದರ್ಶನ ಮಹೋತ್ಸವಲಾಭಕ್ಕೆ, ಹಂಸಪರಿವಾರವೂ, ರಾಜಹಂಸಪರಿವಾರವೂ ಸಹ ಭಾಗಿಗಳಾಗಲು ಅವಕಾಶವಾಗಲಿಲ್ಲ. ಈ ದಿವಸ ಸಾಯಂಕಾಲ ವಿಶೇಷ ತಂಪಾದ ಗಾಳಿಯು ರಭಸದಿಂದ ಅಪ್ರಿಯವಾಗಿ ಬೀಸುತ್ತ, ಗಾಳಿಗೆ ಅಭಿಮುಖವಾಗಿ ನಿಂತು ಮಾತನಾಡುವುದಕ್ಕೂ ಅಸಾಧ್ಯವಾಗುವಂತಿತ್ತು. ಮಾನಸ ಸರೋವರ ಪ್ರಾಂತ್ಯದ ಈ ದಿವಸದ ಶಿಬಿರದಲ್ಲಿನ ಔನ್ನತ್ಯವು ಸಮುದ್ರ ಮಟ್ಟಕ್ಕಿಂತ ಸಾಮಾನ್ಯವಾಗಿ ೧೪,೯೦೦ ಅಡಿಗಳು. ಸಾಙ್ಘಾಯ್ ರಾಣಿಯವರು ಮತ್ತು ಕುಮಾರ್ ಖಡ್ಗಸಿಂಗ್‌ಸಾಲ್‌ರವರೂ ಸಹ ಗರ್ಬ್ಯಾಂಗ್‌ನಲ್ಲಿ ಭೇಟಿಯಾದವರು, ಮಹಾಸ್ವಾಮಿಯವರ ಪಾಳೆಯದ ಜೊತೆಯಲ್ಲಿಯೇ ಪ್ರಯಾಣ ಬೆಳೆಯಿಸಿ ಇಲ್ಲಿಗೂ ಬಂದಿದ್ದರು. ಕೈಲಾಸಯಾತ್ರಾರ್ಥಿಗಳಾದ ಬಹು ಜನ ಸಾಧುಗಳೂ ಬಂದಿದ್ದರು. ಮಹಾಸ್ವಾಮಿಯವರೂ ಮತ್ತು ಸಾಙ್ಘಾಯ್ ರಾಣಿಯವರು ಸಹ ಅನೇಕ ಧನ ಧಾನ್ಯಗಳನ್ನು ಕೊಟ್ಟು ಈ ಸಾಧುಗಳಿಗೆ ಸಹಾಯ ಮಾಡಿದರು.

ಜುಲೈ ೨೩ನೆಯ ಪ್ರಾತಃಕಾಲ ೫-೩೦ ಘಂಟೆಗೆ ಮಹಾಸ್ವಾಮಿಯವರ ಪಾಳೆಯವು ಶಿಬಿರದಿಂದ ಹೊರಟು ಮಾನಸ ಸರೋವರದ ಅಂಚಿನಲ್ಲಿಯೇ ಉತ್ತರದಿಕ್ಕನ್ನು ಕುರಿತು ೬ ಮೈಲಿಗಳ ದೂರ ಪ್ರಯಾಣವನ್ನು ಜರುಗಿಸಿತು. ಮಾರ್ಗದಲ್ಲಿ ಒಂದು ಕಠಿಣವಾದ ಗುಡ್ಡ. ಗುಡ್ಡದ ಒಂದು ಪಾರ್ಶ್ವ

ಹುಲ್ಲು ನೆಲವಾಗಿ, ಸರೋವರದ ಕಡೆಗೆ ಇಳಿಜಾರಾಗಿರುವುದು. ಈ ಗುಡ್ಡದ ಮೇಲೆ ಬೌದ್ಧರ ಮಠವೊಂದಿರುವುದು. ಈ ಮಠಕ್ಕೆ ಮಹಾಸ್ವಾಮಿಯವರು ಕೆಲವು ಪರಿಜನಗಳೊಡನೆ ಚಿತ್ತೈಸಿದ್ದರು. ಮಠವು ಅತ್ಯಂತ ಕಶ್ಮಲ. ಒಂದೆ ಚಿಕ್ಕಕೋಣೆಯಲ್ಲಿ ನೋಡಿದ ಮಠದಲ್ಲಿ ಅರ್ಘ ಪುಷ್ಪಗೂ ಚೆನ್ನಾಗಿರಲಿಲ್ಲ. ಈ ೩ ಮೈಲಿಗಳು ಕಳೆದನಂತರ ಮಾನಸಸರೋವರದಲ್ಲಿ ಕೆಲವು ಬಾತುಗಳನ್ನು (Ducks) ನೋಡಿದ್ದಾಯಿತು. ಕೆಲವು ಬಿಳಿಯವು, ತಲೆಯಮೇಲೆ ಕಪ್ಪು ಚುಕ್ಕೆ, ಮತ್ತೆ ಕೆಲವು ಬೂದು ಅಥವ ಕಂದು ಬಣ್ಣ. ಇನ್ನೂ ಕೆಲವು ಸಣ್ಣಸಣ್ಣ ಪಕ್ಷಿಗಳಿದ್ದುವು. ಇವು ಜನಸಮುದಾಯವನ್ನು ಕಂಡ ಒಡನೆಯೇ ಓಡಿ ಹೋದವು. ಪರಿವಾರವು ಮುಂದೆ ಎಡಕ್ಕೆ ತಿರುಗಿ, ಕ್ರಮೇಣ ಎತ್ತರವಾಗಿರುವ ಒಂದು ದಿಣ್ಣೆಯನ್ನು ಹತ್ತಿ, ಮತ್ತೊಂದು ವಿಸ್ತಾರವಾಗಿರುವ ಮಟ್ಟಸವಾದ ಬಂಜರು ನೆಲದಮೇಲೆ ಹೊರಟಿತು. ಇದನ್ನು ಚಿನ್ನದ ಅದುರುಗಳುಳ್ಳ ಪ್ರದೇಶವೆಂದು ಹೇಳುವರು. ಈ ದಾರಿಯಲ್ಲಿ ೫ ಮೈಲಿಗಳು ಒಂದು ಒಟ್ಟು ೧೧ ಮೈಲಿಗಳ ಪ್ರಯಾಣವನ್ನು ಜರಗಿಸಿ ಮಾನಸಸರೋವರದ ದಡದಲ್ಲಿ ಸಿದ್ಧಪಡಿಸಿದ್ದ ಡೇರಾದಲ್ಲಿ ಪಾಳೆಯವು ೯-೩೦ ಘಂಟೆಗೆ ಬಂದು ಬಿಡಾರಮಾಡಿತು. ಬಿಡಾರದ ಒತ್ತಿನಲ್ಲಿಯೇ ಒಂದು ನೀರಿನ ಕೋಡಿಯು ಹೊರಟಿರುವುದು. ಇದನ್ನು ಸಿಂಧೂನದಿಯ ಮೂಲವೆಂದು ಹೇಳುವರು. ಸಮೀಪದಲ್ಲಿ ಗಂಧಕದ ವಾಸನೆಯುಳ್ಳ ಬಿಸಿನೀರ ಚಿಲುಮೆಯೊಂದಿರುವುದು (Hot Sulphur Spring). ಹತ್ತಿರದ ಒಂದು ಗುಡ್ಡದಮೇಲೆ ಜ್ಯೂಗೊಂಪವೆಂಬ (Jieu Gompa) ಒಂದು ಬೌದ್ಧಸನ್ಯಾಸಿಗಳ ಮಠವಿರುವುದು. ಇದರ ಹೊರಭಾಗವು ನೋಡುವುದಕ್ಕೆ ಆಕರ್ಷಕವಾಗಿರಲಿಲ್ಲವಾಗಿ ಇಲ್ಲಿಗೆ ಯಾರೂ ಹೋಗಲಿಲ್ಲ. ಮಧ್ಯಾಹ್ನ ಸಮಯದಲ್ಲಿ, ಮೇಘಮಂಡಲದ ಮಧ್ಯದ ತೆರಪಿನಲ್ಲಿ, ದೂರದಿಂದ ಶ್ರೀ ಕೈಲಾಸಶಿಖರದ ಸುಳಿವು (ಬ್ರಹ್ಮಮಾನಸಸರೋವರಸ್ನಾನಫಲರೂಪವಾಗಿ) ಗೋಚರಿಸುತ್ತಲಿದ್ದಿತು. ಈ ದಿನ ಹಗಲೆಲ್ಲಾ ಕೊರೆತದಗಾಳಿಯು ಬೀಸುತ್ತಲಿದ್ದಿತು. ಹುಮುಕಾದ ಬಿಸಿಲಿದ್ದಾಗ್ಯೂ, ಈ ಗಾಳಿಯ ದೆಸೆಯಿಂದ, ಜನಗಳಿಗೆ ಡೇರಾಗಳ ಒಳಗಡೆಯಿರುವುದೇ ಹಿತವಾಗಿ ಕಾಣುತ್ತಲಿದ್ದಿತು. ಡೇರಾಗಳ ಎದುರಾಗಿ, ಸರೋವರದ ಪೂರ್ವಕ್ಕೆ ಪ್ರಸಿದ್ಧವಾದ ಬ್ರಹ್ಮಪುತ್ರಾನದಿಯ ಮೂಲವಿರುವುದೆಂದು ತಿಳಿಯಬಂದಿತು. ಹಿಂದಿನದಿನ ಮಾನಸಸರೋವರದಲ್ಲಿ ಸ್ನಾನಮಾಡ್ದ

ಪ್ರಯುಕ್ತ, ಪರಿವಾರದವರಲ್ಲಿ ಹರಿಕಾರ್ ಶೇಷಾಚಾರ್ಯರೆಂಬುವರಿಗೆ ಶ್ವಾ
ಕೋಶದ ಉಬ್ಬಸಜಾಡ್ಯವು ಪ್ರಾಪ್ತವಾಗಿದ್ದಿತು.

ಜುಲೈ ೨೪ನೆಯ ಬೆಳಗ್ಗೆ ೫-೩೦ ಘಂಟೆಗೆ ಜ್ಯೂಗೋಂಪವನು
ಬಿಟ್ಟು, ಉಭಯಪಾರ್ಶ್ವಗಳಲ್ಲಿಯೂ ಗುಡ್ಡಗಳಿಂದ ಒಡಗೂಡಿರುವುದ
ಗಿಯೂ, ಕೆಲವೆಡೆ ಮರಳು ಮಿಶ್ರವಾಗಿಯೂ, ಕೆಲವೆಡೆ ಅರೆಗಳುಳ್ಳದ್ದಾ
ಗಿಯೂ ಇರುವ ವಿಸ್ತಾರವಾದ ಮೈದಾನದಲ್ಲಿ ಹೊರಟು, ದಾರಿಯಲ್ಲಿ ಅಲ್ಲ
ಡಾಮಾ ಎಂಬ ಮುಳ್ಳು ಪೊದರುಗಳನ್ನೂ, ಇವುಗಳಿಗೆ ಮುತ್ತಿಕೊಂಡಿರು
ಒಂದು ಅಥವ ಒಂದೂವರೆ ಅಂಗುಲ ಉದ್ದವಾದ ಕರಿಯಕಂಬಳಿಯಹು
ಗಳನ್ನೂ ನೋಡಿಕೊಂಡು ೮ ಮೈಲಿಗಳು ಪ್ರಯಾಣಮಾಡಿ ೮-೩೦ ಘಂಟೆ
ಸಮಯವು ಕೈಲಾಸಪ್ರಾಂತ್ಯದ ತಪ್ಪಲಿನಲ್ಲಿರುವ ಬಾರ್ಖಾ ಮೈದಾನವನು
ಸೇರಿತು. ದಾರಿಯಲ್ಲಿ ಆಗಾಗ್ಯೆ ಓಡಿಯಾಡುತ್ತಲಿದ್ದ ಕೆಲವು ಸಣ್ಣ ಮೊ
ಗಳು ಕಾಣಿಸಿಕೊಳ್ಳುತ್ತಿದ್ದವು. ಇಲ್ಲಿ, ಶೇವಂತಿಗೆ ಹೂವುಗಳನ್ನು ಹೋ
ವುದಾದ, ಮಧ್ಯೆ ಹಳದಿಯ ಕೇಸರ, ಸುತ್ತಲೂ ನೀಲಿಯ ಎಸಳುಗಳು
ಒಂದು ಜಾತಿಯ ಹೂವಿನಗಿಡಗಳಿರುವುವು. ವಿರಳವಾಗಿರುವ ಬತ್ತಿದ ಹುಲ್ಲ
ಯಥೇಚ್ಛವಾಗಿರುವುದು. ಮೋಡಗಳು ತೆಗೆದುಹೋದಾಗ್ಯೆ, ಇಲ್ಲಿಗೆ ಕೈಲಾ
ಶಿಖರದ ಚಿನ್ಹೆಯು ಕಾಣುವುದು. ಒಂದು ಬೆಟ್ಟದಮೇಲೆ ಭಾರಿಯದಾ
ದುರ್ಗವನ್ನು ಕಟ್ಟಿ ಅದರ ಮೇಲೆ ಅದ್ಭುತವಾದ ಗೋಪುರವನ್ನು (Dome
ಇಟ್ಟರೆ ಹೇಗೋ ಹಾಗೆ ಇಲ್ಲಿಗೆ ಕೈಲಾಸಶಿಖರವು ಕಾಣುವುದು. ಎಲ್ಲವ
ಹಿಮದಮಯ. ಒಂದು ಪಾರ್ಶ್ವದಲ್ಲಿ ಹಂತಗಳನ್ನು ಕಟ್ಟಿರುವಂತೆ, ಸಮಾ
ತರ ರೇಖೆಗಳಂ ಹೋಲುವ ಎರಡು ಸಾಲಾಗಿ, ಬುಡದಿಂದ ತುದಿಯವರೆವಿಗೂ
ಮಧ್ಯೆಮಧ್ಯೆ ಸಮನಾದ ಅಳತೆಯಭಾಗವನ್ನು ಬಿಟ್ಟು ಕಲ್ಲುಗಳು ಮುಂದ
ಚಾಚಿಕೊಂಡಿರುವವು. ಇವೆಲ್ಲಾ ನೋಟಕ್ಕೆ ಮನೋಹರವಾಗಿರುವುದ
ವಿನಹ ಮಹಿಮಾತಿಶಯವೇನೂ ತೋರಿಬರಲಿಲ್ಲ. ಶಿಬಿರಕ್ಕಾಗಿ ಡೇರಾಗಳನ
ಹಾಕಿದ್ದ ಪ್ರದೇಶವೆಲ್ಲ ಜೇಡಿಯಮಣ್ಣಿನನೆಲ, ಕಲ್ಲುಗಳಿಲ್ಲ. ಒಂದು ಬಗ
ಕೆಸರು ಭೂಮಿಯಮೇಲೆ ಸಣ್ಣದೊಂದು ತೊರೆಯು ಹರಿಯುತ್ತಲಿದ್ದಿತ
ಈ ಭೂಮಿಯು ಪ್ರಾಯಶಃ ಪೂರ್ವದಲ್ಲಿ ಯಾವದೋ ಸರಸ್ಸಿನ ಒಡಲಾ
ದ್ದಂತೆ ತೋರುವುದು. ಮೇಲೆ ಹೇಳಿದ ಬಾರ್ಖಾ ಮೈದಾನವು ವಿಶಾಲವ
ಗಿರುವ ಪ್ರಯುಕ್ತ ಆಕಾಶವಿಮಾನಗಳ ನಿಲ್ದಾಣವನ್ನಾಗಿ ಉಪಯೋಗಿಸ

1,2.

ಬಾರ್ಖಾಮೈದಾನದಿಂದ ದೃಶ್ಯನಾಗುವ ಕೈಲಾಸಪರ್ವತವು.

43.

ಟಿಬೆಟ್‌ದೇಶೀಯರ ಒಂದು ಕುಟುಂಬದವರು ವಾಸಮಾಡುವ ಮನೆ.

ಬಹು ಅನುಕೂಲವಾಗಿರುವುದು. ಈ ಪ್ರದೇಶಕ್ಕೆಲ್ಲ ಎಂಥೇ ಮನೆಗಳೇ ಇರುವವು. ಇಲ್ಲಿ ಚೌರೀಮೃಗಗಳ ಮಂದೆಗಳು ಅನೇಕವಾಗಿ ಕಂಡುಬಂದವು. ಮಧ್ಯಸ್ಥವೆಲ್ಲಾ ಭಯಂಕರವಾದ ತಂಗಾಳಿಯು ಬೀಸುತ್ತಲಿದ್ದಿತ್ತು; ಇಲ್ಲಿನ ವಾಯುಮಂಡಲದ ವಿರಳಸ್ಥಿತಿಯಲ್ಲಿ ಮೃಗಗಳಾಗಲೀ ಮನುಷ್ಯರಾಗಲೀ ಬಹುಕಾಲ ವಾಸಿಸಲು ಸಾಧ್ಯವಿಲ್ಲ. ಹಿಂದೆ ಹೇಳಿದ್ದ ತಾಕ್ಲಾಕೋಟಿನಲ್ಲಿದ್ದ ಜಂಗ್‌ಪಾಳ್ ರವರ ಸಹಾಯಾಧಿಕಾರಿಯಾದ (Assistant) ಒಬ್ಬ ತಾರ್ಜನ್ (Tarjan ಅಧಿಕಾರದ ಹೆಸರು) ಎಂಬ ಹುದ್ದೇದಾರನು ಇಲ್ಲಿರುವನು. ಈತನು ತನ್ನ ಗೈರ್‌ಹಾಜರಿಯಲ್ಲಿ ತನ್ನ ಮನಸ್ಸಿಗೆ ಬೇಕಾದವರನ್ನು ತನ್ನ ಸ್ಥಾನಕ್ಕೆ ನೇಮಿಸಿಕೊಳ್ಳಬಹುದು. ಮಹಾಪ್ರಭುಗಳವರು ಈತನ ಮನೆಗೆ ಚಿತ್ತೈಸಿದರು. ಈತನು ಮಹಾಸ್ವಾಮಿಯವರನ್ನೂ, ಪರಿಜನಗಳನ್ನೂ ಸಹ ತನ್ನ ಮನೆಯ ಒಂದು ಕೊಠಡಿಗೆ ಕರೆದುಕೊಂಡುಹೋದನು. ಕೊಠಡಿಯು ಟಿಬೆಟರಾಜನ ಅಂತಃಪುರ. ಈ ಅಂತಃಪುರವನ್ನು ಹೊರಗೆ ನಿಂತುನೋಡಿ ಒಂದಕ್ಕೆ ಬರಲು ಅನುಕೂಲಿಸುವಂತೆ ಒಂದೇ ಕಿಟಕಿ. ಜಂಗ್‌ಪಾಳ್‌ರವರ ಕೊಠಡಿಯನ್ನು ಅಲಂಕರಿಸಿದ್ದವೆಂದು ಹಿಂದೆ ಹೇಳಿದ್ದಂಥವ ವಸ್ತುಗಳೇ ಈ ಕೊಠಡಿಯನ್ನು ಅಲಂಕರಿಸಿದ್ದವು. ಇವುಗಳ ಜೊತೆಗೆ ಒಂದು ತಂತಿಯ ವಾದ್ಯ. ತಾರ್ಜನ್‌ರವರು ಈ ವಾದ್ಯದಲ್ಲಿ ಟಿಬೆಟ್‌ದೇಶದ ಎರಡು ಮಟ್ಟುಗಳನ್ನು ಬಾರಿಸುತ್ತ ಜೊತೆಯಲ್ಲಿ ತಾವೂ ಹಾಡಿದರು. ಈತನ ಮನೆಯನ್ನು ಬಿಟ್ಟು ಹೊರಟಮೇಲೆ ಸರ್ವರೂ, ಒಬ್ಬ ಟಿಬೆಟ್‌ದೇಶದ ಕುರುಬನ ಮನೆಯನ್ನು ನೋಡಲಿಕ್ಕೆ ಹೋದರು. ಮನೆಯೆಂದರೆ ನಡುಮಟ್ಟದ ಚೌಕನಾದ ಹಳ್ಳ, ೧೦ ಅಡಿಯ ಉದ್ದ, ೧೦ ಅಡಿಯಗಲ, ನೆಲವೂ, ಗೋಡೆಯೂ ಸಹ ಮಣ್ಣುಗಾರು ಮಾಡಿದಂತಿದ್ದವು. ನೀರು ಒಳಕ್ಕೆ ಇಳಿಯದಂತೆ ಚೌರಿಯ ಕೂದಲುಗಳಿಂದ ನೆಯ್ದ ಬಟ್ಟೆಯ ಮೇಲ್ಛಾವಣಿ. ಮನೆಯೊಳಗೆ ಅಡಿಗೆಗಾಗಿ ಒಂದು ಮಣ್ಣಿನ ಒಲೆ. ಒಂದು ಮೂಲೆಯಲ್ಲಿ ಬುದ್ಧದೇವರ ವಿಗ್ರಹ, ಅದರ ಮುಂದೆ ನೀರಿನಪಾತ್ರೆ. ದೀಪ ಮುಂತಾದವುಗಳು. ಮನೆಯು ಬಹಳ ಇಕ್ಕಟ್ಟು. ಒಟ್ಟು ಸಂಸಾರಕ್ಕೆಲ್ಲ ಒಂದೇ ಕೊಠಡಿಯಲ್ಲಿ ವಾಸ. ಮನೆಯೊಳಗೆ ಬೆಚ್ಚಗೆ ಹಿತವಾಗಿತ್ತು. ಇವರು ಉಪಯೋಗಿಸುವ ಸೌದೆಯು ಡಾಮಾ ಎಂಬ ಮುಳ್ಳುಗಿಡದ ಬೇರು ಮತ್ತು ಕಡ್ಡಿ. ಇದರ ಜೊತೆಗೆ, ದನ, ಚೌರೀಮೃಗ, ಕುರಿ ಮತ್ತು ಕುದರೆ ಇವುಗಳ ಸಗಣಿಯ ಬೆರಣಿ. ಒಲೆ ಉರಿಮಾಡು

ವುದಕ್ಕೆ ತಿವಿಗೆಳನ್ನುಪಯೋಗಿಸುವರು. ಟಿಬೆಟ್ ದೇಶದ ಕೂಲಿಯ ಜನರ್ "ಟೀ" ಕುಡಿಯುವರು. ಆದರೆ ಹಾಲು, ಸಕ್ಕರೆ ಇಲ್ಲ. ಬಿಸಿಯಾದ ಟೀ ಕಷ ಯಕ್ಕೆ ಬೆಣ್ಣೆಯನ್ನು ಹಾಕಿ ಕರಗಿಸಿ, ಉಪ್ಪು ಮಿಶ್ರಮಾಡಿ ಕುಡಿಯುವ ಟಿಬೆಟ್ ದೇಶೀಯರು, ಅದರಲ್ಲಿ ವಿಶೇಷವಾಗಿ ಹೆಂಗಸರು ತಮ್ಮ ಕೆನ್ನೆಗ ಮೇಲೂ ಮತ್ತು ಮೂಗಿನ ಮೇಲೂ ಸಹ ಚರ್ಮವು ಬಿರಿಯದಿರುವುದಕ್ಕಾ ಬೆಲ್ಲದ ಅಂಟನ್ನು ಬಳಿದುಕೊಳ್ಳುವರು. ಇದು ನೋಡುವುದಕ್ಕೆ ವಿಕಾರವ ಾಗಿರುವುದು. ಈ ಪ್ರಾಂತ್ಯದಲ್ಲಿ ನಮ್ಮ ದೇಶದ ಕಾಗೆಗಳಿಗಿಂತಲೂ ಗಾತ್ರ ಹಾಲು ದಪ್ಪನಾಗಿರುವ ಅಪ್ಪಟ ಕಪ್ಪುಬಣ್ಣದ ಕಾಗೆಗಳಿರುವುವು. ರಾ ಯೆಲ್ಲಾ ಬಲು ಚಳಿ.

ಜುಲೈ ೨೫ರ ಬೆಳಿಗ್ಗೆ ಕೇವಲ ಚಳಿ, ಪ್ರಾತಃಕಾಲ ೫ ಘಂಟೆಗೆ ಡೇ ಯಿಂದ ಹೊರಗೆಬಂದು ನೋಡಲು ನಿರ್ಮಲಾಕಾಶವಾಗಿದ್ದು ಪರಿಶುದ್ಧ ಕೈಲಾ ಪರ್ವತವು ಪ್ರಾಂತ್ಯ ವಿಶಾಲವಾಗಿ ಕಾಣತೊಡಗಿತು. ಈ ದಿವಸದ ಪರ್ವ ದೃಶ್ಯವು ಬಹು ರಮ್ಯವಾಗಿತ್ತು. ಅನೇಕವಾದ ಕೊತ್ತಳಗಳಿಂದಲೂ, ಕಸ ಗಂಡಿಗಳಿಂದಲೂ, ಅಪಾರವಾದ ಶಿಖರಗಳಿಂದಲೂ, ಬುರುಜುಗಳಿಂದಲೂ ವಿಜೃಂಭಿಸುವ ಒಂದು ಗಿರಿದುರ್ಗದಲ್ಲಿನ ಮಧ್ಯದಲ್ಲಿ ಶೋಭಿಸುವ ರಮಣೀ ಯವಾದ ಹರ್ಮ್ಯದ ಮೇಲಿನ ಪ್ರಾಂತ್ಯದಲ್ಲಿ ರಾರಾಜಿಸುವ ಉನ್ನತ ಶಿಖ ರೋಪಾದಿಯಲ್ಲಿ ಕೈಲಾಸಶಿಖರವು ಪ್ರಕಾಶಿಸುತ್ತಲಿದ್ದಿತು. ಬಾರ್ಖಾ ಮೈದಾನದಿಂದ ೭ ಮೈಲಿಗಳ ದೂರದಲ್ಲಿ ಕೈಲಾಸಪರ್ವತದ ಪಾದಪ್ರಾಂತ ದಲ್ಲಿರುವ ದಾರಚಿನ್ ಅಥವ ತಾರ್ಚಿನ್ (Darchin or Tarchin) ಎಂ ಗ್ರಾಮದ ಬಳಿಗೆ, ಬಾರ್ಖಾ ಮೈದಾನದ ಮತ್ತೊಂದು ಪಾರ್ಶ್ವದ, ಅನೇ ಕುಟಿಲಪ್ರವಾಹಗಳಿಂದೊಡಗೂಡಿ, ವಿಪರೀತ ಕೆಸರಾದ ಪ್ರದೇಶಕ್ಕೆ ಹೋ ಬೇಕಾಯಿತು. ದಾರ್ಚಿನ್ ಗ್ರಾಮವು ಭರತಖಂಡದ ಸಿಕಿಮ್ ಸಂಸ್ಥಾನಕ್ಕೆ (Sikkim State) ಸೇರಿದುದೆಂದು ಅಲ್ಲಿನವರಿಂದ ತಿಳಿಯಿತು. ದಾರಿಯಲ್ಲಿ ಬರುವಾಗ್ಯೆ ಟಿಬೆಟ್ ದೇಶದ ಕುರುಬರ ಒಂದು ಕುಟುಂಬವು ವಾಸಮಾಡುತ್ತಿ ದ್ದ ಒಂದು ಬಟ್ಟೆಯ ಜೋಪಡಿಯು (Rowtie) ಕಂಡುಬಂದಿತು ಅದರಲ್ಲಿ ಒಂದು ಮಂದೆ ಕುರಿಗಳು, ಚಮರೀಮೃಗದ ಮಂದೆಯೊಂದು ಮತ್ತು ನಾಲ್ಕು ಕುದುರೆಗಳೂ ಇದ್ದುವು. ಈ ಕುಟುಂಬದಲ್ಲಿನ ಒಬ್ಬ ಗಂಡಸನು ಬರನಲ್ಲಿದ್ದ ಚೈನಾದೇಶದ ಬಂದೂಕವನ್ನು ತಾರಿಸೆಂದು ಕೇಳಲು ಹಾಕಿ

ದ್ದನು. ಅವರ ಗುರಿಯನ್ನು ತಪ್ಪಿದನು. ಸ್ಥಳೀಯರಿಂದ ರಾಜಾಲೋಬ (Raja Loba) ಎಂದು ಕರೆಯಲ್ಪಡುವ ಸಿಕಿಂ ಸಂಸ್ಥಾನಿಕರಿಂದ ನೇಮಕಲ್ಪಟ್ಟಿರುವ ಒಬ್ಬ ಗೌವರ್ನರ್ ಎಂಬ ಅಧಿಕಾರಿಯ ಮನೆಯು ದಾರ್ಜನಾಗ್ಲಲ್ಲಿರುವುದು. ಮನೆಯ ಹತ್ತಿರ ಒಂದು ತೋಟ. ತೋಟದ ಆಚೆ, ಸ್ವಲ್ಪಂಡ ಮನೆಗೆ ಎದುರಾಗಿ ತೇರಾಗಳು ಹಾಕಲ್ಪಟ್ಟಿದ್ದುವು. ಈ ಗ್ರಾಮದ ಇತರ ಮನೆಗಳೆಲ್ಲವೂ ಅನೇಕ ಕುಟುಂಬದವರು ವಾಸಮಾಡುತ್ತಲಿರುವ ಒಪ್ಪವಿಲ್ಲದ ಜೋಪಡಿಗಳೇ. ಶ್ರೀಮನ್ಮಹಾರಾಜರವರ ಪಾಳೆಯವು ತೇರಾವನ್ನು ಸೇರಿದ ಒಡನೆಯೇ, ಮೇಲೆ ಹೇಳಿದ ಗೌವರ್ನರ್ ಸಾಹೇಬರು, ಸಿಂಗಲರಾಷ್ಟ್ರ ಮಾಮಣೀದೇವಿಯನ್ನು ವಿಪರೀತವಾಗಿ ಆರಾಧನೆಮಾಡಿ, (ಮದ್ಯಪಾನಮಾಡಿ) ತಮ್ಮ ಪೂರ್ಣಾನುಗ್ರಹಕ್ಕೆ ಪಾತ್ರರಾಗಿ ಮೂಗಿನಿಂದ ರಕ್ತಪ್ರವಾಹವು ಹರಿಯುತ್ತ ವಿಶ್ರಾಂತಿ ಸುಖಸಾಮ್ರಾಜ್ಯದಲ್ಲಿರುವರೆಂದು ವರ್ತಮಾನ ಬಂದಿತು. ಡಾಕ್ಟರ್ ಮಹಾಶಯರು ಮತ್ತು ಅವರ ಅಸಿಸ್ಟೆಂಟ್‌ರವರು ಹೋಗಿ ನೋಡಿ ಗೌರ್ನರಿಗೆ ಔಷಧೋಪಚಾರಗಳನ್ನು ಮಾಡಿದರು. ಡಾಕ್ಟರ್‌ರವರು ಮಾಡಿರುವ ಅನೇಕವಾದ ಚಿಕಿತ್ಸೆಗಳಲ್ಲಿ ಇದು ಕಷ್ಟಾತಿ ಕಷ್ಟತರವಾದ ಚಿಕಿತ್ಸೆಯಾಗಿದ್ದಿತು. ಗೌರ್ನರ್, ಒಳ್ಳೆಯ ಉದ್ದನಾದ, ಬಲಿಷ್ಠನಾದ, ಗಂಭೀರವರ್ಣದ ಹೊಡದುಗೊಡದಲಿನ ಮನುಷ್ಯ. ಅಂತೂ ಸಂಜೆಯವೇಳೆಗೆ ಗೌರ್ನರ್‌ರವರು ಚೇತರಿಸಿಕೊಂಡರು. ಕೈಲಾಸದ ಬಸಿನಲ್ಲಿರುವ ಬೌದ್ಧಮಠಗಳ ಆ ಮಠಗಳಲ್ಲಿ ಅತ್ಯಂತ ದೊಡ್ಡದಾದ ಗ್ಯಾಂಗ್ಟಗೊಂಪಾ (Gangta Gompa) ಮಠಕ್ಕೆ ಮಹಾಸ್ವಾಮಿಯವರು ಪರಿಜನಗಳೊಡನೆ ಚಿತ್ತೈಸಿದರು. ತಾಕ್ಲಾಕೋಟಿನಲ್ಲಿದ್ದ ಮಠದಷ್ಟು ಈ ಮಠವು ದೊಡ್ಡದಲ್ಲವಾದರೂ, ಕತ್ತಲೆ ಮತ್ತು ಕಷ್ಟಲದಲ್ಲಿ ಅದಕ್ಕೆ ಸಮಾನವಾಗಿಯೇ ಇದ್ದಿತು. ಇದೂ ಸಹ ಕಲ್ಲು ಮತ್ತು ಮಣ್ಣಿನಿಂದ ಕಟ್ಟಿದ ಅಂತಸ್ತಿನ ಮನೆಯೇ. ಪೂರ್ವದಲ್ಲಿ ಕೆಲವುಕಾಲ ಟಿಬೆಟ್‌ದೇಶವನ್ನು ಆಕ್ರಮಿಸಿದ್ದು ಅವರೊಡನೆ ವಿರೋಧಿಸಿ, ತಾಕ್ಲಾಕೋಟ್ ನಲ್ಲಿ ಹೊಡೆದಾಡಿ ಪರಾಜಿತನಾಗಿ ಕೊಲ್ಲಲ್ಪಟ್ಟ, ಕಾಶ್ಮೀರ ಮತ್ತು ಜಮ್ಮುಪ್ರಾಂತ್ಯದ ಜನರಲ್ ಜೋರಾವರ್ ಸಿಂಗ್ (General Jorawar Singh) ಎಂಬುವನು ಧರಿಸಿದ್ದ ಕವಚ ಮತ್ತು ಕತ್ತಿ ಸಹ ಈ ಮಠದಲ್ಲಿ ನೋಡಲರ್ಹವಾದ ವಸ್ತುಗಳು. ಮಠದಲ್ಲಿನ ವೃದ್ಧಗುರುವು (Old Lama) ಮಹಾಸ್ವಾಮಿ

ಯುವರನ್ನು ; ಕೈಯಲ್ಲಿ ಹೊಗೆಯಾಡುತ್ತಿರುವ ಸಾಂಬ್ರಾಣಿಧೂಪವನ್ನು ಹಿಡ್ಕೊಂಡು ಮಠದಬಾಗಿಲಿಗೆ ಬಂದು ಸ್ವಾಗತವನ್ನು ಕೊಟ್ಟು ಉಪಚರಿಸಿದ ಈ ಕಾಲದಲ್ಲಿ ಮಠದ ಮುಚ್ಚಿನಮಾಳಿಗೆಯ ಮೇಲ್ಭಾಗದಲ್ಲಿ ತುತ್ತೂರಿ ಮ ಕೊಂಬು ಮುಂತಾದವು ಧ್ವನಿಮಾಡಲ್ಪಡುತ್ತಿದ್ದುವು. ಮಹಾಸ್ವಾಮಿಯು ಈ ಮಠಕ್ಕಾಗಿ ಕೆಲವು ಬನಾತುಗಳನ್ನೂ, ದ್ರವ್ಯವನ್ನೂ ದಯಪಾಲಿಸಿದರು

ದಾರ್ಚೆನ್ ಗ್ರಾಮವು ಕೈಲಾಸಗಿರಿಶ್ರೇಣಿಯ ಪಾದಪ್ರಾಂತ್ಯ ಪರ್ವತದ ಆಗ್ನೇಯದಿಕ್ಕಿನಲ್ಲಿರುವುದು. ಕೈಲಾಸಪರ್ವತಕ್ಕೆ ಪ್ರದಕ್ಷಿಣ ಡಲು ಬರುವ ಯಾತ್ರಿಕರು ಪರ್ವತವನ್ನು ಬಲಕ್ಕೆ ಬಿಟ್ಟುಕೊಂಡು ಪ್ರದಕ್ಷಿಣೆಗೆ ಪ್ರಾರಂಭಿಸುವುದು ಇಲ್ಲಿಂದಲೇ. ಶ್ರೀಮನ್ಮಹಾರಾಜರವರು ಸಪರಿವಾರರಾಗಿ ಜುಲೈ ೨೬ನೆಯ ಪ್ರಾತಃಕಾಲ ೫ ೩೦ ಘಂಟೆಗೆ ಕೈಲಾಸಪ್ರದಕ್ಷಿಣೆಗೆ ಚಿತ್ತೈಸಿ, ದಾರ್ಚೆನ್ ಗ್ರಾಮವನ್ನು ಬೀಳ್ಕೊಂಡು ಒಂದು ದಿಣ್ಣೆಯದಿಂದ ಬಲಭಾಗಕ್ಕೆ ಹೊರಟು ೨ ಮೈಲಿಗಳ ದೂರ ಪ್ರಯಾಣವನ್ನು ಜರುಗಿಸಿದರು. ಮುಂದೆ ತಗ್ಗಾದ ಬುಡದಿಂದೊಡಗೂಡಿದ ಒಂದು ಕಣಿವೆಯಲ್ಲಿ ಒಂದು ನದಿಯು ಹರಿಯುತ್ತಿರುವುದು. ಈ ನದಿಯು ಕೈಲಾಸಪರ್ವತವನ್ನೂ ಇದರ ಸಮೀಪದಲ್ಲಿನ ಇತರ ಗಿರಿಸಾಲುಗಳನ್ನೂ ವಿಂಗಡಿಸುತ್ತಿರುವುದು. ಈ ಕಣಿವೆಗೆ ಇಳಿದ ಪಾಳಯವು ಮತ್ತೆ ಬಲಕ್ಕೆ ತಿರುಗಿ ನದಿಯನ್ನನುಸರಿಸಿ, ಮಟ್ಟಸವಾದ ಭೂಮಿಯನ್ನು ತಲುಪಿ ೫-೬ ಮೈಲಿಗಳು ಬಂದು, ಕೈಲಾಸಪರ್ವತದ ದಕ್ಷಿಣ ಮತ್ತು ಪಶ್ಚಿಮ ಮುಖದ ಶಿಖರದರ್ಶನವನ್ನು ಪಡೆದದ್ದಾಯಿತು. ಮೇಲೆ ಹೇಳಿದ ಕಣಿವೆಯ ಮಧ್ಯದಲ್ಲಿ ಬಲಪಾರ್ಶ್ವ ಅಲ್ಲಿ ಹರಿಯುತ್ತಲಿದ್ದ ನದಿಯ ಆಚೆಯ ದಡದಲ್ಲಿ, ಬೌದ್ಧಸನ್ಯಾಸಿಗಳ ಸಣ್ಣ ಮಠವೊಂದಿರುವುದು. ಇದನ್ನು ನೆಂಡಿಪು (Nendipu) ಎಂದು ಕರೆಯುವರು. ಇದನ್ನು ನೋಡಲಿಕ್ಕೆ ಯಾರೂ ಹೋಗಲಿಲ್ಲ. ಕಣಿವೆಯ ಮೇಲ್ಭಾಗದಲ್ಲಿ ಕೈಲಾಸದ ಕಡೆಗೆ ಕೆಲವು ಕಾಡುಮೇಕೆಗಳು (Ibex) ಮೇಯುತ್ತಲಿದ್ದುವು. ಇಲ್ಲಿ ಸ್ವಲ್ಪಮಟ್ಟಿನ ಹುಲ್ಲು ಮೈದಾನವಿದೆ. ಕಣಿವೆಯಲ್ಲೆಲ್ಲಾ ಪ್ರದೇಶ ಹಸುರುಹುಲ್ಲು ಇರುತ್ತಾಗಿ ಒಳ್ಳೆಯ ಗೋಮಾಳವಾಗಲು ಅನುಕೂಲವಿದೆ. ಆದಾಗ್ಯೂ, ಇದು ಅತ್ಯುನ್ನತಪ್ರಾಂತ್ಯವಾದ್ದರಿಂದಲೂ, ಅಲ್ಲಲ್ಲಿ ಗಂಧಕ ಮೊದಲಾದ ಗೈರಿಕಧಾತುಗಳ ವಾಸನೆಯು ಇರುವುದರಿಂದಲೂ ಬಯಲುಸೀಮೆಯ ಪಶುಗಳಿಗೆ ಇಲ್ಲಿ ವಾಸಿಸುವುದು ಕಷ್ಟ

ಸ್ಥಾನವು. ದಾರಿಯುಕಡೆಯ ಭಾಗದಲ್ಲಿ ೩ ಮೈಲಿಗಳ ದೂರ ಬಿಡಿಗಲ್ಲುಗಳ ಮೇಲೆ ಕ್ರಮೇಣ ಹತ್ತಿ ದಾರಿಯನ್ನು ಸಾಗಿಸಿ, ಒಂದು ತೊರೆಯ ಪಕ್ಕದಲ್ಲಿರುವ ಡಿಡಿಫು (Didiphu) ಎಂಬ ಬೌದ್ಧಮಠಪ್ರಾಂತ್ಯವನ್ನು ಸೇರಿದ್ದಾಯಿತು. ಒಟ್ಟು ೧೧ ಮೈಲಿಗಳ ಪ್ರಯಾಣ. ೧೧ ಘಂಟೆಯ ಸಮಯ. ಎಲ್ಲರ್ಗೂ ಬಹು ಆಯಾಸವಾಗಿದ್ದಿತು. ಕೈಲಾಸಪರ್ವತದ ಬುಡದಲ್ಲಿನ ಒಂದು ಕ್ಷೇತ್ರವಾದ ಮಟ್ಟಸದ ನೆಲದಮೇಲೆ ಡೇರಾಗಳನ್ನು ಹಾಕಿತ್ತು, ಇಲ್ಲಿಗೆ ಕೈಲಾಸಗಿರಿಯು ಬಹು ಸಮೀಪ. ಕೈಲಾಸಗಿರಿಯಿಂದ ಅನೇಕ ತೊರೆಗಳು ಇಳಿದುಬಂದು ಕೆಳಗಣ ಕಣಿವೆಯಲ್ಲಿ ಹರಿಯುತ್ತಲಿದ್ದ ನದಿಗೆ ಬೆರೆಯುತ್ತಲಿದ್ದವು.

ಈದಿವಸ ಸಾಯಂಕಾಲ, ಡಾಕ್ಟರ್ ರಂಗಾಚಾರ್ಯರವರೂ, ಮೇಜರ್ ಗೋಪಾಲರಾಯರವರೂ ಮತ್ತು ತಹಸಿಲ್‍ದಾರ್ ಶ್ರೀಯುತ ಪ್ರತಾಪ ಸಿಂಗರವರೂ ಸಹ ಕುದುರೆಗಳನ್ನು ಹತ್ತಿ, ಭಂಡೆಗಳ ಮಯವಾಗಿಯೂ, ಜಾರಿಕೆಯಾಗಿಯೂ ಇರುವ ದಿಣ್ಣೆಯಮಾರ್ಗದಿಂದ ಕೈಲಾಸಪರ್ವತದ ತಳಕ್ಕೆ (Base) ಸೇರಿದರು. ಬಿಡಾರಪ್ರದೇಶವು ಸಮುದ್ರ ಮಟ್ಟಕ್ಕೆ ೧೬,೨೦೦ ಅಡಿಗಳ ಎತ್ತರದಲ್ಲಿರುವುದೆಂದೂ, ಪರ್ವತದ ತಳವು ೧೮,೦೦೦ ಅಡಿಗಳ ಎತ್ತರದಲ್ಲಿರುವುದೆಂದೂ ಎಣಿಸಲ್ಪಟ್ಟಿರುವುದು. ಪರ್ವತದ ತಳವು ಬಹು ಮಟ್ಟಿಗೆ ಸಮಾಂತರಕ್ಷೇತ್ರವಾಗಿರುವುದು. ಪರ್ವತವು ಇಲ್ಲಿಂದ ನೇರವಾಗಿ ಎದ್ದಿರುವುದು. ನೆತ್ತಿಯಮೇಲೆ ಒಂದು ಗುಂಡಿಯ ಆಕಾರ. (ಒಟ್ಟಿಂನಲ್ಲಿ ಪರ್ವತವು ಒಂದು ಲಿಂಗಾಕಾರವಾಗಿರುವುದು) ಇವರುಗಳು ಪರ್ವತದ ತಳವನ್ನು ಸೇರಿದಾಗ್ಯೆ ಭಾರಿಯದಾದ ಎರಡು ಹಿಮರಾಶಿಗಳು ಒತ್ತುಗೋಡೆಯನ್ನು ಹಾಕಿದಂತೆ ಸೇರಿದ್ದವು. ಈ ಎರಡು ಹಿಮರಾಶಿಗಳು ಸೇರಿಕೊಂಡಿರುವ ಪ್ರದೇಶದಲ್ಲಿ, ಹಿಮರಾಶಿಗಳು ಮೇಲ್ಭಾಗದಲ್ಲಿ ಸೇರಿಕೊಂಡು ಒಂದು ತ್ರಿಕೋಣಾಕಾರವಾಗಿ ಕಂಡಿತು. ಈ ತ್ರಿಕೋಣದಿಂದ ಒಂದು ಸೊಗಸಾದ ತೊರೆಯು ದಳದಳನೆ ಈಚೆಗೆ ನುಗ್ಗುತ್ತಲಿದ್ದಿತು. ಬಲಗಡೆಯಲ್ಲಿನ ಹಿಮದ ಗೋಡೆಯಲ್ಲಿ ಒಂದು ಸಣ್ಣಗೂಡು. ಗೂಡಿನಲ್ಲಿ ಮನೋಹರವಾದ ಹಿಮ ಸ್ಥಿತ ಲಿಂಗ. ಲಿಂಗದ ಎತ್ತರ ಒಂಭತ್ತು ಅಂಗುಲ, ಅಷ್ಟಕತೆ ಮೂರು ಅಂಗುಲ. ಅತಿರಮಣೀಯವಾದ ನೋಟ. ಗೂಡು ಕಮಾನಿನ ಆಕಾರವಾಗಿದ್ದಿತು. ಇದರ ಆಕಾರವೂ, ಲಿಂಗಾಕಾರವೂ, ಗೂಡಿನ ಬಾಗಿಲೂ ಸಹ;

ಓಮದಿಂದ ಆಕಸ್ಮಿಕವಾಗಿ ಸ್ವತಃ ಉತ್ಪನ್ನವಾದವುಗಳೇ, ಅಥವ ಚಮ
ಯಾದ ಯಾವನೋ ಒಬ್ಬ ಭಕ್ತನಿಂದ ಮಾಡಲ್ಪಟ್ಟ ಕೈಗೆಲಸವೇ ಎಂ
ವುದನ್ನು ತಿಳಿಯಲಸಾಧ್ಯವಾದಷ್ಟು ಅಂದವಾಗಿದ್ದಿತು. (ಸ್ವಯಂಕಲ್ಪಿತ
ವಿದ). ಈ ಸ್ಥಳವು ೩ ಜನ ನೋಟಕರ ಮನಸ್ಸನ್ನೂ ಆಕರ್ಷಿಸುತ್ತಿದ್ದಿ
ಮನಸ್ಸಿಗೆ ಅತ್ಯಂತ ಉಲ್ಲಾಸವಾಗಿ ಆ ಸ್ಥಳವನ್ನು ಬಿಟ್ಟುಬರಲು ಮನ
ಬಾರದಾಂತಾಯಿತು. ಹೀಗಿದ್ದರೂ ಕತ್ತಲೆಯಾಗುವ ಸಮಯವಾಗು
ದ್ದುದರಿಂದ ಎಲ್ಲರೂ ಜಾಗರೂಕರಾಗಿ ಅಲ್ಲಿಂದ ಹೊರಟು ಘಟ್ಟ
ಓಮದಮೇಲೆಯೇ ಬಂದು ಬಿಡಾರವನ್ನು ಸೇರಿದರು. ಬರುವ ದಾರಿ
ನಸು ಬೂದಿಯಬಣ್ಣದ ಬ್ರಹ್ಮಕಮಲವೆಂದು ಕರೆಯಲ್ಪಡುವ ಮ
ಹೂವುಗಳನ್ನು ತೆಗೆದುಕೊಂಡು ಬಂದರು. ರಾತ್ರಿ ೭-೩೦ ಘಂಟೆಗೆ ಬಿ
ರಕ್ಕೆ ಬಂದ ಇವರಿಗೆ ತಮ್ಮ ಸಂಚಾರದ ವಿಷಯವು ಬಹು ಆಹ್ಲಾದ
ವಾಗಿದ್ದಿತು. ರಾತ್ರಿಯಲ್ಲಿ ಈ ವೃಕ್ಷದ ಆನಂದದಲ್ಲಿಯೇ ಇದ್ದ
ಬಿಡಾರದ ಸಮೀಪದಲ್ಲಿ ಕೆಲವು ವಾರಿವಾಳದ ಹಕ್ಕಿಗಳು ಗೋಚರಿಸು
ತಿದ್ದವು.

ಜುಲೈ ೨೭ನೆಯ ತಾರೀಖಿನ ದಿನ ಡಿಡಿಫು ಇಂದ ೧೧ ಅಥವ
ಮೈಲಿಗಳ ದೂರದಲ್ಲಿರುವ ಜಿಂಡಿಫುವಿಗೆ (Zindiphu) ಪ್ರಯಾಣ. ಇ
ಕೈಲಾಸಪ್ರದಕ್ಷಿಣೆಯ ೨ನೆಯ ಮಜಲು. ಪ್ರಾತಃಕಾಲ ನಡುಗುವ
ಯಲ್ಲಿ ೫-೩೦ ಘಂಟೆಗೆ ಪ್ರಯಾಣ ಪ್ರಾರಂಭ. ಈವರಿಗಿನ ಪ್ರಯಾ
ಣಗಳಲ್ಲಿ ಈ ದಿವಸದ ಸಂಚಾರವು ಕೇವಲ ಹೀನಸ್ಥಿತಿಯದು. ಪ್ರಾರಂಭ
೩-೪ ಮೈಲಿಗಳಷ್ಟು ದೂರ, ಬಹು ಕಡಿದಾದ, ಕಲ್ಲುನೆಲದ ದಿಣ್ಣೆಯ
ಹತ್ತಿ ಡೋಲ್ಮಾಪಾಸ್ ಅಥವ ಗೌರೀಕುಂಡವೆಂಬ ನೆತ್ತಿಯ ಪ್ರಾಂತ್ಯವ
ಸೇರುವುದಕ್ಕೆ ಕುದುರೆಗಳಿಗೂ ಜನಗಳಿಗೂ ಅತ್ಯಂತ ಆಯಾಸವಾಯಿತು.
ನೆತ್ತಿಯ ಎತ್ತರ ಸಮುದ್ರಮಟ್ಟಕ್ಕಿಂತ ೧೮,೬೦೦ ಅಡಿ. ಈ ಯಾತ್ರೆ
ಗಳಲ್ಲಿ ಇದೇ ಅತ್ಯಂತ ಎತ್ತರ ಪ್ರದೇಶ. ಅಲ್ಲಿನ ಸ್ಥಳೀಯರಿಗೆ ಇದ
ಹತ್ತುವುದೆಂದರೆ ಕೇವಲ ಸಿಲಕ್ಷ್ಯ. ದಿಣ್ಣೆಯ ನೆತ್ತಿಯನ್ನು ಸೇರಿದ
ಅಲ್ಲಿ ಚಿಕ್ಕದಾದ ಒಂದು ಹಿಮಸರೋವರ (Frozen Lake). ಇ
ಗೌರೀಕುಂಡವೆಂದು ಹೆಸರು. ಸರೋವರದ ಮೇಲೆ ನೀರ್ಗಲ್ಲು (I
ಮುಚ್ಚಿಕೊಂಡು ಇದ್ದವು. [illegible] ಅಕ

ಗೌರೀಕುಂಡ ಅಥವ ಡೋಲ್ಮಾ ಪಾಸ್.

ಗೌರೀಕುಂಡದಿಂದ ದೃಶ್ಯವಾಗುವ ಕೈಲಾಸಶಿಖರವು.

ಕೈಲಾಸಪರ್ವತವು.

* ಇಲ್ಲಿಗೆ ಬರುವ ದಾರಿಯಲ್ಲಿ ಈ ದಿಣ್ಣೆಯ ನೆತ್ತಿಯ ಸಮೀಪದಲ್ಲಿ ಹೇರಳವಾಗಿ ಹಿಮದಗೆಡ್ಡೆಗಳಿದ್ದುವು. ಅನೇಕ ತೊರೆಗಳನ್ನು ಹಾಯ್ದು ಬಂದದ್ದಾಯಿತು. ಸುತ್ತುಮುತ್ತಲೂ ಅನೇಕ ಬಗೆಯ ಆಶ್ಚರ್ಯಕರವಾದ ವಿವಿಧಾಕಾರದ ಕಲ್ಲುಗಳೂ, ಬಂಡೆಗಳೂ ಇದ್ದುವು. ಯಾತ್ರಿಕರಿಗೆ ಯೋಗಾಭ್ಯಾಸವಿಲ್ಲದೆಯೇ ಶ್ವಾಸನಿರೋಧವನ್ನುಂಟುಮಾಡಿದ, ಗೌರೀಕುಂಡದ ನೆತ್ತಿಯಿಂದ ಕೆಳಕ್ಕೆ ಇಳಿಯುವುದಕ್ಕೆ ಪ್ರಾರಂಭಿಸಿ, ಬಿದಿಗಲ್ಲುಗಳ ದಾರಿಯಲ್ಲಿ ೨ ಮೈಲಿಗಳ ದೂರ ಇಳಿದು ಒಂದು ಕಣಿವೆಯ ಬುಡವನ್ನು ಸೇರಲು, ಅಲ್ಲಿ ಒಂದು ತೊರೆಯು ಹರಿಯುತ್ತಲಿದ್ದಿತು. ಈ ಕಣಿವೆಯು ಬಹು ಜವುಗಲಾಗಿದ್ದು ಯಾತ್ರಿಕರ ಕಷ್ಟವನ್ನು ಹೆಚ್ಚಿಸುತ್ತಲಿದ್ದಿತು. ಬಿಸಿಲು ಚುರುಕಾಗಿದ್ದಿತು. ಗಂಧಕಾದಿ ಸ್ಫೋಟಕವಸ್ತುಗಳ ದುರ್ಗಂಧವೂ ಇತ್ತು. ಅಲ್ಲಲ್ಲಿ ಬೌದ್ಧರ ಮಂತ್ರಗಳನ್ನು ಕೆತ್ತಿದ ಕಲ್ಲುಗುಡ್ಡೆಗಳು ಅನೇಕವಾಗಿದ್ದುವು. ಹೀಗೆ ದಾರಿಯನ್ನು ಸಾಗಿಸಿದ ಮೇಲೆ ಹರಿಯುತ್ತಲಿರುವ ತೊರೆಯ ಪಕ್ಕದಲ್ಲಿ ಒಂದು ಸಣ್ಣದಾದ ಮೈದಾನ. ಅದರಲ್ಲಿ ಚಿಕ್ಕದಾದ ಒಂದು ಕಸ್ಮಲಭರಿತವಾದ ಬೆಟ್ಟವಿತ್ತು. ಇದನ್ನು ಜಿಂಡಿಪು ಎಂದು ಕರೆಯುವರು. ಇದರ ಎದುರಾಗಿಯೇ ಡೇರೆಗಳನ್ನು ಹಾಕಿದ್ದಿತು. ಇಲ್ಲಿಗೆ ತಲುಪಿದಾಗ್ಯೆ ೧೦-೩೦ ಘಂಟೆ. ದಿಣ್ಣೆಯಿಂದ ಇಳಿಯುತ್ತಲಿದ್ದಾಗ್ಯೆ ಮೋಟಾರ್ ಡ್ರೈವರ್ ಕರಿಯಪ್ಪನು ಏರಿ ಹೋಗುತ್ತಲಿದ್ದ ಕುದುರೆಯು ಮುಗ್ಗರಿಸಿ, ಆತನು ಕೆಳಗೆ ಬಿದ್ದು ಎಡದ ಮೊಳಕ್ಕೆ ಗಾಯವಾಯಿತು.

ಜುಲೈ ೨೮ನೆಯ ಪ್ರಾತಃಕಾಲ ಜಿಂಡಿಪುವನ್ನು ಬಿಟ್ಟು ಎಂದಿನಂತೆ ಪ್ರಯಾಣ. ಹಿಂದೆ ಬಾರ್ಖ್ಯಾ ಮೈದಾನವನ್ನು ಬಿಟ್ಟು ಪಾರ್ಖೀಗೆ ಹೊರಟಾಗ್ಯೆ ಕೈಲಾಸಗಿರಿಯು ಹೇಗೆ ಸ್ಪಷ್ಟವಾಗಿ ಕಾಣುತ್ತಲಿದ್ದಿತೋ ಹಾಗೆ ಈ ದಿವಸ

---

* ಪೂರ್ವದಲ್ಲಿ ಪರ್ವತರಾಜಕುಮಾರಿಯಾದ ಪಾರ್ವತೀದೇವಿಯು ಪರಶಿವನನ್ನು ಪತಿಯಾಗಿ ಅಪೇಕ್ಷಿಸಿ ಶಿವನಂ ಕುರಿತು ತಪಸ್ಸನ್ನು ಆಚರಿಸುತ್ತಲಿದ್ದ ಪ್ರದೇಶವೇ ಈ ಗೌರೀಕುಂಡಪ್ರದೇಶವೆಂತಲೂ; ಚಂದ್ರವಂಶೋತ್ಪನ್ನರಾದ ಪಾಂಡವರು ಧರ್ಮಪಾಲನಾರ್ಥವಾಗಿ ಅರಣ್ಯದಲ್ಲಿದ್ದಾಗ್ಯೆ, ವೇದವ್ಯಾಸರ ಆಜ್ಞಾಪ್ರಕಾರ ಅರ್ಜುನನು ಶಿವನಂ ಕುರಿತು ತಪಸ್ಸನ್ನಾಚರಿಸಲು, ಕೈಲಾಸಗಿರಿಯ ಸಮೀಪದ ಇಂದ್ರಕೀಲ ಪರ್ವತಕ್ಕೆ ಬಂದಿದ್ದಾಗ್ಯೆ ಈ ಗೌರೀಕುಂಡದಲ್ಲಿ ಸ್ನಾನಾದಿಗಳನ್ನಾಚರಿಸುತ್ತಲಿದ್ದನೆಂದೂ ಪುರಾಣ ಪ್ರಸಿದ್ಧವು.

ಜಿಂಡಿಪ್ಪೂ ಬಿಟ್ಟು ಹೊರಟಾಗ ಗುರ್ಲಾಮಾಂಧಾತ ಗಿರಿಸಾಲುಗಳು ಸ್ಪ ಸ್ಪಷ್ಟವಾಗಿ ಕಾಣುತ್ತಲಿದ್ದವು. ಮಾರ್ಗವು, ತೊರೆಯನ್ನನುಸರಿಸಿ ೩ ಮೈಗಳ ದೂರ ಕಣಿವೆಯನ್ನಿಳಿಯುವುದಾಗಿದ್ದಿತು. ಅನಂತರ ಮತ್ತೆ ಬಾರ ಮೈದಾನವನ್ನು ಸೇರಿದ್ದಾಯಿತು. ಇಲ್ಲಿಗೆ ಶ್ರೀ ಕೈಲಾಸಪ್ರದಕ್ಷಿಣೆಯ ಪೂರ್ತಿಯಾಗಿ ಬೆಳೆಯಿತು. ಕಣಿವೆಯನ್ನಿಳಿದಮೇಲೆ ಸಿಧಾನವಾಗಿ ಮೈದಾನವನ್ನು ದಾಟಿ ೭ ಮೈಲಿಗಳು ಹೋಗಿ ೮-೪೫ ಘಂಟೆಗೆ ಪುನಃ ಬಾರ್ಖಾವನ ಸೇರಿದ್ದು. ಇಲ್ಲಿಗೆ ಒಟ್ಟು ಪ್ರಯಾಣ ೧೦ ಮೈಲಿಗಳಾದವು. ಬಾರ್ಖಾದ ಒಂದೆ ಇಳಿವಿದ್ದ ಪ್ರದೇಶದಲ್ಲಿಯೇ ಈಗಲೂ ಮುಜಲುಮಾಡಿದುದು. ಕೈಲಾ ಯಾತ್ರೆಯು ಇಲ್ಲಿಗೆ ಪೂರ್ತಿಯಾಗಿ ಬೆಳೆದ ಪ್ರಯುಕ್ತ ಸರ್ವರೂ ಪರ ಸಂತೋಷಭರಿತರಾಗಿದ್ದರು. ಈ ದಿವಸ ಸ್ವಸ್ಥಳವನ್ನು ಕುರಿತು ಹಿಂತಿಗುವ ಪ್ರಯಾಣಕ್ಕೆ ಪ್ರಾರಂಭವಾದುದು. ಇಲ್ಲಿ ತಣ್ಣನೆಯ ಗಾಳಿ ಬೀಸುತ್ತದ್ದಾಗ್ಯೂ, ಹಿಂದಲ ೩ ಮುಜಲುಗಳಲ್ಲಿದ್ದಷ್ಟು ಚಳಿ ಇಲ್ಲಿ ತೋರಲಿಲ್ಲ. ಬಾರ್ಖಾ ಮೈದಾನವು ಪೂರ್ತಿಯಾಗಿ ಸಾವಿರಾರು ಕುರಿ ಮತ್ತು ದನಗಳಿಗೆ ಮೇಯುದಕ್ಕೆ ಅನುಕೂಲವಾದ ಪ್ರದೇಶ. ಸಾಯಂಕಾಲ, ಪಶ್ಚಿಮದಿಗಂತದಲ್ಲಿ ಸೂರ್ಯನು ಇಳಿಯುತ್ತಲಿದ್ದಾಗ್ಯೆ ನೆತ್ತಿಯ ಮೇಲ್ಪ್ರಾಂತ್ಯದಲ್ಲಿ ಒಂದ ಮೇಘದಾಳಿಯು ಭಂಗಾರಚ್ಛವಿಯಿಂದ ಕಾಣುತ್ತಲಿದ್ದಿತು. ಉಳಿದ ಪ್ರದೇಗಳಲ್ಲೆಲ್ಲ ಗಗನವು ನಿರ್ಮಲವಾಗಿದ್ದಿತು. ಕೈಲಾಸಪರ್ವತವು ಪೂರ್ತಾ ನಿ ವಾಗಿ ಗೋಚರಿಸುತ್ತಲಿದ್ದಿತು. ಪೂರ್ವದಿಗಂತರಾಳದಲ್ಲಿ ಚಂದ್ರಮನು ಉಯಿಸಿ ನಿರ್ಮಲಾಕಾಶದಲ್ಲಿ (ಶುಕ್ಲ. ೧೪) ಥಾಳಥಳ್ಯದಿಂದ ಬೆಳಗುತ್ತಲಿದ್ದನು.

ಜುಲೈ ೨೯ನೆಯ ವೆಳಗ್ಯೆ ೫-೧೫ ಘಂಟೆಗೆ ಬಾರ್ಖಾವನ್ನು ಬಿಟ್ಟ ಪ್ರಯಾಣವು ೧೦ ಮೈಲಿಗಳು ಜರಿಗಿ, ಜ್ಯೂ ಗೊಂಪಾ (Jieu Gompa)ಕ್ಕೆ ದಕ್ಷಿಣಕ್ಕೆ ೨ ಮೈಲಿಗಳ ದೂರದಲ್ಲಿ, ಮಾನಸಸರೋವರ ತೀರದಲ್ಲಿ ಸಿದ್ಧವಾಗಿದ್ದ ಬಿಡಾರಕ್ಕೆ ೮-೪೫ ಘಂಟೆಗೆ ತಲಪಿದುದಾಯಿತು. ಈ ದಿವಸ ರಾಕ್ಷಸರೋವರದ ದಡದಲ್ಲಿ ಮುಜಲು ಮಾಡಬೇಕಾಗಿದ್ದಿತು. ಆದರೆ ನಾಂಘಾಯ ರಾಣಿಯವರ ಅಭಿಪ್ರಾಯಪ್ರಕಾರ ಇಲ್ಲಿ ಮುಜಲು ಮಾಡಲಾಯಿತು. ಈ ದಿವಸ ನಿಜಾಷಾಢ ಶು. ೧೫ (ವ್ಯಾಸಪೂರ್ಣಿಮಾ). ಮಾನಸಸರೋವರ ಸ್ನಾನವು ಮತ್ತೆ ಲಭಿಸಿತು. ಕುಮಾರ ಖಡ್ಗಶಂಶೇರಸಿಂಗರವರು ಬಾರ್

ಹೊಸದೊಂದು ಕುದುರೆಯನ್ನು ತಂದಿದ್ದರು. ಈ ದಿನದ ಸಾಯಂಕಾಲ ೪ ಘಂಟೆಯಮೇಲೆ ೫ ಘಂಟೆಯೊಳಗೆ ಇಲ್ಲಿ ಒಂದು ಪ್ರಚಂಡವಾದ ತೀಕ್ಷ್ಣತೆಯ ಗಾಳಿಯೆದ್ದು, ಬಿಡಾರದ ಡೇರೆಗಳೆಲ್ಲವನ್ನೂ (Rowties) ಕಿತ್ತು ಕೆಳಕ್ಕೆ ಉರುಳಿಸಿತು. ಇದರಿಂದ ಈ ದಿನದ ಪ್ರಯಾಣವು ನೆನೆಸಿದಷ್ಟೂ ಅಪೂರ್ಣವಾಯಿತು. ಸ್ವಲ್ಪಹೊತ್ತಿನನಂತರ ದೈವವಶಾತ್ ಬಿರುಗಾಳಿಯು ನಿಂತಿತು. ಸಾಯಂಕಾಲ ೭ ಘಂಟೆಯ ಸಮಯದಲ್ಲಿ, ಬಿಡಾರದ ಅಭಿಮುಖದಲ್ಲಿ, ಪೂರ್ವದಿಗಂತದಲ್ಲಿ, ಎರಡು ಪರ್ವತಶ್ರೇಣಿಗಳು ಒಂದಕ್ಕೊಂದು ಇದಿರಾಗಿ ಇಳಿಜಾರಾಗಿರುವ ಮಧ್ಯದ ಕಣಿವೆಯಲ್ಲಿ, ಎಲ್ಲಿ, ಮಾನಸಸರೋವರದಲ್ಲಿ ಉತ್ಪನ್ನವಾದ ಬ್ರಹ್ಮಪುತ್ರಾನದಿಯು ಪ್ರವಹಿಸುವುದೋ ಆ ಪ್ರಾಂತ್ಯದ ಪೂರ್ವಭಾಗದಲ್ಲಿ, ಷೋಡಶಕಲಾನ್ವಿತನೂ, ತೇಜಃಪುಂಜನೂ, ಆಹ್ಲಾದಕರನೂ ಆದ ಚಂದ್ರಮನ ವಿಶಾಲವಾದ ಮಂಡಲವು ಮಂದ ಮಂದವಾಗಿ ಏರುತ್ತಲಿದ್ದು, ಬೆಳ್ಳಿಯ ತಗಡಿನಂತಹ ಕೌಮುದಿಯನ್ನು ಪ್ರಸರಿಸುತ್ತ, ಮಾನಸಸರೋವರದ ನಿರ್ಮಲಜಲದಲ್ಲಿ ಪ್ರತಿಬಿಂಬಿಸುತ್ತಲಿದ್ದುದು, ಸಕಲರಿಗೂ ಮಹಾನಂದಕರವಾಗಿದ್ದಿತು. ಈ ಸಮಯದಲ್ಲಿ ನಮ್ಮ ಕ್ಯಾಪ್ಟನ್ ಸಬಿಷ್ಠಾರರವರ ಕೈಯಲ್ಲಿದ್ದ ಛಾಯಾಕರ್ಷಕಯಂತ್ರವು ತೆರೆಯಲ್ಪಟ್ಟಿದ್ದಿತು.

ಜುಲೈ ೩೦ನೆಯ ತಾರೀಖು ಬೆಳಗ್ಗೆ ೫-೧೫ ಘಂಟೆಗೆ, ಪ್ರಬಲವಾದ ಚಳಿಯಲ್ಲಿ ಜ್ಯೂ ಗೊಂಪಾವನ್ನು ಬಿಟ್ಟು ರಾಕ್ಷಸಸರೋವರ ತೀರಕ್ಕೆ ಪ್ರಯಾಣ ಪ್ರಾರಂಭ. ಮಾನಸ ಸರಸ್ಸಿನ ದಡದಲ್ಲಿಯೇ ೨ ಮೈಲಿಗಳ ದೂರ ಬಂದು, ದೊಡ್ಡದೊಂದು ಮೈದಾನವನ್ನು ಸೇರಿದ್ದಾಯಿತು. ಮಾನಸಸರೋವರದಲ್ಲಿ ಅನೇಕ ಬಾತುಗಳು (Ducks) ಈಜುತ್ತಲಿದ್ದುದನ್ನು ನೋಡುತ್ತ, ಮುಂದೆ ಆಗ್ನೇಯದಿಕ್ಕಿಗೆ(South-East) ತಿರುಗಿ, ಮಾನಸಸರೋವರಕ್ಕೂ, ರಾಕ್ಷಸಸರೋವರಕ್ಕೂ ಮಧ್ಯದಲ್ಲಿರುವ ಗಿರಿಸಾಲುಗಳ ನೆತ್ತಿಯ ಪ್ರಾಂತ್ಯದ ಕಡೆಗೆ ಪ್ರಯಾಣವನ್ನು ಜರಿಗಿಸಿದುದಾಯಿತು. ಮಾರ್ಗದಲ್ಲಿ ತಕ್ಕಮಟ್ಟಿಗೆ ವರ್ತುಲಾಕಾರವಾದ ಒಂದು ದೊಡ್ಡ ಸರೋವರ. ಈ ಸರೋವರ ಮಧ್ಯದಲ್ಲಿ ವಿಚಿತ್ರವಾಗಿ ಕಾಣುವ ಬಿಳಿಗಾರೆಮಯವಾದ ಒಂದು ದ್ವೀಪ. ಸರೋವರದಲ್ಲಿ ಬಾತುಗಳು ಹೇರಳವಾಗಿರುವವು. ಇಲ್ಲಿ ದೊರೆಯುವ ಬಿಳಿಗಾರೆಯನ್ನು ತಂದು ಉಪಯೋಗಿಸಲು ಟಿಬೆಟ್ ಸರ್ಕಾರದವರು ಆಜ್ಞಾಪಿಸಿರುವುದರಿಂದ ಅವಕಾಶ

ಮೇಲೆ ಹೇಳಿದ ಗಿರಿಸಾಲುಗಳ ನೆತ್ತಿಯ ಪ್ರದೇಶಕ್ಕೆ ೩ ಮೈಲಿಗ

ದೂರ ಹತ್ತಿ ಹೋದುದಾಯಿತು. ಇಲ್ಲಿಗೆ ೨ ಸರೋವರಗಳೂ, (ಮಾನಸ ಸರೋವರ ಮತ್ತು ರಾಕ್ಷಸಸರೋವರ) ಅರ್ಧಾರ್ಧ ಕಾಣುವವು. ಗಿರಿಸಾಲಿನ ನೆತ್ತಿಯಿಂದ ಬಲಕ್ಕೆ ರಾಕ್ಷಸಸರೋವರದ ಕಡೆಗೆ ತಿರುಗಿ ಕ್ರಮೇಣ ೩ ಮೈಲಿಗಳ ದೂರ ಇಳಿದು ಬರಲು, ಪೂರ್ವ ಧರ್ಮಶಾಲೆಯಾಗಿದ್ದ (Lakands) ಒಂದು ಹಾಳು ಕಟ್ಟಡದ ಹತ್ತಿರಕ್ಕೆ ೩ ಮೈಲಿಗಳು ಸಾಗಿ ಒಟ್ಟು ೧೨ ಮೈಲಿಗಳ ಸಂಚಾರವಾಗಿ ೧೦ ಘಂಟೆಗೆ ಮೇಲ್ಕಂಡ ಧರ್ಮಶಾಲಾ ಪ್ರಾಂತ್ಯದಲ್ಲಿ, ರಾಕ್ಷಸಸರೋವರದ ನೈರುತ್ಯದಿಕ್ಕಿನ (South-West) ಮೈದಾನದಲ್ಲಿ ಡೇರಾಗಳನ್ನು ಹೊಡೆಸಿ ಇಳಿದುಕೊಂಡದ್ದಾಯಿತು. ಕುದುರೆಗಳೆಲ್ಲವೂ ಬಹುಮಟ್ಟಿಗೆ ದಣಿದುಹೋಗಿದ್ದವು. ಮಾರ್ಗದಲ್ಲಿ ಬರುವಾಗ್ಯೆ ಮಾನಸಸರೋವರದ ಕಡೆಯಿಂದ ಗಿರಿಸಾಲುಗಳನ್ನು ಹತ್ತಿ ಒಂದು ಬಡಕಲಾದ ಚಿರತೆಯು ಹೋದದ್ದು ಗೋಚರಿಸಿದ್ದಿತು. ರಾಕ್ಷಸಸರೋವರವು ವಕ್ರಾಕಾರವುಳ್ಳದ್ದಾಗಿ ಮಧ್ಯದಲ್ಲಿ ಅನೇಕ ದ್ವೀಪಗಳಿಂದೊಡಗೂಡಿ ನೋಡುವುದಕ್ಕೆ ಅಂದವಾಗಿಯೇ ಇರುವುದು. ಇದನ್ನು ಸಾಮಾನ್ಯವಾಗಿ ಮಾನಸಸರೋವರಕ್ಕೆ ಸಮನೆಂದಾಗಲೀ ಇನ್ನೂ ದೊಡ್ಡದೆಂದಾಗಲೀ ಹೇಳಬಹುದು. *ಈ ದಿವಸ ಪ್ರಾತಃಕಾಲವೆಲ್ಲ ಬಿಸಿಲು ಬಲು ಚುರುಕಾಗಿದ್ದರೂ, ಬಹು ಗಾಳಿ ಮತ್ತು ಚಳಿಯಾಗಿದ್ದಿತು. ರಾಕ್ಷಸಸರೋವರದಲ್ಲಿ ಅನೇಕ ಹಂಸಗಳಿರುವವೆಂದು ಹೇಳುವರು. ಒಂದೂ ಕಾಣಿಸಲಿಲ್ಲ. ಚಳಿಗಾಲದಲ್ಲಿ ಈ ಸರೋವರವೆಲ್ಲ ಹಿಮದಘನಿಯಿಂದ ತುಂಬಿಕೊಂಡಿರುವಾಗ್ಯೆ ಜನರು ಗಟ್ಟಿಯಾದ ಹಿಮದಮೇಲೆ ನಡೆದುಕೊಂಡು, ಅಲ್ಲಲ್ಲಿ ಇರುವ ದ್ವೀಪಗಳಿಗೆ ಹೋಗಿ ಹಂಸೆಗಳ ಮೊಟ್ಟೆಗಳನ್ನು ಆರಿಸಿ ಶೇಖರಿಸಿಕೊಂಡು ಬರುವರೆಂದು ಹೇಳುವರು.

ಜುಲೈ ೩೧ನೆಯ ತಾರೀಖು:- ಹಿಂದಿನ ರಾತ್ರಿಯೂ ಈ ದಿವಸ ಪ್ರಾತಃಕಾಲವೂ ಸಹ ಇಲ್ಲಿಯವರಿಗೆ ಅನುಭವಿಸಿದ್ದುದಕ್ಕಿಂತಲೂ, ಬಹಳ ಚಳಿಯಾ

---

* ಪೂರ್ವದಲ್ಲಿ ಲಂಕಾಧಿಪನಾಗಿದ್ದ ರಾಕ್ಷಸಾಧಿಪತಿ ರಾವಣನು ಕೈಲಾಸಗಿರಿಯನ್ನೆತ್ತಲು ಯತ್ನಿಸಿ, ಈಶ್ವರಾಗ್ರಹದಿಂದ, ತೋಳುಗಳು ಬೆಟ್ಟದಡಿಯಲ್ಲಿ ಸಿಕ್ಕಿ, ನರಳಿ, ಮತ್ತೆ ಶಿವಾನುಗ್ರಹದಿಂದ ಬಿಡುಗಡೆಯನ್ನು ಹೊಂದಿದ ತರುವಾಯ, ಶಿವನ ಕುರಿತು ತಪವನ್ನಾಚರಿಸುವಾಗ್ಯೆ ಈ ಸರೋವರವನ್ನು ಕಲ್ಪಿಸಿಕೊಂಡು ನಿತ್ಯಕರ್ಮಗಳನ್ನಾಚರಿಸಿದನಾಗಿ, ಇದಕ್ಕೆ ರಾಕ್ಷಸಸರೋವರವೆಂಬ (ರಕ್ಷಸ್ ತಾಲ್) ಹೆಸರು ಬಂತೆಂದು ಜನಜನಿತವಾಗಿರುವುದು

ಗಿದ್ದಿತು. ಎಲ್ಲಾ ಕಾವಿನ ಉಡುಪುಗಳನ್ನೂ ಧರಿಸಿದ್ದಾಗ್ಯೂ (Warm clothing) ಚಳಿಯು ದೇಹದ ಅಸ್ಥಿಗಳನ್ನು ಕೊರೆದು ಚುಚ್ಚುತ್ತಲಿದ್ದಿತು. ಇದರಿಂದ ಸಾಧ್ಯವಾದಷ್ಟು ಜಾಗ್ರತೆಯಾಗಿ, ಪಶ್ಚಿಮ ಟಿಬೆಟ ಪ್ರಾಂತ್ಯವನ್ನು ತೊರೆದು, ಹಿತಕರವಾದ ಪ್ರದೇಶಕ್ಕೆ ಸೇರಬೇಕೆಂಬ ತವಕವುಂಟಾಯಿತು. ಪ್ರಾತಃಕಾಲ ೫-೧೫ ಘಂಟೆಗೆ ರಾಕ್ಷಸಸರೋವರತೀರವನ್ನು ಬಿಟ್ಟು ೧೦ ಮೈಲಿಗಳು ಪ್ರಯಾಣ ಮಾಡಿ ೯-೩೦ ಘಂಟೆಗೆ ರಂಗಂಗ್‌ಗೆ (Rungung) ತಲಪಿದುದಾಯಿತು. ಕುದುರೆಗಳು ಬಹು ನಿಧಾನವಾಗಿ ಬಂದವು. ಅವೂ ವಾಯುಮಂಡಲದ ವಿರಳತೆಯು ಪಸೆಯಿಂದ ಬಹುಮಟ್ಟಿಗೆ ಬಳಲಿಯೂ ಹೋಗಿದ್ದವು. ಮೊದಲು ರಂಗಂಗಿನಿಂದ ಮಾನಸಸರೋವರಕ್ಕೆ ಬರುವಾಗ್ಯೆ ಅನುಸರಿಸಿದ್ದ ಗೋರಿ ಓಡಿಯಾಲ್ ಮತ್ತು ಗುರ್ಲಾಮಾಂಧಾತ ಗಿರಿಸಾಲುಗಳ ಮೂಲಕವಾದ ಮಾರ್ಗವನ್ನು ಹಿಡಿಯದೇ, ಈಗ ವಿಶೇಷ ಆಳವಿಲ್ಲದ ಒಂದು ಕಣಿವೆಯ ದಾರಿಯಲ್ಲಿ ಪ್ರಯಾಣ ಮಾಡಿದುದಾಯಿತು. ಈ ಕಣಿವೆಯ ತಳವು ವಿಶಾಲವಾಗಿಯೂ, ಸಮಭೂಮಿಯಾಗಿಯೂ ಇರುವುದು. ಗೋರಿ ಓಡಿಯಾಲಿನ ಔನ್ನತ್ಯಕ್ಕಿಂತಲೂ ಇಲ್ಲಿನ ಔನ್ನತ್ಯವು ಬಹು ಕಡಮೆ. ದಾರಿಯುದ್ದಕ್ಕೂ ಮಟ್ಟಸವಾದ ನೆಲ. ಆದರೆ ಬಹು ಕಲ್ಲಿನದಾರಿ. ವಿಶೇಷವಾಗಿ ಉದ್ದಕ್ಕೂ ಡಾಮಾ ಪೊದೆಗಳೂ ಮತ್ತು ಇತರ ವಿಧವಾದ ಪೊದೆಗಳೂ ಇದ್ದವು. ಈ ಇತರ ಪೊದೆಗಳನ್ನು ಕುದುರೆಗಳು ಆತುರವಾಗಿ ಮೇಯುತ್ತಲಿದ್ದವು. ಡಾಮಾ ಪೊದೆಗಳು ಸವ ಸೌದೆಗಾಗಿ ಉಪಯೋಗಿಸಲ್ಪಡುವಾಗ್ಯೆ ದೈವಸೃಷ್ಟಿಯಲ್ಲಿ ಯಾವುದೂ ತಾನೇ ನಿರರ್ಥಕವಾಗುವುದು! ಯಾತ್ರಿಕರ ಎಡಭಾಗಕ್ಕೆ ಇದ್ದ ಗುರ್ಲಾಮಾಂಧಾತ ಪರ್ವತಶ್ರೇಣಿಯು ಮೋಡದಿಂದ ಮುಚ್ಚಿಹೋಗಿದ್ದಿತು. ಹೀಗಿಲ್ಲದಿದ್ದರೆ, ಈ ಶ್ರೇಣಿಯು ಅಂಚಿನಲ್ಲಿ ಇಳಿದು ಬರುತ್ತಿದ್ದವರಿಗೆ ಗಿರಿಸಾಲುಗಳ ಅಂದವಾದ ನೋಟವು ಕಾಣುತ್ತಲಿದ್ದಿತು. ಈ ದಿವಸ ಪ್ರಾತಃಕಾಲದಲ್ಲೆಲ್ಲಾ ವಿಶೇಷ ಮೋಡ ಕವಿದಿದ್ದಿತು. ವಕ್ರವಕ್ರವಾಗಿ ಹರಿಯುವ ತೊರೆಯಿಂದ ಒಡಗೂಡಿರುವುದಲ್ಲದೇ, ಹಸುರು ಹುಲ್ಲಿನಿಂದ ತುಂಬಿರುವ ಒಂದು ಜವುಗುಭೂಮಿಯುಳ್ಳ ಕಣಿವೆಯ ಅಂಚಿನಲ್ಲಿಯೇ ಶ್ರೀಮನ್ಮಹಾರಾಜರ ವಾಸಕ್ಕಾಗಿ ಡೇರಾಗಳನ್ನು ಹೊಡೆದಿದ್ದಾಗಿ, ನೀರಿಗೂ, ಕುದುರೆಗಳ ಮೇವಿಗೂ ಅನುಕೂಲವಾಗಿದ್ದಿತು. ಇಲ್ಲಿಯೂ ಕೂಡ ತಣ್ಣನೆಯ ಗಾಳಿಯು ಬೀಸುತ್ತಲಿದ್ದಿತು.

ಪ್ರಜೋತ್ಪತ್ತಿನಾಮಸಂವತ್ಸರದ ನಿಜಾಷಾಢ ಬಹುಳ ತದಿಗೆ ರವಿ ವಾರ, ೧೯೩೧ನೆಯ ಆಗಸ್ಟ್ ತಾರೀಖು ೧. ರಾಕ್ಷಸಸರೋವರಪ್ರಾಂತ್ಯ ದಲ್ಲಿನ ಚಳಿಯಲ್ಲಿ ಅರ್ಧಭಾಗದಷ್ಟು ಚಳಿಯೂ ಠಾಗಂಗಿನಲ್ಲಿರಲಿಲ್ಲ. ಶ್ರೀಮನ್ಮಹಾರಾಜರವರ ಮಹಾಸನ್ನಿಧಾನದ ಸವಾರಿಯು, ಈ ದಿವಸ ಬೆಳಗ್ಗೆ ೫-೨೦ ಘಂಟೆಗೆ ಠಾಗಂಗಿನಿಂದ ಚಿತ್ತೈಸಿ, ೧೦ ಮೈಲಿಗಳ ದೂರ ಪ್ರಯಾಣ ಬೆಳೆದು, ೯-೨೦ ಘಂಟೆಗೆ ತಾಕ್ಲಾಕೋಟಿಗೆ ಪರಿವಾರದಿಂದೊಡಗೂಡಿ ದಯ ಮಾಡಿಸಿತು. ತಾಕ್ಲಾಕೋಟನ್ನು ತಲಪುವುದಕ್ಕೆ ಸುಮಾರು ೩ ಮೈಲಿಗಳು ಉಳಿದಿರುವಾಗ್ಗೆ ದಾರಿಯಲ್ಲಿ, ಬಟಾಣಿ (Peas), ಜವೇಗೋಧಿ (Barley), ಮತ್ತು ತೋಕೇ ಗೋಧಿ (Oats), ಇವುಗಳ ಫಲಭರಿತವಾದ ಬೆಳೆಯಿಂ ದೊಡಗೂಡಿದ ಒಂದು ಹಳ್ಳಿಯ ಸಮೀಪದಲ್ಲಿ, ಪೂರ್ವಕಾಲದಲ್ಲಿ, ಟಿಬೆಟ ದೇಶಿಯರುಗಳೊಡನೆ, ಸೇನಾನಾಯಕ ಜೋರಾವಾರ್‌ಸಿಂಗ್ (General Jorawar Singh) ಎಂಬುವನು ಯುದ್ಧಮಾಡಿ ಮಡಿದ ಪ್ರದೇಶವನ್ನು ಜನರು ತೋರಿಸಿದರು. ಮೊದಲು ತಾಕ್ಲಾಕೋಟನ್ನು ಬಿಟ್ಟುಬಂದೀಚೆಗೆ, ಪ್ರವೇಶಿಸಿ ಬಂದ ಎಲ್ಲಾ ಪ್ರದೇಶಗಳಿಗಿಂತಲೂ, ಈ ತಾಕ್ಲಾಕೋಟ್ ಎಂಬು ವುದು ಹೆಚ್ಚು ಶಾಖಪ್ರದೇಶವಾದ್ದರಿಂದ ಇಲ್ಲಿಗೆ ಮತ್ತೆ ಬರಲು ಸಕಲರಿಗೂ ಬಹು ಸಂತೋಷವಾಗಿದ್ದಿತು.

ಕೋಜಾರ್‌ನಾಥ್‌ನಲ್ಲಿರುವ (Kojarnath) ಪ್ರಸಿದ್ಧವಾದ ಬೌದ್ಧ ಮಠವನ್ನು ನೋಡಲು ಹೋಗಿ ಬರಬೇಕೆಂದು ಹಿಂದಲ ದಿವಸದ ರಾತ್ರಿಯೇ ಗೊತ್ತಾಗಿದ್ದಂತೆ ಆಗಸ್ಟ್ ೨ನೆಯ ತಾರೀಖು ಪ್ರಾತಃಕಾಲ ಮಹಾಪ್ರಭುಗಳ ಸವಾರಿಯು ೫-೩೦ ಘಂಟೆಗೆ ತಾಕ್ಲಾಕೋಟನಿಂದ ಚಿತ್ತೈಸಿ ೪ ಘಂಟೆಗಳ ಕಾಲದಲ್ಲಿ ೧೦ ಮೈಲಿಗಳ ಪ್ರಯಾಣವನ್ನು ಬೆಳೆಸಿ, ಕೋಜಾರ್‌ನಾಥ್‌ಗೆ ದಯಮಾಡಿಸಿತು. ಕೋಜಾರ್‌ನಾಥ್ ಎಂಬುವುದು ತಾಕ್ಲಾಕೋಟಿಗೆ ಆಗ್ನೇಯ ದಿಕ್ಕಿನಲ್ಲಿ ಮಾಪ್ಚು ಅಥವ ಕಾರ್ನಾಲಿ (Mapchu or Karnali river) ಎಂಬ ನದಿಯತೀರದಲ್ಲಿರುವುದು. ಉದ್ದಕ್ಕೂ ನದೀತೀರದಲ್ಲಿಯೇ ದಾರಿಯು. ಮೊದಲಿನ ಅರ್ಧಭಾಗವೆಲ್ಲವೂ ಹೆಚ್ಚಾಗಿ ಮೈದಾನವಾಗಿದ್ದು, ೨-೩ ತೊರೆ ಗಳನ್ನು ದಾಟಿಕೊಂಡು ಬರುವುದಾಗಿತ್ತು. ದಾರಿಯಲ್ಲಿ ಅಂದವಾದ ಚಿಕ್ಕ ಚಿಕ್ಕ ಹಳ್ಳಿಗಳು, ಹಳ್ಳಿಗಳಲ್ಲೆಲ್ಲಾ ಹುಲುಸಾಗಿ ಬೆಳೆದ, ಬಟಾಣಿ, ಜವೆ ಗೋಧಿ ಮತ್ತು ಅಲ್ಲಿನ ಜನರು ಜಾವ್ (Jav) ಎಂದು ಕರೆಯುವ ಒಂದು

ಬಗೆಯ ಗೋಧಿ ಇವುಗಳ ಬೆಳೆಯಿಂದೊಡಗೂಡಿದ ಗದ್ದೆಗಳು. ಈ ಗದ್ದೆಗಳಿಗೆ ಬೆಟ್ಟಗಳ ಝರಿಗಳನ್ನು ಹಸನಾದ ಕಾಲುವೆಯಂತೆ ತಿರುಗಿಸಿ ತಂದ ನೀರಿನ ಆಸರೆ. ಅಲ್ಲಲ್ಲಿ ನೀರಂಜಿಯ ಮರವನ್ನು ಹೋಲುವ ಕೆಲವು ಮರಗಳು ಕಾಣುತ್ತಲಿದ್ದುವು. ಮೇಲೆ ಹೇಳಿದ ಕಾಲುವೆಗಳ ಎರಡು ಕಡೆಯ ದಡಗಳಲ್ಲಿಯೂ ಬೆಳೆದಿರುವ ಹಸುರನ್ನು ಮೇಯುತ್ತಲಿರುವ ದನಕರುಗಳು, ಕುರಿಗಳು ಸಹ ಪ್ರತಿ ಹಳ್ಳಿಯಲ್ಲಿಯೂ ಇರುವುವು. ಕೃಷಿಮಾಡಲ್ಪಟ್ಟ ಭೂಮಿಯಲ್ಲಿನ ಕೇವಲ ಹಸುರು ಬಣ್ಣದ ಬೆಳೆಯು ನೋಟಕ್ಕೆ ಅಂದವಾಗಿದ್ದಿತು. ಕಾಲುವೆಗಳ ನೀರಿನ ಅಂಚುಗಳಲ್ಲಿ ನೀಲಿಯಬಣ್ಣದ ಹೂವುಗಳುಳ್ಳ ಕಾಡುಗಿಡಗಳಿದ್ದುವು. ಇನ್ನು ದಾರಿಯ ಕಡೆಯ ಅರ್ಧಭಾಗವೆಲ್ಲ ಹತ್ತುವ ದಿಣ್ಣೆಗಳಿಂದಲೂ, ಇಳಿಯುವ ಹಳ್ಳಗಳಿಂದಲೂ ಒಡಗೂಡಿದ್ದಿತು. ಕೋಚಾರ್‌ನಾಥ್ ಗ್ರಾಮವು ಸಿಕ್ಕಿಂ ರಾಜ್ಯದ ಒಂದು ಭಾಗ. ಇದು ೨ ಮೈಲಿಗಳ ಅಷ್ಟಳತೆಯುಳ್ಳ ಅರ್ಧವರ್ತುಲಾಕಾರದ ಇಳಿಜಾರು ಭೂಮಿಯ ಮೇಲಿನ ಗ್ರಾಮವು. ಇದರ ಹಿಂಭಾಗಕ್ಕೆ ಒಂದು ಬೆಟ್ಟದಸಾಲು ಮತ್ತು ಕರ್ನಾಲಿ ಎಂಬ ದೊಡ್ಡ ನದಿ. ನದಿಯು ಈ ಬೆಟ್ಟದ ಸಾಲನ್ನೂ ಟಿಬೆಟ್‌ದೇಶದ ಕಡೆಯ ಮತ್ತೊಂದು ಬೆಟ್ಟದ ಸಾಲನ್ನೂ ಪಿಂಗಡಿಸುವಂತಿರುವುದು. ನದಿಯ ದಡದಮೇಲೆ ಬೌದ್ಧ ಮಠವು ಕಟ್ಟಲ್ಪಟ್ಟಿರುವುದು. ಈವರಿಗೆ ನೋಡಿದ ಇತರ ಬೌದ್ಧಮಠಗಳು ಕಡಿದಾದ ದಿಣ್ಣೆಗಳ ತುದಿಯಲ್ಲಿ ಕಟ್ಟಲ್ಪಟ್ಟಿದ್ದಂತೆ ಇರದೇ, ಈ ಮಠವು ದಕ್ಷಿಣ ಭರತಖಂಡದಲ್ಲಿನ ದೇವಸ್ಥಾನಗಳಂತೆ ನದೀತೀರದಲ್ಲಿ ರಮ್ಯವಾಗಿ ಕಟ್ಟಲ್ಪಟ್ಟಿರುವುದು. ಮಠಕ್ಕೆ ಪ್ರವೇಶಿಸುವುದಕ್ಕೆ ಮೊದಲು, ಮೇಲ್ಭಾಗಕ್ಕೆಯುಳ್ಳ ಡೊಂಕುಡೊಂಕಾದ ದಾರಿಯಲ್ಲಿ ಹೋದರೆ, ನಾಲ್ಕು ಕಡೆಗೂ ಕಟ್ಟಡವುಳ್ಳದ್ದಾಗಿಯೂ, ಮೇಲ್ಛಾವಣಿಯಿಲ್ಲದುದಾಗಿಯೂ ಇರುವ ಒಂದು ತೊಟ್ಟಿ, ಪ್ರಧಾನ ದೇವಾಲಯದ ಹೊರಗೋಡೆಯೆಲ್ಲ ಮಣ್ಣಿಗಾಜು ಮಾಡಲ್ಪಟ್ಟು ಒಂದು ಬಗೆಯ ಕೆಂಬಣ್ಣದಿಂದ (Terra Cotta) ಬಳಿಯಲ್ಪಟ್ಟಿರುವುದು. ಇದರ ಮಾಳಿಗೆಯ ಮೇಲೆ ಗುಂಡಾಗಿರುವ ಹಿತ್ತಾಳೆಯ ಒಂದು ಮಂಡಲ. ಇದರ ಎರಡು ಪಾರ್ಶ್ವಗಳಲ್ಲಿಯೂ ಹಿತ್ತಾಳೆಯಿಂದ ಮಾಡಿದ ೨ ಜಿಂಕೆಯ ಪ್ರತಿಮೆಗಳು. ಎದುರಾಗಿ ನಿಂತು ನೋಡಿದರೆ ಇವುಗಳು ಅತಿ ರಮ್ಯವಾಗಿ ಕಾಣುವುವು. ದೇವಾಲಯವನ್ನು ಹೆಬ್ಬಾಗಿಲಿನಿಂದ ಪ್ರವೇಶಿಸಿದರೆ ಅಲ್ಲಿ ಸಣ್ಣದೊಂದು ಅಂಗಳ. ಇದರ ಗೋಡೆಗಳ ಮೇಲೆ, ಬುದ್ಧದೇವನ ಜೀ...

ನಾದ ಆಕಾರವನ್ನೂ, ವೃಕ್ಷಗಳ ಮತ್ತು ಅರಣ್ಯ ಮೃಗಗಳ ಆಕಾರಗಳನ್ನೂ ಬಣ್ಣದಲ್ಲಿ ಚಿತ್ರಿಸಿರುವರು. ಅಂಗಳದಿಂದ ಒಳಗೆ ಹೋಗಲು ಒಂದು ಸಣ್ಣ ಬಾಗಿಲು. ಮುಂದಕ್ಕೆ ಪ್ರವೇಶಿಸಿದರೆ ಎರಡು ಕಡೆಗಳಲ್ಲಿಯೂ, ತಿರುಗುತ್ತಿರುವ ಪ್ರಾರ್ಥನೆಯ ತಮಟೆಗಳನ್ನೂ, ಚರ್ಮದಿಂದ ಮುಚ್ಚಲ್ಪಟ್ಟ ಪಿಪಾಯಿಗಳನ್ನೂ ಸ್ಥಾಪಿಸಿರುವರು. ಅಲ್ಲಿ ಒಂದು ಸಣ್ಣ ಕೊಠಡಿ. ಅದರಲ್ಲಿ ಎರಡು ಪಾರ್ಶ್ವಗಳಲ್ಲಿ, ಸಾಧಾರಣವಾಗಿ ೮ ಅಡಿ ಉದ್ದವಾದ, ಮಣ್ಣಿನಿಂದ ಮಾಡಿ ಬಣ್ಣಬಳಿದಿರುವ ರಾಕ್ಷಸಾಕಾರದ ಎರಡು ಬೊಂಬೆಗಳು. ಅಲ್ಲಿನ ಜನರು ಇವುಗಳಲ್ಲಿ ಒಂದನ್ನು ರಾವಣನ ಪ್ರತಿಮೆಯೆಂದು ಹೇಳುವರು. ಅಂಗಳದಿಂದಾಚೆಗೆ, ಸುಮಾರು ೫೦×೫೦ ಅಡಿಗಳಳತೆಯುಳ್ಳ ಒಂದು ದೊಡ್ಡ ಪಡಸಾಲೆ (Hall). ಇದರಲ್ಲಿ ಮರದಕಂಭಸಾಲುಗಳೆರಡು, ಮತ್ತು ಬೌದ್ಧ ಸನ್ಯಾಸಿಗಳು ದೇವತಾಪ್ರಾರ್ಥನೆಗಾಗಿ ಕುಳಿತುಕೊಳ್ಳುವುದಕ್ಕಾಗಿ, ಮೆತ್ತೆಗಳನ್ನು ಜೋಡಿಸಿ ಕಲ್ಪಿಸಿರುವ ಸುಖಾಸನಗಳ ಎರಡು ಸಾಲುಗಳು. ಪಡಸಾಲೆಯ ಎದುರುಕಡೆಯಲ್ಲಿ ಮಧ್ಯೆ, ಕುಳಿತಿರುವ ಭಾವದ ಒಂದು ಬುದ್ಧದೇವನ ವಿಗ್ರಹ. ವಿಗ್ರಹದ ಸಮೀಪದಲ್ಲಿ ಪಾತ್ರೆ, ಘಂಟೆ ಮುಂತಾದ ಎಲ್ಲಾ ವಿಧದ ಪೂಜೋಪಕರಣಗಳು. ಈ ವಿಗ್ರಹದ ಹಿಂದೆ ಉದ್ದಕ್ಕೂ ೪ ಅಡಿಯಷ್ಟು ಅಡ್ಡಲಾಗಿ ಸ್ಥಳ ಬಿಟ್ಟಿರುವುದು. ಇದರ ಹಿಂದೆ ಅಂದರೆ ಪಡಸಾಲೆಯ ಆಚೆಯ ಹತ್ತ ಕೊನೆಯಲ್ಲಿ ಸಾಧಾರಣ, ತಾಂಬ್ರವು ಹೆಚ್ಚು ಮಿಶ್ರವಾದ ಪಂಚಲೋಹಗಳಿಂದ ಎರಕಮಾಡಿದ, ೫ ಅಡಿ ಎತ್ತರದ ಒಂದು ಪೀಠ. ಪೀಠದ ಮೇಲೆ, ಬೆಳ್ಳಿಯು ಹೆಚ್ಚಾಗಿರುವಂತೆ ತೋರುವ ಮಿಶ್ರಲೋಹದ ಮೂರು ವಿಗ್ರಹಗಳು ನಿಂತಿರುವವು. ಇವು, ಸೀತಾ, ರಾಮ ಮತ್ತು ಲಕ್ಷ್ಮಣ ಪ್ರತಿಮೆಗಳು. ಒಂದೊಂದು ಸಾಧಾರಣವಾಗಿ ೭ ಅಥವ ೮ ಅಡಿಗಳ ಉದ್ದವಿರುವವು. ಈ ವಿಗ್ರಹಗಳ ಹಿಂದೆ ಒಂದು ಪ್ರಭಾವಳಿ (Gothic Shape) ಇರುವುದು. ಒಟ್ಟು ಎರಕದ ಕೆಲಸವು ಉತ್ಕೃಷ್ಟವಾದ ಕೈಗಾರಿಕೆಯಾಗಿರುವುದು. ಮೇಲೆ ಹೇಳಿದ ಪೀಠದ ಬುಡದಲ್ಲಿ ಒಂದು ಕೊನೆಗೆ ಸ್ವಲ್ಪವೂ ಭೇದವಿಲ್ಲದಂತಿರುವ ಆನೆಯ ಪ್ರತಿಮೆ, ಮತ್ತೊಂದು ಕೊನೆಗೆ ಕುದುರೆಯ ಪ್ರತಿಮೆ. ಇವುಗಳ ಮಧ್ಯದಲ್ಲಿ ಸ್ತ್ರೀ ಮತ್ತು ಪುರುಷಾಕಾರಗಳಿಂದ ಕುಳಿತಿರುವ ಭಾವದ ಅನೇಕ ದೇವತಾ ವಿಗ್ರಹಗಳು ಕೆತ್ತಲ್ಪಟ್ಟಿರುವವು. ಇದರಿಂದ ಮೇಲ್ಭಾಗದಲ್ಲಿ ಒಂದು ಕಮಾನಿನಾಳ. ಇದರ ಪಾರ್ಶ್ವಗಳಲ್ಲಿ ಬೆನ್ನುಗಳನ್ನು

ಬಾಗಿಸಿಕೊಂಡು, ಕೈಮುಗಿದುಕೊಂಡು, ಸೌಮ್ಯವಾಗಿನಿಂತಿರುವ ಭಾವದ ಎರಡು ಅಪ್ಸರಸ್ತ್ರೀ ಪ್ರತಿಮೆಗಳು. ಕಮಲನಾಳದ ತುದಿಯಲ್ಲಿ ತಾವರೆಯ ಎಸಳುಗಳು, ಅವುಗಳಲ್ಲಿ ಕೆಳಗಡೆಯ ಅರ್ಧಭಾಗವು ಕೆಳಮುಖವಾಗಿ ಬಾಗಿಕೊಂಡಿರುವಂತೆಯೂ, ಮೇಲ್ಗಡೆಯ ಅರ್ಧಭಾಗವು ಮೇಲ್ಮುಖಕ್ಕೆ ಎದ್ದುಕೊಂಡಿರುವಂತೆಯೂ ಇರುವುದು. ತಾವರೆಯ ಮೇಲ್ಭಾಗದ ಎಸಳುಗಳೇ ಪೀಠದ ಮೇಲಿನತುದಿ. ಈ ಕಮಲದ ಮೇಲೆ ಶ್ರೀರಾಮವಿಗ್ರಹವು ನಿಂತಿರುವುದು. ಈ ವಿಗ್ರಹದ ಬಲಕ್ಕೆ ಸೀತಾವಿಗ್ರಹ ಮತ್ತು ಎಡಕ್ಕೆ ಲಕ್ಷ್ಮಣ ವಿಗ್ರಹ. ವಿಗ್ರಹಗಳ ಮುಖಗಳು ಬಹಳ ಅಂದವಾಗಿ ಚಿತ್ರಿಸಲ್ಪಟ್ಟಿರುವವು. ಪ್ರಭಾವಳಿಯು, ನವಿಲುಗಳ ಮತ್ತು ಇತರ ಮೃಗಗಳ ಪಕ್ಷಿಗಳನ್ನು ತೋರಿಸುವುದಲ್ಲದೆ ಲತಾಚಿತ್ರಗಳಿಂದೊಡಗೂಡಿ ಬಹು ಸೊಬಗಾಗಿರುವುದು. ಪ್ರಭಾವಳಿಯ ಬುಡದಲ್ಲಿ, ಎರಡು ಕಡೆಗಳಲ್ಲಿಯೂ, ಎರಡು ಸಿಂಹಗಳು ಬೊಗ್ಗಿ ಕುಳಿತಿರುವಂತೆ ಕಲ್ಪಿಸಲ್ಪಟ್ಟಿರುವವು. ಪ್ರಭಾವಳಿಯ ಹಿಂಭಾಗದಲ್ಲಿ ಕೈಯಿಟ್ಟರೆ ಗಾಳಿಯು ಬೀಸುತ್ತಿರುವುದು ಕಾಣುವುದು. ವಿಗ್ರಹಗಳಿಗೆ ಬಂಗಾರದ ವಸ್ತ್ರಗಳಿಂದಲೂ, ಆಭರಣಗಳಿಂದಲೂ ಅಲಂಕಾರ ಮಾಡಿರುವರು. ಆಭರಣಗಳಲ್ಲಿ ನೀಲರತ್ನಗಳೇ ವಿಶೇಷವಾಗಿರುವವು. ವಿಗ್ರಹಗಳ ತಲೆಗಳಲ್ಲಿ ಬೂಟಾದಾರಿ ಕೆಲಸದ ಪಾಗುಗಳು (ಕಿರೀಟ) ಇರುವವು. ಪೂರ್ತಿಯಾಗಿ ಎಂಟಿದ ಕೆಲಸವೆಲ್ಲಾ ವಿಶೇಷವಾಗಿ ಸೌಂದರ್ಯಭರಿತವಾಗಿರುವುದು. ವಿಗ್ರಹಗಳನ್ನು ಮಾಡಿ ಎಷ್ಟು ವರುಷಗಳಾದವೆಂಬುದು ಗೋಚರವಿಲ್ಲ. ಅಲ್ಲಿಯ ಬೌದ್ಧಯತಿಗಳನ್ನು ಕೇಳಿದರೆ ಈ ವಿಗ್ರಹಗಳು ಅಮಾನುಷಕೃತವೆಂದು ದೃಢವಾಗಿ ಹೇಳುವರು. ಪ್ರಾಯಶಃ ಈ ಸ್ಥಳವು ಪೂರ್ವದಲ್ಲಿ ಹಿಂದೂ ದೇವಾಲಯವಾಗಿದ್ದು ಈಚೆಗೆ ಬೌದ್ಧರ ಸ್ವಾಧೀನವಾಗಿ ಉಪಯೋಗಿಸಲ್ಪಡುತ್ತಿರುವುದೆಂದು ತೋರುತ್ತದೆ. ಪ್ರಧಾನದೇವಾಲಯವನ್ನು ಯಾತ್ರಿಕರು ಪ್ರದಕ್ಷಿಣೆ ಮಾಡುವುದಕ್ಕಾಗಿ ಅಂಧಕಾರಮಯವಾದ ದಾರಿಯೊಂದಿರುವುದು. ನಮ್ಮ ಯಾತ್ರಿಕರು ಈ ಎಲ್ಲಾ ನೋಟಗಳಿಂದ ಸಂತೋಷಭರಿತರಾದರು. ಮೇಲೆ ಹೇಳಿದ ವಿಗ್ರಹಗಳ ಎದುರಿನಲ್ಲಿ ಒಂದು ಎತ್ತರದ ಕಾಲುಮಣೆ (Bench) ಇರುವುದು. ಇದರ ಮೇಲೆ, ಬೆಳ್ಳಿಯ ಮತ್ತು ಬಂಗಾರದ ಅನೇಕ ದೊಡ್ಡದೊಡ್ಡ ಗುಂಡು ಬಟ್ಟಲುಗಳು. ಇವುಗಳ ತುಂಬ ತುಪ್ಪ ಮತ್ತು ಮಧ್ಯದಲ್ಲಿ ಬತ್ತಿಯನ್ನು ಹಾಕಿ ಅಹೋರಾತ್ರಿಗಳಲ್ಲಿಯೂ ನಂದಾದೀಪಗಳು

ಉರಿಯುತ್ತಲಿರುವವು. ಈ ಕಟ್ಟಡದ ಸುತ್ತಲೂ, ಮೇಲಿನ ಆವರಣವಿಲ್ಲದ ಪ್ರಾಕಾರವಿರುವುದು. ಇದರಲ್ಲಿ ಅನೇಕವಾಗಿ ತಿರುಗುವ ಪ್ರಾರ್ಥನೆಯ ನಗಾರಿ ಅಥವ ತಮಟೆಗಳು ಸ್ಥಾಪಿಸಲ್ಪಟ್ಟಿರುವವು. ಇನ್ನೊಂದು ಕೊಠಡಿಯಲ್ಲಿ ೧೦ ಅಡಿ ಎತ್ತರವೂ, ೫ ಅಡಿ ಅಡ್ಡಗಲವೂ ಉಳ್ಳ ಒಂದು ಭಾರೀ ನಗಾರಿಯಿರುವುದು. ಇದನ್ನು ತಿರುಗಿಸುವುದಕ್ಕೆ ಕಬ್ಬಿಣದ ಉಂಗುರಗಳಿರುವವು. ನಗಾರಿಯ ಸುತ್ತಲೂ, ಟಿಬೆಟ್ ದೇಶೀಯವಾದ ಅಕ್ಷರಗಳಲ್ಲಿ ಬೌದ್ಧರ ಪವಿತ್ರ ಮಂತ್ರವನ್ನು "ಓಮ್ ಮಣಿಪದ್ಮೇಹಮ್" ಎಂದು ಬರೆದಿರುವುದು. ಒಬ್ಬ ವೃದ್ಧಳಾದ ಹೆಂಗಸು, ಸಮೀಪದಲ್ಲಿ ಕುಳಿತು ಯಾವಾಗಲೂ ಇದರ ಚಕ್ರವನ್ನು ತಿರುಗಿಸುತ್ತಲಿರುವಳು. ಇಲ್ಲಿಂದ ಹೊರಗೆ ಬಂದು, ಎಡಗಡೆಯ ಬಾಗಿಲ ಕಡೆಗೆ ತಿರುಗಿ ಅಲ್ಲಿ ಪ್ರವೇಶಿಸಿದರೆ ಮತ್ತೊಂದು ದೊಡ್ಡದಾದ ಪಡಸಾಲೆಯಿರುವುದು. ಇದರ ನೆಲವು ಮಣ್ಣು ಮತ್ತು ಒರಟು ಕಲ್ಲುಗಳಿಂದ ಮಾಡಿದುದು. ಇದರ ಕೊನೆಯಲ್ಲಿ ಕತ್ತಲೆಯ ಮಯವಾದ ಒಂದು ಕೊಠಡಿ. ಆ ಕೊಠಡಿಯಲ್ಲಿ ಕಾಲುಮಣೆಯ ಅಥವ ಕುರ್ಚಿಯ ಮೇಲೆ ಕುಳಿತಿರುವ ಭಾವದ, ಬಣ್ಣವನ್ನು ಹಾಕಿದ ಮೃಣ್ಮಯವಾದ ಒಂದು ದೊಡ್ಡ ಬುದ್ಧ ವಿಗ್ರಹ. ಪಡಸಾಲೆಯ ಎಡಭಾಗದ ಒಂದು ಕೊಠಡಿಯಲ್ಲಿ ಯೋಗಾಸನದಲ್ಲಿ ಕುಳಿತು ದೇವತಾಪ್ರಾರ್ಥನೆಯನ್ನು ಮಾಡುತ್ತಲಿರುವ ಭಾವದ, ಬಣ್ಣವನ್ನು ಹಾಕಿದ ಮೃಣ್ಮಯವಾದ ಅನೇಕ ಋಷಿ ವಿಗ್ರಹಗಳು. ಈ ಕೊಠಡಿಗೆ ಎದುರಾಗಿ ಅಂದರೆ ಪಡಸಾಲೆಯ ಬಲಭಾಗಕ್ಕೆ ಇದರಂತೆಯೇ ಅಂಧಕಾರಮಯವಾದ ಮತ್ತೊಂದು ದೊಡ್ಡ ಕೊಠಡಿ. ಅಲ್ಲಿ ಯೋಗಾರೂಢರಾಗಿ ನಾನಾವಿಧ ಯೋಗಮುದ್ರೆಗಳನ್ನು ಧರಿಸಿಕೊಂಡು ಕುಳಿತಿರುವ ಭಾವದ ಏಳು ಋಷಿ ವಿಗ್ರಹಗಳು. ಇವು ಸಪ್ತರ್ಷಿಗಳ ವಿಗ್ರಹಗಳೆಂದು ಹೇಳುವರು. ಬುದ್ಧ ದೇವಾಲಯದ ಎಡಕ್ಕೆ ಮತ್ತೊಂದು ಕತ್ತಲೆಯ ನೆಲಮಾಳಿಗೆ. ಅಲ್ಲಿ, ಮಣ್ಣಿನಿಂದ ಮಾಡಿ, ಬಣ್ಣವನ್ನು ಬಳದು, ಚರ್ಮವನ್ನು ಹೊದ್ದಿಸಿ ನಿಲ್ಲಿಸಿರುವ ಕಾಳ ಮತ್ತು ಕಾಳೀ ಎಂಬ ಹೆಸರಿನ ಎರಡು ಭಯಂಕರವಾದ ವಿಗ್ರಹಗಳು. ಪ್ರಧಾನವಾದ ಪಡಸಾಲೆಯ ಒಂದು ಮೂಲೆಯಲ್ಲಿ, ಸರಿಯಾಗಿ ಹದಕೊಪದೇ, ಅರಳೆಯನ್ನು ಸಾಲದಂತೆ ತುಂಬಿರುವ, ಒಂದು ಅದ್ಭುತವಾದ ಕಾಡು ಚಮರೀಮೃಗದ ದೇಹವನ್ನೂ ಮತ್ತು ಒಂದು ಹುಲಿಯ ದೇಹವನ್ನೂ ಮೇಲ್ಛಾವಣಿಗೆ ತೂಗಹಾಕಿರುವರು. ಅಲ್ಲಿಂದ, ಕಟ್ಟಡದ ಮಹಡಿಯಮೇ

ಲಕ್ಕೆ ಹೋಗಬೇಕಾಯಿತು. ಅಲ್ಲಿ ಟಿಬೆಟ್ ದೇಶೀಯರ, ಅಚ್ಚು ಹಾಕಿದ, ಮತ ಗ್ರಂಥಗಳ ಅನೇಕ ಪುಸ್ತಕಗಳ ಭಂಡಾರವು (Library) ಇರುವುದು. ಅಲ್ಲಿ ಮೈತ್ರೇಯನಾದ ಒಂದು ಕಾಳೀ ವಿಗ್ರಹವನ್ನೂ, ಒಂದು ಲಕ್ಷ್ಮೀ ವಿಗ್ರಹವನ್ನೂ ಸ್ಥಾಪಿಸಿರುವರು. ಇಲ್ಲಿಯವರೆಗೆ ನೋಡಿದ ಎಲ್ಲಾ ಬೌದ್ಧಮತಗಳಿಗಿಂತಲೂ, ಈ ಮಠವು ಬಹುಮಟ್ಟಿಗೆ ನಿರ್ಮಲವಾಗಿರುವುದು. ಇದರ ವಿಷಯದಲ್ಲಿ ನಿಜವಾದ ಭಕ್ತಿಭಾವವೂ ಉಂಟಾಗುವುದು. ಮಠದ ಸುತ್ತುಮುತ್ತಣ ಪ್ರದೇಶಗಳೆಲ್ಲ ಕಲ್ಮಲ. ಕಟ್ಟಡದ ಹೊರಭಾಗದಲ್ಲಿ ಒಂದು ಗೋಡೆಯ ಮೇಲೆ, ಜೇಡಿಯ ಮಣ್ಣಿನಿಂದ ಮಾಡಿ, ಬಿಳಿಯ ಬಣ್ಣವನ್ನು ಬಳಿದು, ದೊಡ್ಡ ಅಪ್ಪುತ ಸ್ಥಿತಿಯಲ್ಲಿ "ಓಮ್ ಮಣಿಪದ್ಮೇಹಮ್" ಎಂದು ಪ್ರಕಟಿಸಿರುವರು. ಇದರ ಸಮೀಪದಲ್ಲಿ ಪ್ರತ್ಯೇಕವಾಗಿ ನಾಲ್ಕು ಕಡೆಗಳಲ್ಲಿಯೂ ಮುಂಗಿರುವಂತೆ ಸಣ್ಣ ಕಮಾನು (Arch) ಗಳನ್ನು ಕಟ್ಟಿ ಅವುಗಳಮೇಲೆ ಒಂದು ಚೌಕಿಯನ್ನು ಮಾಡಿ, ಅದರ ಮೇಲೆ, ಸಣ್ಣದೊಂದು ಗೋಪುರವಿರುವುದು. ಇವುಗಳನ್ನೆಲ್ಲ ನೋಡಿಯಾದ ತರುವಾಯ ಮಠದಿಂದ ಹೊರಟು, ಕಣಿವೆಯ ಮೇಗ್ಗಡೆಯಲ್ಲಿರುವ ಸನ್ಯಾಸಿಯ ಚಿಕ್ಕದೊಂದು ಮಠಕ್ಕೆ ಬಂದದ್ದಾಯಿತು. ಇದು ಮಣ್ಣು ಮತ್ತು ಕಲ್ಲುಗಳಿಂದ ಕಟ್ಟಲ್ಪಟ್ಟ ಹಸನಾದ ಕಟ್ಟಡ. ಈ ಕಟ್ಟಡದ ಮೊದಲಿನ ಅಂತಸ್ತಿನಲ್ಲಿನ ಅಂಗಳವನ್ನು ಪ್ರವೇಶಿಸಲು, ಅಲ್ಲಿನ ನೆಲವು ಹಲಗೆಗಳನ್ನು ಜೋಡಿಸಿದ್ದಾಗಿಯೂ, ಗೋಡೆಗಳು ಬಣ್ಣ ಹಾಕಲ್ಪಟ್ಟದ್ದಾಗಿಯೂ, ಮರದ ಕಂಬಗಳಿಂದೊಡಗೂಡಿದುದಾಗಿಯೂ ಇದ್ದಿತು. ಅಂಗಳದ ಒಂದು ಕಡೆಯಲ್ಲಿ ಒಂದು ವೇದಿಕೆ ಅಥವ ಗಾದಿಯ ಮೇಲೆ ೧೬ ವರುಷ ವಯಸ್ಸಿನ ಒಬ್ಬ ಸನ್ಯಾಸಿಯು ಕುಳಿತಿದ್ದನು. ಈತನ ಒತ್ತಿನಲ್ಲಿ ಸ್ವಲ್ಪ ಕೆಳಗಿನ ಇನ್ನೊಂದು ಆಸನದ ಮೇಲೆ ೬ ವರ್ಷ ವಯಸ್ಸಿನ ಒಬ್ಬ ಬಾಲಸನ್ಯಾಸಿಯು ಕುಳಿತಿದ್ದನು. ಇವರಿಬ್ಬರೂ ಅವತಾರಪುರುಷರೆಂದು ಭಾವಿಸಲ್ಪಟ್ಟಿರುವರು. ಇಬ್ಬರೂ ಸುಂದರವಾದ ವರ್ಣವುಳ್ಳವರು ಮತ್ತು ಬಹು ಚತುರವಾದ ಮುಖಭಾವವುಳ್ಳವರು. ದೊಡ್ಡಯತಿಯು ಪ್ರೌಢರುದಲೆಯುಳ್ಳವನು. ಈತನು ಮತಗ್ರಂಥಗಳನ್ನು ಓದುತ್ತಾ ಕುಳಿತಿದ್ದನು. ಈತನು ತನ್ನ ವಾಸಸ್ಥಳವನ್ನು ಬಿಟ್ಟು ಮೂರುವರ್ಷಗಳ ಕಾಲ ಹೊರಗೆ ಕಾಲಿಡುವುದಿಲ್ಲವೆಂದು ಪ್ರಮಾಣ ಮಾಡಿರುವನು. ಈತನು ಶ್ರೀಮನ್ಮಹಾರಾಜರವರನ್ನು ಅತಿ ವಿಶ್ವಾಸದಿಂದ ಕುಶಲಪ್ರಶ್ನೆ ಮಾಡಿದನು. ಮಹಾಸ್ವಾಮಿ

ಯವರು ಈ ಸನ್ಯಾಸಿಗೆ, ಒಂದು ಕೆಂಪು ಬನಾತಿನ ಥಾನು, ಒಂದು ನೀಲಿಯ ಬನಾತಿನ ಥಾನು, ಮತ್ತು ಕೆಲವು ದ್ರವ್ಯ ಜವ್ವುಗಳನ್ನು ಕಾಣಿಕೆಯನ್ನಾಗಿ ಕೊಟ್ಟರು. ಸನ್ಯಾಸಿಯೂ ಸಕಲರನ್ನೂ ಆಶೀರ್ವದಿಸಿ ಪ್ರಸಾದವನ್ನು ಕೊಟ್ಟನು. ಇಲ್ಲಿಯೂ ಯಥಾಪ್ರಕಾರ ಪೂಜಾರ್ಥವಾಗಿ ಒಂದು ಬುದ್ಧ ವಿಗ್ರಹವಿದ್ದಿತು. ಮನೆಯ ಸುತ್ತಲ ಪ್ರದೇಶವೆಲ್ಲವೂ ತೃಣಜಲ ಪೂರಿತವಾಗಿ ಫಲವತ್ತಾಗಿದ್ದಿತು. ಈ ಪ್ರಾಂತ್ಯವು ತಾಕ್ಲಾಕೋಟೆಗಿಂತಲೂ ಔನ್ನತ್ಯದಲ್ಲಿ ೬೦೦ ಅಡಿಗಳ ತಗ್ಗಿನಲ್ಲಿರುತ್ತಾಗಿ ಹೆಚ್ಚು ಚಳಿಯಾಗುತ್ತಲಿರಲಿಲ್ಲ. ಶೃಂಗಾರಮಯವಾದ ಕೋಚಾರ್‌ನಾಥ್ ಪ್ರದೇಶಕ್ಕೆ ಬಂದುದು ಎಲ್ಲರ ಮನಸ್ಸಿಗೂ ಆನಂದಕರವಾಗಿದ್ದಿತು.

ಈ ಪರಿಯಾಗಿ ಕೋಚಾರ್‌ನಾಥ್‌ನಲ್ಲಿ ರಾತ್ರೆ ವಿಶ್ರಾಂತಿಯಂತಳೆದು ಆಗಸ್ಟ್ ೩ನೆಯ ಬೆಳಗ್ಗೆ ೯-೩೦ ಘಂಟೆಗೆ ಮಹಾಸ್ವಾಮಿಯವರು ಸಪರಿವಾರರಾಗಿ ಮತ್ತೆ ತಾಕ್ಲಾಕೋಟೆಗೆ ಚಿತ್ತೈಸಿ ಈ ದಿವಸ ಇಲ್ಲಿಯೇ ವಿಶ್ರಾಂತಿಯಲ್ಲಿದ್ದರು.

ಆಗಸ್ಟ್ ೪ನೆಯ ಪ್ರಾತಃಕಾಲ, ಶ್ರೀಮನ್ಮಹಾರಾಜರವರ ಸನ್ನಿಧಾನದ ಸವಾರಿಯು ಪರಿವಾರದೊಡನೆ ತಾಕ್ಲಾಕೋಟನ್ನು ಬಿಟ್ಟು, ಲಿಪೂಲೇಕ್ ಕಡೆಗೆ ಪ್ರಯಾಣವನ್ನು, ೫ ಮೈಲಿಗಳ ದೂರ ಬೆಳೆಯಿಸಿ, ಪಾಲಾ (Pala) ಎಂಬ ಪ್ರದೇಶದಲ್ಲಿ ಮಜಲು ಮಾಡೋಣವಾಯಿತು. ಬೆಳಗಿನ ದಿನ, ಲಿಪುವನ್ನು ದಾಟಿ, ಮೊದಲಾವರ್ತಿ ಮಜಲು ಮಾಡಿದ್ದಾಗ್ಯೆ ವಿಪರೀತ ಚಳಿಯಿಂದ ತೊಂದರೆಯನ್ನುಂಟುಮಾಡಿದ್ದ ಸಂಗಾಂಗಾಛಂನಲ್ಲಿ ನಿಲ್ಲದೇ, ನೇರವಾಗಿ ಕಾಲಪಾಣಿಗೆ ಹೋಗಿ ಸೇರಬೇಕೆಂದು ನಿರ್ಣಯಿಸಿದ್ದಾಯಿತು. ಈ ದಿವಸ ಮಧ್ಯಾಹ್ನವೆಲ್ಲ ಬಿಸಿಲು ಪ್ರಕಾಶವಾಗಿದ್ದಾಗ್ಯೂ, ಯಥಾಪ್ರಕಾರ ತಂಡಿಯ ಗಾಳಿಯೇ ಬೀಸುತ್ತಲಿದ್ದಿತು.

ಆಗಸ್ಟ್ ತಾರೀಖು ೫ನೆಯ ಬೆಳಗ್ಗೆ ೬-೩೦ ಘಂಟೆಗೆ ಪಾಲಾವನ್ನು ಬಿಟ್ಟು ಹೊರಟು ಲಿಪು ದಿಕ್ಕಿನ ತುದಿಗೆ ತಲಪಿದಾಗ್ಯೆ ೭-೩೦ ಘಂಟೆಯಾಗಿತ್ತು. ದಾರಿಯುದ್ದಕ್ಕೂ ಸೋನೆಯ ಮಳೆ ಮತ್ತು ವಿಪರೀತ ಇಬ್ಬನಿ. ಲಿಪು ಪ್ರಾಂತ್ಯದ ನಿಸರ್ಗಸ್ಥಿತಿ, ಉಗ್ರಭಾವ ಮತ್ತು ಮಂಜಿನಕಣ ಸಹ, "ಪ್ರಪಂಚದ ಅಪಾಯಕರವಾದ ಪ್ರದೇಶ (Death-trap) ವೆಂಬುವ ಭಾವನೆಯನ್ನುಂಟುಮಾಡಿತ್ತು. ಲಿಪು ದಿಕ್ಕನ್ನು ಹತ್ತಿದಮೇಲೆ ಮುಂದಲ



ತಾಕ್ಲಾ ಕೋಟಿನ ಟಿಬೆಟ್ ದೇಶೀಯರ ಮನೆ.



ಭರತಖಂಡವನ್ನೂ, ನೇಪಾಳಸಂಸ್ಥಾನವನ್ನೂ ಸಂಧಿಸುವ ಸೇತುವೆ.



ಕಾಳಪಾಣಿಯ ಸಮೀಪದ ಸೇತುವೆ

ಗರ್ಬಯಾಂಗಿನಲ್ಲಿ ಭೋಟಿಯಾಜನಗಳ ನರ್ತನ.

ಪ್ರಯಾಣಿಸಿಲ್ಲ, [illegible]
ತದರಿ ಹೆಚ್ಚು ಭಾಗವು ಕಲ್ಲುಗಳು. ಹೇಗಾದರೂ ಸುಖವಾಗಿ ಪಾರಾದಂತ ದ್ದಾಯಿತು. ಕಾಳಿಪಾಣಿಗೆ ತಲುಪಿದಾಗ್ಗೆ ರಾತ್ರಿ ೧೦-೪೫ ಘಂಟೆ ೧೮-೧೫ ಮೈಲಿಗಳ ದೂರ. ಮೊದಲಾದಂತೆ ಇಳಿದಿದ್ದು, ಕಾಳೀನದಿಯ ಮೂಲವೆಂಬ ಚಿಲುಮೆಯ ಒತ್ತಿನಲ್ಲಿಯೇ ಈಗಲೂ ಬಿಡಾರವು ಸಿದ್ಧವಾಗಿಟ್ಟಿದ್ದರು. ಮಾರನೆಯ ದಿನ ಇಲ್ಲಿನ ಸಾಮಾನುಗಳನ್ನು ಬರುತ್ತಿದ್ದಾಗ್ಗೆ ಟಿಬೆಟಿನ ಸಂಚಾರದ ಬಂದೋಬಸ್ತುದಾರರು, ಬಿಸ್ತು ಸಮೀಪದಲ್ಲಿ ಸ್ವಾಗತಿಸುತ್ತಿದ್ದರು ಜೊತೆಯಲ್ಲಿದ್ದ ಶ್ರೀಮಾನ್. ಸಿ. ಪಿ. ಸುಬ್ರಹ್ಮಣ್ಯರಾಜ ಅರಸರು ಅವರನ್ನು ಉಪಚರಿಸಿ ಕರೆತಂದಿದ್ದರು. ಸಾಂಸ್ಥಾನಿಕ ರಾಜಕುಮಾರ ಮಾರ್ಗದಲ್ಲಿ ಯಾತ್ರಿಕರು ಇದೇ ರೀತಿಯಾಗಿ ತೊಂದರೆಗೆ ಗುರಿಯಾಗಿದ್ದು, ನಮ್ಮ ಅಸಿಸ್ಟೆಂಟ್ ಸರ್ಜನ್, ಮ|| ಕೃಷ್ಣಸ್ವಾಮಿರವರು ಶುಶ್ರೂಷೆಯಲ್ಲಿದ್ದು ಗುಣಪಡಿಸಿದರು. ಉಳಿದವರೆಲ್ಲರೂ ಸುಖವಾಗಿ ಕಾಳಿಪಾಣಿಯನ್ನು ತಲುಪಿದರು. ಇಲ್ಲಿಗೆ ಟಿಬೆಟ್ ಪ್ರಾಂತ್ಯದ ಸಂಚಾರವು ಮುಗಿದು, ಭರತಖಂಡದ ರಾಜ್ಯಕ್ಕೆ ಪ್ರವೇಶಿಸಿದುದು ಎಲ್ಲರಿಗೂ ಹರ್ಷವನ್ನುಂಟುಮಾಡಿತು.

ಆಗಸ್ಟ್ ೩ನೆಯ ತಾರೀಖು ಬೆಳಗ್ಗೆ ೬-೩೦ ಘಂಟೆಗೆ ಕಾಳಿಪಾಣಿಯನ್ನು ಬಿಟ್ಟು ಪಾಳೆಯವು ೪-೪೫ ಘಂಟೆಗೆ ಗರ್ಬಯಾಂಗನ್ನು ತಲುಪಿತು. ವಿಶೇಷವಾಗಿ ಇಳಿದು ಬರುವ ದಾರಿಯಾಗಿದ್ದುದ್ದರಿಂದ ಎಲ್ಲರೂ ಪಾದಚಾರಿಗಳಾಗಿಯೇ ಬಂದರು. ಮಧ್ಯಾಹ್ನ ೨ ಘಂಟೆಗೆ ಈ ಸ್ಥಳದ ಭೋಟಿಯಾ ಜನಗಳು ಬಂದು ಮಹಾಸ್ವಾಮಿಯವರ ಎದುರಾಗಿ ನರ್ತನವನ್ನು ಮಾಡಿದರು. ನರ್ತನಕಾಲದಲ್ಲಿ ತಮಟೆ ಮತ್ತು ತಾಳಗಳ ಶಬ್ದ. ನರ್ತಕರಿಗೆ ಎಡಗೈಯಲ್ಲಿ ಗುರಾಣಿ, ಬಲಗೈಯಲ್ಲಿ ಕತ್ತಿ. ಮಂಡಲಾಕಾರವಾಗಿ (Round) ನಿಂತು ಕುಣಿತ. ಈ ದಿನ ಪ್ರಾಪ್ತಿಯಾಗಿ ಸೋನೆಯ ಮಳೆ ಮತ್ತು ಮೋಡ.

ಗರ್ಬಯಾಂಗಿನಿಂದ ಧಾರ್ಚೂಲವನ್ನು ತಲುಪುವವರೆಗೂ, ದೊಡ್ಡ ದೊಡ್ಡ ಕುದುರೆಗಳಿಗೆ ಮಾರ್ಗವು ಅರ್ಹವಾಗಿಲ್ಲವಾಗಿ, ಹೇಸರಗತ್ತೆಗಳನ್ನೆ ಬದಲಾಗಿ ಕೊಡಿಸುವುದನ್ನು ಒದಗಿಸಿಕೊಳ್ಳಬೇಕಾಗಿದ್ದುದರಿಂದ ಆಗಸ್ಟ್ ೪ನೆಯ ತಾರೀಖಿನ ದಿನವೂ ಗರ್ಬಯಾಂಗಿನಲ್ಲಿಯೇ ನಿಂತು ಈ ದಿನವನ್ನು ವಿಶ್ರಾಂತಿಗಾಗಿ ಕಳೆದದ್ದಾಯಿತು.

ಆಗಸ್ಟ್ ೮ರ ಬೆಳಗ್ಗೆ ೬ ಘಂಟೆಗೆ ಗರ್ಬ್ಯಾಂಗನ್ನು ಬಿಟ್ಟು, ಮಧ್ಯೆ ಬೂತಿ ಎಂಬ ಪ್ರದೇಶದಲ್ಲಿ ಮಜಲು ಮಾಡದೆ ೧೧ ಘಂಟೆಗೆ ಮಾಲ್ಪಾವನ್ನು (Malpa) ಪಾಳೆಯವು ತಲಪಿತು. ದಾರಿಯು ಕಷ್ಟತರವಾಗಿಯೂ ಅಪಾಯಕರವಾಗಿಯೂ ಇದ್ದುದರಿಂದ, ಎಲ್ಲರೂ ಶ್ರಾಂತರಾಗಿ ಸ್ಥಳವನ್ನು ಸೇರಿದರು. ಬಿಸಿಲೂ ಸಹ ಬಹು ರಭಸವಾಗಿದ್ದಿತು.

ಆಗಸ್ಟ್ ೯ನೆಯ ಪ್ರಾತಃಕಾಲ ಮಹಾಸ್ವಾಮಿಯವರ ಪಾಳೆಯವು ೭ ಘಂಟೆಗೆ ಮಾಲ್ಪಾವನ್ನು ಬಿಟ್ಟು ಪ್ರಯಾಣಮಾಡಿ ೧೦-೩೦ ಘಂಟೆಗೆ ಗಲಗರ್ ಮಜಲನ್ನು ಸೇರಿತು. ಮೇಲೆ ಹೇಳಿದಂತೆ ದಾರಿಯು ಬಹು ಅಪಾಯಕರವಾಗಿದ್ದಿತು. ದೈವಾನುಗ್ರಹದಿಂದ ಸರ್ವರೂ ಸುರಕ್ಷಿತರಾಗಿ ಸ್ಥಳವನ್ನು ತಲಪಿದರು. ದಾರಿಯಲ್ಲಿ ಬರುವಾಗ್ಗೆ ದೊಡ್ಡದೊಂದು ಬಂಡೆಯು ಉರುಳಿ ಬಿದ್ದು ೨-೩ ಜನ ಕೂಲಿಯವರಿಗೆ ಸ್ವಲ್ಪ ಘಾಸಿಯಾಯಿತು. ಅಪಾಯಕರವಾದ ಪೆಟ್ಟುಗಳೇನೂ ಆಗಲಿಲ್ಲ. ಅವರು ಹೊತ್ತು ತರುತ್ತಲಿದ್ದ ಕೆಲವು ಡೇರೆಯ ಕಂಭಗಳು ಪುಡಿಪುಡಿಯಾಗಿ ಹೋದವು. ಈ ಪ್ರಯಾಣದಲ್ಲಿ ಅತ್ಯಂತ ವಿಪತ್ಕರವಾದ ಪ್ರಾಂತ್ಯವನ್ನು ದಾಟಿಬಂದುದು ಸರ್ವರಿಗೂ ಸಂತೋಷವಾಯಿತು.

ಆಗಸ್ಟ್ ೧೦ನೆಯ ತಾರೀಖಿನ ದಿನ, ಪ್ರಭುವರರ ಪಾಳೆಯವು, ಗಲಗರ್ ಬಿಡಾರದಿಂದ ಹೊರಟು ಥಿಥ್ಲಾವನ್ನು (Thithla) ಸೇರಿತು. ಹೊರಟಾಗ್ಗೆ ಮಳೆ ಹುಯ್ಯುತ್ತಲಿದ್ದಿತು. ಮೊದಲು ೪ ಮೈಲಿಗಳ ದೂರ, ಕಡಿದಾಗಿಯೂ, ತಿರುವುಗಳಿಂದೊಡಗೂಡಿದ್ದಾಗಿಯೂ ಇರುವ ತಿಟ್ಟನ್ನು ಹತ್ತುವಾಗ್ಗೆ ಕುದುರೆಗಳಿಗೆ ವಿಶೇಷ ಆಯಾಸವಾಯಿತು. ಮುಂದಲ ೪ ಮೈಲಿಗಳ ದೂರ, ಅತ್ಯಂತ ಕೆಸರಾಗಿಯೂ, ಜಾರಿಕೆಯಾಗಿಯೂ ಇರುವ ದಾರಿಯಲ್ಲಿ ಇಳಿದು ನಡೆದುಬಂದುದು ಜನರಿಗೆ ಅದೇ ರೀತಿಯಾಗಿ ಆಯಾಸವಾಯಿತು ಮಾರ್ಗದಲ್ಲಿ ಬರುವಾಗ್ಗೆ ಶ್ರೀಯುತ ವೆಂಕಟಸುಬ್ಬಯ್ಯನವರು ಕುದುರೆಯ ಮೇಲೆ ಕುಳಿತು ಬರುತ್ತಲಿರಲು ಮೇಲಿನಿಂದ ಒಂದು ದೊಡ್ಡ ಗುಂಡು ಬಲಗಡೆಯಿಂದ ಉರುಳಿ ಅವರ ಮುಂದುಗಡೆಯಲ್ಲಿ, ಕೇವಲ ಸಮೀಪದಿಂದ, ಕೆಳಗಣ ಕಣಿವೆಗೆ ಬಿದ್ದಿತು. ದೈವವಶಾತ್ ಸ್ವಲ್ಪ ವ್ಯತ್ಯಾಸವಾದುದರಿಂದ ಅಪಾಯವೇನೂ ಆಗಲಿಲ್ಲ. ಕೈಲಾಸಪರ್ವತಕ್ಕೆ ಹೋಗುವಾಗ್ಗೆ ಮಹಾಸ್ವಾಮಿಯವರ ಪಾಳೆಯವು ಇಲ್ಲಿಗೆ ಬಂದಿದ್ದಂದಿನಿಂದೀಚೆಗೆ ಒಳ್ಳೆಯ

ಮಳೆಗಳಾಗಿ ಗುಡ್ಡಗಳ ಇಳಿಜಾರು ಪ್ರದೇಶಗಳೆಲ್ಲವೂ ಕೇವಲ ಹಸುರಾದ ಆಕಾರ ಸಸ್ಯಗಳಿಂದೊಡಗೂಡಿದ್ದವು. ಈ ಸಸ್ಯಗಳಲ್ಲಿ ಗಿಡ, ಜರೀಗಿಡಗಳು (Ferns) ಮತ್ತು ಕಾಡು ಹೂವಿನಗಿಡಗಳೇ ವಿಶೇಷವಾಗಿದ್ದವು. ಕೃಷಿಮಾಡಲ್ಪಟ್ಟ ಭೂಮಿಗಳಲ್ಲಿ ಅಪಾರ ಬೆಳೆಯಾಗಿದ್ದಿತು.

ಆಗಸ್ಟ್ ೧೧ರಲ್ಲಿ ಪಾಳಯವು ಥಿಥ್ಲಾವನ್ನು ಬಿಟ್ಟು ಖೇಲಾವನ್ನು Khela) ಸೇರಿತು. ಹೆಚ್ಚು ಭಾಗದ ದಾರಿಯಲ್ಲಿ ಮಳೆ. ಭಾರೀ ಮಳೆಗಳ ಸೆಡೆಯಿಂದ ತೊರೆಗಳೆಲ್ಲವೂ ಉಕ್ಕಿ ಹರಿಯುತ್ತಲಿದ್ದವು. ಅಲ್ಲಲ್ಲಿ ಕೊರಕಲುಗಳಾಗಿದ್ದವು. ಖಿಲೇಥಿಡಾಯ್ ಮಾರ್ಗದಲ್ಲಿ ೩ ಮೈಲಿಗಳ ದೂರ ಹತ್ತಿ ಕಳಿದುದು ಬಹು ಆಯಾಸವಾಯಿತು ಎಲ್ಲಾ ಬೆಳೆಗಳೂ, ಅದರಲ್ಲಿಯೂ ಈ ಪ್ರಾಂತ್ಯದಲ್ಲಿ ಬಹು ಉದ್ದವಾಗಿ ಬೆಳೆಯುವ ಮುಸುಕಿನಜೋಳವೂ ಬಹಳ ಒಳ್ಳೆಯ ಸ್ಥಿತಿಯಲ್ಲಿದ್ದವು.

ಆಗಸ್ಟ್ ತಾರೀಖು ೧೨ನ್ನು ಖೇಲಾದಲ್ಲಿಯೇ ವಿಶ್ರಾಂತಿ ದಿನವನ್ನಾಗಿ ಕಳೆದುದಾಯಿತು. ಹಿಂದಲ ರಾತ್ರಿ ವಿಪರೀತ ಮಳೆ. ಈ ದಿನ ಹಗಲು ಪೂರಾ ಚುರುಕಾದ ಬಿಸಿಲಿದ್ದಿತು.

ಆಗಸ್ಟ್ ತಾರೀಖು ೧೩ನೆಯ ಬೆಳಗ್ಯೆ ೬ ಘಂಟೆಗೆ ಖೇಲಾವನ್ನು ಬಿಟ್ಟು ಹೊರಟು ೧೦-೧೫ ಘಂಟೆಗೆ ಪಾಳಯವು ಧಾರ್ಚೂಲಾವನ್ನು (Dharchula) ಸೇರಿತು. ದಾರಿಯುದ್ದಕ್ಕೂ ಹಸುರುಮಯವಾದ ಸಸ್ಯ ಸಮೃದ್ಧಿಯೂ, ಹೊಸದಾಗಿ ಆದ ಮಳೆಯ ದೆಸೆಯಿಂದ, ಹೊಸನೀರು ತುಂಬಿ ಹರಿಯುತ್ತಲಿರುವ ಪರ್ವತಗಳ ಝುರಿಗಳಲ್ಲಿ ಜಲಸಮೃದ್ಧಿಯೂ ಇದ್ದಿತು. ಪಾಳಯವು ಮೊದಲು ಧಾರ್ಚೂಲಾದಲ್ಲಿ ಇಳಿದುಕೊಂಡಾಗ್ಯೆ ಇದ್ದಂತೆಯೇ ಈಗಲೂ ಬಹಳ ಸೆಖೆಯಾಗಿದ್ದಿತು.

ಆಗಸ್ಟ್ ತಾರೀಖು ೧೪. ಮುಂದಲ ಪ್ರಯಾಣದ ಮಧ್ಯಮಾರ್ಗದಲ್ಲಿ ಸಿಕ್ಕುವ, ಬಹಳ ಸೆಖೆಯ ಪ್ರದೇಶವಾದ ಬಲವಾಕೋಟಿನಲ್ಲಿ ತಂಗುವುದನ್ನು ತಪ್ಪಿಸಿ, ೨೨ ಅಥವ ೨೩ ಮೈಲಿಗಳ ಪ್ರಯಾಣವನ್ನು ಬೆಳೆಯಿಸಿ ನೇರವಾಗಿ ಆಸ್ಕೋಟಿಗೆ ಹೋಗಿ ಸೇರಬೇಕೆಂದು ಗೊತ್ತುಮಾಡಿಕೊಂಡು ಮಹಾಸ್ವಾಮಿಯವರ ಪಾಳಯವು ಬೆಳಗ್ಯೆ ೬ ಘಂಟೆಗೆ ಧಾರ್ಚೂಲಾದಿಂದ ಹೊರಟು ೯-೩೦ ಘಂಟೆಗೆ ಬಲವಾಕೋಟನ್ನು ಸೇರಿ ಅಲ್ಲಿ ಅಲ್ಪಾಹಾರವನ್ನು ಪರಿಗ್ರಹಿಸಿ ಮತ್ತೆ ೧೧-೩೦ ಘಂಟೆಗೆ ಅಲ್ಲಿಂದ ಹೊರಟು, ಮಾರು

ಕಾದ ಬಿಸಿಲಿನಲ್ಲಿಯೇ ಪ್ರಯಾಣವನ್ನು ಬೆಳೆಸಿ, ಬಹು ೪-೩೦ ಘಂಟೆಗೆ ಆಸ್ಕೋಟನ್ನು ಸೇರಿತು. ದಾರಿಯ ಕೊನೆಯ ಭಾಗದಲ್ಲಿ ಆಸ್ಕೋಟಿನ ಕಡೆಗೆ ಮುರಿವುಗಳುಳ್ಳ ೩ ಮೈಲಿಗಳ ಮಾರ್ಗವನ್ನು ನಡೆಯಬೇಕಾದುದು ಕುದುರೆಗಳಿಗೂ ಜನಗಳಿಗೂ ಬಹಳ ಶ್ರಾಂತಿಯನ್ನುಂಟುಮಾಡಿತು. ಆಸ್ಕೋಟಿನಲ್ಲಿ ವಿಶೇಷ ನಾಟ ಸೊಳ್ಳೆಗಳೂ ಮತ್ತು ಇತರ ಕ್ರಿಮಿಗಳೂ ಇದ್ದುವು. ಬಹು ಉರಿ ಮತ್ತು ಸೆಕೆಯಾಗಿತ್ತು.

ಆಗಸ್ಟ್ ತಾರೀಖು ೧೫ರಲ್ಲಿಯೂ, ಪಾಳೆಯವು ಆಸ್ಕೋಟಿನಲ್ಲಿಯೇ ತಂಗಿಯಿದ್ದಿತು. ಈ ದಿವಸ ಬೆಳಗ್ಗೆ ಇಲ್ಲಿ ಭಾರಿ ಮಳೆ. ಸಾಯಂಕಾಲದಲ್ಲಿಯೂ ದೊಡ್ಡ ಮಳೆಯು ಹುಯ್ದು ಡೇರೆಗಳೆಲ್ಲ ತೇವವಾಗಿ ಅಸಾಧ್ಯ ಕೊಳಕಾಗಿದ್ದಿತು. ಈ ದಿವಸ ಮಧ್ಯಾಹ್ನ ಶ್ರೀಯುತ ರಾಜಾವಾರ್ ವಿಕ್ರಮ್ ಬಹದ್ದೂರ್ ಸಿಂಗಾರವರು ಪಾಳೆಯದಲ್ಲಿ ಕೆಲವು ಜನರನ್ನು "ಟೀ" ಕೂಟಕ್ಕೆ ಆಹ್ವಾನಿಸಿ ಉಪಚರಿಸಿದರು.

ಆಗಸ್ಟ್ ೧೬ನೆಯ ದಿನ ಬೆಳಗ್ಗೆ ೬-೩೦ ಘಂಟೆಗೆ ಪಾಳೆಯವು ಆಸ್ಕೋಟಿನಿಂದ ಹೊರಟು ೩ ಘಂಟೆಗಳ ಕಾಲ ಪ್ರಯಾಣಮಾಡಿ ಸ್ಯಾಂಡೇವ್ (Sandeo) ಅನ್ನು ಸೇರಿತು. ಈ ದಿವಸ ಪ್ರಾತಃಕಾಲವು ತಂಪಾಗಿಯೂ ಮನೋಹರವಾಗಿಯೂ ಇದ್ದುದರಿಂದ ಪ್ರಯಾಣವು ಆನಂದಕರವಾಗಿದ್ದಿತು.

ಆಗಸ್ಟ್ ೧೭ನೆಯ ತಾರೀಖು ಪ್ರಾತಃಕಾಲ ೬-೩೦ ಘಂಟೆಗೆ ಸ್ಯಾಂಡೇವಿನಿಂದ ಪ್ರಯಾಣವು ಜರಗಿ ೮-೪೫ ಘಂಟೆಗೆ ಥಾಲ್‌ಗೆ (Thal) ತಲಪಿದುದಾಯಿತು. ಉದ್ದಕ್ಕೂ ವಿಶೇಷವಾಗಿ ಇಳಿದುಬರುವ ದಾರಿಯಾಗಿತ್ತಾಗಿ ಎಲ್ಲರೂ ಪಾದಚಾರಿಗಳಾಗಿಯೇ ಬಂದರು. ಈ ದಿನ ಮಧ್ಯಾಹ್ನ ೪ ಘಂಟೆಯ ವರೆವಿಗೂ ಧಾರ್ಚೂಲಾದಲ್ಲಿದ್ದಂತೆಯೇ ಸೆಖೆಯಾಗಿದ್ದಿತು. ಎಲ್ಲರೂ ವಿಶೇಷವಾಗಿ ಬೆವರಿ, ಕ್ರಮವಾದ ಕುದಿಯುವ ನೀರಿನ ಹಬೆಯಸ್ನಾನ (Turkish Bath) ಮಾಡಿದಂತಾಗಿತ್ತು.

ಆಗಸ್ಟ್ ೧೮ರ ಬೆಳಗ್ಗೆ ೬-೩೦ ಘಂಟೆಗೆ ಥಾಲ್‌ನಿಂದ ಹೊರಟ ಪಾಳೆಯವು ಮೂರೂವರೆ ಘಂಟೆಯ ಕಾಲ ಪ್ರಯಾಣವನ್ನು ಜರಗಿಸಿ ಬೆರಿನಾಗ್‌ಗೆ (Berinag) ಬಂದು ಸೇರಿತು. ಥಾಲ್‌ನಲ್ಲಿನ ಅದ್ಭುತವಾದ ಸೆಖೆಯಿಂದ ಬಿಡುಗಡೆಯಾದುದು ಎಲ್ಲರಿಗೂ ಸಂತೋಷವಾಗಿದ್ದಿತು. ಈ ದಿವಸದ ದಾರಿಯಲ್ಲಿ ವಿಶೇಷವಾಗಿ ದಿಣ್ಣೆಯನ್ನು ಹತ್ತುವುದಾಗಿತ್ತು. ದಿನಪೂರ್ತಿಯಾಗಿಯೂ ಮೋಡವು ಕವಿದುಕೊಂಡಿದ್ದು ಸೂರ್ಯದರ್ಶನವೇ ಆಗಲಿಲ್ಲ.

ಆಗಸ್ಟ್ ೧೧ನೆಯ ದಿನ, ಪಾಳೆಯವು ಪ್ರಾತಃಕಾಲ ೫-೩೦ ಘಂಟೆಗೆ ಬೆರಿನಾಗ್‌ನಿಂದ ಹೊರಟು ಸರಿಯಾಗಿ ೪ ಘಂಟೆಗಳಕಾಲ ಪ್ರಯಾಣವನ್ನು ಜರಗಿಸಿ ೧೧ ಅಥವ ೧೨ ಮೈಲಿಗಳ ದೂರದಲ್ಲಿರುವ ಸ್ಯಾನಿಯೋಧಿಯರ್ (Saniodhiar) ಬಿಡಾರವನ್ನು ಸೇರಿತು. ಸಾರ್ವೇಮಾರ್ಗಾಳ ರಾಜಿಸಲ್ಲಿಯೇ ದಾರಿ. ದಾರಿಯಲ್ಲಿ ವಿಶೇಷ ಜೇಡಿಗಳಿಂದಲೂ, ಜಲಪ್ರವಾಹಗಳಿಂದಲೂ ಶೋಭಿಸುವ ಹಳ್ಳಿಗಳು ಸಿಕ್ಕುತ್ತಿದ್ದುವು. ಅನೇಕ ಹಳ್ಳಿಗಳ ಜನಗಳು ಶ್ರೀಮನ್ಮಹಾರಾಜರವರ ಮಹಾಸನ್ನಿಧಾನದ ದರ್ಶನಾಪೇಕ್ಷೆಯಿಂದ ದಾರಿಯಲ್ಲಿ ಕಾದಿದ್ದು ಸವಾರಿಯು ತಮ್ಮ ತಮ್ಮ ಮುಂಭಾಗದಲ್ಲಿ ಚಿತ್ತೈಸಿದಾಗ್ಯೆ ಪುಷ್ಪವೃಷ್ಟಿಯನ್ನು ಕರೆದು ತಮ್ಮ ಅಪಾರವಾದ ಸಂತೋಷವನ್ನು ಪ್ರದರ್ಶಿಸುತ್ತಲಿದ್ದರು. ಜನರು ವರಿಕೊಂಡು ಬರುತ್ತಲಿದ್ದ ಕುದುರೆಗಳಿಗೆ ಆಯಾಸವನ್ನುಂಟು ಮಾಡುವ ಕಡಿದಾದ ತಿರುವುಗಳುಳ್ಳ ದಾರಿಗಳು ಹೆಚ್ಚಾಗಿದ್ದುವು. ಹಳ್ಳಿಗಳನ್ನು ಇದು ಬರುವಾಗ್ಯೆ ಎಲ್ಲರೂ ನಡೆದು ಬರುತ್ತಲಿದ್ದರು. ಈ ದಿವಸ ಪ್ರಾತಃಕಾಲ ಪೂರಾ ಮೋಡ ಮತ್ತು ಚಳಿ. ಮಧ್ಯಾಹ್ನ ವಿಪರೀತ ಬಿಸಿಲು. ಇಲ್ಲಿ, ಅಮೇರಿಕಾದೇಶದ ಕೆಲವು ಜನ ಪಾದ್ರೀಸ್ತ್ರೀಯರು ನಡೆಸಿಕೊಂಡು ಬರುತ್ತಲಿರುವ ಒಂದು ಅನಾಥಾಲಯವು ಇರುವುದು. ಸ್ಯಾನಿಯೋಧಿಯರ್ ಗ್ರಾಮಕ್ಕೆ ಒಂದು ಮೈಲಿಯಾಚೆಯಲ್ಲಿರುವ ಫಾರೆಸ್ಟ್ ಲಾಡ್ಜಿನಲ್ಲಿ ಶ್ರೀಮನ್ಮಹಾರಾಜರವರ ಪಾಳೆಯವು ಇಳಿದಿದ್ದಿತು.

ಆಗಸ್ಟ್ ೩೦ನೆಯ ಬೆಳಗ್ಯೆ ೫ ಘಂಟೆಗೆ ಶ್ರೀಮನ್ಮಹಾರಾಜರವರ ಪಾಳೆಯವು ಸ್ಯಾನಿಯೋಧಿಯರ್ ಶಿಬಿರವನ್ನು ಬಿಟ್ಟು ೧೨ ಮೈಲಿಗಳ ದೂರ ಪ್ರಯಾಣ ತೆರಳಿ ೧೦ ಘಂಟೆಗೆ ಬಾಗೇಶ್ವರ್ ಎಂಬ (Bageswar) ಊರಿಗೆ ತಲಪಿತು. ನಿನ್ನೆಯ ಪ್ರಯಾಣದ ದಾರಿಯಲ್ಲಿದ್ದಂತೆಯೇ, ಈ ದಿವಸ ಮಾರ್ಗದಲ್ಲಿಯೂ ಮನೋಹರವಾದ ಪರ್ವತ ದೇಶಗಳು (Hill Country) ಇದ್ದುವು. ಪ್ರಾತಃಕಾಲವೆಲ್ಲ ಮೋಡವಾಗಿತ್ತು. ಬಾಗೇಶ್ವರವೆಂಬ ಗ್ರಾಮವು ಸರ್ಜೂ ನದಿಯ ಎರಡು ದಡಗಳಮೇಲೂ ಸರಿಯಾಗಿ ಕಟ್ಟಲ್ಪಟ್ಟಿರುವುದು. ನದಿಯ ನೀರಿನಿಂದ ೨೦ ಅಡಿಗಳಷ್ಟು ದೂರದಲ್ಲಿರುವ, ಯಾತ್ರಿಕರು ಇಳಿಯುವ ಛತ್ರದಲ್ಲಿ (Dak Bangalow) ಬಿಡಾರವು ಏರ್ಪಟ್ಟಿದ್ದಿತು. ಇದರ ಎಡಭಾಗದಲ್ಲಿ, ಸರ್ಜೂನದಿಗೆ ೬೦ ಅಡಿ ಉದ್ದವಾದ ಒಂದು ತೂಗುಸೇತುವೆಯಿರುವುದು. ಇಲ್ಲಿನ ಔನ್ನತ್ಯವು ಸಮುದ್ರಮಟ್ಟಕ್ಕಿಂತ ೩,೨೦೦ ಅಡಿ. ಸೇತುವೆ ಬ

ಹಿಂಭಾಗದಲ್ಲಿ ಗೋಮತೀ ಎಂಬ ನದಿಯು, ಈ ಸರ್ಜೂನದಿಗೆ ಸಂಗಮ ವಾಗುವುದು. ಸಂಗಮ ಪ್ರದೇಶದಲ್ಲಿ ಪುರಾತನವಾದ ಬಾಗೇಶ್ವರ ದೇವಾಲಯವು ಚಿಕ್ಕದಾಗಿ ರಂಜಿಸುವುದು. ಸರ್ಜೂನದಿಯ ಉಭಯ ತೀರಗಳಲ್ಲಿಯೂ ಎರಡು ಪೇಟೆಗಳಿರುವುವು, ಈ ಪ್ರಾಂತ್ಯದಲ್ಲಿ ಪ್ರತಿವರ್ಷವೂ ನವಂಬರ್ ತಿಂಗಳಿನಲ್ಲಿ ಬಹು ಜನಸಮೂಹವು ಸೇರುವ ಒಂದು ಜಾತ್ರೆಯು ನಡೆಯುವುದಾಗಿ ತಿಳಿಯಬರುತ್ತದೆ. ಬಾಗೇಶ್ವರ ಪುರದ ನಿವಾಸಿಗಳೆಲ್ಲರೂ ಸಹ, ಶ್ರೀಮನ್ಮಹಾರಾಜರವರ ಮಹಾಸನ್ನಿಧಾನಂಗಳಿಗೆ, ಮಹೋಲ್ಲಾಸದಿಂದೊಡಗೂಡಿ ಸ್ವಾಗತವನ್ನಿತ್ತು, ಸವಾರಿಯು ಬಿಜಯಮಾಡಿಸುವ ಬೀದಿಗಳನ್ನಲಂಕರಿಸಿದ್ದು, ಪ್ರಭುವರರ ಉತ್ತಮಾಂಗಕ್ಕೆ ಕುಸುಮ ವೃಷ್ಟಿಯನ್ನು ವರ್ಷಿಸಿ, ತಮ್ಮ ಸಂತೋಷಾತಿಶಯವನ್ನು ಪ್ರದರ್ಶನಮಾಡಿದರು. ಸಾಯಂಕಾಲ, ಪುರನಿವಾಸಿಗಳ ಮುಖ್ಯಸ್ಥರು, ಮಹಾಸ್ವಾಮಿಯವರ ಸುಸಮಯವನ್ನು ಕಾಯ್ದಿದ್ದು, ಬೂಟಾ ಕೆಲಸಮಾಡಿದ ಒಂದು ಮೊಕಮಲ್ ಚೀಲದಲ್ಲಿಟ್ಟು ವಿಜ್ಞಾಪನಾಪತ್ರಿಕೆಯೊಂದನ್ನು ವಿನಯದಿಂದ ಸಮರ್ಪಿಸಿದರು. ತಮ್ಮ ಊರಿನ ಒಂದು ಪಾಠಶಾಲೆಯ ಕಟ್ಟಡವನ್ನು, ೫,೦೦೦ ರುಪಾಯಿಗಳ ವ್ಯಯದ ಅಂದಾಜಿನಿಂದ ಅಭಿವೃದ್ಧಿಮಾಡಿ ಕಟ್ಟಿಸುವುದಕ್ಕಾಗಿ ದ್ರವ್ಯ ಸಹಾಯಮಾಡಬೇಕೆಂದು, ವಿಜ್ಞಾಪನಾ ಪತ್ರಿಕೆಯಲ್ಲಿ ಶ್ರೀಮನ್ಮಹಾರಾಜರವರ ಸನ್ನಿಧಾನದಲ್ಲಿ ಪ್ರಾರ್ಥಿಸಿಕೊಂಡಿದ್ದರು. ಇವರ ಪ್ರಾರ್ಥನೆಗೆ ಯೋಗ್ಯವಾದ ಉತ್ತರವು ಮಹಾಸ್ವಾಮಿಯವರಿಂದ ದಯಪಾಲಿಸಲ್ಪಟ್ಟಿತು ಬಾಗೇಶ್ವರವು ಬಹು ಶೃಂಗಾರಭರಿತವಾದಪುರವು. ಇಲ್ಲಿಗೆ ಬಂದುದು ಯಾತ್ರಿಕರಿಗೆ ಆನಂದವನ್ನುಂಟುಮಾಡಿತು. ಈ ದಿವಸ ಮಧ್ಯಾಹ್ನ ಪ್ರಾರಂಭವಾದ ಮಳೆಯು ಸಂಜೆ ೭. ಘಂಟೆಗೆ ನಿಂತಿತು.

ಆಗಸ್ಟ್ ೨೧ನೆಯ ಬೆಳಗ್ಯೆ ಪಾಳಯವು ೫-೩೦ ಘಂಟೆಗೆ ಬಾಗೇಶ್ವರದಿಂದ ಹೊರಟು ಸುಮಾರು ೧೭ ಮೈಲಿಗಳ ಪ್ರಯಾಣವನ್ನು ಜರಿಗಿಸಿ ಮಧ್ಯಾಹ್ನ ೧೨ ಘಂಟೆಗೆ ಬಿನ್ಸಾರನ್ನು (Binsar) ಸೇರಿತು. ದಾರಿಯಲ್ಲಿ ಕೆಲವು ಕಡೆಯಲ್ಲಿ ಕಡಿದಾದ ದಿಣ್ಣೆಗಳು ಇದ್ದುದ್ದರಿಂದ ಜನರಿಗೂ ಮತ್ತು ಕುದರೆಗಳಿಗೂ ಸಹ ಈ ಪ್ರಯಾಣವು ಆಯಾಸಕರವಾಗಿದ್ದಿತು. ಬಿನ್ಸಾರ ಔನ್ನತ್ಯವು ೭,೦೦೦ ಅಡಿಗಳ ಮೇಲಿರುವುದಾಗಿ ಬಹಳ ತಂಪಾಗಿರುವುದು ಆಲ್ಮೋರಾವಲ್ಲಿನ ಒಬ್ಬ ಐಶ್ವರ್ಯಶಾಲಿಯಾದ ವರ್ತಕ ಶ್ರೀಯುತ ದೇವಿ

ವಿಲಾಲ್ ಷಾ (Mr. Devilal Shah) ಎಂಬುವರಿಗೆ ಸೇರಿದುದಾದ, ಬಹು ಅಂದವಾಗಿ ಕಟ್ಟಲ್ಪಟ್ಟು, ವಿಶಾಲವಾಗಿರುವುದಾಗಿಯೂ, ಅನುಕೂಲಿಸಲ್ಪಟ್ಟದ್ದಾಗಿಯೂ (Well furnished) ಇರುವ ಬಂಗ್ಲಾವು ಬಿಡಾರವಾಗಿ ನಿರ್ದೇಶಿಸಲ್ಪಟ್ಟಿದ್ದಿತು. ಒಂದಾನೊಂದು ಕಾಲದಲ್ಲಿ ಈ ಕಟ್ಟಡವು ಕಮಿಷನರ್ ಜನರಲ್ ರಾಂಸೇಯವರಿಗೆ ಸೇರಿದ್ದಿತು. ಕಟ್ಟಡದಲ್ಲಿ ಹೇರಳವಾಗಿ ನೊಣಗಳು ಮತ್ತು ಸೊಳ್ಳೆಗಳೂ ಮುತ್ತಿಕೊಳ್ಳುತ್ತಿದ್ದುವು. ಈ ಕಟ್ಟಡದ ವಿಶಾಲವಾದ ಬಹಿರಾವರಣದಲ್ಲಿ ಅನೇಕವಾದ ಸೇಬು ಮತ್ತು ಪಿಚ್ಚೀಸ್ (Apple and Peach) ಮರಗಳುಳ್ಳ ಒಂದು ಪುರಾತನವಾದ ಹಣ್ಣಿನ ತೋಟವು ರಮ್ಯವಾಗಿರುವುದು.

ಮುಂದೆ ದಿನಪಾಣಿಯಲ್ಲಿ (Dinapani) ತಂಗದೇ ಮುಂದಿನ ಮುಕಾಮನ್ನು ನೇರವಾಗಿ ಅಲ್ಮೋರಾದಲ್ಲಿಯೇ ಮಾಡಬೇಕೆಂದು ಇತ್ಯರ್ಥವಾಗಿದ್ದುದರಿಂದಲೂ, ಬಿನ್ಸಾರ್ ಪ್ರದೇಶವು ಅಲ್ಮೋರಾಕ್ಕಿಂತಲೂ ತಂಪಾದ ಪ್ರದೇಶವಾಗಿದ್ದುದರಿಂದಲೂ ಆಗಸ್ಟ್ ೨೨ ಮತ್ತು ೨೩ ಈ ಎರಡು ದಿನಗಳೂ ಬಿನ್ಸಾರಿನಲ್ಲಿಯೇ ನಿಲ್ಲಬೇಕೆಂದು ಮಹಾಸ್ವಾಮಿಯವರ ಅಪ್ಪಣೆಯಾಯಿತು. ಬಿಡಾರದ ಸಮೀಪದಲ್ಲಿನ ಒಂದು ಗುಡ್ಡದ ತುದಿಯಲ್ಲಿರುವ ಒಂದು ಮನೆಯು (Forest Lodge) ಹಸನಾಗಿ ಕಟ್ಟಲ್ಪಟ್ಟು ನೋಟಕ್ಕೆ ರಮ್ಯವಾಗಿರುವುದು. ಇಲ್ಲಿಗೆ ಹತ್ತಿಹೋಗಲು ಕಡಿದಾಗಿಯೂ ಮತ್ತು ತಿರುವುಗಳುಳ್ಳದ್ದಾಗಿಯೂ ಇರುವ ಒಂದು ಮೈಲಿಯ ದಾರಿಯಿರುವುದು.

ಆಗಸ್ಟ್ ೨೩ನೆಯ ತಾರೀಖಿನ ಪ್ರಾತಃಕಾಲವೆಲ್ಲ ಮೋಡ ಮತ್ತು ಇಬ್ಬನಿ. ಪೂರ್ವದಲ್ಲಿ ಜನರಲ್ ರಾಂಸೆಯವರು ಕಮಿಷನರ್ ಪದವಿಯಲ್ಲಿದ್ದಾಗ್ಯೆ ಅವರ ಪತಾಕೆಯು (Flag) ಶೋಭಿಸುತ್ತಲಿದ್ದ, ಪತಾಕಾಸ್ತಂಭಗಿರಿ (Flag Staff Hill) ಅಥವ ಜಾಂಡಾಧಾರವೆಂಬ (Jandadhara) ಕಡಿದಾದ ಪ್ರದೇಶಗಳಿಗೆ ಹತ್ತಿ ಇಳಿದು ಸುತ್ತಿಕೊಂಡು ಬಂದುದು ಸಕಲರಿಗೂ ಈ ದಿವಸ ದಿವ್ಯವಾದ ವ್ಯಾಯಾಮವಾದಂತಾಗಿ ಉಲ್ಲಾಸವಾಗಿದ್ದಿತು.

ಆಗಸ್ಟ್ ೨೪ನೆಯ ತಾರೀಖು ಬೆಳಗ್ಗೆ ೬-೩೦ ಘಂಟೆಗೆ ಬಿನ್ಸಾರನ್ನು ಬಿಟ್ಟು ೧೨-೧೩ ಮೈಲಿಗಳ ದೂರ ಪ್ರಯಾಣಮಾಡಿ ಹಗಲು ೧೦-೩೦ ಘಂಟೆಗೆ ಅಲ್ಮೋರ ಅಂದರೆ ಹಿಂದೆ ಜೂನ್ ಮಾಹೆ ತಾರೀಖು ೨೭ರಲ್ಲಿ, ಕೈಲಾಸಪರ್ವತದ ಕಡೆಗೆ ಪ್ರಯಾಣ ಮಾಡಲು ಬಿಟ್ಟು ಹೊರಟಿದ್ದ ಪ್ರದೇ

ವನ್ನು ಸೇರಿತು. ಮಾರ್ಗದಲ್ಲಿ ಕೆಲವು ಘಂಟೆಗಳ ಕಾಲ ಮಳೆಯು ಹುಯ್ಯುತ್ತಲಿದ್ದಾಗ್ಯೂ, ದಾರಿಯು ಅತ್ಯಂತ ಸುಲಭವಾಗಿಯೂ, ರಮಣೀಯವಾಗಿಯೂ ಇದ್ದಿತು. ಇಲ್ಲಿಯವರಿಗೆ ನಡೆದ, ಅತ್ಯಂತ ಪ್ರಮೋದಾಯಕವಾದ ಯಾತ್ರೆಗಳೆಲ್ಲವೂ ಜರುಗಿದ ತರುವಾಯ, ಸರ್ವರನ್ನೂ ಮತ್ತೆ ನಾಗರೀಕತೆಯ ಪ್ರದೇಶಕ್ಕೆ ಸುರಕ್ಷಿತವಾಗಿ ಕರೆತಂದ ಸರ್ವಶಕ್ತನಾದ ಪರಮೇಶ್ವರನ ಪಾದಾರವಿಂದಗಳಿಗೆ ಭಕ್ತಿಯಿಂದ ಅಭಿವಂದಿಸಿ, ಸರ್ವರೂ ಆಲ್ಮೋರಾದಲ್ಲಿ ಸುಖದಿಂದಿದ್ದರು.

ಆಗಸ್ಟ್ ತಾರೀಖು ೨೫ ಮತ್ತು ೨೬ ಈ ಎರಡು ದಿವಸಗಳಲ್ಲಿಯೂ ಶ್ರೀಮನ್ಮಹಾರಾಜರವರ ಮಹಾಸನ್ನಿಧಾನದ ಸವಾರಿಯು ಪರಿಜನಗಳೊಂದೊಡಗೂಡಿ ಆಲ್ಮೋರಾ ಪಟ್ಟಣದಲ್ಲಿ ಚಿತ್ತೈಸಿ ಇದ್ದು, ಅಲ್ಲಿನ ಸರ್ಕಾರೀ ಉದ್ಯೋಗಿಗಳಿಗೂ ಪುರಪ್ರಮುಖರುಗಳಿಗೂ ಸಹ ಭೇಟಿಯನ್ನು ದಯಪಾಲಿಸಿ, ಅವರುಗಳಿಗೆ ಪ್ರೇಮಸೂಚಕ ಪಾರಿತೋಷಕಗಳನ್ನೂ ಉಡುಗೆರೆಗಳನ್ನೂ ದಯಪಾಲಿಸಿ ಅಲ್ಲಿನ ಶೇಕದಾರರುಗಳಿಗೂ (Kanungos) ಸೇವಕರುಗಳಿಗೂ (Chaprasies) ಮತ್ತು ಕುದರೆಯ ಆಳುಗಳಿಗೂ ಉದಾರವಾದ ಪಾರಿತೋಷಕಗಳನ್ನು, ಅಪ್ಪಣೆ ಕೊಡಿಸುತ್ತ ಸಮಗ್ರ ಸಂತೋಷದಲ್ಲಿದ್ದರು.

ಉಪಸಂಹಾರ.

ಮಹಾಸ್ವಾಮಿಯವರು ಆಗಸ್ಟ್ ೨೭ನೆಯ ತಾರೀಖು ಬೆಳಗ್ಗೆ ೧೦ ಘಂಟೆಗೆ ಪರಿಜನಗಳೊಂದೊಡಗೂಡಿ ಮೋಟಾರ್ ರಥದಲ್ಲಿ ಮುಹೂರ್ತಮಾಡಿ ಆಲ್ಮೋರಾದಿಂದ ಪ್ರಯಾಣವನ್ನು ಬೆಳೆಯಿಸಿ ಮಧ್ಯಾಹ್ನ ೩-೩೦ ಘಂಟೆಗೆ ಕಾಥಗೋದಾಂಗೆ ಚಿತ್ತೈಸಿದರು. ಬೆಳಗಿನ ದಿನ ಪ್ರಾತಃಕಾಲ ಸವಾರಿಯು ರೈಲು ಗಾಡಿಯಮೇಲೆ ಹರಿದ್ವಾರಕ್ಕೆ ಚಿತ್ತೈಸಿತು. ಆಗಸ್ಟ್ ೨೮ರ ದಿನ ಪೂರ್ತಾ ಹರಿದ್ವಾರದಲ್ಲಿ ಚಿತ್ತೈಸಿದ್ದು ಸವಾರಿಯು ರಾತ್ರೆ ೧೦ ಘಂಟೆಗೆ ಅಲ್ಲಿಂದ ಹೊರಟು ಹಸ್ತಿನಾಪುರ (Delhi) ಮಾರ್ಗದಿಂದ ಆಗಸ್ಟ್ ೩೦ನೆಯ ತಾರೀಖಿನ ದಿನ ಬೊಂಬಾಯಿ ಪಟ್ಟಣಕ್ಕೆ ದಯಮಾಡಿತು. ಮಹಾಸ್ವಾಮಿಯವರು ಬೊಂಬಾಯಿ ಪಟ್ಟಣದಲ್ಲಿ ಪರಿಜನಗಳೊಡನೆ ಕೆಲವು ದಿನಗಳು ಚಿತ್ತೈಸಿದ್ದು ೧೯೩೦ನೆಯ ಸೆಪ್ಟೆಂಬರ್ ೪ನೆಯ ತಾರೀಖಿನ ರಾತ್ರೆ ಬೊಂಬಾಯಿನಿಂದ ಪ್ರಯಾಣವನ್ನು ಬೆಳೆಯಿಸಿ ಮರುದಿನ ಪ್ರಾತಃಕಾಲ

ಪೂನಾ ಪಟ್ಟಣಕ್ಕೆ ದಯಮಾಡಿಸಿದರು. ಸೆಪ್ಟಂಬರು ೫ನೆಯ ತಾರೀಖು ರಾತ್ರಿ ಮಹಾಪ್ರಭುಗಳು ಪೂನಾದಿಂದ ಪೃಥಕ್ಕಾದ ಹೊಗೆಯ ಬಂಡಿಯಲ್ಲಿ (Special Train) ಪ್ರಯಾಣ ಬೆಳೆಯಿಸಿ, ಅರಸೀಕೆರೆ-ಹಾಸನದ ಮಾರ್ಗವಾಗಿ ರಾಜಧಾನಿಯ ಪ್ರಾಂತ್ಯಕ್ಕೆ ದಯಮಾಡಿ ಬಳಗುಳದ ನಿಲ್ದಾಣದಲ್ಲಿ ಹೊಗೆಯ ಬಂಡಿಯಿಂದ ಉಪಯಿಸಿ, ಕೆಲವು ಪರಿಜನಗಳೊಡನೆ ಮೋಟಾರು ಬಂಡಿಯಲ್ಲಿ ಬೆಂಗಳೂರುನಗರಕ್ಕೆ ಬಿಜಯಂಗೈದರು. ಮಿಕ್ಕ ಪರಿಜನಗಳೆಲ್ಲರೂ ಸೆಪ್ಟಂಬರ್ ೭ನೆಯ ತಾರೀಖು ಸೋಮವಾರ ಪ್ರಾತಃಕಾಲ ಮೈಸೂರು ರಾಜಧಾನಿಗೆ ಸೌಖ್ಯದಿಂದ ಬಂದು ಸೇರಿ ತಮ್ಮತಮ್ಮ ಬಂಧುವರ್ಗಕ್ಕೆ ಪರಮಾನಂದವನ್ನುಂಟುಮಾಡಿದರು.

ಮಹಾಸ್ವಾಮಿಯವರು ಬೆಂಗಳೂರು ನಗರಕ್ಕೆ ಬಿಜಯಮಾಡಿಸಿ, ಅಲ್ಲಿಗೆ ಚಿತ್ತೈಸಿಯಿದ್ದ ಶ್ರೀಮನ್ಮಹಾಮಾತೃಶ್ರೀ ಶ್ರೀ ವಾಣೀವಿಲಾಸ ಮಹಾಸನ್ನಿಧಾನದ ಸಂದರ್ಶನವಂ ಪಡೆದು, ಚರಿತಾರ್ಥರಾಗಿ, ಮಿಕ್ಕ ಬಾಂಧವರಿಗೆ ಸಂದರ್ಶನ ಮಹೋತ್ಸವವನ್ನನುಗ್ರಹಿಸಿ, ಬೆಂಗಳೂರು ನಗರ ನಿವಾಸಿಗಳಿಗೆ ತಮ್ಮ ಸಂದರ್ಶನ ಪುಣ್ಯವನ್ನು ದಯಪಾಲಿಸಿ ಸುಖದಿಂದಿರುತ್ತಿದ್ದು, ಶ್ರೀ ಪ್ರಜೋತ್ಪತ್ತಿನಾಮಸಂವತ್ಸರದ ಭಾದ್ರಪದ ಶುದ್ಧ ಪಂಚಮಿ ಬುಧವಾರ, ಶುಭದಿವಸ, ಸೆಪ್ಟಂಬರ್ ೧೬ನೆಯ ತಾರೀಖು, ಮೈಸೂರು ರಾಜಧಾನಿಗೆ ಚಿತ್ತೈಸಿ, ಜಗನ್ಮಾತೆಯಾದ ಶ್ರೀ ಚಾಮುಂಡಾಂಬಾಪಾದಸಂದರ್ಶನವನ್ನು ಪಡೆದು, ತರುವಾಯ ತಮ್ಮ ಸಂದರ್ಶನಾಕಾಂಕ್ಷಿಗಳಾಗಿ ಆಗಮನವನ್ನು ನಿರೀಕ್ಷಿಸುತ್ತಲಿದ್ದ ಇಲ್ಲಿನ ಪ್ರಜೆಗಳ ಮನೋರಥವನ್ನು ಪೂರ್ಣಗೊಳಿಸಿ ಸನಾತನ ಧರ್ಮ ಸಂರಕ್ಷಣೆಯಂಗೈಯುತ್ತ ನಿರಂತರ ಸುಖಸಾಮ್ರಾಜ್ಯಾನುಭವದಿಂದ ವಿರಾಜಿಸುತ್ತಿರುವರು.

ರಜತಮಹೋತ್ಸವ ಕಾಲದಲ್ಲಿ ಮಹಾಸ್ವಾಮಿಯವರು ಧರ್ಮಸ್ವರೂಪರಾಗಿ ವಿರಾಜಿಸುತ್ತಲಿದ್ದ ಶುಭಮಹೋತ್ಸವವನ್ನು ನೋಡಿ ಆನಂದಪಡುತ್ತಿರುವ ಪ್ರಜಾಕೋಟಿಗೆ, ಪ್ರಭುವರ್ಯರ ಸನ್ನಿಧಾನಂಗಳಿಗೆ ಬೆಳೆಯುವ ಸ್ವರ್ಣ ಮಹೋತ್ಸವ ಮತ್ತು ರತ್ನಮಹೋತ್ಸವಗಳಲ್ಲಿ ಮಹಾಸ್ವಾಮಿಯವರು ವಿರಾಜಿಸುವ ಶುಭಮಹೋತ್ಸವಗಳನ್ನು ನೋಡಿ ಆನಂದಭರಿತರಾಗುವ ಮಹಾ ಸೌಭಾಗ್ಯವನ್ನು ಶ್ರೀ ಕೈಲಾಸಾಧಿಪತಿಯಾದ ಪರಮೇಶ್ವರನು ಅನುಗ್ರಹಿಸಲೆಂದು, ಸಕಲ ಚೈತನ್ಯಾತ್ಮಕನಾದ ಪರಮೇಶ್ವರನ ಪರಮಪಾವನ

ಚರಣಸಾರಸಯುಗ್ಮದಲ್ಲಿ ಭಕ್ತಿಯಿಂದ ಸಂಪ್ರಾರ್ಥಿಸಿ, ಸಾತಕ ಮಹಾಶಯರ ಸವಿಶ್ವಾಸಾನುಮತಿಯ ನಿರೀಕ್ಷಣೆಯಿಂದ ಲೇಖಿನಿಗೆ ವಿರಾಮವನ್ನು ಕೊಟ್ಟಿರುವೆನು.

ಮಂಗಳಂ ಮಾನಸಸರಸ್ಸಿಗೆ |
ಮಂಗಳಂ ಕೈಲಾಸ ಶಿಖರಕೆ |
ಮಂಗಳಂ ಧರೆಯಾಣ್ಮನಾಳ್ವಿಡಿ ಕೃಷ್ಣಭೂಪನಿಗೆ ||
ಮಂಗಳಂ ಮೈಸೂರುದೇಶಕೆ |
ಮಂಗಳಂ ಪದಿನಾಲ್ಕುಲೋಕಕೆ |
ಮಂಗಳಂ ಶ್ರೀಕಂಠದೇವನ ಚರಣಸರಸಿಜಕೆ ||

—: ಮಂಗಳಂ :—

ಈ ಪರಿಯಾಗಿ ಅಲ್ಪಜ್ಞನಾದ ನನ್ನಿಂದ ಯಥಾಮತಿಯಾಗಿ ಬರೆಯಲ್ಪಟ್ಟ ಲೇಖನವನ್ನು, ಶ್ರೀಮದ್ರಾಜಾಧಿರಾಜ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ.ಸಿ. ಎಸ್.ಐ; ಜಿ.ಬಿ.ಇ. ಮಹಾಪ್ರಭುಗಳವರ ಮಹಾ ಸನ್ನಿಧಾನಂಗಳಲ್ಲಿ, ಸಂಪೂರ್ಣ ರಾಜಭಕ್ತಿ ವಿಶ್ವಾಸದಿಂದೊಡಗೂಡಿ ಅತ್ಯಂತ ವಿನಯದಿಂದ ಸಮರ್ಪಿಸಿರುವೆನು.

ಪೌರಾಣಿಕ ಸಾಲಿಗ್ರಾಮ ಶ್ರೀಕಂಠಶಾಸ್ತ್ರೀ,
(ಅರಮನೆಯ ಕಿಲ್ಲೇಕಚೇರಿ ಇಲಾಖಾ ಗುಮಾಸ್ತ.)
ಲೇಖಕ

Printed at the Sree Satyanarayana Power Press, Mysore.

ಶುದ್ಧಾಶುದ್ಧ ಪತ್ರ.

ಪುಟ	ಸಾಲು	ಅಶುದ್ಧ	ಶುದ್ಧ
೩	೧೦	ಸಮಾನ್ವಿತರಾಗಿ	ಸಮನ್ವಿತರಾಗಿ
೩	೧೩	ಸಂಪ್ಪತ್ತಿನನಿಂದೊಡಗೂಡಿ	ಸಂಪತ್ತಿನಿಂದೊಡಗೂಡಿ
೬	೪	ದುಃಖಾಃಗ್ನಿಯಿಂದ	ದುಃಖಾಗ್ನಿಯಿಂದ
೮	೩	ಪ್ರಾತಃತಾಲ	ಪ್ರಾತಃಕಾಲ
೯	೨೨	ಅಲ್ಲಲಿ	ಅಲ್ಲಲ್ಲಿ
೧೨	೨	ಬೆಳಯು	ಬೆಳೆಯು
೧೨	೧೮	ಪದೇಶಕ್ಕೆ	ಪ್ರದೇಶಕ್ಕೆ
೧೩	೧೯	ಯೂರೋಷ್	ಯೂರೋಪ್
೨೬	೧೪	ಉಷ್ಣೆಯು	ಉಷ್ಣವು
೩೬	೨೬	ಮರದಪಾತ್ರ್ರೆಯಿಂದ	ಮರದಪಾತ್ರೆಯಿಂದ
೩೭	೧೭	ಟಿಬಿಟ್	ಟಿಬೆಟ್
೩೭	೧೮	ಟಿಬಿಟ್ ದೇಶೀಯನು	ಟಿಬೆಟ್ ದೇಶೀಯನು
೩೮	೨೦	ನದಿಯುದ್ನು	ನದಿಯನ್ನು
೩೯	೧	ಪಾರ್ಶ್ಚಗಳಲ್ಲಿಯೂ	ಪಾರ್ಶ್ವಗಳಲ್ಲಿಯೂ
೪೫	೧೫	ಮಾತ	ಮಾತ್ರ
೫೯	೨೫	ಬಿಳಿಗಾರಮಯ	ಬಿಳಿಗಾರದಮಯ
೬೦	೨೩	ಪೂರ್ದವಲ್ಲಿ	ಪೂರ್ವದಲ್ಲಿ
೬೧	೧	ಗಿದ್ದಿತು	ಗಿದ್ದಿತು
೬೧	೨೦	ಇದ್ದ	ಇದ್ದ

ಕೆಲವೆಡೆಗಳಲ್ಲಿ "ಅ"ಕ್ಕೆ ಬದಲಾಗಿ "ಆ" ಎಂಬಕ್ಷರವೂ "ಆ" ಕ್ಕೆ ಬದಲಾಗಿ "ಅ" ಎಂಬಕ್ಷರವೂ ಪಲ್ಲಟವಾಗಿರುತ್ತಾಗಿ ಅಲ್ಲಲ್ಲಿ ದಯವಿಟ್ಟು ಕ್ಷಮಿಸಿಕೊಳ್ಳ ಬೇಕಾಗಿ ಕೋರಿಕೆ.

ROUTE TO KAILAS AND MANASAROWAR FROM ALMORA TAKEN BY HIS HIGHNESS THE MAHARAJA OF MYSORE IN JUNE, 1931



Thick Lines indicate the Route taken by His Highness the Maharaja